ವೇಮನ ಸಾಹಿತ್ಯ ಮಾಲೆ — ೧

ವೇಮನ ಗೀತೆ - ೧

(ಪೂರ್ವಾರ್ಧ)

ವೇಮನ ಗೀತೆ

ಗ್ರಂಥಕರ್ತ:
ಎಸ್. ಆರ್. ಪಾಟೀಲ
ಬಿ. ಈ. (ಸಿವ್ಹಿಲ್)

Smt. B. V. Nadakarni

333

ವೇಮನ ಗೀತೆ

(ಪೂರ್ವಾರ್ಧ)

ಭಾಗ: ೧

ಪ್ರಧಾನ ಸಂಪಾದಕರು:
ಕೆ. ಎಚ್. ಪಾಟೀಲ ಎಂ. ಎಲ್. ಎ.
ಸಂಪಾದಕ 'ವಿಶಾಲ ಕರ್ನಾಟಕ,' ಹುಬ್ಬಳ್ಳಿ.

ಹುಬ್ಬಳ್ಳಿ
ವಿಶಾಲ ಕರ್ನಾಟಕ ಮುದ್ರಣಾಲಯ
೧೯೬೭

ಪ್ರಕಾಶಕರು :
ಕೆ. ಎಚ್. ಪಾಟೀಲ ಎಂ. ಎಲ್. ಎ.
ಸಂಪಾದಕ,
'ವಿಶಾಲ ಕರ್ನಾಟಕ,' ಹುಬ್ಬಳ್ಳಿ.

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಬೆಲೆ : ರೂ. ೩—೫೦

ಮುದ್ರಣಕಾರರು :
ವಿಶಾಲ ಕರ್ನಾಟಕ ಮುದ್ರಣಾಲಯ, ಹುಬ್ಬಳ್ಳಿ.

ಪ್ರಧಾನ ಸಂಪಾದಕರ ನುಡಿ

'ವಿಶಾಲ ಕರ್ನಾಟಕ' ಪ್ರಕಟಣಾಲಯವು ಪತ್ರಿಕಾ ವ್ಯವಸಾಯದೊಂದಿಗೆ ಗ್ರಂಥ ಪ್ರಕಟಣೆಯ ಕಾರ್ಯದಲ್ಲಿ ತನ್ನ ಅಳಿಲು ಸೇವೆ ಸಲ್ಲಿಸುತ್ತ ಬಂದಿದೆ. ರಾಜಕೀಯ ಸುಸ್ಥಿತಿ, ಆರ್ಥಿಕ ಭದ್ರತೆ, ಸಾಮಾಜಿಕ ಸಮತೆ, ಆಧ್ಯಾತ್ಮಿಕ ದರ್ಶನ ಇವುಗಳನ್ನು ನೀಡುವ ಸಾಹಿತ್ಯ ಒದಗಿಸುವ ಸಂಕಲ್ಪ ಮಾಡಿದ್ದೇವೆ. **'ವೇಮನ ಗೀತೆ'** ಈ ಹಾದಿಯಲ್ಲೊಂದು ಮೈಲುಗಲ್ಲು. ಮಹಾಯೋಗಿ 'ವೇಮನ'ವರ ಸಾಹಿತ್ಯವನ್ನೂ, ತತ್ಸಂಬಂಧದ ಇತರ ಸಾಹಿತ್ಯವನ್ನೂ **ಶ್ರೀ. ಎಸ್. ಆರ್. ಪಾಟೀಲ,** ಬಿ. ಈ. (ಸಿವಿಲ್) ಇವರು ನಮ್ಮ ಪ್ರಕಟಣಾಲಯದ ಮುಖಾಂತರ ಪ್ರಕಟಿಸಲು ಮುಂದಾದುದು, ಗ್ರಂಥ ಪ್ರಕಾಶನ ವಿಭಾಗದಲ್ಲಿ ನಮ್ಮ ಗತಿಯ ವೇಗವನ್ನು ತ್ವರಿತಗೊಳಿಸದಿರದು.

ಜಾತ್ಯತೀತ ಭಾರತದಲ್ಲಿ ಜಾತೀಯ ಭಾವನೆಯಾಜೆ ನಿಂತು ನೋಡಬಲ್ಲ, ದಾರಿತೋರಬಲ್ಲ ಮಹಾಯೋಗಿಗಳು, ಋಷಿಮುನಿಗಳು, ನುಡಿದುದೆಲ್ಲ ಮಂತ್ರ. ಶಬ್ದದ ಅರ್ಥ ತಿಳಿದು ಜ್ಞಾನ ಸಂಪಾದಿಸಿಕೊಳ್ಳಲು, ದಾರ್ಶನಿಕ ಸಾಹಿತ್ಯ ತುಂಬಾ ಅವಶ್ಯ. ಪ್ರಸ್ತುತ ಗ್ರಂಥವು ಈ ಅವಶ್ಯಕತೆಯನ್ನು ಹೆಚ್ಚಾಗಿ ತುಂಬಬಹುದೆಂದು ನಂಬಿದ್ದೇನೆ.

ನಮ್ಮ ರಾಜ್ಯದ ವಿಧಾನ ಸಭಾಪತಿಗಳೂ, ರಾಜಕೀಯ ತಜ್ಞರೂ, ಆಧ್ಯಾತ್ಮಿಕ ಸಾಹಿತ್ಯಾಭ್ಯಾಸಿಗಳೂ ಆದ ಮಾನ್ಯ **ಶ್ರೀ. ವೈಕುಂಠ ಬಾಳಿಗಾ** ರವರು, ಅಭ್ಯಾಸಪೂರ್ಣ ಮುನ್ನುಡಿ ಬರೆದು ಕೊಟ್ಟು ಗ್ರಂಥಶೋಭೆಯನ್ನು ಹೆಚ್ಚಿಸಿದ್ದುದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

'ವಿಶಾಲ ಕರ್ನಾಟಕ'
ಕಾರ್ಯಾಲಯ, ಹುಬ್ಬಳ್ಳಿ.
೧-೧೦-೧೯೬೭

ಕೆ. ಎಚ್. ಪಾಟೀಲ

ಮುನ್ನುಡಿ

ಕ್ಷಣಭಂಗುರವಾದ ಐಹಿಕ ಸುಖಸಂಪತ್ತುಗಳನ್ನು ತ್ಯಜಿಸಿ, ಜ್ಞಾನಯೋಗಿಯಾಗಿ, ಲೋಕಕ್ಕೆ ಸತ್ಯ ಬೋಧನೆ ಮಾಡಿದ ಮಹಾಯೋಗಿ ವೇಮನರ ಉಪದೇಶಾಮೃತವನ್ನು ಕನ್ನಡ ಭಾಷೆಗೆ ಅನುವಾದಿಸಿ, ಕನ್ನಡಿಗರಿಗೂ ಲಭಿಸುವಂತೆ ಮಾಡಿರುವ, ಶ್ರೀ. ಎಸ್. ಆರ್. ಪಾಟೀಲರ ಪ್ರಯತ್ನವು ಪ್ರಶಂಸನೀಯವಾದುದು. ಅನ್ಯ ಭಾಷಾ ಸಾಹಿತ್ಯವನ್ನಭ್ಯಾಸಮಾಡಿ ಪಾಂಡಿತ್ಯ ಪಡೆದಿರುವ ವಿದ್ವಾಂಸರಲ್ಲಿ, ಕನ್ನಡದ ಮೇಲೆ ಅಭಿಮಾನವಿದ್ದರೆ, ತಾವು ಪಡೆದ ಭಾಷಾಸಂಪತ್ತು ಮತ್ತು ಸಾಹಿತ್ಯ ಸಂಪತ್ತನ್ನು ಕನ್ನಡ ಜನತೆಗೂ ನೀಡಿ, ಕನ್ನಡ ಸಾರಸ್ವತ ಸಂಪತ್ತನ್ನು ಹೆಚ್ಚಿಸಬಲ್ಲರೆಂಬುದಕ್ಕೆ ಇಂಥ ಭಾಷಾಂತರ ಕಾರ್ಯವೇ ನಿದರ್ಶನ. ಇತರ ಭಾಷೆಗಳ ಕಾವ್ಯರತ್ನಗಳಲ್ಲಿರುವ ಜ್ಞಾನ ಸಂಪತ್ತನ್ನು ನಮ್ಮ ಭಾಷೆಗೆ ತಂದುಕೊಂಡು, ನಮ್ಮ ಜನತೆಯ ಜ್ಞಾನ ಭಂಡಾರವನ್ನು ಬೆಳೆಸುವುದು, ವಿದ್ಯಾವಂತರ ಪವಿತ್ರ ಕರ್ತವ್ಯವೆಂಬುದು ನನ್ನ ಭಾವನೆ. ಅನೇಕ ವೇಳೆ. ಇಂತಹ ಕಾರ್ಯಕ್ಕೆ ತಕ್ಕಷ್ಟು ಪ್ರತಿಫಲ ಲಭಿಸದಿರಬಹುದು. ಆದರೂ ಮಾಡುತ್ತಿರಬೇಕು. ಫಲಾಪೇಕ್ಷೆಯಿಲ್ಲದೆ ಮಾಡುವ ಸತ್ಕಾರ್ಯವು ಮನಸ್ಸಿಗೆ ಶಾಶ್ವತವಾದ ಆನಂದವನ್ನು ನೀಡುವುದೆಂಬುದು ದೇವವಾಣಿಯಲ್ಲವೇ ? ಈ ಸಂಬಂಧದಲ್ಲಿ ಖ್ಯಾತ ಸಾಹಿತಿಗಳೂ ಜ್ಞಾನನಿಧಿಗಳೂ ಆದ, ಡಿ. ವಿ. ಜಿ. ಅವರ ಒಂದು ಸುಭಾಷಿತ ನೆನಪಿಗೆ ಬರುತ್ತದೆ.

ಸುತೆಯ ಪೋಷಿಸಿ ಬೆಳಿಸಿ, ಧನಕನಕದೊಡವಳನ್ ।
ಇತರ ಗೃಹಕಿತ್ತು ನೀಂ ಕೇಳ್ದ ಮುಯ್ಯೇನು ? ॥
ಪ್ರತಿಫಲವು ಬೇರೇಕೆ ? ಸುಕೃತಕದು ತಾನೆ ಫಲ ।
ಹಿತಮನದ ಪಾಕವದು-ಮುಂಕುತಿಮ್ಮ ॥

ಜ್ಞಾನವನ್ನು ಹಂಚುವುದರಲ್ಲೂ ಒಂದು ಆನಂದವಿದೆ. ಮಾನವರಲ್ಲಿ ಪರಸ್ಪರ ಅರಿವು, ಅನ್ಯೋನ್ಯ ಪ್ರೇಮ, ಪರಸ್ಪರ ಸಹಾನುಭೂತಿ ಬೆಳೆಯು

ಬೇಕಾದರೆ, ಸಾಹಿತ್ಯ ವಿನಿಮಯ ಅಗತ್ಯ. ಈ ದೃಷ್ಟಿಯಿಂದ ನೋಡಿದರೆ, ಭಾಷಾಂತರಕಾರನ ಸಮಾಜಸೇವೆ ಬಹು ದೊಡ್ಡದು. ಇತರ ದೇಶಭಾಷೆಗಳ ಶ್ರೇಷ್ಠಕೃತಿಗಳ ಪ್ರಯೋಜನವನ್ನು ತನ್ನ ದೇಶದ ಜನತೆಗೆ ಒದಗಿಸುವ ದೇಶಭಕ್ತ ಈತ. ತೆಲುಗು ಭಾಷೆಯಲ್ಲಿರುವ ವೇಮನರ ಪದಗಳನ್ನು ಓದಿದ ಜನಕ್ಕೆ ಯಾವ ಅನುಭವವಾಗಬಹುದೋ, ಅದೇ ಅನುಭವ ಕನ್ನಡಕ್ಕೆ ಅನುವಾದಗೊಂಡಿರುವ, ಈ ಗ್ರಂಥವನ್ನೋದುವ ಕನ್ನಡಿಗರಿಗೆ ಬರುವಂತಿದೆ. ಆದ ಕಾರಣ, ಶ್ರೀ ಪಾಟೀಲರು ಶಕ್ತರಾದ ಭಾಷಾಂತರಕಾರರ ಪಂಕ್ತಿಗೆ ಸೇರಿದವರೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಈ ಕೃತಿ ತೆಲುಗು ಭಾಷೆಯನ್ನು ಕಲಿಯಲು ಅವಕಾಶವಿಲ್ಲದಿರುವವರಿಗೆ, ಯೋಗಿ ಶ್ರೇಷ್ಠರೂ, ಹಿರಿಯ ಭಕ್ತರೂ, ಪರಮ ಜ್ಞಾನಿಗಳೂ ಆದ, ವೇಮನರ ಉಪದೇಶಾಮೃತವನ್ನು ಸೇವಿಸಿ ಕೃತಾರ್ಥರಾಗಲು ನೆರವಾಗುತ್ತದೆ.

ವೇಮನರ ಜೀವನ ಚರಿತ್ರೆ, ಸಾಧನೆ, ಸಿದ್ಧಿ ಇವೆಲ್ಲವನ್ನೂ ಗ್ರಂಥಕರ್ತರು ಸವಿಸ್ತಾರವಾಗಿಯೂ, ಸ್ವಾರಸ್ಯಪೂರ್ಣವಾಗಿಯೂ ಬರೆದಿದ್ದಾರೆ. ತಮಿಳು ಸಾಹಿತ್ಯದಲ್ಲಿ ತಿರುವಳ್ಳುವರಿಗೂ, ಕನ್ನಡ ವಾಙ್ಮಯದಲ್ಲಿ ಸರ್ವಜ್ಞನಿಗೂ, ಮಹಾರಾಷ್ಟ್ರ ವಾಙ್ಮಯದಲ್ಲಿ ರಾಮದಾಸನಿಗೂ, ಹಿಂದೀ ಸಾಹಿತ್ಯದಲ್ಲಿ ಕಬೀರದಾಸನಿಗೂ, ಇರುವ ಸ್ಥಾನವೇ ತೆಲುಗು ಭಾಷೆಯಲ್ಲಿ ವೇಮನನಿಗೂ ಇದೆಯೆಂದು ಅನೇಕ ವಿದ್ವಾಂಸರ ಮತ. ಕನ್ನಡ ಭಾಷೆಯಲ್ಲಿ ಸರ್ವಜ್ಞನ ಪದಗಳು, ಬಸವಣ್ಣನವರ ಮತ್ತು ಇತರ ಶಿವಶರಣರ ವಚನಗಳು, ಪುರಂದರ, ಕನಕ ಮತ್ತಿತರ ಹರಿದಾಸರ ಕೃತಿಗಳು, ಇವುಗಳಲ್ಲಡಗಿರುವ ಸತ್ಯಾರ್ಥಗರ್ಭಿತವಾದ ತತ್ತ್ವಗಳು, ಜನರನ್ನು ಹೇಗೆ ಆಕರ್ಷಿಸಿ ಅವರಿಗೆ ಜ್ಞಾನದೀವಿಗೆಗಳಾಗಿವೆಯೋ, ಹಾಗೆಯೇ ತೆಲುಗು ಭಾಷೆಯಲ್ಲಿ ಜ್ಞಾನಿ ವೇಮನರ ತತ್ತ್ವಗಳು ಜ್ಞಾನ ಜ್ಯೋತಿಗಳಾಗಿ ಬೆಳಗುತ್ತಿವೆ.

ವೇಮನರು ಜೀವನದ ನಾನಾಕ್ಷೇತ್ರಗಳನ್ನು ನೋಡಿ, ತಾವು ಕಂಡುದು ನ್ನೆಲ್ಲ ವಿಮರ್ಶಿಸಿ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವೇಮನರ ನುಡಿಗಳು ಸಕಲ ವೇದದ ಸಾರವೋ ಎಂಬಂತಿವೆ. ಅವರು ನೀಡುವ ಉಪಮಾನಗಳು ಎಲ್ಲರಿಗೂ ಸುಲಭವಾಗಿ ಅನುಭವಕ್ಕೆ ಬರುವಂಥವು. ಹೇಳುವ ರೀತಿಯಲ್ಲಿ ಸುತ್ತು ಬಳಸಿಲ್ಲ; ಮುಚ್ಚುಮರೆಯಿಲ್ಲ. ಪರಿಶುದ್ಧ ಹೃದಯದಿಂದ ಚಿಮ್ಮಿಬಂದ ನೇರವಾದ ಮಾತುಗಳು. ಒಂದೊಂದೂ ಪ್ರತ್ಯೇಕ ಸೂತ್ರದಂತಿದೆ. ವೇಮನರ ಪದ್ಯವ್ಯಾಪ್ತಿ ವಿಸ್ತಾರವಾಗಿದೆ. ದೈವ ಸ್ವರೂಪ ಚಿಂತನೆ, ಭಕ್ತಿ, ಧರ್ಮನೀತಿ ನಿರೂಪಣೆಯಲ್ಲದೆ, ಜಾತಿ, ಕುಲ, ಇತ್ಯಾದಿ ಸಾಮಾಜಿಕ ತೊಡಕುಗಳನ್ನೂ, ದುರಾಚಾರ, ಕಾಪಟ್ಯ, ನೀಚತನ, ಅಹಂಕಾರ, ಅಂಧವಿಶ್ವಾಸ, ಡಂಭ ಇತ್ಯಾದಿ ದುರ್ಗುಣಗಳನ್ನೂ, ಕಟುವಾಗಿ

ಬೇಕಿಷಿ ಹೀಯಾಳಿಸಿದ್ದರೂ, ಮತ್ಸರ ರಹಿತವಾಗಿ ಮಾಡಿದ್ದಾರೆ. ಇಂತಹ ಮಹಾವ್ಯಕ್ತಿಗಳ ಉದಾತ್ತ ಭಾವನೆಗಳು, ಇವರಿತ್ತ ಸಂದೇಶಗಳು, ನಮ್ಮ ಜನರಲ್ಲಿ ಪ್ರಸಾರವಾಗುವುದು, ನಮ್ಮ ರಾಷ್ಟ್ರದ ದೃಷ್ಟಿಯಿಂದ, ಶ್ರೇಯಸ್ಸಿನ ದೃಷ್ಟಿಯಿಂದ, ಅತ್ಯಗತ್ಯ.

ಶ್ರೀ. ಎಸ್. ಆರ್. ಪಾಟೀಲರು ಇಂಜಿನಿಯರಿಂಗ್ ಪದವೀಧರರಾಗಿ ಆ ವೃತ್ತಿಯಲ್ಲಿದ್ದರೂ, ಉತ್ತಮ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿ, ಸಮಾಜ ಸೇವೆ ಮಾಡುತ್ತಿರುವುದು ಪ್ರಶಂಸನೀಯವಾದುದು. ಈ ಕಾರ್ಯಕ್ಕೆ ಇವರಲ್ಲಿರುವ ಸಮಾಜ ಸೇವಾಕಾಂಕ್ಷೆ, ಧರ್ಮಾಭಿಮಾನ ಮತ್ತು ಸಾಹಿತ್ಯಪ್ರೇಮ ಇವೇ ಪ್ರೇರಕ ಶಕ್ತಿಯಾಗಿವೆಯೆಂದು ಭಾವಿಸುತ್ತೇನೆ.

ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಕೊಂಡು, ಓದಿ, ಆನಂದಪಟ್ಟು, ಚಿತ್ತ ಶುದ್ಧಿ ಹಾಗೂ ವಿಕಾಸ ಪಡೆದರೆ, ಅದರಿಂದ ಗ್ರಂಥಕರ್ತರ ಶ್ರಮ ಸಾರ್ಥಕವಾಗುತ್ತದೆ.

ತಮ್ಮ ಈ ಗ್ರಂಥಕ್ಕೆ ಮುನ್ನುಡಿ ಬರೆಯಬೇಕೆಂದು ಕೇಳಿ, ಮಹಾಯೋಗಿ ವೇಮನರೆ ತತ್ತ್ವಗಳನ್ನು ಸ್ಮರಿಸಲು ನನಗೆ ಅವಕಾಶ ಮಾಡಿಕೊಟ್ಟ ಶ್ರೀಯುತ ಪಾಟೀಲರನ್ನು ವಂದಿಸಿ, ಅವರು ಈ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆ ಇನ್ನೂ ದೀರ್ಘವಾಗಿ ನಡೆಯುವಂತೆ ಜಗದೀಶ್ವರನು ಕೃಪೆ ಮಾಡಲೆಂದು ಹಾರೈಸುತ್ತೇನೆ.

ಬೆಂಗಳೂರು
೧೬-೮-೧೯೬೬

ಬಿ. ವೈಕುಂಠಬಾಳಿಗ.

ಅರಿಕೆ

ಗದುಗಿನ 'ಮಹಾಭಾರತ'ದ ಕರ್ತೃ ವೀರನಾರಾಯಣ. ಆ ಶಿಲಾಮೂರ್ತಿಯ ಎದುರು ಒದ್ದೆಯಾಗಿ ನಿಂತ ಕುಮಾರವ್ಯಾಸ ಕೇವಲ ಲಿಪಿಕಾರ. 'ರಾಮಾಯಣ ದರ್ಶನಂ' ಎಂಬ ಮಹಾಕಾವ್ಯದ ಸ್ಫೂರ್ತಿದಾಯಿನಿ ಸಾಕ್ಷಾತ್ ಸರಸ್ವತಿ; ರಾಷ್ಟ್ರಕವಿ 'ಕುವೆಂಪು' ಕೇವಲ ಲಿಪಿಕಾರರು. 'ಸಾವಿತ್ರಿ' ಮಹಾಕಾವ್ಯ (ಆಂಗ್ಲ ಭಾಷೆಯಲ್ಲಿದೆ) ಯೋಗಶಕ್ತಿಯ ಕೃತಿ; ಯೋಗಿ ಅರವಿಂದರು ಹಿಡಿದ ಲೇಖನಿ ಅವರಿಗೇ ಅರಿವಿಲ್ಲದೆ ಓಡಿತ್ತು! ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳ ಮೂರು ಸುಂದರ ದೃಷ್ಟಾಂತಗಳಿವು. ಯೋಗ ಸಮಾಧಿಗೇರಿದವನು ಅಲ್ಲಿಂದ ಮರೆಳಿದಾಗ, ಮೌಢ್ಯ ಕಳೆದುಕೊಂಡು ಜ್ಞಾನಿಯಾಗಿ ಬರುವನು. ಸಹಜ ಸ್ಥಿತಿಯಲ್ಲಿ ಹೊಳೆಯದ ಅನೇಕ ವಿಷಯಗಳು ಅವರಿಗೆ ಇಂಥ ಅತೀಂದ್ರಿಯಾವಸ್ಥೆಯಲ್ಲಿ ಹೊಳೆಯಬಹುದು. ಮಹಾಯೋಗಿಯಾದವರು ಯೋಗ-ಸಮಾಧಿಯಲ್ಲಿರುವಾಗ ಬರೆದು ಬಿಟ್ಟರೆ; ಅವರಿಗೆ ಬರೆಯುವುದರ ಪರಿವೆಯೇ ಇಲ್ಲವೆನ್ನಿಸಬಹುದು. ನಮ್ಮ ಹಿಂದಿನ ಋಷಿಗಳು ಲಿಪಿಕಾರರಲ್ಲ; (ಆಗ ಲಿಪಿಯೇ ಇರಲಿಲ್ಲ.) ದ್ರಷ್ಟಾರರು. ಈ ದೃಷ್ಟಿಯಲ್ಲಿ ಮಹಾಕವಿಗಳು ಕಾವ್ಯರ್ಷಿಗಳೇ ಸರಿ. ಇವರು ಮಹಾಕಾವ್ಯವನ್ನು ರಚಿಸುವರು. ಇವರಿಂದ ರಚಿತವಾದದ್ದೆಲ್ಲ ಮಹಾಕಾವ್ಯವೆನ್ನಿಸುತ್ತದೆ.

ಮಡಿಯುಟ್ಟು ಶಿಲೆಯ ಪೂಜೆ ಮಾಡುವುದರಲ್ಲಿ ಭಕ್ತಿಗಾಣದ. ಕವಿ ಮುಚ್ಚಿ ಕುಳಿತು ಸರಸ್ವತಿಯನ್ನು ಒಲಿಸಿಕೊಳ್ಳದ. ಯೋಗ ಸಮಾಧಿ ಹೊಂದಲು ಜನ್ಮಾಂತರ ಕಳೆಯಬೇಕಾಗಿರುವ. ನನಗೆ ಮಹಾಕಾವ್ಯದ ಲಿಪಿಕಾರನಾಗುವ ಭಾಗ್ಯವಿಲ್ಲ. ಅದಕ್ಕಾಗಿ ಕಳವಳವೂ ಇಲ್ಲ. ಆದರೂ ಸಾಹಿತ್ಯ ಸೇವೆ ಸಾಧ್ಯವೆಂದು ಬಗೆದವನು ನಾನು. ಭಾಷಾಂತರದ ಕಾರ್ಯವು ಜನರ ಗದ್ದಲದಲ್ಲಿರುವ ನಮ್ಮಂಥ ಸಾಹಿತ್ಯದ ನಮ್ರ ಸೇವಕರಿಗೂ ಸಾಧ್ಯ. ಸಾಮರಸೆಟ್ ಮಾಮ್ ಹೇಳುವಂತೆ: 'ದಿನಾಲು ಹೊಸತು ಓದಬೇಕು. ಏನಾದರೂ

ಬರೆಯಬೇಕು. ಬರೆಯುತ್ತ ಹೋದಂತೆ, ಪಳಗಿದ ಶೈಲಿ ಕೈಗೂಡುವುದು.' ಇಂತು ತೀರ ವಾಸ್ತವ ದೃಷ್ಟಿ ಬೆಳೆಸಿಕೊಂಡಿರುವ ನನ್ನಂಥವರು ಆರ್ಷಮತ ತಿಳಿಯುವುದೆಂತು? ಎಂದು ಕೇಳಬಹುದು? ಋಷಿಗಳು ಕಂಡದ್ದು ಕೇವಲ ಸತ್ಯ. ಸತ್ಯ ಬಣ್ಣಿಸಿದಾಗ ಸಕಲರ ತಿಳಿವಿನ ಎಲ್ಲೆಯಲ್ಲಿ ಬರುತ್ತಿದೆ. ಅನಂತರ, ಶಬ್ದ ಭಾಷೆಯ ಅಲಂಕಾರವನ್ನು ಯಾರು ಬೇಕಾದರೂ ತೊಡಿಸಬಹುದು. ಆ ಸತ್ಯವನ್ನು ಯಾವ ಭಾಷೆಯಲ್ಲಿಯಾದರೂ ಹೇಳಬಹುದು. ಈ ನಂಬುಗೆಯಿಂದ ನಾನು ಪೂಜ್ಯ ಮಹಾಯೋಗಿ ವೇಮನರ ಗೀತೆಯನ್ನು ಕನ್ನಡಿಸುವ ಧೈರ್ಯ ಮಾಡಿದೆ. ಆ ಪದ್ಯಗಳಿಗೆ ವಿವರಣೆ ನೀಡುವುದಕ್ಕೆ ತೊಡಗಿದುದಂತೂ ನನ್ನ ಮಟ್ಟಿಗೆ ಸಾಹಸ. ಅತೀಂದ್ರಿಯ ಅನುಭವ ಪಡೆಯುವಲ್ಲಿ ನನ್ನ ಶಕ್ತಿ ಎಷ್ಟು ಕಡಿಮೆಯೋ, ಅತೀಂದ್ರಿಯ ಸ್ಥಿತಿಗೇರಿದವರ ಅನುಭವ ತಿಳಿಯುವಲ್ಲಿ ನನ್ನ ಆಸಕ್ತಿ ಅಷ್ಟೇ ಹೆಚ್ಚು. ಅಂಥ ಮಹಾಪುರುಷರ ತತ್ತ್ವಗಳಲ್ಲಿ ನನ್ನ ಭಕ್ತಿಯೂ ಅಪಾರ. ಪೂಜ್ಯ ವೇಮನರ ತತ್ತ್ವಾಧ್ಯಯನದಿಂದ ನನ್ನ ಈ ವಿಚಾರ ದೃಢಪಟ್ಟಿದೆ.

ಧರ್ಮವಿರುವುದೊಂದೇ. ಹಿಂದೆ, ಇಂದು, ಮುಂದು, ಅದು ಒಂದೇ ಆಗಿರುವುದು. ಅದರಿಂದ ಅದು ಸನಾತನ. ಸನಾತನ ಧರ್ಮ ತಿಳಿಸಿದವರಲ್ಲಿ ಕನಕದಾಸರಂಥ ಭಕ್ತರಿರಬಹುದು. ಗಾಂಧೀಜಿಯವರಂಥ ಕರ್ಮಿಗಳಿರಬಹುದು. ಮತ್ತು ವೇಮನರಂಥ ಜ್ಞಾನಿಗಳಿರಬಹುದು. ಭಕ್ತನು, ಶಿವ-ಕೇಶವ ಒಂದೇ ಎಂದು ನಂಬುತ್ತಾನೆ. ಕರ್ಮಿ ರಾಮ—ರಹಿಮರೊಂದೇ ಎಂಬುದನ್ನು ಪ್ರಪಂಚದಲ್ಲಿ ಗುರುತಿಸುತ್ತಾನೆ. ಜ್ಞಾನಿ ವಿಷ್ಣು, ಹರ ಎನ್ನುವ ಭಾವ ಪ್ರಕಾರಗಳನ್ನು ಒಂದಾಗಿ ಅನುಭವಿಸುತ್ತಾನೆ. ಈ ಯಾವುದೇ ಮಾರ್ಗ ಒಂದರಿಂದ ಇನ್ನೊಂದು ಬೇರೆಯಲ್ಲ. ಒಂದರಲ್ಲಿಂದು ಬೆರೆತುಕೊಂಡಂತೆ. ಯಾವುದೋ ಒಂದು ಹೆಚ್ಚು ಪ್ರಭಾವಿಯಾಗಿ, ಒಬ್ಬರಲ್ಲಿ ತೋರಿಬಹುದಷ್ಟೇ.

ಧರ್ಮದರ್ಶನ ಸಾಹಿತ್ಯಕ್ಕೆ ತಕ್ಕ ಪ್ರೋತ್ಸಾಹವಿಲ್ಲವೆಂದಾಗಲಿ, ಇಲ್ಲವೆ ವಾಚಕ ವರ್ಗದ ಮೆಚ್ಚುಗೆ ಇಲ್ಲವೆಂದಾಗಲಿ, ಯಾರೂ ತಿಳಿಯಕೂಡದು. ವಿಶಾಲಕರ್ನಾಟಕದ ಸಂಪಾದಕರೂ ಮತ್ತು ನನ್ನ ಸೋದರರೂ ಆದ ಶ್ರೀ ಕೆ. ಎಚ್. ಪಾಟೀಲರು, ಇಂಥ ವಿವಿಧ ಪ್ರಯತ್ನಗಳಿಗೆ ಮುಂದಾಗಿರುವುದು, ಮತೀಯ ಭಾವನೆಯಾಚೆ ನೋಡಬಲ್ಲ ಲೇಖಕರಿಗೆ ಈಜುಗುಂಬಳಕಾಯಿ ಒದಗಿಸಬಹುದೆಂದು ನಂಬಿದ್ದೇನೆ.

ಮೂಲ ಪದ್ಯಗಳನ್ನು ಅರ್ಥವಿಸುವಲ್ಲಿ ನನ್ನೊಂದಿಗೆ ಪೂರ್ಣವಾಗಿ ಸಹಕರಿಸಿದ ಶ್ರೀ ಸಿ. ಎಮ್. ಹನುಮಂತಯ್ಯ ಎಂ. ಏ. ಮತ್ತು ವೇಮನರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆಯುವಲ್ಲಿ ಅವಶ್ಯ ವಿವರಗಳನ್ನು ಮೂಲ

ತೆಲಗು ಗ್ರಂಥಗಳಿಂದ ಹೆಕ್ಕಿ ತೆಗೆದು, ಒದಗಿಸಿದ. ಶ್ರೀ ಎಂ. ಗೋಪಾಲರೆಡ್ಡಿ ಬಿ. ಏಜಿ. ಇವರ ನೆರವು ತುಂಬಾ ಉಪಯುಕ್ತವಾಗಿದೆ. 'ಪ್ರೂಫ್' ತಿದ್ದುವ ಕಾರ್ಯದಲ್ಲಿ ಶ್ರೀ ಜಿ. ಬಿ. ಎಸ್. ಜಗದೀಶರ ಪರಿಶ್ರಮವು ಸಾಕಷ್ಟು ಫಲಪ್ರದವಾಗಿದೆ.

ಬೃಹದ್ ಗ್ರಂಥ ಪ್ರಕಟನೆಯ ನನ್ನ ಪ್ರಥಮ ಪ್ರಯತ್ನವನ್ನು ಪ್ರೋತ್ಸಾಹಿಸಿ, ಹರಸಿ ಮುನ್ನುಡಿ ಬರೆದುಕೊಟ್ಟ, ನಮ್ಮ ರಾಜ್ಯದ ವಿಧಾನ ಸಭಾಪತಿಗಳೂ, ಸ್ವಾತಂತ್ರ್ಯ ವೀರರೂ ಆದ, ಮಾನ್ಯ ಬಿ. ವೈಕುಂಠ ಬಾಳಿಗಾರವರಿಗೆ ನಾನು ತುಂಬಾ ಉಪಕೃತನಾಗಿದ್ದೇನೆ.

ಪೂಜ್ಯ ವೇಮನರ ಗೀತೆಯು ಸಹಸ್ರ ಪದ್ಯಗಳ ಐದು ಸಂಪುಟಗಳಲ್ಲಿ ಹೊರಬರಲಿದ್ದು, ಪ್ರಥಮ ಸಂಪುಟದ ಪೂರ್ವಾರ್ಧ ಭಾಗವನ್ನು ಬಹು ಬೇಗ ತಯ್ಯಾರಿಸುವಲ್ಲಿ ಸಹಾಯ ಸಹಕಾರ ನೀಡಿದ ಮಿತ್ರರಿಗೆಲ್ಲ ನನ್ನ ಅನಂತ ಕೃತಜ್ಞತೆಗಳು.

ಹುಬ್ಬಳ್ಳಿ–ಧಾರವಾಡ
೧–೧೦–೧೯೬೬

ಎಸ್. ಆರ್. ಪಾಟೀಲ

ಪರಿವಿಡಿ

ಪ್ರಧಾನ ಸಂಪಾದಕರ ನುಡಿ	I
ಮುನ್ನುಡಿ	II
ಅರಿಕೆ	V
ಯೋಗಿ ವಂತ್ರ	IX

ಭಾಗ: ೧

೧)	ಮಹಾಯೋಗಿ ವೇಮನ	೧
೨)	ನೈತಿಕ ವಿಭಾಗ	೩೩
೩)	ಸಾಂಸ್ಕೃತಿಕ ವಿಭಾಗ	೮೩
೪)	ಆರ್ಥಿಕ ವಿಭಾಗ	೧೩೩
೫)	ಸಾಮಾಜಿಕ ವಿಭಾಗ	೧೭೩
೬)	ಸಾಂಸಾರಿಕ ವಿಭಾಗ	೨೧೬ ರಿಂದ ೨೯೪

ಭಾಗ: ೨

೭)	ಆಧ್ಯಾತ್ಮಿಕ ವಿಭಾಗ	೨೯೫ ರಿಂದ

"ವೇಮನಾಖ್ಯೋ ಮಹಾಯೋಗೀ
ಲೋಕೇ ಭೂತ್ ಪುಣ್ಯ ಪುರುಷಾಃ।
ಪೂಜಾಂ ಕುರುತ ವೇಮಾ ತೋ
ಭುಕ್ತಿ ಮುಕ್ತಿ ದದಾತಿ ಸಃ॥

—

"The Yogi named Vemana hath shone forth in the world, Bow to him ye men of virtue while, ye reverence him, he will bestow on you Sustenance and perfection; Listen O Vema, dear to the Lord of all!

ಸಂಸ್ಕೃತಾನುವಾದ :
ಶ್ರೀ ರಾಮನೃಸಿಂಹ ಮೂರ್ತಿಗಳು

ಆಂಗ್ಲಾನುವಾದ :
ಶ್ರೀ ಸಿ. ಪಿ. ಬ್ರೌನ್. ಆಯ್.ಸಿ.ಎಸ್.

ಬ್ರೂಹೀತ್ಯುಕ್ತೋ ನ ಕಿಂ ಬ್ರೂಷೇ ?
ಬ್ರೂಹಿ ಮಾಂ ಪ್ರಬಲಂ ವಚಃ।
ಬ್ರೂಹ್ಯಾರ್ಯ ! ವೇಮ ! ಜ್ಞಾಸ್ಯಾಮಿ,
ಭವದೀಯಮಹಂ ವಚಃ ॥

—

"When I cry "Speak, O God;" Why speakest thou not? O speak to me, and powerfully! speak O father, surely I can recognise thy Voice."
Listen, O Vema, dear to the Lord of of all.

ಸಂಸ್ಕೃತಾನುವಾದ :
ಶ್ರೀ ರಾಮವೃಸಿಂಹ ಮೂರ್ತಿಗಳು

ಆಂಗ್ಲಾನುವಾದ :
ಶ್ರೀ ಸಿ. ಪಿ. ಬ್ರೌನ್. ಆಯ್.ಸಿ.ಎಸ್.

ಮಹಾಯೋಗಿ ವೇಮನ

(ಸಂಕ್ಷಿಪ್ತ ಜೀವನ ಚರಿತ್ರೆ)

ಕೊಂಡವೀಡು, ರಾಜಮಹೇಂದ್ರಿ ರೆಡ್ಡಿರಾಜರ ಆಸ್ಥಾನ ಕವಿಯಾಗಿ ಮೆರೆದ, ಮಧ್ಯಂತರ ಕಾಲದಲ್ಲಿ ಕರ್ಣಾಟಾಂಧ್ರ ಸಾರ್ವಭೌಮ ವಿಜಯನಗರದ ಪ್ರೌಢದೇವರಾಯನಿಂದ ಕನಕಾಭಿಷೇಕದ ಗೌರವ ಹೊಂದಿದ ಕವಿಸಾರ್ವಭೌಮ ಶ್ರೀನಾಥನ ನಾಡಗೀತೆಯಿದು:

೧

ಪರರಾಯ ಪರದುರ್ಗ,
ಪರ ವೈಭವ ಶ್ರೀಯ
ಗಳಿಸಿದಾ ವರನಾಡು, ಕೊಂಡವೀಡು.

೨

ಹಲವಾರು ರಾಜ್ಯಗಳ,
ಹಣೆದು ಬಲ ಮಣಿಸಿರುವ
ಗುರುತಿರುವ ಛಲ ನೋಡು, ಕೊಂಡವೀಡು.

೩

ಮೂರು ಜನ ರಾಜರಿಗೆ,
ಮೋಹವನು ಹುಟ್ಟಿಸುವ,
ಕಟ್ಟೊಡೆದ ಚೆಲುಬೀಡು, ಕೊಂಡವೀಡು

೪

ನಡುಗಿಸುವ ಬಲಶಾಲಿ
ಸಾಹಸವ ಹುಟ್ಟಿಸುವ,
ಕುಟಿಲಾತ್ಮರಿಗೆ ಕೇಡು, ಕೊಂಡವೀಡು,

೫

ಸಾಧು ಸೈಂಧವಭಾಮಿನೀ, ಸರಸವೀರ
ಭಟ ನಟಾನೇಕಸುವರ್ಣ, ಪ್ರಕಟಗಂಧ
ಸಿಂಧುರಾದ್ಭುತ ಮೋಹನ; ಶ್ರೀ ಬೆಳೆಸುವ
ಕರುಣೆಯಮರಾವತಿಗೆ ಜೋಡು, ಕೊಂಡವೀಡು.

ಕೊಂಡವೀಡು ಅಂದರೆ ಬೆಟ್ಟದೂರು. ಆಂಧ್ರ ಪ್ರದೇಶದಲ್ಲಿರುವ ಈಗಿನ ಗುಂಟೂರ ಜಿಲ್ಲೆಗೆ ಸೇರಿದ ನರಸಾರಾವು ಪೇಟೆಯಲ್ಲಿಯ ದುರ್ಗಾರಣ್ಯ ಸ್ಥಳ. ಈ ಬೆಟ್ಟವು ೧೭೫೫ ಅಡಿ ಎತ್ತರವಿದ್ದು, ಅದರ ಸುತ್ತಳತೆ ೩೦ ಮೈಲಿನಷ್ಟಿದೆ. ಈ ಬೆಟ್ಟದಲ್ಲಿ ಗುಡಿ-ಗುಹೆಗಳಿವೆ. ಕೆರೆ ಮಂಟಪಗಳಿವೆ. ರೆಡ್ಡಿರಾಜರು ನಿರ್ಮಿಸಿದ ವಿಶಾಲ ಮಂಟಪಕ್ಕೆ ೩೦ ಕಂಭಗಳಿವೆ. ಬಳಿಯಲ್ಲಿ ರಾಜಮಂದಿರಗಳ ಅವಶೇಷಗಳಿವೆ. ಮದ್ದಿನ ಶಾಲೆಯುಂಟು.

ಈ ರಾಜವಾಡೆಯ ಒಂದೆಡೆ ಶಿವಾಲಯವಿದೆ. ಅದರ ಪೂರ್ವಕ್ಕೆ ಗಣಪತಿ ಮಂದಿರ ಸುಬ್ರಹ್ಮಣ್ಯ ಮಂದಿರಗಳಿವೆ. ಬೆಟ್ಟದ ಗುಹೆಯೊಂದರಲ್ಲಿ ಪಾನಬಟ್ಟಲಾಕಾರದ ಈಶ್ವರ ಲಿಂಗವಿದೆ. ಬೆಟ್ಟದ ಮೇಲಿರುವ ಮಂದಿರಗಳಿಗೆ ಕರೆದೊಯ್ಯುವ ಸೋಪಾನಗಳ ಬಳಿ ನರಸಿಂಹ ದೇವಾಲಯವುಂಟು. ಇದರ ಬಳಿ ಹದಿನಾರು ಕಂಭಗಳುಳ್ಳ ಮಹಾಮಂಟಪವಿದೆ.

ಇದವೇ **"ವೇಮನ ಮಂಡಪ"**. ವೇಮನಯೋಗಿ ಧ್ಯಾನಾಸಕ್ತನಾಗಿ ಅಂತರಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ತಾಣ. ಅಂತರಾತ್ಮನ ಸಂದೇಶವನ್ನು ಸಮಸ್ತ ಜನತೆಗೆ ಮುಟ್ಟಿಸಲು ಮಹಾಯೋಗಿ ವೇಮನರ ಭಕ್ತರು ನಿರ್ಮಿಸಿದ ಅಸಂಖ್ಯ ಮಂಡಪಗಳಲ್ಲೊಂದು. ಈ ಮಂಡಪದೆದುರು ಅಂಬಾದೇವಿಯ ಗುಡಿಯಿದೆ.

ಕೊಂಡವೀಡು ೧೪-೧೫ ನೆಯ ಶತಮಾನದ ಮಹಾನಗರಗಳಲ್ಲೊಂದು. ಈ ನಗರದ ಕೋಟೆಗೆ ೨೫ ಬುರುಜುಗಳುಂಟು. ಇದರ ವಿಸ್ತಾರ ೫ ಚದುರು ಮೈಲು. ಇದರಲ್ಲಿ ೧೮ ವಿವಿಧ ಪೇಟೆಗಳಿದ್ದವು. ಕೆಲ ಗ್ರಂಥಗಳಲ್ಲಿ ಕುಂಡಿನಪುರವೆಂದು ವರ್ಣಿಸಲ್ಪಟ್ಟ ನಗರವೇ ಕೊಂಡವೀಡು.

ವೇಮನಮಂಡಪದ ಎಡಬಲದಲ್ಲಿ ರುದ್ರಕಾಳಿ, ಅಂಬಾದೇವಿ, ನರಸಿಂಹ, ವೀರಭದ್ರ, ಗಣಪತಿ, ಶಿವ, ವಿಷ್ಣು, ಈಶ್ವರಲಿಂಗ ಇತ್ಯಾದಿ ಶಿಲಾಮೂರ್ತಿಗಳು ಒಂದೊಂದು ಶಾಖೆಯವರಿಂದ ಪೂಜೆಗೊಳ್ಳುತ್ತಿದ್ದವು. ಪೂಜೆ-ವ್ರತಗಳ ಹೆಸರಿನಲ್ಲಿ ಭೋಗ, ಅನಾಚಾರಗಳು ನಡೆಯುತ್ತಿದ್ದವು. ವಿಷ್ಣು-ಶಿವಭಕ್ತರಲ್ಲಿ ಜಾತೀಯ ಮೇಲು-ಕೀಳು ಮುಗಿಲು ಮುಟ್ಟಿತ್ತು. ಸಾಮಾನ್ಯ ಜನರಿಂದ ಪವಿತ್ರ ಗ್ರಂಥಗಳನ್ನು ಓದುವ ಅರ್ಹತೆ ಕಸಿದುಕೊಳ್ಳಲ್ಪಟ್ಟು, ಅವರು ಪಶುಬಲಿ, ದೇವ ಕನ್ಯಾಭೋಗಗಳೇ ಧರ್ಮವೆಂದು ತಿಳಿದಿದ್ದರು. ದಲಿತರನ್ನೂ, ದುರ್ಮಾರ್ಗಿಗಳನ್ನೂ ಧರ್ಮದ ಹಾದಿಗೆ ತರಲು ದೇವತತ್ತ್ವವನ್ನು ಮಾತೃಭಾಷೆಯಲ್ಲಿ, ತಿಳಿಯುವ ರೀತಿಯಲ್ಲಿ, ಸೋದಾಹರಣಪೂರ್ವಕ, ತಿಳಿಸಿ ಹೇಳಬೇಕಾಗಿತ್ತು. ದಾನವರಾದ ಜನರನ್ನು ಮಾನವರಾಗಿ ಮಾರ್ಪಡಿಸಬೇಕಾಗಿತ್ತು. ಈ ಕಾರ್ಯಕ್ಕೆ ಅಣಿಯಾಗಲು ಕಾರಣಪುರುಷನೊಬ್ಬ ಜನ್ಮವೆತ್ತಬೇಕಾಗಿತ್ತು. ದೇವರೇ ಅವತರಿಸಿ, ಮಂತ್ರ ಊದಿ ದುಷ್ಟಮರ್ದನ ಮಾಡುವುದಿಲ್ಲ. ಮಾರ್ಗದರ್ಶಕನಾಗುವ ಪುರುಷ ನಿಮಿತ್ತ ಮಾತ್ರ. ರಾವಣನ ನಾಶವಾದದ್ದು ತನ್ನ ರಾಜ್ಯದಾಹದ ಅತಿರೇಕದಿಂದ; ಪಾಂಡವರು ಕೇವಲ ನಿಮಿತ್ತ ಮಾತ್ರರು. "ಮನಸ್ಸನ್ನು ನಿಗ್ರಹಿಸಿ, ಆಶೆಯನ್ನು ತೊರೆಯುವಲ್ಲಿ ಜಯಶೀಲರಾದರೆ ಮಾತ್ರ ವಿನಾಶದಿಂದ ಪಾರಾಗಬಹುದು; ಮುಕ್ತರಾಗಬಹುದು; ಚಿದಾನಂದ ಪಡೆಯಬಹುದು. ಸಚ್ಚಿದಾನಂದ (ಸತ್ ಚಿತ್ ಆನಂದ) ಸ್ಥಿತಿಯೇ ಶಿವಸ್ಥಿತಿ. ಸಚ್ಚಿದಾನಂದಾನುಭವವೇ ಶಿವಾನುಭವ''ವೆಂದು, ಲೋಕಕ್ಕೆ ಸಾರಿ ಹೇಳುವ ಮಹಾಪುರುಷ ಮೂಡಿಬರಬೇಕಾಗಿತ್ತು. ತನ್ನ ಉದ್ಧಾರ ತನ್ನಿಂದ ಮಾತ್ರ ಸಾಧ್ಯ, "ಉದ್ಧರೇತ್ ಆತ್ಮಾನ್ ಆತ್ಮಾನಮ್'' ಎಂದು ಆತ್ಮವಿಶ್ವಾಸ ಮೂಡಿಸಿ, ಪ್ರತಿ ಜೀವಿಯಕಿ ಪರಿಪೂರ್ಣರಾಗಿರುವ ಬ್ರಹ್ಮನ ಸ್ವರೂಪಸ್ಥಿತಿ ತಿಳಿಯಲು ಅಣಿಗೊಳಿಸಿದ ಮಹಾ ಪುರುಷನೇ 'ವೇಮನ'

ವಂಶೇತಿಹಾಸ

ಕ್ರಿಸ್ತಾಬ್ದ ಹದಿನಾಲ್ಕರ ಪ್ರಾರಂಭಕಾಲ. ಕಾಕತೀಯ ಸಾಮ್ರಾಜ್ಯ ದಿಲ್ಲಿಯ ಬಾದಶಹ ತಘಲಕನ ಮಹಾಸೈನ್ಯದ ಎದುರು ಮಣಿಯಿತು. ದೊರೆ ಪ್ರತಾಪರುದ್ರ ವೈರಿಯ ಸೆರೆಯಾಳಾದ. ದಿಲ್ಲಿಯ ದಾರಿಯಲ್ಲಿ ಮಡಿದ. ಹೀಗೆ ೧೩೨೩ ರಲ್ಲಿ ಕಾಕತೀಯ ವಂಶದ ಕೊನೆಯಾಯಿತು.

ಈ ಮೊದಲು ೧೩೦೭ ರಲ್ಲಿ ದಿಲ್ಲೀಶ್ವರ ಅಲ್ಲಾವುದ್ದೀನ ಖಿಲಜಿಯ ಸೇನಾಪತಿ ಮಲಿಕ್ ಕಾಫರನು ದೇವಗಿರಿಯ ಯಾದವ ರಾಜರನ್ನೂ, ೧೩೧೦ ರಲ್ಲಿ ದ್ವಾರ ಸಮುದ್ರದ ಹೊಯ್ಸಳ ಅರಸರನ್ನೂ ಸೋಲಿಸಿ ಜಯಭೇರಿ ಮೊಳಗಿಸಿದ್ದನು. ಆ ದದ್ದುಳಿತದ ಕಾಲಕ್ಕೆ ಕಾಕತೀಯ ಸಾಮ್ರಾಜ್ಯ ತಲೆ ಮಣಿಸದೆ, ಸಂಧಿ ಮಾಡಿಕೊಂಡಿತ್ತಾದರೂ, ಮುಂದೆ ೧೩೨೩ ರಲ್ಲಿ ತಘಲಕನ ಸೇನೆಗೆ ಬಾಗಬೇಕಾಯಿತು.

ಮುಸ್ಲಿಂ ಬಾದಶಹರ ಪ್ರತಿನಿಧಿಗಳು ಸ್ಥಳೀಯ ಜನರನ್ನು ನಿರ್ದಯವಾಗಿ ನಡೆಸಿಕೊಳ್ಳುವದನ್ನು ಸಹಿಸದ ವೀರಯೋಧ ವಂಶದ ರೆಡ್ಡಿಗಳು, ಪದ್ಮ-ನಾಯಕರು, ಕುರುಬ ಸರದಾರರು ಕ್ರಮವಾಗಿ ಅದ್ದಂಕಿ ರಾಜ್ಯ (೧೩೨೪) ರಾಚಕೊಂಡ ರಾಜ್ಯ ೧೩೩೦ ಮತ್ತು ಆನೆಗೊಂದಿ ರಾಜ್ಯಗಳನ್ನು ೧೩೩೭ರಲ್ಲಿ ಸ್ಥಾಪಿಸಿದರು. (ರೆಡ್ಡಿ ರಾಜರು ೧೩೩೭ರ ನಂತರ ಅದ್ದಂಕಿಯಿಂದ ಗುಂಟೂರ ಬಳಿಯ ಕೊಂಡವೀಡುವಿಗೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದರು.)

ಅದ್ದಂಕಿ ರಾಜ್ಯದ ಸ್ಥಾಪಕನೆಂದರೆ, ಪ್ರೋಲಯ ವೇಮಾರೆಡ್ಡಿ. ಕಾಕತೀಯ ಸಾಮ್ರಾಜ್ಯದ ಮಹಾದಂಡನಾಯಕ. ಶ್ರೀ ಶೈಲ ಪ್ರದೇಶದಿಂದ ಪೂರ್ವ ಸಮುದ್ರ ತೀರದವರೆಗೆ ಮತ್ತು ಕೃಷ್ಣಾನದಿಯಿಂದ ನೆಲ್ಲೂರಿನವರೆಗೆ ಇರುವ ಭೂಪ್ರದೇಶವನ್ನು ಆಳಿದ ಮಹಾವೀರನೀತ. ವಿನುಕೊಂಡ, ಕೊಂಡವೀಡು ಇತ್ಯಾದಿ ಹದಿನಾಲ್ಕು ಕೋಟೆಗಳನ್ನು ಕಟ್ಟಿಸಿ ರಾಜ್ಯರಕ್ಷಣೆ ಭದ್ರಪಡಿಸಿದ. ಬ್ರಾಹ್ಮಣರಿಗೆ ಹದಿನಾಲ್ಕು ಅಗ್ರಹಾರಗಳನ್ನು ದಾನವಿತ್ತು 'ಧರ್ಮ ಪ್ರತಿಷ್ಠಾ ಗುರು' ಎನ್ನಿಸಿದ. ' ಹರಿವಂಶ 'ದ ಕರ್ತೃ ಎರ್ರಾ ಪ್ರಾಗ್ಗದ ಮಹಾಪ್ರಕವಿ ಈತನ ಆಸ್ಥಾನ ಪಂಡಿತ. ಶ್ರೀ ಶೈಲ, ಅಹೋಬಲಿ, ಪಾತಾಳ ಗಂಗೆ ಕ್ಷೇತ್ರಗಳಿಗೆ ಹೋಗುವ ಯಾತ್ರಿಕರಿಗಾಗಿ ಮೆಟ್ಟಲು ಕಟ್ಟಿಸಿದನೆಂದು ಶಾಸನಾದಿಗಳಿಂದ ತಿಳಿಯುತ್ತದೆ. ೧೩೫೩ರಲ್ಲಿ ನಿಧನ ಹೊಂದಿದನು.

ಪ್ರೋಲಯ ವೇಮಾರೆಡ್ಡಿಯ ನಂತರ ಅವನ ಮಗ ಅನವೋತಾರೆಡ್ಡಿ ೧೩೫೩ ರಿಂದ ೧೩೬೪ ರವರೆಗೆ ರಾಜ್ಯವಾಳಿದನು. ಇವನ ಆಳ್ವಿಕೆಯಲ್ಲಿ ಕಳಿಂಗಾಧೀಶ ನರಸಿಂಹದೇವನು ದಾಳಿ ಮಾಡಿ, ಗೋದಾವರಿ ನದಿ ದಾಟಿ ಕೃಷ್ಣಾತೀರದವರೆಗಿನ ದೇಶವನ್ನು ಜಯಿಸಿದನು. ಬಳಿಕ ಅನವೋತರೆಡ್ಡಿ, ಈಚೆಯಿಂದ ಕೃಷ್ಣೆಯನ್ನು ದಾಟಿ, ಕೃಷ್ಣಾ-ಗೋಧಾವರಿ ನದಿಗಳ ನಡುವಿನ ಪ್ರದೇಶವನ್ನು ವಶಪಡಿಸಿಕೊಂಡದ್ದಲ್ಲದೆ, ಚಿಕ್ಕಪುಟ್ಟ ಸಾಮಂತರನ್ನೆಲ್ಲ ಗೆದ್ದು, ಕಳಿಂಗ ದೇಶದ ಮೇಲೆ ದಾಳಿ ಮಾಡಿದನು. ಇನ್ನೊಂದೆಡೆ, ಬಹಮನಿ ಸುಲ್ತಾನ ರೆಡ್ಡಿ ರಾಜ್ಯದ ಮೇಲೆ ದಾಳಿ ಮಾಡಲು ದೊರೆ ಅನವೋತರೆಡ್ಡಿಯ ಮಂತ್ರಿ ಮಲ್ಲಯ ವೇಮನೇ ಅವನನ್ನು ಓಡಿಸಿದನು. ವಿಜಯನಗರದ ಬುಕ್ಕರಾಯ ರೆಡ್ಡಿ ರಾಜ್ಯ ಕಬಳಿಸಲು ಪ್ರಯತ್ನಿಸಿದ. ಪಕ್ಕದ ಬಲಿಷ್ಠ ರಾಜ್ಯದ ಬಲವರಿತ ಅನವೋತರೆಡ್ಡಿ ಅದ್ದಂಕಿಯಿಂದ ಸುರಕ್ಷಿತವಾದ ಕೊಂಡವೀಡು ಕೋಟೆಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ವ್ಯಾಪಾರಾಭಿವೃದ್ಧಿಗಳ ಬೆಳವಣಿಗೆಗೆ ಬಹುವಾಗಿ ಶ್ರಮಿಸಿದ ದೊರೆಈತ. ದಾನ ಧರ್ಮಗಳಲ್ಲಿ ಎತ್ತಿದ ಕೈ, ಇವನದು.

ಅನವೋತರೆಡ್ಡಿಯ ನಂತರ ಅವನ ಮಗ ಕೊಮುರುಗಿರಿ ರೆಡ್ಡಿ (ಕೊಮಟ-ಸುಂದರ) ರಾಜ್ಯ ಪೀಠಕ್ಕೆ ಬರಬೇಕಿತ್ತು. ಆದರೆ ಕೊಮುರಗಿರಿ ಆಗಿನ್ನೂ ಪ್ರಾಪ್ತವಯಸ್ಸನಿರಲಿಲ್ಲ. ಇವನ ಮಲ್ಲಾಂಬೆಯ ಗಂಡ ಕಾಟಯ ವೇಮಾರೆಡ್ಡಿ ಮಹಾಮುತ್ಸದ್ದಿ. ಮಹಾರಾಜ್ಯ ರಕ್ಷಣೆಯ ಭಾರ ಹೊರಲು ಸರ್ಮಥನಾದ, ಕೊಮರಗಿರಿ ರೆಡ್ಡಿಯ ಚಿಕ್ಕಪ್ಪನನ್ನು ಒಡಂಬಡಿಸಿದನು. ಇವನೇ ಅನವೇಮಾರೆಡ್ಡಿ. ಪರರಾಜರ ದಾಳಿ ಎದುರಿಸಿ ರಾಜ್ಯವನ್ನು ಪೂರ್ವದ ಸಮುದ್ರ ತೀರದಿಂದ ಪಶ್ಚಿಮಕ್ಕೆ ಶ್ರೀಶೈಲದವರೆಗೆ, ಉತ್ತರದ ಸಿಂಹಾಚಲದಿಂದ ದಕ್ಷಿಣಕ್ಕೆ ಕಂದಕೂರಿದ ವರೆಗೆ ವಿಸ್ತರಿಸಿದನು. ಪದ್ಮ ನಾಯಕಅರಸರೂ, ವಿಜಯ ನಗರದ ರಾಯರೂ ಇವನೆದುರು ಮಣಿದರು. ರಾಜಮಹೇಂದ್ರದ ಮಂಚಿಕೊಂಡ (ಚೆಲುವಗಿರಿ) ರೆಡ್ಡಿಗಳನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡನು. ಇವನ ಕಾಲ ರೆಡ್ಡಿರಾಜ್ಯದ ಸುವರ್ಣಯುಗ. ಅಪ್ರತಿಮ ವೀರನಾದ ಈ ದೊರೆ ಅದ್ವಿತೀಯ ದಾನಶೀಲನೂ ಆಗಿದ್ದನು. ಇವನ ಬಗೆ ಜಾನಪದ ಗೀತೆಗಳೂ ಕಥೆ-ಕವನಗಳೂ ಉಂಟು. ೧೩೭೪ ರಿಂದ ೧೩೮೬ ರ ವರೆಗೆ ಆಳಿ ಕೀರ್ತಿ ಶಾಲಿಯಾಗಿ ಪರಂಧಾಮನ್ಸೈದಿದನು.

ಅನವೇಮಾರೆಡ್ಡಿಗೆ ಮಕ್ಕಳಿರಲಿಲ್ಲ. ರಾಜ್ಯದ ಹಕ್ಕುದಾರಿಕೆಯ ಪ್ರಶ್ನೆಯಿದ್ದಿತು. ಇವನ ಅಣ್ಣನ ಮಗ ಕೊಮರುಗಿರಿರೆಡ್ಡಿ, ಪ್ರೋಲಯ ರೆಡ್ಡಿಯ ತಮ್ಮ ಮಾಚಾರೆಡ್ಡಿಯ ಮೊಮ್ಮಗ ಪೆದಕೊಮಟಿ ವೇಮಾರೆಡ್ಡಿ (ಚಂದವೋಲು ಪ್ರಾಂತದ ದೊರೆ) ಇವರ ನಡುವೆ ಕಲಹವೇಳುವುದರಲ್ಲಿತ್ತು. ಆದರೆ ಮಹಾಮುತ್ಸದ್ದಿ ಕಾಟಯ ವೇಮಾರೆಡ್ಡಿಯ ರಾಜತಂತ್ರದಿಂದಾಗಿ ಕೊಮರಗಿರಿ ಪಟ್ಟವೇರಿದ. ಕೊಮರುಗಿರಿಯ ನಂತರ ಪೆದಕೊಮಟಿ ರೆಡ್ಡಿ ಪಟ್ಟಕ್ಕೆ ಬರಬಹುದೆಂಬ ಏರ್ಪಾಡೂ ನಡೆಯಿತು. ಕೊಮರುಗಿರಿ ರೆಡ್ಡಿ ಸ್ವಭಾವತಃ ಶಾಂತಿಪ್ರಿಯ, ಸಾಹಿತ್ಯಾಭ್ಯಾಸಿ, ಗ್ರಂಥಕರ್ತ, ರಾಜಕಾರಣದ ಜಂಜಾಟದಲ್ಲಿ ಸಿಲುಕಿ ತೊಳಲಲು ಇಷ್ಟಬಡಲಿಲ್ಲ. 'ವಸಂತ ರಾಜೀಯಮ್' ಎಂಬ ಸಂಸ್ಕೃತದ ಪ್ರಸಿದ್ಧ ನಾಟ್ಯಶಾಸ್ತ್ರ ರಚಿಸಿದನು. ಇವನ ತಂಗಿ ಮಲ್ಲಾಂಬೆಯ ಗಂಡ ಕಾಟಯ ವೇಮಾರೆಡ್ಡಿ ಕಾಳಿದಾಸನ ನಾಟಕಗಳ ಮೇಲೆ ಸಂಸ್ಕೃತದಲ್ಲಿ ಟೀಕೆ ಬರೆದನು. ಕೊಮರುಗಿರಿರೆಡ್ಡಿ ಆ ಕಾಲದ ಅರಸರಂತೆ ಸಂಗೀತ ನೃತ್ಯ ಕಲೆಗಳಲ್ಲಿ ಆಸುರಕ್ತನಾಗಿದ್ದನು. ಲಕುಮಾದೇವಿಯೆಂಬ ಕಲಾವಂತೆ, ನೃತ್ಯಸಾಮ್ರಾಜ್ಞಿಯು, ಅರಸನ ಉಪಪತ್ನಿಯಾಗಿದ್ದಳು. ಈ ಪರಿಸರದಲ್ಲಿ ಕೊಮರಗಿರಿ ರೆಡ್ಡಿ, ಸಾಹಿತ್ಯ, ಕಲೆ, ಶೃಂಗಾರ, ವಿಲಾಸಗಳಲ್ಲಿ ನಿರತನಾಗಿದ್ದುದಲ್ಲದೆ ಸ್ವತಃ ಚಿತ್ರಕಲೆ ಶಿಲ್ಪ ಕಲೆಗಳಲ್ಲಿ ನಿಷ್ಣಾತನಾಗಿದ್ದ. ಸಂಸ್ಕೃತದ ಶೃಂಗಾರ ಸಾಹಿತ್ಯ ಈಯೆಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತಿತ್ತು. ದೇವತಾ ವಿಗ್ರಹಗಳನ್ನು ಸ್ವತಃ ನಿರ್ಮಿಸಿ ಪ್ರತಿಷ್ಠಾಪಿಸಲು ಕೊಡುತ್ತಿದ್ದ, ಮಧ್ವಾಚಾರ್ಯರಂತೆ ಕೊಮರುಗಿರಿರೆಡ್ಡಿ ಮೂರ್ತಿ ಕಟೆದು ಪ್ರತಿಷ್ಠಾಪಿಸಿ ಅದುವೆ ಕಲಾತಪಸ್ಸಿನ ಫಲವೆಂದು ಬಗೆಯುತ್ತಿದ್ದ. ದೊರೆಯ ಕಲಾಭಿಜ್ಞತೆಯು ರಾಜ್ಯದಾಡಳಿತೆಗೆ ಅಡ್ಡವಾಗಲಿಲ್ಲ.

ಕಾಟಯ ವೇಮಾರೆಡ್ಡಿ ಮಹಾ ಮಂತ್ರಿಯಾಗಿ ರಾಜ್ಯಭಾರ ತೂಗಿಸುತ್ತಿದ್ದ. ೧೩೮೬-೯೦ರ ಕಾಲದಲ್ಲಿ ಕೊಂಡವೀಡು ಸೀಮೆಯ ಮೇಲೆ ದಂಡೆತ್ತಿ ಬಂದ ವಿಜಯ ನಗರದ

ಎರಡನೇ ಹರಿಹರನನ್ನು ಸೋಲಿಸಿ ಓಡಿಸಿದನು. ವಿಜಯ ನಗರದ ರಾಯರು ರೆಡ್ಡಿರಾಜ್ಯದ ಬಲ ಗುರುತಿಸಿದರು. ಕಾಟಯ ವೇಮಾರೆಡ್ಡಿಗೆ ಹರಿಹರರಾಯ ತನ್ನ ಮಗಳು ಹರಿಹರಾಂಬೆಯನ್ನು ಕೊಟ್ಟು ಲಗ್ನ ಮಾಡಿದನು. ಮಲ್ಲಾಂಬೆಯ ಸವತಿಯಾಗಿ ಹರಿಹರಾಂಬೆ ಮನೆ ಸೇರಿದಳು. ಪದ್ಮನಾಯಕರೊಡನೆ ನಡೆದ ಕಾಳಗದಲ್ಲಿ ಸಹ ವಿಜಯಶ್ರೀ ಕಾಟಯ ವೇಮಾರೆಡ್ಡಿಗೊಲಿದಳು. ಕಾಟಯ ವೇಮಾರೆಡ್ಡಿ ಸಾಹಸ ಕಾರ್ಯಗಳಿಗೆ ವೇಚ್ಚು ತೋರಿಸಲು ದೊರೆ ಕೊಮರುಗಿರಿರೆಡ್ಡಿ ರಾಜಮಹೇಂದ್ರಿಯಿಂದ ಸಿಂಹಾಚಲದ ವರೆಗಿನ ರಾಜ್ಯವನ್ನು ಜಹಗೀರು ಹಾಕಿ ಕೊಟ್ಟನು. ಈ ಘಟನೆಯಿಂದ ಕೆಲ ರೆಡ್ಡಿ ಸರದಾರರು ಅಸಂತುಷ್ಟಿಗೊಂಡರು. ಕೆಲವರು ಮತ್ಸರಭಾವ ತಾಳಿದರು. ಬೆಂಕಿಯ ಮೇಲೆ ಎಣ್ಣೆ ಸುರಿದಂತೆ, ೧೩೯೬ ರಲ್ಲಿ ದೇಶದಲ್ಲಿ ಬರಗಾಲ ಉಂಟಾಯಿತು ರಾಜನ ನಿರಾಸಕ್ತಿಯನ್ನು ಜನ ದುರ್ಲಕ್ಷ್ಯವೆಂದು ಭಾವಿಸಿದರು. ಸಮಯ ಕಾಯ್ದು ಕುಳಿತ ದಾಯಾದಿ ಪೆದಕೋಮಟಿ ವೇಮಾರೆಡ್ಡಿ ದೊಂಬಿಯೆದ್ದು, ಗದ್ದುಗೆಯೇರಿದನು. ಕೊಮರುಗಿರಿ ರೆಡ್ಡಿರಾಜ ಮಹೇಂದ್ರವತ್ತ ಸಾಗಿ ಅಲ್ಲಿಯೇ ಉಳಿದನು.

ಪೆದಕೋಮಟಿ ವೇಮಾರೆಡ್ಡಿಯ ಆಸ್ಥಾನ ಕವಿ ಶ್ರೀನಾಥ. ಆತನ ಶಿಕ್ಷಣ ಮಂತ್ರಿಯೂ ಇವನೇ. ಪೆದಕೋಮಟಿ ವೇಮಾರೆಡ್ಡಿ ಶೂರನಿದ್ದಷ್ಟೇ ಬುದ್ಧಿಶಾಲಿಯೂ ಆಗಿದ್ದನು. 'ಶೃಂಗಾರ ದೀಪಿಕಾ' ಎಂಬ ಟೀಕಾ ಗ್ರಂಥವನ್ನು 'ಅಮರುಕ ಕಾವ್ಯ' ಕುರಿತು ರಚಿಸಿದನು. 'ಗಧಾ ಸಪ್ತ ಸತಿ'ಯನ್ನು ಕುರಿತು 'ಸಪ್ತ ಸತಿಸಾರಮ್' ಎಂಬ ಇನ್ನೊಂದು ಟೀಕಾ ಗ್ರಂಥ ರಚಿಸಿದನು. ಈ ಸಂಸ್ಕೃತ ಪಂಡಿತನಾದ ರಾಜನ ಜೀವನ ಚರಿತ್ರೆಯನ್ನು 'ವೇಮ ಭೂಪಾಲೀಯಂ' ಎಂಬ ಗ್ರಂಥದಲ್ಲಿ, 'ಪಾರ್ವತೀ ಪರಿಣಯಂ' ಸಂಸ್ಕೃತ ನಾಟಕ ಕರ್ತೃ ವಾಮನ ಭಟ್ಟ ಸುಂದರವಾಗಿ ಚಿತ್ರಿಸಿದ್ದಾನೆ.

ಆದರೆ ವಿಧಿಯ ಲೀಲೆ. ರಾಜಮಹೇಂದ್ರದ ದೊರೆ ಕಾಟಯ ವೇಮಾರೆಡ್ಡಿ, ಕೊಂಡವೀಡು ದೊರೆ ಪೆದಕೋಮಟಿ ವೇಮಾರೆಡ್ಡಿಯವರೀರ್ವರೂ ಶೌರ್ಯ, ಧೈರ್ಯ, ಸಾಹಸ, ಯುಕ್ತಿಗಳಲ್ಲಿ, ಬುದ್ಧಿ ಅನುಭವಗಳಲ್ಲಿ ಅತಿರಥಿ ಮಹಾರಥಿಗಳಾಗಿದ್ದರೂ, ಪ್ರತಿಸ್ಪರ್ಧಿಗಳಾಗಿದ್ದರೂ ಇಬ್ಬರ ನಡುವೆ ವೈರವು, ಬೂದಿ ಮುಚ್ಚಿದ ಕೆಂಡದಂತಿತ್ತು. ಮೊದಲು ೧೪೦೩ ರಲ್ಲಿ ಕೋನೂರ ಬಳಿ ಯುದ್ಧ ನಡೆದು, ಕಾಟಯ ವೆಮಾರೆಡ್ಡಿ ಪರಾಜಯ ಹೊಂದಿದನು. ಅನಂತರ ೧೪೧೪ ರಲ್ಲಿ ಕಾಟಯ ವೇಮಾರೆಡ್ಡಿ ಯುದ್ಧದಲ್ಲಿ ಮಡಿದನು. ಆದರೆ ವಿಜಯಿ ಪೆದಕೋಮಟಿ ರೆಡ್ಡಿಗೂ ಒಳ್ಳೆಯ ದಿನಗಳು ಕಾದಿರಲಿಲ್ಲ. ಒಂದೆಡೆ ವಿಜಯನಗರದ ರಾಯರು ಇನ್ನೊಂಡೆದೆ, ರಾಜಮಹೇಂದ್ರದ ಅಲ್ಲಾಡರೆಡ್ಡಿ ಹೀಗೆ ಪ್ರಬಲ ವಿರೋಧಿಗಳನ್ನು ಎದುರಿಸಲಾರದೆ ಪೆದಕೋಮಟಿ ಅಂತಿಮ ಹೋರಾಟದಲ್ಲಿ ಪರಾಭವಗೊಳ್ಳಬೇಕಾಯಿತು.

ಜನ್ಮ

ದಕ್ಷಿಣ ಭಾರತದಲ್ಲಿ ಜನ್ಮ ತಳೆದು ವೇದ, ಉಪನಿಷತ್ತು ಮತ್ತು ಬ್ರಹ್ಮ ಸೂತ್ರಾದಿಗಳಿಗೆ ಭಾಷ್ಯ ಬರೆದು, ಒಬ್ಬರ ವಾದವನ್ನು ಮತ್ತೊಬ್ಬರು ಖಂಡಿಸಿ ಮಿಥ್ಯವೆಂದು ತೋರಿ

ಸಲು ಹೆಣಗಾಡಿದ, ಶಂಕರ, ರಾಮಾನುಜ ಮತ್ತು ಮಧ್ವರು ಹುಟ್ಟಿದ್ದು ಬ್ರಾಹ್ಮಣ ಜಾತಿಯಲ್ಲಿ. ಚಾತುರ್ವರ್ಣ್ಯ, ಚತುರಾಶ್ರಮಗಳನ್ನು ಇವರೆಲ್ಲ ಎತ್ತಿ ಹಿಡಿದರು. ಋಗ್ವೇದದ ಪುರುಷಸೂಕ್ತವನ್ನೂ, ಜನವರ್ಗವನ್ನು ಮೇಲುಕೀಳು ಎಂದು ವಿಂಗಡಿಸಲು ಬಳಸಿಕೊಂಡ ಈ ಆಚಾರ್ಯರ ಮತಗಳು ಧರ್ಮದ ಒಂದು ಮುಖವಾದ ತತ್ವಾರ್ಥ ಮಂಡನೆಯಲ್ಲಿ ಪರಿಸಮಾಪ್ತಿ ಕಂಡವು. ಧರ್ಮದ ಇನ್ನೊಂದು ಮುಖವಾದ ಆಚಾರದಲ್ಲಿ ದೇವಭಾವವಿರೋಧಿಯಾದ, 'ಮೇಲು-ಕೀಳು ಭಾವ' ಇದ್ದಂತೆ ಉಳಿಯಿತು. ಬ್ರಾಹ್ಮಣ ಸಮಾಜದಲ್ಲಿ ಹುಟ್ಟಿದ ಇವರಿಗೆ ಮಿಥ್ಯವೆನಿಸಿದ ಮೇಲು–ಕೀಳು ಭಾವನೆಯನ್ನು ವಿರೋಧಿಸುವ ಮನಸ್ಸಿದ್ದರೂ ಧೈರ್ಯವಿರಲಿಲ್ಲ. ಅವರು ಬಡವರಾಗಿ ಹುಟ್ಟಿ, ಬ್ರಾಹ್ಮಣ ಶ್ರೇಷ್ಠಿಗಳ ಆಶ್ರಯದಲ್ಲಿ ಬೆಳೆದು, ಶಿಷ್ಯರನ್ನು ಕೂಡಿಸಿ, ಗ್ರಂಥರಚನೆಗೆ ನಿಂತದ್ದರಿಂದ ಬಂಧು–ಮಿತ್ರರ ಋಣಾನುಬಂಧದಿಂದ ಮುಕ್ತರಾಗಲಿಲ್ಲ. ಇಲ್ಲದಿದ್ದರೆ ಭಾರತದ ಮೂಲೆಯಲ್ಲಿ ಎರಡು ಪಾಲಿನಷ್ಟಿದ್ದ ಶೂದ್ರರನ್ನೂ (ಜನಿವಾರ ಕಟ್ಟದ ಭಾರತೀಯರು) ಮತ್ತು ಕಾಲು ಭಾಗದಷ್ಟಿದ್ದ ಅತಿಶೂದ್ರ ಇಲ್ಲವೇ ಅಸ್ಪೃಶ್ಯರನ್ನೂ ಮೈಲಿಗೆಯಲ್ಲಿಟ್ಟು, ಬೆಟ್ಟದ ಕಲ್ಲಿಗೆ ದೇವರೆಂದು ವಾದಿಸ ಹೋಗುತ್ತಿರಲಿಲ್ಲ. ಇನ್ನೊಬ್ಬ ಮನುಷ್ಯನನ್ನು, ಅವನು ಸದ್ಗುಣಿಯಾಗಿದ್ದರೂ, ದೇವರಂತೆ, ಮಾನವರಂತೆ, ಕಾಣಲು ಮನಸ್ಸು ಮಾಡದಿರುತ್ತಿರಲಿಲ್ಲ. ಆದರೆ ಮನುಷ್ಯನ ಇಚ್ಛಾಶಕ್ತಿ ಬುದ್ಧಿಶಕ್ತಿಗಳು ಹೊಂದಿಕೊಂಡು ಅನುಕೂಲ ಪರಿಸ್ಥಿತಿ ಉಂಟಾದಾಗ ಕರ್ಮ ನೆರವೇರುತ್ತದೆ. ಆಚಾರ್ಯರಿಗೆ ಇಚ್ಛೆ, ಬುದ್ಧಿ ಇದ್ದರೂ, ಪರಿಸ್ಥಿತಿ ಅನುಕೂಲವಾಗಿಲ್ಲದಿರಬಹುದು. ಶೈವಮತ ಸುಧಾರಕರಾದ ಕಲ್ಯಾಣದ ಬಸವಣ್ಣನವರು ಶಿಲಾಪೂಜೆಯನ್ನು ವಿರೋಧಿಸಿದರೂ, ಒಬ್ಬನೇ ದೇವ; ಅವನೇ ಶಿವನೆಂದು ಸಾರಿ, ಕುಟುಂಬಕ್ಕೊಂದೆ (ಕಲ್ಲು ಹರಳಿನ) ಲಿಂಗ ಪೂಜಿಸಲು ಕರೆಯಿತ್ತರು. ಧರ್ಮ ಪ್ರಸಾರವು ಸಂಸ್ಥೆ ಸಂಘಟನೆಗಳ ಮೂಲಕ ಸಾಧ್ಯವೆಂದು ಬಸವಣ್ಣ ತೋರಿದರೂ ತತ್ವ ವಿವೇಚನೆಯಲ್ಲಿ ಸಂಧಿಗ್ಧತೆ ಯ ಹಂತ ದಾಟಲಿಲ್ಲ. 'ಸತ್ಯ' ವನ್ನು ಮನಗಾಣದೆ, ಆಚಾರದಿಂದ ವಿಚಾರದಿಂದ ವಿಚಾರದ ಮೇಲುಮಟ್ಟ ಮುಟ್ಟಿ, ಸತ್ಯ ಹುಡುಕಬಹುದೆಂಬ ಸಾಹಸವು ಕಲ್ಯಾಣ ಕ್ರಾಂತಿಯಿಂದಾಗಿ ಅರ್ಧಕ್ಕೆಳೆಯಿತು.

ವೇದಗಳು ಕುಟಿಲ ಎಂದು ಬುದ್ಧ ಹೇಳಿದ. 'ವೇದ ಹೋತಿಂಗೆ ಮಾರಿ' ಎಂದರು ಬಸವಣ್ಣ. ವೇದ ಮಂತ್ರಗಳಿಗೆ ಮೂರು ಅರ್ಥಗಳುಂಟು ಎಂದರು ಮಧ್ವಾಚಾರ್ಯರು. ಜಗತ್ತಿನಲ್ಲಿ ತತ್ವಗಳಿವೆ. ಹಲವು ಶಬ್ದಗಳಲ್ಲಿ ಅವನ್ನು ಹಲವು ಋಷಿಗಳು ಬಣ್ಣಿಸಿದ್ದರೂ ಅವು ಇದ್ದೇ ಇರುತ್ತಿದ್ದವು. ಇರುವ ತತ್ವಗಳನ್ನು ಋಷಿಗಳು ಕಂಡುಕೊಂಡು ದ್ರಷ್ಟಾರರೆನಿಸಿದರು. ಲಿಪಿಯಿಲ್ಲದ ಕಾಲದಲ್ಲಿ ಕಿವಿಯಿಂದ ಕಿವಿಗೆ ಸಾಗಿದ್ದ ಮಂತ್ರ 'ಶ್ರುತಿ'ಯೆನಿಸಿತು. ಈ ಅರ್ಥದಲ್ಲಿ ವೇದ ಅಪೌರುಷೇಯ. ಇದೇ ಅರ್ಥದಲ್ಲಿ ವೇದ ತತ್ವ ಸನಾತನ. ಉಪನಿಷತ್ತುಗಳು ವೇದ ಕರ್ಮದ ಗೊಡವೆ ಬಿಟ್ಟು ಬ್ರಹ್ಮತತ್ವದ ಎಡೆಗೆ ಸಾಗಿದ ಉಚ್ಚ ತತ್ವಸಾರ. ವೇದಾಂತ. ಈ ಸನಾತನ ಧರ್ಮವನ್ನೂ ವೇದಾಂತ ಸಾರವನ್ನೂ ಹೇಳಲು ಹುಟ್ಟಿದವನು ಬ್ರಹ್ಮಜ್ಞಾನಿ; ಧರ್ಮದರ್ಶಿ.

ರಘುವಂಶದ ರಾಜರಲ್ಲಿ ಶ್ರೀರಾಮ ಕ್ಷತ್ರಿಯ ವಂಶದಲ್ಲಿ ಜನಕ ಹುಟ್ಟಿ ರಾಜರಾಗಿದ್ದು ಧರ್ಮದರ್ಶಿಗಳಾದರು. ಯಾದವವಂಶದಲ್ಲಿ ಶ್ರೀ ಕೃಷ್ಣ ಪಾರ್ಥನ ಸಾರಥಿಯಾಗಿ, ಹಿರಿಯ ಉಪದೇಶಕನಾಗಿ, ಅರಸನಾಗಿ ಧರ್ಮದರ್ಶಿಯಾದ. ಗೌತಮ ಬುದ್ಧ, ಮಹಾವೀರರು ಕ್ಷತ್ರಿಯ ಅರಸರಾಗಿ, ರಾಜ್ಯ ತೊರೆದು ಸನ್ಯಾಸಿಗಳಾಗಿ ಧರ್ಮದರ್ಶಿಗಳಾದರು. ವೇಮನ ರೆಡ್ಡಿ ರಾಜವಂಶೀಯನಾಗಿ ಪೂರ್ವ ಕರ್ಮಾನುಸಾರ, ಪರಿಸ್ಥಿತಿಯನ್ನನುಸರಿಸಿ, ಆತ್ಮ ಸಾಕ್ಷಾತ್ಕಾರದ ಅನುಭವದಿಂದ ಧರ್ಮದರ್ಶಿಯಾದ.

"ಕೊಂಡವೀಡು ಕೋಟೆಯಲ್ಲಿರುವ ಪಶ್ಚಿಮ ಬೀದಿ. ಮೂಗ
ಚಿಂತೆ ಪಲ್ಲೆಪೇಟೆಯ ಮೊದಲ ಮನೆ. ಮುಂಕು ರೆಡ್ಡಿ ಕುಲ.
ಅದನ್ನೆಷ್ಟು ತಿಳಿಸಿದರೂ ಅಷ್ಟೇ."

ಕೊಮರುಗಿರಿ ರೆಡ್ಡಿ ದೊರೆತನ ಕಳೆದುಹೋದ ಮೇಲೆ ರಾಜಮಹೇಂದ್ರದಲ್ಲಿ ತಂಗಿ ರಾಜಪತ್ನಿ ಮುಲ್ಲಾಂಬೆಯ ಬಳಿ ಕೊಂಚಕಾಲ ನೂಕಿದ. ಆದರೆ ರಾಜಮಹೇಂದ್ರದರಸು ಮುಲ್ಲಾಂಬೆಯ ಪತಿ ಕಾಟಯ ವೇಮಾರೆಡ್ಡಿ ಕೊಂದವೀಡು ರಾಜ್ಯದ ದೊರೆ ಪೆದಕೋಮಟಿ ವೇಮಾರೆಡ್ಡಿಯ ಮೇಲಿನ ಸೇಡು ತೀರಿಸಿಕೊಳ್ಳಲು ಯುದ್ಧ ಹೂಡಿ ಪರಾಜಯ ಹೊಂದಿದ. ಕೊಮರುಗಿರಿರೆಡ್ಡಿಗೆ ತನಗಾಗಿ ರೆಡ್ಡಿರಾಜ್ಯಗಳಲ್ಲಿ ತಿಕ್ಕಾಟ ತುರುಸಿನ ಕಾದಾಟಗಳಾಗುವುದು ಸರಿದೋರಲಿಲ್ಲ. ತಾನು ರಾಜಮಹೇಂದ್ರದಲ್ಲಿ ಇರುವಷ್ಟುಕಾಲ ಈ ವೈರಭಾವ ಹಿಂಗದೆಂದು ತಿಳಿದು, ಕೊಂಡುವೀಡು ನಗರದಲ್ಲಿಯೇ ನಿವೃತ್ತ ಜೀವನ ಕಳೆಯಲು ನಿರ್ಧರಿಸಿದ. "ಪಶ್ಚಿಮ ಬೀದಿಯ ಮೊದಲ ಮನೆ" ಇವನಿಗಾಗಿ ತೆರವಾಯಿತು. ಅದೇ ಊರಲ್ಲಿ ದೊರೆಯಾಗಿದ್ದ. ಇಲ್ಲಿ 'ಮಾಜಿದೊರೆ' ಯಾಗಿ ಜೀವಿಸುವುದು ಕಷ್ಟಸಾಧ್ಯವಾಗಿತ್ತು. ದುಃಖ ನುಂಗಿಕೊಂಡ. ವಿಧಿಯನ್ನು ಶಪಿಸಿದ. ಮೂಕವೇದನೆ ಮನೆಯನ್ನಾವರಿಸಿತ್ತು. ಉಣ್ಣಲು ತಿನ್ನಲಿತ್ತು. ಸಂಪತ್ತು ಒಟ್ಟಿತ್ತು. ಉಣ್ಣುವ ಮನಸ್ಸು ಇರಲಿಲ್ಲ. ನಿರಾಶಯ ಛಾಯೆ ಆವರಿಸಿತ್ತು. (ಶಾಲಿವಾಹನ ಶಕ ೧೩೩೪ ನಂದನ ನಾಮ ಸಂವತ್ಸರದ ಕಾಲ. ಅಂದರೆ ಕ್ರಿಸ್ತ ಶಕ ೧೪೧೨) ಮನೆಯ ಒಳಗೆ ಮನಸ್ಸು ಒಣಗಿತ್ತು. ಹೊರಗೆ ಕಾರ್ತಿಕ ಮಾಸದ ಛಳಿ. ಗಿಡ ಮರಗಳೂ ತಮ್ಮ ಅಲಂಕಾರ–ಪ್ರಾಯವಾದ ಎಲೆ–ಹೂಗಳನ್ನು ಪ್ರದರ್ಶಿಸದೆ, ರಸರೂಪದಲ್ಲಿ, ಕಾಂಡದಲ್ಲಿ ಅಡಗಿಸಿಕೊಂಡು ಕೊಮರುಗಿರಿರೆಡ್ಡಿಯ ಸಂಸಾರದ ಮೂಕಯಾತನೆಯೊಂದಿಗೆ ಸಮರಸವಾಗಿದ್ದವು. ಕೊಮರುಗಿರಿರೆಡ್ಡಿಯ ಪತ್ನಿ ಮಲ್ಲಮ್ಮನೂ ಗರ್ಭದಲ್ಲಿ ಪಿಂಡ ಧರಿಸಿದಳು. ಗಿಡದ ಕೊಂಬೆ ಕೊನರಿದಂತೆ, ನಂದನ ನಾಮ ಸಂವತ್ಸರದ ನೂತನ ಆಶೆಯಂತೆ ನಂದನನ ಜನನವಾಯಿತು. 'ವಿಂಧ್ಯಾದ್ರಿಯಿಂದ ಸೇತು ಬಂಧನ ವರೆಗಿನ ನಾಡಿನ ಜನಮನವನ್ನಾಳುವ ಧರ್ಮ ವೀರನೊಬ್ಬ ಜನಿಸಿದ. ನಿರಾಶೆಯ ಕತ್ತಲಲ್ಲಿ ಆಶೆಯ ಜ್ಯೋತಿ ಹೊತ್ತಿತು. ಮಗುವಿಗೆ 'ವೇಮಾರೆಡ್ಡಿ' ಎಂದು ಹೆಸರಿಟ್ಟು, ಮುತ್ತೈದೆಯರು ತೊಟ್ಟಿಲು ತೂಗಿದರು. ಮಂಗಳವಾದ್ಯ ಮೊಳಗಿದವು. ರಾಜಕುಟುಂಬದವರೂ ಈ ಸಂತಸಕಾಲದಲ್ಲಿ ಪಾಲ್ಗೊಂಡಿದ್ದರು. ದಾಯಾದಿ ಮತ್ಸರ ಹಿಂಗಿದ ಭಾವ ಸೂಸುವ ಆ ಸನ್ನಿವೇಶ ಕಂಡವರು, ಹುಟ್ಟಿದ ಕಂದನ ಪುಣ್ಯಪ್ರಭಾವ ಎಂದುಸುರಿದರು.

ಮಗು ಸುಂದರವಾಗಿತ್ತು. ಸಕಲರ ಮನಸ್ಸು ಅರಳಿ ಹೂವಾಗಿತ್ತು. ಮಗು ನಕ್ಕರೆ, ದೃಷ್ಟಿಯ ಚುಕ್ಕೆ. ಅತ್ತರೆ ಹತ್ತಾರು ಮುದ್ದು. ಪೂರ್ವ ಪುಣ್ಯದ ಫಲವಾಗಿ ಸಕಲ ಭೋಗಪಾತ್ರನಾದ ಸನತ್ಸುಮಾರಾಂಶನಿವ ಎಂದರು ಪುರಾಣದ ಶರಣರು ಕೊಮರುಗಿರಿ ರೆಡ್ಡಿ ರಾಮಜನನದ ಚಿತ್ರ ಬರೆದು ಬಣ್ಣ ಕೊಡುತ್ತ ತನ್ನ ಸಂತೋಷವನ್ನು ತನ್ನದಾದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿದ. ಅವನ ಉಪಪತ್ನಿ ಲಕುಮಾದೇವಿ ನೃತ್ಯಸಭೆ ಜರುಗಿಸಿ ಸಕಲರ ಸಂತಸದ ದೀಪಕ್ಕೆ ತೈಲ ಸುರಿದಳು. ತೊಟ್ಟಿಲಲ್ಲಿ ಬಾಳನಂದಾದೀಪ ಬೆಳಗುತಿತ್ತು.

ಬಾಲ್ಯ

ಬಾಲಕ ವೇಮಾರೆಡ್ಡಿ ಶುಕ್ಲಪಕ್ಷದ ಚಂದಿರನಂತೆ ಬೆಳೆಯುತ್ತಿದ್ದ. ತನಗೆ ರಾಜ ಪದವಿ ತಪ್ಪಿತು, ಎಂಬ ದುಗುಡ ಏರೆಡು ವರುಷದ ಕೂಸಿಗಿರಲಿಲ್ಲ. ಆದರೆ ರಾಜ ಲಕ್ಷಣಗಳಿಂದ, ಮುದ್ದಾದ ಅಂಗಾಂಗಳಿಂದ, ಚೆಲುವು ಸೂಸುವ ನಗೆಮೊಗದಿಂದ ನೋಡಿದವರ ಕಣ್ಣಿಗೆ ಹಬ್ಬ ಉಂಟು ಮಾಡುತ್ತಿದ್ದ, ಅಂಬೆಗಾಲು ಬಿಟ್ಟು, ಬೀಳುತ್ತೇಳುತ್ತ ಅಲೆದಾಡುವ ಬಾಲನನ್ನು ಕಂಡವರು ರಾಜಪದವಿ ಅವನಿಗೆ ತಪ್ಪಿತಲ್ಲಾ ಎಂದು ಮರುಕಪಡುತ್ತಿದ್ದರು. ಕೊಮರೆಗಿರಿರೆಡ್ಡಿ ಮಗನನ್ನು ನೋಡಿ ಮುಗಳುನಗೆ ಸೂಸುತ್ತಿದ್ದ. ತಾನೇ ಬರೆದ 'ವಸಂತ ರಾಜೀಯಮ್' ಎಂಬ ನಾಟ್ಯಶಾಸ್ತ್ರದ ಹಾಳೆಗಳನ್ನು ತಿರುವುತ್ತ, ಮಗನ ತಪ್ಪು ಹೆಜ್ಜೆಗಳನ್ನು ಕಣ್ಣಿನಿಂದ ಕಾಣುತ್ತ ಹರ್ಷಿತನಾಗಲು ಯತ್ನಿಸುತ್ತಿದ್ದ. ಆದರೆ ಮಗ ಹೆಜ್ಜೆ ತಪ್ಪಿದಾಗ ತಾನು ಜೀವನದಲ್ಲಿರಿಸಿದ ಹೆಜ್ಜೆ ಸರಿಯಾಗಿತ್ತೇ? ಎಂದು ಆತ್ಮಾಲೋಚನೆಗೆ ತೊಡಗುತ್ತಿದ್ದ. ಮುದ್ದು ಮಗನ ವಿವಿಧ ಭಂಗಿಗಳನ್ನು ಚಿತ್ರಿಸಿ, ಏನೋ ತಿಳಿದು ಹರಿದು ಹಾಕುತ್ತಿದ್ದ. ಮನಸ್ಸಿನ ಸರಪಳಿ ಹರಿದಿತ್ತು. ಮಗನನ್ನು ಹರಿಸುವ ಹಿರಿಯರು ರಾಜ ಲಕ್ಷಣದ ಹುಡುಗನೆಂದಾಗ ಕಳೆದು ಹೋದ ಸಾಮ್ರಾಜ್ಯ ನೆನೆಸಿ ಕಸಿವಿಸಿ ಪಡುತ್ತಿದ್ದ. ಮೀರಿದ ಪ್ರೇಮವಾತ್ಸಲ್ಯಗಳೂ ಮನ ಕೊರೆಯುವ ಯಾತನೆ ನೀಡುವುವೆಂಬ ವಿಚಿತ್ರಸತ್ಯ ಅನುಭವಕ್ಕೆ ಬರತೊಡಗಿತ್ತು. ವಿಚಾರಗೊಂದಲಕ್ಕೆ ಸಿಲುಕಿದ ಈ ಕಲಾಭಿಮಾನಿ ಸಾಹಿತಿ, ವಿಕೃತ ಪರಿಸ್ಥಿತಿಯ ನಿಮಿತ್ತ ಹೃದಯಕ್ರಿಯೆ ನಿಂತು ಮಡಿದ. ಮಡದಿ ಕೊತುರಮಲ್ಲಮ್ಮ (ತಲ್ಲಾಂಬೆ) ಭೋರಿಟ್ಟಳು. ತಂಗಿ ಮಲ್ಲಾಂಬೆ ನಿಟ್ಟುಸಿರಿಟ್ಟಳು. ಎರಡು ವರ್ಷ ವಯಸ್ಸಿನ ಮಗ ತೊಟ್ಟಿಲಲ್ಲಿ ನಗುತ್ತಿತ್ತು, ಹುಟ್ಟಿದವನು ಸಾಯಲೇಬೇಕು. ಅಳುವುದೇಕೆ? ಎಂಬ ಪರಮತತ್ವ ತಿಳಿದವರಂತೆ!

ಕೊಮರೆಗಿರಿ ರೆಡ್ಡಿಯ ನಿಧನ ಕಲಾಭಿಮಾನಿ ಸಾಹಿತಿಕಾಲಕ್ಕೆ ತುಂಬಿಬಾರದ ಹಾನಿಯಾದರೂ ರಾಜಾಶ್ರಯದಲ್ಲಿ ಪ್ರಶಸ್ತಿಪರ ಪದ್ಯ ರಚಿಸುವ ಕವಿಗಣ ಶೋಕ ವ್ಯಕ್ತಪಡಿಸಲು ರಾಜನಮುಖ ನೋಡಿದರು. ರಾಜ ಪೆದಕೋಮಟಿ ವೇಮಾರೆಡ್ಡಿ, ಕಾಲಮುಳ್ಳು ಕಿತ್ತು ಹೋದವರಂತೆ ಮಾಜಿ ದೊರೆಯ ಮರಣದ ವಾರ್ತೆ ಕೇಳಿ ಹಾಯಾಗಿ ಇರಬೇಕೆಂದ. ಆದರೆ ದುರಾಶೆ-ಬೆಂಬತ್ತಿತು. ರಾಜಮಹೇಂದ್ರದ ಕಾಟಯ ವೇಮಾರೆಡ್ಡಿಯನ್ನು ಮಣಿಸಿ

ಸಾಮಂತನನ್ನಾಗಿಸಿದರೆ ರಾಜ್ಯ ವಿಸ್ತಾರವಾಗುತ್ತದೆ. ಎದುರಾದ ಹುಲಿಯ ಹಲ್ಲು ಕಿತ್ತ ಹಾಗಾಗುತ್ತದೆ ಎಂದು ಎಣಿಕೆ ಹಾಕಿದ. ೧೪೧೪ರಲ್ಲಿ ನಡೆದ ಘೋರಕಾಳಗದಲ್ಲಿ ಕಾಟಯ ವೇಮಾರೆಡ್ಡಿ ಮಡಿದನು. ಆದರೆ ಕೋಮಟಿ ವೇಮಾರೆಡ್ಡಿ ಅಂತಿಮ ಜಯ ಸಾಧಿಸಲಿಲ್ಲ. ವಿಜಯನಗರದ ಮೊದಲನೆ ದೇವರಾಯ ರೆಡ್ಡಿರಾಜ್ಯದ ಮೇಲೆ ದಾಳಿ ಮಾಡಿ ಮೋಟುಪಲ್ಲಿ ಬಂದರು ವಶಪಡಿಸಿಕೊಂಡ. ಇತ್ತ ರಾಜ ಮಹೇಂದ್ರಿಯಲ್ಲಿ ಕಾಟಯವೇಮಾರೆಡ್ಡಿಯ ಬೀಗ ಅಲ್ಲಾಡರೆಡ್ಡಿ ಕೊಂಡವೀಡುವಿನ ಮೇಲೆ ಹಗೆ ತೀರಿಸಿಕೊಳ್ಳಲು ಮುಗಿಬಿದ್ದ. ಕೋಮಟಿವೇಮಾರೆಡ್ಡಿ ಬಗೆದದ್ದೊಂದು ದೈವ ಬಗೆದದ್ದು ಬೇರೊಂದು. ಕೋಮಟಿವೇಮಾರೆಡ್ಡಿ ಪರಾಜಿತನಾದನು. ರೇಚರ್ಲ ಪದ್ಮನಾಯಕರೂ, ಇದೇ ಸಂಧಿ ಸಾಧಿಸಿ ಕೋಮಟಿ ವೇಮಾರೆಡ್ಡಿಯನ್ನು ಸೋಲಿಸಿ '' ನಂದಿಕಂಟ ಪೋತರಾಜ ಕಠಾರಿ '' ಎಂಬ ಸುಪ್ರಸಿದ್ಧ ಕಠಾರಿಯನ್ನು ಹೊತ್ತುಒಯ್ದರು. ಕೋಮಟಿ ವೇಮಾರೆಡ್ಡಿ ಯುದ್ಧದಲ್ಲಿ ಸಂಹರಿಸಲ್ಪಟ್ಟನು.

ಕೊಮರುಗಿರಿ ರೆಡ್ಡಿಯ ಮಗ ವೇಮಾರೆಡ್ಡಿಗೆ ಎಂಟು ವರ್ಷ ವಯಸ್ಸು. ಕೊಂಡವೀಡುವಿನಿಂದ ರಾಜಮಹೇಂದ್ರಿಗೆ ಬಂದಿದ್ದ. ಸೋದರತ್ತೆ ಮಲ್ಲಾಂಬೆ ಪತಿ ಕಳೆದುಕೊಂಡ ದುಃಖವನ್ನು ಸಂತೈಸಿಕೊಳ್ಳುತ್ತಿದ್ದಳು. ತನ್ನ ಮಗ ತೀರಿದ ನೋವು ಮರೆಯುವದರೊಳಗೆ ಗಂಡನ ವೀರಮರಣದ ವಾರ್ತೆ ಸತಿಯ ಮನ ಘಾಸಿಗೊಳಿಸಿತ್ತು. ಸಾಲದ್ದಕ್ಕೆ ಅಲ್ಲಾಡ ರೆಡ್ಡಿ ೧೪೨೦ ರಲ್ಲಿ ಮರಣ ಹೊಂದಿದನು. ಸಂಕಟಗಳು ಒಂಟಿಯಾಗಿ ಬರುವುವೇ? ಆದರೆ ಕತ್ತಲೆಯ ನಂತರ ದಿನ ಬಂದೇ ಬರುವುದು. ಎಂಟು ವರ್ಷದ ತುಂಟ ಹುಡುಗ ವೇಮಾರೆಡ್ಡಿ ಮಲ್ಲಾಂಬೆಯ ಕಣ್ಣುಪುತ್ಥಳಿಯಾಗಿದ್ದ. ವೇಮಾರೆಡ್ಡಿಗೆ ಮಲ್ಲಾಂಬೆ ವೇಮನ್ನ ಎಂದಳು. ವೇಮನ ಕರೆಯುವ ಹೆಸರಾಯಿತು.

ವೇಮನನ ಓರಿಗೆಯ ಬ್ರಾಹ್ಮಣ ಬಾಲಕರು ಉಪನೀತರಾಗಿ ದಿನಾಲು ಪ್ರಾತಃಸಂಧ್ಯೆ ಸಾಯಂ ಸಂಧ್ಯೆ ಕಾಲ ಗಾಯತ್ರಿ ಮಂತ್ರ ಪಠಿಸುತ್ತಿದ್ದರು. ವೇಮನ ಗೆಳೆಯರೊಂದಿಗೆ ಆಟವಾಡುತ್ತಿದ್ದ. ಕೂಡಿ ತಿಂಡಿ ತಿನ್ನುತ್ತಿದ್ದ. ಒಂದಾಗಿ ಬೆರೆಯುತ್ತಿದ್ದ. ಬ್ರಾಹ್ಮಣ ಹುಡುಗರ ಉಪನಯನವಾದ ನಂತರ ಕೊರಳಿಗೆ ದಾರ ಸುತ್ತಿದ್ದರು. ಹೊಸಬಟ್ಟೆಯುಟ್ಟರು ವಿಷ್ಣುವಿನ ಪೂಜಕರು ಊದ್ದ ನಾಮ ಬಳಿದರು. ಶಿವನ ಪೂಜಕರು ಅಡ್ಡ ವಿಭೂತಿ ಬಳಿದರು. ಆದರೆ ಸಂಧ್ಯಾ ಜಪ ಏನೆಂದು ಅವನಿಗೆ ಗೊತ್ತಾಗಲಿಲ್ಲ. ಮನೆಯಲ್ಲಿ ಅಡುಗೆಯ ಆಚಾರಿ ಬ್ರಾಹ್ಮಣನಿದ್ದ. ಅವನ ಹತ್ತಿರ ಹೋಗಿ ಕೇಳಿದ ಆ ಮಂತ್ರವೇನು ಎಂದು? ಆಚಾರಿ ಪೇಚಾಡಿದ. ಹೇಳಿದರೆ ಮಂತ್ರದ ಗುಟ್ಟು ಹಾಳು. ಹೇಳದಿದ್ದರೆ ಒಡೆಯ ಹುಡುಗನ ಗೋಳು. ಕೊನೆಗೆ ಇಷ್ಟು ಮಾತ್ರ ಹೇಳಿದ; ಆ ಮಂತ್ರ ಬ್ರಹ್ಮಮುಖದಿಂದ ಬಂದ, ಋಗ್ವೇದದ ಒಂದು ಶ್ಲೋಕ. ಗಾಯತ್ರಿ ಛಂದಸ್ಸಿನಲ್ಲಿ ರಚಿತವಾದುದರಿಂದ 'ಗಾಯತ್ರಿ ಮಂತ್ರ'ವೆಂದು ಕರೆಯುವರು. ಕೇವಲ ದ್ವಿಜರು ಮಾತ್ರ 'ಶ್ರುತಿ' ಕಲಿಯಬಹುದು. ಶೂದ್ರರಿಗೆ ಶ್ರುತಿಪಾಠ ಕಲಿವರ್ಜ್ಯಎಂದು ಗುರುಗಳು ಹೇಳುತ್ತಾರೆ ದೊಡ್ಡವರ ಮಾತು, ಅವರು ನಡೆದ ಹಾದಿಯಲ್ಲಿ ನಡೆಯಬೇಕು. ನಮ್ಮ ನಮ್ಮ ಧರ್ಮ ದಂತೆ ನಾವು ನಡೆಯುವುದು ಕರ್ತವ್ಯ. ಏನೋ ಪೂರ್ವಜನ್ಮದ ಪುಣ್ಯದಿಂದ ಬ್ರಾಹ್ಮಣ

ಜನ್ಮ ಪಡೆದೆ. ನೀನೂ ದೊಡ್ಡವನಾಗಿ ಗೋಬ್ರಾಹ್ಮಣರನ್ನು ಸಂತೃಪ್ತಿಗೊಳಿಸಿದರೆ, ಸದ್ಗತಿಯಾಗುವುದು " ಎಂದು ಅಡುಗೆಯ ಭಟ್ಟ ತನ್ನ ಸ್ಥಾನಮಾನ ಮೀರಿದ ಮಾತನ್ನು ಉಸುರಿದ. ಜಾತಿಧರ್ಮದ ವಿಷಯವಾದುದರಿಂದ ಆ ಬಗ್ಗೆ ಉಪದೇಶಿಸುವ ಹಕ್ಕು ದೇವದತ್ತವಾಗಿದೆ, ಎಂಬ ಗಡಸುತನ ಅವನಲ್ಲಿತ್ತು.

" ನನ್ನ ತಂದೆ ಕೊನೆ ಕೊನೆಗೆ ದುರ್ಗತಿ ಪಡೆದನೆಂದು ಅತ್ತೆ ಹೇಳುವರು. ಅವರು ಗೋಬ್ರಾಹ್ಮಣರಿಗೆ ವ್ಯತ್ಯಯವಾಗುವಂತೆ ನಡೆದುಕೊಂಡರೇನು ? "

" ಛೇ ಛೇ ಹಾಗೆಂದರೆ, ಬಾಯಿಯಲ್ಲಿ ಹುಳು ಬಿದ್ದಾವು. ಬ್ರಾಹ್ಮಣರು ಸಾಕ್ಷಾತ್ ಭೂಸುರರೆಂದು ತಿಳಿದ ಮಹಾಪುರುಷ ಅವರು. ಅವರು ಕಟ್ಟಿಸಿದ ಗುಡಿಗಳೆಷ್ಟು ? ನಡೆಸಿದ ಪೂಜೆಗಳೆಷ್ಟು ? ದೇವ ಸಂಪ್ರೀತಿಗಾಗಿ ದೇವ ದಾಸಿಯರ ನೃತ್ಯ ಸಂಗೀತ, ಮಹಾ ಭೋಜನ ಪ್ರಸ್ತ ಅಸಂಖ್ಯ ! ಅವರ ಕೊನೆ ಇಲ್ಲಿ ದುಃಖ ತಂದರೂ ಅಲ್ಲಿ ಸ್ವರ್ಗ ಸುಖ ಇದ್ದೇ ಇದೆ " ಎಂದು ದೂರ ಸ್ವರ್ಗದ ಬಗೆಗೂ ನುಡಿದ. ತಾನು ಬ್ರಾಹ್ಮಣನಾದುದರಿಂದ ಸ್ವರ್ಗದ ಹಾದಿ ತಾನು ಹೇಳಿದಂತೆ ಇದೆ ಎಂಬ ಭಾವ ಅವನದಾಗಿತ್ತು.

ವೇಮನ ಮನೆಯ ಮಹಡಿಯ ಮೇಲೆ ಮೃದಂಗ ಬಾರಿಸುತ್ತ, ಕುಳಿತ ಸೋದರತ್ತೆ ಮಲ್ಲಾಂಬೆಯ ಬಳಿ ಬಂದ.

"ಕಮಲಾಕುಚ ಚೂಚುಕ ಕುಂಕುಮತೊ,
ನಿಯತಾರುಣಿ ತಾತುಲ ನೀಲ ತನೋ!
ಕಮಲಾಯತ ಲೋಚನ ಲೋಕ ಪತೇ,
ವಿಜಯೀ ಭವ ವೆಂಕಟ ಶೈಲಪತೇ!!

ಎಂದು, ತಿರುಪತಿಯ ವೆಂಕಟಪತಿಯ ಸ್ತೋತ್ರಗೈಯ್ಯುತ್ತಿದ್ದಳು ಮಲ್ಲಾಂಬೆ. ವೇಮನ ಮಲ್ಲಾಂಬೆಯ ಮಗ್ಗುಲಿಗೆ ಸರಿದು ಕುಳಿತ. ಸ್ತೋತ್ರ ಮುಗಿಸಿ, ಮಲ್ಲಾಂಬೆ ವೇಮನನ್ನು ಮುದ್ದಿಸಿದಳು.

"ಮಗೂ ನೀನೂ ಸ್ತೋತ್ರ ಕಲಿಯಬೇಕಪ್ಪಾ"

" ಅತ್ತೆ, ಮೊದಲು ನನಗೆ ಗಾಯತ್ರಿ ಮಂತ್ರ ಕಲಿಯುವ ಆಶೆ. ನನ್ನ ಗೆಳೆಯ ವಾಸು ಅದನ್ನು ಅನ್ನುವನಂತೆ. "

"ಅದು ದ್ವಿಜರ ಧರ್ಮ. ನಾವು ನಮ್ಮ ಧರ್ಮ ಪಾಲಿಸಬೇಕಪ್ಪಾ"

"ಹಾಗಾದರೆ, ನಮ್ಮ ಧರ್ಮ ಕಾರ್ಯಗಳಲ್ಲಿ ಬ್ರಾಹ್ಮಣರೇಕೆ ಬರುತ್ತಾರತ್ತೆ?"

"..... ವಾದಿಸಬಾರದು ಮಗೂ. ಹಿರಿಯರು ಹೇಳಿದಂತೆ ನಡೆಯಬೇಕು. ಮೊದಲು ಗುರುಗಳಲ್ಲಿ ಪಾಠ ಕಲಿ. ಅನಂತರ ಮಂತ್ರದ ವಿಚಾರ ಮಾಡುವಿಯಂತೆ."

" ಗುರುಗಳೆಲ್ಲಿ ಅತ್ತೆ ? "

" ಇವ್ವಟೂರಿನಲ್ಲಿ "

" ಅವರ ಹೆಸರು ? "

" ಸೋಮಶೇಖರ ಗುರುಗಳು. "

" ಯಾವಾಗ ಹೋಗುವುದು. ? "

" ಬೇಗನೆ. "

ವೇಮನ ಅಲ್ಲಿಂದ ಟಣ್ಣನೆ ಹಾರಿ, ಮೆಟ್ಟಲಿಳಿದು ಕೆಳಗೆ ಬಂದ. ಅನತಲ್ಲಿ'ಗೆ ಮೊದಲು ಹೇಳಿದ. ಅನಂತರ ಓರಿಗೆಯ ಹುಡುಗರಿಗೆ ಹೇಳಲು ಹೊರಟ.

ಮಲ್ಲಾಂಬೆ ವೇಮನನನ್ನು ತನ್ನ ಹೊಟ್ಟೆಯ ಮಗನಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಅವನು ತನ್ನ ಒಡಹುಟ್ಟಿದ ಅಣ್ಣನ ಮಗನೇ ಆಗಿದ್ದ. ಮೇಲಾಗಿ ಹುಟ್ಟದ ಗಂಡು ಮಗನನ್ನು ಕಸಿದುಕೊಂಡ ದೈವ, ವೇಮನನನ್ನೇ ಆ ಸ್ಥಾನ ತುಂಬಲು ಕಳಿಸಿದಂತಿತ್ತು.

ಮಲ್ಲಾಂಬೆ ವೀರಭದ್ರಾರೆಡ್ಡಿಯನ್ನು ಕರೆಕಳುಹಿ ವೇಮನನ ವಿದ್ಯಾಭ್ಯಾಸ ಕುರಿತು ವ್ಯವಸ್ಥೆ ಮಾಡಲು ಹೇಳಿದಳು. ವೀರಭದ್ರಾರೆಡ್ಡಿ ರಾಜಕಾರ್ಯಗಳನ್ನು ಬದಿಗಿರಿಸಿ, ವೇಮನನನ್ನು ಕರೆದುಕೊಂಡು ಸೋಮಶೇಖರ ಗುರುಗಳಲ್ಲಿ ವಿದ್ಯಾಭ್ಯಾಸಕ್ಕೆ ಸೇರಿಸಿಬಂದ.

ವಿದ್ಯಾಭ್ಯಾಸ

ಪಾಠಶಾಲೆಯಲ್ಲಿ ವೇಮನ ಬಂದಾಗ ಹಲವರು ಹಣೆಗೆ ಅಡ್ಡನಾಮ ಹಚ್ಚಿದ್ದರು. ಕೆಲವರು ಉದ್ದ ತ್ರಿಪುಂಡ್ರ ಬಳಿದಿದ್ದರು. ಇನ್ನು ಕೆಲವರು ಅಡ್ಡ ವಿಭೂತಿ ಲೇಪಿಸಿದ್ದರು. ಇನ್ನು ಕೆಲವರ ಕೊರಳಲ್ಲಿ ದಾರವಿತ್ತು. ಕೆಲವರ ಕೊರಳಲ್ಲಿ ಲಿಂಗವಿತ್ತು. ಕೆಲವರ ಕೊರಳಲ್ಲಿ ದೇವತಾ ವಿಗ್ರಹದ ತಾಮ್ರದ ಪ್ರತಿಮೆಯಿತ್ತು. ವೇಮನನ ಹಣೆ ಬೋಳಾಗಿ ಉಳಿದವರಿಗೆ ಕಂಡಿತು. ಅವನ ಕೊರಳು ಭಣ ಭಣ ಎನ್ನಿಸಿತು. ಎಲ್ಲರೂ ಅವನನ್ನೇ ದಿಟ್ಟಿಸಿದರು. ಅವನು ಎಲ್ಲರನ್ನೂ ದಿಟ್ಟಿಸಿದ. ತನ್ನ ಹಣೆಯು ನಿರ್ಮಲವಾಗಿದೆ. ತನ್ನ ಎದೆ ಭಾರವಾಗಿಲ್ಲ, ಎಂಬ ಭಾವ ತಾಳಿ ಗಂಭೀರನಾಗಿದ್ದ.

ಗುರು ಸೋಮಶೇಖರರು ಬಂದರು. ಹುಡುಗರೆಲ್ಲ ಅತ್ತ ತಿರುಗಿದರು, ಎದ್ದು ನಮಸ್ಕರಿಸಿದರು.

" ಗುರುರ್ಬ್ರಹ್ಮ ಗುರುರ್ವಿಷ್ಣು,
ಗುರುರ್ದೇವೋ ಮಹೇಶ್ವರಃ
ಗುರುಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ

ಎಂದು ಗುರುಸ್ತೋತ್ರ ಪಠಿಸಿದರು. ಬೊಮ್ಮರ ಪೋತೆನ್ನ ಮೊದಲು ನುಡಿಯುತ್ತಿದ್ದ. ಉಳಿದವರು ಹಿಂದಿನಿಂದ ಪಠಿಸುತ್ತಿದ್ದರು. ಸರಸ್ವತಿಸ್ತೋತ್ರವೂ ಆಯಿತು.

ಓಂ"

ಇದು ಮೂಲ ಬೀಜಾಕ್ಷರ ವೇದದಲ್ಲಿಯ ಪವಿತ್ರ ಶಬ್ದ,

" ಏತದ್ಧೇವಾಕ್ಷರಂ ಬ್ರಹ್ಮ,
ಏತದ್ಧೇವಾಕ್ಷರಂ ಪರಮ್ ॥
ಏತದ್ಧೇವಾಕ್ಷರಂ ಜ್ಞಾತ್ವಾ,
ಯೋ ಯದಿಚ್ಛತಿ ತಸ್ಯ ತತ್॥

'ಓಂ" ಅಕ್ಷರವೇ ಬ್ರಹ್ಮ. ಅದುವೇ ಪರಮ ಧ್ಯೇಯ. ಓಂ ಅಕ್ಷರವನ್ನು ತಿಳಿದು, ತಮ್ಮ ತಮ್ಮ ಇಚ್ಛೆಗಳನ್ನೆಲ್ಲ ತೃಪ್ತಿಗೊಳಿಸಿಕೊಳ್ಳಬಹುದು, ಎಂದು ಶ್ರುತಿ ಹೇಳುತ್ತಿದೆ." ಎಂದು ಸೋಮಶೇಖರ ಗುರುಗಳು ಪಾಠ-ಪ್ರವಚನ ಪ್ರಾರಂಭಿಸಿದರು. ಹುಡುಗರೆಲ್ಲ ಮಂತ್ರ ಮುಗ್ಧರಾಗಿ ಕುಳಿತಿದ್ದರು. ವೇಮನ ಎದ್ದು ನಿಂತ. ಗುರುಗಳು ಅವನನ್ನೆ ದಿಟ್ಟಿಸಿದರು.

ವಿದ್ಯೆಯನ್ನು ಗಾಯತ್ರೀ ಮಂತ್ರದಿಂದ ಪ್ರಾರಂಭಿಸಬೇಕೆಂದು ನಮ್ಮೂರ ಆಚಾರಿ ಹೇಳುತಿದ್ದ ಗುರುಗಳೇ. ಇಲ್ಲಿ 'ಓಂ" ಪ್ರಾರಂಭಿಸಿದಿರಿ. 'ಗಾಯತ್ರಿ" ಹೇಳಿ ಕೊಡುವದಿಲ್ಲವೇ ? " ವೇಮನ ತನ್ನ ಮನಸ್ಸಿನ ಕಾತರ ಹಿಂಗಿಸಿಕೊಳ್ಳಲು ತಕ್ಕ ಸಮಯವೆಂದು ಕೇಳಿದ. 'ವಸಂತ ರಾಜೀಯಂ" ಸಂಸ್ಕೃತ ನಾಟ್ಯ ಶಾಸ್ತ್ರ ಬರೆದ, ಮಡಿದ ಅರಸು ಕೊಮರುಗಿರಿ ರೆಡ್ಡಿಯ ಮಗನನ್ನೆ ಸಂಸ್ಕಾರಬಲ ಗುರುತಿಸಿದರು, ಗುರುಗಳು. ಅವನ ಬಳಿಗೆ ಬಂದು ಬೆನ್ನು ತಟ್ಟಿ,

" ಗಾಯತ್ರಿ ವೇದ ಮಂತ್ರಗಳ ಛಂದಸ್ಸುಗಳಲ್ಲೊಂದು. ಈ ಛಂದಸ್ಸಿನಲ್ಲಿ ವಿಶ್ವಾಮಿತ್ರ ವಿರಚಿತ ಮಂತ್ರಗಳಲ್ಲಿ ಒಂದು ಮಂತ್ರ " ಈ ವಿಶ್ವವನ್ನು ಸೃಷ್ಟಿಸಿದಾತನ ಮಹಿಮೆಯನ್ನು ಕುರಿತು ನಾವು ಧ್ಯಾನಿಸುತ್ತೇವೆ. ಆತನು ನಮ್ಮ ಬುದ್ಧಿಯನ್ನು ಪ್ರಚೋದಿಸಲಿ " ಎಂದು ಅರ್ಥ. ಈ ಮೊದಲು ಮತ್ತು ಕೊನೆಯಲ್ಲೆ ಓಂ ಉಂಟು ಮತ್ತೆ?" ಎಂದು ತಮ್ಮ ಪಾಠಕ್ಕೆ ತಿರುಗಿದರು.

" ..... " ವೇಮನ ಎದ್ದೇ ನಿಂತಿದ್ದ.

" ಮಂತ್ರ ಕೇಳುವ ಆಶೆಯೇ ? " ತಲೆದೂಗಿ ಕುಳಿತುಕೊಂಡ ವೇಮನ.

ಚಿಕ್ಕಮಕ್ಕಳಲ್ಲಿಯೂ ಪರಿಶ್ಚಿತಿ ಎಂಥ ಗಡುಚಾದ ವಿಷಯದ ಬಗ್ಗೆ ತವಕ ಹುಟ್ಟಿಸುವುದೆಂಬುದನ್ನು ಗುರುಗಳು ಸ್ಮರಿಸಿದರು.

" ಇಂಥ ಜಿಜ್ಞಾಸೆ ಬೆಳೆಯಬೇಕು, ಎಲ್ಲರಲ್ಲಿ. ಗಾಯತ್ರಿ ಮಂತ್ರ ಕೇಳಿ :

ಓಂ ಭೂರ್ಭುವಸ್ವಹ,
ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀ ಮಹಿ॥
ಧಿಯೋ ಯೋ ನಃ ಪ್ರಚೋದಯಾತ್॥

ಓಂ

ಋಗ್ವೇದದ ತೃತೀಯ ಮಂಡಲದ ಅರುವತ್ತೆರಡನೇ ಸೂತ್ರದ ಹತ್ತನೇ ಮಂತ್ರ ಭಾಗವಿದು. ತುಂಬಾ ಪವಿತ್ರವೆಂದು ಗಣಿಸಲ್ಪಟ್ಟಿವೆ. ಅವುಗಳ ಕಲ್ಯಾಣಮಯೀ ಅರ್ಥವೇ ಅವುಗಳ ಮೇಲ್ಮೆ. ಬುದ್ಧಿ ಕೊಡಲು ವಿಶ್ವಕರ್ಮನಲ್ಲಿ ಮೊರೆಯಿಡಬೇಕು. ಭಕ್ತಿಯಿಂದ ನಿತ್ಯ ಪಠಿಸಿದರೆ, ಮಂತ್ರದಿಂದ ಇಚ್ಛಿತ ಆಶೆ ಸಿದ್ಧಿಸುವುದು. ಇಲ್ಲವಾದರೆ..... "

" ಕಾಗೆ ಕಾವ್ ಕಾವ್ ಎಂದಂತೆ " ಎಂದು ಹುಡುಗರ ಮಧ್ಯೆ ಧ್ವನಿಯೊಂದು ಕೇಳಿಬಂತು. ಸೋಮಶೇಖರರು ಅಲ್ಲಿಗೇ ಪಾಠ ನಿಲ್ಲಿಸಿ, ಬಾಲಕರನ್ನು ಆಶೀರ್ವದಿಸಿ ಹೊರಟರು.

ವೇಮನ ಸುಂದರಾಂಗ. ರಾಜವಂಶೀಯ. ಯಾವ ಬಾಹ್ಯ ಸಂಕೇತಗಳು ಇಲ್ಲದವ. ಮಾತುಮಾತಿಗೂ ವಿಷಯ-ವಿಮರ್ಶಕ ಬುದ್ಧಿಯವ. ಹುಡುಗರು ತಮಗಿಂತ ಬೇರೆಯಾಗಿರುವವನೊಂದಿಗೆ ಕೂಡಿರಬೇಕಾದುದಕ್ಕೆ ಆತಂಕ ಅನುಭವಿಸಲಿಲ್ಲ. ಪ್ರತಿಯಾಗಿ ಪರಸ್ಪರ ಅರಿತುಕೊಳ್ಳಲು ಕುತೂಹಲ ತೋರಿದರು. ಪೂರ್ವದೂಷಿತ ಭಾವವಿಲ್ಲದಿದ್ದರೆ ಸಮಾಜವೂ ಬಾಲಕರ ಶುದ್ಧ ಭಾವದಿಂದ ಒಳಿತು ಆರಿಸಿಕೊಳ್ಳಬಹುದೇನೋ? ವಿದ್ಯಾರ್ಥಿಗಳ ಪೈಕಿ ಜಾಣನೆನಿಸಿದ್ದ ಬೊಮ್ಮರ ಪೊತೆನ್ನ ವೇಮನೊಂದಿಗೆ ಹೊಸ ಗೆಳೆತನ ಮಾಡಿದ.

ಪೊತೆನ್ನ ಭಾಗವತ ಸಂಪ್ರದಾಯದ ಹುಡುಗ; ಚತುರ. ಓದುಗುಳಿ. ಸ್ನಾನ-ಸಂಧ್ಯೆ ಪೂಜಾದಿಗಳಲ್ಲಿ ವೇಳೆ ಕಳೆಯುತ್ತಿದ್ದ. ಉಳಿದ ಬ್ರಾಹ್ಮಣ ಹುಡುಗರೂ ಇದೇ ರೀತಿ. ಸ್ನಾನ ಮಾಡಿ ಮರಳುವಾಗ ಅವರಿಗೆ ತಮ್ಮ ಮಡಿವಂತಿಕೆ ಉಳಿಸಿಕೊಳ್ಳುವ ಚಿಂತೆ. ಯಾವ ನಾಯಿಯ ನೆರಳು ತಮ್ಮ ಮೇಲೆ ಬಿದ್ದೀತೋ? ಎಂಬ ಚಿಂತೆ. ಶೂದ್ರರಾದರೂ ಮುಟ್ಟಿದರೇನು ಗತಿ? ಎಂಬ ಚಿಂತೆ. ಅಸ್ಪೃಶ್ಯರ ನೆರಳು ಬಿದ್ದರೇನು ಮಾಡುವುದು? ಎಂಬ ಚಿಂತೆ. ' ಮಡಿ ಇರುವಾಗ ' ಮುಟ್ಟಬಾರದ ಈ ಜನರು-ಪ್ರಾಣಿಗಳಲ್ಲಿ ಹೊಲೆತನ ಕಂಡುಕೊಂಡಿದ್ದರು. ವಿಶ್ವವನ್ನು ಸೃಷ್ಟಿಸಿದಾತನೇ ನಮ್ಮಲ್ಲಿ ವಿದ್ಯೆಯನ್ನು ಪ್ರಚೋದಿಸಲಿ" ಎಂದು ಮಂತ್ರ ಪಠಿಸುವ ಬ್ರಾಹ್ಮಣವಟುಗಳು ತಮ್ಮ ಮನಸ್ಸು ಪವಿತ್ರ ಉಳಿಯಲಿ ಎಂದು ಮಲ ಬಿದ್ದ ಕಡೆಯಿಂದ, "ಹೊಲೆ" ಇದ್ದ ಎಡೆಯಿಂದ ಹಾರಿ, ಅದರ ಸ್ಪರ್ಶದಿಂದ ತಪ್ಪಿಕೊಳ್ಳುತ್ತಿದ್ದದ್ದು. ಅವರು ' ಹಾರುವ ' ರಾಗಿದ್ದರು. ' ಹಾರುವ ' ಮನುಷ್ಯರಿಗೆ ' ಹನುಮಂತನ ಭಕ್ತಿಮಾರ್ಗ ' ಆದರ್ಶವೆನಿಸಿತ್ತು. ' ಮನವೆಂಬ ಮರ್ಕಟ ತಡೆಯಲಾರದೆ " ತಾವೇ ಮಂಗದಂತೆ ಜಿಗಿದಾಡಬೇಕಿತ್ತು. ವೇಮನ ಇದೆಲ್ಲವನ್ನು ನೋಡುತ್ತಿದ್ದ. ಊರಿನಲ್ಲಿ ಅಷ್ಟೊಂದು ಆಳವಾಗಿ ವಿಚಾರಿಸುವಗೊಡವೆಗೆ ಹೋಗಿರೆಲಿಲ್ಲ. ಮನಸ್ಸು ಶುದ್ಧವಿಡಲು ಮಂಗನ ಹಾರಾಟವೇಕೆ ? ಎಂದು ಈಗ ಚಿಂತಿಸುತ್ತಿದ್ದ. ಉತ್ತರ ಪಡೆಯುವಷ್ಟು ಬುದ್ಧಿ ಅನುಭವ ಬಲಿಯಬೇಕಿತ್ತು. ಮನಸ್ಸಿನಲ್ಲಿ ಎಂದೋ ಒಮ್ಮೆ ಹೊಳೆದ ವಿಚಾರ ಪರಿಶ್ಚಿತಿಯ ಒತ್ತಡದಿಂದ ಅದುಮುಲ್ಪಟ್ಟು, ಮುಂದೊಮ್ಮೆ ಅಭಿವ್ಯಕ್ತಿ ಪಡೆಯುವವು. ವಿದ್ಯಾರ್ಥಿ ವೇಮನನ ವಿಚಾರ ಅವನ ಮನಸ್ಸಿನ ಆಳದಲ್ಲುಳಿದುವು; ಮಳೆಯ ನೀರು ಭೂತಳಕ್ಕಿಳಿದು, ಮತ್ತೆ ಮೇಲೆ ಬರಲು ಬಾವಿ-ಹೊಂಡಗಳನ್ನು ಹುಡುಕಲು ಕಾಯ್ದುನಿಂತ ಝರಿಯಂತೆ.

ವೇಮನ, ಸೋಮಶೇಖರ ಗುರುಗಳ ಅದ್ಭುತ ಪಾಠ ಕ್ರಮದ ಫಲವಾಗಿ, 'ಕಾಗುಣಿತ ಓದಿ' ನಿಂದ ಬಹುದೂರ ಕ್ರಮಿಸಿದ್ದ. ಈ ಮಧ್ಯೆ ಒಂದೆರಡು ಸಲ ಊರಿಗೆ ಹೋಗಿ ಬಂದಿದ್ದರೂ ಕಾಗುಣಿತ ದಾಟಿದ ಓದಿಗಾಗಿ ತವಕ ಹೆಚ್ಚಾಗಿ, ಬೇಗ ವಾಪಸಾಗಿದ್ದ. ಚಿಕ್ಕ ಹುಡುಗನಿಗೆ ಮೀರಿದ ಬುದ್ಧಿ ಎನ್ನುತ್ತಿದ್ದರು, ಗುರುಗಳು.

ಮೂರು ವರುಷ ಕಾಲ ಉರುಳಿತು. ಅಲ್ಲಾಡ ರೆಡ್ಡಿಯ ಹಿರಿಯಮಗ ವೇಮಾರೆಡ್ಡಿ ತನ್ನ ತಂದೆಯ ನಿಧನಾನಂತರ ಕಳೆದು ಹೋದ ರಾಜ್ಯವನ್ನು ೧೪೩೩ ರಲ್ಲಿ ಮರಳಿ ಪಡೆದನು. ವೇಮಾರೆಡ್ಡಿ ಆದರ್ಶ ವ್ಯಕ್ತಿ. ತನ್ನ ತಮ್ಮ ವೀರಭದ್ರಾರೆಡ್ಡಿಯನ್ನೇ ಪಟ್ಟಕ್ಕೆ ಕುಳ್ಳಿರಿಸಿ ತಾನು ಮಾರ್ಗದರ್ಶಕನಾಗಿ ನಿಂತ. ವೀರಭದ್ರರೆಡ್ಡಿ ರಾಜಮಹೇಂದ್ರ ರಾಜ್ಯ ಸಂಸ್ಥಾಪಕ ಕಾಟಯ ವೇಮಾರೆಡ್ಡಿ ಮಲ್ಲಾಂಬೆಯ ಪುತ್ರಿ ಅನಿತಲ್ಲಿಯನ್ನು ಮದುವೆ ಮಾಡಿಕೊಂಡು, ಹಿರಿಯರ ಋಣ ತೀರಿಸಿದನು. ವಿದ್ಯಾಪೀಠದಿಂದ ವೇಮನ ರಾಜಮಹೇಂದ್ರಕ್ಕೆ ಬಂದು, ಈ ಆನಂದಾವಸರದಲ್ಲಿ ಸೇರಿ, ಅನತಲ್ಲಿ ವೀರಭದ್ರಾರೆಡ್ಡಿಯವರ ನಡುವೆ ಕೊಂಡೆಯಾಗಿ ವರ್ತಿಸಿದನು. ಗುರುಪೀಠದಲ್ಲಿ ಕಲಿತ ಸತಿಪತಿಯರ ಕರ್ತವ್ಯಪರ ಪದ್ಯಗಳನ್ನು ವೇಮನ ಹೇಳಿದಾಗ, ನೂತನ ದಂಪತಿಗಳು ಕೇಳಿ, ಅರ್ನಿವಚನೀಯ ಆನಂದ ಅನುಭವಿಸುತ್ತಿದ್ದರು. ವೇಮನ ಆಗ ಇನ್ನೂ ಹನ್ನೊಂದು ವರ್ಷದ ಬಾಲಕ. ನೂತನ ರಾಜ ದಂಪತಿಗಳನ್ನು ಆಶೀರ್ವದಿಸಲು ಬಂದು ಸೋಮಶೇಖರ ಗುರುಗಳೊಂದಿಗೆ ವೇಮನ ಗುರು ಪೀಠಕ್ಕೆ ಮರಳಿದ.

ಅಕ್ಷರ-ಜ್ಞಾನ, ವಾಚನ, ಪಾಠಗಳಷ್ಟೇ ಶಿಕ್ಷಣವಲ್ಲವೆಂದು ಸೋಮಗುರುಗಳ ಮತ. ಆ ಕಾಲದ ಇತರ ಗುರುಪೀಠಗಳಂತೆ ವಿದ್ಯಾರ್ಥಿಗಳ ಶೀಲ ಸಂಸ್ಕೃತಿ ವಿಕಾಸ ಸಾಧಿಸುವ ವಿದ್ಯೆಯ ಮಹತ್ತ್ವ ಬೋಧಿಸುತ್ತಿದ್ದರು. ಎಲ್ಲಕ್ಕೂ ಹೆಚ್ಚಾಗಿ ದೈವಿಕ ಅರಿವು ಮೂಡಿಸಿ, ಮುಕ್ತಿ ಮಾರ್ಗ ಅರಿಸಲು ಅಣಿಗೊಳಿಸುವುದೇ ನಿಜವಾದ ಗುರುವಿನ ಕಾರ್ಯ. 'ಕಾಗುಣಿತ ಬೋಧಿಸುವವನು ಗುರುವಲ್ಲ. ಮುಕ್ತಿ ಮಾರ್ಗ ತೋರುವವ ಗುರು' ಎನ್ನುವ ಭಾವ ಹುಟ್ಟಿಸುತ್ತಿದ್ದರು. ಅವರು "ಭವಡೂರರು, ಶರಭಾಂಕರು; ಶಿವಶೀಲರು ; ಸಿದ್ಧೇಶ್ವರರು; ಶಿವಭೃತ್ಯರು; ಶಿವಮಯರು; ಚಿನ್ಮಯರು."

ಸೋಮನಾಥ ಗುರುಗಳು "ಪರಮ ಭದ್ರಾಸನರು, ಯೋಗೀಂದ್ರರು. ಆರಾಧ್ಯ ಚಂದ್ರರು."

ಸೋಮಗುರುಗಳ ದೃಷ್ಟಿ ವಿಶಾಲ. ತತ್ಪೂರ್ವದ ಬೌದ್ಧ ವಿದ್ಯಾಪೀಠಗಳ ಸಂಪ್ರದಾಯದಂತೆ ಸರ್ವ ಶಾಸ್ತ್ರ ಶಾಖೆಯವರನ್ನು ತರಬೇತುಗೊಳಿಸುತ್ತಿದ್ದರು. ಒಂದು ದಿನ ಒಂದೇ ಸತ್ಯವನ್ನು ಹಲವರು ಹಲಬಗೆಯಾಗಿ ತಿಳಿಯುವುದನ್ನು ವಿವರಿಸುತ್ತಿದ್ದರು.

"ಗುರುಗಳೇ ದೇವರು ಒಬ್ಬನಾದರೆ, ಹತ್ತಾರು ಹೆಸರು, ಹತ್ತಾರು ರೂಪವೇಕೆ. ? " ಎಂದು ಕೇಳಿದ ವೇಮನ, ಬಹುದಿನದ ಶಂಕೆಯನ್ನು ಹೊರಹೊಮ್ಮಿಸಿದ.

"ಒಳ್ಳೆಯ ಪ್ರಶ್ನೆ, 'ದೇವರು ಒಬ್ಬ' ಎಂದರೆ 'ಸತ್ಯವೊಂದೇ' ಎಂದಂತೆ. ಸತ್ಯವೇ ಬ್ರಹ್ಮ. 'ಸಚ್ಚಿದಾನಂದ' ಸ್ಥಿತಿ. ಶಿವ ಸ್ಥಿತಿ. ಮನಸ್ಸು ಹಿಗ್ಗಿ ಹಿಗ್ಗಿ ಅಂದರೆ ಸೂಕ್ಷ್ಮವಾಗಿ, ಈ ಆನಂದ ಅನುಭವಿಸುವುದೇ ಶಿವಾನುಭವ. "ಇಲ್ಲಿ ಹೆಸರು ಇಲ್ಲ. ರೂಪವಿಲ್ಲ. ಕ್ರಿಯೆಯೂ ಇಲ್ಲ" ಎಂದು ಕಣ್ಣು ಮುಚ್ಚಿದರು ಗುರುಗಳು.

"ರಾಮ, ಶಿವ, ನಾರಾಯಣ ಮಾಧವ ಎನ್ನುವ ನಾಮ.....?" ವೇಮನ ಇನ್ನೂ ಮುಗಿಸಿರಲಿಲ್ಲ. ಗುರುಗಳು ಗ್ರಹಿಸಿದರು.

"ರಾವಣ ಮರಣ ರಾಮ.

ಶಿವ ಎಂದರೆ ಕಲ್ಯಾಣ; ಆನಂದ.

ನರ ಎಂದರೆ ಭಕ್ತಿ. ಅಯನ ಅಂದರೆ ಆಶ್ರಯ. ಭಕ್ತಿಯಿಂದ ಆಶ್ರಯ ದಾತನೇ ನಾರಾಯಣ.

ಮಾ ಎಂದರೆ ಮಾತೆ, ಸೃಷ್ಟಿ, ಪ್ರಕೃತಿ. ಧವಾ ಎಂದರೆ ಗಂಡ. ನಿಯಂತ್ರಕ. ಇವನೇ ಮಾಧವ.

" ಅವೇ ಸತ್ಯದ ವಿವಿಧ ಬಣ್ಣನೆಯಷ್ಟೇ "

ಎಂದು ಸೋಮಶೇಖರಗುರುಗಳು ನುಡಿದೊಡನೆ, ವೇಮನನ ಶಂಕೆಯ ಮೋಡ ಕರಗಿ ಜ್ಞಾನದ ಸೋನೆ ಸುರಿಯಿತು. ಭಕ್ತಿತುಂದಿಲನಾಗಿ ಗುರುಗಳಿಗೆ ದೀರ್ಘದಂಡ ಪ್ರಣಾಮ ಮಾಡಿದ. ಎಲ್ಲರೂ ಇವನ ವಿಕಾಗ್ರತೆಯನ್ನು ಬೆಕ್ಕಸ ಬೆರಗಾಗಿ ನೋಡಿದರು. ಸ್ವಾತಿಯ ಮಳೆ ಬೀಳುತ್ತಿರುತ್ತದೆ. ಸ್ವಾತಿ ಮಳೆಯ ಹನಿಗಾಗಿ ಕಪ್ಪೆ ತನ್ನ ಚಿಪ್ಪು ತೆಗೆದುಕೊಂಡು ಕುಳಿತಿರುತ್ತದೆ. ಆದರೆ ಯಾವುದೋ ಒಂದು ಕಾಲಕ್ಕೆ ಹನಿ ಬಿದ್ದೊಡನೆ ಚಿಪ್ಪು ಮುಚ್ಚಿಕೊಂಡು ಸಮುದ್ರದಾಳಕ್ಕೆ ಹೋಗುತ್ತದೆ. ಚಿಪ್ಪಿನಲ್ಲಿ ಬಿದ್ದ ಹನಿ ಮುತ್ತಾಗುವುದು. ಗುರುಬೋಧೆಯ ಸೋನೆಗಾಗಿ ವಿದ್ಯಾರ್ಥಿ ತೆರೆದ ಹೃದಯಿಯಾಗಿ ನಿಲ್ಲುತ್ತಾನೆ. ಹಲವಾರು ಸುವಿಚಾರಗಳನ್ನು ಕೇಳಿ, ಒಂದೊಂದು ಸಲ ಭಾವಪೂರಿತನಾಗುತ್ತಾನೆ. ಮನಸ್ಸೂ ಪರಿಶುದ್ಧವಾಗುತ್ತದೆ. ಶಿಷ್ಯ ಇಂಥ ಅನುಭವಹೊಂದಿ ಶಿಷ್ಯೋತ್ತಮನಾಗುತ್ತಾನೆ. ಕೀಟ ಪತಂಗ ನೋಡಿ ನೋಡಿ, ಪತಂಗವೇ ಆಗುವಂತೆ, ಶಿಷ್ಯ ಗುರುವಿನಿಂದ ಕಲಿತು ಗುರುವೇ ಆಗುತ್ತಾನೆ. ಸೋಮಗುರುಗಳು ವೇಮನನಲ್ಲಿ ಅಂಥ ಕೀಟದಂಶ ಕಂಡರು. ವೇಮನ ಸೋಮಗುರುಗಳಲ್ಲಿ ಅಂಥ ಪತಂಗ ಗುರುತಿಸಿಕೊಂಡ.

ಅಂದಿನಿಂದ ವೇಮನ ಸಾಮಾನ್ಯ ವಿದ್ಯಾರ್ಥಿಯೆನಿಸಲಿಲ್ಲ. ಪಾಠ-ಪ್ರವಚನಗಳಲ್ಲಿ ಅಸಮನೆನಿಸಿದ ಬೊಮ್ಮೆರ ವೋತೆನ್ನ ಸಹ, ದೀರ್ಘ ಚಿಂತನ ವಿಷಯ–ವಿವೇಚನೆಯ ಬಗ್ಗೆ ವೇಮನನ ಮೇಲ್ಮೆಗೆ ಶರಣುಹೋದ.

ವಿದ್ಯಾರ್ಥಿಗಳ ಮನಸ್ಸು ಹದಕ್ಕೆ ಬಂದುದನ್ನು ಗುರುತಿಸಿದ ಗುರುಗಳು ವೇದೋಪನಿಷತ್ತುಗಳ ಬಗ್ಗೆ ತಿಳಿಸತೊಡಗಿದ್ದರು. ಹಲವಾರು ಪ್ರವಚನಗಳು ವಿಷಯಾಭಿರುಚಿ

ಹುಟ್ಟಿಸಿದ್ದವು. ವಿದ್ಯಾರ್ಥಿಗಳು ಪ್ರಬುದ್ಧ ವಯಸ್ಕರಾಗಿದ್ದರು. ಒಂದು ದಿನ ವಿದ್ಯಾಪೀಠದ ಬಳಿಯ ಹೂದೋಟದಲ್ಲಿ ವಿದ್ಯಾರ್ಥಿಗಳು ಹರಟುತ್ತ ಕುಳಿತರು. ಚರ್ಚೆ ಪಠ್ಯವಿಷಯವತ್ತ ತಿರುಗಿತು.

" ವೇದಗಳನ್ನು ಬರೆದವರು ಯಾರೋ ಮಹಾತ್ಮರು ? ಅರ್ಥ ಮಾಡುವುದೇ ಕಠಿಣ " ಎಂದನೊಬ್ಬ.

" ವೇದ ಅಪೌರುಷೇಯ. ದ್ರಷ್ಟಾರರು ಅವನನ್ನು ದಿವ್ಯದರ್ಶನದಿಂದ ಕಂಡರಷ್ಟೇ " ಎಂದ ಭಾಗವತ ಸಂಪ್ರದಾಯದ ಬೊಮ್ಮೇರ ಪೋತೆನ ಭಕ್ತಿಯುತನಾಗಿ " ಹ್ ಹ್...." ವೇಮನ ನಕ್ಕುಬಿಟ್ಟ.

" ಏನೋ ನಿನ್ನ ಕುಚೇಷ್ಟೆ ? ಬೊಮ್ಮರ ಪೊತೆನ ಹುಬ್ಬು ಗಂಟಿಕ್ಕಿದ.

" ಅಲ್ಲ ಪೊತೆನ್ನ, ಸಿಟ್ಟೇಕೆ ? ವೈದಿಕ ಕಾಲದಲ್ಲಿ ಲಿಪಿಯೇ ಇರಲಿಲ್ಲ. ಲಿಪಿ ಇಲ್ಲದೆ ಬರೆಯುವುದೆಂತು ? ವೇದಗಳನ್ನು ಕಿವಿಯಿಂದ ಕಿವಿಗೆ ಮುಟ್ಟಿಸಬೇಕಾಯಿತು. ಅದು ' ಶ್ರುತಿ ' ಎನ್ನಿಸಿತು. ಕಂಡದ್ದು ಕಲ್ಪನೆ ಅಷ್ಟೇ. ರಚಿಸಿದವರು ಋಷಿಮುನಿಗಳು ಮಹಾ ಜಾಣರು. ಸಾಮಾನ್ಯರ ದೃಷ್ಟಿಯಲ್ಲಿ, ಈ ಋಷಿಮುನಿಗಳು ಅತಿ ಮಾನವರು. ಅವರು ಕಣ್ಣುಮುಚ್ಚಿ, ಬೇರೆ ಬೇರೆ ದೇವತೆಗಳ ಸಾಮೀಪ್ಯ ಹೊಂದಿ, ' ಮಂತ್ರ ' ಮೂಲ ನೋಡುತ್ತಿದ್ದರೆಂಬ ಗೃಹಿಕೆ ಅದರಿಂದ ಅವರಿಗೆ ದ್ರಷ್ಟಾರೆನ್ನುತ್ತಿದ್ದರು." ವೇಮನ ಇಷ್ಟು ಹೇಳಿ ಮುಗಿಸಿರಲಿಲ್ಲ; ಸೋಮನಾಥ ಗುರುಗಳೇ ಅಲ್ಲಿಗೆ ಬಂದು ಬಿಟ್ಟರು. ಮರದಾಚೆ ಬಂಡೆಯ ಮೇಲೆ ಕುಳಿತ ಗುರುಗಳು ಶಿಷ್ಯರಿಗೆ ಮೊದಲು ಕಾಣಲಿಲ್ಲವಾದರೂ, ಶಿಷ್ಯರ ಚರ್ಚೆಯನ್ನು ಗುರುಗಳು ಕೇಳಿದ್ದರು.

ಗುರುಗಳ ಆಗಮನ ನೆನೆದು ವೇಮನ ನಾಚಿಕೊಂಡ. ಇದುವರೆಗೆ ಗುರುಗಳಿಂದ ಕೇಳಿಕೊಂಡಿದ್ದನೇ ಹೊರತು, ಅವರೆದುರು ಏನನ್ನೂ ಹೇಳಿರಲಿಲ್ಲ. ತನ್ನ ಅಭಿಪ್ರಾಯದ ಬಗ್ಗೆ ಅವರೇನೆನ್ನುವರೋ ಎಂದು ತಲೆ ತಗ್ಗಿಸಿದ.

ಶಿಷ್ಯನ ಲಜ್ಜೆಯನ್ನು ಗುರುಗಳು ತಿಳಿದರು. " ಇಂಥ ಲಜ್ಜೆ ಎಲ್ಲರಲ್ಲಿ ಬರಲಿ. ಮುಂದಾಗುವ ರತ್ನವಪ್ಪಾ ನೀನು " ಎಂದು ಎದೆಗವಚಿಕೊಂಡರು.

ವೇಮನ ಹೇಳಿದುದು ಸರಿಯೆಂದು ಆಗ ಅವರೆಲ್ಲ ತಿಳಿದರು.

"ಗುರುಗಳೇ, ವೇದಗಳ ದ್ರಷ್ಟಾರರೆಂದು ವರ್ಣಿತರಾದ. ನಾರದ ಮಹರ್ಷಿ, ಅಗಸ್ತಿತ್ಯ ಮಗ ; ಅಗಸ್ತ್ಯ ಋಷಿ ಬೇಡರವ ; ಕಶ್ಯಪ ಋಷಿ ಕಮ್ಮಾರ ಎಂದು ಹೇಳುವರಲ್ಲವೇ ? ಇವರು ದ್ರಷ್ಟಾರರಾದುದೆಂತು ? ವೇದ ಓದಲೂ ಸಹ ಇವರ ವೃತ್ತಿಯವರಿಗೆ ಅಧಿಕಾರವಿಲ್ಲವಲ್ಲ ! " ಎಂದು ತನ್ನ ಬುದ್ಧಿಗೆ ತಾಕುತ್ತಿದ್ದ ಪ್ರಶ್ನೆಯನ್ನು ವ್ಯಕ್ತಪಡಿಸಿದ.

" ನದಿಯ ಮೂಲ ಋಷಿಯ ಮೂಲ ಶೋಧಿಸಬಾರದು " ಎಂದ ಬಳಿಯಲ್ಲಿ ಕುಳಿತ ಬೊಮ್ಮೇರ ಪೋತೆನ್ನ ವೇಮನನ ತೊಡೆ ಚಿವುಟುತ್ತ.

" ..... " ಗುರುಗಳು ಮೌನವಾಗಿದ್ದರು.

ವೇಮನ ಪೋತೆನ್ನನ ಮಾತಿನತ್ತ ಲಕ್ಷ್ಯವೀಯದೆ, ಗುರುಗಳನ್ನೇ ನಿರೀಕ್ಷಿಸತೊಡಗಿದ. ಸಾವಧಾನವಾಗಿ ಸಾವರಿಸಿಕೊಂಡು ಗುರುಗಳು ಮಾತಿಗಾರಂಭಿಸಿದರು.

" ಆರ್ಯರು ಮೂಲತಃ ಮಧ್ಯಏಶಿಯಾದ, ಸ್ಥಿರದ್ರೂಪಿ, ಸಂಚಾರಿ ಜನಾಂಗ. ಇಂಥ ಚರ್ಯೆಯಿಂದ ಸದಾಕಾಲ ಆಹಾರ ದೊರಕಿಸುವುದು ಕಷ್ಟಸಾಧ್ಯವೆನಿಸಿ, ಅವರು ದನ-ಕುರಿ ಸಾಕತೊಡಗಿದರು. ಅಲ್ಲಿಯ ಭೂಗುಣ ಮತ್ತು ಹವಾಮಾನ ದನಕರು ಸಾಕಣೆಗೆ ಅನನುಕೂಲವೆನಿಸಿತು. ಅನ್ನ-ಮೇವು ದೊರೆಯದಂಥ ಪರಿಸ್ಥಿತಿ ಇತ್ತು. ಆಹಾರ ಕೊರತೆ ನೀಗಿಸಿಕೊಳ್ಳಲು ಮತ್ತು ದನಕರು ಕಾಪಾಡಲು ' ಗೋಷ್ಠಿ ' ಗಳನ್ನು ಮಾಡಿಕೊಂಡರು. ದನ-ಸಂಖ್ಯೆ ಹೆಚ್ಚಿಸಿಕೊಳ್ಳಲು ಮತ್ತು ಆಹಾರ ದೊರಕಿಸಲು ಈ ಗೋಷ್ಠಿಗಳಲ್ಲಿ ಪರಸ್ಪರ ತಿಕ್ಕಾಟ ಪ್ರಾರಂಭವಾಯ್ತು. ಈ ತಿಕ್ಕಾಟ, ಹೋರಾಟಗಳಲ್ಲಿ ಮುಂದಾದ ಯೋಧರು ಕ್ಷತ್ರಿಯರೆನಿಸಿದರು. ಈ ಕ್ಷತ್ರಿಯ ಯೋಧರಿಗೆ ಅವಶ್ಯವೆನಿಸಿದ ಹೆಚ್ಚು ಒಳ್ಳೆಯ ವೈಜ್ಞಾನಿಕ ಸಲಕರಣೆಗಳನ್ನು ಪೂರೈಸುವ ಹಂಚಿಕೆಯನ್ನು ಬುದ್ಧಿವಂತರಾದವರು ಮಾಡಹತ್ತಿದರು. ಈ ಬುದ್ಧಿವಂತರು ಕ್ಷತ್ರಿಯರನ್ನು ತಮ್ಮ ಅಂಕಿತದಲ್ಲಿರಿಸಿಕೊಂಡರು. ಜನರಿಗೆ ದೈವಿಕ ಉಪದೇಶ ನೀಡುವಲ್ಲಿಯೂ ಈ ಬುದ್ಧಿವಂತರು ಮುಂದಾದರು. ಈ ಜನರಿಗೆ ಋಷಿ ಎಂದು ಕರೆಯತೊಡಗಿದರು. ಜನರ ತಂಡಗಳ ನಾಯಕರು ಈ ಬುದ್ಧಿವಂತರ ಮೇಲ್ಮೆಯನ್ನು ಒಪ್ಪಿಕೊಂಡುದಲ್ಲದೆ ಅವರು ಹಾಕಿಕೊಟ್ಟ ನೀತಿ-ನಿಯಮಗಳನ್ನು ಪಾಲಿಸತೊಡಗಿದರು. ಅವರ ವಿಚಾರಧಾರೆಯನ್ನು ಸಮಾಜ 'ಆರ್ಷಮತ' ಎಂದು ಮನ್ನಿಸಿತು. ಋಷಿಗಳು ತಮ್ಮವೃತ್ತಿಯಲ್ಲಿ ಇಲ್ಲವೆ ಬೇರೊಂದು ಸಂಶೋಧನ ಕಾರ್ಯದಲ್ಲಿ ಪ್ರಾವೀಣ್ಯತೆ, ಪಡೆದವರು. ಇಲ್ಲಿ ಕಮ್ಮಾರ ಕಶ್ಯಪ, ಬೇಡ ಅಗಸ್ತ್ಯ ಋಷಿಗಳಾಗಿ ಮನ್ನಣೆ ಹೊಂದಿದುದು; ಮತ್ತು ಮಂತ್ರಗಳ 'ದ್ರಷ್ಟಾ' ರೆನಿಸಿದ್ದು ತೀರ ಸಹಜ " ಎಂದರು ಗಂಭೀರವದನರಾಗಿ.

ವೇಮನ ಛಿನ್ನ-ಸಂಶಯನಾದ. ಪೋತೆನ್ನನ ಭ್ರಮನಿರಸನವಾಯಿತು.
" ಗುರುಗಳೇ, ಯಜ್ಞದಲ್ಲಿ ಪಶುಬಲಿ ಕೊಡುವುದರ ಮೂಲವೇನು? " ಎಂದು ಉಳಿದೊಂದು ಸಂಶಯವನ್ನು ಹೊರಗೆಡಹಿಬಿಟ್ಟ.

"ಸಕಾಲಿಕ ಪ್ರಶ್ನೆ. ವೇದಗಳು ಮಾನವಾತೀತ ಸೃಷ್ಟಿ ಎಂದು ನಂಬಿದ್ದರೂ, ಆ ಕಾಲದಲ್ಲಿ ದೈವಿಕ ಕಲ್ಪನೆ ಅಷ್ಟೊಂದು ಜಾಗೃತವಾಗಿರಲಿಲ್ಲ. ಅವರು ತಮ್ಮ ದಿನ-ನಿತ್ಯದ ಅವಶ್ಯಕತೆಗಳನ್ನು ಒದಗಿಸಲು ನಿಸರ್ಗ ಶಕ್ತಿಗಳನ್ನೇ ಪ್ರಾರ್ಥಿಸುತ್ತಿದ್ದರು. ವಿಜ್ಞಾನ ಬೆಳೆಯದ ಅಂದಿನ ಕಾಲದಲ್ಲಿ ಹೊಗೆ ಬೇರೆ ಮೋಡ ಬೇರೆ; ಎಂಬ ದೃಷ್ಟಿಯೇ ಇರಲಿಲ್ಲ. ಯಜ್ಞದ ಅಗ್ನಿಯಲ್ಲಿ ತುಪ್ಪ ಸುರುವಿ ಹೊಗೆ ಉಂಟು ಮಾಡುತ್ತಿದ್ದರು. ಮತ್ತು ಈ

ಹೊಗೆ ಮೇಲೆ ಹೋಗಿ ಮೋಡವಾಗಿ ಮಳೆಯಾಗುತ್ತದೆಂದು ನಂಬಿ, ವಿವಿಧ ದೇವತೆಗಳನ್ನು ಕುರಿತು ಪ್ರಾರ್ಥಿಸುತ್ತಿದ್ದರು. ಅವರ ದನಕರು ಮೇಯ್ದು ಸಂವೃದ್ಧಿಯಾಗಲು ಹುಲ್ಲುಗದ್ದೆ ಬೆಳೆಯಬೇಕಿತ್ತು. ಇದಕ್ಕೆಲ್ಲ ಮಳೆ ತೀರ ಅವಶ್ಯ. ಇದಕ್ಕಾಗಿ ಯಜ್ಞವಿಧಿಯಲ್ಲಿ ತಲ್ಲೀನರಾಗುತ್ತಿದ್ದರು. ಕೆಲ ದೇವತೆಗಳು ತುಪ್ಪದಿಂದ, ಇನ್ನು ಕೆಲವರು ಪಶುರಕ್ತದಿಂದ ಮತ್ತೆ ಹಲವರು ಮದ್ಯದಿಂದ ಸಂಪ್ರೀತರಾಗುವರೆಂದು ಅವರ ಗ್ರಹಿಕೆಯಾಗಿತ್ತು. ತಾನು ಯಾವುದರಿಂದ ತೃಪ್ತನೋ ಇತರರೂ ಅದರಿಂದ ತೃಪ್ತರೆಂದು ತಿಳಿಯುವುದು ಮಾನವನ ಸಹಜ ಸ್ವಭಾವಷ್ಟೇ. ತುಪ್ಪ ಗೋಮಾಂಸ, ಮದ್ಯಗಳನ್ನು ಮೆಚ್ಚುತ್ತಿದ್ದ ಆರ್ಯರಿಗೆ, ತಮ್ಮ ದೇವತೆಗಳಿಗೂ ಅದೇ ಪ್ರಿಯಕರ ವೆನಿಸಿತು. ತಂಡ-ತಂಡಗಳಲ್ಲಿಯ ಕಾಳಗಗಳ ನಂತರ ಇಲ್ಲವೆ ವಂಶಗಳ ಕಾಳಗಗಳ ನಂತರ 'ಅಶ್ವಮೇಧ' 'ಗೋಮೇಧ' 'ರಾಜಸೂರ' ಇತ್ಯಾದಿ ಯಜ್ಞಪದ್ಧತಿಗಳು ರೂಢವಾದವು. ಇಂಥ ಅವಸರಗಳಲ್ಲಿ ಸಾಮಾನ್ಯ ಜನರು ಕುಡಿತ, ಕುಣಿತ, ಗಾಯನ ನೃತ್ಯವಿಲಾಸಗಳಲ್ಲಿ ತಲ್ಲೀನರಾಗುತ್ತಿದ್ದರು ಎಂದು ಸೋಮಗುರುಗಳು ಮುಗಿಸಿದಾಗ ವೇಮನ ಹೊಸಬೆಳಕಿನ ಮಿಣುಕು ಕಂಡ ಅನುಭವ ಪಡೆದ. ಪೋತೆನ್ನ ತಲೆ ಝಾಡಿಸಿದ.

"ವೇದಗಳು ಕುಟಿಲ ಎಂದು ಬುದ್ಧದೇವ ಹೇಳಿದ್ದು ಸರಿ" ಎಂದ ವಿದ್ಯಾರ್ಥಿಯೊಬ್ಬ.

"ಅಷ್ಟು ಹೇಳಿಬಿಟ್ಟರೆ ಪ್ರಯೋಜನವಾಗಲಿಲ್ಲ. ಹಲವರು ಋಷಿಗಳು ಸರ್ವಶಕ್ತಿದಾತನಾದ, ದೇವಾದಿ ದೇವನ, ಪುರುಷೋತ್ತಮನ ಅಸ್ತಿತ್ವ ಗುರುತಿಸಿದ್ದರು. ಈ ವಿಶ್ವದೇವನನ್ನು ಋಷಿಗಳು ಬ್ರಹ್ಮ (ದೊಡ್ಡದಾಗುವ) ಎಂದರು. ಇತರರಿಗೆ ಈ ಕಲ್ಪನೆ ತಿಳಿಯಲಿಲ್ಲ.

ಮಧ್ಯಏಶಿಯಾದ ಮಾಂಸಭಕ್ಷಕ ಆರ್ಯರು ಆರ್ಯನ್ಯವ್ರಜ (ಇರಾನ) ದಿಂದ ಭಾರತಕ್ಕೆ ಬಂದರು. ಆರ್ಯನ್ಯವ್ರಜ ಪ್ರದೇಶದಲ್ಲಿ (ಗೋಧೂಮ) ಗೋದಿ ತಿನ್ನಲು ಅವರು ಕಲಿತರು. ಅವರು ಭೂಸಾಗುವಳಿಯಲ್ಲಿ ಮನಸ್ಸು ಹಾಕತೊಡಗಿದರು. ಪರ್ಶಿಯ ದೇಶದ ಆದಿವಾಸಿಗಳಾದ ಅಸುರ (ಅಹುರ)ರಿಂದ ಅವರು ಗೋದಿ ತಿನ್ನುವದನ್ನು ಕಲಿತರು. ಮುಂದೆ ಭಾರತದಲ್ಲಿ ಅಕ್ಕಿ ತಿನ್ನುವುದು ಮತ್ತು ಬೇಯಿಸಿದ ಅನ್ನ ಸೇವಿಸುವುದನ್ನೂ ರೂಢಿ ಮಾಡಿಕೊಂಡರು.

ಇದೇ ಕಾರಣದಿಂದ ಋಗ್ವೇದದಲ್ಲಿ ಚಿತ್ರವಾದ ಆರ್ಯಸಂಸ್ಕೃತಿಯು, ಭಾಷೆ ಮತ್ತು ಭಾವಗಳ ದೃಷ್ಟಿಯಿಂದ ಭಾರತೀಯೇತರವಾಗಿದೆ.

ಮುಂದೆ ಆಧ್ಯಾತ್ಮಿಕ ಚಿಂತನೆ ಬೆಳೆಯಿತು. ಯಜ್ಞಕರ್ಮಗಳ ನಿರರ್ಥಕತೆಯನ್ನು ತಿಳಿದು, ಬ್ರಹ್ಮ ವಿದ್ಯೆಯನ್ನು ತಿಳಿಯುವ ಉತ್ಸುಕತೆ ಉಪನಿಷತ್ಕಾಲದಲ್ಲಿ ಕಂಡುಬಂದಿತು. ವೇದಗಳ ಕೊನೆಯ ಭಾಗವಾಗಿ ಜೋಡಿಸಿದ್ದರಿಂದ ಉಪನಿಷತ್ 'ವೇದಾಂತ' ವೆನಿಸಿತು. ಈ 'ವೇದಾಂತಸಾರ'ವನ್ನು ವೇದ ಕರ್ಮಗಳ ತೊಗಟೆ ಒಗೆದು ಬೋಧಿಸುವ ಪುಣ್ಯ ಪುರುಷರು ನಾಡಿಗೆ ಬೇಕು. ಹಿಂಸೆ, ಜಾತಿಮತ್ಸರ, ಮತೀಯ ವಾಗ್ವಾದ, ಧರ್ಮದ ಹೆಸರಿನಲ್ಲಿ ಮೋಸ-ವಂಚನೆ ನಡೆದ ಈ ಕಾಲದಲ್ಲಿ ಉಪನಿಷತ್ಸಾರ ಬೋಧಿಸುವ ಕಾರಣ

ಪುರುಷರು ಎದ್ದು ಬರಬೇಕಾಗಿದೆ. ಸಮಾಜ ಅಂಥವನನ್ನು ಹೆತ್ತು ಕಳಿಸಬೇಕಾಗಿದೆ ಎಂದುಸರಿದಾಗ ಗುರುಗಳು ಗದ್ಗದರಾಗಿದ್ದರು- ಕಣ್ಣಿನ ಹನಿಯೊಂದು ಕೆಳಗೆ ಬಿತ್ತು. ಆ ಬಿದ್ದ ಹನಿಯಿಂದ ಸ್ಫೂರ್ತಿಗೊಳ್ಳುವ ವ್ಯಕ್ತಿ ಎದುರಿಗೇ ಇದ್ದುದನ್ನು ಯಾರೂ ಆಗ ಗುರುತಿಸಲಿಲ್ಲ.

ವಿದ್ಯಾರ್ಥಿಗಳು ಪ್ರಬುದ್ಧರಾದುದನ್ನು ಗುರುಗಳು ಗುರುತಿಸಿದರು. ವೇಮನ ವಿದ್ಯಾಪೀಠದಿಂದ ಸ್ನಾತಕನಾಗಿ ಮರಳುವ ಪೂರ್ವದಲ್ಲಿ ಗುರುಗಳಿಗೆ ದೀರ್ಘದಂಡ ಪ್ರಣಾಮ ಮಾಡಿದ.

ನೀನು ಮನಸ್ಸು ಮಣಿಸಿದವನಪ್ಪ. ದೇಹ ಮಣಿಸುವ ವಿಚಾರ ಇತರರಿಗಿರಲಿ. ಆ ಮಟ್ಟ ದಾಟಿದವ ನೀನು" ಎಂದಾಗ ಉಭಯತರ ಕಣ್ಣು ಹನಿಗೂಡಿದವು. ಪರಸ್ಪರರ ಅರಿವಿನ ಆನಂದಭಾಷ್ಪಗಳವು. ವೇಮನ ರಾಜಮಹೇಂದ್ರಿಗೆ ಮರಳಿದ.

ಪಾಠಶಾಲೆಯಿಂದ ಪ್ರಪಂಚ ವ್ಯವಹಾರಕ್ಕೆ

ಗುರುಕುಲದಿಂದ ಮರಳಿದ ವೇಮನ ಅರಮನೆಯ ಮೆರುಗಿನ ಪ್ರಪಂಚದಲ್ಲಿ ಇರಬೇಕಾಯಿತು. ಇಪ್ಪತ್ತರ ಹರಿಯದ ವೇಮನ ಸ್ಫುರದ್ರೂಪ, ಆಕರ್ಷಕ ವ್ಯಕ್ತಿತ್ವ ಪಡೆದಿದ್ದ. ದೊರೆ ವೀರಭದ್ರರೆಡ್ಡಿ, ರಾಜ್ಯಸ್ಥಾಪಕನಾದ ಕಾಟಯ ವೇಮಾರಡ್ಡಿಯ ಅಳಿಯ ವೇಮನನಾದರೋ ಕಾಟಯ ವೇಮಾರಡ್ಡಿಯ ಸೋದರಳಿಯ ಈ ರಕ್ತ ಸಂಬಂಧಕ್ಕಿಂತಲೂ ಹೆಚ್ಚಾಗಿ ವೇಮನನ ಬುದ್ಧಿಸೂಕ್ಷ್ಮತೆ, ಬಂಧುರ ದೇಹವನ್ನು ಮುತ್ಸದ್ದಿ ದೊರೆ ಮೆಚ್ಚಿಕೊಂಡಿದ್ದ. ಒಳ್ಳೆ ದಂಡನಾಯಕ ಲಕ್ಷಣ ಎಂದುಕೊಂಡಿದ್ದ. ಸೋದರಿ ಸಂಬಂಧಕ್ಕೆ ಸೋದರ ಭಾವ ಸೇರಿ ಸ್ವರ್ಣಕ್ಕೆ ಕುಂದಣವಿಟ್ಟಂತಿತ್ತು. ಅತ್ತಿಗೆ 'ಅನತಲ್ಲಿ' ಹೊಣೆಗಾರ ರಾಣಿಯಾಗಿ ಬೆಳೆದಿದ್ದಳು. ಆಯುರ್ವೇದದಲ್ಲಿ ನಿಷ್ಣಾತರಾದ ಬ್ರಾಹ್ಮಣರಿಗೆ ಇವಳು ೧೪೨೩ ರಲ್ಲಿ 'ಕಲುವಚೇರು' ಎಂಬ ಗ್ರಾಮವನ್ನು ದಾನ ಕೊಡಿಸಲು ಕಾರಣಳಾಗಿದ್ದಳು. ಅನತಲ್ಲಿ ಧರ್ಮಕರ್ಮಗಳಲ್ಲಿಯೂ ತೀವ್ರಾಸಕ್ತಿ ಹೊಂದಿದ್ದಳು. ಜನಸಾಮಾನ್ಯರೆಲ್ಲ 'ದೇವರನ್ನು ಕಂಡ ಧರ್ಮಿಷ್ಠಳು ತಾಯಿ' ಎಂಬ ಹೊಗಳುತ್ತಿದ್ದರು. ಪ್ರೋಲಯ ವೇಮಾರೆಡ್ಡಿಯ ಗುರುಶೈವ ಬ್ರಾಹ್ಮಣ ಘೋಡೆರಾಯ ಗಂಗಯ ದೇವನ ವಂಶದವರನ್ನೇ ಧರ್ಮಕಾರ್ಯದಲ್ಲಿ ರಾಜಮಹೇಂದ್ರದ ದೊರೆಗಳು ಗುರುಗಳೆಂದು ಅಂಗಿಕರಿಸಿದ್ದರು. ಆದರೆ ದೊರೆ ಕೊಮರುಗಿರಿ ರಡ್ಡಿ ಮತ್ತು ಕೊಮಟಿ ವೇಮಾರೆಡ್ಡಿ ವಿಷ್ಣುಪೂಜೆ ಅಂಗೀಕರಿಸಿದ್ದರು. ರೆಡ್ಡಿಗಳು ಇನ್ನಿತರ ಮತಾಚಾರ್ಯರನ್ನು ಮನ್ನಿಸುತ್ತಿದ್ದುದರಿಂದ ಆಯಾ ಗುರುಗಳು ಬೋಧಿಸುವ ಶಿವ-ಕೇಶವ ವಿಗ್ರಹಗಳಾಗಲೀ ತಾಂತ್ರಿಕರ ಭೈರವಿಯಾದಿ ವಿಗ್ರಹಗಳಾಗಲೀ ಅವರ ಪೂಜಾವಸ್ತು ಎನ್ನಿಸುತಿದ್ದವು. ಶ್ರೀಶೈಲದ ಬ್ರಹ್ಮಾಂಬಾ ಮತ್ತು 'ಮಲ್ಲಿಕಾರ್ಜುನ' ನಾಮದ ಶಿವಲಿಂಗ, ಸ್ಮಾರ್ತ ಬ್ರಾಹ್ಮಣರ ವೀರಶೈವರ ಮತ್ತು ಇನ್ನಿತರ ಕರ್ನಾಟಕಾಂಧ್ರ ಜನರನೇಕರ ಆರಾಧ್ಯದೇವತೆಯಾಗಿದ್ದವು. ವೈಶ್ಯರು ಕನ್ನಿಕಾ ಪರಮೇಶ್ವರಿಯನ್ನು,

ತಿರುಪತಿ ವೆಂಕಟೇಶನನ್ನು ಆರಾಧ್ಯ ದೇವತೆಗಳೆಂದು ಅಂಗೀಕರಿಸಿದ್ದರು. ಈ ದೇವತೆಗಳ ಬಗ್ಗೆ ಜನರು ಭಕ್ತಿ ತಾಳುವದಕ್ಕೆ ಆಳವಾದ ತತ್ತ್ವಗ್ರಹಿಕೆಗಿಂತ, ಅಲ್ಲಿ ನಡೆಯುವ ವೈಭವಪೂರ್ಣಪೂಜೆ, ನೃತ್ಯ ಗಾಯನ, ಬಲಿದಾನ ಭೋಜನಾದಿ ಆಕರ್ಷಣೆಗಳೇ ಕಾರಣವಾಗಿದ್ದವು.

ಅರಮನೆಯಲ್ಲಿ ಸಂಗೀತ, ಗಾಯನ, ನೃತ್ಯಗಳ, ಸುಂದರ ದಾಸಿಯರು ನಾಯಕಿಗಣಿಕೆಯರ ಮೇಲ್ವಿಚಾರಣೆಯಲ್ಲಿ ಸೇವಾತುರರಾಗಿ ನಿಂತಿರುವ ದೃಶ್ಯ, ಮಂದಿರದಲ್ಲಿ ದೇವದಾಸಿ ದೇವ ಕನ್ನಿಕೆಯರ ನೃತ್ಯ ಸಂಗೀತ ಪರವಶತೆ, ಮದ್ಯ-ಕಂಭದ ಪೂಜೆ, ಮದ್ಯಸೇವನೆ, ಕನ್ನೆಯರ ಸಂಗ, ಇವೆಲ್ಲ ದಿನ ನಿತ್ಯ ಕಣ್ಣಮುಂದೆ ಕಾಣುವ ದೃಶ್ಯಗಳಾಗಿದ್ದವು. ಅದರಲ್ಲಿ ಮೈಯುಂಡವರು, ಅದರಲ್ಲಿಯೇ ಮೈಮರೆತಿದ್ದರು.

ಈ ರಾಜಕೀಯ, ಸಾಂಸ್ಕೃತಿಕ, ದೈವಿಕ ಚಟುವಟಿಕೆಗಳು ಸಮಾಜದ ನೈತಿಕ ದೃಷ್ಟಿಯನ್ನೇ ಮಂಕುಗೊಳಿಸಿದ್ದವು. ವೇಶ್ಯೆಯರು ಸಮಾಜದ ಒಂದು ಮಹಾವರ್ಗವಾಗಿದ್ದರು ಸಮಾಜೋದ್ಧಾರವು ವೇಶ್ಯೆಯರಿಗೆ ಧರ್ಮಬೋಧೆ ಮಾಡಿ ಅವರನ್ನು ಪರಿವರ್ತಿಸದೆ ಸಾಧ್ಯವಿರಲಿಲ್ಲ. ವ್ಯಾತ್ಸ್ಯಾಯನಾದಿ ಪೂರ್ವದ ಮುನಿಗಳು ರಚಿಸಿದ ವೇಶ್ಯೆಯರ ಜೀವನ-ದರ್ಶನಗಳಾದ 'ಕಾಮ ಸೂತ್ರಾದಿ ಗ್ರಂಥಗಳು ಅವರ ಅಸ್ತಿತ್ವಕ್ಕೆ ರಾಜಮನ್ನಣೆ ದೊರಕಿಸಿದ್ದವು. ಸಾಮಾನ್ಯ ಜನರ ಸುಖದಾಂಪತ್ಯ ಕಷ್ಟಸಾಧ್ಯವಿತ್ತು. ಧನಿಕರು ಬಡವರ ಸಂಸಾರದಲ್ಲಿ ಹುಳಿಹಿಂಡಲು, ಸಡಿಲುಗಚ್ಚಿಯ ಧರ್ಮಾಚಾರ್ಯರು, ರಾಜಮಂಡಲದವರು ತಾವೇ, ಮುಂದಾಗಿ ಮಾರ್ಗ ತೋರುತ್ತಿದ್ದರು.

ವೇಮನ ಎದುರಿಸಿದ ಪ್ರಪಂಚವೇ ಇದು. ದೇವತೆಗಳ ಹೆಸರು, ಭಕ್ತಿ ಹುಟ್ಟಿಸಿ, ಮನಸ್ಸು ಕೇಂದ್ರೀಕರಿಸಿ, ಧ್ಯಾನಿಸುವ ಸಾಧನೆಯಾಗದೆ, ಸಂಕುಚಿತ ಮತೀಯ ಬುದ್ಧಿ ಬೆಳೆಯಲು ಕಾರಣವಾದುದನ್ನು ಗುರುತಿಸಿದ. ಸತ್ಯವಾದರೂ ಏನು? ಎಂಬ ಜಿಜ್ಞಾಸೆ ಮೂಡಿತು. ಸಾಧನೆಯ ಮುಹೂರ್ತಕ್ಕಾತ ಕಾಯುತ್ತಿದ್ದ.

ವೇಶ್ಯಾ ಜೀವನ, ದಾಂಪತ್ಯ ಕಲಹಗಳು ಬೀದಿಯ ದೃಶ್ಯಗಳಾದುದನ್ನು ತಿಳಿಯಲು ತೀರ ಸುಲಭಸಾಧ್ಯವಿತ್ತು. ಕಣ್ಣಿನೆದುರು ದೃಷ್ಟಾಂತಗಳಿದ್ದವು. ವೇಮನ ಸಂಗೀತ ಬಲ್ಲವನಾಗಿದ್ದ. 'ಮೋಡಿ' ರಾಗ ಈತನ ಮೆಚ್ಚುಗೆಯ ರಾಗ. ಅರಮನೆಯ ಮೇಲು ಛಾವಣಿಯಲ್ಲಿ ವೀಣೆ ನುಡಿಸುತ್ತ ಕುಳಿತ, ವೇಮನನನ್ನು ಕಂಡ, ದಾಸಿಯರು ಮಂತ್ರಮುಗ್ಧರಾಗುತ್ತಿದ್ದರು. ಮೋಡಿ ರಾಗ ನಿಜವಾಗಿ 'ಮೋಡಿ' ಪ್ರಭಾವ ಬೀರಿತ್ತು, ದಾಸಿ ಮೋಹಿನಿಯ ಮೇಲೆ.

ಮತೀಯ ಸಾಹಿತ್ಯದಿಂದ ಪರಾವೃತ್ತನಾದ ವೇಮನ ಜಾತ್ಯತೀತ ಸಾಹಿತ್ಯ ಓದಲು ಮೊದಲಾದ. ತನ್ನ ತಂದೆ, ಮತ್ತು ಪೆದಕೊಮಟಿ ವೇಮಾರೆಡ್ಡಿಯರಂತೆ ವೇಮನ ಸಹ ಕಾಳಿದಾಸ ಸಾಹಿತ್ಯಕ್ಕೆ ಮೊರೆಹೋದ. ಈ ಶೃಂಗಾರ ಸಾಹಿತ್ಯದ ಪ್ರಭಾವವನ್ನು ಕೊಚ್ಚಿ ಹಾಕುವಷ್ಟು ಮನಸ್ಸು ಮುಪ್ಪಾಗಿರಲಿಲ್ಲ.

ಆ ದಿನ ವೀಣೆ ಬಾರಿಸುತ್ತ ಕುಳಿತಿದ್ದ ಚಂದಿರನ ತಿಂಗಳಿನ ತಂಪಿನಲ್ಲಿ ಪ್ರೇಮದ ಮಳೆ ಸುರಿಯುತ್ತಿತ್ತು. ಮರೆಯಲ್ಲಿ ನಿಂತು ಮೈಮರೆಯುತ್ತಿದ್ದ ಮೋಹಿನಿ ಅಂದು ಆಟ್ಟವೇರಿ, ಕಳವಿನ ಹೆಜ್ಜೆ ಇಡುತ್ತ ಬಂದಳು. ಸುತ್ತಲೂ ಬೆಳದಿಂಗಳು ! ಮೋಹಿನಿ ಬೆಳದಿಂಗಳೇ ಮೈವೆತ್ತು ಬಂದಂತಿದ್ದಳು ! ಕೈ ವೀಣೆ ಮೀಟುತ್ತಿತ್ತು. ನಾದ ಆವರಿಸಿತು. ಇನ್ನೊಂದು ಕ್ಷಣದಲ್ಲಿ ಮೋಹಿನಿ ವೀಣೆಯ ಸ್ಥಾನದಲ್ಲಿ ವೈಣಿಕನ ಗಾಢಾಲಿಂಗನದಲ್ಲಿದ್ದಳು. ಪ್ರೇಮ ತುಳುಕಿತು. ಬ್ರಹ್ಮಕೇಷ್ಟೆ ಹಾಳು ಕೆಲಸವಷ್ಟೇ !

ದಿನಗಳುರುಳಿದವು. ಕಾಮನ ಪಂಚಬಾಣಗಳಿಗೆ ಶಿವನು ಬಲಿಯಾಗಿದ್ದ. ಬ್ರಹ್ಮ ಮಾನಗೇಡಿಯಾಗಿದ್ದ. ಇಂದ್ರಲಜ್ಜೆ ತೆರೆದಿದ್ದ. ಕೃಷ್ಣ ಕುಬ್ಜೆಯಲ್ಲಿ ಅನುರಕ್ತನಾಗಿದ್ದ. ಶಂಕರಾಚಾರ್ಯ ಪರಕಾಯ ಮುಖಾಂತರ ಕಾಮಜೇಷ್ಟೆ ಅನುಭವಿಸಿದ. ಅಲ್ಲಮಪ್ರಭು ಬಳ್ಳಿಗಾವಿಯ ಕಾಮಲತೆಗೆ ಮನಸೋತ.

ವಿಧಿಯ ಜೇಷ್ಟೆಯಂತೆ ಘಟನೆ ನಡೆದುಹೋಗಿತ್ತು. ಅಂದಿನ ರಾಜ-ಧರ್ಮದಲ್ಲಿ, ಸಮಾಜಧರ್ಮದಲ್ಲಿ ತೀರ ಸಹಜವೆನಿಸಿದ ಘಟನೆಯಿದು. ಮೋಹಿನಿ ವೇಶ್ಯಾವಾಟಿಕೆಯಲ್ಲಿ ತನ್ನ ಮನೆಗೂ ವೇಮನನ್ನು ಕರೆದೊಯ್ದಳು. ವೇಮನ ವೇಶ್ಯೆಯರ ಸ್ವಭಾವ ಕುರಿತು ಆಳ ಚಿಂತನೆಗೆ ನಿಂತ. ಹರಗಡಿದ ಕಾಮಿಯಾಗಿರಲಿಲ್ಲ ಅವ. ಮೋಹಿನಿ ವೇಮನನ ಮನಸ್ಸು ಗುರುತಿಸದೆ ಹೋದಳು. ವೇಮನ ಹೆಚ್ಚು ಹೆಚ್ಚಾಗಿ ವೇಶ್ಯಾಜೀವನ ಅಭ್ಯಸಿಸುತ್ತಿದ್ದಂತೆ, ಮೋಹಿನಿ ಅವನ ಬಗ್ಗೆ ಜುಗುಪ್ಸೆ ಹೊಂದಿದಳು. ಹಣದಾಸೆ, ಬಯಕೆಗಳಿಗೆ ತುತ್ತಾದ ಅವಳ ಸಂಗ ಪ್ರೀತಿ ಹೀನವಾಯಿತು. ಪ್ರೀತಿ ಇಲ್ಲದವಳ ಸಂಗ ಯಾರಿಗೂ ತರವಲ್ಲ. ವೇಮನ ವೇಶ್ಯೆಯ ಸಂಗದಿಂದ ದೂರವಾಗತೊಡಗಿದ.

ಕಾಮನ ಪಂಚಬಾಣದಿಂದ ಘಾಸಿಗೊಂಡ ಮನಸ್ಸು ಮೀರಲು ಅಸಾಧ್ಯ. ಸ್ತ್ರೀ ಸಂಗ ನೀಡಲು ಭೋಗಸುಖದ ಕ್ಷಣಿಕತೆ ತಿಳಿದು ಕಾಮಸುಖದಾಸೆ, ಹಿಂಗಿತ್ತು. ಆಶೆ ತೀರಿದ ಬಳಿಕ ಕಾತರವೆಲ್ಲಿ ? ಕಳವಳವೆಲ್ಲಿ ? ಹೆಚ್ಚಿನ ಸಾಧನಕ್ಕೆ ವೇಮನನ ಮನಸ್ಸು ಹದಗೊಂಡಿತ್ತು.

ನಿವೃತ್ತಿಯ ಮಾರ್ಗದಲ್ಲಿ

ಕಾಕತೀಯ ರಾಜ್ಯವು ದಿಲ್ಲಿ ಸುಲ್ತಾನರ ಸೈನ್ಯಕ್ಕೆ ತುತ್ತಾಗಿ. ಅಳಿದ ನಂತರ, ಮುಸ್ಲಿಮ ಧರ್ಮ ವಿರೋಧಿಯಾಗಿ ಮೂಡಿ ಬಂದ, ಕೊಂಡವೀಡಿನರೆಡ್ಡಿ ರಾಜಕೊಂಡ ದೇವರಕೊಂಡದ ಪದ್ಮನಾಯಕರು, ಆನೇಗೊಂದಿಯ ಕುರುಬ ಸರದಾರರು ಬ್ರಾಹ್ಮಣ ಗುರುಗಳ ಇಲ್ಲವೆ ಮಂತ್ರಿಗಳ ಮಾರ್ಗದರ್ಶನದಲ್ಲಿ ರಾಜ್ಯವಾಳಿದರು. ಈ ಬ್ರಾಹ್ಮಣ ಗುರುಗಳಾದರೋ ಕೆಲವೊಮ್ಮೆ ಶಿವಭಕ್ತರಾಗಿರುತ್ತಿದ್ದರು, ಕೆಲವೊಮ್ಮೆ ವಿಷ್ಣುಭಕ್ತರಾಗಿರುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ದ್ವೇಷಿಸುತ್ತಿದ್ದರು. ಕಾಳಗಗಳ ಸಂಖ್ಯೆ ಹೆಚ್ಚಾದಂತೆ ಯಜ್ಞ-ಪೂಜೆ ಹೆಚ್ಚುತ್ತಿದ್ದವು. ಇದರಿಂದ ಬ್ರಾಹ್ಮಣರಿಗೆ ತುಂಬಾ ಅನುಕೂಲವಿತ್ತು. ಜನಸಾಮಾನ್ಯರು, ಕಾದಲಿ, ಬಿಡಲಿ ಕತ್ತಿ ಹಿಡಿದು ಹೊರಡುತ್ತಿದ್ದರು. ಬಂಟರಾಗು

ತ್ತಿದ್ದರು. ಪಾಳ್ಯದಲ್ಲಿ ನೃತ್ಯ ಸಂಗೀತ ಮದ್ಯಪಾನಗಳಲ್ಲಿ ಸುಖಬಡುತ್ತಿದ್ದರು. ಯುದ್ಧ ಪಿಪಾಸೆ ಎಲ್ಲರಲ್ಲೂ ಮೂಡಿತ್ತು. ತೀರ ಸೋಜಿಗವೆಂದರೆ, ರೆಡ್ಡಿರಾಜ್ಯದ ಮೇಲೆ ದಾಳಿ ಮಾಡುವವರು ಬಹಮನಿಯವರಲ್ಲ. ಕಳಿಂಗದೇಶದ ಗಜಪತಿ ಮತ್ತು ವಿಜಯನಗರದ ರಾಯರಾಗಿದ್ದರು. ರೆಡ್ಡಿರಾಜರು ಕೊಂಡವೀಡು, ರಾಜಮಹೇಂದ್ರ ಕಂದುಕೂರು ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದರು. ಒಬ್ಬರು ಇನ್ನೊಬ್ಬರನ್ನು ಸದೆ ಬಡೆಯಲು ' ವಿಜಯನಗರ, ಗಜಪತಿ ಇಲ್ಲವೆ ಬಹಮನಿ ಸುಲ್ತಾನರ ಸಹಾಯಕ್ಕೆ ಕೈಯೊಡ್ಡುತ್ತಿದ್ದರು. ಪದ್ಮನಾಯಿಕರಿಗೂ ರೆಡ್ಡಿ ರಾಜರಿಗೂ ಮಧುರಬಾಂಧವ್ಯ ಉಳಿಯಲಿಲ್ಲ. ಹಿಂದೂ ಧರ್ಮ ರಕ್ಷಣೆಯ ಹೆಸರಿನಲ್ಲಿ ವಿವಿಧ ಆಚಾರ್ಯರು ತಮ್ಮ ಮಠಪೀಠಗಳ ಪ್ರಾಬಲ್ಯಕ್ಕಾಗಿ ದೇಶದ ಶಕ್ತಿ ಹ್ರಾಸ ಮಾಡಿದರು, ಶೈವರನ್ನು ವೈಷ್ಣವರಾಗಿ ಪರಿವರ್ತಿಸುವುದು, ಸಾಮಾನ್ಯರನ್ನು ಹೊಸವೀರಶೈವ ಪಂಥಕ್ಕೆ ಆಕರ್ಷಿಸುವುದು 'ಮಹಾಕಾಯ' ಎಂಬ ಭಾವನೆ ಬೆಳೆದಿತ್ತು.

ಧರ್ಮವೆಂದರೆ ಮಾನವಧರ್ಮ, ವಿಶ್ವಧರ್ಮ ಮತಾತೀತವಾದುದು. ಶಿವ, ವಿಷ್ಣು, ಅಲ್ಲಾ, ಬುದ್ಧ, ರಾಮ ಎಲ್ಲಾ ಒಂದೇ ಸತ್ಯಪ್ರತಿಪಾದನೆ ಸೂಚಿಸುವ ನಾಮ, ರೂಪಗಳು. ಈ ಸತ್ಯವನ್ನು ಮನಗಾಣದೆ ಇದರ ಬಗೆಗಿರುವ ಶಂಕೆ ತೊಲಗದು. ರಾಜಕಾರ್ಯದಲ್ಲಿ ಸೇವೆ ಮಾಡಲು ಮನವೊಪ್ಪದು. ಧರ್ಮದ ನಿಜವಾದ ಕಲ್ಪನೆಯನ್ನು ಮೂಡಿಸದೆ ಸಮಾಜದ ಸುಸ್ಥಿತಿ ಅಸಾಧ್ಯ; ಮಾನವಕಲ್ಯಾಣ ಕೇವಲ ಕನಸು ಎಂದು ವೇಮನ ತಿಳಿದ.

ರಾಚಕೊಂಡದ ಬೆಟ್ಟದಲ್ಲಿ ಸಾಧುವೊಬ್ಬ ವಾಸಿಸುವನೆಂದು ಕೇಳಿದ್ದ ಅವನು ದೀರ್ಘ ಕಾಲದಿಂದ ಅಲ್ಲಿಯೇ ವಾಸಿಸುತ್ತಿರುವನೆಂದೂ, ತಮ್ಮ ಹಿರಿಯರೂ ಸಹ ಅವನನ್ನು ನೋಡಿದುದಾಗಿಯೂ ಅಂದಿನ ಮುದುಕರು ಸಹ ಹೇಳುತ್ತಿದ್ದರು. ಆ ಲೆಕ್ಕದಿಂದ ಅವನ ವಯಸ್ಸು ನೂರೈವತ್ತರ ಮೇಲೆ. ಅವನ ದೀರ್ಘವಯಸ್ಸಿನ ಗುಟ್ಟು ಅವನ ಹಠಯೋಗದ ಫಲವೆಂದು ಸುಜನರಿಗೆ ಗೊತ್ತಿತ್ತು.ಸಾಮಾನ್ಯರು ಅವನನ್ನು ಅತಿಮಾನವನೆಂದೇ ಭಾವಿಸಿದ್ದರು. ಜನರ ಸಂಪರ್ಕವನ್ನು ಬಯಸದ ಆ ಯೋಗಿಯ ಬಗ್ಗೆ ನಿಜ ಪರಿಚಯಕ್ಕಿಂತ ಊಹೆಯೆ ಹೆಚ್ಚು.

ಹಠಯೋಗದ ಒಂದು ಪ್ರಕಾರವೇ ' ಲಂಭಿಕಾ ಯೋಗ. ' ಈ ಹಠಯೋಗಿ ಯಾರಿಗೂ ತನ್ನ ಹೆಸರು ಹೇಳುತ್ತಿರಲಿಲ್ಲ. ಅವನ ದೀರ್ಘ ಜೀವನವನ್ನು ಕುರಿತು ಚರ್ಚಿಸುತ್ತಿದ್ದ, ಯೋಗಾಭ್ಯಾಸಗಳು, ಲಂಭಿಕಾಯೋಗದಲ್ಲಿ ನರನಾಡಿ ನಿಯಂತ್ರಿಸುವ ಖೇಚರ ಮುದ್ರೆಯನ್ನು ಸಾಧಿಸಿದಾಗ ಭ್ರೂಮಧ್ಯದ ಎಡಕ್ಕೆ ಚಂದ್ರಸ್ಥಾನದಿಂದ ಸ್ರವಿಸುವ 'ಅಮೃತ' ದ ಬಗ್ಗೆ ಓದಿ ತಿಳಿದುದರಿಂದ, ಅವನಿಗೆ ಲಂಭಿಕಾಯೋಗಿ ಎಂದು ಕರೆಯತೊಡಗಿದ್ದರು. ಆಶ್ಚರ್ಯದ ಸಂಗತಿಯೆಂದರೆ ಈ ಯೋಗಿಗೆ ಬಂಗಾರು ತಯಾರಿಸುವ ವಿದ್ಯೆ ತಿಳಿದಿತ್ತು. ತನ್ನಲ್ಲಿ ಬರುವ ಶಿಷ್ಯರನ್ನು ಕಠಿಣಪರೀಕ್ಷೆಗೆ ಗುರಿಪಡಿಸಿ, ದೃಢಮನಸ್ಕರೆಂದು ನಿರ್ಣಯವಾದ ನಂತರವೇ ಶಿಷ್ಯರೆಂದು ಅಂಗೀಕರಿಸುತ್ತಿದ್ದ. ದೇಹದಾರ್ಢ್ಯದೊಂದಿಗೆ ಚಿತ್ತಸೂಕ್ಷ್ಮತೆ ಸಾಧಿಸುವ ಮಾರ್ಗದಲ್ಲಿ ಈ ಹೇಮಕಾರಕ ವಿದ್ಯೆ ಮೊದಲು ಅವನಿಗೆ ಅಡ್ಡ ಬರುತ್ತಿತ್ತು. ವಿರಳ

ವಾಗಿ ಶಿಷ್ಯರೆಂದು ಯಾರೋ ಒಬ್ಬನನ್ನು ಅಂಗೀಕರಿಸುತ್ತಿದ್ದ ಈ ಯೋಗಿ, ರಾಜಯೋಗದ ಸಮಾಧಿ ಮಟ್ಟ ಮುಟ್ಟಲು ನಲವತ್ತು ವರುಷದ ಸಾಧನ ಮಾಡಿದ್ದ. ಕನ್ಯಾಕುಮಾರಿಯಿಂದ ಹಿಮಾಲಯದ ಬೆಟ್ಟ ಸುತ್ತಿಬಂದಿದ್ದ. ತನ್ನ ಶಿಷ್ಯರಿಗೂ ಹೇಮಕಾರಕ ವಿದ್ಯೆ ಕಲಿಸಿ ಅವರು ಅದರಿಂದ ಆಕರ್ಷಿತರಾಗದೆ ಹೋದರೆ, ಅವರಿಗೆ ಹೆಚ್ಚಿನ ಯೋಗ ಸಾಧನ ಹೇಳಿ—ಕೊಡುತ್ತಿದ್ದ.

ವೇಮನ ಲಂಭಿಕಾಯೋಗಿಯ ಗುಡಿಸಲು ಬಳಿ ಬಂದು ಎದುರಿನ ತೋಟದಲ್ಲಿ ಹೂವಿನ ಗಿಡವೊಂದಕ್ಕೆ ಹತ್ತಿದ ಜೇಡಿಹುಳು ತೆಗೆಯುತ್ತ ನಿಂತಿದ್ದ. ತನ್ನ ಗುಡಿಸಲು ಬಳಿನಿಂತ ಈ ಯುವಕನಾರು ? ಆಗ ತಾನೇ ಇಪ್ಪತ್ತು ದಾಟಿದ ಏರು ಜವ್ವನ. ಹಠಯೋಗ ಸಾಧಿಸಬೇಕಾದ ದೇಹದಾರ್ಢ್ಯ, ಕಾಂತಿ ತೇಜಗಳನ್ನು ಸಹಜವಾಗಿ ಸಂಪಾದಿಸಿದ ತರುಣ. ಬೆಳೆಯುವ ಮರವನ್ನು ಹಾಳುಮಾಡುವ ಹುಳು ತೆಗೆಯುವಲ್ಲಿ ತಲ್ಲಿನನಾದ ಅವನ ಏಕಾಗ್ರತೆ, ಅವನ ಉದ್ದೇಶದ ಘನತೆಗಳನ್ನೂ ಲಂಭಿಕಾಯೋಗಿ ಗುರುತಿಸಿದ. 'ತನ್ನ ಶೋಧಿಸುತಿಹನ ತಾನೆ ಶೋಧಿಸುತಿಹ' ಪರಮನಂತೆ ಲಂಭಿಕಾಯೋಗಿಯೇ ವೇಮನನ ಬಳಿ ಸಾರಿದ. ತನ್ನ ಜೀವನದಲ್ಲಿ ಶಿಷ್ಯನನ್ನು ಎಳಸಿ ಮುಂದಾದುದು ಮೊದಲು ಬಾರಿಯಾಗಿತ್ತು.

"ತಮ್ಮಾ ಏನಿದು" ?

ಆ ಮಧುರ ಗಂಭೀರ ವಾಣಿ ಕೇಳಿ ವೇಮನ ತಿರುಗಿದ. ಪರ್ವತವೇ ಮೊಹಮ್ಮದನೆಡೆಗೆ ಬಂದಿತ್ತು. ನಾಚುಗೆಯಿಂದ ತಲೆ ತಗ್ಗಿಸಿದ. ಗುರುವಿನೆಡೆಗೆ ತಾನು ಹೋಗುವುದು ಧರ್ಮ. ಧರ್ಮ ತಪ್ಪಿದರೆ, ನಾಚುಗೆಪಡುವುದು ನೀತಿ.

"ತಮ್ಮನ್ನೇ ಕಾಣಲು ಬಂದೆ"

"ನೋಡಿಯಾಯಿತಲ್ಲಾ" ಮುಗುಳುನಗೆ ಸೂಸಿದರು ಲಂಭಿಕಾಯೋಗಿ.

"ತಮ್ಮನ್ನು ನನ್ನಲ್ಲಿ ಕಾಣುವ ಆಶೆ"

"ಆಶೆ ತೊರೆದ ಬಳಿಕ ನೀನೇ ನಾನಾಗುವೆ"

"ಆಶೆ ತೊರೆಯುವ ನಿರ್ಧಾರ ಮಾಡಿರುವೆ"

"ನಿರ್ಧಾರ ಸ್ಥಿರವಾಗಬೇಕಾದರೆ ಸಾಧನೆಬೇಕು"

"ಅದು ತಮ್ಮ ಮಾರ್ಗದರ್ಶನದಿಂದ ಮಾತ್ರ ಸಾಧ್ಯ. ಗುರುವಿಲ್ಲದೆ ಗುರುತೆಂತು?"

ಲಂಭಿಕಾಯೋಗಿ ಇದ್ದಕ್ಕಿದ್ದ ಹಾಗೆ, ಸಮಾಧಿ ಸ್ಥಿತಿಗೇರಿದ. ಐದು ನಿಮಿಷ; ಹತ್ತು ನಿಮಿಷ; ಉರುಳಿದವು. ವೇಮನ ಎವೆಯಿಕ್ಕದೆ ನೋಡಿದ. ಮುಖವು ಕಾಂತಿಗೂಡಿತು. ಕಣ್ಣು ಕಳೆದುಂಬಿತು. ದೇಹ ತೇಜೋಮಯವಾಯಿತು. ಇನ್ನೊಂದು ಕ್ಷಣವಾದ ನಂತರ ಯೋಗಿ ಪೂರ್ವಸ್ಥಿತಿಗೆ ಬಂದರು.

"ಇನ್ನೂ ಒಂದು ವರುಷ ತಡೆ" ಎಂದರು.

"....."

"ಚಿಂತೆ ಬೇಡ. ಹದಿನೈದು ದಿನ ಇಲ್ಲಿಯೇ ಇರು. ಮರಳಿ ಜನಮಧ್ಯೆ ಹೋಗುವ ಕುರಿತು ಕಳವಳ ಬೇಡ. ನಿನ್ನಂಥ ದೃಢ ಮನಸ್ಸಿನವರು ಪ್ರಪಂಚದಲ್ಲಿ ಬೆರೆತು ಯೋಗ ಮೆರೆಸಬೇಕಾಗಿದೆ."

ಇಷ್ಟು ಹೇಳಿ ಗುರುಗಳು ಗುಡಿಸಲೊಳಗೆ ವೇಮನನ್ನು ಕರೆದೊಯ್ದರು.

ಹದಿನೈದು ದಿನಗಳುರುಳಿದವು. ಗುರು ಹಠಯೋಗ ಸಾಧನ ಸಿದ್ಧಿಗಳನ್ನು ಅದಕ್ಕಾಗಿ ಪಟ್ಟ ಕಡು ಕಷ್ಟಗಳನ್ನು ಕುರಿತು ತಿಳಿಸಿದರು. ಬಹು ದಿವಸ ಬಾಳುವ ಆಶೆ ಈಡೇರಿದರೂ ಮನಸ್ಸು ತೃಪ್ತಿಪಡಲಿಲ್ಲ. ಬೆಕ್ಕು ಇಲಿ ಹಿಡಿಯುತ್ತದೆ; ಮತ್ತೆ ಕೋಳಿ ಎದುರಾದರೆ ಅದರ ಮೇಲೆ ಆಶೆ ಬಿಟ್ಟು ಹಿಡಿಯ ಹೋಗುತ್ತದೆ. ನಮ್ಮನ್ನು ಆಡಿಸುವ ಬ್ರಹ್ಮಚೇಷ್ಟೆ ನೆನೆದರೆ ನಾವೂ ಇಲಿ ಕೋಳಿಗಳಂತೆ. ಇದನ್ನು ತಿಳಿಯದೆ, ಮುಂಗುಲಿ ಎದುರಿಗಿರುವ ಹಾವೂ, ಬಾಯಿಯಲ್ಲಿಯ ಕಪ್ಪೆ ನುಂಗಲು ಆಶಿಸುತ್ತದೆ. ಆ ಕಪ್ಪೆ ಹಾರುವ ಕೀಟದ ಮೇಲಾಸೆ ಪಡುವುದು, ಆ ಕೀಟ ನೊಣ ನುಂಗಲು ಅವಿತು ಕುಳಿತಿರುತ್ತದೆ. ಆ ನೊಣಕ್ಕೆ ಹಣ್ಣಿನ ರಸದ ಮೇಲಾಸೆಯುಂಟು. ಈ ಎಲ್ಲ ಜ್ಞಾನವು ಚಿಂತನೆಯ ಫಲವಷ್ಟೇ! ಇದು ತಿಳಿದರೆ, ಮರಣವು ನಿಶ್ಚಿತವೆನಿಸುತ್ತದೆ. ಆಗ ಆಲದ ಮರದಂತೆ ಸಾವಿರ ವರುಷ ಬಾಳುವ ಇಚ್ಛೆ ಹಿಂಗಿ, ಹೃದಯದ ಬಯಲೊಳಿರುವ ಬ್ರಹ್ಮ ಅರಿಯುವ ಕಾತರ ಹುಟ್ಟಿ, ರಾಜಯೋಗದ ಸರಳ ಸಾಧನ ಮೆಚ್ಚಿಕೊಂಡೆ" ಎಂದು ವೇಮನನ ಮುಂದಿನ ಮಾರ್ಗಕ್ಕೆ ಗುರಿ ತೋರಿಸಿದರು ಲಂಭಿಕಾಯೋಗಿ.

" ತಾವುಹಡೆದವರು, ತಮ್ಮನೇ ಹಡೆದವರು, ಸಾವುದೆಲ್ಲ ತಮಗೆ ಸಾಕ್ಷಿಯಲ್ಲವೇ ? ಸಾಯುವವರು ಯಾರೋ? ಸಾಯದವರು ಯಾರೊ? ಸತ್ತುಬದುಕುತಿರುವಸುಜನರಾರೊ?" ಎಂಬುದರ ವಿವರವನ್ನು ತಿಳಿದು ದೀರ್ಘ ಚಿಂತನೆ ಮಾಡಿದ ವೇಮನ. 'ಜನನ-ಮರಣಗಳಿಗೆ ಸರಿಸ್ವಂತತ್ರನಲ್ಲ, ಮೊದಲು ಕರ್ತನಲ್ಲ, ತುದಿಗು ಅಲ್ಲ, ನಡುವೆ ಕರ್ತನೆನಲು ನಗುಪಾಟಲಲ್ಲವೇ? ಮೃತ್ಯು ಬಂಧವುಂಟು ಮತ್ತೆ ಜನರಿಗೆಲ್ಲ" ಎಂಬ ನಿರ್ಣಯಕ್ಕೆ ಬಂದಿದ್ದ. ಕಾರಣ "ಕಾಲು-ಕೈಯ ಮಣಿಸಿ, ಗಾಳಿ ತುಂಬೆ ಹಿಡಿದು ನೆಲಕೆ ಮಣಿದು ಮತ್ತೆ ನೀಟ ನಿಲುವ, ಆಸನಾದಿ ವಿದ್ಯೆ ಅಭ್ಯಾಸವಿದ್ಯೆಯಷ್ಟೇ" ಎಂದು ಖಚಿತಪಡಿಸಿಕೊಂಡು. "ರಾಜಯೋಗಿ ಮಹಿಮೆ, ರಾಜಯೋಗಿಯರಿವ, ಇತರ ಜನರಿಗೆಲ್ಲ ಏನು ಗೊತ್ತು ? ತಾನು ದೇವನಾಗಿ, ದೈವವಳಿಯಬಹುದು" ಎಂಬ ಅನುಭವವಾಣಿಯನ್ನು ಅನುಭವಿಸಲು ನಿಶ್ಚಯಮಾಡಿದನು.

"ಗುರುಗಳೇ, ರಾಜಯೋಗದ ಅಷ್ಟಾಂಗ ವಿಧಗಳನ್ನು ಇಂದು ವಿವರಿಸುವುದಾಗಿ ನಿನ್ನೆ ಹೇಳಿದ್ದಿರಿ....."ಎಂದ; ತನ್ನ ಹಾದಿಯ ಪರಿಚಯ ಪಡೆಯಲು ಉತ್ಸುಕನಾಗಿದ್ದ.

"ಅಹುದು. ಪತಂಜಲಿ ಸೂತ್ರದನ್ವಯ ರಾಜಯೋಗವನ್ನು ಅಷ್ಟಾಂಗವಾಗಿ ಬಣ್ಣಿಸಬಹುದು.

"ಯಮ ನಿಯಮಾಸನ-ಪ್ರಾಣಾಯಾಮ-ಪ್ರತ್ಯಾಹಾರ
ಧಾರಣಾ-ಧ್ಯಾನ-ಸಮಾಧಯೋಽಷ್ಟಾವಂಗಾನಿ||"

ಯಮಗಳೆಂದರೆ ಅಹಿಂಸೆ, ಸತ್ಯ ಅಸ್ತೇಯ,ಬ್ರಹ್ಮಚರ್ಯ,ಅಪರಿಗ್ರಹ,ಸಹನೆ,ದಯೆ, ಸಂರಕ್ಷಣೆ ಸರಳತೆ, ಶುದ್ಧಿ, ಎಂಬ ಹತ್ತು.

ನಿಯಮಗಳೆಂದರೆ, ಶುಚಿ, ತೃಪ್ತಿ, ತಪಸ್ಸು, ಅಧ್ಯಯನ, ಈಶ್ವರನಲ್ಲಿ ಶರಣಾಗತಿ, ಆತ್ಮವಿಶ್ವಾಸ ದಾನ,ವಿವೇಕ, ವಿನಯ, ಆತ್ಮ ನಿರೀಕ್ಷಣೆ, ಎಂಬ ಹತ್ತು.

ಆಸನವೆಂದರೆ ವಿಚಾರಿಸಲು ಅನುಕೂಲವಾಗುವಂಥ ಒಂದು ಸ್ಥಿತಿ. ಅನಂತರ ನಾಡಿಗಳ ಶುದ್ಧಿ.

ಆ ಮೇಲೆ ಪ್ರಾಣಾಯಾಮ. ಬಹು ಮುಖ್ಯ ಘಟ್ಟ. ಪ್ರಾಣಾಯಾಮವೆಂದರೆ, ಉಸಿರಾಡಿಸುವುದೆಂದು ಅರ್ಥವಲ್ಲ. ಆದರೆ ಶ್ವಾಶಕೋಶಗಳನ್ನು ಚಲಿಸುವಂತೆ ಮಾಡುವ ಮಾಂಸಖಂಡಗಳನ್ನು ಸ್ವಾಧೀನಕ್ಕೆ ಸರಿಯಾಗಿ ತರುವುದೇ ಆಗಿದೆ. ಆ ಶಕ್ತಿ, ನರಗಳ ಮೂಲಕ ಮಾಂಸಖಂಡಕ್ಕೆ ಹೋಗಿ, ಅಲ್ಲಿಂದ ಶ್ವಾಸಕೋಶಗಳಿಗೆ ಹೋಗಿ, ಚಲಿಸುವಂತೆ ಮಾಡುವುದೇ ಪ್ರಾಣ. ಈ ಚಲನೆಗೂ ಉಸಿರಿಗೂ ಸಂಬಂಧವಿದೆ. ನಿಜವಾಗಿ ನೋಡಿದರೆ ಪ್ರಾಣಕ್ರಿಯೆಯೇ ಉಸಿರಾಟಕ್ಕೆ ಮೂಲ. ಉಸಿರಾಟ ಪ್ರಾಣಕ್ಕೆ ಮೂಲವಲ್ಲ; ಪ್ರಾಣ ನಿಗ್ರಹವು ಪ್ರಾಣಾಯಾಮ.

ಪ್ರತ್ಯಾಹಾರವೆಂದರೆ ಮನಸ್ಸನ್ನು ಏಕಾಗ್ರಗೊಳಿಸುವುದು. ಹೊರಗೆ ಹೋಗುವ ಸ್ವಭಾವವುಳ್ಳ ಮನಸ್ಸನ್ನು ತಡೆಯುವುದು. ಇಂದ್ರಿಯಗಳ ಬಂಧನದಿಂದ ಅದನ್ನು ಬಿಡಿಸುವುದು. ನಾವು ಇದನ್ನು ಸಾಧಿಸಿದಾಗ ಮಾತ್ರ ನಮ್ಮಲ್ಲಿ ಶೀಲ ನೆಲೆಸುವುದು.

ಚಿತ್ತ ಅಥವಾ ಮನಸ್ಸು ದೇಹದ ಒಂದು ಭಾಗದ ಮೇಲೆ ನಿಂತಾಗ ಅದಕ್ಕೆ ಧಾರಣ ಎಂದು ಹೆಸರು. ಹೃದಯದ ಯಾವುದೋ ಒಂದು ಭಾಗದ ಮೇಲೆ ಮನಸ್ಸು ನಿಲ್ಲಿಸಬೇಕಾದಾಗ ಅಲ್ಲಿ ಕಮಲದ ಚಿತ್ರ ಕಲ್ಪಿಸಿಕೊಳ್ಳುವುದು ಒಳ್ಳೆದು. ಇದರಿಂದ ಸಾಧನೆ ಹಗುರಾಗುವುದು.

ಇನ್ನು ಧ್ಯಾನವೆಂದರೇನು? ಕೆಲವು ಆಂತರಿಕ ಇಲ್ಲವೆ ಅವಶ್ಯ ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವ ಅಭ್ಯಾಸ ಮಾಡಿದ ಮೇಲೆ ಗುರಿಯ ಕಡೆಗೆ ಹರಿಯುವ ಶಕ್ತಿ ಮನಸ್ಸಿಗೆ ಬರುತ್ತದೆ. ಈ ಸ್ಥಿತಿಗೆ ಧ್ಯಾನವೆನ್ನುವರು.

ಬಾಹ್ಯ ಇಂದ್ರಿಯ ಗ್ರಹಣವನ್ನು ತ್ಯಜಿಸುವಷ್ಟು ಮನಸ್ಸನ್ನು ಧ್ಯಾನದಲ್ಲಿ ಏಕಾಗ್ರ ಮಾಡಿ, ಅವರ ಅಂತರಂಗ ಅಥವಾ ಅರ್ಥದ ಭಾಗದಮೇಲೆ ಧ್ಯಾನಿಸಿದರೆ,ಅದನ್ನು ಸಮಾಧಿ ಎನ್ನುವರು. ಸಮಾಧಿ ಅತೀಂದ್ರಿಯಾವಸ್ಥೆ ನಮ್ಮ ಅರಿವಿನಾಚೆಯ ಸ್ಥಿತಿ. ಇಲ್ಲಿ ಅಹಂಕಾರ ಇರುವದಿಲ್ಲ. ಇದೇ ರೀತಿ ದೀರ್ಘ ನಿದ್ರೆಯಾವಸ್ಥೆಯಲ್ಲಿಯೂ ಅಹಂಕಾರವಿರು

ವುದಿಲ್ಲ. ದೀರ್ಘ ನಿದ್ರೆ ಹೋಗಿ ಎಚ್ಚತ್ತವನು, ತಾನುಪೂರ್ವದಲ್ಲಿ ಇದ್ದ ಸ್ಥಿತಿಗೇ ಮರಳುತ್ತಾನೆ. ಸಮಾಧಿಗೆ ಹೋದವನು ಮರಳಿದಾಗ ಮೂಢನಿದ್ದವನು ಜ್ಞಾನಿಯಾಗಿರುತ್ತಾನೆ ಈ ಪರಿಣಾಮ ವರ್ತನದಿಂದ ಸ್ವಪ್ನ–ಸಮಾಧಿಗಳನ್ನು ಗುರುತಿಸಬಹುದು.

ಮೆಟ್ಟಲು ತಿಳಿಸಬಹುದು. ಮೆಟ್ಟಲೇರುವ ಅನುಭವ, ಮೆಟ್ಟಲೇರಿದಾಗ ಆಗುವ ಆನಂದ ಬಣ್ಣಿಸಲಸದಳ. " ಎಂದು ಲಂಭಿಕಾಯೋಗಿ ಕಣ್ಣುಮುಚ್ಚಿಕೊಂಡರು. ಹತ್ತು ನಿಮಿಷಗಳ ನಂತರ ಅವರು ಕಣ್ಣು ತೆರೆದಾಗ ಅವು ಕಾಂತಿಪೂರ್ಣವಾಗಿದ್ದವು. ಎದುರಿಗಿದ್ದ ವೇಮನನ ತಲೆಯಮೇಲೆ ಕರವಿಟ್ಟು ಕಿವಿಯಲ್ಲಿ 'ಓಂ' ಎಂದು ಪ್ರಣವ ಮಂತ್ರೋಚ್ಚಾರಣೆ ಹೇಳಿದರು. ನೇರವಾಗಿ ಕುಳಿತುಕೊಂಡು ಮೂಗಿನ ಕೊನೆಯ ಮೇಲೆ ನೋಡಿ ಶ್ವಾಸ—ಉಚ್ಛ್ವಾಸಗಳನ್ನು ಪ್ರಣವದೊಂದಿಗೆ ಮೇಳವಿಸಿ ಮುಂದಾಗಲು ತಿಳಿಸಿದರು. ಮಾರ್ಗದರ್ಶನ ಪಡೆಯಲು ಬಂದು ಹೋಗಬಹುದೆಂದು ಹೇಳಿದ್ದರು. ಆಶೀರ್ವಾದ ಪಡೆದು, ವೇಮನ ಹೂದೋಟ ದಾಟಿ ಬಂದ.

ಕವಲುದಾರಿಯಲ್ಲಿ.....

ಯಮ ನಿಯಮ ಸಾಧನೆಗಳು ಮನೋನಿಗ್ರಹದ ಮೊದಲು ಮೆಟ್ಟಲು. ಇವುಗಳನ್ನು ಸಾಧಿಸುವುದು ಜೀವನದಲ್ಲಿ; ಪ್ರಪಂಚದ ವ್ಯವಹಾರದಲ್ಲಿ; ನಿತ್ಯ ಜೀವನದಲ್ಲಿ ಹಿಂಸೆ ಮಾಡದೆ, ಹುಸಿಯ ನುಡಿಯದೆ, ಕಳವು ಮಾಡದೆ, ಕಾಯಾ ವಾಚಾ ಮನಾಸಾ ಇಂದ್ರಿಯ ಸುಖ ಭೋಗವೆಳಸದೆ, ಪರೆವಸ್ತು ಸ್ವೀಕರಿಸದೆ, ಅಸಹ್ಯ ಪಡದೆ ಇರುವ ಶುದ್ಧ ಜೀವನ ಸಾಗಿಸುವುದನ್ನು ಕಲಿಯಲು ಅಡವಿವಾಸ ಬೇಕಾಗಿರಲಿಲ್ಲ. ತೀರ್ಥಯಾತ್ರೆಯ ಅಗತ್ಯವಿರಲಿಲ್ಲ. ಜಾತಿಕಟ್ಟಿನ ಬಂಧನವಿರಲಿಲ್ಲ. ಶಿಲೆಗೆ ಶರಣೆನ್ನಬೇಕಾಗಿರಲಿಲ್ಲ. ಮಣಿಯನೆಣಿಸಬೇಕಾಗಿರಲಿಲ್ಲ. ದಾರ ಕಟ್ಟಬೇಕಾಗಿರಲಿಲ್ಲ. ಮತ್ತು ದೀಕ್ಷೆ ಹೊಂದಬೇಕಾಗಿರಲಿಲ್ಲ. ಬೂದಿ ಬಳಿಯಬೇಕಾಗಿರಲಿಲ್ಲ. ಗಂಧ ತೊಡೆಯಬೇಕಾಗಿರಲಿಲ್ಲ. ಮೈ ಶುದ್ಧ, ಮನ ಶುದ್ಧ ಅಂತರಂಗ ಶುದ್ಧ, ಬಹಿರಂಗ ಶುದ್ಧವಾಗಬೇಕಿತ್ತು. ನಿರ್ಮಲವಾಗಬೇಕಿತ್ತು. ವೇಮನ ತುಂಬಾ ಮೆಚ್ಚಿಕೊಂಡ. ಈ ಜೀವನ ನಡೆಸಿ ಯಶಸ್ವಿಯಾಗಬೇಕು; ಯೋಗ ಜೀವನದಲ್ಲಿ ಒಂದು ಮಹತ್ಸಾಧನೆ, ಎಂದು ಅರಿತುಕೊಂಡ.

ಅಚ್ಚರಿಯವಿಷಯವೆಂದರೆ, ಲಂಭಿಕಾಯೋಗಿಗಳು ವೇಮನನಿಗೆ ಬಂಗಾರು ತಯಾರಿಸುವ ವಿದ್ಯೆಯನ್ನು ಅವನ ವಾಸ್ತವ್ಯ ಕಾಲದಲ್ಲಿ ಹೇಳಿಕೊಟ್ಟಿದ್ದರು. ಧನ ಕನಕ ಇರುವಾಗ, ಬರುವಾಗ ಯಮನಿಯಮ ಸಾಧಿಸುವುದೆಂತು ? ಎಂಬುದನ್ನು ಬಾಳಿ ತೋರಿಸಬೇಕು. ಅದು ಸ್ವಂತಕ್ಕೆ ಸಾಧನೆ. ಇತರರಿಗೆ ದಾರಿದೀಪ, ಎಂದೂ ಹೇಳಿದ್ದರು.

ರಾಚಕೊಂಡದ ಬೆಟ್ಟದಡಿಯ ಗುಡಿಸಲು ಬಿಟ್ಟು ವೇಮನ ರಾಜಮಹೇಂದ್ರಿಗೆ ತಿರುಗದೆ ಕೊಂಡವೀಡುವಿಗೆ ಬಂದ. ರಾಜವಾಡೆಯ ಆಚೆಗಿರುವ ದೇವಾಲಯ ಮುಂದಿರಗಳ ತಾಣದಿಂದಾಚೆ, ಪ್ರಶಾಂತ ಪ್ರದೇಶದಲ್ಲಿ ಕೆರೆಯ ದಂಡೆಯ ಮೇಲೆ, ಹುಣಸಿ ಮರದಡಿಯಲ್ಲಿ

ಗುಡಿಸಲು ಹಾಕಿಕೊಂಡ. ಎದುರು ಬೀಳು ಭೂಮಿಯಿತ್ತು. ಸ್ವಾರ್ಜಿತವನ್ನೇ ಭೋಗಿಸಬೇಕೆಂಬ ಗುರುವಿನ ಉಪದೇಶವಿತ್ತು. ಭೂಮಿಯನ್ನು ಹದಗೊಳಿಸಲು ಆಣಿಯಾದ. ಕೆಲ ಹಾದಿಹೋಕರು ಏಕಾಕಿಯ ಪ್ರಯತ್ನ ಕಂಡು ನಕ್ಕರು. ಕೆಲ ರೈತ ಜನರು ಸಮಯ ಸಿಕ್ಕಾಗ ಸಹಕರಿಸಿದರು. ವೇಮನ ಅವರಿಗೆ ಕಥೆ ಹೇಳುತ್ತಿದ್ದ. ಜನ ಒಬ್ಬೊಬ್ಬರಾಗಿ ಅಲ್ಲಲ್ಲಿ ಕುಂಬಳ ಸವತೆಬಳ್ಳಿ ಬೆಳೆಸಿದ್ದ. ಉಳಿದೆಡೆ ಗದ್ದೆಮಾಡಿ, ನೀರು ಹಾಯಿಸಿ, ಭತ್ತದ ಸಸಿ ಊರಿದ. ' ಪೈರು ನೆಡುವ ಸಂತಸವೆಷ್ಟು.' ' ಪೈರು ನೆಡುವವನು ಬೆಳೆಯ ಫಲ ಪಡೆಯನೇ ? ' ಪೈರು ಚೆನ್ನಾಗಿಯೇ ಬಂತು. ಉಂಡು ಉಣಿಸುವಷ್ಟಾಯಿತು "ಉಣ್ಣುವ ಬಾನದೊಳು ಇನಿತು ದೈವಕೆಡಲು ಪುಣ್ಯ ಲೋಕಕವನು ಹೋಗುತಿಪ್ಪ. ಅನ್ನದಾನಕ್ಕಿಂತ ಮಿನ್ನ ದಾನವಿಲ್ಲ " ಎಂದು ಎಲ್ಲರಿಗೂ ತಿಳಿಸುತ್ತಿದ್ದ. ಮಳೆಯು ಬರುವುದು ತಡವಾದೊಡನೆ ರೈತ ಬಂಧುಗಳು ದೇವರಿಗೆ ಶಾಂತಿ ಮಾಡಬೇಕು. ಅಮ್ಮನಿಗೆ ಕುರಿಯ ನೈವೇದ್ಯ ಸಲ್ಲಿಸಬೇಕು ಎನ್ನುತ್ತಿದ್ದರು. ರಾಜವಾಡೆಯಲ್ಲಿ ವೈದಿಕ ಬ್ರಾಹ್ಮಣರು ಯಜ್ಞ ನಡೆಸಿ ತುಪ್ಪ ಸುಟ್ಟು, ಹೊಗೆ ಮೇಲೆ ಕಳಿಸಿ ' ಮೋಡವಾಗಿಸಿ ಮಳೆ ಸುರಿಸು ' ಎಂದು ಇಂದ್ರದೇವನನ್ನು ಕುರಿತು ಪ್ರಾರ್ಥಿಸಿ, ಉಂಡು ಮಲಗುತ್ತಿದ್ದರು. ಆದರೆ ವೇಮನನಾದರೋ "ಮಳೆಯುಬೀಳುವಂದ ಹರಣ ತೊಲಗುವಂದ, ತಿಳಿಯಲಾರ ಘನನೆ ಆದೊಡೇನು? ತಿಳಿಯಲಾಗ ಮತ್ತೆ ಕಲಿಯುಗವಿಹುದೆಂತು?'ಎಂದು ತಿಳಿಹೇಳುತ್ತಿದ್ದ. ಊಟ-ಉಪಚಾರದ ಮಾತು ಬಂದಾಗ, " ಅಡುಗೆ ಚೆನ್ನಾಗಿರೆ, ಅಮೃತದಂತೆ ಅಹುದು; ಬೇಯಿಸಲು ತಪ್ಪಿದರಡುಗೆ ವಿಷವೆನಿಪುದು; ಸಾರು ಇಲ್ಲದೂಟ ಶ್ವಾನಕೆಟ್ಟ ಊಟ " ಎಂದು ಆರೋಗ್ಯ ಕಾಪಾಡಿಕೊಳ್ಳುವ ಹಿತವಚನ ಹೇಳುತ್ತಿದ್ದ. ಊಟದ ನಂತರ ಎಲೆಯಡಿಕೆ ಜಿಗಿಯುತ್ತ "ಬಾಯಿ ಕೊಳೆಯನೆಲ್ಲ ಮಾಯ ಮಾಡಲಿಕ್ಕೆ, ಆಡಿಕೆ ಸಣ್ಣ ಎಲೆಯು ಪರಮೌಷಧ; ಮೆಲ್ಲದಿರಲು ಆಗ ಒಳ್ಳಿತಲ್ಲ ಕಾಣು " ಎಂದು ತಿಳಿಸಿ ಹೇಳಿ, ಆಯುರ್ವೇದದ ಹಲವಾರು ಸಲಹೆ ಸೂಚನೆಗಳನ್ನು ನಮಗರಿಯದಂತೆ ನಾವು ಅನುಸರಿಸುವುದನ್ನು ಕುರಿತು ವಿವರಿಸುತ್ತಿದ್ದ. ಹೂವಿರುವಲ್ಲಿ ಹುಡುಕಿಕೊಂಡು ಬರುತ್ತದೆ ತುಂಬಿ. ಒಳ್ಳೆಯದನ್ನು ಕಂಡು ಜನ ಬಂದು ಸೇರತೊಡಗಿದರು.

ಈ ಮಧ್ಯೆ ಇನ್ನೊಂದು ಸಂಗತಿ ನಡೆಯಿತು. ಕೊಂಡವೀಡುವಿನ ಸುತ್ತು ಮುತ್ತಿನ ಪ್ರದೇಶದಲ್ಲಿ ದಯೆ ಧರ್ಮದಿಂದ ಜೀವಿಸಿ, ಒಕ್ಕಲುತನ ಮಾಡುತ್ತಿದ್ದ ಕಾಪು (ಒಕ್ಕಲಿಗ) ಜನರು ತಮ್ಮ ಹೊಲ ಉತ್ತುವಾಗ, ಬಿತ್ತುವಾಗ, ಬಂಗಾರದ ಘಟ್ಟಿಗಳು ದೊರೆಯಹತ್ತಿದ್ದವು. ಆಳು ಬಿಡಿಸಿ ಒಡೆಯರೇ ಸಾಗುವಳಿ ಮಾಡಹತ್ತಿದ್ದರು. ಬಂಗಾರ ಬೇರೆಯವರ ಕೈಗೆ ಹೋಗಬಾರದೆಂದು. ಸಾಗುವಳಿ ಹಚ್ಚಿದಂತೆಲ್ಲ ಬೆಳೆಯು ಹೆಚ್ಚಾಗುತ್ತ ನಡೆಯಿತು. ಸಮೃದ್ಧಿ ತಲೆದೋರಿತು. ಆನೇಗೊಂದಿಯ (ವಿಜಯನಗರದ) ರಾಜ್ಯದಲ್ಲಿ ವಿದ್ಯಾರಣ್ಯ ಬಿರುವದಾಂಕಿತ ಶೃಂಗೇರಿಮಠದ ಮಾಧವಾಚಾರ್ಯರೂ ಸ್ವರ್ಣವಿದ್ಯೆ ತಿಳಿದು ಎಲ್ಲರೆ ಒಳಿತಿಗೆ ಉಪಯೋಗಿಸಿದ್ದರು. ನೆರೆಯ ರಾಜ್ಯವಾದ ಕೊಂಡವೀಡುವಿನಲ್ಲಿ ಈ ಚಮತ್ಕೃತಿ ನಡೆದುದು, ಎಲ್ಲರ ಲಕ್ಷ್ಯಸೆಳೆಯಿತು.

' ಬಿಟ್ಟ ಕೆಲಸವನ್ನೆಂದೂ ಮಾಡಬಾರದು ' ಎಂದು ವೇಮನ ಬೋಧಿಸುತ್ತಿದ್ದ. ಇದರಿಂದ ದಾಸ್ಯಭಾವ ಬೆಳೆದು ಸ್ವಾಭಿಮಾನ ಶೂನ್ಯತೆ ಹುಟ್ಟುತ್ತದೆ. ತನ್ನೊಡನೆ ಸಹಕರಿಸಿ

ಕಾರ್ಯಮಾಡಿದ ರೈತಬಂಧುಗಳಿಗೆ ಅಲ್ಲಿ ಬೆಳೆದ ಸವತೆ ಕುಂಬಳಕಾಯಿಗಳನ್ನೇ ಹಂಚಿ ಕೊಡುತ್ತಿದ್ದ. ಇವನು ಕೊಟ್ಟ ಕುಂಬಳಕಾಯಿಗಳಲ್ಲಿ ಬಂಗಾರದ ತುಂಡು ಇರುವುದನ್ನು ಕೆಲವರು ಕಂಡುಕೊಂಡರು. ಇದು ಇವನ ಮಹಿಮೆ ಎಂದುಕೊಂಡರು; ಕೆಲವರು. ಆಳುವ ಗಜಪತಿರಾಯರು ಯುದ್ಧ ಬೇಗೆಯಲ್ಲಿ ಬಹುದಿನದಿಂದ ಬಳಲಿದ ಜನರನ್ನು ಸುಲಿಯುತ್ತ, "ಮತ್ತ ಗಜಪತಿದೊರೆ ಮತ್ತೆ ರಣದ ಹದ್ದು" ಎನ್ನಿಸಿದ್ದ. ದೊರೆ ಕ್ರೂರನಾಗಿದ್ದ. ಚಂಚಲ ಮತಿಯಾಗಿದ್ದ. "ಪ್ರಭುವು ಕೋತಿ ಎನಿಸೆ, ಮಂತ್ರಿ ಹಂದಿಯೆನಿಪ; ಯೋಧರೆಲ್ಲ ಪಕ್ಷಿ; ಪಶುವು ಸೇನೆ; ಅನೆ ಕುದುರೆ ತಾವು ಬೆಕ್ಕು ಇಲಿಗಳಂತೆ" ರಾಜ್ಯದ ಸ್ಥಿತಿಯಾಗಿತ್ತು. ಭೂಮಿಯಲ್ಲಿ ಬಂಗಾರ ಸಿಗುವುದನ್ನು ಕಂಡ ರಾಜಮಂಡಲದವರು, ಭೂಮಿ ರಾಜನ ಸೊತ್ತು;ಅದರಲ್ಲಿ ಸಿಕ್ಕ ಧನ-ಕನಕ ಮರಳಿಸಬೇಕೆಂದು ಪೀಡೆ ಕೊಡತೊಡಗಿದರು. "ಭೂಮಿ ತನ್ನದೆನಲು, ಭೂಮಿ ನಗುವುದಲ್ಲ ! " ಎಂದು ಯಾರ ಅಪ್ಪಣೆಯೂ ಇಲ್ಲದೆ ಫಲ ನೀಡುವ ಭೂಮಿಯನ್ನು ನೋಡಿ ನುಡಿದನು. "ವಸುಧೆ ಯಾಳುವವನು, ವಿಶ್ವೇಶ್ವರನಿರಲು, ತಾನು ಪ್ರಭುವೆಂದು, ತಾಮಸೇಕೆ ? ಅಡವಿಯೊಳಿಹ ಮಂಗ ಪೊಡವಿಯನಾಳುವುದೆ ?» ಎಂದು ರಾಜಮಂಡಲಕ್ಕೆ ಅಧಿಕಾರ ಚಪಲದಿಂದ ಆಳುವ ದೃಷ್ಟಿ ಇರದೆ, ಆಳಾಗಿಹುವ ದೃಷ್ಟಿ ಇರಬೇಕೆಂದು ತಿಳಿಸಿದನು.

ಈ ಮಧ್ಯೆ, ರಾಜಮಹೇಂದ್ರದಲ್ಲಿ ಪವಾಡ ನಡೆದ ಘಟನೆ ಬಂದಿತು. ಯಾವನೋ ಒಬ್ಬ ತಾಂತ್ರಿಕ, ರಾಣಿ ಅನತಲ್ಲಿಯ ಹಸ್ತದಲ್ಲಿ ಉಸುಗು ನೀಡಿ, ಅದನ್ನೇ ಬಿತ್ತುವಂತೆ ಹೇಳಿ, ಬಂಗಾರದ ತೆನೆ ಈಯುವುದು ಎಂದು ಹೇಳಿದ್ದ. ಉಸುಗು ಬಿತ್ತಿದಳು ತಾಯಿ. ಮೊಳಕೆ ನಾಟಿತು. ಎಲ್ಲರಿಗೂ ಅಚ್ಚರಿ! ಅನತಲ್ಲಿ ಕೊಂಡವೀಡುವಿನ ವಂಶದ ಮೊಮ್ಮಗಳಷ್ಟೇ. ಕೊಂಡವೀಡು ಜನ ಅಭಿಮಾನಪಟ್ಟರು. ರೈತ ಬಂಧುಗಳು ವೇಮನನಿಗೆ ಸುದ್ದಿ ಮುಟ್ಟಿಸಿದರು. ವೇಮನನ ಹೆಸರು ಗೊತ್ತಿರದ ಅವರಿಗೆ ಅವನು 'ಕಾಪು ಅನ್ನ' ಎನ್ನಿಸಿದ್ದ. ವೇಮನ ಪವಾಡ ಘಟನೆ ಕೇಳಿ, ನಸುನಕ್ಕ. ಯಾವನೋ ತಾಂತ್ರಿಕನ ಮಂತ್ರ ಮಾಯೆಯಷ್ಟೇ! "ಉಸುಗು ಬಿತ್ತಲೇನು, ಉಂಟು ಲಾಭವೆಮಗೆ? ಅಂತೆ ಧಾನ್ಯ ಬಿತ್ತೆ, ಅದುವೆ ಯುಕ್ತ; ಘನರ ಗುಣದ ಕುಂದು ಗಣನೆ ಮಾಡಬೇಡ" ಕಾಳನ್ನೇ ಉಸುಗು ಕಣವಾಗಿ ಕಾಣಿಸುವಂತೆ ನಡೆಸಿದ ಸಂಮ್ಮೋಹನ ವಿದ್ಯೆಯಷ್ಟೇ. ಆ ಬಗ್ಗೆ ಜೆರ್ಜೆಯೇಕೆ ? ಮೂಢ ನಂಬುಗೆಯಿಂದ ಮುಂದಾಗುವ ಅನರ್ಥಗಳನ್ನು ಖಂಡಿಸಿ ಯುಕ್ತಿಯಿಂದ ವಿಚಾರಿಸಬೇಕು, ಎಂದು ಎಲ್ಲರಿಗೂ ತಿಳಿಹೇಳಿದನು.

" ಎಲ್ಲ ಮನಸ್ಸಿನ ಭ್ರಾಂತಿ " ಎಂದರು, ಒಕ್ಕಲಿಗ ಬಂಧುಗಳು.

" ಭ್ರಾಂತಿ ತೊಲಗಲು ಶಾಂತಿ " ಎಂದ ವೇಮನ.

ವೇಮನ ಈ ಮಧ್ಯೆ ಎರಡು ಬಾರಿ ರಾಜಕೊಂಡದ ಬೆಟ್ಟದೂರಿಗೆ ಹೋಗಿ ಲಂಭಿಕಾ. ಯೋಗಿಗಳಿಂದ ಮುಂದಿನ ಸಾಧನ ಮಾರ್ಗ ತಿಳಿದು ಬಂದಿದ್ದರು. ಈ ಸಲ ಪುನಃ ಬಂದಾಗ

ಲಂಭಿಕಾ ಯೋಗಿ ನಡೆದ ಘಟನೆಗಳನ್ನೆಲ್ಲ ಕೇಳಿದರು. ವೇಮನ ಪ್ರಪಂಚದ ಮಡುವಿನಲ್ಲಿ ಕೆಸರು ಹತ್ತದೆ, ಬೆಳೆದು ಅರಳಿದ ಕಮಲವಾಗಿದ್ದ. ಅವನು ಯಮನಿಯಮ ಸಾಧನೆಯಲ್ಲಿ ಬಹುದೂರ ಹೋದುದನ್ನು ಗುರುತಿಸಿದರು. ಪ್ರಾಣಾಯಾಮದ ಬಗ್ಗೆ ಇನ್ನೂ ವಿವರ, ತಿಳಿಸಬೇಕಾಗಿತ್ತು. ತತ್ಪೂರ್ವದಲ್ಲಿ ಕುಶಲ ಸಂಭಾಷಣೆಗಿಳಿದರು.

" ವೇಮನ, ಸ್ವರ್ಣಾಕರ್ಷಣೆಯನ್ನು ನೀನು ಅತಿಕ್ರಮಿಸಿದ್ದು ನಿಜವಾದ ಮೇಲು ಗುಣದ ಸೂಚನೆ " ಎಂದರು ಲಂಭಿಕಾ ಯೋಗಿ.

" ಗುರುಗಳೇ, ' ಕಮಲಯನೆ ಕಂಡು, ಕನಕದೊಡವೆ ಕಂಡು ದಿಮ್ಮಿನುವುದು ತಿಳಿವಿಗೆಲ್ಲ ' ಅಂದಮೇಲೆ ' ಮನುಜರೆಲ್ಲ ತತ್ತ್ವ ಮಹಿಮೆಯೆಂತರಿವರು ? ' " ಪ್ರಶ್ನಿಸಿದ ವೇಮನ.

" ಬಂಗಾರ ನೋಡುತ, ಭಾಮೆಯರ ನೋಡುತ, ಮನಸಿನಲ್ಲಿ ಚಿಂತೆ ಮಾಡದವನು, ಅವನೆ ಪರಮಯೋಗಿ; ಅವನಿಯಲಿ ಬಣ್ಣಿಸೆ "

" ಇಂಥ ಸ್ವರ್ಣ ವಿದ್ಯೆಯು ತುರ್ತು ಒಳ್ಳೆಯ ಫಲ ನೀಡಿದರೂ ಅದರ ಮೇಲಿನ ನಂಬುಗೆಯು ಇತರರನ್ನು ದೀರ್ಘಕಾಲ ಚಿಂತೆಗೀಡು ಮಾಡುವದಲ್ಲವೇ? "

" ಹೌದು ವೇಮನ. ಇಂಥ ವಿದ್ಯೆಯನ್ನು ಒಳಿತಿಗೆ ಬಳಸುವವರು ಅತಿ ವಿರಳ. ಕೆಡುಕಿಗೆ ಬಳಸಿ ಕೆಟ್ಟು ಹೋಗುವರು. " ಹೊನ್ನುಗೆಯ್ಯುವ ವಿದ್ಯೆ ಹೊಳೆದ ಮನುಜರೆಲ್ಲ, ವ್ಯಥೆ ಪಡುವರಂಥ ವಿದ್ಯೆಯಿಂದ; ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ' ಅಲ್ಲವೆ ? ಆದರೆ ಒಂದು ಮಾತು ಮಾತ್ರ ನಿಜ. ಈ ವಿದ್ಯೆಯನ್ನು ಒಳಿತಿಗಾಗಿ ಬಳಸಿದರೆ, ' ಹಾಯಾಗಿರೆ ಇಹದಿ, ಹೇಮಕಾರಕ ವಿದ್ಯೆ. ಪರದಲ್ಲಿ ಸುಖಿಸಲು, ಬ್ರಹ್ಮ ವಿದ್ಯೆ. ಅನ ವಿದ್ಯೆಯೆಲ್ಲ, ಅಂತೆ ನಿಷ್ಫಲವದು' ಎಂದು ಮನಗಾಣಬಹುದು. ಇದರಲ್ಲಿ ತೊಡಕಿಕೊಳ್ಳದ್ದೆ ಪಾರುಗಾಣುವವರು ಮಾತ್ರ ಬಹು ಮುಂದೆ ಹೋಗುವರು. ಆ ಸಾಲಿನಲ್ಲಿ ನೀನು ಸ್ಥಾನ ಪಡೆದಿದ್ದು, ಹೆಮ್ಮೆಯ ಮಾತು" ಎಂದು ಬೆನ್ನು ತಟ್ಟಿದರು.

"ತಾವು ನೀಡಿದ ಶಿಕ್ಷಣದ ಫಲ" ಎಂದು ಸವಿನಯದಿಂದ ಶಿರಬಾಗಿದ ವೇಮನ.

"ಹಾಂ. ಪ್ರಾಣಾಯಾಮ ಕುರಿತು ಹೇಳುವೆನೆಂದೆನಲ್ಲ ! "

"ಹೌದು ಗುರುಗಳೇ,"

"ಸ್ಥೂಲ ಪರಿಚಯ ನಿನಗೆ ಆಗಿದೆ. ಈಗ ಮುಂದುವರಿಯುವ ಮೊದಲು ದೇಹ ರಚನೆ ಮತ್ತು ಬಗ್ಗೆ ಯೋಗಿಯ ಭಾವನೆಯನ್ನು ತಿಳಿಯಬೇಕು. ನಮ್ಮ ಬೆನ್ನುಮೂಳೆ ಪೋಣಿಸಿದ ಜೋಡಿ ಮಣಿಗಳನ್ನು ಒಂದರ ಮೇಲೊಂದರಂತೆ 'ಅಡಕಲ' ಒಟ್ಟಿದಂತಿದೆ. ಇದರ ಎಡದ

ಭಾಗ 'ಇಡ',ಬಲದ ಭಾಗ'ಪಿಂಗಳ'.ಮಧ್ಯ ಟೊಳ್ಳು'ಸುಷುಮ್ನಾ ಕಾಲುವೆ'. ಈ ಕಾಲುವೆ ಗುದಸ್ಥಾನದ ವರೆಗೆ ಹೋಗುವದು. ಇಲ್ಲಿರುವ ಗ್ರಂಥಿಗಳು,ಯೋಗ ಭಾಷೆಯಲ್ಲಿ,ಕಮಲದ ಹೋಲಿಕೆಯೊಂದಿಗೆ ಗ್ರಹಿಸಲ್ಪಡುತ್ತವೆ. ಗುದಸ್ಥಾನದಲ್ಲಿರುವ ಮೂಲಾಧಾರ ಚಕ್ರ; ನಾಲ್ಕು ದಳದ ಕಮಲ; ಅದರ ಮೇಲೆ ಮತ್ತು ನಾಭಿಯ ಕೆಳಗೆ ಮರ್ಮಸ್ಥಾನದಲ್ಲಿರುವ ಸ್ವಾಧಿಷ್ಟ ಚಕ್ರ; ಆರು ದಳದ ಕಮಲ. ನಾಭಿಯಲ್ಲಿರುವ ಮಣಿಪೂರಕ ಚಕ್ರ; ಹತ್ತು ದಳದ ಕಮಲ. ಹೃದಯದಲ್ಲಿರುವ ಅನಾಹತ ಚಕ್ರ; ಹನ್ನೆರಡು ದಳದ ಕಮಲ. ಕಂಠ ಭಾಗದಲ್ಲಿರುವ ವಿಶುದ್ಧ ಚಕ್ರ, ಹದಿನಾರು ದಳದ ಕಮಲ. ಭ್ರೂಮಧ್ಯದಲ್ಲಿರುವ ಆಜ್ಞೇಯ ಚಕ್ರ; ಎರಡು ದಳದ ಕಮಲ. ಮತ್ತು ಬ್ರಹ್ಮ ರಂಧ್ರದಲ್ಲಿರುವ ಸಹಸ್ರಾರು ಚಕ್ರ; ಸಹಸ್ರ ದಳದ ಕಮಲ. ಈ ರೀತಿ "ಆರು ತೊಲೆಗೆ ತಾನು ಆಧಾರವಿಹಪರಿ, ಒಂದು ಕಂಭ ಗೃಹದಿ ಒಪ್ಪನಿಲಿಸಿ, ಒಬ್ಬ ಕರ್ತ ಮನೆಯ ಒಡೆತನ ವಹಿಸುವನು"

ಹೃದಯ ಕಮಲದಲ್ಲಿ ಇಲ್ಲವೆ ಬ್ರಹ್ಮರಂಧ್ರದಲ್ಲಿ ಮನಸ್ಸನ್ನು ನೆಲೆಗೊಳಿಸುವುದೇ ಧಾರಣ. ಆಗ ಕೆಲವು ಮಾನಸಿಕ ತರಂಗಗಳೇಳುವುವು. ಬೇರೆ ಬಗೆಯ ಮಾನಸಿಕ ತರಂಗಗಳು ಇವನ್ನು ನಾಶಮಾಡವು. ಮುಂದೆ ಇವೇ ಪ್ರಾಮುಖ್ಯವಾಗಿ ಉಳಿದು ಒಂದಾಗಿ ಕೂಡುವುವು. ಈ ಒಂದಾಗುವಿಕೆಗೆ ಧ್ಯಾನವೆನ್ನುವರು. ಇದು ಬೇರೊಂದರ ಆಧಾರವಿಲ್ಲದೆ, ಮನಸ್ಸೆಲ್ಲ ಐಕ್ಯವಾಗಿ ಒಂದೇ ಅಲೆಯಾಗುವುದೇ ಸಮಾಧಿ.

"ಯಾರು ತಮ್ಮ ಹೊರತು ಮತ್ತಾವುದನ್ನು ನೆಚ್ಚಿಕೊಂಡಿಲ್ಲವೋ, ಯಾರು ಶುದ್ಧರಾಗಿ ಎಲ್ಲವನ್ನು ತೊರೆದು ಕೆಲಸದಲ್ಲಿ ನಿರತರಾಗಿರುವರೋ, ಯಾರು ಒಳ್ಳೆಯದಾಗಲಿ, ಕೆಟ್ಟದ್ದಾಗಲಿ, ಲೆಕ್ಕಿಸುವುದಿಲ್ಲವೋ, ಯಾರು ಎಂದಿಗೂ ವ್ಯಸನ ಪಡುವುದಿಲ್ಲವೋ, ಯಾರು ಸ್ತುತಿನಿಂದೆಗಳನ್ನು ಸಮದೃಷ್ಟಿಯಿಂದ ನೋಡುವರೋ,ಮೌನವಾಗಿ, ವಿಚಾರಪರರಾಗಿ, ತಮಗೆ ಬಂದ ಅಲ್ಪದರಲ್ಲಿ ತೃಪ್ತರಾಗಿ, ಮನೆ ಇಲ್ಲವೆ ಜಗತ್ತನ್ನೇ ತಮ್ಮ ಮನೆಯನ್ನಾಗಿ ಮಾಡಿಕೊಂಡು, ತಮ್ಮ ಯತ್ನದಲ್ಲಿ ದೃಢವಾಗಿರುವರೋ, ಅಂಥವರು ಯೋಗಿಗಳಾಗುವರು. " ಎಂದು ನುಡಿದರು. ವೇಮನ ಕಣ್ಣುಮುಚ್ಚಿ ಸಹಸ್ರಾರ ಚಕ್ರ, ಮೂಲಾಧಾರ ಚಕ್ರ ಕಲ್ಪನೆಯ ಮೂಲವನ್ನು ಚಿಂತಿಸುತ್ತ ಕುಳಿತಿದ್ದ.

" ಈ ಸಹಸ್ರಾರ ಚಕ್ರವೆಂದಿರಲ್ಲಾ, ಹಾಗೆಂದರೇನು?" ಕೇಳಿಯೇ ಬಿಟ್ಟ.

" ಅದು ಬ್ರಹ್ಮರಂಧ್ರ ಅನ್ನುವ ಗ್ರಂಥಿ; ಶರೀರದಲ್ಲಿ ಎಲ್ಲಕ್ಕಿಂತ ಮೇಲಿರುವ ಗ್ರಂಥಿ. ಯೋಗ ಶಾಸ್ತ್ರದನ್ವಯ ಮಾನವ ಮನಸ್ಸಿಗೆ ಸಾವಿರೆ ' ಒಲಿವು' ಉಂಟು. ಅಂದರೆ ದೇಹದಲ್ಲಿ ಐವತ್ತು ಗ್ರಂಥಿ-ಉಪಗ್ರಂಥಿಗಳುಂಟು. ಇವು ಐವತ್ತು ವಿಧದ ಚಿತ್ತವೃತ್ತಿ (ಒಲಿವು) ಗಳನ್ನು ನಿಯಂತ್ರಿಸುತ್ತವೆ. ಈ ಚಿತ್ತವೃತ್ತಿಗಳು ಹತ್ತು ದಿಕ್ಕುಗಳತ್ತ ಹರಿಯುತ್ತವೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಊರ್ಧ್ವ ಮತ್ತು ಅಧ ಎಂಬ ಆರು ಪ್ರದೇಶಗಳು ಮತ್ತು ಈಶಾನ್, ವಾಯು, ಅಗ್ನಿ ಮತ್ತು ನೈಋುತ್ ಎಂಬ ನಾಲ್ಕು ಅನುದೇಶಗಳು

ಕೂಡಿ ಹತ್ತು ದಿಕ್ಕುಗಳು. ಪ್ರತಿಯೊಂದು ಒಲಿವು ಹತ್ತು ದಿಕ್ಕುಗಳತ್ತ ಹರಿಯಬಹುದು. ಮತ್ತು ಆಂತರ್ಯವಾಗಿಯಾಗಲಿ ಬಾಹ್ಯವಾಗಿಯಾಗಲಿ ವ್ಯಕ್ತವಾಗಬಹುದು. ಹೀಗೆ (೫೦x೧೦x೨) ಒಟ್ಟು ಸಾವಿರ ಒಲಿವುಗಳು. ಇವುಗಳನ್ನು ಒಟ್ಟಾಗಿ ನಿಯಂತ್ರಿಸುವ ಗ್ರಂಥಿ, ಸಹಸ್ರಾರ ಚಕ್ರವೆಂದು ಯೋಗಭಾಷೆಯಲ್ಲಿ ಕರೆಯಲ್ಪಡುವುದು.

ಇನ್ನು ಮೂಲಾಧಾರ ಚಕ್ರದ ವಿಚಾರ:ಬೆನ್ನು ಮೂಳೆಯ ಮಧ್ಯೆಯಿರುವ ಸುಷುಮ್ನಾ ಕಾಲುವೆ ಮತ್ತು ಇಬ್ಬದಿಗಿರುವ ಇಡ, ಪಿಂಗಡಗಳ ಶಕ್ತಿಗಳ ಬಗೆಗೆ ತಿಳಿದಿರುವಿಯಷ್ಟೇ. ಬೆನ್ನೆಲುಬು ಇರುವ ಪಾಣಿಗಳಿಗೆಲ್ಲ ಈ ಮೂರು ಕ್ರಿಯೆಗಳುಂಟು. ಸಾಮಾನ್ಯ ಮನುಷ್ಯರಲ್ಲಿ ಸುಷುಮ್ನಾ ಕಾಲುವೆ ಮುಚ್ಚಿರುತ್ತದೆ. ಯೋಗಿಯಲ್ಲಿ ಮಾತ್ರ ಈ ಸುಷುಮ್ನಾ ಕಾಲುವೆ ತೆರೆದಿದೆ. ಈ ಸುಷುಮ್ನಾ ಶಕ್ತಿ, (ಕುಂಡಲಿನೀ ಶಕ್ತಿ ಎಂದೂ ಇದಕ್ಕೆ ಹೆಸರು) ಕಾಲುವೆ ತೆರೆದು ಮೇಲೇಳುವದಕ್ಕೆ ಪ್ರಾರಂಭಿಸಿದರೆ, ನಾವು ಇಂದ್ರಿಯಾತೀತರಾಗುತ್ತೇವೆ. ಈ ಸುಷುಮ್ನಾ ಕಾಲುವೆಯ ಮೇಲೆ ಮೂರು ಕೇಂದ್ರಗಳುಂಟು.ಅಲಂಕಾರಿಕವಾಗಿ ಅವನ್ನೇ ಕಮಲಗಳೆನ್ನುವರು. ಅತಿ ಕೆಳಗಿನದು ಬೆನ್ನೆಲುಬಿನ ಕೆಳಭಾಗದಲ್ಲಿರುವುದು. ಇದುವೇ ಮೂಲಾಧಾರ ಚಕ್ರ. ದೇಹದಲ್ಲಿರುವ ಶಕ್ತಿಯನ್ನು ಮೂಲಾಧಾರದಿಂದ ಸಹಸ್ರಾರಕ್ಕೆ ತರುವುದೇ ಯೋಗಿಯ ಕೆಲಸ. ಶಕ್ತಿಗಳಲ್ಲೆಲ್ಲ ಓಜಸ್ಸು ಶ್ರೇಷ್ಠ. ಇದು ಸಹಸ್ರಾರದಲ್ಲಿ ಸಂಗ್ರಹವಾಗುವುದು. ಓಜಸ್ಸು ಹೆಚ್ಚಿದಷ್ಟು ಮನುಷ್ಯ ಬುದ್ಧಿವಂತನಾಗುತ್ತಾನೆ. ಬಲಾಢ್ಯನಾಗುತ್ತಾನೆ. ಯೋಗಿಯ ಭಾಷೆ, ವ್ಯಾಕರಣ-ಛಂದಸ್ಸುಗಳಿಗೆ ವ್ಯತಿರಿಕ್ತವಾಗಿರಬಹುದು. ರಸ-ಸೌಂದರ್ಯ ವರ್ಜಿತವಿರಬಹುದು. ಆದರೂ ಅವನ ಪ್ರತಿಯೊಂದು ಮಾತು ಮತ್ತು ನಡತೆ, ಶಕ್ತಿಯಿಂದ ತುಂಬಿರುತ್ತವೆ. ಇದೇ ಓಜಸ್ಸಿನಶಕ್ತಿ" ಎಂದು ಹೇಳಿದರು ಯೋಗಿ.

ಅನಂತರ ಶಿಷ್ಯನನ್ನು ಕರೆದೊಯ್ದು ಸಾಧನೆಯ ಮುಂದಿನ ಕ್ರಮಗಳನ್ನು ಎದುರಿಗೆ ಕುಳಿತು ಪ್ರತ್ಯಕ್ಷ ಪ್ರದರ್ಶಿಸಿದರು.

ತಿಂಗಳುಗಳುರುಳಿದವು. ಕಾಲ ಕಳೆದುದೇ ಗೊತ್ತಾಗಲಿಲ್ಲ. ನಾಡಿಶುದ್ಧಿ, ಪ್ರಾಣಾಯಾಮದ ಕಾಲಕ್ಕೆ ದೈಹಿಕ ಸಿದ್ಧಿಗಳು ಸಾಧಿಸಿದರೂ ವೇಮನ ದಾಟಿ ಮುಂದುವರಿದರು. ಧಾರಣ-ಧ್ಯಾನ-ಸಮಾಧಿಯ ಸ್ಥಿತಿಗೆ ಮನಸ್ಸಿನ ಸೂಕ್ಷ್ಮತೆ ಮುಟ್ಟಿತು. ಸವಿಕಲ್ಪ,ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ ಸ್ಥಿತಿ ಮುಟ್ಟಿ ನಿಜವ ಕಂಡರು; ಹೃದಯಾಕಾಶದಲ್ಲಿರುವ ಆನಂದಮಯವಾದ ಬ್ರಹ್ಮೈಕ್ಯವನ್ನು ಅನುಭವಿಸಿದರು. ಆಗ ದುಃಖ ಶಮನವಾಯಿತು; ಕಷ್ಟ ಮಾಯವಾಯಿತು.

"ದೇಹವಾತ್ಮರೂಪ ತಿಳಿಸಿ ಬಚ್ಚಿ ಹೇಳಿ,
ಅವನಿ ನೋಟ ನೋಡಿಸುವವನೆ ಗುರು.
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ.'

ಎಂದು ಗುರುವಿಗೆ ಮನದಲ್ಲಿ ನಮಿಸಿದನು. ಗುರುಗಳಿಗೆ ವಂದನೆ ಸಲ್ಲಿಸಿ ಅಲ್ಲಿಂದ ಹೊರಟರು.

—

ಕೀಟ ಭ್ರಮರದೊಡನಿದ್ದು,ಭ್ರಮರವೇ ಆಗುವುದು. ಸಾಧಕನಾಗಿ ಯೋಗಿಯೊಡ ನಿದ್ದು, ಸಾಧನೆಯಿಂದ ಮಹಾ ಯೋಗಿಯೇ ಆದ, ಮಹಾಯೋಗಿ ವೇಮನ.

"ನಿಜವು ತಿಳಿದ ಬಳಿಕ, ಸುಜನರಾ ನಿಜವನೆ,
ಪೇಳುತಿರುವುರಷ್ಟೆ, ಪರರಿಗಾಗಿ,
ಬಚ್ಚಿಡುವುದು ಬೇಡ; ಬೇಕೆ ಹೇಳೆ ಹೊಲ್ಲ.

ಎಂದು ಜಗತ್ತಿಗೆ ಸತ್ಯ ಸಾರಲು ಹೊರಟರು.

(ಮುಂದಿನ ಭಾಗಕ್ಕಾಗಿ ದಯವಿಟ್ಟು ಪದ್ಯ ವಿಭಾಗದ ಕೊನೆಗೆ ನೋಡಿರಿ)

ನೈತಿಕ ವಿಭಾಗ

೧

ಆತ್ಮಶುದ್ಧಿ ಲೇನಿ ಯಾಚಾರಮದಿ ಯೇಲ? ಭಾಂಡ ಶುದ್ಧಿ ಲೇನಿ ಪಾಕಮೇಲ?
ಚಿತ್ತ ಶುದ್ಧಿ ಲೇನಿ ಶಿವಪೂಜೆಯೆಲರಾ? ವಿಶ್ವದಾಭಿರಾಮ ವಿನುರ ವೇಮ.

ಆತ್ಮ ಶುದ್ಧಿಯಿರದ ಆಚಾರವದೇಕೆ?
ಮಡಿಕೆ ಶುದ್ಧಿಯಿರದ ಅಡುಗೆಯೇಕೆ?
ಭಾವ ಶುದ್ಧಿಯಿರದ ದೇವ ಪೂಜೆಯೇಕೆ?
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಹೃದಯವು ಹಸನುಗೊಳ್ಳದೆ, ಹೊರಗೆ ಧರ್ಮದ ಆಚಾರ–ವ್ರತಗಳನ್ನು ಮಾಡಿದರೆ ಫಲವಿಲ್ಲ. ಅದೆಂತೆಂದರೆ, ಪಾತ್ರೆಯನ್ನು ಹಸನು ಮಾಡದೆ ಅದರಲ್ಲಿ ಅಡುಗೆ ಬೇಯಿಸಲು, ಅದು ಏತಕ್ಕೆ ಬರುವುದು? ದೇವರ ಪೂಜೆ ಮಾಡುವ ಮುನ್ನ ನಮ್ಮ ಮನಸ್ಸು ಹಸನಾಗಿರಬೇಕು.

೨

ಸಿಕ್ಕ ಮ್ಯೆನಮುಂಚಿ ನೀಲ ಮೊಕ್ಕಟಿಚಾಲು, ತಳಕು ಬೆಳುಕುರಾಳ್ಲು ತಟ್ಟಿಡೇಲ ?
ಚದುವಂ ಬದ್ಯಮುರಯುಂ ಜಾಲದಾ ಯೊಕ್ಕಟ, ವಿಶ್ವದಾಭಿರಾಮ ವಿನುರ ವೇಮ.

ನೈಜವಾದ ಚೊಕ್ಕ ನೀಲವೊಂದೆ ಸಾಕು.
ಥಳಕು- ಬೆಳಕಿನ ಶಿಲೆ–ತಟ್ಟಿಯೇಕೆ?
ಓದಲರ್ಹ ಪದ್ಯವೊಂದನೋದೆ, ಸಾಕು.
ವಿಶ್ವದಾಭಿರಾಮ ಕೇಳು ವೇಮ.

ಕೃತಕ ಹರಳುಗಳನ್ನು ಗಾಜು ಕೊರೆದು ತಯಾರಿಸುತ್ತಾರೆ. ಇಂಥ ಎಷ್ಟೋ ಹರಳು ಗಳನ್ನು ಕೊಳ್ಳಬಹುದು. ಆದರೆ ಶುದ್ಧ ನೀಲಮಣಿಯೊಂದರ ಮೂಲ್ಯಕ್ಕೆ ಇವುಗಳೆಷ್ಟಾದರೂ ಸಮವಾಗವು. ತಟ್ಟೆ ತುಂಬ ಕೃತಕ ಹರಳು ಪಡೆಯುವದಕ್ಕಿಂತ ಒಂದೇ ಒಂದು ನೀಲ ಮಣಿ ಪಡೆಯುವುದು ಮೇಲು. ಅದೇ ರೀತಿ, ಸತ್ಯ ಜ್ಞಾನ ನೀಡಲಾರದಂಥ ಸಾವಿರಾರು ಪದ್ಯಗಳನ್ನೂ ಜೊಳ್ಳುಪುರಾಣ ಕಥೆಗಳನ್ನೂ ಓದುವದಕ್ಕಿಂತ ಒಂದಾದರೂ ಉತ್ತಮ ನೀತಿ ಬೋಧೆಯ ಪದ್ಯವನ್ನು ಓದಿ ಅರಗಿಸಿಕೊಂಡರೆ ಎಷ್ಟೋ ಪಾಲು ನೆಟ್ಟಗೆ.

ಗಾಜುಕುಪ್ಪೆಲೋನ ಗಡಗುಚು ದೀಪಂಬ, ದೆಟ್ಟುಲುಂಡು ಜ್ಞಾನಮುಟ್ಟುಲುಂಡು,
ದೆಲಿಸಿನಟ್ಟವಾರಿ ದೇಹಂಬುಲಂದನ, ವಿಶ್ವದಾಭಿರಾಮ ವಿನುರ ವೇಮ

ಗಾಜುಕೊಳಿವೆಯೊಳಗೆ ಬೆಳಗುತಿಪ್ಪ ದೀಪ
ಎಂತಿಹುದೋ ಜ್ಞಾನವಂತೆ ಇಹುದು.
ತಿಳಿದ ಜನರ ದೇಹದಂತರಾಳದಲ್ಲಿ-
ವಿಶ್ವದಾಭಿರಾಮ ಕೇಳು ವೇಮ.

ಸತ್ಯವನ್ನು ತಿಳಿದ ಜನರ ದೇಹದೊಳಗೆ ಜ್ಞಾನವು ಇರುತ್ತದೆ. ಅದೆಂತೆಂದರೆ ಗಾಜಿನ ಕೊಳಿವೆಯ ಒಳಗೆ ದೀಪ ಉರಿಯುವಂತೆ. ಒಳಗಿನ ಈ ದೀಪ ಜ್ಞಾನಿಗಳ ಮೂಲಕ ಮಾರ್ಗದರ್ಶಕವಾಗುತ್ತದೆ. ಅಜ್ಞಾನದ ಕತ್ತಲು ಕಳೆಯುತ್ತದೆ. ನಾವು ಗಾಜಿನ ಕೊಳಿವೆಯೊಳಗಿನ ಜ್ಯೋತಿಯನ್ನು ಅದರ ಪ್ರಕಾಶ ಶಾಖೆಗಳ ಪರೋಕ್ಷ ಪ್ರಮಾಣಗಳಿಂದ ಅನುಭವಿಸುವಂತೆ ಸತ್ಯ ತಿಳಿದವರಿಂದ ಜ್ಯೋತಿಯ ಇರುವಿಕೆಯನ್ನು ತಿಳಿಯಬಹುದು. ಸತ್ಯವನ್ನು ಅರಿಯುವ ಮಟ್ಟದ ಸಾಧನೆ ಮಾಡಿದರೆ ನಾವೇ ಕೊಳಿವೆಯಂತಾಗಿ ನಮ್ಮೊಳಗೆ ಹೃದಯದಲ್ಲಿ ಜ್ಞಾನಜ್ಯೋತಿ ಕಾಣಬಹುದು. ಅನುಭವಿಸಬಹುದು.

೪

ವೆಟ್ಟಪೋಯಲೇನಿ ವಟ್ಟನರುಲು ಭೂಮಿ, ಬುಟ್ಟನೇಮಿ ವಾರು ಗಿಟ್ಟ ನೇಮಿ?
ಪುಟ್ಟಲೋನ ಜಿದುಲು ಪುಟ್ಟವಾ? ಗಿಟ್ಟವಾ? ವಿಶ್ವದಾಭಿರಾಮ ವಿನುರ ವೇಮ

ಕೊಟ್ಟು ಹೋಗದಂಥ ಖೊಟ್ಟಿ ನರರು ಜಗದಿ
ಹುಟ್ಟಲೇನು? ಅವರು ಸತ್ತರೇನು?
ಹುಟ್ಟವೇನು ಹುತ್ತದಿ ಗೆದ್ದಲು? ಸಾಯವೆ?
ವಿಶ್ವದಾಭಿರಾಮ ಕೇಳು ವೇಮ-

ಇರುವೆ ಕಷ್ಟಪಟ್ಟು ಕಟ್ಟಿದ ಹುತ್ತಿನಲ್ಲಿ ಗೆದ್ದಲು ಹುಳು ಹುಟ್ಟಿ ಸಾಯುತ್ತದೆ. ಮುಂದೆ ಹಾವು ಅಲ್ಲಿ ನೆಲೆಯೂರುತ್ತದೆ. ಹೀಗೆ ಗೆದ್ದಲು ಯಾರೋ ಮಾಡಿದ ಶ್ರಮದ ಆಶ್ರಯದಲ್ಲಿ ವಾಸಿಸಿ ಯಾರಿಗೂ ಉಪಕಾರವಿಲ್ಲದೆ ಹಾವಿಗೆ ಹಾದಿ ಮಾಡಿ ಸತ್ತು ಹೋಗುತ್ತದೆ. ಅದೇ ರೀತಿ ಪೂರ್ವಜರು ಗಳಿಸಿದ ಸಂಪತ್ತಿಗೆ ಹಕ್ಕುದಾರರಾದವರು, ಬೇರೆಯವರ ಕಷ್ಟ-ನಷ್ಟ ಕಂಡು ಸಹಾಯ ಮಾಡದೆ ಖೊಟ್ಟಿತನ ಪ್ರದರ್ಶಿಸಿದರೆ ಅಂಥವರು ಹುಟ್ಟಿದರೇನು? ಸತ್ತು ಹೋದರೇನು? ಗೆದ್ದಲು ಹುಳು ಹುಟ್ಟಿದಂತೆ, ಸತ್ತಂತೆ.

ತಾಮುಗನ್ನವಾರು ದಮುಗನ್ನವಾರುನು, ಜಚ್ಚುಟಿಲ್ಲ ದಮುಕು ಸಾಕ್ಷಿಕಾದೆ?
ಬ್ರತುಕುಲೆಲ್ಲ ದಮುಕು ಬ್ರಹ್ಮ ಕಲ್ಪಂಬುಲಾ? ವಿಶ್ವದಾಭಿರಾಮ ವಿನುರ ವೇಮ.

ತಾವೆ ಹಡೆದ ಸುತರು, ತಮ್ಮನೆ ಹಡೆದವ ಂ
ಸಾವುದೆಲ್ಲ ತಮಗೆ ಸಾಕ್ಷಿಯಲ್ತೆ?
ಜೀವನವದು ತಮಗೆ ಬ್ರಹ್ಮಕಲ್ಪನೆಯೇ?
ವಿಶ್ವದಾಭಿರಾಮ ಕೇಳು ವೇಮ.

ತಾವು ಹಡೆದ ಪುತ್ರ-ಪುತ್ರಿಯರೂ ಸಾಯುತ್ತಾರೆ. ತಮ್ಮನ್ನೇ ಹಡೆದ ತಾಯಿ-ತಂದೆಯಂದಿರೂ ತಮ್ಮೆದುರು ಸಾಯುತ್ತಾರೆ. ಈ ಸಾವಿನ ಘಟನೆಗಳು ಜೀವನ ನಶ್ವರ, ಮರಣ ನಿಶ್ಚಿತವೆಂಬ ಸತ್ಯಕ್ಕೆ ಸಾಕ್ಷಿಯಾಗಿಲ್ಲವೇ? ಅಂದಮೇಲೆ ಜೀವನವು ಯಾರಿಗೇನು? ಪರಬ್ರಹ್ಮನಂತೆ ನಿತ್ಯವೇ, ಅದರಿಂದ ಇರುವ ಕಾಲದಲ್ಲಿಯೇ ಒಳ್ಳೆಯ ಕಾರ್ಯ ಮಾಡಬೇಕು.

೬

ಎರುಕವಾಲು ವಂಚನು ಡೇಮೇಮಿಚದಿವಿನ, ಜದಿವಿನಂತನೇವೆ ಸದ್ದುಣಿಯುಗು
ಗದಿಸಿ ತಾಮರಂದು ಗಪ್ಪಕೂರ್ಚುನ್ನಟ್ಲು ವಿಶ್ವದಾಭಿರಾಮ ವಿನುರ ವೇಮ.

ಓದನೆಷ್ಟು ಓದಲೇನು, ಅರಿಯದನರ?
ಓದುತಿಪ್ಪಕಾಲ ಸುಗುಣಿಯಂತೆ ತೋರ್ಪ;
ಘನವೆನಿಸದೆ ಕಪ್ಪೆ ಕಮಲವೇರಿದಾಗ
ವಿಶ್ವದಾಭಿರಾಮ ಕೇಳು ವೇಮ

ಬಹಳಷ್ಟು ಪುಸ್ತಕಗಳನ್ನು ಓದಿದ ಮಾತ್ರಕ್ಕೆ ಬಹಳವಾದರೆ ಹೆಚ್ಚು ವಿಷಯ ಸಂಗ್ರಹಿಸಬಹುದು, ಆದರೆ ಬುದ್ಧಿ ವಿಶಾಲವಾಗದು. ಕೇವಲ ಓದುವ ಕಾಲಕ್ಕೆ ಸದ್ಗುಣಿಯಂತೆ ಕಾಣುವನು. ಆದರೆ ಇತರ ಕಾಲದ ನಡೆ-ನುಡಿಗಳು ಅವನ ನಿಜ ಬಣ್ಣ ಹೊರಗೆಡಹುತ್ತವೆ, (ಗುಡಿ-ಗುಂಡಾರ ಮಠ-ಮಾರುಗಳಲ್ಲಿ ಶಾಸ್ತ್ರ-ಪುರಾಣ ಓದುವವರು ಪಾರಾಯಣ ಕಾಲಕ್ಕೆ ವೇಷ-ಭೂಷಣ ಧರಿಸಿ ಸಾಧುಗಳಂತೆ ಕಣ್ಣಿಗೆ ತೋರುತ್ತಾರೆ. ಆದರೆ ನಿತ್ಯ ಜೀವನದಲ್ಲಿ ಕುಹಕಿಗಳೋ, ಕಡುಲೋಭಿಗಳೋ, ವಂಚಕರೋ ಆಗಿರುತ್ತಾರೆ.) ಅದೆಂತೆಂದರೆ, ಸರೋವರದಲ್ಲಿ ಕಪ್ಪೆಯು ಈಜಿ ಬಂದು ಕಮಲ ಪುಷ್ಪದ ಪಕಳೆಯ ಮೇಲೆ ಪವಡಿಸಿದಾಗ ಘನ-ಗಂಭೀರವಾಗಿ ತೋರುವದು. ಆದರೆ ಅಲ್ಲಿಂದ ನೀರಿಗಿಳಿಯಿತೆಂದರೆ ಮತ್ತೆ ಹೊಲಸು, ಕ್ರಿಮಿ ಭಕ್ಷಿಸುವ ತನ್ನ ನಿತ್ಯಕ್ರಿಯೆಯಲ್ಲಿ ನಿರತವಾಗುವದು

೩

ಗಾಜುಕುಪ್ಪೆಲೋನ ಗಡಗುಚು ದೀಪಂಬ, ದೆಟ್ಟುಲುಂಡು ಜ್ಞಾನಮುಟ್ಟುಲುಂಡು,
ದೆಲಿಸಿನಟ್ಟವಾರಿ ದೇಹಂಬುಲಂದನ, ವಿಶ್ವದಾಭಿರಾಮ ವಿನುರ ವೇಮ

ಗಾಜುಕೊಳಿವೆಯೊಳಗೆ ಬೆಳಗುತಿಪ್ಪ ದೀಪ
ಎಂತಿಹುದೋ ಜ್ಞಾನವಂತೆ ಇಹುದು.
ತಿಳಿದ ಜನರ ದೇಹದಂತರಾಳದಲ್ಲಿ-
ವಿಶ್ವದಾಭಿರಾಮ ಕೇಳು ವೇಮ.

ಸತ್ಯವನ್ನು ತಿಳಿದ ಜನರ ದೇಹದೊಳಗೆ ಜ್ಞಾನವು ಇರುತ್ತದೆ. ಅದೆಂತೆಂದರೆ ಗಾಜಿನ ಕೊಳಿವೆಯ ಒಳಗೆ ದೀಪ ಉರಿಯುವಂತೆ. ಒಳಗಿನ ಈ ದೀಪ ಜ್ಞಾನಿಗಳ ಮೂಲಕ ಮಾರ್ಗದರ್ಶಕವಾಗುತ್ತದೆ. ಅಜ್ಞಾನದ ಕತ್ತಲು ಕಳೆಯುತ್ತದೆ. ನಾವು ಗಾಜಿನ ಕೊಳಿವೆಯೊಳಗಿನ ಜ್ಯೋತಿಯನ್ನು ಅದರ ಪ್ರಕಾಶ ಶಾಖೆಗಳ ಪರೋಕ್ಷ ಪ್ರಮಾಣಗಳಿಂದ ಅನುಭವಿಸುವಂತೆ ಸತ್ಯ ತಿಳಿದವರಿಂದ ಜ್ಯೋತಿಯ ಇರುವಿಕೆಯನ್ನು ತಿಳಿಯಬಹುದು. ಸತ್ಯವನ್ನು ಅರಿಯುವ ಮಟ್ಟದ ಸಾಧನೆ ಮಾಡಿದರೆ ನಾವೇ ಕೊಳಿವೆಯಂತಾಗಿ ನಮ್ಮೊಳಗೆ ಹೃದಯದಲ್ಲಿ ಜ್ಞಾನಜ್ಯೋತಿ ಕಾಣಬಹುದು. ಅನುಭವಿಸಬಹುದು.

೪

ವೆಟ್ಟಪೋಯಲೇನಿ ವಟ್ಟನರುಲು ಭೂಮಿ, ಬುಟ್ಟನೇಮಿ ವಾರು ಗಿಟ್ಟ ನೇಮಿ?
ಪುಟ್ಟಲೋನ ಜೆದುಲು ಪುಟ್ಟವಾ? ಗಿಟ್ಟವಾ? ವಿಶ್ವದಾಭಿರಾಮ ವಿನುರ ವೇಮ

ಕೊಟ್ಟು ಹೋಗದಂಥ ಖೊಟ್ಟಿ ನರರು ಜಗದಿ
ಹುಟ್ಟಲೇನು? ಅವರು ಸತ್ತರೇನು?
ಹುಟ್ಟವೇನು ಹುತ್ತದಿ ಗೆದ್ದಲು? ಸಾಯವೆ?
ವಿಶ್ವದಾಭಿರಾಮ ಕೇಳು ವೇಮ.

ಇರುವೆ ಕಷ್ಟಪಟ್ಟು ಕಟ್ಟಿದ ಹುತ್ತಿನಲ್ಲಿ ಗೆದ್ದಲು ಹುಳು ಹುಟ್ಟಿ ಸಾಯುತ್ತದೆ. ಮುಂದೆ ಹಾವು ಅಲ್ಲಿ ನೆಲೆಯೂರುತ್ತದೆ. ಹೀಗೆ ಗೆದ್ದಲು ಯಾರೋ ಮಾಡಿದ ಶ್ರಮದ ಆಶ್ರಯದಲ್ಲಿ ವಾಸಿಸಿ ಯಾರಿಗೂ ಉಪಕಾರಗೈಯದೆ ಹಾವಿಗೆ ಹಾದಿ ಮಾಡಿ ಸತ್ತು ಹೋಗುತ್ತದೆ. ಅದೇ ರೀತಿ ಪೂರ್ವಜರು ಗಳಿಸಿದ ಸಂಪತ್ತಿಗೆ ಹಕ್ಕುದಾರರಾದವರು, ಬೇರೆಯವರ ಕಷ್ಟ-ನಷ್ಟ ಕಂಡು ಸಹಾಯ ಮಾಡದೆ ಖೊಟ್ಟಿತನ ಪ್ರದರ್ಶಿಸಿದರೆ ಅಂಥವರು ಹುಟ್ಟಿದರೇನು? ಸತ್ತು ಹೋದರೇನು? ಗೆದ್ದಲು ಹುಳು ಹುಟ್ಟಿದಂತೆ, ಸತ್ತಂತೆ.

೫

ತಾಮುಗನ್ನವಾರು ದಮುಗನ್ನವಾರುನು, ಜಚ್ಚುಟಿಲ್ಲ ದಮುಕು ಸಾಕ್ಷಿಕಾದೆ?
ಬ್ರತುಕುಲೆಲ್ಲ ದಮುಕು ಬ್ರಹ್ಮ ಕಲ್ಪಂಬುಲಾ? ವಿಶ್ವದಾಭಿರಾಮ ವಿನುರ ವೇಮ.

ತಾನೆ ಹಡೆದ ಸುತರು, ತನ್ಮನೆ ಹಡೆದವ ಂ
ಸಾವುದೆಲ್ಲ ತನುಗೆ ಸಾಕ್ಷಿಯಲ್ತೆ?
ಜೀವನವದು ತನುಗೆ ಬ್ರಹ್ಮಕಲ್ಪನೆಯೇ?
ವಿಶ್ವದಾಭಿರಾಮ ಕೇಳು ವೇಮ.

ತಾವು ಹಡೆದ ಪುತ್ರ-ಪುತ್ರಿಯರೂ ಸಾಯುತ್ತಾರೆ. ತನ್ಮನ್ನೇ ಹಡೆದ ತಾಯಿ-ತಂದೆಯಂದಿರೂ ತಮ್ಮೆದುರು ಸಾಯುತ್ತಾರೆ. ಈ ಸಾವಿನ ಘಟನೆಗಳು ಜೀವನ ನಶ್ವರ, ಮರಣ ನಿಶ್ಚಿತವೆಂಬ ಸತ್ಯಕ್ಕೆ ಸಾಕ್ಷಿಯಾಗಿಲ್ಲವೇ? ಅಂದಮೇಲೆ ಜೀವನವು ಯಾರಿಗೇನು? ಪರಬ್ರಹ್ಮನಂತೆ ನಿತ್ಯವೇ, ಅದರಿಂದ ಇರುವ ಕಾಲದಲ್ಲಿಯೇ ಒಳ್ಳೆಯ ಕಾರ್ಯ ಮಾಡಬೇಕು.

೬

ಎರುಕವಾಲು ವಂನುಚು ಡೇಮೇಮಿಚದಿವಿನ, ಜದಿವಿನಂತನೇವೆ ಸದ್ಗುಣಿಯುಗು
ಗದಿಸಿ ತಾಮರಂದು ಗಪ್ಪಕೂರ್ಚುನ್ನಟ್ಲು ವಿಶ್ವದಾಭಿರಾಮ ವಿನುರ ವೇಮ.

ಓದನೆಷ್ಟು ಓದಲೇನು, ಅರಿಯದನರ?
ಓದುತಿಪ್ಪಕಾಲ ಸುಗುಣಿಯಂತೆ ತೋರ್ಪ;
ಘನವೆನಿಸದೆ ಕಪ್ಪೆ ಕಮಲವೇರಿದಾಗ
ವಿಶ್ವದಾಭಿರಾಮ ಕೇಳು ವೇಮ

ಬಹಳಷ್ಟು ಪುಸ್ತಕಗಳನ್ನು ಓದಿದ ಮಾತ್ರಕ್ಕೆ ಬಹಳವಾದರೆ ಹೆಚ್ಚು ವಿಷಯ ಸಂಗ್ರಹಿಸಬಹುದು, ಆದರೆ ಬುದ್ಧಿ ವಿಶಾಲವಾಗದು. ಕೇವಲ ಓದುವ ಕಾಲಕ್ಕೆ ಸದ್ಗುಣಿಯಂತೆ ಕಾಣುವನು. ಆದರೆ ಇತರ ಕಾಲದ ನಡೆ ನುಡಿಗಳು ಅವನ ನಿಜ ಬಣ್ಣ ಹೊರಗೆಡಹುತ್ತವೆ, (ಗುಡಿ-ಗುಂಡಾರ ಮಠ-ಮಾರುಗಳಲ್ಲಿ ಶಾಸ್ತ್ರ-ಪುರಾಣ ಓದುವವರು ಪಾರಾಯಣ ಕಾಲಕ್ಕೆ ವೇಷ-ಭೂಷಣ ಧರಿಸಿ ಸಾಧುಗಳಂತೆ ಕಣ್ಣಿಗೆ ತೋರುತ್ತಾರೆ. ಆದರೆ ನಿತ್ಯ ಜೀವನದಲ್ಲಿ ಕುಹಕಿಗಳೋ, ಕಡುಲೋಭಿಗಳೋ, ವಂಚಕರೋ ಆಗಿರುತ್ತಾರೆ.) ಅದೆಂತೆಂದರೆ, ಸರೋವರದಲ್ಲಿ ಕಪ್ಪೆಯು ಈಜಿ ಬಂದು ಕಮಲ ಪುಷ್ಪದ ಪಕಳೆಯ ಮೇಲೆ ಪವಡಿಸಿದಾಗ ಘನ-ಗಂಭೀರವಾಗಿ ತೋರುವದು. ಆದರೆ ಅಲ್ಲಿಂದ ನೀರಿಗಿಳಿಯಿತೆಂದರೆ ಮತ್ತೆ ಹೊಲಸು, ಕ್ರಿಮಿ ಭಕ್ಷಿಸುವ ತನ್ನ ನಿತ್ಯಕ್ರಿಯೆಯಲ್ಲಿ ನಿರತವಾಗುವದು

೭

ವೇರುಪುರುಗುಚೇರಿ ವೃಕ್ಷಂಬು ಜೆರಚುನು, ಚೀಡಪುರುಗಜೇರಿ ಚೆಟ್ಟು ಜೆರಚು,
ಗುತ್ಸಿ ತುಂಡು ಚೇರಿ ಗುಣವಂತು ಜೆರಚುರಾ, ವಿಶ್ವದಾಭಿರಾಮ ವಿನುರ ವೇಮ.

ಬೇರಿನ ಹುಳು ಹತ್ತಿ ಮರವೆ ಹಾಳಾಯ್ತು.
ಸೀಡೆ ಹುಳವು ಹತ್ತಿ ಗಿಡವೆ ಹಾಳು.
ಕುತ್ಸಿತ ಜನ ಸೇರಿ ಸುಗುಣವಂತ ಕೆಡುವ
ವಿಶ್ವದಾಭಿರಾಮ ಕೇಳು ವೇಮ.

ಗಿಡದ ಬೇರಿಗೆ ಕೀಡೆಗಳು ಹತ್ತಿ ಅದನ್ನು ತಿನ್ನುವುದರಿಂದ ಇಡೀ ಗಿಡವು ಆಹಾರ ದೊರೆಯದೆ ನಾಶವಾಗುತ್ತದೆ. ಗಿಡದ ರೆಂಬೆ-ಕೊಂಬೆಗಳಿಗೆ ಮತ್ತು ಎಲೆಗೆ ಕೀಡೆಗಳು, ಕೊರೆಯುವ ಹುಳುಗಳೂ ಅಂಟಿಕೊಂಡು ಗಿಡವನ್ನು ನಾಶಪಡಿಸುತ್ತವೆ. ಇದೇ ರೀತಿಯಾಗಿ ಕೀಳು ಜನರು ಸೇರಿಕೊಂಡು ಗುಣವಂತನನ್ನು ಕೆಡಿಸುತ್ತಾರೆ.

೮

ಉಪ್ಪುಕಪ್ಪುರಂಬು ನೊಕ್ಕಪೋಲಿಕನುಂಡು, ಜಾಡ ಜೂಡ ರುಚುಲ ಜಾಡವೇರು,
ಪುರುಷುಲಂದು ಬುಣ್ಯಪುರುಷುಲು ವೇರಯೂ, ವಿಶ್ವದಾಭಿರಾಮ ವಿನುರ ವೇಮ.

ಉಪ್ಪು ಕಪ್ಪುರಗಳಿಗೊಂದೆ ಹೋಲಿಕೆಯಿದೆ.
ನೋಡಿ ನೋಡಿ, ರುಚಿಯ ಮೂಲ ಬೇರೆ,
ಪುರುಷರೊಳಗೆ ಪುಣ್ಯ ಪುರುಷ ಬೇರೆ ಇಹರು.
ವಿಶ್ವದಾಭಿರಾಮ ಕೇಳು ವೇಮ.

ಉಪ್ಪು ಮತ್ತು ಕಪ್ಪುರಗಳು ಮೇಲುನೋಟಕ್ಕೆ ಬಿಳುಪಾಗಿ, ಹಳಕು ಹಳಕಾಗಿ, ರೂಪಸಾಮ್ಯ ಹೊಂದಿರುತ್ತವೆ. ಆದರೆ ಪರೀಕ್ಷಿಸಿ ನೋಡಿದರೆ,ಅವುಗಳು ರುಚಿಯಲ್ಲಿ ಮತ್ತು ಮೂಲಸ್ವರೂಪದಲ್ಲಿ ಭಿನ್ನವಾಗಿರುತ್ತವೆಯಷ್ಟೇ. ಅದೇ ರೀತಿ, ಬಾಹ್ಯ ನಿರೀಕ್ಷೆಗೆ ಎಲ್ಲ ಪುರುಷರೂ ಒಂದೇ ಬಗೆಯಾಗಿ ಕಂಡುಬಂದರೂ ಆಳವಾಗಿ ತಿಳಿದು ನೋಡಿದರೆ ಪುಣ್ಯ ಪುರುಷರು ತಮ್ಮ ಮನಸ್ಸಿನ ಔದಾರ್ಯದಿಂದ ಹೃದಯ ವೈಶಾಲ್ಯದಿಂದ ಬೇರೆಯಾಗಿ ಇರುವರೆಂಬುದು ತಿಳಿಯದಿರದು. (ಕಾಕಃ ಕೃಷ್ಣಃ ಪಿಕಃ ಕೃಷ್ಣಃ | ಕೋಬೇಧಃ ಪಿಕಕಾಕಯೋಃ|| ವಸಂತ ಕಾಲೇ ಸಂಪ್ರಾಪ್ತೇ| ಕಾಕಃ ಕಾಕಃ ಪಿಕಃ ಪಿಕಃ|| ಕಾಗೆ ಕೋಗಿಲೆ ಗಳೆರಡೂ ಕಪ್ಪಾದರೂ ವಸಂತಕಾಲ ಬಂದಾಗ ಕೋಗಿಲೆಯು ಕುಹೂ ಕುಹೂ ಎಂದು ಇಂಚರಗೈದು ಕಾಗೆಗಿಂತ ಭಿನ್ನವೆಂಬುದನ್ನು ತೋರಿಸುತ್ತದೆ. ಸಮಯ ಒದಗಿದಾಗ ಪುಣ್ಯ ಪುರುಷರ ಗುಣ ಒಡೆದು ಕಾಣಿಸಿಕೊಳ್ಳುವುದು.)

೯

ಅನುವುಗಾನಿ ಚೋಟ ನಧಿಕುಲಮನರಾದು, ಕೊಂಚೆ ಮುಂಡುಟಿಲ್ಲ ಗೊದುವ ಕಾದು,
ಕೊಂಡ ಯದ್ದಮುಂದು ಗೊಂಚೆಮ್ಮೆಯುಂಡಡಾ ? ವಿಶ್ವದಾಭಿರಾಮ ವಿನುರ ವೇಮ.

ಅಲ್ಲದೆಡೆಗಳಲ್ಲಿ ಅಧಿಕನೆನಿಸೆ ಹೊಲ್ಲ.
ಅಲ್ಪನೆಂದುಕೊಳಲು ಚಿಂತೆ ಬೇಡ
ಅಲ್ಪವಾಗಿ ಕಾಣದೆ ಗಿರಿ ಕನ್ನಡಿಯೊಳು ?
ವಿಶ್ವದಾಭಿರಾಮ ಕೇಳು ವೇಮ.

(ಕೆಲ ಬುದ್ಧಿಹೀನರು ತಮ್ಮ ಶಕ್ತಿ ಅಷ್ಟು ಇಷ್ಟು ಎಂದು ತೋರಿಸಲು ಆಶೆ ಬಟ್ಟು ಯುಕ್ತಾಯುಕ್ತಗಳನ್ನು ಅರಿಯದೆ ವರ್ತಿಸುತ್ತಾರೆ. ಆದರೆ....) ಸಜ್ಜನನಾದವನು ತನಗೆ ಅನುಕೂಲವಿಲ್ಲದ ಕಾಲದಲ್ಲಿ ತನ್ನ ದೊಡ್ಡಸ್ತಿಕೆಯನ್ನು ತೋರಿಸುವುದು ಒಳಿತಲ್ಲವೆಂದು ತಿಳಿದಿರುತ್ತಾನೆ. ಅಷ್ಟೇಕೆ ತಾನು ಸಣ್ಣವನೆಂಬಂತೆ ಬಾಗಿ ನಡೆಯುತ್ತಾನೆ. ಸಮಯಾನುಸಾರದ ಇಂಥ ನಡತೆಗಾಗಿ ಅವನಿಗೆ ಚಿಂತೆಯೇನೂ ಇಲ್ಲ. ಏಕೆಂದರೆ ಪರ್ವತವನ್ನು ದೂರದರ್ಶಕ ಗಾಜಿನ ಮೂಲಕ ನೋಡಿದಾಗ ಚಿಕ್ಕದಾಗಿಯೇ ಕಾಣುವದು. ಆದರೆ ಹಾಗೆ ಗಾಜಿನಲ್ಲಿ ಚಿಕ್ಕದಾಗಿ ಕಂಡಮಾತ್ರಕ್ಕೆ ಅದರ ನೈಜ ಬೃಹತ್‌ಪ್ರಾಣ ಕಡಿಮೆಯೆನ್ನಿಸುವುದೇ ?

೧೦

ಚಂಪದಗಿನಯಟ್ಟಿ ಶತ್ರುವುತನ ಚೇತ, ಜಿಕ್ಕೆ ನೇನಿ ಗೀಡು ನೇಯರಾದು,
ಪೊಸಗ ಮೇಲು ಜೇಸಿ ಪೊಮ್ಮನುಟೇಚಾವು, ವಿಶ್ವದಾಭಿರಾಮ ವಿನುರ ವೇಮ.

ಕೊಲ್ಲಲರ್ಹನೆನಿಪ ಶತ್ರು, ವಶವಾಗಲು,
ಮುಳ್ಳನಾಡಿಸದಿರು ಸಿಕ್ಕನೆಂದು;
ಒಳ್ಳೆಯದನೆ ಬಗೆದು ಹೋಗೆನುವುದೆ ಸಾವು.
ವಿಶ್ವದಾಭಿರಾಮ ಕೇಳು ವೇಮ.

ಮರಣದಂಡನೆಗೆ ತಕ್ಕ ಅಪರಾಧಗೈದ ವೈರಿಯೊಬ್ಬನು ಕೈವಶವಾದೊಡನೆ ಅವನನ್ನು ಕೊಲ್ಲಬೇಡ, ಗಾಸಿಗೊಳಿಸಬೇಡ, ಗೀಳಾಗಿ ಕಾಣಬೇಡ. ಅವನು ಗೈದಪಾಪ ಕಾರ್ಯದ ಬಗ್ಗೆ ಎಚ್ಚರಿಸಿ, ಮುಂದೆ ಒಳ್ಳೆಯದನ್ನು ಮಾಡುವಂತೆ ಹಿತ ನುಡಿದರೆ, ಸಾಕು ಅವನು ಪ್ರಾಯಶ್ಚಿತ್ತದಿಂದ ದಗ್ಧನಾಗಿ ಹೋಗುತ್ತಾನೆ. ಅದೇ ಅವನ ದುರ್ಗಣಕ್ಕೆ ಮೃತ್ಯುವು.

೧೧

ತಾಮಸಿಂಚಿ ಚೇಯದಗ ದೆಟ್ಟ ಕಾರ್ಯಂಬು, ವೇಗಿರಿಂಪ ನದಿಯು ವಿಷಮುಮಗುನು,
ಪಚ್ಚಿ ಕಾಯದೆಚ್ಚಿ ಪಡವೇಯ ಫಲಮೌನೆ ? ವಿಶ್ವದಾಭಿರಾಮ ವಿನುರ ವೇಮ.

ತಾಮಸ ಗುಣದಿಂದ ಮಾಡಬೇಡ ಕಾರ್ಯ
ಮುದದಿ ಜಿಗಿದಾಡಲು ವಿಷವು ನೋಡು.
ಕಸುಗಾಯಿಯ ತಂದು ಇರಿಸೆ, ಮಾಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಸಿಟ್ಟು ಸಿಡುಕು ದ್ವೇಷಾಸೂಯೆ ಇತ್ಯಾದಿ ತಾಮಸಗುಣದಿಂದ ಪ್ರಚೋದಿತರಾಗಿ ಯಾವುದೇ ಕಾರ್ಯಕ್ಕೆ ಕೈ ಹಾಕಬಾರದು. ಸಿಟ್ಟಿನಕೈಯಲ್ಲಿ ಬುದ್ಧಿ ಕೊಡಬಾರದು. ಹೇವ ಸೊಕ್ಕಿನಿಂದ ಏರಾಡಿ ಸ್ಪರ್ಧೆಗಿಳಿದರೆ ವಿಷವು ಫಲ ಉಣ್ಣಬೇಕಾದೀತು. ಸಮಾಧಾನದಿಂದ ಒಳ್ಳೆಹಂಚಿಕೆಹೂಡಿ ಕೆಲಸ ಸಾಧಿಸಿಕೊಳ್ಳಬೇಕಷ್ಟೆ. ಹೇಗಂದರೆ, ಅಪಕ್ವವಾದ ಕಾಯಿ ತಂದು ಮಾಗಲಿಟ್ಟರೆ ಆ ಕಸುಗಾಯಿ ಮಾಗಿ ಹಣ್ಣಾದೀತೆ ?

೧೨

ನೀಳ್ಗಲೋನ ನೋಡ ನಿಗಿಡಿ ತಿನ್ನಗಬಾರು, ಬೈಟ ಮೂರಡ್ಡೆನ ಬ್ರಾಕಲೇದು.
ನೆಲವುದಪ್ಪುಚೋಟ ನೇರ್ಪರಿಕೊರಗಾಡು, ವಿಶ್ವದಾಭಿರಾಮ ವಿನುರ ವೇಮ

ಜಲದನೆಲೆ ದೋಣಿ, ದಿಶೆಯರಿತು ಹರಿವುದು
ಜಲದ ಹೊರಗೆ ಅಲ್ಪ ದೂರವಿಲ್ಲ.
ನೆಲವು ತಪ್ಪಲಾಗ, ಜಾಣನಿರಲು ವ್ಯರ್ಥ
ವಿಶ್ವದಾಭಿರಾಮ ಕೇಳು ವೇಮ

ದೋಣಿಯು ನೀರಿನಲ್ಲಿ ಚಲಿಸುತ್ತದೆ. ನಮಗೆ ಇಚ್ಛೆ ಬಂದ, ದಿಕ್ಕಿನಲ್ಲಿ ದೋಣಿ ನಡೆಸಬಹುದು. ಆದರೆ ಅದೇ ದೋಣಿಯನ್ನು ನೀರಿನಿಂದ ಹೊರಗೆ ತೆಗೆದು, ನೆಲದಮೇಲಿರಿಸಿದರೆ ಅದು ಕೇವಲ ಒಂದು ಮೊಳದ ಅಳತೆಯಷ್ಟು ದೂರ ಸಹ ಕ್ರಮಿಸಲಾರದು. ಅದೇ ರೀತಿ ತನಗೆ ಪರಿಚಿತವಿದ್ದ ಪ್ರದೇಶದಲ್ಲಿ ಜಾಣನ ಬುದ್ಧಿ ಪ್ರಯೋಜನಕರವಾಗುವುದು. ಪರಿಚಿತ ಪ್ರದೇಶದಿಂದ ಅವನು ಬೇರೆಡೆ ಹೋದರೆ ಅವನ ಜಾಣತನವೆಲ್ಲ ವ್ಯರ್ಥವಾಗುವುದು.

೧೩

ಕುಮುಲೋ ನೊಕಂಡು ಗುಣವಂತುಡುಂಡೆನಾ, ಕುಲಮುವೆಲಯು ವಾನಿಗುಣಮುಚೇತ
ವೆಲಯು ವನಮುಲೋನ ಮಲಯಜಂಬುನಟ್ಲು, ವಿಶ್ವದಾಭಿರಾಮ ವಿನುರ ವೇಮ

ಕುಲದೊಳೊಬ್ಬ ಗುಣವಂತನಾಗಲು,
ಕುಲಕೆ ಶೋಭೆಯವನ ಗುಣಗಳಿಂದ
ಕಳೆಗಟ್ಟಿತು, ವನ ಗಂಧದ ಗಿಡದಿಂದ
ವಿಶ್ವದಾಭಿರಾಮ ಕೇಳು ವೇಮ

ಯಾವುದೊಂದು ಕುಲದಲ್ಲಿ ಜಸಿದ ಒಬ್ಬನು ಒಳ್ಳೆ ಗುಣವಂತನಾದರೆ, ಅವನು ಹೆಸರುವಾಸಿಯಾಗುವನು. ಅವನ ವರ್ತನೆ, ಜೀವನ, ಬೋಧನೆಗಳು ಚಿರಂತನವಾಗಿ ಸ್ಮರಿಸಲ್ಪಡುವವು. ಅವನಾರು? ಅವನೆಂತು? ಎಂದು ತಿಳಿಯುವದರೊಂದಿಗೆ ಅವನ ಗುಣಗಳಾವವು? ಅವನ ಗುಣದ ಹಿರಿಮೆಯೇನು? ಎಂದು ಅರಿಯಲಪೇಕ್ಷಿಸುವರು. ಅವನ ಸದ್ಗುಣಗಳ ಮಹಿಮೆಯಿಂದಾಗಿ ಅವನ ಕುಲಕ್ಕೆ ಹೆಚ್ಚಿನ ಶೋಭೆ ಬರುವದು. ದೊಡ್ಡ ಡವಿಯಲ್ಲಿ ಎಷ್ಟೋ ಮರಗಳ ಸಮೂಹದಲ್ಲಿ ಒಂದು ಗಂಧದ ಮರವಿದ್ದರೆ, ಆ ಇಡೀ ಅಡವಿಗೆ ಶೋಭೆ ಬರುವುದಲ್ಲವೇ ?

೧೪

ನಿಳ್ಲಲೋನ ಮೊಸಲಿ ನಿಗಿಡಿ ಯೇನುಗುಬಟ್ಟು, ಬೈಟ ಗುಕ್ಕ ಚೇತ ಭಂಗಪಡುನು,
ಸ್ಥಾನ ಬಲಮುಕಾನಿ ತನಬಲ್ಮಿಕಾದಯಾ, ವಿಶ್ವದಾಭಿರಾಮ ವಿನುರ ವೇಮ.

ನೀರೊಳಿದ್ದು ಮೊಸಳೆ ಆನೆ ಹಿಡಿಯುತಿವುದು.
ಹೊರಗೆ ಶ್ವಾನವದನೆ ಕಾಡುತಿಹುದು.
ಬರಿ ಸ್ಥಾನ ಬಲ, ಸ್ವಂತ ಬಲವದಲ್ಲ.
ವಿಶ್ವದಾಭಿರಾಮ ಕೇಳು ವೇಮ

ಮೊಸಳೆಯು ನೀರಿನಲ್ಲಿರುವಾಗ ತನ್ನ ಶಕ್ತಿ-ಸ್ಥಾನಾರ್ಥ್ಯಗಳನ್ನು ಬಳಸಬಲ್ಲದು. ಆ ಕಾಲಕ್ಕೆ ಅದು ಬಹಳ ಬಲಾಢ್ಯವಾದ ಆನೆಯನ್ನು ಸಹ ಹಿಡಿದಿಳಿಯಬಲ್ಲದು. ಆದರೆ ಅದೇ ಮೊಸಳೆಯನ್ನು ನೀರಿನಿಂದ ಹೊರಗೆ ಇಡಲು ನಾಯಿಯಂಥ ಚಿಕ್ಕ ಪ್ರಾಣಿಯು ಸಹ ಅದನ್ನು ಕಾಡಿಸಬಹುದಾಗಿದೆ. ಇದೆಲ್ಲ ನೋಡಿದರೆ, ಮೊಸಳೆಗಾಗಲೀ, ನಾಯಿಗಾಗಲೀ ಬಲವಿರುವದು ಅವುಗಳ ವಿಶಿಷ್ಟ ಸ್ಥಾನಗಳಲ್ಲಿ ಮಾತ್ರ. ಇದರಿಂದ ಕೇವಲ ಸ್ಥಾನಬಲವೇ ನಿಜವಾದ ಬಲವಾಗಿದ್ದು, ಸ್ವಂತದ ಬಲಾಬಲಗಳು ಅಷ್ಟೊಂದು ಪ್ರಯೋಜನಕಾರಿಯಾಗಲಾರವು.

೧೫

ಪಂದಿಪಿಲ್ಲಲೀನು ಬದಿಯು ನೈದಿಂಟಿನಿ, ಕುಂಜರಂಬು ವೆಟ್ಟು ಗೊದಮು ನೊಕಟ,
ಉತ್ತಮಡಗು ಪುರುಷು ಡೊಕ್ಕಡು ಚಾಲಡಾ? ವಿಶ್ವದಾಭಿರಾಮ ವಿನುರ ವೇಮ.

ಹಂದಿ ಈಯುತಿಹುದು ಐದುಹತ್ತು ಕುನ್ನಿ
ಒಂದೆ ಮರಿಯ ಆನೆ ಈಯುತಿಹುದು.
ಮುಂದಿಯೊಳಗುತ್ತಮನೊಬ್ಬ ಸಾಲದೇನು?
ವಿಶ್ವದಾಭಿರಾಮ ಕೇಳು ವೇಮ.

ಹತ್ತಾರು ಚಿಲ್ಲರೆ ಕಾರ್ಯಗಳನ್ನು ಮಾಡುವುದಕ್ಕಿಂತಲೂ ಒಂದೇ ಆಗಲೊಲ್ಲದೇಕೆ, ಉತ್ತಮ ಕಾರ್ಯ ಮಾಡಬೇಕು. ಪರಿಮಾಣ ಮುಖ್ಯವಲ್ಲ; ಗುಣವೇ ಮುಖ್ಯ. ಹಂದಿ ಐದೋ ಹತ್ತೋ ಮರಿ ಹಾಕಬಹುದು. ಆದರೆ ಅದರಿಂದೇನು. ಆನೆಯು ಒಂದೇ ಮರಿ ಹಾಕಿದರೂ, ಅದಕ್ಕೆ ಬೆಲೆಯಿದೆ. ಇದೇ ರೀತಿ, ಜನಸಮೂಹದೊಳಗೆ ಒಬ್ಬನಾದರೂ ಉತ್ತಮನಿದ್ದರೆ ಸಾಕು.

೧೬

ಎರಗುವಾನಿದೆಲ್ಲ ನೆವ್ವಡೈನನುಜಾಲು, ನೊರುಲವಶಮೆ ಭುವಿನಿ ನೋಗುದೆಲ್ಲ?
ಏಟವೆಂಕದೀರ್ಪ ನೆಟ್ಸರಿತರಮಯೂ, ವಿಶ್ವದಾಭಿರಾಮ ವಿನುರ ವೇಮ.

ತಿಳಿದವಂಗೆ ತಿಳಿಸಲಾರು ಆದರೇನು?
ಇಳೆಯೊಳಾರು. ಮೂಢಗರುಹಬಹುದು?
ಹೊಳೆಯ ಡೊಂಕು ತಿದ್ದಲಾರು ಶಕ್ತರಿಹರು?
ವಿಶ್ವದಾಭಿರಾಮ ಕೇಳು ವೇಮ.

ಹೊಸ ವಿಷಯ-ವಿಚಾರಗಳನ್ನು ತಿಳಿದುಕೊಳ್ಳಲು ಹಳೆಯ, ಪ್ರಸ್ತುತ ವಿಷಯ-ವಿಚಾರಗಳ ತಿಳಿವಳಿಕೆ ಅವಶ್ಯವಾಗಿದೆ. ಕಾರಣ, ಎಷ್ಟಾದರೂ ತಿಳಿದವನಿಗೆ ಹೆಚ್ಚಿನ ವಿಷಯ ಹೇಳಿದರೆ ಅವನು ತಿಳಿದುಕೊಳ್ಳಬಹುದು. ಆದರೆ ತಿಳಿವಳಿಕೆಯ ಆಕಾಂಕ್ಷೆ ಇದರ, ವಿಷಯ-ಜ್ಞಾನದ ಗಂಧವೂ ಇರದ ಮೂಢನಿಗೆ ತಿಳಿಸಲು ಯಾರಿಗೆ ತಾನೆ ಸಾಧ್ಯ? ಅದೆಂತೆಂದರೆ, ಹೊಳೆಯು ಮಿದುವು ಭೂಮಿ ಕೊರೆದು ಡೊಂಕು-ಡೊಂಕಾಗಿ ಹರಿಯುತ್ತದೆ. ಅದರ ಡೊಂಕನ್ನು ತಿದ್ದುವುದು ಕಷ್ಟಸಾಧ್ಯವಲ್ಲವೇ?

೧೭

ಅಲ್ಪುಡಿಪುಡು ಸಿಲ್ಕು ನಾಡಂಬರಮುಗಾನು, ಸಜ್ಜನುಂಡು ಬಲ್ಕು ಜಲ್ಲಗಾನು,
ಕಂಚುಮ್ರೊಗುನಟ್ಲು ಕನಕಂಬುಮ್ರೊಗುನಾ? ವಿಶ್ವದಾಭಿರಾಮ ವಿನುರ ವೇಮ.

ಅಲ್ಪನಾಡುತಿಪ್ಪ ಆಡಂಬರದ ನುಡಿ.
ಒಳ್ಳೆಯವನಾಡುವ, ಮಧುರ ನುಡಿಯ.
ಮೊಳಗುವುದೇ ಹೊನ್ನು ಕಂಚು ಧ್ವನಿಸುವಂತೆ.
ವಿಶ್ವದಾಭಿರಾಮ ಕೇಳು ವೇಮ.

(ತುಂಬಿದ ಕೊಡವು ತುಳುಕುವದಿಲ್ಲ. ಅರ್ಧ ಬರಿದಾದ ಕೊಡವು ಮಾತ್ರ ಅತ್ತಿತ್ತ ಅಲುಗಾಡುತ್ತದೆ, ತನ್ನಲ್ಲಿಯೂ ನೀರಿದೆಯೆಂದು ತೋರಿಸಿಕೊಳ್ಳಲೋ ಎಂಬಂತೆ ಅದೇ ರೀತಿ....)

ಸಣ್ಣ ಮನುಷ್ಯನು ತನ್ನಲ್ಲಿ ಇಲ್ಲದ ದೊಡ್ಡಿಸ್ತಿಕೆಯನ್ನು ತೋರಲು ಇಲ್ಲವೆ ಇದ್ದ ಅಲ್ಪವನ್ನೇ ಮಹಾ ಎಂದು ಕಾಣಿಸಲು ಆಡಂಬರದ ಮಾತಿಗಿಳಿಯುತ್ತಾನೆ. ಆದರೆ ಒಳ್ಳೆಯ ಮನುಷ್ಯನು ಮಾತ್ರ ವಿನಯಪೂರ್ಣವಾಗಿ ಮಧುರವಚನವನ್ನೇ ನುಡಿಯುತ್ತಾನೆ. ಅದೆಂತೆಂದರೆ, ಅಲ್ಪಬೆಲೆಯ ಕಂಚು ಬಹಳಷ್ಟು ಸದ್ದು ಮಾಡುತ್ತದೆ. ಆದರೆ ಬಹುಬೆಲೆಯ ಕನಕ ಮಾತ್ರ ಹೆಚ್ಚು ಧ್ವನಿಸುವುದಿಲ್ಲ. ಡೌಲು-ಆಡಂಬರದ ವರ್ತನೆಯಿಂದ ಯಾರೊಬ್ಬರ ಘನತೆಯು ಹೆಚ್ಚುವದಿಲ್ಲ.

೧೮

ಒಗುನೋಗುಮೆಚ್ಚು ನೊನರಂಗ, ಭಾವಮಿಚ್ಚಿವೆಚ್ಚು ಬರಮಲುಬ್ದು
ಪಂದಿ ಬುರದ ಮೆಚ್ಚು ಬನ್ನೀರು ಮೆಚು ನಾ? ವಿಶ್ವದಾಭಿರಾಮ ವಿನುರ ವೇಮ.


ಮೂಢ ಮೆಚ್ಚು ತಿಪ್ಪ ಮೂಢ ಮನುಜನನ್ನು
ಮೂಢ ಮನಸಿನ ಪರಿ ಹಿತ ಲೋಭಿಗೆ.
ಹಂದಿ ಕೆಸರು ಮೆಚ್ಚಿತು; ಪನ್ನೀರನಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸರೋವರದಲ್ಲಿ ನೀರು ಕುಡಿಯಲು ಹೋದ ಹಂದಿಯು ಕೆಸರನ್ನೇ ಮೆಚ್ಚಿಕೊಂಡು ಉರುಳಾಡುತ್ತದೆ. ಅದನ್ನೇ ಕುಡಿಯುವದು. ಅದಕ್ಕೆ ಶುದ್ಧವಾದ ಪನ್ನೀರು ಮೆಚ್ಚುಗೆಯೆನಿಸುವದಿಲ್ಲ. ಆದೇ ರೀತಿ, ಹೀನನಾದ ಮೂಢ ಮನುಷ್ಯನು ತನ್ನಂಥ ಹೀನ ಮೂಢ ಮನುಷ್ಯನನ್ನು ಮಾತ್ರ ಮೆಚ್ಚುತ್ತಾನೆ. ಲೋಭಿಯಾದ ಮನುಷ್ಯನಿಗೆ ತನ್ನ ಮೂಢ ಮನಸ್ಸಿನ ರೀತಿಯೇ ಹಿತಕರವಾಗಿ ತೋರಿ, ಅವನಿಗೆ ಲೋಕದ ಚರಾಚರ ವಸ್ತುಗಳೆಲ್ಲ ಪರಮಾತ್ಮನ ಸೃಷ್ಟಿಯೆಂದೂ ಅವನ ಸೊತ್ತು ಎಂದೂ ತಿಳಿಯುವ ಅಪರಿಗ್ರಹ ಭಾವವು ಉದಿಸಲಾರದು.

ಗಂಗಪಾರುಚುಂಡು ಗದಲನಿಗತಿತೋಡ, ಮುರಿಗಿವಾಗು ಪಾರು ಮ್ರೊತ ತೋಡ
ದಾತಯೊರ್ಮಿನ ಟ್ಲಧಮು ಡೋರ್ವಗಾಲೇಡು, ವಿಶ್ವದಾಭಿರಾಮ ವಿನುರ ವೇಮ.

ಗಂಗೆ ಹರಿಯುತಿಹುದು ಕದಲದ ತೆರದಲ್ಲಿ
ರಾಡಿ ನಾಲೆ ನೀರಿಗುಂಟು ಶಬ್ದ,
ದಾನಿ ಸಹಿಸುವಂತೆ ಹೀನ ಸಹಿಸಲಾರ,
ವಿಶ್ವದಾಭಿರಾಮ ಕೇಳು ವೇಮ.

ನಾಲೆಯು ಚಿಕ್ಕದು. ಅದರ ನೀರೂ ರಾಡಿ ನೀರು. ಆದರೂ ಆ ನೀರು ಪ್ರವಹಿಸುವಾಗ ಶಬ್ದವಾಗುತ್ತದೆ. ಅದೇ ನೋಡಿರಿ ಗಂಗಾನದಿಯು ದೊಡ್ಡ ಪ್ರವಾಹ. ಆದರೂ ಅದು ಪ್ರಶಾಂತವಾಗಿ ಗಂಭೀರವಾಗಿ ಪ್ರವಹಿಸುತ್ತದೆ. ಅದರ ನೀರು ಸಹ ಸ್ವಚ್ಛ. ಶುದ್ಧ. ಅದೇರೀತಿ ದಾನಿಯಾದ ಮನುಷ್ಯನು ತ್ಯಾಗಪೂರ್ಣನಾಗಿದ್ದು, ತನಗಾದ ಕಷ್ಟನಷ್ಟಗಳನ್ನು ಸಹಿಸಿಕೊಳ್ಳುತ್ತಾನೆ. ಆದರೆ ಹೀನನಾದ ಮನುಷ್ಯನು ಅಲ್ಪನಷ್ಟ, ವಾದರೂ ಅತಿಶಯೋಕ್ತಿ ಮಾಡಿ, ತಾಳ್ಮೆಗೆಟ್ಟು, ವರ್ತಿಸುತ್ತಾನೆ.



೨೦

ಕಾನಿವಾನಿಚೇತ ಗಾಸುವೀಸಮು ಬೆಟ್ಟ, ವೆಂಟದಿರುಗುಟೆಲ್ಲ ವೆರ್ರಿತನಮು
ಪಿಲ್ಲಿಪಟ್ಟಕೋಲಿ ಬಿಲಿಚಿನ ಬಲ್ಕುನಾ? ವಿಶ್ವದಾಭಿರಾಮ ವಿನುರ ವೇಮ

ಸಲ್ಲದವನ ಕೈಗೆ ಕಾಸುವೀಸು ಕೊಟ್ಟು
ಅಲ್ಲಿನೋಡದಿಹುದು ಹುಚ್ಚುತನವು.
ಕೋಳಿ ಹಿಡಿದ ಬೆಕ್ಕು ಕೂಗಲೋಗೊಡುವುದೆ?
ವಿಶ್ವದಾಭಿರಾಮ ಕೇಳು ವೇಮ.

ನಂಬಲರ್ಹನಲ್ಲದವರ ಕೈಯಲ್ಲಿ ನಗ–ನಾಣ್ಯಗಳನ್ನು ಕೊಟ್ಟ ಮೇಲೆ ಅದರ ವಿನಿಯೋಗ ಸರಿಯಾಗಿ ನಡೆದಿದೆಯೋ ಇಲ್ಲವೋ ಆಗಾಗ್ಗೆ ನೋಡುತ್ತಿರಬೇಕು. ಹಾಗೆ ಮಾಡದಿದ್ದರೆ, ಹುಚ್ಚುತನವೆನಿಸೀತು! (ದುಂದುಗಾರ ಮಗನ ಕೈಯಲ್ಲಿ ಯಜಮಾನಿಕೆ ಒಪ್ಪಿಸಿದನಂತರ ಮೇಲ್ವಿಚಾರಣೆ ಮಾಡದಿದ್ದರೆ, ಹುಚ್ಚತನವಲ್ಲವೇ?) ಏಕೆಂದರೆ ಸಲ್ಲದ ಮನುಷ್ಯ ಹಣ ಸಿಕ್ಕೊಡನೆ ಅಂಕಿತ ಮೀರಿ ತಪ್ಪಿಸಿಕೊಳ್ಳುವನು. ಹೇಗೆಂದರೆ ಜಪ್ಪಿಸಿ ಕುಳಿತು ಕೋಳಿ ಹಿಡಿದ ಬೆಕ್ಕು, ಕೋಳಿಯನ್ನು ಬಿಡಿಸಿಕೊಳ್ಳುವ ಆಶೆಯಿಂದ ಕೂಗಿದರೆ ಹತ್ತಿರ ಬರುವುದೇ?

ಪಿಸಿನಿವಾನಿಯಿಂಟ ಬೀನುಗುವೆಡಲಿನ, ಪಟುವುಕೋಲಕುನು ಗಾಸುರಿಚ್ಚಿ
ವೆಚ್ಚವಾಯೆನನುಚು ವೆಕ್ಕಿವೆಕ್ಕೆಡ್ಡುರಾ ವಿಶ್ವದಾಭಿರಾಮ ವಿನುರ ವೇಮ

ಲೋಭಿ ಮನೆಯೊಳಿಂದ ಕಳೇಬರ ಹೊರಡಲು,
ಸೌದೆ-ಸಿದಿಗೆಗಾಗಿ ಬಹಳ ಕಾಸು
ವೆಚ್ಚವಾಯಿತೆಂದು ಬಿಕ್ಕಿ ಬಿಕ್ಕಿ ಅಳುವ,
ವಿಶ್ವದಾಭಿರಾಮ ಕೇಳು ವೇಮ.

(ಲೋಭಿಯ ನಡೆವಳಿಕೆ ವಿಚಿತ್ರ. ಅವನಿಗೆ ಪ್ರಪಂಚದ ಇನ್ನಾವ ವಸ್ತು-ಪ್ರಾಣಿಗಳಿಗಿಂತ ಕಾಸು ಅತ್ಯಂತ ಪ್ರಿಯಕರ. ಅದನ್ನು ಕಳೆದುಕೊಳ್ಳುವದೆಂದರೆ ಅವನಿಗೆ ಪ್ರಾಣಸಂಕಟ.) ಲೋಭಿಯ ಮನೆಯಲ್ಲಿ ಯಾರಾದರೂ ಸತ್ತರೆ, ಲೋಭಿಗೆ ದುಃಖವಿಲ್ಲ. ಶವವನ್ನು ಸಂಸ್ಕಾರಕ್ಕೆ ಸಾಗಿಸುವ ಕಾಲ ಬಂದು ಬಳಗದವರು ಸತ್ತವನ ನೆನಹಿನಿಂದ ದುಃಖಪಡುತ್ತಾರೆ. ಆದರೆ ಲೋಭಿ ಮನುಷ್ಯ ಮಾತ್ರ, ಶವ ಇಡುವ ಸಿದಿಗೆ, ಶವ ಸುಡುವ ಸೌದೆಗಳಿಗಾಗಿ ಹಣ ವೆಚ್ಚವಾಗುವುದಲ್ಲಾ! ಎಂದು ದುಃಖಿಸುತ್ತಾನೆ. (ಬಿಕ್ಕಿಬಿಕ್ಕಿ ಅಳುತ್ತಾನೆ.)

೨೨

ಕಷ್ಟಲೇಭವಾನಿ ಕಲಿವಿಃಕಿ ನಾಸಿಂಚಿ, ಬಡುಗುವಾಡು ತಿರುಗು ಬರಿಣವಿಂಚು
ತಗರುವೆಂಟನಕ್ಕ ತಗಿಲಿನಚಂದಂಬು, ವಿಶ್ವದಾಭಿರಾಮ ವಿನುರ ವೇಮ.

ಕಡುಲೋಭಿಯ ಹಣಕೆ ಆಶೆಪಟ್ಟುಕೊಂಡು,
ಬಡವ ತಿರುಗಾಟದಿ ಸುಖವರಸುವ.
ಟಗರಿನ ಹಿಂದೆ ನರಿ ತಗಲಿಕೊಂಡ ರೀತಿ
ವಿಶ್ವದಾಭಿರಾಮ ಕೇಳು ವೇಮ.

ಜಿಪುಣನು ಎಂದೂ ಕೈಬಿಚ್ಚಿ ಕೊಡುವದಿಲ್ಲ. ಕಾಡಿ ಬೇಡಿದರೂ ಕೊಡುವದಿಲ್ಲ. ನಿರಾಕರಿಸುವದರಲ್ಲಿಯೇ ಜಿಪುಣನು ಆನಂದ ಪಡೆಯುತ್ತಾನೆ.ಅಂಥವನಿಂದ ಸಹಾಯಧನಾದಿ ಪಡೆಯುವ ಆಶೆಯಿಂದ ಬಡವ ತಿರುಗಾಡಹತ್ತುವನು. ಆದರೆ, ಅವನಿಗೆ ತಿರುಗುವದಷ್ಟೇ ಪ್ರತಿಫಲವಾಗುತ್ತದೆ. ಅದೇ ಅವನ ಪಾಲಿನ ಸುಖ. ಹೇಗೆಂದರೆ, ಬಾಯಲ್ಲಿ ಆಹಾರದ ಮುದ್ದೆ ಹಿಡಿದ ಟಗರನ್ನು ಬಾಯಿ ಬಿಡಿಸಿ, ಆಗ ಕೆಳಗೆ ಬಿದ್ದ ಅನ್ನದ ಮುದ್ದೆಯನ್ನು ಕಿತ್ತುಕೊಳ್ಳಬೇಕೆಂದು ಹೊಂಚು ಹಾಕಿದ ನರಿ, ಟಗರನ್ನು ಬೆನ್ನು ಹತ್ತುತ್ತದೆ. ಆದರೆ ಟಗರು ಬಾಯಿ ಬಿಡುವದಿಲ್ಲ. ಕೊನೆಗೆ ಕೊಳದ ದಂಡೆಯ ಮೇಲೆ ಟಗರು ನಿಲ್ಲುತ್ತದೆ. ನೀರಿನಲ್ಲಿ ಕಾಣುವ ಅನ್ನದುಂಡೆಗೆ ನರಿ ನೋಸಹೋಗುತ್ತದೆ. ನೀರಿನಲ್ಲಿ ಧುಮುಕುತ್ತದೆ. ಅದೇ ಅದರ ಪಾಲಿನ ಪ್ರಾಪ್ತಿ; ಸುಖ.

೨೩

ತಾನ ಗುಡುವಲೇಕ ತಗವೇದಿಯೂಪ್ತುಲ ಜೇರನೇಯ ಡಟ್ಟಚೆನಟ ಪಶುವು,
ಚೇನಿಲೋನ ಬೊಮ್ಮಜೇಸಿ ಕಟ್ಟನಯಟ್ಲು, ವಿಶ್ವದಾಭಿರಾಮ ವಿನುರ ವೇಮ

ತಾನು ಉಣ್ಣಲಾರ ಸಂಪದಕಾಪ್ತರನು
ಸೇರಿಸಿಕೊಳದಿಹನು ಕೀಳು ಪಶುವು.
ಬೆಳೆದ ಭೂಮಿಯಲ್ಲಿ ಬೆದರು ನಿಂತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಬೆಳೆಯನ್ನು ಪಕ್ಷಿಗಳಿಂದ ರಕ್ಷಿಸಲು ಕಟ್ಟಿಗೆ ಕೋಲುಗಳನ್ನು ಜೋಡಿಸಿ ಕಟ್ಟಿ, ಅದಕ್ಕೆ ಅಂಗಿ ತೊಡಿಸುತ್ತಾರೆ ಧೋತರ ಉಡಿಸುತ್ತಾರೆ. ತಲೆಯಂತೆ ಕಾಣಲು ಮಣ್ಣಿನ ಗಡಿಗೆಯನ್ನು ಬುಡಮೇಲು ಮಾಡಿಹಾಕುತ್ತಾರೆ. ಇದಕ್ಕೆ ಬೆದರು ಎನ್ನುತ್ತಾರೆ; ಬೆದರಿಸುವ ಗೊಂಬೆಯಿದು ಈ ಬೆದರು ತಾನೂ ತಿನ್ನದು ತಿನ್ನುವ ಪಶು-ಪಕ್ಷಿಗಳನ್ನೂ ತಿನ್ನಗೊಡದು. ಅಂತೆಯೇ ದುಡ್ಡುಳ್ಳ ಲೋಭಿಯು, ಹಣವಿದ್ದರೂ, ಅದನ್ನು ತನ್ನ ಉಪಭೋಗಕ್ಕೂ ಬಳಸಿಕೊಳ್ಳಲಾರ. ಅಲ್ಲದೆ ಅನ್ಯರನ್ನೂ ಸಂಪತ್ತಿನ ಉಪಭೋಗಕ್ಕೆ ಸೇರಿಸಿಕೊಳ್ಳಲಾರ. ಅವನು ಉಪಭೋಗದ ಗಂಧವರಿಯದ ಕೀಳು ಪಶುವಿನಂತೆ.

೨೬

ಪೂರ್ವಜನ್ಮಮುಂದು ಬುಣ್ಯಂಬುನೇಯನಿ, ಪಾಪಿ ಧನಮು ಕಾಶಪಡುಟಯೆಲ್ಲ
ವಿತ್ತಮುರಚಿ ಕೋಯವೆದಕಿನಚಂದಂಬು,ವಿಶ್ವದಾಭಿರಾಮ ವಿನುರ ವೇಮ.

ಪೂರ್ವ ಜನ್ಮದಲ್ಲಿ ಪುಣ್ಯಮಾಡದಿಪ್ಪ,
ಪಾಪಿ ಹೊನ್ನಿಗಾಶೆ ಪಡುವುದೆಲ್ಲ,
ಬಿತ್ತಲು ಮರೆತವನು, ಬೆಳೆಯನಾಶಿಪಂತೆ.
ವಿಶ್ವದಾಭಿರಾಮ ಕೇಳು ವೇಮ.

(ಹಿಂದಿನ ಜನ್ಮದಲ್ಲಿ ಗೈದ ದೈವಿಕ ಮತ್ತು ನೈತಿಕ ಸಾಧನೆಯು ಕಾರಣರೂಪವಾಗಿದ್ದು ಪ್ರಸ್ತುತ ಜನ್ಮದಲ್ಲಿ ಪರಿಣಾಮರೂಪವಾಗಿ ತೋರಿಬರುತ್ತದೆ. ಇದುವೇ ಕರ್ಮದ ಕಲ್ಪನೆ. ನಮ್ಮ ತೋರಿಕೆಗೆ ಕಾಣದೆ ಹೋದರೂ ಅದು ನಿಜವಾಗಿಯೂ ಅದೃಶ್ಯವಾಗಿರುವುದು. ಪುನಃ ಅದು ಪ್ರವೃತ್ತಿಗಳ ರೂಪದಲ್ಲಿ ಮೂಡುವುದು. ಚಿಕ್ಕ ಮಕ್ಕಳಲ್ಲಿ ಸಹ ಮೃತ್ಯುಭಯ ಇತ್ಯಾದಿ ಪ್ರವೃತ್ತಿಗಳನ್ನು ನಾವು ಕಾಣುತ್ತೇವೆ. ಇದುವೇ ಹಿಂದಿನ ಜನ್ಮದ ಸಂಸ್ಕಾರ, ಕರ್ಮಫಲ.)

ಹಿಂದಿನ ಜನ್ಮದಲ್ಲಿ ಒಳ್ಳೆಯ ಕರ್ಮಗಳನ್ನು ಮಾಡದಿದ್ದರೆ, ಈ ಜನ್ಮದಲ್ಲಿ ಅನುಕೂಲ ಪರಿಸರದಲ್ಲಿ ಜನ್ಮವಾಗದು. ಕಾರಣ ಅಂಥ ಮನುಷ್ಯ ತನ್ನ ಸುಖಕ್ಕಾಗಿ ಹಣ ಪಡೆಯಲು ಆಶಿಸುತ್ತಾನೆ. ಹೀಗೆ ಮಾಡುವದೆಂದರೆ, ಹೊಲದಲ್ಲಿ ಬೀಜ ಬಿತ್ತಲು ಮರೆತ ಒಕ್ಕಲಿಗನು ಪೈರು ಜಿನ್ನಾಗಿ ಬರಲಿ ಎಂದು ಆಶಿಸುವಷ್ಟು ಮೂಢತನವೇ ಸರಿ. (ಈ ಜನ್ಮದಲ್ಲಿ ಮಾಡುವ ಸತ್ಕರ್ಮಗಳ ಫಲವು ಮುಂದಿನ ಜನ್ಮದಲ್ಲಿ ಫಲಿಸುವದರಿಂದ, ಸತ್ಕರ್ಮಗಳನ್ನು ಗೆಯ್ಯಬೇಕು.)

೨೫

ಲೋಭಿವಾನಿಜಂಪ ಲೋಕಂಬುಲೋಪಲ, ಮುಂದುವಲದು ವೇರೆ ಮುತಮುಗಲದು
ವೈಕಮಡುಗ ವೇಗ ಭಗ್ನುನ ಬಡಿಚಚ್ಚು ವಿಶ್ವದಾಭಿರಾಮ ವಿನುರ ವೇಮ.

ಲೋಭಿ ಮನುಜನನ್ನು ಕೊಲ್ಲಲು ಲೋಕದೊಳಗೆ,
ವಿಷವು ಬೇಡ, ಬೇರೆ ಮುತವು ಬೇಡ.
ಹಣವ ಕೇಳಲೊಡನೆ ಕುಸಿದು ಬೀಳುತಿಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಜೀವುಣನಾದ ಮನುಷ್ಯನಿಗೆ ಹಣವೇ ಪಂಚಪ್ರಾಣ. ಅದನ್ನು ತೊರೆಯುದಕ್ಕಿಂತಲೂ ಪ್ರಾಣ ಬಿಡುವುದೇ ಲೇಸೆಂದು ಅವನ ವಿಚಾರಧಾರೆ. ಅಂಥವನನ್ನು ಕೊಲ್ಲಲು ವಿಷದ ಗುಳಿಗೆ ಕೊಡಬೇಕಾಗಿಲ್ಲ. ಬೇರೆ ಮುತಕ್ಕೆ ಅವನನ್ನು ದೂಡುವರೆಂಬ ಭೀತಿ ಹುಟ್ಟಿಸಿ, 'ಸ್ವಧರ್ಮೇ ನಿಧನಂ ಶ್ರೇಯಂ' ಎಂದು ಅವನು ಸಾಯುವಂತೆ ಮಾಡಬೇಕಾಗಿಲ್ಲ. ಕೇವಲ ಹಣವನ್ನು ಕೇಳಿರಿ. ಅವನು ಅಲ್ಲಿಯೇ ಎದೆಯೊಡೆದು ಕುಸಿದು ಬೀಳುತ್ತಾನೆ.

೨೪

ಕನಿಯುಗಾನಲೇಡು ಕದಲಿಂಪಡಾನೋರು, ವಿನಿಯು ವಿನಗಲೇಡು ವಿಸ್ಮಯಮುಗ
ಸಂಪದಕಲವಾನಿ ಸನ್ನಿಪಾತಕಮದಿ, ವಿಶ್ವದಾಭಿರಾಮ ವಿನುರ ವೇಮ.

ಕಂಡು ಕಾಣಲಾರ, ತುಟಿ ಕದಲಿಸಲಾರ,
ಕೇಳಿ ಕೇಳದಂತಿಹ ವಿಸ್ಮಯದಿ.
ಸಂಪದವಿರುವವನ ಸನ್ನಿಪಾತಕವದು.
ವಿಶ್ವದಾಭಿರಾಮ ಕೇಳು ವೇಮ.

ಸನ್ನಿಪಾತಕವು ಒಂದು ರೋಗ. ಆ ರೋಗಿಗೆ ಸಂಜ್ಞೆಯು ತಪ್ಪಿಹೋಗಿರುತ್ತದೆ. ಅವನು ಕಣ್ಣು ತೆರೆದು ನೋಡುತ್ತಿದ್ದರೂ, ಗುರುತುಹಿಡಿಯುವ ಪ್ರಜ್ಞೆ ಇರುವದಿಲ್ಲ- ಅದೇ ರೀತಿ, ದುಡ್ಡಿದ್ದ ಸಿರಿವಂತನು, ತನ್ನೆದುರು ದಾನ-ಧರ್ಮಾದಿ ಬೇಡಿ, ಯಾರೇ ಬಂದರೂ, ನೋಡಿಯೂ ನೋಡದಂತಿರುತ್ತಾನೆ. ಬಾ ಹೋಗು ಕೂಡ ನುಡಿಯದೆ, ತುಟಿ ಕದಲಿಸುವದಿಲ್ಲ. ಅವರು ಬೇಡುವ ಬೇಡಿಕೆಗಳನ್ನೆಲ್ಲ ಕೇಳಿಯೂ ಕೇಳದಂತಿರುತ್ತಾನೆ. ತನ್ನೆಡೆಗೆ ಇವರೆಲ್ಲ ಏಕೆ ಬಂದಿರುವರೋ ಎಂದು ಆಶ್ಚರ್ಯಪಡುತ್ತಾನೆ. ಇದೇ ಸಂಪತ್ತಿರುವವರಿಗೆ ಬಡಿದುಕೊಂಡ ಸನ್ನಿಪಾತಕ ರೋಗ.

೨೭

ಭೂಪತಿ ಕೃಪನೆಮ್ಮಿ ಭೂವಿಜಿರಚುವಾಡು. ಪ್ರಜಲಯುಸುರುದಾಕಿ ಪಡುನುಬಿದಪ,
ಎಗುರ ವೇಯ ಬಂತಿ ಯೆಂದಾಕನಿಲುಚುರಾ, ವಿಶ್ವದಾಭಿರಾಮು ವಿನುರ ವೇಮು.

ಭೂಪತಿ ಕೃಪೆನಂಬಿ ಭೂಮಿಕೆಡಿಸುವವನು,
ಪ್ರಜೆಗಳುಸಿರು ಸೋಂಕಿ ಬಿದ್ದು ಹೋಹ.
ಎಸೆದ ಚೆಂಡದೆಷ್ಟು ಕಾಲ ನಿಲ್ಲಬಹುದು?
ವಿಶ್ವದಾಭಿರಾಮ ಕೇಳು ವೇಮ.

ಅರಸನ ಕೃಪೆಯು ಆಗೀಗ ಕೆಲವರ ಮೇಲಾಗಬಹುದು. ಆಗ ಅರಸನು ಹಲವಾರು ವಿಶೇಷ ಅಧಿಕಾರಗಳನ್ನು ಅನುಗ್ರಹಿಸಬಹುದು. ಅವುಗಳನ್ನು ದುರುಪಯೋಗಿಸಿ, ದೇಶದ ಜನರನ್ನು ಕೆಡಿಸುವವರು ಕೆಲವರು. ಅಂಥವನು ರಾಜ್ಯಕೃಪೆ ದೊರಕಿಸಿ ಮೇಲೇರಿದ್ದರೂ, ಪ್ರಜೆಗಳ ಕೋಪಕ್ಕೀಡಾಗಿ, ತತ್ಪರಿಣಾಮವಾಗಿ ರಾಜಕೃಪೆಯೂ ಹಿಂಗಿ,ಕೆಳಗಿಳಿದು ಹೋಗುವನು. ಹೇಗೆಂದರೆ, ಚಂಡನ್ನು ಮೇಲಕ್ಕೆ ಎಸೆದಾಗ ಅದು ಕೇವಲ ಸ್ವಲ್ಪು ಕಾಲ ಮಾತ್ರ ಮೇಲೆ ನಿಲ್ಲಬಹುದಲ್ಲದೆ, ಬಹಳ ಕಾಲದ ವರೆಗಲ್ಲ.

೨೮

ಇನಮುವಿರಿಗೆನೇನಿ ನಿನುಮೂರು ಮುಮ್ಮೂರು ಗಾಚಿಯತುಕ ನೇರ್ಪು ಗಮ್ಮರೀಡು
ಮನಸುವಿರಿಗೆನೇನಿ ಮರಿಯುಂಚನೇರ್ಪುನಾ, ವಿಶ್ವದಾಭಿರಾಮ ವಿನುರ ವೇಮು

ಲೋಹ ಮುರಿಯಿತೆಂದು ಎರಡು ಮೂರು ಸಾರೆ
ಕಾಯಿಸಿಬೆಸೆಯಬಲ್ಲ ಕಮ್ಮಾರನು
ಮನಸು ಮುರಿಯೆ ಮತ್ತೆ ಅಂಟಿಸಬಹುದೇನು?
ವಿಶ್ವದಾಭಿರಾಮ ಕೇಳು ವೇಮ.

ಕಬ್ಬಿಣದ ವಸ್ತು ಮುರಿದರೆ, ಎರಡು ಮೂರು ಸಲವಾದರೂ, ಕಮ್ಮಾರನು ಕಾಯಿಸಿ ಬೆಸೆಯಬಲ್ಲನು. ಆದರೆ ಪರಸ್ಪರ ಮನಸ್ಸಿನ ಹೊಂದಾಣಿಕೆ ತಪ್ಪಿದರೆ, ಅದನ್ನು ಅಂಟಿಸುವುದು ಕಷ್ಟ ಸಾಧ್ಯ. ಕಾರಣ ಮನಸ್ಸಿನ ಅನ್ಯೋನ್ಯ ಸಂಬಂಧವನ್ನು ಕೆಡದಂತೆ ಇಟ್ಟುಕೊಳ್ಳಬೇಕು.

೨೯

ನೀಳ್ಳಲೋನ ಜೇಪ ನೆರಿ ಮಾಂಸಮಾಶಕು, ಗಾಲಮುಂದು ಜಿಕ್ಕಿ ಕೂಲುಗಾದೆ ?
ಆಶೆಪುಟ್ಟ ಮನುಜುಡಾರೀತಿ ಜೆಡಿಪೋವು ವಿಶ್ವದಾಭಿರಾಮು ವಿನುರ ವೇಮು.

ನೀರೊಳಿರುವ ಮೀನು ನೆರೆಮಾಂಸಕಾಶಿಸಿ,
ಗಾಳದಲ್ಲಿ ಸಿಲುಕಿ ಹಾಳಾಗದೆ ?
ಆಶೆಯಿಂದ ಮನುಜ ಅಂತೆ ಸತ್ತುಹೋಹ.
ವಿಶ್ವದಾಭಿರಾಮ ಕೇಳು ವೇಮ.

ಮೀನು ಹಿಡಿಯುವ ಜಾಲಗಾರನು ಬಲೆಯನ್ನು ಹಾಕಿ ಇನ್ನೊಂದೆಡೆಯಿಂದ ಗಾಳಕ್ಕೆ ಮಳೆಹುಳುವನ್ನು ಸಿಕ್ಕಿಸಿ ನೀರಿನಲ್ಲಿ ಇಳಿಬಿಡುತ್ತಾನೆ. ಆ ಮಳೆಹುಳುವಿನ ಆಸೆಯಿಂದ ಮೀನು ಧಾವಿಸಿ ಬಂದು ಬಲೆಯೊಳಗೆ ಸಿಲುಕಿಕೊಳ್ಳುತ್ತದೆ. ತನ್ನ ಜೀವನವನ್ನೇ ಹಾಳು ಮಾಡಿಕೊಳ್ಳುತ್ತದೆ. ಅದೇ ರೀತಿ ಮನುಷ್ಯ ತನ್ನ ಆಶೆಯ ಮೋಹದಿಂದ ಸಂಸಾರದ ಬಲೆಯಲ್ಲಿ ಸಿಕ್ಕು ಸತ್ತು ಹೋಗುವನು. ಆಸೆ ತೊರೆದರೆ ಮಾತ್ರ ಮುಕ್ತಿ.

೩೦

ನರಿಹರಿಯನವಚ್ಚು ನಾರಾಯಣನವಚ್ಚು, ಮೇಲು ಮೇಲಟಂಚು ಮೆಚ್ಚವಚ್ಚು.
ಕೊಂಗುಕಾಸುವಿಡಿಚಿ ಗೊಬ್ಬುನನೀರಾದು ವಿಶ್ವದಾಭಿರಾಮ ವಿನುರ ವೇಮ.

ನರಹರಿಯೆನೆ ಲೇಸು, ನಾರಾಯಣ ಲೇಸು ;
ಒಳ್ಳಿತೊಳ್ಳಿತೆಂದು ಮೆಚ್ಚಬಹುದು.
ಬಿಡಿಯ ಕವದಿ ತೆಗೆದು ಒಡನೆ ನೀಡಹೊಲ್ಲ
ವಿಶ್ವದಾಭಿರಾಮ ಕೇಳು ವೇಮ.

ನಾಮದ ಮಹಿಮೆ ಕುರಿತು ಒಂದು ಕಥೆಯಿದೆ ಅದು ಹೀಗೆ. ಒಂದು ಸಲ ಕೃಷ್ಣನನ್ನು ಒಂದು ತಕ್ಕಡಿಯಲ್ಲಿಟ್ಟು ತೂಗುವಾಗ ಅವನ ಹೆಸರನ್ನು ಬರೆದ ಚೀಟಿಯನ್ನು ಇನ್ನೊಂದು ಪರಡಿಯಲ್ಲಿ ಇಟ್ಟರಂತೆ. ಚೀಟಿಯ ಪರಡಿಯೇ ಭಾರವಾಗಿ, ಕೃಷ್ಣನಿಗಿಂತ ಅವನ ಹೆಸರೇ ಮೇಲಾಯಿತಂತೆ. ಅದನ್ನೇ ದಾಸ ಪುರಂದರರು ಹೀಗೆ ಹೇಳಿದ್ದಾರೆ. 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ ! ತಾತ್ಪರ್ಯವೇನೆಂದರೆ, ನಿರಾಕಾರ ನಿರ್ಗುಣ ಬ್ರಹ್ಮನ ಉಪಾಸನೆ ಮೇಲು. ಕೇವಲ ನಾಮಸ್ಮರಣೆಯನ್ನು ಮನಶುದ್ಧಿಗೊಳಿಸುವ ಉಪಾಸನೆ ಮಧ್ಯಮ. ರೂಪವನ್ನೂ ಇರಿಸಿ, ಮೂರ್ತಿಪೂಜೆಗಿಳಿಯುವುದು ಕನಿಷ್ಟ. ಇನ್ನು ನಾವು ನಮ್ಮ ಮನಸ್ಸಿನ, ಇಂದ್ರಿಯಗಳ ಶುದ್ಧಿಗಾಗಿ ಮಾಡಬೇಕಾದ ಪೂಜೆ–ವಿಧಿ ನೇಮಗಳನ್ನು ನಮ್ಮ ಪರವಾಗಿ ರೊಕ್ಕ (ದಕ್ಷಿಣೆ) ಕೊಟ್ಟು ಮಾಡಹಚ್ಚುವುದಂತೂ ಇನ್ನೂ ಕೀಳಾದದ್ದು.)

ನರನಾದವನನ್ನೇ ಹರಿಯೆನ್ನಬಹುದು. 'ನಾರಾಯಣ' ಎಂದು ನಾಮಸ್ಮರಣೆ ಮಾಡಬಹುದು. ಅಷ್ಟೇ! ಆದರೆ ಅದೆಲ್ಲ ಒಳ್ಳೆಯದೇ; ಆದುದರಿಂದ ಅಂಥ ಪ್ರವೃತ್ತಿಯನ್ನು ಮೆಚ್ಚಿಕೊಳ್ಳಬಹುದು. ಆದರೆ ದೇವರ ಪೂಜೆ ನಾವು ಸ್ವಂತ ಮಾಡಬೇಕಾದದ್ದು. ಅದನ್ನು ದಕ್ಷಿಣೆ ನೀಡಿ, ಮಾಡಿಸುವುದರಿಂದ ಏನೂ ಫಲವಿಲ್ಲ. ಮನಶುದ್ಧಿಯಾಗಲಿ ಆಚಾರಶುದ್ಧಿಯಾಗಲಿ ಸಾಧ್ಯವಾಗದು. ಕಾರಣ ದಕ್ಷಿಣೆ ನೀಡುವುದು ತಪ್ಪು.

೩೧

ಮೇಡಿಪಂಡುಜೂಡ ಮೇಲಿಮ್ಮೆಯುಂಡುನು, ಪೊಟ್ಟವಿಚ್ಚಿಚೂಡ ಬುರುಗುಲುಂಡು
ಪಿರಿಕಿವಾರಿವುದಿನಿ ಬಿಂಕಮೀಲಾಗುರಾ. ವಿಶ್ವದಾಭಿರಾಮ ವಿನುರ ವೇಮ.

ಅತ್ತಿಹಣ್ಣು ಹೊರಗೆ ಹೊನ್ನಿನಂತೆ ಇಹುದು
ಹೊಟ್ಟೆಬಿಚ್ಚಿ ನೋಡಲೆಲ್ಲ ಹುಳುವೆ.
ಅಂಜುಗುಳಿಯ ಮನದ ಬಿಂಕವಿಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ.

(ಒಂದು ನಾಯಿ ಇನ್ನೊಂದು ನಾಯಿ ಕಂಡು ಭೀತಿಗೊಳ್ಳುತ್ತದೆ. ಅದು ತನ್ನ ಮೇಲೆ ಬೀಳಬಾರದಂತೆ, ಅದನ್ನು ಹೆದರಿಸಲು ತಾನೇ ಬೊಗಳಲಾರಂಭಿಸುತ್ತದೆ. ಇನ್ನೊಂದು ನಾಯಿಯೂ ತನ್ನ ಭೀತಿಯನ್ನು ಮುಚ್ಚಿಕೊಳ್ಳಲು ಬೊಗಳುತ್ತದೆ. ಭೀತಿಯು ಎರಡೂ ನಾಯಿಗಳಲ್ಲಿ ಬಿಂಕವಾಗಿ ತೋರುತ್ತದಷ್ಟೇ.)

ಅತ್ತಿ ಹಣ್ಣಿನ ಬಣ್ಣ ಕೆಂಪು ಛಾಯೆಯ ಹಳದಿ. ಬಂಗಾರದ ಬಣ್ಣ. ಆದರೆ ಅದನ್ನು ಒಡೆದು ನೋಡಿದರೆ, ಬರೀ ಹುಳು ತುಂಬಿರುತ್ತದೆ. ಅಂಜುಗುಳಿಯಾದರೂ ಇದೇ ರೀತಿ. ಹೊರ ನೋಟಕ್ಕೆ ಬಹಳ ಬಿಂಕದಿಂದ ವರ್ತಿಸುವನಾದರೂ ಅವನ ಮನಸ್ಸನ್ನು ವಿಶ್ಲೇಷಿಸಿ ನೋಡಿದರೆ ಧೈರ್ಯವಿರದು. ಕೇವಲ ಭೀತಿ ತುಂಬಿರುತ್ತದೆ.

೩೨

ತಲನುಪಾಗ ಪೈನ ತಗುಪಚ್ಚಡಮು ಬೊಜ್ಜ, ಚೆಪುಲಪೋಗು ಲರಸಿ ಚೇರು ನರ್ಥಿ
ಶುದ್ಧಪಟುವಟಂಚು ಬುದ್ಧಿಲೋ ನೆರುಗಕ, ವಿಶ್ವದಾಭಿರಾಮ ವಿನುರ ವೇಮ.

ಶಿರದಮೇಲೆ ಪೇಟ ಮೈಯೊಳು ನಿಲುವಂಗಿ
ಬೊಜ್ಜುಕವಿಯ ಓಲೆಯವನ ಕೇಳಿ
ಶುದ್ಧ ಪಶುವಿನಂತೆ ಬುದ್ಧಿಯೊಳು ತಿಳಿಯದೆ ?
ವಿಶ್ವದಾಭಿರಾಮ ಕೇಳು ವೇಮ.

(ಕಾವ್ಯದಿಂದ ಆಯಾ ಕಾಲದ ಜೀವನದ ರೀತಿ ನೀತಿಗಳ ಪರಿಚಯವೂ ಆಗುತ್ತದೆ. ಇದೂ ಒಂದು ಕಾವ್ಯದ ಪ್ರಯೋಜನ) ಹದಿನೈದನೇ ಶತಮಾನದ ಆಂಧ್ರ ನಾಡಿನ ಗಣ್ಯ ವ್ಯಕ್ತಿಯ ವಸ್ತ್ರ ವಡವೆಗಳೆಂದರೆ ಶಿರದಮೇಲಿನ ಪೇಟ. ಮೈಮೇಲೆ ಉದ್ದವಾದ ನಿಲುವಂಗಿ, ಬೊಜ್ಜು ಬೆಳೆದ ಹೊಟ್ಟೆ, ಕಿವಿಯಲ್ಲಿ ಓಲೆಗಳೇ ಆಗಿದ್ದವು. ಇಂಥ ವೇಷಭೂಷಣಗಳುಳ್ಳ ವ್ಯಕ್ತಿಯು ಸಿರಿವಂತನೇ ಇರುತ್ತಿದ್ದನು. ಆದರೆ ಅವನು ಉದಾರ ಚಿತ್ತನಲ್ಲ. ಆದ್ದರಿಂದ ಇಂಥವರ ವೇಷ-ಭೂಷಣಕ್ಕೆ ಮಾರುಹೋಗಿ ಅವರಲ್ಲಿ ಸಹಾಯಧನ ಯಾಚಿಸುವವನು, ಆಗು-ಹೋಗುಗಳ ಪರಿಚಯವಿಲ್ಲದ, ಪರಿಜ್ಞಾನವಿಲ್ಲದ ಪಶುವಿನಂತೆ.

೩೩

ಭೂಮಿಯಂದು ಬುಣ್ಯಪುರುಷುಲುಲೇಕುನ್ನ, ಜಗಮುಲೇಲನಿಲ್ಚು ಪೊಗುಲುಗಾನಿ
ಅಂತ ತರಚು ದೊರಕ ರಾಡನಾಡಲುಗಾನಿ ವಿಶ್ವದಾಭಿರಾಮ ವಿನುರ ವೇಮ.

ಭೂಮಿಯಲ್ಲಿ ಪುಣ್ಯ ಪುರುಷರಿಲ್ಲದಿರಲು
ಜಗವದೆಂತು ಬಿರಿಯದಿಹುದು.
ಅಂಥವರತಿಯಾಗಿ ದೊರಕರಲ್ಲಿಯಿಲ್ಲಿ.
ವಿಶ್ವದಾಭಿರಾಮ ಕೇಳು ವೇಮ

ಭೂಮಿಯಲ್ಲಿ ಎಲ್ಲರೂ ಲೋಭಿಗಳೂ ಸ್ವಾರ್ಥಿಗಳೂ ಅಲ್ಲ. ಕೆಲವರು ಉದಾರಚಿತ್ತರೂ ಪುಣ್ಯಕಾರ್ಯನಿರತರೂ ಇರುತ್ತಾರೆ. ಅಂಥ ಜನರು ಜನತೆಯಲ್ಲಿ ಹಬ್ಬಿರುವ ವಿಷಮತೆಯನ್ನು ತೊಡೆದು ಸಮತೆ-ಸಮಾಧಾನಗಳನ್ನು ಸ್ಥಾಪಿಸುತ್ತಾರೆ. ಅವರು ಇರದೆ ಹೋಗಿದ್ದರೆ, ಜಗತ್ತಿನಲ್ಲಿ ಧನಿಕರು-ದರಿದ್ರರು, ಮೇಲು-ಕೀಳು ಎಂಬ ಭೇದ ಭಾವ ಬೆಳೆದು ಜಗತ್ತು ಎರಡು ಭಾಗಗಳಾಗಿ ನಿಲ್ಲುತ್ತಿತ್ತು; ಹೀಗೆ ಜಗತ್ತು ಇಭ್ಭಾಗವಾಗಿ ಬಿರಿಯದೆ ಇರುತ್ತಿರಲಿಲ್ಲ.

೩೪

ಚಿತ್ತಶುದ್ಧಿಕಲಿಗಿ ಚೇಸಿನ ಪುಣ್ಯಂಬು ಕೊಂಚೆಮ್ಮೆನ ನದಿಯು ಗೊದುವಕಾದು
ವಿತ್ತನಂಬು ವರ್ರಿ ವೃಕ್ಷಂಬುನಕು ನೆಂತ, ವಿಶ್ವದಾಭಿರಾಮ ವಿನುರ ವೇಮ.

ಚಿತ್ತ ಶುದ್ಧಿ ಹೊಂದಿ ಗೈದ ಪುಣ್ಯಕಾರ್ಯ
ಕೊಂಚವಾದರೇನು ಕ್ಷುಲ್ಲಕಲ್ಲ.
ಆಲದ ಮುರವೆಷ್ಟು ? ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ

ಆಲದ ಮರ ಅತಿ ದೊಡ್ಡದು. (ನ್ಯಗ್ರೋಧವೃಕ್ಷ) ಅದರ ಹಣ್ಣು ಬಹಳ ಚಿಕ್ಕದು. ಅರ್ಧ ಇಂಚು ಮಾತ್ರ ಅದರ ವ್ಯಾಸವಿರಬಹುದು. ಅದರ ಬೀಜ ಇನ್ನೂ ಚಿಕ್ಕದು. ಸಾಸಿವೆ ಕಾಳಿನಷ್ಟು. ಇಷ್ಟು ಚಿಕ್ಕ ಬೀಜದಿಂದ ಇಂಥ ದೊಡ್ಡ ಮರವಾಗುವುದೆಂದರೆ ನಂಬಲೂ ಕಷ್ಟ. ಆದರೆ ನಮ್ಮ ಕಣ್ಣೆದುರು, ಬೀಜ ಬಿದ್ದು, ಸಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಿ ಬೆಳೆಯುತ್ತಿರುವುದನ್ನು ನಾವು ನಿತ್ಯ ನೋಡುತ್ತಿರುವುದರಿಂದ ಇದು ಸಂಭವನೀಯವೆನಿಸುತ್ತದೆ. ಸತ್ಯವೆನಿಸುತ್ತದೆ. ಅದೇ ರೀತಿ. ನಾವು, ಸದುದ್ದೇಶದಿಂದ ಮಾಡುವ ಪುಣ್ಯಕಾರ್ಯವನ್ನು ನಿರ್ಮಲ ಚಿತ್ತದಿಂದ ಮಾಡಿದರೆ, ಅದು ಎಷ್ಟೇ ಸಣ್ಣ ಕಾರ್ಯವಾಗಿರಲಿ, ಮಹಾಫಲವೀಯುವುದು.

ತಿಳಿ

ಇಂಟಯಾಲಿವಿಡಿಚಿ ಯಿಲ ಜಾರಕಾಂತಲ, ನೆಂಟದಿರುಗುವಾಡು ವೆರ್ರಿವಾಡು.
ಪಂಟಚೇನು ವಿಡಿಚಿ ಪರಿಗೆ ಯೇರಿನಯಟ್ಲು, ವಿಶ್ವದಾಭಿರಾಮ ವಿನುರ ವೇಮ.

ಮನೆಯ ಮಡದಿ ಬಿಟ್ಟು ಜಾರಕಾಂತೆಯೊಡನೆ
ಬೆನ್ನು ಹತ್ತಿ ತಿರುಗುತಿಪ್ಪ ಹುಚ್ಚ.
ತೆನೆಯ ಪೈರು ಬಿಟ್ಟು, ಕರಿಕೆ ಕೀಳುವಂತೆ
ವಿಶ್ವದಾಭಿರಾಮ ಕೇಳು ವೇಮ

ತನ್ನ ಹೊಟ್ಟೆ-ಬಟ್ಟೆಗೆ ಸಾಕಾಗಿ ಹೆಚ್ಚುಳಿಯುವಷ್ಟು ತನ್ನ ಹೊಲದಲ್ಲಿ ಬಿತ್ತಿ ಬೆಳೆದ ಪೈರು ನಿಂತಿರುವಾಗ ಅದನ್ನೇ ಕೊಯ್ದು, ತನಗೂ, ತುರುಕರುಗಳಿಗೂ ಅನ್ನ ಮಾಡಿ ಕೊಳ್ಳದೆ, ಇನ್ನೊಬ್ಬರ ಹೊಲದಲ್ಲಿರುವ ಕರಿಕೆ–ಹುಲ್ಲನ್ನು ಕಿತ್ತು ದನಕರುಗಳಿಗೆ ಒಯ್ಯುವುದಾಗಲೀ ಇಲ್ಲವೆ ಹಕ್ಕರಿಕೆ, ತುಂಬಿ ಸೊಪ್ಪುಗಳನ್ನು ತನಗಾಗಿ ಕಿತ್ತು ಒಯ್ಯುವುದಾಗಲೀ ಹುಚ್ಚುತನವು. ಅದೇ ರೀತಿ ಭೋಗಾಕಾಂಕ್ಷೆಗಳನ್ನು ಪೂರೈಸಲು, ತನ್ನ ಸೇವೆಗೈಯ್ಯಲು ಮನೆಯ ಮಡದಿ ಇರುವಾಗ ಸೂಳೆಯ ಬೆನ್ನು ಹತ್ತಿ ತಿರುಗುವವನು ಕೇವಲ ಮೂರ್ಖ ಮನುಷ್ಯನು. ಮಡದಿ ಬೆಳೆದ ಪೈರಿನಂತೆ. ಸೂಳೆ ಕರಿಕೆ ಹುಲ್ಲಿನಂತೆ.

ತಿಟ

ರಾಜವರುಲಕೆಪುಡು ರಣರಂಗಮುಲಚಿಂತ, ಪರಮಮುನುಲಕೆಲ್ಲ ಬರಮುಚಿಂತ,
ಅಲ್ಪನರುಲಕೆಪ್ಪು ಡತಿವಲಪೈಚಿಂತ, ವಿಶ್ವದಾಭಿರಾಮ ವಿನುರ ವೇಮ

ದೊರೆಯು ಘನನಾಗಿರೆ, ರಣರಂಗದ ಚಿಂತೆ.
ಪರಮ ಮುನಿಗೆ ಪರಮಾತ್ಮನ ಚಿಂತೆ
ನಠನು ಅಲ್ಪನಿರಲು ನಾರಿ ಮೇಲೆ ಚಿಂತೆ
ವಿಶ್ವದಾಭಿರಾಮ ಕೇಳು ವೇಮ.

ಬೇರೆ ಬೇರೆ ಜನರಿಗೆ ಬೇರೆ ಬೇರೆ ರುಚಿ. ಅಂದರೆ ಚಿಂತನ ಮೂಡುವುವು. ಸಿ ಸಂಪದಗಳುಳ್ಳ ರಾಜನಿಗೆ ತನ್ನ ರಾಜ್ಯ ವಿಸ್ತರಿಸಲು, ಪ್ರತಿಷ್ಠೆ ಪ್ರಸ್ಥಾಪಿಸಲು, ಯುದ್ಧಹೂ ಜಯಭೇರಿ ಮೊಳಗಿಸಬೇಕೆಂಬ ಚಿಂತೆ ಇರುತ್ತದೆ. ಶ್ರೇಷ್ಠನಾದ ಮುನಿಯು (ವಿದ್ವಾ ವಂತನು) ಪರಮಾತ್ಮನ ಸ್ವರೂಪವೇನು? ಅದನ್ನು ತಿಳಿಯುವ ಪರಿಯೆಂತು? ಎಂದ ಚಿಂತಿಸುವನು. ಇನ್ನು ಸಣ್ಣ ಜನರು ಹೆಣ್ಣಿನ ಭೋಗಕ್ಕಾಶೆಬಟ್ಟು, ಅವಳ ಸಂಗದ ಬಗ್ಗೆ ಚಿಂತಿಸುತ್ತಾರೆ.

ತಿಲ

ತಲ್ಲಿದಂಡ್ರುಲಪಯಿ ದಯಲೇನಿಪುತ್ರುಂಡು, ಪುಟ್ಟನೇಮಿ? ಮರಿಯು ಗಿಟ್ಟನೇಮಿ ?
ಪುಟ್ಟಲೋನ ಜೆದಲು ಪುಟ್ಟವಾ? ಗಿಟ್ಟವಾ? ವಿಶ್ವದಾಭಿರಾಮ ವಿನುರ ವೇಮ

ತಾಯಿ ತಂದೆಯರಲಿ ದಯೆದೋರದ ಪುತ್ರ
ಹುಟ್ಟಲೇನು ? ಮತ್ತೆ ಸತ್ತರೇನು?
ಹುತ್ತದಲಿ ಗೆದ್ದಲು ಹುಟ್ಟವೆ? ಸಾಯವೇ?
ವಿಶ್ವದಾಭಿರಾಮ ಕೇಳು ವೇಮ.

ಇರುವೆ ಆಯ್ದು ತಂದ ಮಣ್ಣಿನಿಂದ ಹುತ್ತ ತಯಾರಾಗುತ್ತದೆ. ಅಲ್ಲಿ ಗೆದ್ದಲು ಹುಳು ಹುಟ್ಟಿದರೂ ಅಷ್ಟೇ; ಹುಟ್ಟದಿದ್ದರೂ ಅಷ್ಟೇ. ಅದೇ ರೀತಿ ತನ್ನನ್ನ ಹೆತ್ತು, ಹೊತ್ತು ಸಾಕಿ ಸಲಹಿದ ತಾಯಿ–ತಂದೆಗಳಲ್ಲಿ ದಯೆಯನ್ನು ವ್ಯಕ್ತಪಡಿಸದ ಮನುಷ್ಯನಾದರೂ ನಿರರ್ಥಕ. ಅಂಥವನು ಇದ್ದರೇನು? ಸತ್ತರೇನು? ಹುಟ್ಟದರೇನು? ಹುಟ್ಟದಿದ್ದರೇನು?

ತಿಳ

ಅಭಿಜಾತ್ಮಮುನನು ನಾಯುವುಗಲನಾಳ್ಳು, ದಿರುಗುಚುಂದುರು ಭ್ರಮುದಿಪ್ಪಲೇಕ,
ಮುರುಕಿ ಭಾಂಡಮುಂದು ಮುಸಕು ನೀಗಲಭಂಗಿ, ವಿಶ್ವದಾಭಿರಾಮ ವಿನುರ ವೇಮ

ಆಭಿಜಾತ್ಯನೆಂದು ಆಯುಷ್ಯದ ತನಕ
ತಿರುಗುತಿಪ್ಪ ಭ್ರಮೆಯೊಳಗರಿಯದೆ;
ಮುಸುರೆ-ಭಾಂಡೆಯನ್ನು ಮುತ್ತುವ ನೊಣದಂತೆ.
ವಿಶ್ವದಾಭಿರಾಮ ಕೇಳು ವೇಮ.

ತಾನು ಹೆಚ್ಚಿನ ಜಾತಿಯಲ್ಲಿ ಹುಟ್ಟದವನು. ತನಗೆ ಹೆಚ್ಚಿನ ಯೋಗ್ಯತೆ ಹುಟ್ಟಿನಿಂದಲೇ ಬರುತ್ತದೆ ಎಂದು ಆಯುಷ್ಯದ ಕೊನೆಯತನಕ ಭ್ರಮೆಯಿಂದ ತಿರುಗುತ್ತಾನೆ. ಪರಮಾತ್ಮನ ತಿಳಿವು ಅವನಿಗೆ ಆಗದೆ ಹೋಗುತ್ತದೆ. ಜಾತಿ,ವರ್ಣ, ಮತ–ಪಂಥ, ಮೀರಿ ನಿಲ್ಲುವ ಸ್ಥಿತಿಯೇ ಪರಮಾತ್ಮನನ್ನು ಅನುಭವಿಸುವ ಸ್ಥಿತಿ. ಜಾತಿಯಮೇಲ್ಮೆಯ ಜಂಭದಲ್ಲಿ ಸಿಲುಕಿದವನು, ಅಜ್ಞನಾಗಿಯೇ ಉಳಿಯುವನು. ಹೇಗೆಂದರೆ, ಒಂದು ನೊಣ ಮುಸುರೆ ಪಾತ್ರೆಗೆ ಹತ್ತಿದ ಮುಸುರೆಯನ್ನು ಸೇವಿಸುತ್ತದೆ. ಅದು ಮುಸುರೆಯನ್ನು ನೋಡಿ ಆನಂದಬಡುತ್ತದೆ. ಅದನ್ನು ಕಂಡು ಇನೊಂದು ನೊಣ ಬರುತ್ತದೆ. ಅದೂ ಅದೇ ಪಾತ್ರೆಯಮೇಲೆ ಕುಳಿತುಕೊಳ್ಳುತ್ತದೆ. ಮುಸುರೆಹತ್ತಿದ ಮಣ್ಣಿನಗಡಿಗೆಯನ್ನೇ ನೆಕ್ಕುತ್ತದೆ. ಅದೇ ಪಕ್ವಾನ್ನವೆಂದು ಭಾವಿಸಿ ತನಗೂ ಪಾಲು ದೊರೆಯಿತೆಂದು ಆನಂದ ಪಡುತ್ತದೆ; ಅದೇ ರೀತಿ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಮಾತ್ರದಿಂದ ತಮಗೆ ಪರಮ ಪದವಿ ಲಭ್ಯವೆಂದು ಭಾವಿಸಿದರು, ಅನ್ನವನ್ನಲ್ಲ, ಮುಸುರೆಯನ್ನೂ ಅಲ್ಲ, ಮುಸುರೆ ಪಾತ್ರೆಯ ಮಣ್ಣಿನ ರುಚಿ ನೋಡಿ ತೃಪ್ತಿಪಟ್ಟ ರೀತಿಯಷ್ಟೇ.

೩೯

ಕುಂಡಪಗಿಲೆನೇನಿ ಗ್ರೊತ್ತದಿಕುದುರುನು. ಭೂತಲಂಬುನಂದು ಬೊಂದುಗಾನು.
ಕೂಲಬಡಿನನರುಡು ಕುದುರುಟ ಯುರುದಯೂ, ವಿಶ್ವದಾಭಿರಾಮ ವಿನುರ ವೇಮ.

ಗಡುಗೆಯೊಡೆಯಲೊಡನೆ ಹೊಸದು ಬರುವುದಲ್ತೆ.
ಪೊಡವಿಯೊಳಗೆ ಪೂರ್ವಸ್ಥಿತಿ ಪಡೆಯ.
ಅಡಿಗೆ ಬಿದ್ದ ಮನುಜ ದಡವೆಟುಕಲು ಅರಿಯ.
ವಿಶ್ವದಾಭಿರಾಮ ಕೇಳು ವೇಮ

ಒಂದು ಮಡಿಕೆ ಒಡೆದು ಹೋದೊಡನೆ, ಹೊಸ ಮಡಿಕೆ ಕೊಳ್ಳಬಹುದು. ಆದರೆ ಮನುಷ್ಯ ವೇಲಿನ ಹಂತಕ್ಕೇರಿ, ನಂತರ ಕೆಟ್ಟ ಮಾರ್ಗಕ್ಕಿಳಿದನೆಂದರೆ, ಪುನಃ ಮೊದಲಿನ ಸ್ಥಿತಿಯನ್ನು ಮುಟ್ಟುವುದು ಕಷ್ಟ. ನೀತಿಯಿಂದ ಕೆಳಗೆ ಬಿದ್ದ ಮನುಷ್ಯ ಕುದುರಿ ಮೇಲೇಳುವುದು ಕಷ್ಟ ಸಾಧ್ಯ.

೪೦

ದೊಂಗಮಾಟಲಾಡ ದೊಗುಕುನಾ ಮೋಕ್ಷಂಬು ಚೇತಕಾನಿಕೂತ ಚೆಲ್ಲದೆಪುಡು,
ಗುರುವು ಪದ್ದು ಕಾದು ಗುಣಹೀನ ಮದಿಕಾನಿ ವಿಶ್ವದಾಭಿರಾಮ ವಿನುರ ವೇಮ.

ಢೋಂಗಿ ಮಾತನಾಡಿ, ದೊರಕಬಹುದೆ ಮೋಕ್ಷ?
ಆಗು ಹೋಗದಂಥ ಕೂಗು ಹೊಲ್ಲ.
ಸದ್ಗುರುವಿನ ಚಿಹ್ನೆಯಲ್ಲ; ದುರ್ಗುಣಿಯದು.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಎಷ್ಟೊ ಜನ ಗುರುಗಳೆಂದು ಹೇಳಿಕೊಂಡ ತಿರುಗುತ್ತಾರೆ. ಕೆಲವರು ಪೀಠವೇರಿ ಮೆರೆಯುತ್ತಾರೆ. ಶಾಸ್ತ್ರಗಳನ್ನು ಅವರೇನೋ ಓದುಬಲ್ಲವರಿರಬಹುದು. ಆದರೆ ಅದರ ಆಳ ಅರ್ಥವನ್ನು ಅವರಲ್ಲಿ ಬಹಳ ಜನ ತಿಳಿದಿರುವುದಿಲ್ಲ. ಕೇವಲ ಬ್ರಹ್ಮ, ಮಾಯೆ, ಪ್ರಕೃತಿ ಇತ್ಯಾದಿ ಶಬ್ದಗಳು ಮಾತ್ರ ಗೊತ್ತು. ಗುರಿಯನ್ನ ಮರೆತು ಕೇವಲ ಶಬ್ದಗಳಿಗಾಗಿ ಬಡಿದಾಡುತ್ತಾ, ಅರ್ಥವಾಗದ ಪ್ರಯೋಜನಕ್ಕೆ ಬಾರದ ಮಂತ್ರಗಳನ್ನು ಪಠಿಸುತ್ತಾರೆ .ಇದರಿಂದ ಅವರಿಗೇನು ಮೋಕ್ಷವಾದೀತೇ? ತಾವೇ ಪ್ರಣವ ಸ್ವರೂಪಿಗಳೆಂದೂ ನಿರಂಜನರೆಂದೂ ಹೇಳಿಕೊಂಡರೆ ಢೋಂಗಿತನವಷ್ಟೇ. ಇಂಥ ಒಣ ಕೂಗೆಬ್ಬಿಸಿ, ತಮಗೆ ಸೇವೆ ಸಲ್ಲಿಸಿದರೆ ಮುಕ್ತಿದೊರೆಯುವುದು, ಎಂಬಿತ್ಯಾದಿ ಆಗ-ಹೋಗದ ಮಾತಿನಿಂದ ಏನಾಗಬೇಕಾಗಿದೆ? ಈ ತರದ ವರ್ತನೆಯು ಸದ್ಗುರುವಿನ ಲಕ್ಷಣವಲ್ಲ. ಕೇವಲ ದುರ್ಗುಣಿಗೆ ಮಾತ್ರ ಇಂಥ ವರ್ತನೆ ಒಪ್ಪತಕ್ಕುದಾಗಿದೆ.

೪೧

ಅನಗನನಗರಾಗ ಮತಿಶಯಿಲ್ಲು ಚುನುಂಡ, ದಿನಗದಿನಗ ವೇಮು ತೀಪಿನುಂಡು,
ಸಾಧಕಮುನ ಬನುಲು ಸಮಕೂರು ಧರಲೋನ ವಿಶ್ವದಾಭಿರಾಮ ವಿನುರ ವೇಮ.

ಅನುತನುತಿರೆ, ರಾಗ ಅತಿಶಯವಾಗುವುದು.
ತಿನುತ ತಿನುತ ಬೇವು ಸಿಹಿಯೆನಿಪುದು.
ಸಾಧನೆಯಿಂ ಕಾರ್ಯಸಿದ್ಧಿ ವಸುಧೆಯೊಳಗೆ
ವಿಶ್ವದಾಭಿರಾಮ ಕೇಳು ವೇಮ.

ಗಾಯನ ಕಲೆಯಾಗಲೀ ರಾಗಾಲಾಪನೆಯಾಗಲೀ ಒಮ್ಮೆಲೇ ಸಾಧ್ಯವಾಗುದದಿಲ್ಲ. ಅನ್ನುತ್ತನ್ನುತ್ತ ಹೋದ ಹಾಗೆ, ರಾಗವು ಸರಿಯಾಗಿ ಹೊಂದುತ್ತದೆ. ಧ್ವನಿ ಪಳಗುತ್ತದೆ. ಅದೇ ರೀತಿ, ಬೇವಿನ ಸೊಪ್ಪಿನಂಥ ಕಹಿ ಪದಾರ್ಥವನ್ನು ಸಹ ಪ್ರತಿ ದಿನ ಔಷಧವೆಂದು ತಿನ್ನುತ್ತ ಹೋದರೆ, ಅದರ ಕಹಿ ನಮ್ಮ ನಾಲಗೆಗೆ ಬಾಧಿಸುವುದಿಲ್ಲ. ಕೆಲದಿನಗಳ ನಂತರ ಅದು ಸಪ್ಪಗೆ ಎನ್ನಿಸುವುದು. ಆ ಬಳಿಕ, ಸಿಹಿಯೆನ್ನಿಸಲೂ ಬಹುದು. ಅದೇ ರೀತಿ ನಾವು ಯಾವುದೇ ಮಹತ್ಕಾರ್ಯ ಸಾಧಿಸಬೇಕಾದರೂ ಕಷ್ಟನಷ್ಟಗಳಿದ್ದೇ ಇರುತ್ತವೆ. ಅವುಗಳನ್ನು ಅನುಭವಿಸಿ ಮುಂದೆ ಸಾಗಿದರೆ, ಕಷ್ಟದ ಅನುಭವವೆನ್ನಿಸದೆ, ಕರ್ಮಾನುರಕ್ತಿಯೇ ಸುಖಕರ ವೆನಿಸಬಹುದು.

೪೨

ತೇನೆ ತೆರಲಜಾಡ ದೇನೆಟೀಗಯೆರುಂಗು ಸುಮರಸಂಬುಜಾಡ ಭ್ರಮರಮೆರುಗು
ಪರಮಯೋಗಿ ಜಾಡ ಭಕ್ತ ಡೆರುಂಗುನು ವಿಶ್ವದಾಭಿರಾಮ ವಿನುರ ವೇಮ.

ಜೇನಿನೊಳಗೆ ಕಂಡಿ ಜೇನುಹುಳಕೆ ಗೊತ್ತು.
ಸುಮದ ರಸದ ದಾರಿ ತುಂಬಿಗಷ್ಟೆ.
ಪರಮಯೋಗಿಪರಿಯು ಭಕುತಗಷ್ಟೆ ಗೊತ್ತು.
ವಿಶ್ವದಾಭಿರಾಮ ಕೇಳು ವೇಮ.

ಜೇನು ಹುಟ್ಟಿನಲ್ಲಿ ಕಿಂಡಿಯೊಂದಿರುತ್ತದೆ. ಆ ಕಿಂಡಿ ನಮಗೆ ಗೊತ್ತಾಗದಿರಬಹುದು. ಆದರೆ ಜೇನು ಹುಳಕ್ಕೆ ಅದು ಗೊತ್ತು. ಹೂವಿನಲ್ಲಿ ರಸವೆಲ್ಲಿರುವುದೆಂಬುದು ತುಂಬಿಗೆ ಗೊತ್ತು. ಅದೇ ರೀತಿ, ಬಹಳ ಶ್ರದ್ಧೆಯಿಂದ ಜ್ಞಾನಾಪೇಕ್ಷೆಯಿಂದ ಕೂಡಿದ ಭಕ್ತನು ಮಾತ್ರ ಪರಮಯೋಗಿಯ ರೀತಿಯು ಗೋಚರವಾಗುವುದು. ಉಳಿದವರ ಕಣ್ಣಿಗೆ ಯೋಗಿಯ ವರ್ತನೆ ವಿಕ್ಷಿಪ್ತವಾಗಿ ಕಾಣಬಹುದು.

೪೩

ಶಿವನಿಯನುಭವಂಬು ಸೃಷ್ಟಿಲೋಪಲರೇಕ, ಸಂಶಯಂಬು ಚೆಡದು ಸಾಧಕುಲಕು.
ಚೆಲಗು ದಿವ್ವೆಲೇಕ ಚಿಕಟವಾಯುನಾ? ವಿಶ್ವದಾಭಿರಾಮ ವಿನುರ ವೇಮ

ಶಿವಾನುಭವ ಸೃಷ್ಟಿಯೊಳಗೆ ಆಗದಿರಲು
ಸಂಶಯಗಳಳಿಯವು ಸಾಧು ಕುಲಕೆ.
ಬೆಳಗುವದೀಪವಿರದೆಂತು ನಿಶೆಯಳಿವುದು?
ವಿಶ್ವದಾಭಿರಾಮ ಕೇಳು ವೇಮ.

(ಶಿವ ಎಂದರೆ ಕಲ್ಯಾಣ, ಭವ್ಯತೆ ಆನಂದಮಯ. ಶಿವಾನುಭವವೆಂದರೆ, ಆನಂದವೇ, ಉಸಿರಾಗಿ, ಪ್ರೇರಣಾಶಕ್ತಿಯಾಗಿ ಅಂತರ್ಬಾಹ್ಯ ಶಕ್ತಿಯಾಗಿ ಇರುವ ಸ್ಥಿತಿ. ಇದು ವಾದಾತೀತ ಸ್ಥಿತಿ. ಅನಿರ್ವಚನೀಯ ಅನುಭವ.) ಇಂಥ ಶಿವಾನುಭವವು ಈ ಪ್ರಕೃತಿ ರೂಪದ ಜಗತ್ತಿನಲ್ಲಿ ಆಗದಿದ್ದರೆ, ಮನಸ್ಸಿನ ಸಂಶಯಗಳು ಅಳಿಯಲಾರವು. ಸಾಧಕರ ಸಂಶಯ ನಿವಾರಣೆಯಾಗಬೇಕಾದರೆ ಪ್ರಕೃತಿಯಲ್ಲಿ ಬ್ರಹ್ಮನ ಅನುಭವ ಅವರಿಗಾಗಬೇಕು. ಸಾಧಕರ ಗುರಿಯೇ ಬ್ರಹ್ಮದರ್ಶನವಷ್ಟೇ. ಜ್ಯೋತಿಯೇ ನಮ್ಮ ಗುರಿಯಾದರೆ, ಸುತ್ತಲೂ ಆವರಿಸಿದ ಗಾಢ ಕತ್ತಲೆ ಮಾಯೆಯ ಆವರಣದಂತೆ. ನಾವು ಇಂದ್ರಿಯ ನಿಗ್ರಹದಿಂದ ಆಶೆಗಳನ್ನು ಮೆಟ್ಟಿದಂತೆ ಆ ಜ್ಯೋತಿಯ ಸಮೀಪ ಹೋಗಹತ್ತುವೆವು. ಆಗ ಗಾಢ ಕತ್ತಲೆ ಕಳೆದು ಮಂದ ಪ್ರಕಾಶ ಕಾಣುವುದು. ಇನ್ನೂ ಸಮೀಪಕ್ಕೆ ಹೋದರೆ ಪ್ರಕಾಶವೇ ಕಾಣಬಹುದು. ದೀಪದರ್ಶನವಾದ ಮೇಲೆ ದೀಪವಿದೆ ಎಂಬ ಅರಿವಾಗುತ್ತದೆ. ಆದರೆ ದೂರದಲ್ಲಿ ಗಾಢಾಂಧಕಾರದಲ್ಲಿ ನಿಲ್ಲಿಸಿ ಅಗೋ ಅಲ್ಲಿ ದೀಪವುಂಟು ಕಾಣುತ್ತಿಲ್ಲವಷ್ಟೇ ಎಂದರೆ ಸಂಶಯ ಹೋಗದು. ಆ ದೀಪವೇ ಇಲ್ಲದಿದ್ದರೆ, ಕತ್ತಲೆಯು ಹರಿಯುತ್ತಿರಲಿಲ್ಲ.

೪೪

ಗಂಗಿಗೋವುಪಾಲು ಗರಿಟೆಡ್ಡಿನನುಜಾಲು ಗಡವೆಡ್ಡಿನ ನೇನು ಖರಮುಪಾಲು?
ಭಕ್ತಿಕಲುಗುಕೂಡು ಪಟ್ಟೆಡ್ಡಿನನೂ ಜಾಲು ವಿಶ್ವದಾಭಿರಾಮ ವಿನುರ ವೇಮ.

ಒಳಿತಾಕಳ ಹಾಲು ಚಮುಚೆಯಷ್ಟು ಸಾಕು.
ಗಡಗಿ ತುಂಬಲೇಮು ಕತ್ತೆ ಹಾಲು?
ಭಕ್ತಿಯುಕ್ತ ಕೂಳು ಮುಷ್ಟಿಯಷ್ಟೆ ಸಾಕು.
ವಿಶ್ವದಾಭಿರಾಮ ಕೇಳು ವೇಮ.

ಯುಕ್ತವಾದದ್ದು, ಪ್ರಯೋಜನಕರವೆನಿಸುವಂಥದು ಸ್ವಲ್ಪಾದರೂ ಸಾಕು. ಅಯುಕ್ತವಾದುದು, ಅಪ್ರಯೋಜನಕರವಾದುದು ಅತಿಶಯವಾಗಿ ದೊರಕಿದರೇನು ಫಲ? ಒಳ್ಳೇ ಆಕಳ ಹಾಲು ಒಂದು ಚಮಚೆಯಷ್ಟಾದರೂ ಸಾಕು. ಆದರೆ ಕತ್ತೆ ಹಾಲನ್ನು ಪಾತ್ರೆ ತುಂಬ ಕೊಟ್ಟರೇನು? ಅದೇ ರೀತಿ, ಭಕ್ತಿಯಿಂದ ಸಾಧು-ಸಂತರಾದ ಭಿಕ್ಷುಕರಿಗೆ ಹಿಡಿಯನ್ನ ಹಾಕಿದರೂ ಸಾಕು. ಅದೇ ದಾತನಿಗೂ, ಪಾತ್ರನಿಗೂ ಕ್ಷೇಮಕರವಾಗಿರುತ್ತದೆ.

೪೫

ಬಂಡಮೀದಚೆಲಮು ಹಾಟಂಚಿತ್ರವ್ವಿನ, ನಲಯಿಕೆಕ್ಕುಡಗು ಮರಾಶಲೇದು.
ಗುಂಟಪಟ್ಟುಚೆಲಮು ಕುಲಮುದ್ದರಿಂಚುರಾ, ವಿಶ್ವದಾಭಿರಾಮ ವಿನುರ ವೇಮ.

ಬಂಡೆ ಮೇಲೆಯೊರತೆ ತೋಡುತಿದ್ದರೇನು?
ಶ್ರಮವೆ ಹೆಚ್ಚು ಆಶೆ ಕೈಗೂಡದು.
ಕೆರೆಯ ತಳದ ಒರತೆ ಕುಲವನುದ್ಧರಿಪುದು.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಉದ್ದೇಶವೂ ಒಳ್ಳೆಯದಿರಬೇಕು. ಅದೇ ಕಾಲಕ್ಕೆ ವಿವೇಕಯುಕ್ತವಾಗಿರಬೇಕು. ಅಂದರೆ ಮಾತ್ರ ಕೈಕೊಂಡ ಕಾರ್ಯವು ಪ್ರಯೋಜನಕಾರಿಯೆನಿಸುತ್ತದೆ. ಹೇಗೆಂದರೆ' ಜನರಿಗೆ ನೀರು ದೊರಕಿಸಲೆಂದು ಒರತೆ, ತೋಡುವ ಉದ್ದೇಶ ಸರಿಯಾದುದಷ್ಟೇ. ಅದೇ ಒರತೆಯನ್ನು ವಿವೇಕರಹಿತರಾಗಿ. ಬಂಡೆಗಲ್ಲಿನ ಮೇಲೆ ತೋಡಿದರೇನು ಫಲ? ಆದರೆ, ಆಗ ತಾನೆ ಬತ್ತಿದ ಕೆರೆಯ ತಳದಲ್ಲಿ ಇನ್ನೂ ನೀರಿನ ಸಂಚಯವು ಭೂಗತವಾಗಿರುತ್ತದೆ. ಅಲ್ಲಿ ಒರತೆ ತೋಡಿದರೇನೋ ನೀರಿನ ಸೆಲೆ ಚಿಮ್ಮಿ ಬರಬಹುದು. ಒರತೆಯಿಂದ ಪ್ರಯೋಜನವಾಗಬಹುದು.



೪೬

ಮಾಟದಿದ್ದವಚ್ಚು ಮರಿವಂಕಲೇಕುಂಡ, ದಿದ್ದವಚ್ಚುರಾಯಿ ತಿನ್ನಗಾನು.
ಮನಸುದಿದ್ದರಾದು ಮಹಿನೆಂತವಾರಿಕಿ, ವಿಶ್ವದಾಭಿರಾಮ ವಿನುರ ವೇಮ.

ತಿದ್ದಬಹುದು ನುಡಿಯ, ಡೊಂಕುಇಲ್ಲದಂತೆ.
ತಿದ್ದಬಹುದು ಕಲ್ಲು, ಜೊಕ್ಕಟಾಗಿ,
ತಿದ್ದಲಾರರಾರು ಮನವ ಭೂಮಿಯೊಳಗೆ.
ವಿಶ್ವದಾಭಿರಾಮ ಕೇಳು ವೇಮ.

ಮಾತನಾಡುವಾಗ ಎಚ್ಚರವಾಗಿದ್ದರೆ, ಎಚ್ಚರವಹಿಸುವಂತೆ ಮಾಡಿ, ಕೊಂಕು-ಡೊಂಕು ನುಡಿಯನ್ನು ತಪ್ಪಿಸಬಹುದು. ಕಲ್ಲನ್ನು ಕಟೆದು ಕೊರೆದು ಅದರ ಓರೆ-ಕೋರೆಗಳನ್ನು ತಿದ್ದಬಹುದು. ಆದರೆ ಈ ಭೂಮಿಯ ಮೇಲೆ ಯಾರೂ ಮನಸ್ಸನ್ನು ತಿದ್ದಲು ಶಕ್ತರಾಗಿಲ್ಲ. ಮನಸ್ಸನ್ನು ತಿದ್ದಿಕೊಳ್ಳುವುದು ಸ್ವಯಂಪ್ರೇರಣೆಯ ಕೆಲಸವಷ್ಟೇ.

೪೭

ಸ್ವಾನುಭೂತಿಲೇಕ ಶಾಸ್ತ್ರವಾಸವಲಚೇ, ಸಂಶಯಂಬು ಚೆಡದು ಸಾಧಕುನಕು
ಚಿತ್ರ ದೀಪಮುನಕು ಜೀಕಟಚೆನಟ್ಲು ವಿಶ್ವದಾಭಿರಾಮ ವಿನುರ ವೇಮ.

ಸ್ವಾನುಭೂತಿಯಿರದೆ ಶಾಸ್ತ್ರ ನಂಬಿಕೂಡೆ,
ಸಂಶಯವು ತೊಲಗದು ಸಾಧಕನಿಗೆ
ಚಿತ್ರದೀಪದಿಂದ ಕತ್ತಲಳಿಯದಂತೆ.
ವಿಶ್ವದಾಭಿರಾಮ ಕೇಳು ವೇಮ.

ವೇದಾದಿ ಶಾಸ್ತ್ರಗಳು ಸತ್ಯದರ್ಶನಕ್ಕೆ ಹಾದಿ ಮಾಡಿಕೊಡುವ ಸಾಧನೆಗಳು. ವೇದಾಧ್ಯಯನವು ಬ್ರಹ್ಮಜ್ಞಾನಕ್ಕೆ ಶಿವಾನುಭವಕ್ಕೆ ಸಹಾಯಕ ಎಂದು ತಿಳಿದುಕೊಳ್ಳುವುದು ಸರಿಯಾದುದು. ಕಾರಣ, ಕೇವಲ ಶಾಸ್ತ್ರಗಳನ್ನು ನಂಬಿ ಕುಳಿತು, ಅವುಗಳನ್ನು ಕೇವಲ ಪಠಿಸುತ್ತ ಕುಳಿತರೆ ಲಾಭವಿಲ್ಲ. ಬ್ರಹ್ಮವರಿಯಲು ಸ್ವಂತ ಸಾಧನೆ ಬೇಕು. ಅದರಿಂದ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ. ಆಗ ಮಾತ್ರ ಸಾಧಕನ ಸಂಶಯ ಪರಿಹಾರವಾಗುತ್ತದೆ. ಹೇಗೆಂದರೆ, ಪ್ರತ್ಯಕ್ಷ ದೀಪವನ್ನು ಇಡುವುದಕ್ಕೆ ಬದಲಾಗಿ, ದೀಪದ ಚಿತ್ರವನ್ನು ಇರಿಸಿದರೆ, ಕತ್ತಲೆ ಕಳೆಯದು. ಶಾಸ್ತ್ರ ದೀಪದ ಚಿತ್ರದಂತೆ. ಬ್ರಹ್ಮದ ಸ್ವರೂಪಚಿತ್ರ ಅಲ್ಲಿ ಇದೆ. ಬ್ರಹ್ಮ ನೈಜದೀಪದಂತೆ.

೪೮

ಪುರುಷು ಡನ್ನೊಗತುಲ ಬುಟ್ಟೆಂದಿ ಮೊದಲುಗ, ಪಾಪಚಿಂತಜೇಯು ಬಾಮುರಮುನ
ಮುದಿನಿ ಗುಂಟಕುಕ್ಕ ಮಾಂಸಂಬು ದಿನ್ನಟ್ಲು ವಿಶ್ವದಾಭಿರಾಮ ವಿನುರ ವೇಮ.

ಪುರುಷನೆಷ್ಟೊಬಾರಿ ಪುಟ್ಟಿದಂದಿನಿಂದ
ಪಾಪ ಚಿಂತೆಗೈವ ಪಾಮರಾಗಿ
ಮನದಿ ಕುಂಟೆ ನಾಯಿ ಮಾಂಸ ತಿಂದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಬೇಟೆಯಾಡಿ ಬಂದು ಮಾಂಸ ತಿನ್ನುವುದು ನಾಯಿಯ ಗುಣ. ಆದರೆ ನಾಯಿಯ ಕಾಲು ಕುಂಟು ಬಿದ್ದರೆ, ಅದು ಮನಸ್ಸಿನಲ್ಲಿಯೇ ಮಾಂಸ ತಿನ್ನುವ ಹಗಲುಗನಸು ಕಾಣುತ್ತದೆ. ಅದೇ ರೀತಿ, ಒಳ್ಳೆಯ ಮನುಷ್ಯನು ಸಹ ಹುಟ್ಟಿದನಂತರ ಅನೇಕ ಸಲ ಪಾಮರನಂತೆ ಭಾವ ತಾಳಿ, ದುಷ್ಟ ಕಾರ್ಯಗೆಯ್ಯುವ ಆಲೋಚನೆಯನ್ನು ಮೆಲುಕಾಡಿಸುತ್ತಾನೆ.

೪೯

ಪರಗರಾತಿಗುಂಡು ಪಗುಲಗೊಟ್ಟಗವಚ್ಚು, ಕೊಂಡಲನ್ನಿ ಪಿಂಡಿಗೊಟ್ಟವಚ್ಚು
ಕಠಿಣಚಿತ್ತುಮನಸು ಕರಗಿಂಪಗಾರಾದು, ವಿಶ್ವದಾಭಿರಾಮ ವಿನುರ ವೇಮ

ದೊಡ್ಡ ಕಲ್ಲುಗುಂಡು ಒಡೆದು ಹಾಕಬಹುದು
ಗುಡ್ಡವನ್ನೆ ಹುಡಿಯಾಗಿಸಬಹುದು.
ಕಠಿಣಚಿತ್ತ ಮನಸು ಕರಗಿಸಲಾರುಂಟು?
ವಿಶ್ವದಾಭಿರಾಮ ಕೇಳು ವೇಮ.

ದೊಡ್ಡದಾದ ಬಂಡೆಗಲ್ಲನ್ನು ಒಡೆದು ಹಾಕುವುದು ಕಷ್ಟಸಾಧ್ಯವೆಂದು ತೋರಬಹುದು. ಆದರೆ ಅದು ಅಸಾಧ್ಯ ಕಾರ್ಯವೇನೂ ಅಲ್ಲ. ಸಾವಿರಾರು ಜನರು ಕೂಡಿ ಗುಡ್ಡದಲ್ಲಿ ಹಾದಿ ಮಾಡುವಾಗ, ನಾಲೆ ತೋಡುವಾಗ, ಇಡಿ ಗುಡ್ಡವನ್ನೇ ಅಗಿದು, ಬಂಡೆ ಒಡೆದು ಹುಡಿ ಹುಡಿ ಮಾಡಬಹುದು. ಆದರೆ ಮಾನವನ ಮನಸ್ಸು ಕಠಿಣ. ಕಠಿಣವಾದ ಮನಸ್ಸು ಕರಗಿಸಲು ಯಾರಿಗೆ ತಾನೆ ದೈಹಿಕ ಶ್ರಮದಿಂದ ಸಾಧ್ಯ? ಇತರರ ಕಷ್ಟಕಾರ್ಪಣ್ಯಗಳನ್ನು ಕಂಡು ಮನಕರಗದವರನ್ನು ಸುಧಾರಿಸಲು ಯಾರಿಗೆ ತಾನೆ ಸಾಧ್ಯ? ಮನಸ್ಸು ಜ್ಞಾನೇಂದ್ರಿಯಗಳಲ್ಲೊಂದು. ತಾನು ಇತರರು ಅದೇ ಪರಮಾತ್ಮನ ರೂಪವೆಂದು ತಿಳಿದರೆ ಮಾತ್ರ ಇತರರ ಆನಂದವೇ ತನ್ನ ಆನಂದವೆಂದು ತಿಳಿಯಬಹುದಷ್ಟೇ. ಮನಸ್ಸು ಕರಗಿದಾಗ ಸರ್ವ ಭೂತಗಳನ್ನು ಆವರಿಸುವಂಥ ವಿಸ್ತೃತರೂಪ ತಾಳಬಹುದು.

೫೦

ಮಿರೆಪಗಿಂಜಜೂಡ ಮೀದನಲ್ಲಗನುಂಡು ಗೊರಿಕಿಚೂಡ ಲೋನ ಜುರುಕುಮನುನು.
ಸಜ್ಜನುಲಗುವಾರಿ ಸಾರಮಿಟ್ಟುಲನುಂಡು ವಿಶ್ವದಾಭಿರಾಮ ವಿನುರ ವೇಮ.

ಮೆಣಸು ಬೀಜ ನೋಡೆ ಮೇಲೆ ಕಪ್ಪು ಇಹುದು
ಕಚ್ಚಿ ನೋಡಲಾಗ ಖಾರವಿಹುದು.
ಸಜ್ಜನರೆಂಬವರ ಸಾರವಿಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮೆಣಸಿನ ಬೀಜವು ಮೇಲೆ ನೋಡಲು ಕಪ್ಪು ಬಣ್ಣದ್ದಾಗಿರುವದು. ಕಪ್ಪು ಬಣ್ಣ ಸತ್ವವಿಹೀನತೆ ಇಲ್ಲವೆ ಮಂದ ಗುಣದ ಪ್ರತೀಕವೆಂಬ ಕಲ್ಪನೆಯುಂಟು. ಆದರೆ ಮೆಣಸನ್ನು ಕಚ್ಚಿ ನೋಡಿದರೆ ಅದರ ಒಗರು, ಖಾರ ಗೊತ್ತಾಗುತ್ತವೆ. ಅದೇ ರೀತಿ, ಮೇಲು ನೋಟಕ್ಕೆ ಸಪ್ಪಗೆ ತೋರುವ ಸಜ್ಜನರು ಬಾಳುವ ಜೀವನದ ಸಾರವಾದರೂ ಮೆಣಸಿನ ರೀತಿಯಂತೆ ಇರುವುದು. ಸಜ್ಜನರು ಅಂತರಾಳದಲ್ಲಿ ತಮ್ಮ ಸತ್ವವನ್ನು ಹುಗಿದಿಟ್ಟುಕೊಂಡಿರುತ್ತಾರೆ.

೫೧

ವೃಗಮುದವನುಜೂಡ ಮೀದನಲ್ಲಗನುಂಡು, ಪರಿಢವಿಲ್ಲು ದಾನಿಪರಿಮಳಂಬು
ಗುರುವುಲ್ಮೆನವಾರಿ ಗುಣವುಲೀಲಾಧರಾ ವಿಶ್ವದಾಭಿರಾಮ ವಿನುರ ವೇಮ

ಕತ್ತುರಿಯನು ನೋಡೆ ಮೇಲೆ ಕಪ್ಪು ಇಹುದು.
ಸುತ್ತಲು ಘನುಘನುವದರ ಪರಿಮಳ.
ಗುರುತರವಾಗಿಹರ ಗುಣವು ಇಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಕಸ್ತೂರಿಯು ನೋಟಕ್ಕೆ ಕಪ್ಪಾಗಿ ಕಾಣುತ್ತದೆ. ಆದರೆ ಆಘ್ರಾಣಿಸಿದರೆ, ಅದರ ಪರಿಮಳವು ಸುತ್ತಲೆಲ್ಲ ಹರಡಿರುವದು, ಕಾಣದಿರದು. ಅದೇ ರೀತಿ, ದೊಡ್ಡವರೆನ್ನಿಸುವ ಗುರುಜನರ ಗುಣವಾದರೂ ಮೇಲು ನೋಟಕ್ಕೆ ತೀರ ಸಾದಾ ಎನ್ನಿಸಿದರೂ ಸೂಕ್ಷ್ಮ ದೃಷ್ಟಿಗೆ ಮಹಾ ಘನವೆನ್ನಿಸುವುದು.

೫೨

ಇಚ್ಚುವಾನಿಯೊದ್ದ ನೀನಿವಾಡುಂಡಿನ. ಜಚ್ಚಗಾನಿ ಯೀವಿ ಸಾಗನೀಡು
ಕಲ್ಪತರುವು ಕ್ರಿಂದ ಗ್ರಚ್ಚಚಿಟ್ಟುನ್ನಟ್ಲು, ವಿಶ್ವದಾಭಿರಾಮ ವಿನುರ ವೇಮ

ನೀಡುವಪ್ಪನ ಬಳಿ ನೀಡದಪ್ಪನಿರಲು
ಮಡಿದ ಹೊಂತು ಕೊಡುಗೆ ನಡೆಯಗೊಡನು.
ಕಲ್ಪವೃಕ್ಷದ ಕೆಳಗೆ ಕಂಟಿ-ಮುಳ್ಳಿಪ್ಪಂತೆ.
ವಿಶ್ವದಾಭಿರಾಮ ಕೇಳು ವೇಮ.

ಉದಾರ ಬುದ್ಧಿಯಿಂದ ಯಾವನೊಬ್ಬನು, ದಾನ ಮಾಡಲು ಎಳಸಿದಾಗ ಜಿಪುಣನಾದ ಅವನ ಮಗನೋ ನೌಕರನೋ, ದಾನಕಾರ್ಯ ನಡೆಯದಂತೆ ಅಡ್ಡಿಯುಂಟು ಮಾಡುತ್ತಾರೆ. ದಾನ ಕಾರ್ಯಕ್ಕೆ ಇವರು ಕಲ್ಪವೃಕ್ಷದ ಕೆಳಗೆ ಹಬ್ಬಿಕೊಂಡ ಮುಳ್ಳು-ಕಂಟಿಗಳಂತೆ ಇರುತ್ತಾರೆ. ಕಲ್ಪವೃಕ್ಷ ಫಲ ನೀಡುವದಾದರೂ ಅದರಡಿಗೆ ಹೋಗಗೊಡದಂತೆ ಮುಳ್ಳು ಕಂಟಿಗಳ ಅಡ್ಡಿ–ಆತಂಕ. "ದೇವರು ಒಲಿದರೂ ಪೂಜಾರಿ ಒಲಿಯನು" ಎನ್ನುವ ಗಾದೆಯ ಮಾತಿನಂತೆ.

೫೩

ಅಲ್ಪಬುದ್ಧಿವಾನಿಕಧಿಕಾರಮಿಚ್ಚಿನ, ದೊಡ್ಡವಾರಿನೆಲ್ಲ ದೊಲಗಗೊಟ್ಟು,
ಚೆಪ್ಪುದಿನೆಡಿಕುಕ್ಕ ಚೆರಕು ತೀಪರುಗಾನಾ ? ವಿಶ್ವದಾಭಿರಾಮ ವಿನುರ ವೇಮ.

ಅಲ್ಪಬುದ್ಧಿಯವನಗೆ ಅಧಿಕಾರವಿತ್ತೊಡೆ,
ದೊಡ್ಡ ಜನರನೆಲ್ಲ ದೂಡಿಬಿಡುವ.
ಕೆರಹ ಕಡಿವ ಸೊಣಗ ಕಬ್ಬು ಸಿಹಿಯರಿಯುದು
ವಿಶ್ವದಾಭಿರಾಮ ಕೇಳು ವೇಮ.

ಸಿಹಿ ಕಬ್ಬು ತಿಂದು ಅದರ ಮಧುರ ರುಚಿಗೆ ಮಾರು ಹೋಗುವವರು ರಸಿಕರು, ಗುಣಗ್ರಾಹಿಗಳು. ಆದರೆ ಊರ ನಾಯಿಗೆ ಕಬ್ಬಿನ ಗಣಿಕೆಯನ್ನೂ ಹಳೆಯ ಕೆರವನ್ನೂ ತೋರಿಸಿದರೆ, ಅದು ಹಳೆಯ ಪಾದರಕ್ಷೆಯನ್ನೇ ಮೆಚ್ಚಿ ಬಾಯಿಯಲ್ಲಿಟ್ಟು ಕಚ್ಚಿ, ಆನಂದ ಪಡುತ್ತದೆ. ಅದು ಅಲ್ಪ ಬುದ್ಧಿಯ ಪರಿಣಾಮ. ಇದುವೇ ಹೀನ ಬುದ್ಧಿ. ಇಂಥ ಹೀನ ಬುದ್ದಿಗೆ ಸಿಹಿ ಕಬ್ಬಿನ ಲೆಕ್ಕವೇ ಇಲ್ಲ. ಅದೇ ರೀತಿ, ಅಲ್ಪ ಬುದ್ಧಿಯ ಮನುಷ್ಯನಿಗೆ ಅಧಿಕಾರ ಬಂದ ಕಾಲಕ್ಕೆ, ದೊಡ್ಡ ಮನುಷ್ಯರ ಲೆಕ್ಕವೇ ಅವನಿಗಿಲ್ಲ. ಅವರನ್ನು ಹೊರದೂಡಿ ಚಿಲ್ಲರೆ ಮನುಷ್ಯರನ್ನು ಎತ್ತಿ ಕಟ್ಟುತ್ತಾನೆ.

೫೪

ತಪ್ಪುಲೆನ್ನುವಾರು ತಂಡೋಪತಂಡಂಬು, ಲುರ್ವಿಜನುಲಕೆಲ್ಲ ನುಂಡುದಪ್ಪು,
ತಪ್ಪುಲೆನ್ನುವಾರು ತಮತಪ್ಪು ಲೆರುಗರು. ವಿಶ್ವದಾಭಿರಾಮ ವಿನುರ ವೇಮ.

ತಪ್ಪನೆಣಿಸುತಿಹರು ತಂಡೋಪ ತಂಡದಿ
ಉರ್ವಿ ಜನತೆಗೆಲ್ಲ ಉಂಟು ತಪ್ಪು.
ತಪ್ಪನೆಣಿಸುವವರು ತಮ್ಮ ತಪ್ಪರಿಯರು.
ವಿಶ್ವದಾಭಿರಾಮ ಕೇಳು ವೇಮ.

ಇದು ತಪ್ಪು ಅದು ತಪ್ಪು, ಇಲ್ಲಿ ತಪ್ಪು, ಅಲ್ಲಿ ತಪ್ಪು. ಎಂದು ಜನರು ಎಲ್ಲೆಲ್ಲಿಯೂ ನೂರಾರು ತಪ್ಪುಗಳನ್ನು ಕಂಡು ಕೈತೋರಿಸುತ್ತಾರೆ. ಆದರೆ ಜಗತ್ತಿನಲ್ಲಿರುವ ಪ್ರತಿಯೊಬ್ಬನೂ ತಪ್ಪು ಮಾಡುತ್ತಾನೆ. ಕುಂದು ಎಲ್ಲರಲ್ಲಿಯೂ ಉಂಟು; ಆದರೆ ಸೋಜಿಗವೆಂದರೆ, ಹೆರವರ ತಪ್ಪನ್ನೆಣಿಸುವವರು ತಮ್ಮ ತಮ್ಮ ತಪ್ಪುಗಳನ್ನು ತಾವೇ ತಿಳಿದುಕೊಂಡಿರುವದಿಲ್ಲ. ತನ್ನಲ್ಲಿರುವ ತಪ್ಪು ಇಲ್ಲವೆ ನ್ಯೂನತೆಯ ಅರಿವು ತನಗಾದರೆ ಅವನು ಇನ್ನಿತರರಲ್ಲಿ ತಪ್ಪು ಹುಡುಕುವ ಅವಿನಯ ವರ್ತನೆ ತೋರುವುದಿಲ್ಲ. ಇದನ್ನೇ "ನಿನ್ನ ಎಡೆಯಲ್ಲಿ ಕೋಣ ಬಿದ್ದಿರಲು ಅನ್ಯರ ಎಡೆಯ ನೊಣದ ಚಿಂತೆಯೇಕೆ ?" ಎನ್ನುವ ಗಾದೆಯ ಮಾತು, "ನಿನ್ನ ಕಣ್ಣಲ್ಲಿ ತೊಲೆಯು ಸಿಕ್ಕಿರಲು ಅನ್ಯರ ಕಣ್ಣಿನಲ್ಲಿರುವ ರವದೆಯ ಚಿಂತೆಯೇಕೆ !" ಎಂಬ ಯೇಸುಕ್ರಿಸ್ತನ ನುಡಿಯೂ "ಪರಚಿಂತೆ ಎಮಗೇಕೆ ಅಯ್ಯಾ ಎಮ್ಮ ಚಿಂತೆ ಎಮಗೆ ಸಾಲದೆ ?" ಎಂಬ ವಚನಕಾರರ ವಚನವೂ ಸಾರುತ್ತಿವೆ.

೫೫

ಆಲಿವಂಕವಾರ ಲಾತ್ಮಬಂಧುವುಲ್ಕೆರಿ, ತಲ್ಲಿವಂಕವಾರು ತಗಿನಪಾಟ,
ತಂಡ್ರಿವಂಕವಾರು ದಾಯಾದು ಲೌದುರು ವಿಶ್ವದಾಭಿರಾಮ ವಿನುರ ವೇಮ.

ಸತಿಯ ಕಡೆಯ ಜನ ಸ್ವಂತ ಬಂಧುವಯ್ಯ
ಅವ್ವನ ಕಡೆಯವರು ಅಷ್ಟಕಷ್ಟೇ.
ತಂದೆಯ ಕಡೆಯವರು ದಾಯಾದಿಯಾದರು.
ವಿಶ್ವದಾಭಿರಾಮ ಕೇಳು ವೇಮ.

ವ್ಯಾವಹಾರಿಕ ಪ್ರಪಂಚದಲ್ಲಿ ರಕ್ತ ಸಂಬಂಧವು ತಾರತಮ್ಯಭಾವನೆಗೆ ಮೂಲ ಪ್ರಚೋದನಾತ್ಮಕವಾದುದು. ಈ 'ತರ' 'ತಮ' ಭಾವ ರಕ್ತ ಸಂಬಂಧಗಳನ್ನು ಇತರರಿಂದ ಬೇರ್ಪಡಿಸಿ ನೋಡುವುದರಲ್ಲಿ ಪರ್ಯವಸಾನ ಹೊಂದುತ್ತದೆ. ಅಷ್ಟಕ್ಕೇ ನಿಲ್ಲುವುದಿಲ್ಲ. ರಕ್ತ ಸಂಬಂಧಿಗಳಲ್ಲಿಯೂ ದೂರದ ಸಂಬಂಧಿಗಳು ಸಮೀಪ ಸಂಬಂಧಿಗಳೆಂಬ ಭೇದಕ್ಕೆಡೆಯೀಯುತ್ತದೆ. ಹೇಗೆಂದರೆ, ಹೆಂಡತಿಯ ಕಡೆಯವರಾದರೆ, ತಮ್ಮ ಸ್ವಂತ ಬಂಧುಗಳಂತೆ ಕಾಣುತ್ತಾರೆ. ತಾಯಿಯ ಕಡೆಯ ಜನರಾದರೆ ಕೇವಲ ಆಸ್ತಿಯಲ್ಲಿ ಪಾಲು ಕೇಳುವ ದಾಯಾದಿಗಳು ಮಾತ್ರ ಎಂದು ಕಾಣುತ್ತಾರೆ. ನಿಜವಾಗಿ ರಕ್ತ ಸಂಬಂಧದ ಮಾನದಂಡದಿಂದ ನೋಡಿದರೆ, ತಂದೆಯ ಕಡೆಯವರೇ ತೀರ ಹತ್ತಿರದವರು. ತಾಯಿಯ ಕಡೆಯವರು ಸ್ವಲ್ಪದೂರ. ಹೆಂಡತಿಯ ಕಡೆಯವರು ಇನ್ನೂ ದೂರ, ಆದರೆ ವ್ಯಾವಹಾರಿಕ ಗ್ರಹಿಕೆಯಲ್ಲಿ ಎಲ್ಲವೂ ತಿರುವು ಮುರುವು. ಹೀಗೆ ತಿರುವು ಮುರುವಾಗಿ ಭಾವಿಸಿ ನಡೆದುಕೊಳ್ಳುವುದರಿಂದ ನಾವು 'ಸರ್ಕಸ್' ಮಾಡಿದಂತಾಗುತ್ತದೆ.

೫೬

ಪದುಗುರಾಡುವಾಟ ಪಾಟಯ್ಕೆಧರಜೆಲ್ಲಿ, ನೊಕ್ಕಡಾಡುವಾಟ ಯೆಕ್ಕದೆಂದು
ಊರಕುಂಡುವಾನಿ ಕೂರೆಲ್ಲನೋಪದು ವಿಶ್ವದಾಭಿರಾಮ ವಿನುರ ವೇಮ.

ಹತ್ತು ಜನರ ಮಾತು ಹಬ್ಬುತಿಹುದು ಜಗದಿ
ಒಬ್ಬನುಡಿದ ಮಾತು ಹಬ್ಬದೆಂದು.
ಸುಮ್ಮನಿರುವಾತಗೆ ಸಮನಿಲ್ಲ ಊರಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಒಳಿತು-ಕೆಡುಕುಗಳನ್ನು ವಿಶ್ಲೇಷಿಸಿ, ಮೆಚ್ಚುವ ಜನರ ಸಂಖ್ಯೆ ತೀರ ಕಡಿಮೆ. ಆದರೆ ಬಹಳಷ್ಟು ಜನರು ಒಂದು ಮಾತನ್ನು ಆಡುತ್ತ ಹೋದರೆ ಅಂಥ ಮಾತೇ ಎಲ್ಲಿಡೆಗೆ ಹಬ್ಬುತ್ತದೆ ಆದರೆ ವಿವೇಕದ ನುಡಿಯನ್ನು ಆಡುವವರು ವಿಪುಲವಾಗಿರುವುದಿಲ್ಲ. ತೀರ ವಿರಳ. ಆದರೆ ಯಾರೋ ಒಬ್ಬರು ಆಡಿದ ವಿವೇಕ ನುಡಿಯು ಹಬ್ಬುವುದಿಲ್ಲ. ಅಂಥ ಜನರು ಒಲಿದು, ಪ್ರಸಾರಗೆಯ್ಯುವದಿಲ್ಲ. ಕಾರಣ ಈ ರೀತಿಯ ಜನರಿರುವ ಊರಿನಲ್ಲಿ ವಿವೇಕದ ನುಡಿಯನ್ನು ಆಡುವುದಕ್ಕಿಂತಲೂ, ಆಡದೆ ಮೌನವಾಗಿರುವುದೇ ಮೇಲು.

೫೭

ಕೊಂಡೆಗಾಡುಚಾವ ಗೊಂಪದನುಕ ಬೋವು ವಂತುಕಿಂತೆಕಾನಿ ವಗಪುಲೇದು
ಕೊಂಕನಕ್ಕಚಾವ ಗೊರ್ರೆಲೇಮಿಟ ಕೇಡ್ಮು, ವಿಶ್ವದಾಭಿರಾಮ ವಿನುರ ವೇಮ

ಮರಣಿಸೆ ಕೊಂಡೆಯವ, ಮನೆತನಕ ಹೋಹರು.
ಅಷ್ಟೊ, ಇಷ್ಟು, ಎಷ್ಟು ದುಃಖವಿಲ್ಲ.
ಗುಳ್ಳನರಿಸಾಯಲು ಕುರಿಯು ಅಳುವುದೇಕೆ?
ವಿಶ್ವದಾಭಿರಾಮ ಕೇಳು ವೇಮ.

ಕೊಂಡೆಯವರೆಂದರೆ ಗೂಢಚಾರರು. ಒಂದು ಕಡೆಯ ಸುದ್ದಿಯನ್ನು ಇನ್ನೊಂದು ಕಡೆಗೆ ಒಯ್ದು ಮುಟ್ಟಿಸುವವರು, ಹೆಚ್ಚಾಗಿ ಚಾಡಿಕೋರರು. ಬಹುಶಃ ಜಗಳ ಹಚ್ಚುವವರು. ಇಂಥವರು ಸತ್ತರೆ, ಒಣ ಉಪಚಾರಕ್ಕೆ ಅವನ ಮನೆಯ ವರೆಗೆ ಹೋಗಿ ಬರುತ್ತಾರೆ. ಆದರೆ ಯಾರೂ ದುಃಖಪಡುವದಿಲ್ಲ. ಏಕೆಂದರೆ, ಅವನು ಇರುವಾಗ ಅವರೀರ್ವರಲ್ಲಿ ಜಗಳ ಹಚ್ಚಿ ಕೇಡು ಗೈದುದು, ನೆನಪಿಗೆ ಬರುತ್ತದೆ. ತನ್ನ ಮರಿಗಳನ್ನು ಹಿಡಿದು ತಿನ್ನುವ ಗುಳ್ಳ ನರಿಯು ಸತ್ತರೆ, ಕುರಿಯೇಕೆ ಅಳುವುದು? ಉಳಿದ ರಾಜಪರಿವಾರದವರಿಗೆ ಕುರಿಯಂತೆ ನಿರುಪದ್ರವಿಗಳು. ಕೊಂಡೆಯವರು ಇವರನ್ನೇ ಪೀಡಿಸುವ ಗುಳ್ಳ ನರಿ.

೫೮

ಕೋತಿಬಟ್ಟತೆಚ್ಚಿ ಕ್ರೊತ್ತಪಟ್ಟಮುಗಟ್ಟ ಕ್ರೊಂಡವುಚ್ಚುಲೆಲ್ಲ ಗೊಲಿಚಿನಟ್ಲು,
ನೀತಿಹೀನುನೊದ್ದನಿರ್ಭಾಗ್ಯುಲುಂದುರು, ವಿಶ್ವದಾಭಿರಾಮ ವಿನುರ ವೇಮ

ಹಿಡಿತಂದ ಕೋತಿಗೆ ಹೊಸಬಟ್ಟೆಯುಡಿಸಲು
ಅಡವಿ ಕೋತಿ ಕುಲವೆ ಅದಕೆ ಶರಣು.
ನೀತಿಹೀನರ ಬಳಿ ನಿರ್ಭಾಗ್ಯನಿಹಪರಿ.
ವಿಶ್ವದಾಭಿರಾಮ ಕೇಳು ವೇಮ.

ವಿನೋದಕ್ಕಾಗಿ ಮಂಗನನ್ನು ಹಿಡಿದು ಅದಕ್ಕೆ ಅರಿವೆ ತೊಡಿಸಿಬಿಟ್ಟರೆ, ಅದು ಏನೋ ಒಂದು ರೀತಿ ವಿಶೇಷತ್ವ ಹೊಂದುತ್ತದೆ. ಆ ಮಂಗ ಅಡವಿಯನ್ನು ಸೇರಿದರೆ, ಅಲ್ಲಿರುವ ಇತರ ಮಂಗಗಳು ಅಂಗಿ ತೊಟ್ಟ ಮಂಗಕ್ಕೆ ಶರಣು ಮಾಡುತ್ತವೆ. ನಿಜವಾಗಿ ನೋಡಿದರೆ, ಅಂಗಿ ತೊಡಿಸಲ್ಪಟ್ಟ ಮಂಗ ಯಾರದೋ ವಿನೋದ-ಚೇಷ್ಟೆಗೆ ತುತ್ತಾಗಿ ನಿರ್ಭಾಗ್ಯನಾಗಿರುತ್ತದೆ. ಇನ್ನು ಉಳಿದ ಮಂಗಗಳು ತಮ್ಮ ಮಂಗ ಜಾತಿಗೆ ತಕ್ಕ ನೀತಿಯಾದ ಬೆತ್ತಲೆಯನ್ನು ಮೆಚ್ಚದೆ ಬಟ್ಟೆಯುಡುವಿಕೆಯನ್ನು ಮೆಚ್ಚಿ ನೀತಿಹೀನವೆನಿಸುತ್ತವೆ ಇಂತು ನೀತಿಹೀನರಬಳಿ ನಿರ್ಭಾಗ್ಯನು ಇರುವಂತೆ ಅಡವಿ ಮಂಗಗಳ ಮಧ್ಯೆ ಅಂಗಿ ತೊಟ್ಟ ಮಂಗವಿರುತ್ತದೆ. ಯಾವನೋ ಒಬ್ಬ ಅಯೋಗ್ಯನಿಗೆ ಹಿರಿತನದ ಪಟ್ಟಗಟ್ಟಿದರೆ, ಇದೇ 'ಹಾಡು' ಆಗುತ್ತದೆ.

೫೯

ಚಾಕಿವಾಡುಕೋಕ ಜೀಕಾಕುಬಡಜೇಸಿ ಮೈಲಬುಚ್ಚಿ ಮುಂಚಿಮಡುವು ಜೇಯು
ಬುದಿಜೆಪ್ಪುವಾಡು ಗ್ರುದ್ದಿನ ನೇಮಯಾ ? ವಿಶ್ವದಾಭಿರಾಮ ವಿನುರ ವೇಮ

ಮಡಿವಾಳನು ಒಗೆದು, ಮತ್ತೆ ಬೇಸರಿಯದೆ,
ಮೈಲಿ ತೊಳೆದು, ಒಳ್ಳೆ ಮಡಿ ಮಾಡುವ.
ಬುದ್ಧಿ ಹೇಳುವವನು, ಗುದ್ದಿ ಹೇಳಲೇನು ?
ವಿಶ್ವದಾಭಿರಾಮ ಕೇಳು ವೇಮ

ಒಳಿತು-ಕೆಡಕುಗಳನ್ನು ವಿಶ್ಲೇಷಿಸುವ ವಿವೇಕವಿರುವುದು ಕಡಿಮೆ ಜನರಲ್ಲಿ ಮಾತ್ರ. ಇದು ಒಳ್ಳೆಯದೇ ಎಂದು ತಿಳಿಸಿ ಹೇಳುವಾಗ ಸೌಮ್ಯ ಉಪಾಯಗಳೇ ಸಾಕಾಗಬಹುದು ಅವಶ್ಯ ಬಿದ್ದರೆ ದಂಡೋಪಾಯದಿಂದ ಬುದ್ಧಿಕಲಿಸಿದರೂ ಒಳ್ಳೆಯದೇ. ಹೇಗೆಂದರೆ ಮಲಿನವಾದ ಬಟ್ಟೆಯನ್ನು ಸ್ವಚ್ಛಗೊಳಿಸುವ ಮಡಿವಾಳನು, ಬಟ್ಟೆಯನ್ನು ಕಲ್ಲಿಗೆ ಬಡಿಯುತ್ತಾನೆ. ಮುರಿಗೆ ಹಾಕಿ ಹಿಂಡುತ್ತಾನೆ. ಆಗ ಮೈಲಿ ಹೋಗುತ್ತದೆ; ಮಡಿಯಾಗುತ್ತದೆ.

೬೦

ಪಾಲುಪಂಚದಾರ ಪಾಪರಪಂಡ್ಲಲೋ, ಜಾಲಬೋಸಿ ವಂಡ ಜವಿಕಿರಾವು
ಕ.ಟಿಲಮಾನವುನಕು ಗುಣಮೆಟ್ಲು ಕಲುಗುರಾ ? ವಿಶ್ವದಾಭಿರಾನು ವಿನುರ ವೇಮ

ಕ್ಷೀರ ಸಕ್ಕರೆಯನು ಕೇರುಹಣ್ಣಿನಲ್ಲಿ
ಹೆಚ್ಚು ಹಾಕಿ ಕುದಿಸೆ ರುಚಿಯೀವುದು.
ಕುಟಿಲ ಮನುಜನಲ್ಲಿ ಗುಣವು ಬರುವುದೆಂತು ?
ವಿಶ್ವದಾಭಿರಾಮ ಕೇಳು ವೇಮ

ಗೇರು ಹಣ್ಣು ಒಗರಾಗಿರುತ್ತದೆ. ಆದರೆ, ಹಾಲು ಸಕ್ಕರೆಯನ್ನು ಹೆಚ್ಚಾಗಿ ಹಾಕಿ ಕಾಯಿಸಿ, ಕುದಿಸಿದರೆ, ಅದು ಚನ್ನಾಗಿ ರುಚಿಯೀಯುತ್ತದೆ. ಆದರೆ ಕುಟಿಲ ಸ್ವಭಾವದ ಮನುಷ್ಯನಲ್ಲಿ ಒಳ್ಳೆಯ ಗುಣವು ಬರುವುದು. ಮಾತ್ರ ಯಾವ ವಿಧದಿಂದಲೋ ತಿಳಿಯದು.

೬೧

ಪಟ್ಟನೇರ್ಪುಪಾಮು ಪಡಗ ನೋರಗ ಜೇಯು ಜಿರುಪಜೂಚುವಾಡು ಚಿಲಿಮಿಜೇಯು
ಜಂಪದಲಚುರಾಜ ಚನುವಿಚ್ಚ ಚುಂಡುರಾ; ವಿಶ್ವದಾಭಿರಾಮ ವಿನುರ ವೇಮ.

ಹೊಂಚು ಹಾಕಿ ಹಾವು ಹೆಡೆಯ ಮುಚ್ಚುತಿಹುದು.
ಕೆಡಿಸಲೆಣಿಸುತಿಹನು, ಗೆಳೆಯನೆನಿಪ.
ಕೊಲುವ ಇಚ್ಛೆಯ ದೊರೆ ಸಲುಗೆ ನೀಡುತಿಪ್ಪ.
ವಿಶ್ವದಾಭಿರಾಮ ಕೇಳು ವೇಮ

ಯಾರನ್ನಾದರೂ ಕಚ್ಚಬಯಸುವ ಹಾವು ಕಚ್ಚಲು ಹಂಚಿಕೆ ಮಾಡುತ್ತದೆ. ನಂತರ ಅವಿತುಕೊಳ್ಳುತ್ತದೆ. ಹೆಡೆಯನ್ನು ಸೇದಿಕೊಂಡು ಮುಚ್ಚುತ್ತದೆ. ಇದೇ ರೀತಿ, ಎಷ್ಟೋ ಜನರು ನಮ್ಮನ್ನು ಕೆಟ್ಟದಾರಿಗೆಳೆಯುವ ದುಷ್ಟ ಉದ್ದೇಶವಿಟ್ಟುಕೊಂಡು, ನಮ್ಮ ಮಿತ್ರರಂತೆ ನಟಿಸಿ ಸಮೀಪವರ್ತಿಗಳಾಗುತ್ತಾರೆ. ಮರಣ ದಂಡನೆ ನೀಡಬಹುದಾದ ಸಂದರ್ಭಗಳಲ್ಲಿ ರಾಜನು ಸಹ ಹೆಚ್ಚಿನ ಸಲುಗೆಯನ್ನು ತೋರುವುದುಂಟು. ಕಾರಣ, ಕೃತ್ರಿಮ ಸಲುಗೆ ಸ್ನೇಹಗಳನ್ನು, ತುಂಬಾ ಎಚ್ಚರ ವಹಿಸಿ ಅರ್ಥ ಮಾಡಿಕೊಳ್ಳಬೇಕು.

೬೨

ಪೂರ್ವವಾಸನಕಲ ಪುಣ್ಯಾತ್ಮುನಿಕಲಿಮಿ, ಯೂಟಚಿಲಮುರೀತಿ ನೂರುನೆಪುಡು
ಎಂದರಿಕೊಸಗಿನನು ನೆಪ್ಪಟಯೆಟ್ಲುಂಡು, ವಿಶ್ವದಾಭಿರಾಮ ವಿನುರ ವೇಮ.

ಪೂರ್ವವಾಸನೆಯಿಹ ಪುಣ್ಯಾತ್ಮನ್ನೆಸಿರಿ,
ಬುಗ್ಗೆ ಪುಟಿವ ರೀತಿ ಭೂರಿಡುವುದು;
ಎಷ್ಟು ಜನಕೆ ಕೊಡಲು ಎಂದಿನಂತಿರುವುದು.
ವಿಶ್ವದಾಭಿರಾಮ ಕೇಳು ವೇಮ

ಹಿಂದಿನ ಜನ್ಮದ ಸಂಪದ–ದಾರಿದ್ರ್ಯಗಳ ಮೂಲವೆಂದು 'ಕರ್ಮ ಕಲ್ಪನೆ' ತಿಳಿಸುತ್ತದಷ್ಟೇ. ಪೂರ್ವ ಜನ್ಮದ ವಾಸನೆಯು ಈಡೇರಿದಂಥ ಪುಣ್ಯಾತ್ಮನಿಗೆ ಐಸಿರಿ ಪ್ರಾಪ್ತವಾಗುತ್ತದೆ. ಸಾಲದೆ, ನೀರಿನ ಬುಗ್ಗೆ ಚಿಮ್ಮುವ ರೀತಿ ಜೋರಿನಿಂದ ಬಂದು ಬೀಳುತ್ತದೆ. ದಾನ ರೂಪದಲ್ಲಿ ಎಷ್ಟೋ ಜನರಲ್ಲಿ ಅದನ್ನು ಹಂಚಿದರೂ, ಅದು ಕಡಿಮೆಯಾಗದೆ, ಎಂದಿನಂತೆ ಇರುತ್ತದೆ. ಕೈಯಿಂದ ತೆಗೆದಂತೆಲ್ಲ ಒರತೆಯ ನೀರು ಕಡಿಮೆಯಾಗದೆ ತುಂಬಿಕೊಳ್ಳುವಂತೆ.

ಕಾನಿವಾನಿ ತೋಡ ಗಲಿಸಿವರ್ತಿಂಚೆನಾ, ಹಾನಿವಚ್ಚು ನೆಂತ ವಾನಿಕ್ಕೈನ
ತಾಟಕ್ಕಿಂದಬಾಲು ತ್ಯಾಗಿನಚಂದಮೌ, ವಿಶ್ವದಾಭಿರಾಮು ವಿನುರ ವೇಮು.

ಸಲ್ಲದವನ ಜೊತೆಗೆ ಸೇರಿ ಕೆಲಸ ಮಾಡೆ,
ಹಾನಿ ತಪ್ಪದಯ್ಯ ಯಾರಿಗೇನು.
ಹೆಂಡ ಮುರದ ಕೆಳಗೆ ಹಾಲು ಕುಡಿದ ಚಂದ.
ವಿಶ್ವದಾಭಿರಾಮು ಕೇಳು ವೇಮು.

ಲೋಕಾಚಾರಕ್ಕೆ ಹೊಂದಿ ಕೆಲಸ ಮಾಡಬೇಕು. ಅಲ್ಲಿ ನಡೆವಳಿಯ ಹೊಂದಾಣಿಕೆ ಇರುತ್ತದೆ. ಮತ್ತು ಅದುವೇ ಹೊಂದಿದ ನಡೆವಳಿಕೆ ಎನ್ನಿಸುತ್ತದೆ. ಇದಕ್ಕೆ ಪ್ರತಿಯಾಗಿ ಎಂಥವನ ಸಂಗವಾದರೇನು? ನಾವು ನಮ್ಮ ಕಾರ್ಯ ಗೈಯ್ದರಾಯಿತು ಎನ್ನುವ ಉತ್ಸಾಹ ಉಕ್ಕೇರಿ ಕಾರ್ಯೋನ್ಮುಖರಾದರೆ, ಸಂಗದ ದುಷ್ಪರಿಣಾಮ ಆಗದಿರದು. ಎಂಥ ದೊಡ್ಡವನಿಗಾದರೂ ಹೀನರ ಸಂಗದಿಂದ ಅಪವಾದ ತಪ್ಪದು. ಹೇಗೆಂದರೆ, ಹೆಂಡದ ಮುರದ ಕೆಳಗೆ ಕುಳಿತುಕೊಂಡು ಹಾಲು ಸೇವಿಸಿದರೂ ಸಹ ಲೋಕದ ಜನರು ಹೆಂಡಗುಡುಕನೆಂದೇ ಕರೆಯುತ್ತಾರೆ; ಎಣಿಸುತ್ತಾರೆ; ನಡೆದು ಕೊಳ್ಳುತ್ತಾರೆ.



ಎರುಕಲೇನಿದೊರಲ ನೆನ್ನಾಳ್ಗುಗೊಲಿಚಿನ ಬ್ರತುಕುಲೇದು ವಟ್ಟ ಭ್ರಾಂತಿಕಾನಿ
ಗೊಡ್ಡುಟಾವು ಪಾಲು ಗೋರಿನ ಜೀಪುನಾ ? ವಿಶ್ವದಾಭಿರಾಮು ವಿನುರ ವೇಮು.

ಅರಿಯದವನ ಬಳಿಯೆ ಅನುಗಾಲ ದುಡಿಯಲು,
ಬದುಕು ಅಲ್ಲ; ಬರಿ ಭ್ರಾಂತಿಯಷ್ಟೆ.
ಗೊಡ್ಡು ಗೋವು ಹಾಲು ಕೋರಲೀಯಬಹುದೆ?
ವಿಶ್ವದಾಭಿರಾಮು ಕೇಳು ವೇಮು.

ಸೇವೆಯ ಮಹತಿಯನ್ನು ಅರಿಯದ ದೊರೆಯ ಬಳಿಯಲ್ಲಿ ಆಜೀವಪರ್ಯಂತ ಸೇವೆ ಗೈಯ್ದರೂ ಅದೊಂದು ಬದುಕೆನ್ನಿಸದು. ನಾವೂ ಹೇಗೋ ಬಾಳುತ್ತಿದ್ದೇವೆ ಎಂಬ ಭ್ರಾಂತಿಯಷ್ಟೇ. ಯಾರಾದರೂ ಗೊಡ್ಡು ಆಕಳ ಹತ್ತಿರ ಹೋಗಿ ಹಾಲು ಕೋರಿದರೆ, ಆಕಳು ಹಾಲನ್ನೀಯಬಹುದೇ?

ಗೊಡ್ಡುಟಾವುಬಿದುಕ ಗುಂಡ ಗೊಂಪೋಯಿನ ಬಂಡ್ಲನೂಡದನ್ನು ಬಾಲುಲೇವು
ಲೋಭಿವಾನಿ ನಡುಗ ಲಾಭಂಬುಲೇದಯಾ ವಿಶ್ವದಾಭಿರಾಮು ವಿನುರ ವೇಮು.

ಗೊಡ್ಡು ಹಸು ಹಿಂಡಲು ಗಡಿಗೆ ದೂರ ಬಿದ್ದು,
ಹಲ್ಲುನುರಿವ ಒದೆತ; ಹಾಲು ಇಲ್ಲ.
ಲೋಭಿ ನರನ ಕೇಳೆ, ಲಾಭವೇನು ಇಲ್ಲ.
ವಿಶ್ವದಾಭಿರಾಮು ಕೇಳು ವೇಮು.

ಲೋಭಿಯಾದ ಮನುಷ್ಯನ ಬಳಿಗೆ ಹೋಗಿ ಒಳ್ಳೆಯ ಕಾರ್ಯ ನೆರವೇರಿಸಲು ಸಹಾಯ ಯಾಚಿಸಿದರೆ, ಅವನು ಉದಾರಚಿತ್ತ ತಾಳಿ, ಸಹಾಯ ಸಲ್ಲಿಸುವದಿಲ್ಲ. ಅದು ಅವನ ಸಹಜ!!ಗುಣ; ಅವನನ್ನು ಕೇಳಿ ಫಲವಿಲ್ಲ. ಅವನು ಗೊಡ್ಡ ಹಸುವಿನಂತೆ ಗೊಡ್ಡು ಹಸುವಿನ ಬಳಿ ಹಾಲಿನ ಪಾತ್ರೆ ಒಯ್ದು ಕೆಚ್ಚಲು ಹಿಂಡಿದರೆ, ಅದು ಒದೆಯುತ್ತದಷ್ಟೇ. ಆಗ ಗಡಿಗೆ ದೂರ ಬೀಳುತ್ತದೆ. ಹಿಂಡಲು ಹೋಗುವವರ ಹಲ್ಲುಗಳೂ ಮುರಿಯುತ್ತವೆ. ಇಷ್ಟಾದರೂ ಹಾಲು ಮಾತ್ರ ಸಿಗದು.



ಹೀನಗುಣಮುವಾನಿ ನಿಲುಸೇರನಿಚ್ಚುನಾ, ಹಾನಿವಚ್ಚು ನೆಂತವಾಕ್ಕೈನ,
ಈಗ ಕಡುಪುಜೊಚ್ಚಿ ಯಿಟ್ಟಟ್ಟು ಜೀಯದಾ? ವಿಶ್ವದಾಭಿರಾಮು ವಿನುರ ವೇಮು.

ಗುಣವಿಹೀನನನ್ನು ಗೃಹದಿ ಸೇರಿಸಿದೊಡೆ,
ಹಾನಿಯುಂಟು ಯಾವನಾದರೇನು ?
ಹೊಟ್ಟೆ ಸೇರಿದ ನೊಣ ಹಾಗೆ ಹೀಗಳುಕದೆ?
ವಿಶ್ವದಾಭಿರಾಮು ಕೇಳು ವೇಮು.

ಒಳ್ಳೆಯವರ ಸಂಗವೇ ಇರಲಿ, ಕೆಟ್ಟವರ ಸಂಗವೇ ಇರಲಿ, ಅದು ಪರಿಣಾಮ ಬೀರದೇ ಇರದು. ನೀಚ ಗುಣವಿರುವವರಿಗೆ ಆಶ್ರಯ ನೀಡ ಬಯಸಿ, ಅವರನ್ನು ಮನೆಯಲ್ಲಿ ಇರಿಸಿಕೊಂಡರೆ, ಆದರಿಂದ ಎಂಥ ದೊಡ್ಡವನಿಗಾಗಲೀ, ದಕ್ಷ ಮನುಷ್ಯನಿಗಾಗಲೀ ಹಾನಿ ತಪ್ಪದು. ಹೇಗೆಂದರೆ, ನೊಣವು ಹೊಟ್ಟೆಯಲ್ಲಿ ಸೇರಿದ ಬಳಿಕ ಹಾಗೆ ಹೀಗೆ ಸರಿದು ಅಳುಕು ಮಾಡುವುದಷ್ಟೇ ?

೬೭

ಧಾರ್ಮಿಕುನಕುಗಾನಿ ಧರ್ಮಂಬುಗನರಾದು, ಕಷ್ಟಜೀವಿಕೆಟ್ಲು ಕಾನಬಡುನು?
ನೀರುಜೊರಕ ಲೋತು ನಿಜಮುಗಾದೆಲಿಯದು ವಿಶ್ವದಾಭಿರಾಮ ವಿನುರ ವೇಮ

ಧಾರ್ಮಿಕನಿಹ ಹೊರತು ಧರ್ಮ ಕಾಣನಯ್ಯ
ದುಷ್ಟ ಜೀವಿಯೆಂತು ಕಾಣಬಲ್ಲ ?
ನೀರಿಗಿಳಿಯದಾಳ, ನಿಜವಾಗಿ ತಿಳಿಯದು.
ವಿಶ್ವದಾಭಿರಾಮ ಕೇಳು ವೇಮ.

ಅನ್ಯರಿಗೆ ಅಸಹ್ಯವಾಗದಂತೆ ಬಾಳುವುದು, ತನ್ನಂತೆ ಪರರ ಬಗೆವುದು, ತನ್ನ ಆನಂದವೇ ಇತರರ ಆನಂದವೂ ಆಗುವಂತೆ ನಡೆಯುವದೇ ಧರ್ಮ. ಧರ್ಮ ನಡೆಯಲ್ಲಿದೆ. ಧಾರ್ಮಿಕ ನಡೆವಳಿ ಇಲ್ಲದೇ ಹೋದರೆ ಧರ್ಮವೇನೆಂದು ಗುರುತಿಸುವುದು ಹೇಗೆ ? ಕಾರಣ ಧರ್ಮ–ವಿರೋಧಿಯಾದ ದುಷ್ಟನು ಧರ್ಮದ ತಿರುಳು ಕಾಣಲಾರ. ಹೇಗೆಂದರೆ ನೀರಿನ ಆಳದ ಅನುಭವವಾಗಬೇಕಾದರೆ ನೀರೊಳಗೆ ಇಳಿದು ನೋಡಬೇಕು. ಮೇಲೆ ನಿಂತು ನೋಡಿದರೆ ಆಳವನ್ನು ಊಹಿಸಬಹುದು, ಅನುಭವಿಸಲಿಕ್ಕಾಗದು.

೬೮

ತನಕುಬ್ಯಾಪ್ತಿ ಲೇಕ ದಾತಲೇಯರಟಂಚು, ದೋಷಬುದ್ಧಿ ಚೇತ ದೂರುಟೆಲ್ಲ,
ಮುಕ್ಕುವಂಕುಜೂಚಿ ಮುಕುರಂಬುದೂರುಟೇ ವಿಶ್ವದಾಭಿರಾಮ ವಿನುರ ವೇಮ

ತನಗೆ ಪ್ರಾಪ್ತಿಯಿಲ್ಲ; ದಾತರುಕೊಡರೆಂದು,
ದೋಷ ಬುದ್ಧಿಯಿಂದ ದೂರಲೆಲ್ಲ;
ಮೂಗು ಡೊಂಕು ನೋಡಿ, ಮೂಗುತಿ ದೂರುವುದೆ?
ವಿಶ್ವದಾಭಿರಾಮ ಕೇಳು ವೇಮ

ತನ್ನ ದುಡಿಮೆಗೆ ತಕ್ಕ ಪ್ರತಿಫಲ ದೊರೆಯದೆ ಇರಬಹುದು.ಆಗ ಮನುಷ್ಯ ಧನಿಕರು ತನಗೆ ಸಹಾಯ ನೀಡಲೆಂದು ಆಶಿಸುತ್ತಾನೆ. ಅವರು ಕೊಡದಿರಲು, ಅವರ ಸಂಪತ್ತು ಕಂಡು ಅಸೂಯೆ ಪಡುತ್ತಾನೆ. ಅದಕ್ಕಾಗಿ ಕರುಬುತ್ತಾನೆ. ಕರುಬುವಿಕೆ ಸದಾಚಾರವಲ್ಲ. ದೋಷ ಬುದ್ಧಿಯಿಂದ ಪ್ರೇರಿತವಾದ ಆಚರಣೆ. ಕರುಬುವವನು ಇಷ್ಟಕ್ಕೆ ನಿಲ್ಲದೆ ತನಗೆ ನೀಡದ ಧನಿಕನನ್ನು ದೂರುತ್ತಾನೆ. ಅದರಿಂದ ತನಗೇ ಕೇಡು; ಎಂಬುದನ್ನು ಅವನು ತಿಳಿಯುವದಿಲ್ಲ. ತನಗೆ ಸಂಪತ್ತು ಸಿಕ್ಕದಿದ್ದರೆ ತಾನು ಅಪಾತ್ರನಷ್ಟೆ. ಹೇಗೆಂದರೆ, ಮೂಗು ಡೊಂಕವಾಗಿದ್ದರೆ ಮೂಗುತಿ ಸರಿಯಾಗಿ ಹೊಂದಿಕೊಳ್ಳದು. ಶೋಭಾಯಮಾನವಾಗದು. ಆಗ ಮೂಗುತಿ ಸರಿಯಾಗಿಲ್ಲ ಎಂದರೆ ತಪ್ಪಾಗುವುದಷ್ಟೇ.

೬೯

ತಂಡ್ರಿಕನ್ನ ಸುಗುಣಿ ತನಯುಡುಗಲ್ಗೆನಾ, ಪಿನ್ನ ಪೆದ್ದ ತನಮು ಲೆನ್ನದಗದು,
ವಾಸು ದೇವುವಿಡಿಚಿ ವಸುದೇವುನೆಂತುರಾ ? ವಿಶ್ವದಾಭಿರಾಮ ವಿನುರ ವೇಮ.

ತಂದೆಗಿಂತ ಸುಗುಣಿ ತನಯ ತಾನಾಗಲು
ಎಳೆತನ-ಹಿರಿತನವ ಎಣಿಸೆಹೊಲ್ಲ.
ವಾಸುದೇವನುಳಿದು ವಸುದೇವನೆಂಬರೆ ?
ವಿಶ್ವದಾಭಿರಾಮ ಕೇಳು ವೇಮ

ಸಣ್ಣವರು-ದೊಡ್ಡವರು, ಕಿರಿಯರು–ಹಿರಿಯರು ಎಂಬುದು ವಯಸ್ಸಿನ ಮೇಲಿಂದ ಆಳೆಯುವಂಥ ಗುಣವಲ್ಲ. ರಕ್ತ ಸಂಬಧವೂ ಅದರ ಮಾನದಂಡವಾಗದು. ತಂದೆಯೂ ಒಳ್ಳೆಯವನಿರಬಹುದು. ಆದರೆ ಮಗನು ಅವನಿಗಿಂತ ಎಷ್ಟೋ ಪಟ್ಟು ಹೆಚ್ಚು ಒಳ್ಳೆಯವನಾಗಿದ್ದರೆ, ಅವನನ್ನೇ ತಂದೆಗಿಂತ ದೊಡ್ಡವನೆಂದು ಎಣಿಸುತ್ತಾರೆ. ವಸುದೇವ ಯಾದವ ಅರಸು. ಶ್ರೀ ಕೃಷ್ಣನ ತಂದೆ. ಆದರೆ ಕೃಷ್ಣ ಪವಾಡಪುರುಷ. ಮಹಾನುಭಾವ. ದೇವರಂತೆ ಬಾಳಿ ಮಹಿಮೆ ಬೀರಿದ ಮಹಾಪುರುಷ. ವಸುವೇವನ ಪುತ್ರನಾದುದರಿಂದ ಆವನು ವಾಸುದೇವ. 'ವಾಸುದೇವ' ಎಂದು ಭಕ್ತರು ನೆನೆಯುತ್ತಾರೆ. 'ವಾಸುದೇವ' ನಾಮ ಸ್ಮರಿಸುತ್ತಾರೆ. ಅದೇ ವಸುದೇವ ಕೃಷ್ಣನ ತಂದೆಯೆಂದು 'ವಾಸುದೇವ' ನಾಮಬಿಟ್ಟು 'ವಸುದೇವ' ನಾಮ ಸ್ಮರಿಸುವದಕ್ಕೆ ಆದೀತೆ ? ಕಾರಣ ಮಗನು ಮಹಾತ್ಮನಾದಾಗ ತಂದೆ ರಾಜನೇ ಆಗಿರಲಿ, ಮಗನ ವಿಚಾರಪ್ರಣಾಲಿಯೇ ಮೇಲು.

೭೦

ಚೆಪ್ಪಲೋನಿರಾಯಿ ಚೆವಿಲೋನಿಜೋರಿಗ ಕಂಟಲೋನಿನಲುಸು ಕಾಲಿಮುಲ್ಲು
ಇಂಟಲೋನಿಪೋರು ನಿಂತಿಂತಕಾದಯಾ ? ವಿಶ್ವದಾಭಿರಾಮ ವಿನುರ ವೇಮ.

ಕೆರವಿನೊಳಗೆ ಕಲ್ಲು; ಕವಿಯ ಕಡಿಜೀರಿಗೆ,
ಕಣ್ಣೊಳಗಿನ ಕಸಿರು, ಕಾಲ ಮುಳ್ಳು,
ಗೃಹದ ಕಲಹವೆಷ್ಟು ಗಣನೆಗೈಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ

ಗೃಹ–ಕಲಹ ಎಲ್ಲ ವರ್ಗದ ಜನರಲ್ಲಿಯೂ ತೀರ ಸಾಮಾನ್ಯ. ಎಷ್ಟು ಸಲ ಮನೆಯಲ್ಲಿ ತಂಟೆ ಏಳುವುದೆಂಬದನ್ನು ಲೆಕ್ಕಹಿಡಿಯಲಾಸಲ್ಲ. ಚಿಲ್ಲರೆ ಮನಸ್ತಾಪದ ವಿಷಯಗಳನ್ನು ಉಪೇಕ್ಷಿಸಿ ಬಿಡುವುದೇ ಮೇಲು. ಈ ರೀತಿ ಉಪೇಕ್ಷಿಸುವುದು, ನಮ್ಮ ಸಹಜ ಸ್ವಭಾವ. ಅದನ್ನೇ ಅಭಿವೃದ್ಧಿಪಡಿಸಿಕೊಳ್ಳಬೇಕು. ಹಾದಿಯಲ್ಲಿ ಹೋಗುವಾಗ ಕೆರವಿನಲ್ಲಿ ಕಲ್ಲು ಸಿಕ್ಕು ನೋವು ಮಾಡುತ್ತದೆ; ಕಡಿಜೀರಿಗೆ ಹುಳು ಅದೆಷ್ಟೋ ಬಾರಿ ಕಿವಿ ಸೇರಿ ತೊಂದರೆ ಪಡಿಸುತ್ತದೆ. ಕಣ್ಣಲ್ಲಿ ಕಸಿರು ಬೀಳುವುದೂ, ಕಾಲಿಗೆ ಮುಳ್ಳು ನೆಡುವುದೂ ಲೆಕ್ಕವಿಲ್ಲದಷ್ಟು ಬಾರಿ. ಇವು ನೋವು ಉಂಟು ಮಾಡುತ್ತವೆ. ಆದರೂ ನಾವು ಅವನ್ನೆಲ್ಲ ಮರೆತು ಬಿಡುತ್ತೇವೆ. ಅದೇ ರೀತಿ, ಗೃಹಕಲಹಗಳನ್ನೂ ಮರೆತು ಸಾಗಿದರೆ ಸಂಸಾರ ಸುಖಮಯವಾಗುತ್ತದೆ.

೭೦

ಆಕಟಕಿದೊಲಂಗು ನಾಚಾರವಿಧುಲೆಲ್ಲ, ಜೀಕಟಕಿದೊಲಂಗ ಜಿತ್ತ ಶುದ್ಧಿ,
ವೇಕಟಕಿದೊಲಂಗು ವೆನುಕಟಬಗುವೆಲ್ಲ. ವಿಶ್ವದಾಭಿರಾಮ ವಿನುರ ವೇಮ

ಹಸಿಯಲು ನಶಿಸುವವು ಆಚಾರವಿಧಿಯೆಲ್ಲ.
ನಿಶೆಯೊಳು ನಶಿಸುವುದು ಚಿತ್ತಶುದ್ಧಿ.
ಗರ್ಭ ಧರಿಸೆ ಇಲ್ಲ; ಗರ್ವ ಗಡಸು ಎಲ್ಲ.
ವಿಶ್ವದಾಭಿರಾಮ ಕೇಳು ವೇಮ

ಉಂಡುಟ್ಟು ಸುಖಿಯಾಗಿರುವಾಗ, ದ್ವಿಜಾದಿ ಮೇಲು ವರ್ಗದವರೆಂದುಕೊಳ್ಳುವವರು ಹಿಂದಿನ ಧರ್ಮ ಸೂತ್ರಗಳನ್ನು ಮೆಲುಕು ಹಾಕುತ್ತಾರೆ. ಶೂದ್ರನ ಮನೆಯ ಹಿಡಿ ತುತ್ತು ಹೊಟ್ಟೆಯಲ್ಲಿ ಸೇರಿದರೆ ಅವನ ದ್ವಿಜತ್ವವೇ ನಶಿಸುವುದೆಂದೂ, ಅವನು ಮರಳಿ ಬ್ರಾಹ್ಮಣಾದಿ ಮೇಲು ಕುಲದಲ್ಲಿ ಸೇರಿಕೊಳ್ಳಬೇಕಾದರೆ ಏಳು ಜನ್ಮ ಹುಟ್ಟಬೇಕೆಂದೂ ಬರೆದಿದ್ದಾರೆ. ಆದರೆ ಈ ಧರ್ಮ ಸೂತ್ರಗಳಲ್ಲಿ ಕೂಡ ಹಸಿದಾಗ, ಪ್ರಾಣವೇ ಹೋಗುವದೆಂದಿದ್ದಾಗ ಕೆಲವು ರಿಯಾಯ್ತಿ ನೀಡಿದ್ದಾರೆ. ವಿಶ್ವಾಮಿತ್ರ ಮಹರ್ಷಿ, ಸಹ ಒಮ್ಮೆ ಬಹಳ ಹಸಿದು ಬಂದಾಗ ಶೂದ್ರನೊಬ್ಬನ ಮನೆಯಲ್ಲಿ ನಾಯಿಮಾಂಸವನ್ನೇ ತಿಂದನೆಂದು ತಿಳಿಸಲಾಗಿದೆ. ಸದಾಚಾರವು ಸಮಯಾನುಕೂಲವಾಗಿ ಬದಲಾಗುತ್ತ ಹೋಗದು. ಆದರೆ ನಾವು ಆಚಾರ-ವಿಧಿಗಳೆಂದು ಗ್ರಹಿಸಿರುವುದು ಕೇವಲ ದಂಭ ಮಾತ್ರ.

೭೨

ಕೋಪಮುನನು ಘನತ ಕೊಂಚೆಮ್ಮೆಪೋವುನು, ಕೋಪಮುನನು ಮಿಗುಲಗೋಡು ಜೆಂದು,
ಕೋಪ ಮಡಚೆ ನೇನಿ ಗೋರಿಕಲೀಡೇರು, ವಿಶ್ವದಾಭಿರಾಮ ವಿನುರ ವೇಮ

ಕೋಪದಿಂದ ಘನತೆ ಕೊಂಚತನಕಳಿವುದು,
ಕೋಪದಿಂದ ಮಿಗಿಲು ತಾಪವಿಹುದು,
ಕೋಪ ನಿಗ್ರಹಿಸಲು ಕೋರಿಕೆ ಫಲಿಸುವುದು
ವಿಶ್ವದಾಭಿರಾಮ ಕೇಳು ವೇಮ

ತನಗೆ ಕೇಡು ಉಂಟಾಗದೆ ಒಳ್ಳೆಯದೇ ಆಗಲೆಂದು ಬಯಸುವವನು ಕೋಪ ತಾಳಬಾರದು. ಕ್ರೋಧದಿಂದ ಸಂಮೋಹ ಉಂಟಾಗುತ್ತದೆ. ಸಂಮೋಹದಿಂದ ಬುದ್ಧಿ ನಾಶವಾಗುತ್ತದೆ. ಬುದ್ಧಿ ನಾಶವಾದ ನಂತರ ಮನುಷ್ಯನು ಕೀಳು ಕೆಲಸಕ್ಕಿಳಿಯುತ್ತಾನೆ. ಕ್ಷುದ್ರನೆನಿಸುತ್ತಾನೆ.

ತನ್ನ ಕೈನಡೆಯುವಲ್ಲಿ ಸಿಟ್ಟು ತೋರಿದರೆ, ಅಭೀಷ್ಟವೇನೋ ಪೂರೈಸಬಹುದು. ಆದರೆ ಕೆಟ್ಟ ಹೆಸರು ಬಾರದಿರದು. ಸಲ್ಲದಕಡೆಗಳಲ್ಲಿ ತೋರುವ ಸಿಟ್ಟಿನ ದುಷ್ಟ ಪ್ರತಿಕ್ರಿಯೆಯಿಂದ ಕೇಡು ಉಂಟಾಗುತ್ತದೆ. ತಾಪ ಪಡುವ ಪ್ರಸಂಗ ಬರುತ್ತದೆ.

ಕ್ರೋಧ ತಾಳಿ, ಹೆದರಿಸಿ, ಕೆಲಸ ಸಾಧಿಸುವ ಕೋರಿಕೆಯಿಂದ ನಡೆಯುವುದು ಲೇಸಲ್ಲ. ಏಕೆಂದರೆ ನಮ್ಮ ಕಾರ್ಯ ಸಿದ್ಧಿಯಾಗುವ ಪ್ರಸಂಗದಲ್ಲಿ, ಸಿಟ್ಟಿಗೇಳುವದಕ್ಕಿಂತಲೂ ಸಿಟ್ಟು ನಿಗ್ರಹಿಸುವದರಿಂದ, ಹೆಚ್ಚು ಫಲ ದೊರೆಯುತ್ತದೆ. ಕಾರಣ, ಎಂದೂ ಸಿಟ್ಟಿಗೇಳದಿರುವುದೇ ಮೇಲು.

೭೩

ಪರಗಲೇಮಿಚೇತ ಬಂಧುವುಲೋ ಪಗವಾರು, ಪರಗಲೇಮಿಚೇತ ಬರಮು ದಪ್ಪು.
ಪರಗಲೇಮಿಚೇತ ಬರಪತಿತಪ್ಪುರಾ , ವಿಶ್ವದಾಭಿರಾಮ ವಿನುರ ವೇಮ

ದ್ರವ್ಯಹೀನನಾಗೆ ಬಂಧು ವೈರಿಯಹರು;
ದ್ರವ್ಯಹೀನನಾಗೆ ಪರವು ಸಿಗದು.
ದ್ರವ್ಯಹೀನನಾಗೆ ಪತ್ತು ತಪ್ಪದೇನು?
ವಿಶ್ವದಾಭಿರಾಮ ಕೇಳು ವೇಮ.

ಹೊನ್ನು ಹೊಂದುವುದೇ ದೋಷಪೂರ್ಣ. ಹೊನ್ನು ಮುಟ್ಟುವುದೂ ಪಾಪ. ತನಗಿರುವ ಎಲ್ಲ ದ್ರವ್ಯ ಸಂಪತ್ತನ್ನು ಹಂಚಿಬಿಡುವುದೇ ಧರ್ಮ ಕಾರ್ಯ ಎಂದು ಉಪದೇಶ ಹೊಂದಿ ಪೂರ್ಣ ಕಳೆದುಕೊಳ್ಳುವುದು ಮೂಢತನ. ಹೊನ್ನು ಕೆಟ್ಟದ್ದಲ್ಲ. ಹೊನ್ನಿನ ಮೇಲಿನ ಆಶೆ ಮಾತ್ರ ಕೆಟ್ಟದ್ದು. ಪೂರ್ವ ಜನ್ಮದ ಸುಕೃತದ ಫಲವಾಗಿ ಬಂದ ಹೊನ್ನು ಹೇಗೆ ಕೆಟ್ಟದೆನ್ನಿಸೀತು? (ಆದರೆ ದುರಾಶೆಯಿಂದ ಹೆಚ್ಚು ಹೆಚ್ಚು ಪಡೆಯಬೇಕೆಂಬುದು ಕೆಡುಕು ವಿಚಾರ.) ಇರುವ ದ್ರವ್ಯವನ್ನು ಕಳೆದುಕೊಳ್ಳದೆ, ಒಳ್ಳೆಯ ಕಾರ್ಯಕಾಗಿ ತನ್ನ ಶಕ್ತಿಗನುಸರಿಸಿ ವಿನಿಯೋಗಿಸುವುದೇ ಸತ್ಕರ್ಮ.

ಇದನ್ನುಳಿದು ಸಂಪದವೇ ಬೇಡವೆಂದು ಸಂಪೂರ್ಣ ತೊರೆದು ನಿಂತರೆ, ಬಂಧು-ಬಳಗದವರೂ ಸಹ ಹಿತಕೋರದೆ, ವೈರಿಗಳಾಗಿ ನಿಲ್ಲುತ್ತಾರೆ. ದ್ರವ್ಯ ಹೀನನಾದವನು ತನ್ನ ಹಸಿವನ್ನೂ ಹಿಂಗಿಸಿಕೊಳ್ಳಲಾರ. ಪರರ ಹಸಿವನ್ನು ಹಿಂಗಿಸುವ ಧರ್ಮಕಾರ್ಯವನ್ನೂ ಮಾಡಲಾರ. ಹೀಗೆ ಪರವನ್ನೂ ಕಳೆದುಕೊಳ್ಳುವನು. ದ್ರವ್ಯವಿಹೀನನಿಗೆ ಇಷ್ಟೆಲ್ಲ ಆಗುವುದೆಂದ ಮೇಲೆ, ದ್ರವ್ಯದ ಕೊಡಕೊಳ್ಳುವ ಶಕ್ತಿಯ ಮೇಲಿಂದ ನಿರ್ಧರಿಸಲ್ಪಡುವ 'ಪತ್ತು' ಇಲ್ಲದಾಗುವುದೇನು ದೊಡ್ಡ ಸಂಗತಿ?

೭೪

ಚಿಕ್ಕಯುನ್ನ ವೇಳ ಸಿಂಹಂಬುನ್ನೆನನು, ಪ್ರಕ್ಕ ಗುಕ್ಕ ಸೇರಿ ಬಾಧ ಜೇಯು
ಬಲಿಮಿಲೇನಿವೇಳ ಬುತಂಬು ಸೆಲ್ಲದು ವಿಶ್ವದಾಭಿರಾಮ ವಿನುರ ವೇಮ.

ಸಿಕ್ಕಿಬಿದ್ದ ವೇಳೆ ಸಿಂಹವಾದರೇನು?
ಪಕ್ಕೆ ನಾಯಿ ಕೂಡ ಬಾಧಿಸುವುದು.
ಬಲವಿರದ ಕಾಲದಿ ಪಂಥವೆಲ್ಲ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಅನನುಕೂಲ ವೇಳೆ ಯಾರಾದರೂ ಪೇಚಿನಲ್ಲಿ ಸಿಕ್ಕಿಬೀಳುವುದು ಸಹಜ. ಮಹಾ ಬಲಿಷ್ಠವಾದ ಸಿಂಹ ಕೂಡ, ಈ ಪೇಚಿನ ಪ್ರಸಂಗ ತಪ್ಪಿಸಿಕೊಳ್ಳಲಾರದು. ಪೇಚಿಗೆ ಸಿಲುಕಿದಾಗ, ಚಿಕ್ಕಪುಟ್ಟ ಜನರೂ ತ್ರಾಸು ಕೊಡಬಲ್ಲರು. ಸಿಂಹ ಪೇಚಿಗೆ ಸಿಕ್ಕಾಗ ನಾಯಿಯಂಥ ಕ್ಷುದ್ರ ಪ್ರಾಣಿ ಕೂಡ ಅದನ್ನು ಹಿಂಸಿಸುವುದು. ನಮಗೆ ಬಲವು ಕಡಿಮೆಯಾದಾಗ, ಇದು ಹೀಗೆಯೇ ಆಗಬೇಕೆನ್ನುವ ಹೇವ-ಪಂಥಗಳಿಗೆ ಅಂಟಿಕೊಳ್ಳುವುದು ಸರಿಯಾದುದಲ್ಲ.

೭೫

ಎದುಟತನಬಲಂಬು ನೆಂಚುಕೋನೇರಕ ದೀಕೊನಿ ಚಲಮುನ ನೆದಿರ್ಚೆನೇನಿ
ಎಲುಗುದಿವ್ವೆನೇವ ಕೇಗಿನಚಂದಮೌ ವಿಶ್ವದಾಭಿರಾಮ ವಿನುರ ವೇಮ

ಎದುರಾಳಿಯ ಬಲವು ಎಷ್ಟು ಎಂದೆಣಿಸದೆ,
ಎದುರಾಗುವ ಹಠದಿ ಎದುರಾಗಲು,
ಕರಡಿ ಉರಿಯ ಸುತ್ತಿ ಕುಣಿದು ಸುಟ್ಟ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಯುದ್ಧ ಕಾಲದಲ್ಲಿ ಎದುರು ಪಕ್ಷದ ಬಲಾಬಲವನ್ನು ಲಕ್ಷಿಸಬೇಕು. ಅನಂತರ ಅದಕ್ಕೆ ತಕ್ಕರೀತಿ ಪ್ರತಿರೋಧ ತೋರಬೇಕು. ಅದನ್ನುಳಿದು, ಕೇವಲ ವಿರೋಧಿಸಬೇಕೆಂಬ ಇರಾದೆಯಿಂದ ವಿರೋಧಿಸಿದರೆ, ಕೇಡು ತಪ್ಪದು. ಹೇಗೆಂದರೆ ಕರಡಿಯಿಂದ ತಪ್ಪಿಸಿಕೊಳ್ಳಲು ಉರಿ ಹಾಕಿ ಕುಳಿತು ಕೊಂಡವನ ಬಳಿಸಾರಲು, ಅವನು ಬೆಂಕಿಯ ಸುತ್ತು ಹಾಕುತ್ತಾನೆ. ಅವನನ್ನು ಬೆಂಬತ್ತಿ ಕರಡಿಯೂ ಬೆಂಕಿಯ ಬಳಿ ಹೋದರೆ, ಕೂದಲು ಬೆಂಕಿಯ ಶಾಖದಿಂದ ಸುಟ್ಟು ಹೋಗುತ್ತವೆ. ಉರಿಯನ್ನು ಆಶ್ರಯಿಸಿದವನ ಬಲವನ್ನು ಕರಡಿ ಅರಿಯಬೇಕಷ್ಟೇ.

೭೬

ದುಂಡಗೀನಿಕೊಕಡು ಕೊಂಡೀಡುಚೆಲಿಕಾಡು ಬಂಡರಾಜುನಕುನು ಪಾಡುಮಂತ್ರಿ,
ಕೊಂಡಮ್ಮುಚ್ಚುನಕುನು ಕೋತಿಯುನಿಂದೌನು, ವಿಶ್ವದಾಭಿರಾಮ ವಿನುರ ವೇಮ

ಕೊಂಡೆಯವನು ಖಳನಿಗೊಳ್ಳಿ ಗೆಳೆಯನೆನಿಪ.
ಭಂಡ ರಾಜಗಿಪ್ಪ ಹಾಳು ಮಂತ್ರಿ.
ಅಂಡಲೆಯುವ ನರಗೆ ಅಡವಿಮುಂಗ ಗೆಳೆಯ.
ವಿಶ್ವದಾಭಿರಾಮ ಕೇಳು ವೇಮ.

ಗುಪ್ತಚಾರನು ನೀಚ ಮನುಷ್ಯನಿಗೆ ಒಳ್ಳೆಯ ಗೆಳೆಯನೆನಿಸುತ್ತಾನೆ. ಏಕೆಂದರೆ, ನೀಚನ ಹಂಚಿಕೆಗೆ ಚಾಡಿಕೋರರಿಂದ ಸಾಕಷ್ಟು ಪುಷ್ಟಿ ದೊರೆಯುತ್ತದೆ. ಅದೇ ರೀತಿ, ರಾಜನು ನೀತಿಗೇಡಿಯಾದ ಭಂಡನಾಗಿದ್ದರೆ, ಅವನಿಗೆ ಹಾಳು ಮಾಡುವ ಯೋಚನೆಯ ಮಂತ್ರಿಯೇ ಗತಿ ಎನಿಸುತ್ತಾನೆ. ಇನ್ನು ಕೆಲಸವಿಲ್ಲದೆ ತಿರುಗುವ ಮನುಷ್ಯನಿಗೆ ಯಾರ ಸಂಗವೂ ದೊರೆಯದೆ, ಅಡವಿಯ ಮುಂಗದೊಂದಿಗೆ ಚಿನ್ನಾಟವಾಡತೊಡಗುತ್ತಾನೆ. ನಾವು ಕೀಳು-ತನಕ್ಕಿಳಿದರೆ ಕೀಳು ಜನರ ಜೊತೆಯೇ ನಮ್ಮ ಪಾಲಿಗೆ ಬರುತ್ತದೆ. ಮೇಲು ಜನರ ಸಂಗವನ್ನು ನಾವು ಆಶಿಸುವುದಾದರೆ ನಮ್ಮನಡೆ-ನುಡಿಯೂ ಮೇಲು ತರಗತಿಯದಾಗಬೇಕು.

೭೭

ಔನಟಂಚು ನೊಕ್ಕಡಾಡಿನ ಮಾಟಕು, ಗಾದಟಂಚು ಬಲುಕ ಕ್ಷಣಮುಪಟ್ಟು,
ದಾನಿನಿಲ್ವದೀಯ ದಾತಲುದಿಗವಲೆ, ವಿಶ್ವದಾಭಿರಾಮ ವಿನುರ ವೇಮ

ಮಾತು ಕೇಳಿ ಒಬ್ಬ, ಹೌದು ಅಹುದು ಎನಲು,
ಕೆಲರು ಸಿದ್ಧ; ಅಲ್ಲವೆನಲು ಕ್ಷಣದಿ
ಬೊಮ್ಮನೆದ್ದು ಬರದೆ, ದ್ವಂದ್ವ ಅಳಿಯಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ಮಾತಿಗೆ ಮಾತು ಬೆಳೆಸುವ ವಾದಕ್ಕೆ ಕೊನೆಯೇ ಇಲ್ಲ. ಒಬ್ಬನು ಒಂದು ವಾದ ಮಂಡಿಸಿ ಮಾತನಾಡಿದರೆ, ಸಹೃದಯನೊಬ್ಬನು ಸರಿ, ಸರಿ ಎಂದು ಒಪ್ಪಬಹುದು. ಆದರೆ ಇತರರು ಪ್ರಸಂಗವನ್ನು ಅಲ್ಲಿಗೇ ಬಿಟ್ಟುಕೊಡರು. ಆ ವಾದಕ್ಕೆ ಪ್ರತಿವಾದ ಹೂಡುತ್ತಾರೆ. ಒಬ್ಬನು ಅಹುದೆಂದು ಒಪ್ಪಿದುದನ್ನೇ, ಅಲ್ಲವೆಂದು ನಿರಾಕರಿಸುತ್ತಾರೆ. ಈ ವಾದ-ಪ್ರತಿವಾದಗಳ ದ್ವಂದ್ವವನ್ನು ಮುಗಿಸುವುದು ಸಾಮಾನ್ಯನ ಅಳವಿಗೆ ಮೀರಿದ ವಿಷಯ. ಶಬ್ದ ಬ್ರಹ್ಮನೇ ಎದ್ದು ಬಂದು ಶಾಬ್ದಿಕ ವಾದ–ವಿವಾದ ಮುಗಿಸಬೇಕಷ್ಟೇ. ಕಾರಣ ವ್ಯರ್ಥ ಮಾತಿನ ಮಥನದಿಂದ, ವಾದ–ವಿವಾದದಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು ನಡೆಯಬೇಕು.

೭೮

ತನದುಬಾಗುಗೋರಿ ಧರ್ಮಂಬುಜೆಪ್ಪಿನ, ದಿಟ್ಟಿಚುಂದ್ರು ಮೊರಕು ಲೆಟ್ಟಯೆದುಟ
ಗಡ್ಡಿವೇಯ ಬೊಟ್ಲಗೊಡ್ಡು ಕೊಮ್ಮಾಡಿಂಚು, ವಿಶ್ವದಾಭಿರಾಮ ವಿನುರ ವೇಮ


ತನ್ನ ಒಳಿತು ಕೋರಿ, ಧರ್ಮಕರ್ಮ ತಿಳಿಸೆ,
ಮುನ್ನ ಜರಿದು ನುಡಿವ ದುರಿತ ಖಳನು.
ತಿನ್ನಲಿಡಲು ಗೂಳಿ ಕೊಂಬು ತಿವಿವ ಪರಿಯು.
ವಿಶ್ವದಾಭಿರಾಮ ಕೇಳು ವೇಮ

ದುಷ್ಟನಾಗಿ, ನೀಚನಾಗಿ ವರ್ತಿಸುವವನನ್ನು ನೋಡಿ, ಕರುಣೆಪಟ್ಟು ಅವನನ್ನು ಹಾದಿಗೆ ಹಚ್ಚುವ ಉದ್ದೇಶ ತಾಳಿ, ಧರ್ಮವಾವುದು? ಕರ್ಮದಿಂದ ಉಂಟಾಗುವ ಒಳಿತು ಕೆಡಕುಗಳೇನು? ಎಂಬುದನ್ನು ತಿಳಿಸಲು ಯತ್ನಿಸುತ್ತಾನೆ,ಸಜ್ಜನನು. ಆದರೆ ಆ ನೀಚ ಮನುಷ್ಯನಾದರೊ ಇದನ್ನೆಲ್ಲ ಕವಿಯ ಮೇಲೆ ಹಾಕಿಕೊಳ್ಳದೆ, ತನಗೆ ಒಳಿತು ಹೇಳಬಂದವರನ್ನೇ ಮೂದಲಿಸುತ್ತಾನೆ. ಹೇಗೆಂದರೆ, ಗೂಳಿಗೆ ಹೊಟ್ಟು-ಮೇವು ಹಾಕುವ ಸದುದ್ದೇಶದಿಂದ ಗೋದಲೆಯ ಬಳಿಗೆ ಯಾರಾದರೂ ಹೋದರೆ, ಮದವೇರಿದ ಗೂಳಿ ಕೊಂಬಿನಿಂದ ತಿವಿಯಲು ಏರಿ ಬರುತ್ತದೆ.

ಬಹುಳಕಾವ್ಯಮುಲನು ಬರಿಕಿಂಪಗಾವಚ್ಚು, ಬಹುಳ ಶಬ್ದ ಚಯಮು ಬಲುಕವಚ್ಚು
ಸಹನ ಮೊಕ್ಕಟಬ್ಬ ಜಾಲಕಷ್ಟಂಬುರಾ ವಿಶ್ವದಾಭಿರಾಮ ವಿನುರ ವೇಮ

ಬಹಳ ಕಾವ್ಯಗಳನು ಓದಿದೊಡೇ ಏನು?
ಬಹಳ ಭಾಷೆಗಳನು ಬಳಸಲೇನು?
ಸಹನೆ ಸೇವಕಂಗೆ ಬಹಳಕಷ್ಟಕರವು;
ವಿಶ್ವದಾಭಿರಾಮ ಕೇಳು ವೇಮ.

ಬಹಳಷ್ಟು ಮಹಾಕಾವ್ಯ ಪುರಾಣಾದಿ ಓದಬಹುದು. ವ್ಯಾಕರಣ ಛಂದಸ್ಸು ಅರಿತು ಭಾಷೆಯನ್ನು ಬಳಸಿ ಟೀಕೆ–ಟಿಪ್ಪಣಿ ಬರೆಯಬಹುದು, ವಾಚನ ಆಖ್ಯಾನ ಮಾಡಬಹುದು ಆದರೆ ಇಷ್ಟರಿಂದ ಏನಾಗುತ್ತದೆ? ತನಗಿಂತ ಅಧಿಕರಾಗಿರುವ ಜನರ ಸುಖ-ಸಂಪದಗಳನ್ನು ಕಂಡು ಅದನ್ನೆಲ್ಲ ಸಹಿಸಿ, ಆನಂದದಲ್ಲಿ ಭಾಗಿಯಾಗುವ ಮನಸ್ಸು ತಾಳುವುದು ಸಣ್ಣ ಜನರಿಗೆ ಬಹಳ ಕಷ್ಟಸಾಧ್ಯವೇ ಸರಿ.



೮೦

ಝಷಮು ನೀರುವೆಡಲ ಜಚ್ಚುಟೀ ಸಿದ್ಧಂಬು, ನೀಟನುಂಡೆನೇನಿ ನಿಗಿಡಿಪಡುನು,
ಅಂಡ ತೊಲಗುನೆಡಲ ನಂದರಪನಿಯಿಂತೆ, ವಿಶ್ವದಾಭಿರಾಮ ವಿನುರ ವೇಮ

ಮೀನು ನೀರೊಳಿರಲು ನನ್ನಿಯ ಚಿನ್ನಾಟ;
ನೀರ ಹೊರಗೆ ಬಿಡಲು ಒಡನೆ ಮರಣ;
ಸಂಗ ತೊಲಗೆ ಸಕಲ ಜನರ ಗತಿಯೆ ಇಂತು.
ವಿಶ್ವದಾಭಿರಾಮ ಕೇಳು ವೇಮ.

ಪ್ರತಿಯೊಂದು ಪ್ರಾಣಿಯೂ ತನಗೆ ತಕ್ಕ ಪರಿಸರದಲ್ಲಿ ಹಾಯಾಗಿರುತ್ತದೆ. ಮೀನಿಗೆ ನೀರಿನಲ್ಲಿ ಇರುವುದೆಂದರೆ, ಆನಂದಕರ. ನೀರಿನಲ್ಲಿ ಅದು ಚಿನ್ನಾಟವಾಡುತ್ತ ಕಾಲ ಕಳೆಯುವದು. ಆದರೆ ನೀರಿನ ಹೊರಗೆ ಮೀನು ಇರಿಸಿದರೆ, ಅದು ಸತ್ತು ಹೋಗುತ್ತದೆ. ಅದರ ಅಂಗಾಂಗಗಳೆಲ್ಲ ನೀರಿನಲ್ಲಿ ವಾಸಿಸಲು ತಕ್ಕವಾಗಿರುತ್ತವಷ್ಟೇ. ನೀರಿನ ಸಂಗವೇ ಮೀನಿಗೆ ಮೇಲು. ಅದರ ಸಂಗವಿಲ್ಲದಿದ್ದರೆ ಬದುಕಲಾರದು. ಅದೇ ರೀತಿ, ತಾವು ಸುಗಮ ಜೀವನ ಸಾಗಿಸುವಂತೆ ಅನುಕೂಲಸ್ಥರಾದ ಜನರ ಸಹವಾಸ ತಪ್ಪಿದರೆ, ಮನುಷ್ಯನಿಗೆ ನೀರು ತಪ್ಪಿದ ಮೀನಿನ ಗತಿಯೇ ಉಂಟಾಗುತ್ತದೆ.

Smt. B.V. Navaneetha

ಏಕಮತ್ಯ ಮೊಕ್ಕಡಾವಶ್ಯಕಂ ಬೆಪ್ಪು, ದಾನಿಬಲಿಮಿ ನೆಂತಯ್ಯನ ಗೂಡು.
ಗಡ್ಡಿವೆಂಟಬೆಟ್ಟ ಕಟ್ಟರಾ? ಯೇನುಗುನ್? ವಿಶ್ವದಾಭಿರಾಮ ವಿನುರ ವೇಮ.

ಒಗ್ಗಟ್ಟಿದು ಮೊದಲು ಅತ್ಯವಶ್ಯವರಿಯೆ,
ಮುಗ್ಗರಿಸಲದಾಗ ವ್ಯರ್ಥವೆಲ್ಲ;
ಹಗ್ಗ ಗೈದ ಹುಲ್ಲು ಆನೆ ಕಟ್ಟಿದೇನು?
ವಿಶ್ವದಾಭಿರಾಮ ಕೇಳು ವೇಮ.

ಹಲವು ಹುಲ್ಲುಕಡ್ಡಿಗಳನ್ನು ಹುರಿಗೊಳಿಸಿ ಮಾಡಿದ ಹಗ್ಗದಿಂದ ಆನೆಯಂಥ ಬಲಿಷ್ಠ ಪ್ರಾಣಿಯನ್ನು ಬಂಧಿಸಬಹುದು. ಮಹಾಕಾರ್ಯಗಳನ್ನು ಮಾಡಬೇಕಾದರೆ ಒಗ್ಗಟ್ಟು ತುಂಬಾ ಅವಶ್ಯವಾಗಿದೆ. ಒಗ್ಗಟ್ಟು ಇಲ್ಲದೆ ಹೋದರೆ ನಮ್ಮ ಪ್ರಯತ್ನಗಳೆಲ್ಲ ವ್ಯರ್ಥವಾಗಿ ಹೋಗುತ್ತವೆ.



೮೨

ಈತವಚ್ಚಿನಪುಡು ಲೋತಪಿಂಚುನಾ? ಪಾತದೋಷಿ ಕರಯು ಭಯಮುಕಲದೆ?
ಕೋತಿಕೊಮ್ಮನೆಕ್ಕಿ ಕುಪ್ಪಿಂಚಿದೂಕದಾ, ವಿಶ್ವದಾಭಿರಾಮ ವಿನುರ ವೇಮ.

ಈಜು ಬಲ್ಲವಂಗೆ ಆಳದ ಭಯವೆಲ್ಲಿ?
ಭೂರಿ ಪಾಪಿಗಿತರ ಭಯವೆಲ್ಲಿ?
ಕೊಂಬೆಯೇರಿದ ಕಪಿ ಕುಣಿದು ಕೆಳಗುರುಳದೆ?
ವಿಶ್ವದಾಭಿರಾಮ ಕೇಳು ವೇಮ.

ಈಜಲು ಬಲ್ಲವನು ನೀರಿನ ಆಳ ಎಷ್ಟಿದ್ದರೂ ಅಂಜುವದಿಲ್ಲ. (ಅದೇ ರೀತಿ ಸುಜ್ಞಾನಿಯಾದವನು ಸಂಸಾರದ ಜಂಜಡವು ಎಷ್ಟಾದರೂ ಜಯಶೀಲನಾಗಿ ಬಾಳುತ್ತಾನೆ.) ಇದು ಒಂದು ತೆರನಾದರೆ, ಮಹಾಪಾತಕಗೈದ ದೋಷಿಗೆ ಧರ್ಮಕರ್ಮಗಳ ಭಯವಾದರೂ ಎಲ್ಲಿರುತ್ತದೆ? ಅವನು(ತೋಯಿಸಿಕೊಂಡವನಿಗೆ ಮಳೆಯ ಅಂಜಿಕೆಯೇನು? ಎಂಬಂತಿರುತ್ತಾನೆ.) (ಆದರೆ ತಿಳಿವಳಿಕೆಯಿಲ್ಲದೆ, ತಾನು ದೊಡ್ಡವನೆಂದು ಮೆರೆಯುವನು.) ನಿರ್ಭಯದಿಂದ ಮರದ ತುದಿಯೇರಿದ ಮಂಗ ಕೆಳಗುರುಳುವಂತೆ ಪೆಟ್ಟು ತಿನ್ನುತ್ತಾನೆ.

ಲಷಿ

ವ್ಯಾಧಿ ನೆರುಗಲೇನಿ ವೈದ್ಯಮದೇಲರಾ? ಕೊದುವ ದೆಲಿಯಲೇನಿ ಕೊಕ್ಕು ಲೇಲ?
ಮನಸುದೆಲಿಯಲೇನಿ ಮರ್ಮಜ್ಞುಲೇಟಿಕಿ? ವಿಶ್ವದಾಭಿರಾಮು ವಿನುರ ವೇಮು.

ಬೇನೆ ಕಂಡರಿಯದೆ ಮದ್ದು ಕೊಡುವುದೇಕೆ?
ಮನದಿಷ್ಟವರಿಯದೆ ಕೋರಲೇಕೆ?
ಮನದ ಮರ್ಮಕಾಣ; ಜಾಣನೆನಿಸಲೇಕೆ!
ವಿಶ್ವದಾಭಿರಾಮು ಕೇಳು ವೇಮು.

ರೋಗಿಯ ಬೇನೆಯ ಲಕ್ಷಣಗಳನ್ನು ತಿಳಿಯದೆ ಔಷಧ ಕೊಟ್ಟರೆ, ನಿಷ್ಪ್ರಯೋಜಕ ವಾಗುವಂತೆ, ಮನಸ್ಸಿನ ಬಯಕೆಗಳನ್ನು ತಿಳಿಯದೆ ಹರಕೆ ನೀಡಿದರೆ ನಿರುಪಯೋಗವೇ ಸರಿ. (ಸಾಧಕನ ಮನಸ್ಸಿನ ಹದ ತಿಳಿದು ಗುರು ಉಪದೇಶ ಮಾಡಬೇಕು) ಅಂದ ಮೇಲೆ ಮನಸ್ಸಿನ ಮರ್ಮವನ್ನು ಗುರುತಿಸಿದವನು, ಮರ್ಮಜ್ಞನೆಂದು ಹೇಗೆ ಕರೆಸಿಕೊಳ್ಳಬಲ್ಲನು!

ಲಳಿ

ಲವಣಮೆಂತ ದಾನಿಲಾಭಂಬುಗನನೆಂತ, ಕೊದ್ದಿದನುಚು ನೆನ್ನಗೂಡುನಯ್ಯ?
ಭೋಗಮೇಟಕಿ ನುಪಭೋಗಂಬಿ ಲೆಕ್ಕಗು, ವಿಶ್ವದಾಭಿರಾಮು ವಿನುರ ವೇಮು.

ಉಪ್ಪದೆಷ್ಟು ಲಾಭಕರವೆನಸುತಿಪ್ಪುದು!
ಅಲ್ಪವಾದರೇನು? ರುಚಿಯೀವುದು;
ಭೋಗಭಾಗ್ಯವೇಕೆ? ಉಪಭೋಗವೇ ಲೆಕ್ಕ;
ವಿಶ್ವದಾಭಿರಾಮು ಕೇಳು ವೇಮು.

ಅತ್ಯಂತ ಅಲ್ಪ ಪ್ರಮಾಣದಲ್ಲಿ ಇದ್ದರೂ ಸಹ, ಉಪ್ಪು ಉಳಿದ ಪದಾರ್ಥಗಳೊಂದಿಗೆ ಬೆರೆಯುತ್ತದೆ. ಮತ್ತು ತುಂಬಾ ರುಚಿಯೀಯುತ್ತದೆ. ಅಂದಮೇಲೆ, ಅದು ಹೆಚ್ಚು ಲಾಭಕರವೆನಿಸುವದಿಲ್ಲವೇ? ಅದೇ ರೀತಿ ನಮ್ಮ ಭೋಗ ವಸ್ತುಗಳೆಷ್ಟಿದ್ದರೂ ನಾವು ಎಷ್ಟು ಉಪಭೋಗ ಮಾಡುವೆವೋ ಅದಷ್ಟೇ ಲೆಕ್ಕಕ್ಕೆ ಬರುತ್ತದೆ. (ಲಭ್ಯವಿರುದ ಅಲ್ಪವನ್ನೇ ಎಲ್ಲಕ್ಕೂ ಬಳಸಿಕೊಂಡು, ನಾವು ಸುಖ ಅನುಭವಿಸುವುದೇ ಜಾಣತನ.)

ಲಜಿ

ಔನನಂಗವಚ್ಚು ನೈನದಿಕಾನಿದಿ, ಯನ್ಯುಡೆದುಟನುಂಡಿ ಯಡುಗಲೇನಿ
ನಿಲಿಚಿಯಡಗುವಾಡು ಗಲಿಗಿನನಿಲುವಡು ವಿಶ್ವದಾಭಿರಾಮು ವಿನುರ ವೇಮು.

ಅಹುದಲ್ಲೆನಲೊಬ್ಬ ಬೇಕು ಬೇಡವರಿತು,
ಇನ್ನೋರ್ವನೆದುರಾಗಿ ಕೇಳುವನದ;
ನಿಲಿಸಿಕೇಳುವನರಿತರೂ ಕೇಳ್ವ ಚಪಲ;
ವಿಶ್ವದಾಭಿರಾಮು ಕೇಳು ವೇಮು.

ಒಂದು ಮಾತು ಹೇಳಿದೊಡನೆ ಒಬ್ಬನು ತನಗೆ ಬೇಕೆನಿಸಿದರೆ 'ಅಹುದು' ಎನ್ನಬಹುದು ಇಲ್ಲವೆ ಬೇಡವೆನಿಸಿದರೆ 'ಅಲ್ಲ' ಎನ್ನಬಹುದು. ಆದರೆ ಇನ್ನೋರ್ವ ಇದನ್ನೆ ಕುರಿತು ವಾದಕ್ಕಿಳಿಯುತ್ತಾನೆ. (ಇಂಥವನದು, ಹೌದು ಎಂದರೂ ವಾದ; ಅಲ್ಲವೆಂದರೂ ವಾದ.) ತನಗೆ ಮಾತಿನ ಅರ್ಥವಾದರೂ ಕೇಳಿ ನೋಡೋಣ; ಪರೀಕ್ಷಿಸೋಣ ಎಂಬ ಚಪಲ ಅವನದಾಗಿರುತ್ತದೆ.

ಲಜಿ

ಫಣಿಕಿಗೋರಲುಂಡ ಭಯಮೊದುನಟ್ಟುಲೇ, ವೆರತುರಯ್ಯ ದುಷ್ಟವಿಭವಮುನಕು
ಗೋರಲೂಡದ್ರಾಚು ವೀರುನಾ? ದುಷ್ಟತ್ರ, ವಿಶ್ವದಾಭಿರಾಮು ವಿನುರ ವೇಮು.

ಉರಗದಂತ ಪಂಕ್ತಿ ಭಯಂಕರವೆನಿಸದೆ?
ತಿಳಿಯು ದುಷ್ಟ ಶಕ್ತಿ ಹುಟ್ಟಳಿಸಲು
ದಂತ ಕೀಳೆ, ಕೆಡುಕು ಅಂಕೆ ಮೀರಲಳವೇ?
ವಿಶ್ವದಾಭಿರಾಮು ಕೇಳು ವೇಮು

ಹಾವು ಮೊದಲು ಕೆಟ್ಟ ಪ್ರಾಣಿ; ಸಾಲದೆ ಅದರ ವಿಷದ ಹಲ್ಲಿನ ಸಾಲು ತುಂಬಾ ಭೀತಿ ಹುಟ್ಟಿಸುವುದು. ಆ ವಿಷದಂತ ಕಿತ್ತು ಒಗೆದರೆ ಹಾವಿನ ಕೆಡುಕು ಮೀತಿಮೀರಿ ಹೋಗಬಹುದೆ? ಇಲ್ಲ. ಅದೇ ರೀತಿ ಅಟ್ಟಹಾಸದಿಂದ ಮೆರೆವ ದುಷ್ಟನ ವೈಭವವನ್ನು ಇಲ್ಲವಾಗಿಸಿದರೆ, ಅವನ ಕೆಡುಕಿಗೂ ಇತಿಮಿತಿಯಾಗುತ್ತದೆ.

ನೂರುಬಲುಕವಚ್ಚು ನುಡಿವ್ಯಾಯಗಾರಾದು. ವ್ಯಾತಕನ್ನ ಸಾಕ್ಷಿ ವಲವದೆನ್ನ
ಪರಗಲೇನಿವ್ಯಾತ ಭಂಗಪಾಟುನುದೆಚ್ಚು, ವಿಶ್ವದಾಭಿರಾಮ ವಿನುರ ವೇಮ.

ನೂರು ಮಾತು ನುಡಿಯೆ ಲೇಸು; ಬರೆಯೆ ಹೊಲ್ಲ;
ಬರೆದ ಸಾಕ್ಷಿ ವಚನ ಸ್ಥಿರಗೊಳಿಪ
ಭೂರಿ ಕಷ್ಟ ಕಟ್ಟಿಕೊಂಡು ಮರುಗಲೇಕೆ?
ವಿಶ್ವದಾಭಿರಾಮ ಕೇಳು ವೇಮ

ನೀವು ನೂರಾರು ಮಾತುಗಳನ್ನು ಬಾಯಿಯಿಂದ ಆಡಬಹುದು. ಆದರೆ ಬರೆಯುವಾಗ ಎಚ್ಚರಿಕೆ ಬೇಕು. ಸಾಕ್ಷ್ಯ ನೀಡಿ ಸ್ಥಿರಪಡಿಸಲಾರದ ಒಂದೇ ಒಂದು ಮಾತು ಬರೆದರೂ ಸಾಕು. ಅದರಿಂದ ನಿಮ್ಮ ಶೀಲಕ್ಕೂ ಹಾನಿ; ಮತ್ತು ಓದುವವನ ತಿಳಿವಳಿಕೆಗೂ ಹಾನಿ.



ದರಿನಿನುನ್ನವಾಡು ತಪ್ಪಕದಕ್ಷುಂಡು, ಎಡಮುಪಡಿನವಾಡು ದುಡುಕುಗಡುಸು,
ಅನುಸರಿಂಚುವಾರಿ ಕಯ್ಯೆಡುಗಾರಮುಲ್, ವಿಶ್ವದಾಭಿರಾಮ ವಿನುರ ವೇಮ.

ಬಳಿಯಲಿಪ್ಪನನ್ನು ತಪ್ಪದ ದಕ್ಷನೆನ್ನು;
ದೂರವಿಹನ ದುಡುಕು ಹುಂಬನೆನ್ನು;
ಪಿಡಿದ ಕಾರ್ಯಮೊದಲು ಫಲಿಸುವ ಮಾರ್ಗ ಹಿಡಿ;
ವಿಶ್ವದಾಭಿರಾಮ ಕೇಳು ವೇಮ.

(ವಿಪತ್ತು ಒದಗಿದಾಗ) ತನ್ನ ಬಳಿಯಲ್ಲಿ ಇರುವವರನ್ನೇ ಸಮರ್ಥರೆಂದು ತಿಳಿದು ನಂಬಿ ನಡೆಯಬೇಕು. ಆದರೆ (ಆ ಸಮಯಕ್ಕೆ ತನಗೆ ಸರಿಯೆನಿಸಿದ ಬೇರಾವುದೋ ಕಾರ್ಯ ಮಗ್ನನಾಗಿ) ದೂರ ಉಳಿದವನು ಕೇವಲ ಉದ್ಘಟನೆನಿಸಬಹುದು. ಸಿಲುಕಿದ ವಿಪತ್ತಿನಿಂದ ಪಾರಾಗಲು ಏನು ಮಾಡಿದರೆ ಸಾಧ್ಯವೆಂಬುದನ್ನು ತಿಳಿದು ಆಚರಿಸಬೇಕು.

ಕಾರುಕಾರುಗುರುಲು ಕಾಗುಣಿಂತಮುಜೆಪ್ಪ ಶಾಸ್ತ್ರಪಾಠಮುಲನು ಜದಿವಿ ಚೆಪ್ಪ
ಮುಕ್ತಿದಾರಿಜೂಪು ಮೂಲಮೆ ಗುರುಡಗು, ವಿಶ್ವದಾಭಿರಾಮ ವಿನುರ ವೇಮ.

ಕಾಗುಣಿತ ಬೋಧಿಪ ಗುರುವು ಅಲ್ಲವಲ್ಲ.
ಶಾಸ್ತ್ರಪಾಠ ಓದಿಸುವನು ಅಲ್ಲ.
ಮುಕ್ತಿದಾರಿ ತೋರುತಿಪ್ಪನೆ ಗುರು ಮೂಲ
ವಿಶ್ವದಾಭಿರಾಮ ಕೇಳು ವೇಮ.

ನಮಗೆ ಕ. ಕಾ. ಕಿ, ಕೀ. ಲಿಪಿಯನ್ನಾಗಲೀ ಗುಣಾಕಾರ ಭಾಗಾಕಾರವನ್ನಾಗಲೀ ತಿಳಿಸುವವನು ನಿಜವಾದ ಗುರುವಲ್ಲ. ಅದೇ ರೀತಿ ವೇದ ಶಾಸ್ತ್ರಗಳ ಪಾಠ ಹೇಳುವವನೂ ಅಲ್ಲ. ಆದರೆ (ಜನನ-ಮರಣಗಳ ಭವಸಾಗರದಿಂದ) ಬಿಡುಗಡೆ ಹೊಂದುವ ಮಾರ್ಗವನ್ನು ಯಾವನು ತೋರಿಸುವನೋ ಅವನು ಮಾತ್ರ ನಿಜವಾದ ಗುರು ಎನಿಸುತ್ತಾನೆ. (ಸಚ್ಚಿದಾನಂದ ಸಿದ್ಧಿಯು ಶಾಲೆಯ ಓದು ಮತ್ತು ಶಾಸ್ತ್ರದ ಪಾಠಗಳನ್ನು ಮೀರಿದೆ ಮತ್ತು ಅವುಗಳಿಂದ ಬೇರೆಯಾಗಿದೆ.)

ದ್ವಾರಬಂಧಮುನಕು ದಲುಪುಲು ಗಡಿಯಲು, ವಲೆನೆನೋಟೆ ಕೊಪ್ಪು ಗಲನಿಯತುಲು
ಧರ್ಮವೆರಿಗಿಪಲುಕ ಧನ್ಯುಡೌ ಭುವಿಲೋನ, ವಿಶ್ವದಾಭಿರಾಮ ವಿನುರ ವೇಮ.

ದ್ವಾರ ಚೌಕಟ್ಟಿಗೆ ಕದದ ಅಳತೆ ಗಡಿಯು.
ಬಾಯಿಗೊಪ್ಪ ನುಡಿಯದಕತಿಮಿತಿಯು
ಧರ್ಮವರಿತು ತಿಳಿಸಿ, ಧನ್ಯನಾಗು ಜಗದಿ
ವಿಶ್ವದಾಭಿರಾಮ ಕೇಳು ವೇಮ.

ನಾವು ಆಡುವ ಮಾತು ನೀತಿ—ನಿಯಮಗಳ ಕಟ್ಟಿಗೊಳಪಟ್ಟಿರಬೇಕು. ಹಿತವಾಗಿರಬೇಕು. ಮಿತವಾಗಿರಬೇಕು. ಅದೆಂತೆಂದರೆ, ಬಾಗಿಲು ಕದಗಳು ಚೌಕಟ್ಟಿನ ಪರಿಮಿತಿಯಲ್ಲಿಯೇ ಕಾರ್ಯ ಮಾಡುತ್ತಿವೆಯಷ್ಟೇ. (ವಿಶ್ವಕ್ಕೆಲ್ಲ ಒಳಿತು ಕೋರುವ) ಧರ್ಮವನ್ನು ತಿಳಿದುಕೊಂಡು, ಅದನ್ನೇ ಇತರರಿಗೂ ತಿಳಿಸಿ ಧನ್ಯವಾಗಬೇಕು.

೯೦

ಛುರಿಕ ತೋಡ ಗೋಯ ಜೊಪ್ಪಡುನೇಕಾನಿ, ದಾನಿಪಿಡಿನಿಗೋಯ ದರಮೆ? ನೀಕು.
ದೆಲಿವಿಲೇನಿ ಮೇನಿ ಬಲಿಮೇಮಿ ಚೇಯುನಣ? ವಿಶ್ವದಾಭಿರಾಮ ವಿನುರ ವೇಮ.

ಅಲಗಿನಿಂದ ಕೊಯ್ವ ಕಾರ್ಯ ಅಪ್ಪುದೆನಲು
ಹಿಡಿಯ ಪಿಡಿದು ಕೊಯ್ಯಲಳನೆ ನಿನಗೆ?
ಬುದ್ಧಿಯಿಲ್ಲದನಕ ಬಲ ತನಗಿರಲೇನು?
ವಿಶ್ವದಾಭಿರಾಮ ಕೇಳು ವೇಮ

(ನಾವು ನಮ್ಮ ಕೆಲಸ–ಬೊಗಸೆಗಳನ್ನೆಲ್ಲ ದೈಹಿಕ ಶಕ್ತಿಬಲದಿಂದ ಮಾಡುತ್ತಿದ್ದರೂ ನಮ್ಮ ಬುದ್ಧಿ ನಿರ್ದೇಶಿಸಿದಂತೆ ಮಾತ್ರ ಮಾಡುತ್ತೇವೆ. ಬುದ್ಧಿ ಕುಡಗೋಲಿನ ಅಲಗಿನಂತೆ; ದೇಹ ಅದರ ಹಿಡಿಯಂತೆ. ಅದೆಂತೆಂದರೆ) ನಾವು ಕುಯ್ಯುವುದು, ಕುಡಗೋಲಿನ ಅಲಗಿನಿಂದಲ್ಲದೆ ಅದರ ಹಿಡಿಯಿಂದಲ್ಲ. ಅದು ಕಾರಣ, ಬುದ್ಧಿಯೇ ಇಲ್ಲದಿದ್ದರೆ, ಎಷ್ಟು ಬಲಿಸಂಪನ್ನನಾಗಿದ್ದರೇನು?

೯೨

ಸಕಲವಿದ್ಯಲಂದು ಸಂಪನ್ನುಲೈಯುನ್ನ, ನಟ್ಟವಾರು ಪರಿಚಯಮುನ ಜೌಕ,
ಪರಟಚೆಟ್ಟುವಂದು ಬರಿಕಿಂಪ ಮೆಚ್ಚರು, ವಿಶ್ವದಾಭಿರಾಮ ವಿನುರ ವೇಮ

ಸಕಲ ವಿದ್ಯಾಗಣ ಸಂಪದವಿರಲೇನು?
ಅಧಿಕ ಪರಿಚಯದಿಂ ಕೀಳೆನಿಪನು.
ಹಿತ್ತಲ ಗಿಡ ಮದ್ದು ಎನಿಪುದೆಂತು?
ವಿಶ್ವದಾಭಿರಾಮ ಕೇಳು ವೇಮ

(ತನ್ನ ಸುತ್ತುಮುತ್ತಿನ ಅಮೂಲ್ಯ ಸೊಬಗನ್ನು ದುರ್ಲಕ್ಷಿಸಿ ದೂರದ ಗುಡ್ಡ ನುಣ್ಣಗೆಂದು ಹಪಾಪಿಸುವದು ಮಾನವ ಸ್ವಭಾವ. ಅದೆಂತೆಂದರೆ,) ಎಲ್ಲ ವಿದ್ಯೆಗಳನ್ನು ಬಲ್ಲವನು ನಮ್ಮ ಹತ್ತಿರ ಸಂಬಂಧಿಯಾಗಿದ್ದರೆ, ಇಲ್ಲವೆ ವಿಶೇಷ ಪರಿಚಯಸ್ಥನಾಗಿದ್ದರೆ, ಅವನನ್ನು ದುರ್ಲಕ್ಷಿಸುವುದು ಸಮಾಜದ ಸಹಜ ರೀತಿ. ಹೇಗೆಂದರೆ ನಮ್ಮ ರೋಗಕ್ಕೆ ಮದ್ದು ಆಗುವ ತೊಪ್ಪಲುಗಿಡ ನಮ್ಮ ಹಿತ್ತಲಲ್ಲಿ ಇದ್ದರೂ ನಾವದನ್ನು ಕಡೆಗಣಿಸುತ್ತೇವಲ್ಲವೇ?

೯೩

ವಂಚಿನೀರುಬೋಯ ಮುಲ್ಲೆ ಪೂಯುನುಗಾನಿ, ಫಲಿತಮೊನರುಟಿಟ್ಲು? ಪನಿಜೊರವಿನಿ.
ವಂಟಜೇಯ ಕೆಟ್ಲು ವಂಟಕಮುಬ್ಬನು? ವಿಶ್ವದಾಭಿರಾಮ ವಿನುರ ವೇಮ.

ಶುದ್ಧ ನೀರು ಸುರಿಯೆ, ಮುಲ್ಲಿಗೆ ಹೂವಾಯ್ತು.
ಫಲವು ದೊರೆವುದೆಂತು ದುಡಿದ ಹೊರತು.
ತಿಂಡಿ ತಿನಿಸು ಬಹವೆ? ಅಡುಗೆ ಮಾಡದೆಂತು?
ವಿಶ್ವದಾಭಿರಾಮ ಕೇಳು ವೇಮ.

ಫಲ ದೊರೆಯಬೇಕಾದರೆ, ಮೊದಲು ದುಡಿಯಬೇಕು. ಒಳ್ಳೆಯ ನೀರು ಹಣಿಸಿ, ಬೆಳಿಸಿದರೆ ಮಾತ್ರ ಮುಲ್ಲಿಗೆ ಬಳ್ಳಿಯಲ್ಲಿ ಹೂವು ಮೂಡುತ್ತದೆ. ದುಡಿಯದೆ ಇದ್ದರೆ ಫಲವು ಹೇಗೆ ದೊರೆಯಬಹುದು? ಸಾಮಾನು–ಸಾಮಗ್ರಿ ತಂದು; ಬೇಯಿಸಿ ಅಡುಗೆ ಮಾಡದಿದ್ದರೆ ವಿಧ ವಿಧದ ತಿಂಡಿ-ತಿನಿಸುಗಳು ಎಲ್ಲಿ ಉಂಟಾಗುತ್ತವೆ?

೯೪

ಕಸವುನುದಿನವಾಡು ಘನಫಲಂಬುಲ ರುಚಿ ಕಾನಲೇಡುಕಾದೆ? ವಾನಿಯಟ್ಲು,
ಚಿನ್ನ ಚದುವುಲಕುನು ಮಿನ ಜ್ಞಾನಮುರಾದು. ವಿಶ್ವದಾಭಿರಾಮ ವಿನುರ ವೇಮ.

ಕಸವ ತಿಂಬವಂಗೆ ಘನಫಲದಲಿ ರುಚಿಯು
ಕಾಣಬಪ್ಪುದೇನು? ಇದುವೆ ಪರಿಯು,
ಕೀಳು ವಿದ್ಯೆಯವಗೆ ಮೇಲು ವಿದ್ಯೆ ಸೊನ್ಪೆ.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಕೋರಿಕೆಯಂತೆ ನಮಗೆ ಪ್ರಾಪ್ತಿಯಾಗಬಹುದು. ದಿನಾಲು ಕಸಕಡ್ಡಿಯಂಥ ಖಾದ್ಯಗಳನ್ನು ಸೇವಿಸುವವನಿಗೆ ಒಳ್ಳೇ ಉತ್ಕೃಷ್ಟವಾದ ಹಣ್ಣಿನ ರುಚಿಯು ಹೇಗಿದೆ ಎಂಬುದು ತಿಳಿಯಬಹುದೇ ? ಹಣ್ಣು ತಿನ್ನಲು ಕೋರಿ, ಅದನ್ನು ತಿಂದು ರುಚಿನೋಡದಿದ್ದರೆ ಹಣ್ಣಿನ ರುಚಿ ತಿಳಿಯದು. ಅದೇ ರೀತಿ, ಕ್ಷುಲ್ಲಕ ವಿಷಯಗಳಲ್ಲಿ ಅನುರಕ್ತನಾದವನಿಗೆ ಶ್ರೇಷ್ಠವಿದ್ಯೆಯ ಮಹತಿ ತಿಳಿಯದು. ಅಂದರೆ ಶೃಂಗಾರ ಭೋಗಾದಿ ವಿಷಯಾಸಕ್ತ ಪಂಡಿತನಿಗೆ, ದೈವಿಕ ಜ್ಞಾನದರ್ಶನವಾಗಲಾರದು.

೯೫

ತಲ್ಲಿಯುನ್ನ ಯಪುಡೆ ತನದುಗಾರಾಬಮು, ನಾವೆಂಪೋವದನ್ನು ನರಯುರೆವರು.
ಮಂಚಿಕಾಲಮುಪುಡೆ ಮರ್ಯಾದನಾರ್ಜಿಂಚು, ವಿಶ್ವದಾಭಿರಾಮ ವಿನುರ ವೇಮ.

ಮಾತೆ ಬದುಕಿರಲ್ಕೆ ಮಗನ ಪೋಷಿಸುವಳು.
ಸತ್ತು ಹೋಗಲವಳು ಪೊರೆವರಾರು?
ಸತ್ಕಾಲ ಒದಗಲು ಸತ್ಕೀರ್ತಿಯರ್ಜಿಸು.
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಕಾಲವಿರುವಾಗ ಒಳ್ಳೆಯ ಕಾರ್ಯ ಮಾಡಬೇಕು. ಸತ್ಕಾರ್ಯ ಮಾಡುವುದರಿಂದ ಸತ್ಕೀರ್ತಿ ಲಭಿಸುತ್ತದೆ.

ತಾಯಿ ಜೀವದಿಂದಿರುವಾಗ ಮಗನನ್ನು ಪೋಷಿಸುವಳು. ಅವಳೇ ಸತ್ತು ಹೋದಮೇಲೆ ಮಗನನ್ನು ಯಾರು ಪೋಷಿಸಬಹುದು ? ತಾಯಿಯ ಪೋಷಣೆಯಲ್ಲಿರುವಾಗ ತನ್ನ ಉಳಿದ ಸಮಯವನ್ನು ಒಳ್ಳೆಯ ಕೆಲಸ ಮಾಡಲು ಮೀಸಲಾಗಿರಿಸಬೇಕು.

೯೬

ಗಟ್ಟುವೀದನುನ್ನ ಗಾನ್ಪಿಂಚು ಸರ್ವಮು, ದೆಲಿಸಿತೇಟಬಡಿನ ದೆಲಿಯುನೆಲ್ಲ
ಲೋಕವಿಷಯಮುಲನು ಲೋನಿರಹಸ್ಯಮುಲ್, ವಿಶ್ವದಾಭಿರಾಮ ವಿನುರ ವೇಮ.

ದಡದ ಮೇಲಿರುವವನಿಡೀ ನೋಟವರಿವ,
ಅದೇ ಪರಿಯಲಿಂದ ತಿಳಿಯುತೆಲ್ಲ
ಲೋಕ ವಿಷಯಗಳೊಳ ಗೂಢವರಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ವಿಷಯಗಳನ್ನು ಪೂರ್ವಗ್ರಹದೂಷಿತರಾಗದೆ ತಿಳಿಯಬೇಕು. ಹಾಗೆ ತಿಳಿದುಕೊಳ್ಳಲು ನಿರ್ಮಲ ಬುದ್ಧಿ ಬೇಕು. ತಿಳಿಯುವವನೇ ಒಂದು ವಾದಕ್ಕೆ ಜೋತುಬಿದ್ದರೆ ಸತ್ಯ ಸಂಗತಿ ಹೊರಬೀಳುವುದೇ ಕಷ್ಟ. ನದಿಯ ದಂಡೆಯಮೇಲೆ ನಿಂತು ನದಿಯ ಹರವು, ದಡದ ಆಚೆ ಈಚೆಗಿನ ಭೂ ಸ್ವರೂಪ, ನದಿಯ ನೀರ–ಡೊಂಕು, ಪ್ರವಾಹದ ಶಾಂತತೆ, ರಭಸಗಳನ್ನು ಅರಿಯಬಹುದು. ಆದರೆ ನದಿಯ ನೀರಿನಲ್ಲಿ ಮುಳುಗಿ ನೋಡಿದರೆ ಹೆಚ್ಚಿನ ವಿಶಾಲನೋಟ ಕಾಣಿಸಿಗದು. ಅದೇ ರೀತಿ ಲೋಕದ ಜಂಜಾಟಕ್ಕೆ ಸಿಲುಕಿ ಪ್ರಪಂಚವ್ಯವಹಾರ ತಿಳಿಯುವವನಿಗಿಂತ, ಲೋಕಜಂಜಾಟಕ್ಕೆ ಸಿಲುಕದೆ ಲೋಕವ್ಯವಹಾರ ತಿಳಿಯುವವನಿಗೆ ಹೆಚ್ಚಿನ ವಿಷಯಗಳು ಗೊತ್ತಾಗುವವು. ಅವನು ವಿಶಾಲದೃಷ್ಟಿ ತಳೆಯಬಹುದು. ಲೋಕದ ಜನರಿಗೆ ಧರ್ಮ ತಿಳಿಸುವವರೂ ಸಹ, ಯಾವುದೊಂದು ಜಾತಿಯ ಕಟ್ಟುಪಾಡಿಗೆ ಗಂಟು ಬಿದ್ದು, ಮುಂದಾದರೆ ಅವರು ಕೇವಲ ತಿಣುಕುತ್ತಾರಷ್ಟೇ; ವಿಶಾಲವಾದ ವಿಶ್ವಾಭಿರಾಮವಾದ ಧರ್ಮ ತಿಳಿಸಲಾರರು.

೯೭

ಟಂಕಮುತುಕಕುನ್ನ ಬೊಂಕಂಬುಗಾರಾದು, ಸ್ವರ್ಣಭೂಷಣಂಬು ಜಗಮೆರುಂಗ.
ಭಟುಡು ವೆಂಟಲೇಕ ಪ್ರಭುವು ಶೋಭಿಂಚುನಾ? ವಿಶ್ವದಾಭಿರಾಮ ವಿನುರ ವೇಮ.

ಒಡವೆ ಜೋಡಿಸದಿರೆ ಒಡನೆ ಶೊಭೆ ಕೊಡದು,
ಹೊನ್ನು ಭೂಷಣೆಂದು ಜಗ ತಿಳಿದರು.
ಭಟರು ಬೆಂಬತ್ತದೆ ಪ್ರಭು ಶೊಭೆಯೆಂತು
ವಿಶ್ವದಾಭಿರಾಮ ಕೇಳು ವೇಮ.

ಬಂಗಾರ ಭೂಷಣಕರವೆಂದು ಲೋಕದ ಜನರಿಗೆಲ್ಲ ಗೊತ್ತು. ಅಂದ ಮಾತ್ರಕ್ಕೆ ಬಂಗಾರದ ಘಟ್ಟಿಯನ್ನೇ ಯಾರೂ ತೊಡಲು ಬಯಸರು. ಆದರೆ, ಬಂಗಾರದ ಘಟ್ಟಿಯಿಂದ ಬೇರೆ ಬೇರೆ ಒಡವೆಗಳ ಬಿಡಿಭಾಗಗಳನ್ನು ಜೋಡಿಸಿ ಧರಿಸಿದರೆ ಮಾತ್ರ ಬಂಗಾರದ ಒಡವೆ ಧರಿಸಿದವನ ಶೋಭೆಯನ್ನು ಹೆಚ್ಚಿಸುವುದು. ಅದೇ ರೀತಿ ರಾಜನು ಮನ್ನಣೆಗೆ ಯೋಗ್ಯನಾದರೂ, ಆ ಅಧಿಕಾರ ಪದಕ್ಕೆ ತಕ್ಕ ರೀತಿಯಲ್ಲಿ ಭಟರು ಇತರರ ಬೆಂಗಾವಲಾಗಿ ಇಲ್ಲದಿದ್ದರೆ, ಪ್ರಭುತ್ವ ಶೋಭೆಯೀಯದು.



೯೮

ಮೇಕಕುತುಕಬಟ್ಟ ಮೆಡಜನ್ನುಗುಡುವಗಾ, ನಾಕಲೇಲಮಾನು? ನಾಸಗಾಕ,
ಲೋಭಿವಾನಿನಡುಗ ಲಾಭಂಬುಗಲ್ಲುನೇ? ವಿಶ್ವದಾಭಿರಾಮ ವಿನುರ ವೇಮ

ಮೇಕೆ ಕತ್ತು ಹಿಡಿದು ಎದೆಗೆ ಅವಿತುಕೊಂಡು
ಕೊರಳ ಮೊಲೆ ಹೀರಲು ಹಸಿವಳಿವುದೆ?
ಜಿಪುಣ ನರನ ಕೇಳಲು ಲಾಭವೇನುಂಟು?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸುಖವನ್ನು ಅನ್ಯರೊಡನೆ ಹಂಚಿಕೊಳ್ಳುವ ಹೃದಯ ವೈಶಾಲ್ಯತೆಯೇ ದಾನ ಗುಣ. ಇಂಥ ಸಹೃದಯಿ ಮಾತ್ರ ಬಡವರಿಗೆ ಬೇಡಿದಷ್ಟು ನೀಡುತ್ತಾನೆ. ಆದರೆ ಇಂಥ ಸಹೃದಯವೇ ಇಲ್ಲದ ಜಿಪುಣನ ಬಳಿಗೆ ಹೋಗಿ ಕೇಳಿದರೆ ಏನು ದೊರೆಯಬಹುದು? ಅದೆಲ್ಲ ಕೇವಲ ನಿರರ್ಥಕವಷ್ಟೇ. ಹೇಗೆಂದರೆ ಹಾಲು ತುಂಬಿದ ಮೊಲೆ ಹೀರಿದರೆ, ಹಾಲು ದೊರೆಯಬಹುದೇ ಹೊರತು, ಆಡಿನ ಕೊರಳ ಮೊಲೆಯನ್ನು ಎಷ್ಟು ಚೀಪಿದರೇನು? ಹಾಲು ಸಿಗಬಲ್ಲದೇ?

ಮುನುದೆಲಿಪಿನವಾರು ಮುದನಷ್ಟಮ್ಮೆರಿಲ, ತಿರಿಗಿ ಚೆಪ್ಪಿತನುಚ ದಿಟ್ಟನಲದು.
ತಲಿಯ ಜೆಪ್ಪಿನಮರಿ ತೆಲಿಸಿಕೋಲೇರಯಾ, ವಿಶ್ವದಾಭಿರಾಮ ವಿನುರ ವೇಮ

ಮುನ್ನ ನುಡಿದ ಸತ್ಯ ಇನ್ನು ನಶಿಸಿತೆಂದು
ಇನ್ನೊನ್ಮೆಯೇಕೆಂದು ಜರಿಯಬೇಡಿ.
ಮನುಜ ಬುದ್ಧಿ; ಪುನರಪಿ ಪೇಳಲೂ ಮರೆವ,
ವಿಶ್ವದಾಭಿರಾಮ ಕೇಳು ವೇಮ.

ಧರ್ಮವು ಸನಾತನವಾದುದು. ಅನಾದಿ ಕಾಲದಿಂದ ಒಂದೇ ಆಗಿರುವುದು. ಆದರೆ ಆಯಾ ಕಾಲಕ್ಕೆ ತಕ್ಕ ಧರ್ಮ–ರೀತಿಯನ್ನು ತಿಳಿಸಿಕೊಡುವ ಭಾಷೆಯ ಶೈಲಿ, ನೀಡುವ ದೃಷ್ಟಾಂತ ಬದಲಾಗಬಹುದೇ ಹೊರತು, ಧರ್ಮ-ನೀತಿ ತತ್ವಗಳೇ ಬದಲಾಗಲಾರವು.

ಕಾರಣ ಮೊದಲು ಹೇಳಿದ ಸತ್ಯವಚನವನ್ನೇ ಮತ್ತೆ ಮತ್ತೆ ಹೇಳುವುದೇಕೆ? ಎಂದು ಸನಾತನ ಧರ್ಮದ ತಿರುಳನ್ನೇ ವಿವರಿಸಿದಾಗ, ಬೇಸರ ಪಟ್ಟು ನಿಂದಿಸಬೇಡಿರಿ. ಏಕೆಂದರೆ ಮರೆವು ಮಾನವನ ಸಹಜ ಸ್ವಭಾವ. ಎಷ್ಟು ಸಲ ತಿರು–ತಿರುಗಿ ಹೇಳಿದರೂ ಮತ್ತೆ ಮತ್ತೆ ಮರೆಯುತ್ತಾನೆ. ಇದರಿಂದ ಹೇಳಿಕೆಯಲ್ಲಿ ಪುನರುಕ್ತಿಯಾದರೆ, ಅದು ಕ್ಷಮ್ಯವೆಂದೂ ಅವಶ್ಯವೆಂದೂ ಗ್ರಹಿಸಬೇಕು.

೧೦೦

ನೀತಿದೆಲಿಯಜೆಪ್ಪಿ ನಿಜಮುಗ ವೇಮನ, ಪಾತಕಮುಲನೆಲ್ಲ ಬಾರಬೆಟ್ಟ
ಲೋತುತತ್ತ್ವ ಮರಸಿ ಲೋಕುಲಕುನು ಜೆಪ್ಪೆ. ವಿಶ್ವದಾಭಿರಾಮ ವಿನುರ ವೇಮ

ನೀತಿ ತಿಳಿಸಲೇನು ನಿಜವಾಗಿ ವೇಮನ
ಪಾಪವೆಲ್ಲ ಹಿಂಗಿಹೊಗುವಂತೆ
ಆಳ ತತ್ತ್ವವರಿಸಿ ಲೋಕಕೆಲ್ಲ ತಿಳಿಸು.
ವಿಶ್ವದಾಭಿರಾಮ ಕೇಳು ವೇಮ.

ನಿಜವಾಗಿಯೂ ಒಳ್ಳೆಯ ನೀತಿಯನ್ನೇ ವೇಮನ ತಿಳಿಸಿರುವನಷ್ಟೇ. ಜಗತ್ತಿನಲ್ಲಿ ನೀತಿಯ ತಿಳಿವಳಿಕೆ ಇಲ್ಲದ್ದರಿಂದ ನಡೆಯಬಹುದಾದ ಪಾಪಕಾರ್ಯ ವೇಮನ ನೀತಿ-ನುಡಿಗಳನ್ನು ತಿಳಿದುಕೊಂಡರೆ, ನಿಂತು ಹೋಗುವವು. ಕಾರಣ ವೇಮನ ನೀತಿ–ನುಡಿಗಳಲ್ಲಿ ಹುದುಗಿದ ಅಗಾಧ ತತ್ವವನ್ನು ಹುಡುಕಿ ತಿಳಿದುಕೊಂಡು ಲೋಕದ ಜನರಲ್ಲೆಲ್ಲ ಪ್ರಸಾರ ಮಾಡು.



ಸಾಂಸ್ಕೃತಿಕ ವಿಭಾಗ

೧೦೧

ಕಲ್ಲಗುರುಡುಕಟ್ಟು ನೆಲ್ಲಕರ್ಮಂಬುಲ, ಮಧ್ಯಗುರುಡುಕಟ್ಟು ಮಂತ್ರಚಯಮು,
ಉತ್ತಮುಂಡುಕಟ್ಟು ಯೋಗ ಸಾಮ್ರಾಜ್ಯಂಬು, ವಿಶ್ವದಾಭಿರಾಮ ವಿನುರ ವೇಮ.

ಕಳ್ಳ ಗುರು ಕಟ್ಟುವನೆಲ್ಲ ಕರ್ಮಗಳನು,
ಮಧ್ಯಗುರು ಕಟ್ಟುವ ಮಂತ್ರ-ತಂತ್ರ,
ಉತ್ತಮ ಕಟ್ಟುವನು ಯೋಗ ಸಾಮ್ರಾಜ್ಯವ.
ವಿಶ್ವದಾಭಿರಾಮ ಕೇಳು ವೇಮ

ನಮಗೆ ಉಂಟಾಗುವ ಅನೇಕ ಆಕಸ್ಮಿಕ ತೊಡಕು ತೊಂದರೆಗಳು ನಮ್ಮ ಪೂರ್ವ ಜನ್ಮದ ಕರ್ಮ ಫಲವೆಂದು ಹೇಳಿ ತಂದೆ ಸತ್ತರೆ ಪಿತೃಶಾಂತಿ, ಕಾಗೆ ಮನೆ ಹೊಕ್ಕರೆ ಗೃಹಶಾಂತಿ, ರೋಗ ಬಂದರೆ ಮಾರಿಯಮ್ಮನಿಗೆ ಕುರಿಯ ಶಾಂತಿ, ಮನಸ್ಸಿನ ಇಷ್ಟ ನೆರವೇರಬೇಕಾದರೆ ಸತ್ಯನಾರಾಯಣನ ಪೂಜಾವ್ರತ, ಷೋಡಶ ಸೋಮವಾರ ಗೌರೀಪೂಜೆ ಎಂಬಿತ್ಯಾದಿ ವೃತಕರ್ಮ, ಮಾಡಬೇಕೆಂದು ಬೋಧಿಸುವ ಗುರು ಕಳ್ಳಗುರುವೇ ಸರಿ. ಇನ್ನು ನಮಗೆ ಬೇನೆ-ಬೇಸರ ಬಂದಾಗ, ಭೂತ ಬಡಿದಾಗ, ಹಾವು ಕಡಿದಾಗ ಮಂತ್ರ ಹೇಳಿ ಗುಣಪಡಿಸುವವನನೂ ಮತ್ತು ದೇವ ಸ್ತುತಿಯ ಗಾಯತ್ರಿ, ಪಂಚಾಕ್ಷರೀ, ಅಷ್ಟಾಕ್ಷರೀ ಮಂತ್ರ-ಜಪಾದಿಗಳನ್ನು ಬೋಧಿಸುವವನು ಕೇವಲ ಮಧ್ಯಮ ಗುರುವೆನಿಸಬಹುದು. ಆದರೆ ನಿಜವಾಗಿಯೂ ಆತ್ಮಜ್ಞಾನವಾಗಬೇಕಾದರೆ, ಭಗವಂತನ ಸಾಯುಜ್ಯ ಪಡೆಯಬೇಕಾದರೆ, ಭಕ್ತಿ-ಜ್ಞಾನ-ಕರ್ಮಾದಿ ಯೋಗಗಳಿಂದ ಮಾತ್ರ ಸಾಧ್ಯ. ಅದು ಕಾರಣ ನಿಜವಾದ ಗುರುವು ಯೋಗ ಸಾಮ್ರಾಜ್ಯವನ್ನೇ ಸ್ಥಾಪಿಸಿ ಸಾಧಕರಿಗೆ ಮಾರ್ಗದರ್ಶನ ಮಾಡುವನು.

೧೦೨

ತಾ ವಸಿಂಚುಚೋಟ ದಗ ನಲ್ಜಡಾಯೆನಾ, ಸೌಖ್ಯಮುಕಲ ಭೂಮಿ ಜನಗವಲಯು
ಕೊಲಕು ಲಿಂಕೆನೇನಿ ಗೊಂಗಲಂದುಂಡನಾ? ವಿಶ್ವದಾಭಿರಾಮ ವಿನುರ ವೇಮ.

ತಾನು ವಾಸಿಸುತಿಹ ತಾಣ ತೊಂದರೆಯಿರೆ,
ಸೌಖ್ಯವಿಪ್ಪ ಎಡೆಗೆ ವಾಸಹೋಗು
ಕೊಳವು ಬತ್ತಲಾಗ ಅಲ್ಲಿ ಬಕವುಳಿವವೇ?
ವಿಶ್ವದಾಭಿರಾಮ ಕೇಳು ವೇಮ


ಸರೋವರದಲ್ಲಿ ನೀರು ಬತ್ತಿ ಹೋಗಲು ಬಕ ಪಕ್ಷಿಗಳಿಲ್ಲ ಅಲ್ಲಿಂದ ಕಾಲ್ದೆಗೆಯುತ್ತವೆ. ಅದೇ ರೀತಿ ತನಗೆ ತೊಡಕು–ತೊಂದರೆ ಉಂಟಾದ ಸ್ಥಳವನ್ನು ಬಿಟ್ಟು, ಸೌಖ್ಯಕರವಾದ ಬೇರೊಂದು ಸ್ಥಳಕ್ಕೆ ಹೋಗಿ ವಾಸಮಾಡುವುದು ಕ್ಷೇಮ.

೧೦೩

ಕಾಕಿಗೂಟಲೋನ ಗೊಕಿಲಮುನಿನಟ್ಲು, ಭ್ರಮರವುಚು ಬುರುವು ಬ್ರತಿಕಿನಟ್ಲು
ಗುರುಗೊಲ್ಚುವೆನುಕ ಗುರುವು ತಾನೌನಯಾ, ವಿಶ್ವದಾಭಿರಾಮು ವಿನುರ ವೇಮು.

ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ,
ಭ್ರಮರವಾಗುತಿಪ್ಪ ಕೀಟ ಬಾಳು
ಗುರುವ ಪೊಜೆಗೈದ ಬಳಿಕ ತಾನೆ ಗುರುವು.
ವಿಶ್ವದಾಭಿರಾಮು ಕೇಳು ವೇಮು

ಕೋಗಿಲೆಯ ತತ್ತಿ ಕಾಗೆಯ ಕಾವಿನಿಂದ ಒಡೆದು ಮರಿಯಾಗಿ ಕಾಗೆಯ ಪೋಷಣೆಯಿಂದ ಬೆಳೆದು ಮುಂದೆ ತಾನು ಕೋಗಿಲೆಯೆಂದರಿಯುವಂತೆ, ಅದೇ ರೀತಿ, ರೇಶ್ಮೆಯ ಕೀಟವು ತನ್ನ ಸುತ್ತು ಎಳೆಸುತ್ತಿ ಒಳಗೆ ತಾನೇ ಪಾತರಗಿತ್ತಿಯಾಗಿ ಹೊರಬರುವಂತೆ, ಗುರುವಿನ ಬಳಿಯಿರುವ ಶಿಷ್ಯನು ವಿಷಯಗಳನ್ನೆಲ್ಲ ಗ್ರಹಿಸಿ, ಅನುಭವಿಸಿ ತಾನೂ ಗುರುವಾಗಿ ಮಾರ್ಪಡುತ್ತಾನೆ.



೧೦೪

ಅಧಿಕುಡ್ಮಿನರಾಜೂ ಕಲ್ಪುನಿಜೇಪಟ್ಟ, ವಾನಿಮಾಟಚೆಲ್ಲುಬ ವಸುಧಲೋನ,
ಗಣಕುಲೊಪ್ಪಿಯುನ್ನ ಗವ್ವಲುಚೆಲ್ಲವಾ? ವಿಶ್ವದಾಭಿರಾಮು ವಿನುರ ವೇಮು.

ಅಧಿಕ ರಾಜನೊಬ್ಬ ಅಲ್ಪನ ಕೈಹಿಡಿಯೆ,
ಅವನ ನುಡಿಗೆ ಅವನಿ ಸೈಗುಡುವುದು.
ಹರದನೊಪ್ಪಿದೊಡೆ ಕವಡೆ ನಾಣ್ಯವಹುದು.
ವಿಶ್ವದಾಭಿರಾಮು ಕೇಳು ವೇಮು

ಉಚ್ಚ ಪದವಿಯಲ್ಲಿರುವವರು ಚಿಲ್ಲರೆ ಜನರೊಡನೆ ಸಲುಗೆಯಿಂದ ನಡೆದುಕೊಳ್ಳಬಾರದು. ಏಕೆಂದರೆ, ದೊಡ್ಡ ಸಾಹಚರ್ಯ ಬಲದಿಂದ ಅಲ್ಪನಾದ ವ್ಯಕ್ತಿಯ ಮಾತಿಗೂ ಮನ್ನಣೆ ದೊರೆತು, ಪ್ರಜಾಕೋಟಿ ಅವನ ಪ್ರಭಾವಕ್ಕೆ ಒಳಗಾಗುವ ಸಂಭವವುಂಟು. ಅದೆಂತೆಂದರೆ, ವ್ಯಾಪಾರಿಯು ವಿನಿಮಯಮೂಲ್ಯವೆಂದು ಕವಡೆಯನ್ನೇ ಒಪ್ಪಿಕೊಂಡರೆ ಕವಡೆಯೇ ನಾಣ್ಯವಾಗುವುದು. ಪ್ರಜರೂ ರಾಜನೊಡನೆ ವಿಚಾರ ವಿನಿಮಯ ನಡೆಸಲಿಕ್ಕೆ ಅಲ್ಪನನ್ನೇ ಬಳಸಿಕೊಳ್ಳತೊಡಗಿದರೆ ಅವನೇ ಏರಿ ಕುಳಿತುಬಿಡುತ್ತಾರೆ.

೧೦೫

ಉತ್ತಮುನಿಕಡುಪುನ ನೊಗುಜನ್ಮಿಂಚಿನ, ವಾಡುಚೆರುಚು ವಾನಿ ವಂಶಮೆಲ್ಲ,
ಚೆರಕುವೆನ್ನುಪುಟ್ಟ ಚೆರವದಾತೀವೆಲ್ಲ? ವಿಶ್ವದಾಭಿರಾಮು ವಿನುರ ವೇಮು.

ಉತ್ತಮನುದರದಲಿ ಕೆಟ್ಟ ಮಗ ಜನಿಸಿದರೆ,
ಕೆಟ್ಟು ಹೋಹುದಾಗ ಒಟ್ಟು ವಂಶ.
ಹುಟ್ಟಿ ಕೆಡಿಸುತಿಹುದು, ಕಬ್ಬು–ಸಿಹಿಯು ತೆನೆಯು
ವಿಶ್ವದ ಭಿರಾಮು ಕೇಳು ವೇಮು.

ಕಬ್ಬಿಗೆ ಸೂಲಂಗಿ ಹುಟ್ಟಿದ ಮೇಲೆ, ಅದರ ಸಿಹಿಯು ಕಡಿಮೆಯಾಗುತ್ತದೆ. ಸಿಹಿಯ ದೃಷ್ಟಿಯಿಂದ ನೋಡಿದರೆ, ಸೂಲಂಗಿ ಒಡೆಯುವದರಿಂದ ಕಬ್ಬು ಕೆಟ್ಟುಹೋದಂತೆ. ಅದೇ ರೀತಿ, ಉತ್ತಮ ಮನುಷ್ಯನ ಹೊಟ್ಟೆಯಲ್ಲಿ ಕೆಟ್ಟ ಮಗನು ಹುಟ್ಟಿದರೆ ಅವನ ವಂಶದ ಕೀರ್ತಿಯೇ ಕೆಟ್ಟು ಹೋಗುವುದು. ಕಾರಣ ಕೀಳು ನಡೆಯು ವಂಶದ ಕೀರ್ತಿಗೆ ಮಾರಕವಾದುದರಿಂದ ಹಾಗಾಗದಂತೆ ಎಚ್ಚರಿಕೆ ತುಂಬಾ ಅವಶ್ಯ.



೧೦೬

ಎಲುಗುತೋಲುದೆಚ್ಚಿ ಯೆಂದಾಕನು ತಿಕಿನ, ನಲವೆಕಾಕಯೇಲ ತೆಲುಪುಗಲ್ಗು?
ಕೊಯ್ಮಬೊಮ್ಮದೆಚ್ಚಿ ಕೊಟ್ಟನಗುಣೆಯೌನೆ? ವಿಶ್ವದಾಭಿರಾಮು ವಿನುರ ವೇಮು.

ಕರಡಿ ಚರ್ಮ ತಂದು ಎಷ್ಟು ತೊಳೆದರೇನು?
ಇರುವ ಕಪ್ಪು ಹಿಂಗಿ ಬಿಳಿದು ಅಹುದೆ?
ಕೊರಡು ಮೂರ್ತಿ ಹೊಡೆಯೆ, ಗುಣವ ಹೊಂದಬಹುದೆ?
ವಿಶ್ವದಾಭಿರಾಮು ಕೇಳು ವೇಮು.

ಪರಿವರ್ತನ ಹೊಂದಲು ಸಾಧ್ಯವಿದ್ದುದು, ಪರಿವರ್ತನ ಹೊಂದುತ್ತದೆ. ಯಾವುದು ಬದಲಾಗದೋ ಅದನ್ನು ಬದಲು ಮಾಡುವುದು ಮೂರ್ಖತನ. ನಿರರ್ಥಕ. ಕರಡಿಯ ಚರ್ಮ ಕಪ್ಪು. ಅದನ್ನು ತಂದು ಎಷ್ಟು ತೊಳೆದರೇನು? ಕಪ್ಪು ತೊಲಗಿ ಬಿಳುಪಾಗಬಹುದೇ? ಅದೇ ರೀತಿ ಕಟ್ಟಿಗೆ ಮೂರ್ತಿಗೆ ಎಷ್ಟು ಸಲ ಉಳಿ ಕೊಡತಿಗಳಿಂದ ಹಣಿದರೇನು? ಅದರಲ್ಲಿ ದೈವ–ಗುಣ ಬರಬಹುದೇ? ಜಾಣ ಶಿಲ್ಪಿಗಳು, ಹೆಚ್ಚು ಹೆಚ್ಚು ಕೊರೆದು, ಕೊಡತಿಯೇಟು ಹಾಕಿ ಮೂರ್ತಿಯ ರಕ್ಷಣ ಹೆಚ್ಚಿಸುತ್ತೇವೆ. ಜೀವದುಂಬಿಸುತ್ತೇವೆ. ಎಂಬ ಭಾವಾವೇಶದಿಂದ ಕಾರ್ಯಮಗ್ನರಾಗುತ್ತಾರೆ. ಈ ಭಾವ ಕಲಾಪ್ರೇಮವಾಗಬಹುದಲ್ಲದೆ, ದೈವಿಕಪಾರವಶತೆಯೆನಿಸದು.

೧೦೭

ಕುಕ್ಕತೋಕದೆಚ್ಚಿ ಗೊಟ್ಟಂಬುಜೇರ್ಚಿನ, ಗ್ರೋರೀತಿನುಂಡು ಗೊಂತ ತಡವು.
ಎಂತಜೆಪ್ಪಜೆಡುಗು ಪುತುಂಬುಮಾನುನಾ? ವಿಶ್ವದಾಭಿರಾಮ ವಿನುರ ವೇಮ.

ಗೊಟ್ಟದಲ್ಲಿ ಇರಿಸೆ ಆಗ ನಾಯಿಬಾಲ
ನೆಟ್ಟಗಾಗಿಪ್ಪುದು ಕೊಂಚ ಕಾಲ.
ಕೆಟ್ಟ ನರನಿಗೆಷ್ಟು ಹೇಳೆ, ಕೆಡುಕು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

ನಾಯಿಯ ಬಾಲಕ್ಕೂ ಕೆಟ್ಟ ಮನುಷ್ಯನಿಗೂ ತುಂಬಾ ಹೋಲಿಕೆಯುಂಟು. ನಾಯಿಯ ಬಾಲ ಡೊಂಕು. ಕೆಟ್ಟ ಮನುಷ್ಯನ ಸ್ವಭಾವವೂ ಡೊಂಕು. ಅಂತೆಯೇ ವ್ಯತ್ಯಾಸವೂ ಇದೆ. ಬಿದಿರುಗೊಳವೆಯಲ್ಲಿ ಸೇರಿಸಿದ ಕಾಲದಲ್ಲಿಯಾದರೂ, ನಾಯಿಯ ಬಾಲವು ನೇರವಾಗುತ್ತದೆ. ಆದರೆ ಕೆಟ್ಟ ಮನುಷ್ಯನಿಗೆ ಎಷ್ಟೋ ಪರಿಯಾಗಿ ಸರಿಯಾದ ಮಾರ್ಗ ತಿಳಿಸಿ ಹೇಳಿದರೂ, ಅವನು ತನ್ನ ಪೂರ್ವದ ಚಾಳಿಯನ್ನು ಬಿಡಲಾರನು.

೧೦೮

ಮ್ರುಚ್ಚುಯಾತ್ರಪೋಯಿ ಮುಲ್ಲೆವಿಪ್ಪುನುಗಾನಿ,ಮ್ರೊಕ್ಕಪ್ರೊದ್ದುಲೇದು ಪೊನಸಿಯೆಪುಡು
ಕುಕ್ಕಯಿಲ್ಲುಸೊಚ್ಚಿ ಕುಂಡಲುವೆದಕದಾ? ವಿಶ್ವದಾಭಿರಾಮ ವಿನುರ ವೇಮ.

ಕಳ್ಳಯಾತ್ರೆಗೈದು ಗಂಟು ಬಿಚ್ಚಿ ನೋಳ್ಪ-
ಕೈಯ ಮುಗಿಯೆ, ಮನದಿ ಕಾಲ ಸಿಗದು.
ಸೊಣಗ ಮನೆಯ ಹೊಕ್ಕು ಮಡಿಕೆ ಹುಡುಕುವಂತೆ
ವಿಶ್ವದಾಭಿರಾಮ ಕೇಳು ವೇಮ.

ತೀರ್ಥ, ಕ್ಷೇತ್ರ, ಯಾತ್ರೆ ಮಾಡುವವರಲ್ಲಿ ಮೂಢ ಭಕ್ತಿಯವರೂ ಉಂಟು. ಮೂಢ ಭಕ್ತಿಯವರು ಗಂಟು–ಗದಡಿಯನ್ನು ಮೂಟೆ ಕಟ್ಟಿ ಒಂದೆಡೆಗೆ ಇರಿಸಿ, ಸ್ನಾನ ಸಂಧ್ಯೆ, ಪೂಜೆ ಮೂರ್ತಿ ದರ್ಶನಗಳಲ್ಲಿ ತನ್ಮಯರಾಗುತ್ತಾರೆ. ಇತ್ತ ಕಳ್ಳನಿಗಾದರೋ ಇದೇ ಸುಸಮಯ. ಲಗುಬಗೆಯಿಂದ ಗಂಟು–ಗದಡಿ ಬಿಚ್ಚಿ, ಬೆಲೆಯ ಸಾಮಾನುಗಳನ್ನು ಹುಡುಕುತ್ತಾನೆ. ಮೂರ್ತಿ ದರ್ಶನಕ್ಕೆ ನಿರ್ದಿಷ್ಟವಾವ ವೇಳೆಯಿಲ್ಲ. ಇಂಥ ಕೇಳು ಕೆಲಸದಲ್ಲಿಯೇ ವ್ಯಯವಾಗಿ ಕೈಮುಗಿಯಲೂ ಸಹ ಅವನಿಗೆ ಸಮಯ ಸಿಗದು. ಹೇಗೆಂದರೆ ನಾಯಿಯು ಯಾರದಾದರೂ ಮನೆಯೊಳಗೆ ಹೊಕ್ಕರೆ ಅದು ಇನ್ನಿತರ ಅಮೂಲ್ಯ ವಸ್ತುಗಳನ್ನಾಶಿಸದೆ, ತನಗೆ ಇಷ್ಟವಿರುವ ನುಚ್ಚು–ಅಂಬಲಿಯ ಗಡಿಗೆಯನ್ನು ಹುಡುಕುತ್ತದೆ.

೧೦೯

ಗುಣಯುತುನಕುಮೇಲು ಗೋರಂತಜೇಸಿನ, ಗೊಂಡಯೆನು ವಾನಿಗುಣಮುಚೇತ,
ಕೊಂಡಕೊದ್ದಿಮೇಲು ಗುಣಹೀನುಡೆರುಗುನಾ? ವಿಶ್ವದಾಭಿರಾಮ ವಿನುರ ವೇಮ.

ಸುಗುಣವಂತಗಿನಿತು ಒಳಿತು ಉಗುರಿನಷ್ಟು,
ಬಗೆಯೆ ಬೆಟ್ಟದಷ್ಟು ಅವನ ಗುಣದಿ
ನಗದಳತೆಯ ಮಾಡೆ, ಗುಣಹೀನನರಿವನೆ?
ವಿಶ್ವದಾಭಿರಾಮ ಕೇಳು ವೇಮ

ಸತ್ಪಾತ್ರದಲ್ಲಿ ಸಹಾಯ ನೀಡಬೇಕು. ಯಾವನಲ್ಲಿ ಒಳ್ಳೆಯ ಗುಣಗಳು ಮನೆ ಮಾಡಿಕೊಂಡಿವೆಯೋ ಅವನಿಗೆ ಒಳಿತು ಬಗೆದರೆ, ಅವನು ಕೂಡಲೇ ಗ್ರಹಿಸಿ ಅದರಿಂದ ಬಹು ಪ್ರಯೋಜನ ಪಡೆಯುವನು. ಇದರಿಂದ ಸದ್ಗುಣ ಸಂಪನ್ನನಿಗೆ ಉಗುರಿನಷ್ಟು ಒಳಿತು ಮಾಡಿದರೂ, ಪ್ರಯೋಜನ ಬೆಟ್ಟದಷ್ಟಾಗುವುದು. ಆದರೆ, ಗುಣಹೀನನಾದವನಿಗೆ ಬೆಟ್ಟದಷ್ಟು ಒಳಿತುಕೋರಿದರೂ ಅವನಿಗೆ ಅದರ ಪರಿವೆಯೇ ಇರದು.

೧೧೦

ಮಾಟನಿಲುಪಲೇನಿ ಮನುಜುಂಡು ಚಂಡಾಲು, ಡಾಜ್ಞಲೇನಿರಾಜು ನಾಡುಮುಂಡ,
ಮಹಿಮುಲೇನಿವೇಲ್ಪು ಮುಂಟಜೇಸಿನಪುಲಿ, ವಿಶ್ವದಾಭಿರಾಮ ವಿನುರ ವೇಮ.

ಮಾತನುಳಿಸಿಕೊಳದ ಮನುಜನೆ ಚಂಡಾಲ
ಆಜ್ಞೆನಡೆಸದಂಥ ರಾಜ ಮುಂಡೆ.
ಮಹಿಮೆಯಿರದ ದೇವಿ ಮಣ್ಣಿನ ಹುಲಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಚಂಡಾಲನೆಂದರೆ, ಹಿಂಸಕ, ಪೀಡಕ, ಅಧರ್ಮಿ. ನುಡಿದಂತೆ ನಡೆಯುವುದು, ಭಾವಿಸಿದಂತೆ ನುಡಿಯುವುದೇ ಧರ್ಮ. ಕಾರಣ, ಯಾವನು ತಾನು ಆಡಿದ ಮಾತಿನಂತೆ ನಡೆಯುವದಿಲ್ಲವೋ, ಅವನೇ ಅಧರ್ಮಿ; ಚಂಡಾಲ.

ಗಂಡ ಸತ್ತ ಮುಂಡೆಗೆ (೧೫ನೇ ಶತಮಾನದಲ್ಲಿ) ಆಸ್ತಿ–ಪಾಸ್ತಿಯ ಮೇಲೆ ಅಧಿಕಾರ ವಿರಲಿಲ್ಲ. ಅವಳ ಮಾತನ್ನು ಮನೆಯಲ್ಲಿ ಯಾರೂ ಲಕ್ಷಿಸುತ್ತಿರಲಿಲ್ಲ. ತನ್ನ ಆಜ್ಞೆಯನ್ನು ಜಲಾಯಿಸಲು ಸಮರ್ಥನಲ್ಲದ ರಾಜನೂ ಸಹ ಈ ದೃಷ್ಟಿಯಿಂದ ಮುಂಡೆಯಂತೆಯೇ ಸರಿ.

ಶಕ್ತಿಯ ವಿವಿಧ ರೂಪಗಳೆಂದು ಕಾಳಿ, ದುರ್ಗಾ, ಮಾರಿಯಮ್ಮ, ಎಲ್ಲಮ್ಮ ಇತ್ಯಾದಿ ಗ್ರಾಮದೇವತೆಗಳ ಪೂಜೆ ನಡೆಯುತ್ತದೆ. ಈ ಶಕ್ತಿ ದೇವತೆಗಳ ಪೂಜಾರಿಗಳಾಗಲೀ ಇಲ್ಲವೇ ಬೇರೊಬ್ಬ ಉಪಾಸಕರಿರಲಿ ಯೋಗಿನಿ ತಂತ್ರ ಇತ್ಯಾದಿಗಳಲ್ಲಿ ನಿಪುಣರಿರುವರು. ಅದರಿಂದ ಅವರು ಹಲವಾರು ಸಣ್ಣದೊಡ್ಡ ಸವಾಡಪ್ರಾಯ ಘಟನೆಗಳನ್ನು ನಡೆಸಿ, ಜನರನ್ನು ಆಕರ್ಷಿಸುತ್ತಾರೆ. ಇಂಥ ತಾಂತ್ರಿಕನು ಇಲ್ಲದಿರುವ ದೇವತೆಗೆ ಮಹಿಮೆಯು ಇಲ್ಲ. ಆ ಉಗ್ರ ದೇವತೆ ಮೂರ್ತಿ, ಮಹಿಮೆ ಇಲ್ಲದ್ದರಿಂದ ಕೇವಲ ಮಣ್ಣಿನ ಹುಲಿಯಂತೆ ತೋರುತ್ತದಷ್ಟೆ.

೧೧೧

ಇಂಚುಕಂತಬೋನ ಮೀಶ್ವರಾರ್ಪಣಮನ್ನ, ಪುಣ್ಯಲೋಕಮುನಕು ಬೋವುನತುಡು
ಅನ್ನದಾನಮುನಕು ನಧಿಕದಾನಮು ಲೇದು ವಿಶ್ವದಾಭಿರಾಮ ವಿನುರ ವೇಮ.

ಉಣ್ಣುವಂಬಾನ'ದೊಳು ಇನಿತು ದೈವಕಿಡಲು,
ಪುಣ್ಯಲೋಕಕವನು ಹೋಗುತಿಪ್ಪ.
ಅನ್ನದಾನಕ್ಕಿಂತ ಮಿನ್ನದಾನವಿಲ್ಲ.
ವಿಶ್ವದಾಭಿರಾಮ ವಿನುರ ವೇಮ.

ದೈವ ಭಾವವೆಂದರೆ ತನ್ನಂತೆ ಇತರರನ್ನು ಕಾಣುವುದು. ಬೇರೆಯವರು ಉಪವಾಸ ವಿರುವಾಗ ತಾನು ಉಣ್ಣದೆ ಇರುವುದಕ್ಕೆ ತಪಸ್ಸು ಎನ್ನುತ್ತಾರೆ. ಆದರೆ ನಿಜವಾಗಿ ಉಪವಾಸ ಬೀಳುವುದರಿಂದ ಪ್ರಯೋಜನವಿಲ್ಲ. ತನ್ನ ಪ್ರಾಪ್ತಿಯ ಊಟದಲ್ಲಿ ಒಂದಂಶ ವನ್ನು ಹಸಿದವರಿಗಾಗಿ ತೆಗೆದಿರಿಸಿ ಊಟ ಮಾಡುವುದೇ ಮೇಲು. ಹಂಚಿಕೊಂಡು ಊಟ ಮಾಡುವವನಿಗೆ ಹಸಿವಿನ ಸಂಕಟವಿಲ್ಲ.

೧೧೨

ವೆರ್ರಿವಾನಿಮಿಗುಲ ವಿಸಿಗಿಂಚಗಾರಾದು, ವೆರ್ರಿವಾನಿಮಾಟ ವಿನಗರಾದು
ವೆರ್ರಿಕುಕ್ಕಬಟ್ಟ ವೇಟಾಡವಚ್ಚುನಾ? ವಿಶ್ವದಾಭಿರಾಮ ವಿನುರ ವೇಮ.

ಹುಚ್ಚು ನರಗೆ ಹೆಚ್ಚು ಪೀಡೆ ನೀಡಹೊಲ್ಲ
ಹುಚ್ಚ ನರನ ಮಾತು ಕೇಳ ಹೊಲ್ಲ.
ಹುಚ್ಚು ನಾಯಿ ನೆಚ್ಚಿ ಬೇಟೆಯಾಡಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ಹುಚ್ಚು ಎಂದರೆ ಮಾನಸಿಕ ವಿಭ್ರಮೆಯಷ್ಟೇ. ಭ್ರಮಿಷ್ಠನಿಗೆ ಲೋಕವೆಲ್ಲ ಇರುವಂತೆ ಕಾಣದೆ, ಅವನ ಮನಸ್ಸಿನ ಭಾವನೆಗೆ ಅನುಗುಣವಾಗಿ ಕಾಣುತ್ತದೆ. ಅಂಥವನಿಗೆ ನಾವು ಕಂಡಂತೆ ಲೋಕ ಜ್ಞಾನ ಮಾಡಿಕೊಳ್ಳುವ ಶಕ್ತಿ ಇರುವದಿಲ್ಲ. ಕಾರಣ ಅವನಿಗೆ ತಿಳಿಸುವ ಪ್ರಯತ್ನದ ದಿಶೆಯಲ್ಲಿ ಹೆಚ್ಚು ಹೆಚ್ಚಾಗಿ ಪೀಡೆ ನೀಡುವುದು ಸರಿಯಾದುದಲ್ಲ. ಅದೇ ಕಾರಣದಿಂದ, ಅವನ ಮಾತುಗಳಲ್ಲಿ ಸತ್ಯ ಅರ್ಥ, ಇಲ್ಲದಿರುವದರಿಂದ ಆ ನುಡಿ ಕೇಳುವುದರಲ್ಲಿಯೂ ಅರ್ಥವಿಲ್ಲ. ಉದಹರಣೆಗಾಗಿ, ಹುಚ್ಚು ಹಿಡಿದ ನಾಯಿಯನ್ನು ನಂಬಿಕೊಂಡು ಯಾರೂ ಬೇಟೆಯಾಡುವದಿಲ್ಲವೆಂಬುದನ್ನು ನೆನೆಯಬಹುದು.

ಸತ್ಯ ಧರ್ಮದ ಬಗ್ಗೆ ಸಹ ವೈಪರೀತ್ಯವಾಗಿ, ಇದ್ದುದನ್ನು ಇಲ್ಲದಂತೆ, ಇಲ್ಲದುದನ್ನು ಇದ್ದಂತೆ ಗ್ರಹಿಸಿದವರೂ ಒಂದು ತೆರನಾದ ಹುಚ್ಚರೇ, ಧರ್ಮ ನೈಜ ಕಲ್ಪನೆಯನ್ನು ದೇವರ ಸತ್ಯ ಸ್ವರೂಪವನ್ನೂ ತಪ್ಪು ತಿಳಿದು ಗುರುಪೀಠವೇರಿ ಉಪದೇಶ ಹೇಳುವವರೂ ಹುಚ್ಚರೇ; ಅವರನ್ನು ನಂಬಿ, ಅವರ ಮಾತಿನಂತೆ ನಡೆದರೆ, ಭಕ್ತನು ತನ್ನ ಗುರಿಯಾದ ಸಚ್ಚಿದಾನಂದ ಸ್ವರೂಪದ ದೈವ ಕಾಣನು.

೧೧೩

ಖರಮು ಮೇನಿನಿಂಡ ಗಂಧಂಬುಬೂಸಿನ, ನೇಮಿಯೆರುಗಲೇಕ ಯೆಗಸಿತನ್ನು
ಈಡುಕಾನಿವಾನಿ ಯಿಷ್ಟಮೀಲಾಗುರಾ, ವಿಶ್ವದಾಭಿರಾಮ ವಿನುರ ವೇಮ

ಗಾರ್ದಭ ನ್ಮೈತುಂಬ ಗಂಧ ಬಳಿಯಲೇನು?
ಅದರ ಪರಿವೆಯಿಲ್ಲ; ಒದೆವುದೊಂದೆ.
ಇದುವೆ ತೆರಹ; ಜೋಡಿಯೆನಿಸದವಳ ಬಯಕೆ.
ವಿಶ್ವದಾಭಿರಾಮ ಕೇಳು ವೇಮ.

ಲಗ್ನ ಕಾಲಕ್ಕೆ ಗಂಡು-ಹೆಂಣಿನ ಗುಣ ಸ್ವಭಾವಗಳು ಸರಿಯಾಗಿ ಹೊಂದುವುವೋ ಹೇಗೆಂಬುದನ್ನು ನಿಶ್ಚಯಿಸುವುದು ತುಂಬಾ ಮಹತ್ವದ್ದು. ಏಕೆಂದರೆ, ತನಗೆ ಜೋಡಿಯೆನಿಸದವಳನ್ನು ಬಯಸಿದರೆ, ಬಾಳುವೆ ಹೊಂದಿಕೆಯಾಗುವುದಿಲ್ಲ. ಜೊತೆ ಸರಿಯಾಗದಿದ್ದರೆ, ಅನಂತರದ ರಮಿಸುವಿಕೆ, ಸಂಧಾನಗಳೂ ಫಲವೀಯುವದಿಲ್ಲ. ಹೇಗೆಂದರೆ, ಗಂಧ ಬಳಿದೊಡನೆ ದೈವೀಭಾವ ಬರುವುದೆಂದು ಕತ್ತೆಗೂ ಗಂಧ ಬಳಿದರೆ ಆಗುವುದೇನು? ಕತ್ತೆ ಒದೆಯುವುದನ್ನು ಬಿಟ್ಟೀತೆ?

೧೧೪

ವಿಡುವವಲಯು ನೂರು ವಿಶ್ರಾಂತಿಲೇಕುನ್ನ, ವಿಡುವವಲಯು ನಾಲಿ ವಿಧಮು ದೆಲಸಿ,
ವಿಡುವವಲಯು ರಾಜು ವಿತರಣಿಕಾಕುನ್ನ, ವಿಶ್ವದಾಭಿರಾಮ ವಿನುರ ವೇಮ

ತೊರೆಯಬೇಕು ಊರ ವಿರಾಮುವಿರದಾಗ.
ತೊರೆಯಬೇಕು ನಾರಿ ನಡತೆಯರಿತು,
ತೊರೆಯಬೇಕು ದೊರೆಯ ಉದಾರನಿರದಾಗ
ವಿಶ್ವದಾಭಿರಾಮ ಕೇಳು ವೇಮ.

ಧರ್ಮಸೂತ್ರಗಳ ಮೇರೆಗೆ, ಮದುವೆಯೆಂದರೆ ಜೊತೆಬಾಳುವೆ ಎಂಬ ಕಲ್ಪನೆಯಿರದೆ ಅದೊಂದು ಜೀವನ-ಸಂಸ್ಕಾರ ಎಂಬ ಕಲ್ಪನೆ ಪ್ರತಿಪಾದಿಸಲ್ಪಟ್ಟಿತ್ತು. ಇದಲ್ಲದೆ ಬ್ರಾಹ್ಮಣರು ಕ್ಷತ್ರಿಯ ಸ್ತ್ರೀಯರನ್ನೂ ಕ್ಷತ್ರಿಯರು ಇತರರನ್ನೂ ಕೆಡಿಸುವುದು ಪಾಪವೆಂದು ಧರ್ಮ ಸೂತ್ರಗಳು ಗಣಿಸಲಿಲ್ಲ. ಹೀಗೆ ವ್ಯಭಿಚಾರಕ್ಕೆ ಧರ್ಮಸೂತ್ರಗಳನ್ಯಯ ಅನುಮತಿ ದೊರೆಕಿತ್ತು. ಇದಲ್ಲದೆ ಶೀಲಗೆಟ್ಟ ಹೆಣ್ಣನ್ನು ಬಿಡುವ ಅಧಿಕಾರವೂ ಗಂಡನಿಗಿರಲಿಲ್ಲ. ಏಕೆಂದರೆ ಮದುವೆ ಹೆಚ್ಚು ಕಡಿಮೆ ಮಾಡಲಾಗದ ಸಂಸ್ಕಾರವಾಗಿತ್ತು. ಈ ವಿಚಾರ ದೋಷಪೂರಿತವಾದದು.

ಆದ್ದರಿಂದ ನಾರಿಯ ನಡತೆ ಸರಿಯೆಂದು ಕಾಣಬರದಿದ್ದರೆ ಅವಳೊಂದಿಗೆ ಘಟಸ್ಫೋಟ ಪಡೆಯುವುದು ಧರ್ಮಸಮ್ಮತ. ಅದೇ ರೀತಿ ತನ್ನ ಜೀವನಕ್ಕೆ ಯಾವ ಊರಿನಲ್ಲಿ ಶಾಂತಿ-ಸಮಾಧಾನಗಳು ದೊರೆಯುವದಿಲ್ಲವೋ ಅಂಥ ಊರನ್ನು ಸಹ ತೊರೆಯಬೇಕು. ದೊರೆಯು ಉದಾರನಿಲ್ಲದಿದ್ದರೆ, ಅವನ ಊಳಿಗದವರು ಅಂಥವನ ಆಶ್ರಯವನ್ನು ತೊರೆಯುವುದು ಸಹ ಧರ್ಮಸಮ್ಮತವೇ ಸರಿ.

೧೧೫

ಎಡ್ಡದಲುಪವಚ್ಚು ನೇಡಾದಿಕ್ಕೈನ, ಮೌನಿದೆಲುಪವಚ್ಚು ಮಾಸಮುನನೆ,
ಮೊಪ್ಪಂದೆಲುಪರಾದು ಮುಪ್ಪದೇಂಡ್ಲ ಕುನ್ನೈನ, ವಿಶ್ವದಾಭಿರಾಮು ವಿನುರ ವೇಮು

ಹೆಡ್ಡನಿಗೆ ತಿಳಿಸಲುಒಂದು ವರುಷ ಸಾಕು.
ಗುಡ್ಡದೊಳಿಹ ಮೌನಿಯರಿಯೆ ಮಾಸ.
ಮೂಢನರಿಯಲು ಮೂವತ್ತುವರುಷ ಬೇಕು
ವಿಶ್ವದಾಭಿರಾಮು ಕೇಳು ವೇಮು.

ಹೆಡ್ಡನೆಂದರೆ ಮಂದಮತಿ. ಅವನು ದುರಹಂಕಾರಿಯಲ್ಲ; ವಾದಿಯಲ್ಲ. ಸತ್ಯ ಜ್ಞಾನ ವಿಷಯವನ್ನು ಅವನಿಗೆ ತಿಳಿಯುವಂತೆ ವಿವರಿಸಬೇಕಾದರೆ ಬಹಳ ಹೆಚ್ಚೆಂದರೆ ಒಂದು ವರುಷ ಕಾಲಾವಧಿ ಬೇಕು. ಆದರೆ ಮೌನಿಯಾಗಿರುವವನು ಮೊದಲೇ ತಿಳಿಯುವ ಹಂಬಲ ಪಡೆದವನಿರುವನಲ್ಲದೆ, ವಾದದ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಅಂಥವನಿಗೆ ತಿಳಿಸಲು ಕೇವಲ ಒಂದು ತಿಂಗಳ ಅವಧಿ ಸಾಕು. ಇನ್ನು ಮೂಢನಾದರೋ ತಿಳಿದೂ ತಿಳಿಯದಂತಿರುವವ. ಇಲ್ಲವೆ ತಿಳಿಯುವ ಕಳಕಳಿಯಿಲ್ಲದೆ ತನಗೆ ತಿಳಿದ ಅಲ್ಪ ಜ್ಞಾನವನ್ನು ಮೇಲು ಮಾಡಿ ಹೊಸ ವಿಚಾರವನ್ನು, ಪೂರ್ಣಜ್ಞಾನವನ್ನು ತಿಳಿಯಲು ಇಚ್ಛೆ ಪಡದವ, ಅಂಥ ಮೂಢನಿಗೆ ತಿಳಿಸಬೇಕಾದರೆ, ಮೂವತ್ತು ವರುಷಗಳಷ್ಟು ದೀರ್ಘ ಕಾಲವೇ ಬೇಕಾಗಬಹುದು.

೧೧೬

ಅಡಿತಪ್ಪುವಾರ ಲಭಿಮಾನಹೀನುಲು, ಗೋಡೆರುಗನಿವಾಡು ಕೊದ್ದಿಕಾಡು,
ಕೂಡಿಕೇಡುನೇಯಗ್ಯೂರುಂಡು ತಲಪೋಯ, ವಿಶ್ವದಾಭಿರಾಮು ವಿನುರ ವೇಮು

ಆಡಿತಪ್ಪುವಾತ ಸದಭಿಮಾನಹೀನ
ಕಾಡಿ ಬೇಡಿ ಅರಿಯದಾತನಲ್ಲ.
ಕೂಡಿ ಬಿಟ್ಟು ಕೇಡು ಬಗೆವ ಕ್ರೂರ ನೋಡು
ವಿಶ್ವದಾಭಿರಾಮು ಕೇಳು ವೇಮು.

ಒಪ್ಪತಕ್ಕ ನಡೆ-ನುಡಿಗಳೇ ಮಾನವನ ಮಾನ. ನುಡಿದಂತೆ ನಡೆಯುವುದೇ ಶ್ರೇಷ್ಠ ಮಾನ; ಅಭಿಮಾನ. ವಚನವಿತ್ತು, ಆ ರೀತಿ ನಡೆಯದವನು ಅಭಿಮಾನಹೀನನು.

ತಿಳಿದುಕೊಳ್ಳುವವನು ತನಗೆ ತಿಳಿಸುವವನನ್ನು ಕಾಡಿ ಬೇಡಿ ತಿಳಿದುಕೊಳ್ಳಬೇಕು. ತೀರ ಸರಳ ಮಾರ್ಗದಿಂದ ಜ್ಞಾನ ದೊರೆಯಲಿಲ್ಲವೆಂದು ಜ್ಞಾನಾರ್ಜನೆ ನಿಲ್ಲಿಸುವವನೇ ಅಲ್ಪನು.

ಆದರೆ ಗೆಳೆಯನೊಡನಾಗಲೀ ಇಲ್ಲವೆ ಗುರುವಿನೊಡನಾಗಲೀ ಜೊತೆಗೂಡಿ, ಆ ನಂತರ ವಿರಸ ಹುಟ್ಟಿ ಬೇರೆಯಾದಾಗ ಗೆಳೆಯನಿಗಾಗಲಿ ಗುರುವಿಗಾಗಲಿ ಕೇಡು ಬಗೆಯುವವನು ಕ್ರೂರನು. ಮನಸ್ಸಿಗೆ ಬೇಡವಾದರೆ ಆ ವಿಷಯದಿಂದ ವಿಮುಖನಾಗಿ ಇರಬೇಕಷ್ಟೇ.

೧೧೭

ವಾನರಾಕಡಮರಿ ಪ್ರಾಣಂಬು ಪೋಕಡ, ಕಾನಬಡದು ಘನುನ ಕೈನಗಾನಿ,
ಕಾನಬಡಿನವೀದ ಗಲಿಯೆಟ್ಲು ನಡಚುರಾ? ವಿಶ್ವದಾಭಿರಾಮು ವಿನುರ ವೇಮು.

ಮುಳೆಯು ಬೀಳುವಂದ; ಹರಣ ತೊಲಗುವಂದ;
ತಿಳಿಯಲಾರ ಘನನೆ ಆದೊಡೇನು?
ತಿಳಿಯಲಾಗ ಮುತ್ತೆ ಕಲಿಯುಗ ವಿಹುದೆಂತು?
ವಿಶ್ವದಾಭಿರಾಮು ಕೇಳು ವೇಮು.

ಮುಳೆಯು ವರ್ಷದ ಇಂಥ ಅಂಥ ದಿನಗಳಲ್ಲಿ ಆಗುವುದೆಂದು ಪಂಚಾಂಗಗಳಲ್ಲಿ ಬರೆಯುತ್ತಾರೆ. ಆದರೆ, ಅದೆಲ್ಲ ಕೇವಲ ಊಹೆಯೇ ಹೊರತು, ನಿಜವಾದ ಎಣಿಕೆಯಲ್ಲ. ಅದೇ ರೀತಿ ಮನುಷ್ಯನು ಇಷ್ಟುವರ್ಷ ಬದುಕುತ್ತಾನೆ, ಇಂಥ ವರ್ಷ ಕುತ್ತು ಎಂದು ಹಸ ಸಾಮುದ್ರಿಕೆಯ ಆಧಾರದಿಂದ, ಜನ್ಮಕುಂಡಲಿಯನ್ನು ಆಧರಿಸಿರುವವೆಂದು ತಿಳಿದ ಗ್ರಹರಾತಿಗಳ ಗತಿಯಮೇಲಿಂದ ಊಹಿಸುವುದೂ ಸತ್ಯವಲ್ಲ. ಎಂಥ ಘನಮಹಿಮನಾದರೂ ಮುಳೆ ಬೀಳುವುದನ್ನಾಗಲೀ ಪ್ರಾಣಹೋಗುವುದನ್ನಾಗಲೀ ತಿಳಿಯಲಾರನು. ಹಾಗೆ ತಿಳಿದುದಾದರೆ ಕಲಿಯುಗ ಎನ್ನುವುದು ಎಲ್ಲಿ ಉಳಿಯುದು? ಏಕೆಂದರೆ ಮರಣ ಮತ್ತು ಮರಣದಾಚೆಯ ಕಲ್ಪನೆಯು ವೇದ್ಯವಾದರೆ ಯುಗ ಕಲ್ಪನೆಯೇ ಅಳಿಸಿಹೋಗುವುದಲ್ಲವೇ? ಕಾರಣ, ತಿಳಿಯಲಸಾಧ್ಯವಾದ ವಿಷಯಗಳ ಬಗ್ಗೆ ಹುಚ್ಚುವಿಚಾರಗಳನ್ನು ಇರಿಸಿಕೊಳ್ಳಬಾರದು.

೧೧೮

ನೋಡಿಪುಪ್ಪಿಕೆಲ್ಲ ನೊಪ್ಪಿಲೇ ಕುಂಡಗಾ, ಆಕುಪೊಕನುನ್ನ ಮೌಷಧಂಬು,
ಪಟ್ಟಕುಂಡೆನೇನಿ ಪೆನುರೋತವೇಯುರಾ, ವಿಶ್ವದಾಭಿರಾಮು ವಿನುರ ವೇಮು.

ಬಾಯಿ ಕೊಳೆಯನೆಲ್ಲ ಮಾಯ ಮಾಡಲಿಕ್ಕೆ
ಅಡಿಕೆ ಸುಣ್ಣ ಎಲೆಯೆ ಪರಮೌಷಧ.
ಮೆಲ್ಲದಿರಲು ಆಗ ಒಳಿತಲ್ಲ ಕಾಣು.
ವಿಶ್ವದಾಭಿರಾಮು ಕೇಳು ವೇಮು

ಎಲೆ-ಅಡಿಕೆ ತಿನ್ನುವ ಜಟವು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ರೂಢಿಯಾಗಿದೆ. ಒಕ್ಕಲುತನ ಮಾಡುವವರಂತೂ ತಮ್ಮ ನೀರಡಿಕೆ ಹಿಂಗಿಸಿಕೊಳ್ಳಲು ಎಲೆಯಡಿಕೆ ಜಿಗಿಯುವ ಅಭ್ಯಾಸವನ್ನು ಇಟ್ಟುಕೊಳ್ಳುತ್ತಾರೆ. ಕೆಲವರು ಈ ಅಭ್ಯಾಸವು ಒಳ್ಳೆಯದಲ್ಲವೆಂದು ಅಭಿಪ್ರಾಯಪಡುತ್ತಾರೆ.

ಆದರೆ ಎಲೆಯಡಿಕೆ ತಿನ್ನುವುದರಿಂದ ಬಾಯಿ ಸ್ವಚ್ಛವಾಗುತ್ತದೆ. ಬಾಯಿಯ ಕೊಳೆಯನ್ನು ನೀಗಿಸಲಿಕ್ಕೆ ಎಲೆಯಡಿಕೆ ಉತ್ತಮ ಔಷಧವೇ ಆಗಿದೆ. ಹೆಚ್ಚೇನು? ಊಟ ತಿಂಡಿಯಾದ ಮೇಲೆ ಎಲೆಯಡಿಕೆ ತಿನ್ನದಿದ್ದರೆ, ಆರೋಗ್ಯ ದೃಷ್ಟಿಯಿಂದ ಒಳ್ಳೆಯದಲ್ಲ.

೧೧೯

ಪರುಲವೋಸ ಪುಚ್ಚಿಧರ ಧನಮಾರ್ಜಿಂಚಿ, ಕಡುಪುನಿಂಪುಕೊನುಟ ಕಾನಿಪದ್ದು,
ಋಣಮುಜೇಯುಮನುಜು ಡೆಕ್ಕುವ ಕೆಕ್ಕುನಾ? ವಿಶ್ವದಾಭಿರಾಮ ವಿನುರ ವೇಮು.

ಪರರ ಮೋಸಗೈದು ಭೂರಿ ಕಾಸುಗಳಿಸಿ,
ಹೊರೆಯಲುದರವನ್ನು, ತರವಲ್ಲವೊ.
ಪರರ ಋಣದಿ ಸಿಕ್ಕ ನರಗೆಲ್ಲಿ ಗೌರವ?
ವಿಶ್ವದಾಭಿರಾಮ ಕೇಳು ವೇಮ.

ಗುರುತ್ವ ಎಂದರೆ ಶ್ರೇಷ್ಠತೆ, ಗೌರವ. ಎಲ್ಲರಿಗಿಂತ ಶ್ರೇಷ್ಠನೆನಿಸಲು, ಅಂದರೆ ಗೌರವ ಪಡೆಯಲು ಯಾರಿಗೂ ಋಣಿಯಾಗದಿರಬೇಕಷ್ಟೇ. ಇತರರಿಗೆ ಋಣಿಯಾಗಿ, ಅಂಕಿತನಾಗಿ ಇರುವ ಮನುಷ್ಯನಿಗೆ ಗೌರವ ಹೇಗೆ ದೊರೆಯಬಹುದು ?

ಕಾರಣ ಬೇರೆ ಜನರನ್ನು ವಂಚಿಸಿ, ಹಣ ಕೂಡಿಸಬಾರದು. ತನ್ನ ಹೊಟ್ಟೆಹೊರೆಯಲು ಇತರರನ್ನು ವಂಚಿಸುವುದು ಒಳ್ಳೆಯದಲ್ಲ.

೧೨೦

ಪಾಲನೀಡಿಗಿಂಟ ಗ್ರೋಲುಚುನುಂಡಿನಾ, ಮನುಜುಲೆಲ್ಲಗೂಡಿ ಮದ್ಯಮುಂಡ್ರು
ನಿಲುವದಗನಿಚೋಟ ನಿಲುವ ನಿಂದಲುವಚ್ಚು, ವಿಶ್ವದಾಭಿರಾಮ ವಿನುರ ವೇಮ.

ಹಾಲನೀಡಿಗರಿಹ ಮನೆಯೊಳು ಕುಡಿದೊಡನೆ
ಹಾಳು ಮದ್ಯವೆನುವರೆಲ್ಲ ಜನರು.
ನಿಲ್ಲಬಾರದೆಡೆಯೆ ನಿಲಲು ನಿಂದೆ ಬಹವು.
ವಿಶ್ವದಾಭಿರಾಮ ಕೇಳು ವೇಮ

ನೀತಿ-ನಿಯಮಗಳೆಂದರೆ ಕಟ್ಟುಪಾಡುಗಳು. ಇದರಲ್ಲಿ ವೈಯಕ್ತಿಕ ನೀತಿ, ಸಾಮಾಜಿಕ ನೀತಿ ಎಂದು ಭೇದ ಕಲ್ಪಿಸಬಹುದು. ಇದನ್ನೇ ಸ್ಪಷ್ಟೀಕರಿಸುವುದಾದರೆ ಮದ್ಯ ಕುಡಿಯಬಾರದೆಂಬ ಸ್ವಂತ ನಿಶ್ಚಯ ವೈಯಕ್ತಿಕ ನೀತಿ. ಅದೇ ರೀತಿ ಈಡಿಗರ ಮನೆಯ ಸಹವಾಸವೂ ಕೆಟ್ಟದ್ದೆಂಬುದು ಸಾಮಾಜಿಕ ನೀತಿ. ಆದ್ದರಿಂದ ಈಡಿಗರ ಮನೆಯಲ್ಲಿ ಕುಳಿತು (ಸೇಂದಿ ಬಣ್ಣದ) ಹಾಲು ಕುಡಿದರೆ ವೈಯಕ್ತಿಕ ನೀತಿ ಪಾಲಿಸಿದಂತಾಯಿತು. ಆದರೆ ಸಾಮಾಜಿಕ ನೀತಿಗೆ ತಪ್ಪಿದಂತಾಯಿತು.

ಅದೇ ರೀತಿ ವೈಯುಕ್ತಿಕವಾಗಿ ಕೆಟ್ಟಭಾವನೆ ತಾಳದಿದ್ದರೂ, ಸೂಳೆ-ಕೇರಿಯಲ್ಲಿ ಸುತ್ತಿದರೆ ಇಲ್ಲವೆ ಕೆಟ್ಟ ಜನರು ಹೊಂಚು ಹಾಕಿ ನಿಲ್ಲುವ ಕೆರೆಭಾವಿಗಳ ದಾರಿಯ ಮರೆಯ ತಾಣಗಳಲ್ಲಿ ನಿಲ್ಲುವುದು ಸಾಮಾಜಿಕ ನೀತಿಗೆ ವಿರೋಧವಾದುದು. ನೀತಿಗೆ ತಪ್ಪಿದರೆ ನಿಂದೆಗಳು ಬರುತ್ತವೆ.

೧೨೧

ತುಮ್ಮಚೆಟ್ಲ ಮುಂಡ್ಲು ತೋಡನೆಪುಟ್ಟುನು, ವಿತ್ತುಲೋನ ನುಂಡಿ ವೆಡಲಿನಟ್ಲು,
ಮೂರ್ಖುನುಕು ಗುಬುದ್ಧಿ ಮುಂದುಗ ಬುಟ್ಟುನು, ವಿಶ್ವದಾಭಿರಾಮ ವಿನುರ ವೇಮ.

ಬಾರಿಗಿಡ ಮುಳ್ಳನು ಸೇರಿ ಹುಟ್ಟುತಿಹುದು
ಊರಿದ ಬೀಜದಿಂದ ತೂರಿದಂತೆ.
ಮೂರ್ಖಗೆ ದುರ್ಬುದ್ಧಿ ಮೊದಲೆ ಹುಟ್ಟುವಂತೆ
ವಿಶ್ವದಾಭಿರಾಮ ಕೇಳು ವೇಮ

ಕೆಲವು ಗಿಡಗಂಟಿಗಳಿಗ ಮುಳ್ಳು ಉಂಟು. ಮುಳ್ಳಿರುವ ಗಿಡಗಂಟಿಗಳಲ್ಲಿಯೂ ಕೆಲವುಗಳಿಗೆ ಸಸಿ ಇರುವಂದಿನಿಂದ ಮುಳ್ಳೂ ಇರುತ್ತದೆ. ಈ ಮುಳ್ಳು ಹೊಂದುವ ಗುಣವು ಊರಿದ ಬೀಜದಲ್ಲಿಯೇ ಅಡಗಿದ್ದು ಹೊರಗೆ ಪ್ರಕಟವಾಗುತ್ತದೆ.

ಇದೇ ರೀತಿ ಮೂರ್ಖನಾದ ಮನುಷ್ಯನಿಗೆ ವಿಷಯವಿವೇಚನೆಗಿಂತ ಮೊದಲು ಕೆಟ್ಟ ಬುದ್ಧಿ ಹುಟ್ಟುತ್ತದೆ. ಇಂಥ ಪೂರ್ವಗ್ರಹದೋಷದೃಷ್ಟಿಯಿಂದ ಅವನ ವಿಚಾರವೂ ಕಲುಷಿತವಾಗಿರುತ್ತದೆ.

೧೨೨

ಒಕಟಕ್ರಿಂದನೊಕ್ಕ ಟೊನರಲಬ್ಧಮು, ಬೆಟ್ಟ, ವಲನುಗ ಗುಣಿಯಿಂಪ ವರುಸ ಪೆರುಗು
ಅಟ್ಟರೀತಿನುಂಡು ನೌದಾರ್ಯಫಲಮುಲು, ವಿಶ್ವದಾಭಿರಾಮ ವಿನುರ ವೇಮ.

ಒಂದರಡಿಯಲೊಂದ–ನಿಟ್ಟು ಬಂದ ಲಬ್ಧ
ಒಂದಕೊಂದು ಗುಣಿಸೆ, ಸಾಲು ಮುಂದು
ಅಂದವಿದುವೆ ನೋಡು; ಔದಾರ್ಯದ ಫಲಕೆ-
ವಿಶ್ವದಾಭಿರಾಮ ಕೇಳು ವೇಮ

ಹನಿ–ಹನಿ ಕೂಡಿದರೆ ಹಳ್ಳ, ತೆನೆ–ತೆನೆ ಕೂಡಿದರೆ ರಾಶಿ; ಇದನ್ನೇ ಗಣಿತದ ಭಾಷ್ಯೆಯಲ್ಲಿ ಹೇಳುವುದಾದರೆ, ಒಂದು ಅಂಕೆಯ ಕೆಳಗೆ ಇನ್ನೊಂದು ಅಂಕೆಯಿಟ್ಟು, ಬೇರೀಜು ಇನ್ನೂ ದೊಡ್ಡದಾಗುತ್ತದೆ. ಅದೇ ಎರಡು ಅಂಕಿಗಳನ್ನು ಒಂದರಿಂದ ಇನ್ನೊಂದು ಗುಣಿಸಿದರೆ ಗುಣಲಬ್ಧ ಇನ್ನೂ ದೊಡ್ಡ ಅಂಕೆಯಾಗಿ ಅಂಕಿಗಳ ಸಾಲು ಮುಂದುವರೆಯುತ್ತದೆ.

ಅದೇ ರೀತಿ ಒಬ್ಬನು ತನ್ನಲ್ಲಿರವ ಔದಾರ್ಯವನ್ನು ಇನ್ನೊಬ್ಬನಲ್ಲಿ ತೋರಿದರೆ. ಔದಾರ್ಯದ ಪರಿಮಾಣವು ಹೆಚ್ಚಾಗುತ್ತದೆ. ಒಬ್ಬನು ಔದಾರ್ಯವಂತನಾಗಿ ಬೇರೆ ನಾಲು ಜನರಲ್ಲಿ ಔದಾರ್ಯ ತೋರಿದರೆ ಅದರ ಪರಿಣಾಮವಾಗಿ ಔದಾರ್ಯ ನಾಲ್ಕರಷ್ಟಾಗುವುದು, ಈ ನಾಲ್ವರೂ ನಾಲ್ಕು ನಾಲ್ಕು ಜನರಲ್ಲಿ ಔದಾರ್ಯ ತೋರಿದರೆ ಔದಾರ್ಯವಂತರು ಹದಿನಾರು ಜನರಾಗುವರು. ಕಾರಣ ಔದಾರ್ಯದ ಫಲವು ಬೇರೀಜು–ಗುಣಾಕಾರ ನಿಯಮದಂತೆ ಬೆಳೆಯುವ ಅಂದ ಹೊಂದಿದ್ದು ನಾವು ಅಲ್ಪ ಔದಾರ್ಯ ತೋರಿದರೂ ಅದರ ಪರಿಮಾಣ ಅಧಿಕವಾಗುತ್ತ ಹೋಗುವುದು.

೧೨೩

ವಂಟ ಕುದುರುನಪುಡು ವಂಟಕವುವ್ಯತಂಬು, ಕಂಟಕಂಪುಗಾನು ಕಾನುಪಿಂಚು,
ಒಡಲದಿನಿನ ತಿಂಡಿ ವಡಿವಿಂಚಗನುದೋರು. ವಿಶ್ವದಾಭಿರಾಮ ವಿನುರ ವೇಮ.

ಅಡುಗೆ ಚೆನ್ನಾಗಿರೆ ಅವ್ಯತದಂತೆ; ಅಹುದು.
ನೋಡಲಿಂಪು ಕಂಪು ಅಪ್ಪುದದುವೆ.
ಒಡಲು ತುಂಬಿ ನೀರೆ, ತಿಂಡಿ ವ್ಯತ್ಯವಹುದು
ವಿಶ್ವದಾಭಿರಾಮ ಕೇಳು ವೇಮ.

ಸರಿಯಾಗಿ ಮಾಡಿದ ಅಡುಗೆ ರುಚಿಯಾಗಿರುವುದು; ಆರೋಗ್ಯಕರವಾಗಿರುವುದು. ಅದರಿಂದ ಅದು ಅವ್ಯತ ಸಮಾನವಾದುದು. ಅಂಥ ಅಡುಗೆಯ ಕಂಪು, ಅದರ ಸೇವನೆಯಿಂದ ಉಂಟಾಗುವ ಇಂಪು ಇತ್ಯಾದಿ ಅಸಮಾನವಾದುವುಗಳು.

ಆದರೆ ಹೊಟ್ಟೆ ತುಂಬಿದವನಿಗೆ ಹುಗ್ಗಿ ನೆಗ್ಗಿಲು ಮುಳ್ಳಿನಂತೆ; ಒಳ್ಳೆಯ ತಿಂಡಿಯನ್ನು ಹೊಟ್ಟೆತುಂಬಿ ಹೆಚ್ಚಾಗುವಂತೆ ಸೇವಿಸಿದರೆ ಮೃತ್ಯುಕಾರಕವಾಗುವುದು.

೧೨೪

ವಂಟತಪ್ಪನಪುಡು ವಂಟಕಮು ವಿಷಂಬು, ಕಂಟಜೂಡಗಾನೆ ಕಂಟಗಿಂಚು,
ಕಂ ಟಕಮುನದಿನ್ನ ಕಡಿಗಂಡ ಮ್ಮೆವಚ್ಚು, ವಿಶ್ವದಾಭಿರಾಮ ವಿನುರ ವೇಮ.

ಬೇಯಿಸಲು ತಪ್ಪಿದರಡುಗೆ ವಿಷವೆನಿಪುದು;
ಹೇಯವಯ್ಯ ನೋಡೆ, ಕಣ್ಣು ತೆರೆದು,
ಹೇಯವಿನಿತು ತಿನಲಪಾಯಕರ ನೋಡಾ.
ವಿಶ್ವದಾಭಿರಾಮ ಕೇಳು ವೇಮ.

ಸರಿಯಾಗಿ ಬೇಯಿಸದ ಅಡುಗೆಯು ವಿಷದಂತೆ ದೇಹಾರೋಗ್ಯ ಕೆಡಿಸುವುದು. ಹೆಚ್ಚಾಗಿ ವಿಚಾರಿಸಿ ನೋಡಿದರೆ, ಅಂಥ ಅಡುಗೆ ಹೇಯವಾದುದು. ಇಂಥ ಹೇಯವಾದುದನ್ನು ತಿನ್ನುವುದು ಅಪಾಯಕರವಷ್ಟೇ.

೧೨೫

ಪ್ರಭುವುಕೋತಿಯ್ಯೆನ ಬ್ರಗಡಲು ಪಂದುಲು, ನ್ಯೆನಿಕಂಡು ಪಕ್ಕಿ ನೇನ ಪಸುಲು,
ಏನ್ಗುಲಶ್ವ ಚಯಮುಲೆಲು ಕಲುಬಿಲ್ಲುಲು, ವಿಶ್ವದಾಭಿರಾಮ ವಿನುರ ವೇಮ.

ಪ್ರಭುವು ಕೋತಿಯೆನಿಸೆ, ಮಂತ್ರಿ ಹಂದಿಯೆನಿಪ.
ಯೋಧರೆಲ್ಲ ಪಕ್ಷಿ; ಸೇನೆ ಪಶುವು.
ಆನೆ–ಕುದುರೆ ತಾವು ಬೆಕ್ಕು ಇಲಿಗಳಂತೆ.
ವಿಶ್ವದಾಭಿರಾಮ ಕೇಳು ವೇಮ.

'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ' ಎಂಬ ಗಾದೆಯ ಮಾತು ಬಳಕೆಯಲ್ಲಿದೆ. ಅದೇ ಮಾತನ್ನು ರಾಜ ದರಬಾರಿಗೆ ಅನ್ವಯಿಸಿದರೆ, ಆಳುವ ಅರಸು ಕೋತಿಯಂತೆ ಚಂಚಲಚಿತ್ತನಾಗಿ, ಗಾಂಭೀರ್ಯ ಉಳಿಸಿಕೊಳ್ಳದೆ, ಹೊಣೆಗೇಡಿಯಾಗಿ ವರ್ತಿಸಿದರೆ, ಅವನಿಗೆ ಸಲಹೆ ನೀಡುವ ಮಂತ್ರಿಗಳು, ವಿಚಾರವಂತರಾಗದೆ ಆಶೆಬುರುಕರಾಗಿ ತಮಗೆ ಸಿಗುವ ಅಲ್ಪಸಿರಿಗಾಗಿ ಎಂಥ ಹೀನ ಮಟ್ಟಕ್ಕಿಳಿದು, ಹಂದಿಯಂತೆ ಹೇಸುಗೆಗೆ ತವಕಬಡುವವರಾಗುತ್ತಾರೆ. ತಿನ್ನುವ ಹೇಸುಗೆ ಹಂದಿಗೆ ಅನ್ವಯಿಸಿದರೆ, ಮಾಡಬಾರದ ಕಾರ್ಯದ ಹೇಸುಗೆ ಮಂತ್ರಿಗಳಿಗೆ ಅನ್ವಯಿಸುತ್ತದೆ.

ಇಂಥ ರಾಜ್ಯದಲ್ಲಿ ಯುದ್ಧದಲ್ಲಿ ಹೋರಾಡಬೇಕಾದ ಯೋಧರು ಹೊಣೆಗೇಡಿಗಳಾಗಿ ಪಕ್ಷಿಗಳಂತೆ ಕೇವಲ ತಿನಿಸುಗೂಳಿಯಾಗುತ್ತಾರೆ. ಇನ್ನು ಕಾಲಾಳು ಸೇನೆಯು ಕೇವಲ ಮಂದಮತಿಗಳಾಗಿ ಪಶುಗಳಾಗುತ್ತಾರೆ. ಯೋಗ್ಯ ಯೋಧರೂ, ಮಾವುತರೂ, ಸವಾರರೂ, ಇಲ್ಲದ ಕಾರಣದಿಂದ ಆನೆ–ಕುದುರೆಗಳೂ ಸಹ ಮನೆಯಲ್ಲಿ ಸಾಕಿದ ನಿರುಪದ್ರವಿ ಪ್ರಾಣಿಗಳಾದ ಬೆಕ್ಕು,ಇಲಿಗಳಂತೆ ಆಗುತ್ತವೆ.

೧೨೬

ಚಂಪದಲಚುರಾಜು ಚನುವಗ್ಗಲಂಬಿಚ್ಚು, ಚೆರುಪನುನ್ನ ಪಗರ ಚೆಲಿವಿಜೇಯು.
ಕರವನುನ್ನಪಾಮು ನೆರಿಗಾಚುಕೊನಿಯುಂಡು, ವಿಶ್ವದಾಭಿರಾಮ ವಿನುರ ವೇಮ.

ಕೊಲುವ ರಾಜ ಬಹಳ ಕರುಣೆ ತೋರುತಿಪ್ಪ.
ಹಾಳು ಮಾಡಲೆಂದು ಹಗೆಯ ಮೈತ್ರಿ
ಕಾಳ ಸರ್ಪ ಹೊಂಚುಹಾಕಿ, ಅವಿತ ರೀತಿ
ವಿಶ್ವದಾಭಿರಾಮ ಕೇಳು ವೇಮ.

ಯಾರನ್ನಾದರೂ ಕಚ್ಚಬೇಕೆಂದು ನಿರ್ಧರಿಸಿದ ಕಾಳ ಸರ್ಪವು ತನ್ನ ಹೆಡೆ ಮುಚ್ಚಿಕೊಂಡು ಮರೆಗೆ ಅವಿತುಕೊಂಡು ಇರುತ್ತದೆ.

ಅದೇ ರೀತಿ, ವೈರಿಯೊಂದಿಗೆ ಸ್ನೇಹ ಸಂಬಂಧವಿರಿಸಿದ ತನ್ನ ಪ್ರಜೆಗಳನ್ನು ಕೊಲ್ಲಲು ನಿರ್ಧರಿಸಿದ ರಾಜನು ಅವರ ಮೇಲೆ ಮೊದ ಮೊದಲು ವಿಶೇಷ ಕರುಣೆ ತೋರಿದಂತೆ ವರ್ತಿಸುತ್ತಾನೆ. ಅನಂತರ, ಅವರ ಗುಟ್ಟನ್ನೆಲ್ಲ ಅರಿತು, ಅವರ ವಧೆಗೆ ಆಜ್ಞೆಯೀಯುತ್ತಾನೆ. ರಾಜನ ತನ್ನ ವೈರಿಯ ಗೆಳೆಯರನ್ನು ನಾಶ ಮಾಡುವ ರೀತಿಯೇ ಇದಾಗಿದೆ.

೧೨೭

ದಿಕ್ಕ್ಕುಲೇನಿರೋಗಿ ದೀನತಬಾಪಿನ, ಪುರುಷುಡಿಹವುನಂದು ಬೂಜ್ಯುಡಗುನು
ಪರಮುನಂದುವಾನಿ ಭಾಗ್ಯಮೇವುನವಚ್ಚು? ವಿಶ್ವದಾಭಿರಾಮು ವಿನುರ ವೇಮು.

ದಿಕ್ಕಿರದ ರೋಗಿಯ ದೈನ್ಯ ನೀಗಿಸಲಾ,
ಪುರುಷ ಲೋಕದೊಳಗೆ ಪೂಜ್ಯನೆನಿಪ
ಪರಮನೊಳಿರುವವನ ಭಾಗ್ಯವೆಣಿಸಬಹುದೆ?
ವಿಶ್ವದಾಭಿರಾಮು ಕೇಳು ವೇಮು.

ದಿಕ್ಕುಗಾಣದ ಪರದೇಶಿಯಾದ ರೋಗಿಯೊಬ್ಬನನ್ನು ಗುಣಪಡಿಸಿ, ಅವನ ನಿ:ಸಹಾಯಕತೆಯನ್ನು ದೀನತನವನ್ನು ಹೋಗಲಾಡಿಸುವಂಥ ಮನುಷ್ಯನು ಈ ಜಗತ್ತಿನಲ್ಲಿ ಪೂಜ್ಯನೆಂದು ಎಣಿಸಲ್ಪಡುವನು.

ಅಂದಮೇಲೆ, ಪರಮನಲ್ಲಿ ತನ್ಮಯನಾದ ಪರಮಾತ್ಮನಾದವನ ಭಾಗ್ಯವು ಎಷ್ಟೆಂದು ಹೇಳಬಹುದು?

೧೨೮

ಇಮ್ಮುದಪ್ಪುವೇಳ ನೆಮ್ಮಲನ್ನಿಯುದಪ್ಪಿ, ಕಾಲಮೊಕ್ಕರೀತಿ ಗಡಪವಲಯು,
ವಿಜಯುಡನುವುದಪ್ಪಿ ವಿರಟುನಿಗೊಲ್ವಡಾ? ವಿಶ್ವದಾಭಿರಾಮ ವಿನುರ ವೇಮ.

ಅನನುಕೂಲ ಕಾಲ ಸೌಖ್ಯ ತೊರೆದು ಬಿಟ್ಟು
ಕಾಲವೊಂದು ರೀತಿ ಕಳೆಯುತಿಪ್ಪ
ಪಾರ್ಥ, ಛತ್ರ ತೊಲಗೆ, ವಿರಾಟನೆಡೆ ದುಡಿದ
ವಿಶ್ವದಾಭಿರಾಮು ಕೇಳು ವೇಮು.

ಎಂಥ ದೊಡ್ಡ ವ್ಯಕ್ತಿಯೇ ಆಗಲಿ, ಅನುಕೂಲವಿಲ್ಲದ ಕಾಲದಲ್ಲಿ, ತನ್ನ ಸುಖ-ಸೌಖ್ಯವನ್ನು ತೊರೆಯುತ್ತಾನೆ, ಮೇಲಾಗಿ ತನ್ನ ವೇಳೆಯನ್ನೂ ಸಹ ಹಾಗೂ ಹೀಗೂ ಕಳೆಯುತ್ತಾನೆ.

ಪರಾಕ್ರಮಿಯಾದ ಅರ್ಜುನನು ಸಹ ರಾಜಾಶ್ರಯ ತಪ್ಪಿದೊಡನೆ, ವಿರಾಟರಾಜನಲ್ಲಿಗೆ ಹೋಗಿ ಬೃಹನ್ನಳೆಯಾಗಿ ಸೇವೆ ಸಲ್ಲಿಸಿದನು.

೧೨೯

ಗೂಬಯೆಕ್ಕನಟ್ಟ ಗುರುಮುಬಾಡುಗಬೆಟ್ಟ, ವೆಳ್ಳಿಪೋದುರೆಂತ ವೆರ್ರಿವಾರೊ!
ಗೂಬಯೇಮಿಚೇಸೆ? ಗುರಮೇಮಿಚೇಯುನು? ವಿಶ್ವದಾಭಿರಾಮು ವಿನುರ ವೇಮು.

ಗೂಗೆ ಮನೆಯ ಹೊಗಲು ಅದನೆ ಹಾಳುಗೆಡವಿ
ಹೋಗುತಿಪ್ಪರೆಂಥ ಮೂಢ ಜನರು!
ಗೂಗೆಯೇನು ಗೈಯ್ಯಬಹುದು, ಗೃಹವು ಏನು?
ವಿಶ್ವದಾಭಿರಾಮು ಕೇಳು ವೇಮು

ಕಾಗೆ ಇಲ್ಲವೆ ಗೂಗೆಗಳು ಮನೆ ಹೊಕ್ಕರೆ ಅಶುಭ ಲಕ್ಷಣವೆಂದೂ, ಅಪಶಕುನವೆಂದೂ ಬಗೆಯುತ್ತಾರೆ. ಗೂಗೆ ಹೊಕ್ಕ ಮನೆಯನ್ನು ಮೂರು ತಿಂಗಳು ತೊರೆಯುತ್ತಾರೆ. ಬೇರೆ ಮನೆ ಹುಡುಕಿಕೊಂಡು ಹೋಗುತ್ತಾರೆ. ಹೀಗೆ ವರ್ತಿಸುವ ಜನರು ಅದೆಂಥ ಮೂಢರು ! ಗೂಗೆ ದೇವಸೃಷ್ಟಿಯ ಪಕ್ಷಿ. ತನ್ನಷ್ಟಕ್ಕೆ ತಾನು ಕೂಗಿಕೊಳ್ಳುವ ಪಕ್ಷಿ. ಅಂಥ ಪಕ್ಷಿ ಅರಿಯದೆ ಹಾರಿ ಬಂದು, ಹಾದಿ ತಪ್ಪಿ ಮನೆ ಬಾಗಿಲು ಸೇರಿದರೆ ಗೂಗೆಯದೇನು ತಪ್ಪು. ಅದರ ಪ್ರವೇಶವೆಂತು ಅಪವಿತ್ರ ? ಅದೇ ರೀತಿ ಗೂಗೆ ಹೊಕ್ಕ ಮನೆಯು ಹೇಗೆ ಅಪವಿತ್ರವೆನ್ನಿಸುವುದು. ಅಂಥ ಮನೆಗೆ ಶಾಂತಿ ಕರ್ಮ ಮಾಡಿಸುವ ಗೊಡವೆ ಉಪ್ಪವಿಸುವದೆಂತು ?

೧೩೦

ವೇಮುಬಾಲುಜೋಸಿ ವೆಯ್ಯೆಂಡ್ಲುಪೆಂಚಿನ, ಜೇದು ವಿಡಿಚಿ ತೀಪಿ ಜಿಂದಡೆಪುಡು,
ಒಗುಗುಣಮುವಿಡಿಚಿ ಯುಚಿತಜ್ಞುಡುನುಕಾಡು, ವಿಶ್ವದಾಭಿರಾಮು ವಿನುರ ವೇಮು.

ಬೇವು ಮುರಕೆ ಹಾಲನೆರೆಯೆ ಸಹಸ್ರ ವರುಷ
ಕಹಿಯ ತೊರೆದು ಸಿಹಿಯ ಹೊಂದಬಹುದೆ?
ನೀಚ ಗುಣವ ತೊರೆದು ನರ ವಿವೇಕಿಯಾಗ
ವಿಶ್ವದಾಭಿರಾಮು ಕೇಳು ವೇಮು.

ಬೇವು ಮುರ ಎಲ್ಲೆಲ್ಲಿಯೂ ವಿಷವೇ ಇರುತ್ತದೆ. ವಿಷವುಳ್ಳ ಬೇವಿನ ಮರಕ್ಕೆ ಸಹಸ್ರಾರು ವರುಷ ಹಾಲು ಹಣಿಸಿದರೇನು ? ಅದರ ವಿಷವು ಹಿಂಗಿ ಸಿಹಿಯೆನಿಸಬಹುದೇ ? ಇಲ್ಲ.

ಮನುಷ್ಯನ ನೀಚತನವು ಬೇವಿನ ಮರದ ವಿಷದಂತೆ. ನೀಚನಾಗಿರುವ ಮನುಷ್ಯನಿಗೆ ಎಷ್ಟೆಂದು ತಿಳಿಸಿ ಹೇಳಿದರೇನು ? ಅವನು ತನ್ನ ನೀಚ ಗುಣವನ್ನು ಬಿಟ್ಟು ವಿವೇಕಿಯೆನಿಸಲಾರನು. ಉಚಿತವಾದುದನ್ನೇ ಆಯ್ದು ಮಾಡುವ ಬುದ್ಧಿ ಅವನಿಗೆ ಬರದು.

೧೩೧

ಪುಂಡನಧಿಕು ಜೇಸಿ ಪವರ:ಬುನಕುಬಂಪ ಬಾರಿಪೋವು ಗಾರ್ಯಭಂಗಮಗುನು
ಪಾರುವಾಡು ಬಂಟು ಪನಿಕಿರಾಡೆಂಡುನು, ವಿಶ್ವದಾಭಿರಾಮು ವಿನುರ ವೇಮು.

ಹೇಡಿ ಹುರುದುಂಬಿಸಿ ರಣರಂಗ ಕಳಿಸಲು,
ಓಡಿ ಹೋಗಿ ಕಾರ್ಯಭಂಗಗೈವ.
ಓಡಿ ಹೋಹ ಬಂಟ ಉಪಯೋಗಕೆ ಬಾರ
ವಿಶ್ವದಾಭಿರಾಮು ಕೇಳು ವೇಮು.

ರಣರಂಗಕ್ಕೆ ಹೋಗುವವನು ಧೀರನಾಗಿರಬೇಕು. ಸಾವು ಬಂದರೂ ಸರಿ; ಎನ್ನುವವನಾಗಿರಬೇಕು. ಆದರೆ ಹೇಡಿಯಾದವನನ್ನು ಸುಮ್ಮನೆ ಹುರುದುಂಬಿಸಿ, ರಣರಂಗಕ್ಕೆ ಕಳಿಸಿದರೆ, ಅವನು ಅಲ್ಲಿಯ ಭೀಕರ ದೃಶ್ಯವನ್ನು ದೂರದಿಂದ ಕಂಡು ಕಾಲಿಗೆ ಬುದ್ಧಿ ಹೇಳುವನು. ಕರ್ತವ್ಯಭಂಗ ಮಾಡುವನು. ಹೀಗೆ ಓಡಿ ಹೋಗುವ ಸೇನಾಳು ಯಾವ ಕಾರ್ಯದಲ್ಲಿಯೂ ಉಪಯೋಗಕ್ಕೆ ಬರನು. ಕಾರಣ ವೀರ ಯೊ.ಧರನ್ನೇ ಸೇನೆಗೆ ಭರತಿ ಮಾಡಿಕೊಳ್ಳಬೇಕು.

೧೩೨

ಕುಂಟಕುಕ್ಕಕೇಲ ಕುಂದೇಟಪರುವುಲು? ಪಿರಿಕಿಬಂಟುಕೇಲ ಬಿರುದುಗೊಡುಗ ?
ಮುಸಲಿ ಮುಂಡಕೇಲ ಮು.ಸಿಮುಸಿನಗವುಲು? ವಿಶ್ವದಾಭಿರಾಮ ವಿನುರ ವೇಮ.

ಕುಂಟ ನಾಯಿಗೇಕ, ಮೊಲದ ವೇಗದೋಟ?
ಹೇಡಿ ಬಂಟಿಗೇಕೆ, ಬಿರುದಿನಾಶೆ?
ಮುದುಕಿ ಮುಂಡೆಗೇಕೆ, ಹುಸಿಮುಸಿನಗೆಯಾಟ
ವಿಶ್ವದಾಭಿರಾಮು ಕೇಳು ವೇಮು.

ಎಲ್ಲರೂ ತಮ ತಮಗೆ ಉಚಿತವಾದುದನ್ನೇ ಮಾಡಬೇಕು. ಕೈಗೂಡದ ಕೋರಿಕೆಗಳನ್ನು ನೆನೆದರೆ ಪೂರೈಸಿಕೊಳ್ಳದೆ, ಚಿಂತೆಯೇ ಗತಿಯಾಗುವುದು.

ನಾಯಿಯು ಕುಂಟವಾಗಿರುವಾಗ ಅದು ಮೊಲದಂತೆ ಜಿಗಿತದ ಓಟ ಮಾಡಬೇಕೆಂದು ಬಗೆಯುವುದು ಮೂಢತನ. ಯುದ್ಧದ ಸೇನಾಳು ಅಂಜುಗುಳಿಯಾಗಿ ಹೇಡಿಯಾಗಿರುವಾಗ ವೀರತನದ ಪುರಸ್ಕಾರಕ್ಕಾಗಿ ನೀಡುವ ಬಿರುದು–ಭಾವಲಿಗಳಾಗಿ ಆಶೆಪಡುವದೂ ಸಲ್ಲದು ಹೇಗೆಂದರೆ, ವಯಸ್ಸು ಹೋಗಿ ಮುದಕಿಯಾದವಳು ಗಂಭೀರವಾಗಿರಬೇಕಲ್ಲದೆ ಹರೆಯದ ತರುಣಿಯರಂತೆ ಕುಲುಕುಲು ನಗುತ್ತ ಕೆಲೆಯುತ್ತ ತಿರುಗಬಾರದು. ಅವಳಿಗೆ ಅದು ಶೋಭಿಸದು.

೧೩೩

ಗುರುಬೃಹಸ್ಪತಿಯುನು ಗುಣಮಿಂಚುಕಯು ಲೇಕ, ಚಂದಮಾಮುಕಿಚ್ಚೆ ಶಾಪಮುಪುಡು,
ಗುರು:ಡು ಕೋಪವ ಮನಕೂಡದೆನ್ನಟಕನಿ, ವಿಶ್ವದಾಭಿರಾಮ ವಿನುರ ವೇಮ.

ಗುರುಬೃಹಸ್ಪತಿಯು ಸಹಜ ಗುಣವ ಮೀರಿ,
ಚಂದಮಾಮಗಿತ್ತ ಶಾಪ ತಾಪ;
ಗುರುವು ಕೋಪ ತೋರಬಾರದಯ್ಯ ಎಂದು;
ವಿಶ್ವದಾಭಿರಾಮ ಕೇಳು ವೇಮ.

ಬೃಹಸ್ಪತಿ ದೇವತೆಗಳ ಗುರು. ಗುರುವು ಶಾಂತನಾಗಿರಬೇಕು. ಮನೋವಿಕಾರಗಳನ್ನು ಮೀರಿದವನಾಗಿರಬೇಕು. ಸಂಸಾರ–ಸಂಬಂಧದ ನೋರೆ ಮೀರಿದ ವಿರಕ್ತನಾಗಿರಬೇಕು.

ಚಂದಮಾಮ ದೇವತೆ. ದೇವಗುರು ಬೃಹಸ್ಪತಿಯ ಶಿಷ್ಯ ತಾರೆ ಬೃಹಸ್ಪತಿಯ ಪತ್ನಿ. ಚಂದಮಾಮ ಗುರುಪತ್ನಿಯಲ್ಲಿ ಮೋಹ ತಾಳಿದ. ಚಂದ್ರವಂಶ ಬೆಳೆಯಿತು.

ತನ್ನ ಪತ್ನಿಯಲ್ಲಿ ತನ್ನ ಶಿಷ್ಯ ಮೋಹಗೊಂಡುದನ್ನು ಬೃಹಸ್ಪತಿ ತಿಳಿದ. ಸಿಡಿಮಿಡಿಗೊಂಡ. ಅಶಾಂತನಾದ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟ. ಚಂದಮಾಮನಿಗೆ ಶಾಪ ನೀಡಿದ.

ಶಾಪದ ಫಲವಾಗಿ ಚಂದಮಾಮ ತಿಂಗಳದ ಹದಿನೈದು ದಿನ ಕುಂದುತ್ತ ಹೋಗುತ್ತಾನೆ. ಕೊನೆಗೆ ಅಮವಾಸ್ಯೆಯ ದಿನ ಪೂರ್ಣ ಕಣ್ಮರೆಯಾಗುತ್ತಾನೆ. ಇದಕ್ಕೆ ಕೃಷ್ಣಪಕ್ಷವೆನ್ನುತ್ತಾರೆ ಮುಂದೆ ಹದಿನೈದು ದಿನದ ವರೆಗೆ ಬೆಳೆಯುತ್ತ ಹೋಗುತ್ತಾನೆ. ಕೊನೆಗೆ ಹುಣ್ಣಿಮೆಯ ಪೂರ್ಣಾಕಾರದಲ್ಲಿರುತ್ತಾನೆ. ಈ ಹದಿನೈದು ದಿನದ ಅವಧಿಗೆ ಶುಕ್ಲಪಕ್ಷವೆನ್ನುತ್ತಾರೆ. ಶಾಪದ ಪರಿಹಾರ್ಥವೆಂದು ಪೂಜಾದಿಗಳು ನಡೆಯುತ್ತವೆ. ಇವೆಲ್ಲ ಕಟ್ಟು ಕಥೆಗಳಷ್ಟೇ. ಸತ್ಯ ಹೇಳುವುದಾದರೆ, ಗುರುವೆನಿಸಿದವನು ಎಂದೂ ಕೋಪವನ್ನು ಪ್ರಕಟಿಸಕೂಡದು. ಮನಸ್ಸಿನಲ್ಲಿಯೂ ತರಕೂಡದು.

೧೩೪

ಆತ್ಮನೆರುಗನಿಸ್ತುತಿ ನಟ್ಟಟ್ಟು ಜೇಸಿನ, ವಾನಿಮೆಚ್ಚುವಾಡು ನಟ್ಟವಾಡೆ
ಮಕ್ಕೆಡಿದಿಯು ಬಾಡ ಮೂರ್ಖುಂಡು ಮೆಚ್ಚಡಾ? ವಿಶ್ವದಾಭಿರಾಮ ವಿನುರ ವೇಮ.

ಆತ್ಮವರಿಯದವಗೆ ಎಂಥ ಸ್ತುತಿಯೇನು?
ಅದನೆ ಮೆಚ್ಚುತಿಪ್ಪ; ಅಷ್ಟೇ ಸಾಡು
ಮೂಕಿ ಹಾಡಲಾಗ ಮೂಢ ಮೆಚ್ಚನೇನು?
ವಿಶ್ವದಾಭಿರಾಮು ಕೇಳು ವೇಮ.

ಆತ್ಮವನ್ನು ಅರಿತರೆ ಜಡದೇಹ ಬೇರೆ ಚೈತನ್ಯರೂಪಿ ಆತ್ಮ ಬೇರೆ ಎಂದು ಅರಿವಾಗುತ್ತದೆ. ಆತ್ಮವು ಪರಮಾತ್ಮನ ರೂಪವೇ ಎಂದೂ ಅರಿವಾಗುತ್ತದೆ. ಅದೇ ರೀತಿ ಸರ್ವವೂ ಪರಮಾತ್ಮನ ರೂಪವೇ ಎಂದೂ ಅರಿವಾಗುತ್ತದೆ. ಆಗ ಒಬ್ಬನು ಒಂದು ಕಾರ್ಯ ಮಾಡಿದಾಗ ಅದು ಕೇವಲ ಆತ್ಮ ಪ್ರೇರಣೆಯೆಸಿಸುವುದು. ಆ ಕಾರ್ಯವು ಜಗತ್ಕಲ್ಯಾಣದ ಗುರಿಯಿರಿಸಿಕೊಂಡು ಗೈದುದೆಂಬ ಭಾವವಿರುತ್ತದೆ. ಜಗತ್ಕಲ್ಯಾಣದ ಕಾರ್ಯದಿಂದ ಬೇರೆಯವರಿಗೆ ಉಪಕಾರ ಮಾಡಿದೆ;ಉಪಕೃತರು ತನ್ನ ಸ್ತುತಿಗೆಯ್ಯಬೇಕು ಎನ್ನುವ ವಿಚಾರ ಬರದು; ಬರಬಾರದು.

ಆದರೆ ಆತ್ಮವನ್ನು ಅರಿಯದವನಿಗೆ ಎಂಥ ಸ್ತುತಿಯಾದರೂ ಸಾಕು. ಅವನು ಅದರಿಂದ ಉಬ್ಬಿ ಹೋಗುವನು. ಅದನ್ನೇ ಮೆಚ್ಚಿಕೊಳ್ಳುವನು. ಅವನ ಹಾಡೇ ಅಷ್ಟು.

ಮೂಕಿಯೂ ಒಂದು ರೀತಿಯ ಸ್ವರಗೆಯ್ಯಬಲ್ಲಳು ಅದೇ ಅವಳ ಗಾನ. ಮೂಢನಾದ ಮನುಷ್ಯನಿಗೆ ಸಂಗೀತವೆಂದರೇನೆಂದು ತಿಳಿಯದು. ಅಂಥವನು ಮೂಕಿಯ ಸ್ವರವನ್ನೇ ಉತ್ತಮ ಹಾಡೆಂದು ಮೆಚ್ಚಿಕೊಳ್ಳುವನು.

ಆತ್ಮವರಿಯದವನು ಸ್ತುತಿ ಮೆಚ್ಚುವುದೂ, ಮೂಢನು ಮೂಕಿ–ಹಾಡನ್ನು ಮೆಚ್ಚುವುದೂ ಒಂದೇ ರೀತಿಯಾಗಿದೆ.

೧೩೫

ಖರಮುಪಾಲುದೆಚ್ಚಿ ಕಾಚಿಚಕ್ಕೆರವೇಯ, ಭಕ್ಷ್ಯವಗುನೆ? ಯೆನ್ನ ಭ್ರಷ್ಟುಡಟ್ಟಿ
ಎಂತಯೇನಿ ಜೆಪ್ಪಿಯೊಸಗಿಂಪ ಬೊಸಗುನೆ? ವಿಶ್ವದಾಭಿರಾಮು ವಿನುರ ವೇಮು

ಕತ್ತೆಹಾಲು ತಂದು ಕಾಸಿ ಸಿಹಿ ಬೆರೆಸಲು,
ಭಕ್ಷವೆಂತಪ್ಪುದು? ಅಂತೆ ಭ್ರಷ್ಟ–
ಗೆಷ್ಟು ವಿನು ಹೇಳಿದರೂ ತಿಳಿಯಲಾರ
ವಿಶ್ವದಾಭಿರಾಮು ಕೇಳು ವೇಮು

ಭ್ರಷ್ಟನು ಪತಿತನು; ನೀತಿಬಾಹಿರನು. ಅವನಿಗೆ ಎಷ್ಟೊಂದು ತಿಳಿಸಿ ಹೇಳಿದರೂ ತಿಳಿದುಕೊಳ್ಳಲಾರನು. ನೀತಿವಂತರೊಂದಿಗೆ ಹೊಂದಿಕೊಳ್ಳನು

ಹೇಗೆಂದರೆ, ಕತ್ತೆ ಹಾಲು ಬೆಳ್ಳಗಿರುವುದೆಂದು ಅದನ್ನು ತಂದು ಕಾಯಿಸಿ, ಸಕ್ಕರೆ ಬೆರೆಸಿದರೆ ಅದು ಭಕ್ಷಿಸಲು ಯೋಗ್ಯವೆನಿಸದು.

ಭ್ರಷ್ಟನಿಗೆ ತಿಳಿಹೇಳುವುದೂ, ಕತ್ತೆಯ ಹಾಲಿಗೆ ಸಕ್ಕರೆ ಬೆರೆಸುವುದೂ ಅಪ್ರಯೋಜನಕರ.

೧೩೬

ಪೊಟ್ಲಕಾಯರಾಯಿ ಪೊದಿಗಿತ್ಯಾಟನಗಟ್ಟ, ಲೀಲತೋಡ ವಂಕಲೇಕಪೆರುಗು
ಕುಕ್ಕತೋಕಗಟ್ಟ ಗುದುರುನಾಚಕ್ಕಗಾ, ವಿಶ್ವದಾಭಿರಾಮು ವಿನುರ ವೇಮು.

ಪಡುವಲಕಾಯಿಯಡಿ ಕಲ್ಲು ಕಟ್ಟಿಲಾಗ
ಡೊಂಕು ತೊರೆದು ಬೆಳೆಯುತಿಹುದು;
ನಾಯಿಬಾಲಕಟ್ಟಲೆಂತು ನೇರವಹುದು?
ವಿಶ್ವದಾಭಿರಾಮು ಕೇಳು ವೇಮು

ತಿದ್ದಲು ಶಕ್ಯವಾದುದನ್ನು ತಿದ್ದಬಹುದು. ತಿದ್ದಲು ಶಕ್ಯವಾಗದುದನ್ನು ತಿದ್ದುವುದೆಂತು ?

ಪಡುವಲಕಾಯಿಯನ್ನು ಅದರಷ್ಟಕ್ಕೇ ಬಿಟ್ಟರೆ ಅದು ಡೊಂಕು ಡೊಂಕಾಗಿ ಬೆಳೆಯುತ್ತದೆ. ಆದರೆ ಅದರ ಕೆಳಕ್ಕೆ ದಾರದಿಂದ ಕಲ್ಲು ಕಟ್ಟಿದರೆ ಆ ಕಲ್ಲಿನ ಭಾರದಿಂದ ಪಡುವಲಕಾಯಿಯು ನೇರವಾಗಿ ಬೆಳೆಯುತ್ತದೆ.

ಆದರೆ ನಾಯಿಯ ಬಾಲವೂ ಡೊಂಕಾಗಿರುತ್ತದೆ. ಅದಕ್ಕೆ ಕಲ್ಲು ಕಟ್ಟಿದರೆ ಅದೇನು ನೀಟಾಗಬಲ್ಲುದೆ ? ಇಲ್ಲ.

೧೩೭

ಚಂಡಬೂತುಲಾಡು ಪರಮುನೀಚುಂಡೆನ್ನ, ದಂಡಿವಾರಿಗೊಪ್ಪ ತಾನೆರುಗುನೆ?
ಬಂದನಂಬುಘನತ ಪಂದಿಯೇ ನೆರುಗುನು? ವಿಶ್ವದಾಭಿರಾಮು ವಿನುರ ವೇಮು

ಭಂಡ ನುಡಿಯಾಡುವ ಪರಮು ನೀಚ ನರಗೆ
ದೊಡ್ಡ ಜನರ ಹಿರಿಮೆ ತಿಳಿವುದೆಂತು?
ಚಂದನದ ಘನತೆಯ ಹಂದಿಯರಿವುದೆಂತು?
ವಿಶ್ವದಾಭಿರಾಮು ಕೇಳು ವೇಮು

ಹೊಣೆಯರಿತು ನುಡಿಯುವುದು ಹೊಣೆಗಾರಿಕೆಯ ಮಾತು. ಉತ್ತರ. ಉತ್ತರದಾಯಿತ್ವ ಇಲ್ಲದೆ ಇರುವ ಮಾತು ಭಂಡ ಮಾತು. ಅತಿ ನೀಚನಾದ ಮನುಷ್ಯನು ಹೊಣೆಗೇಡಿಯಾಗಿ ಭಂಡ ನುಡಿ ಆಡುತ್ತಾನೆ. ಇಂಥ ನೀಚನಿಗೆ ದೊಡ್ಡ ಮನಸ್ಸಿನ ಜನರ ಘನತೆ ತಿಳಿಯಲಾರದು. ಏಕೆಂದರೆ ತನ್ನ ಅಪದ್ದ ವಚನಗಳನ್ನೇ ಸತ್ಯವೆಂದು ಸಾಧಿಸುವ ಭಂಡನಿಗೆ ದೊಡ್ಡವರ ಸತ್ಯ ವಚನಗಳ ಮಹಿಮೆಯ ಅರಿವಾಗುವುದು ಅಸಾಧ್ಯ. ಹೇಗೆಂದರೆ ಹಂದಿಗೆ ಅಸಹ್ಯ ವಾಸನೆಯುಳ್ಳ ಹೇಸುಗೆಯೇ ಸೇರುತ್ತದೆ. ಆದರೆ ಸುಗಂಧ ಬೀರುವ ಶ್ರೀಗಂಧವ ಮಹತ್ವ ಹಂದಿಗೆ ತಿಳಿಯಲಾರದು. ಒಳಿತನ್ನು ತಿಳಿಯುವ ಸಂಸ್ಕಾರವೇ ಅದಕ್ಕಿರುವದಿಲ್ಲ.

೧೩೮

ಕುಲಮುನೀರುಜೇಸಿ ಗುರುವುನುವಧಿಯಿಂಪ, ಬೊಸಗ ನೇನುಗನುಚು ಬೊಂಕು ಬೊಂಕೆ
ಪೇರು ಧರ್ಮರಾಜು ಪೇನುವೇಪವಿತ್ತಯಾ ವಿಶ್ವದಾಭಿರಾಮ ವಿನುರ ವೇಮು.

ಕುಲ ನೀರುಗಾಣಿಸಿ, ಗುರುವಧೆಯನೆ ಬಯಸಿ,
ಕೂಗಿದಾನೆಯೆಂದು ಎಲ್ಲ ಸುಳ್ಳು,
ಹೆಸರು ಧರ್ಮರಾಜ, ಅದೆಂತು ಪಾವನವು?
ವಿಶ್ವದಾಭಿರಾಮು ಕೇಳು ವೇಮು.

ಕೌರವ–ಪಾಂಡವರ ನಡುವೆ ರಾಜ್ಯಕಲಹವಾಗಿ 'ಭಾರತ ಯುದ್ಧ' ನಡೆಯಿತು. ಪಂಚಪಾಂಡವರಲ್ಲಿ ಹಿರಿಯನಾದವ ಧರ್ಮರಾಜ. ಜೂಜಿನ ಹುಚ್ಚಿನಲ್ಲಿ ಬಂಧುಗಳನ್ನೂ, ರಾಜ್ಯವನ್ನೂ, ಸ್ವಂತ ಹೆಂಡತಿಯನ್ನೂ ಪಣಕ್ಕೆ ಹಚ್ಚಿದ ವಿಚಿತ್ರ ಜೂಜುಗಾರ ಅರಸು. ಆದರೂ, ಧರ್ಮರಾಜನಲ್ಲಿ ಕೆಲ ಒಳ್ಳೆಯ ಅಂಶಗಳೂ ಇವೆಯೆಂದು ಪ್ರತೀತಿ ಇತ್ತು. ಅವನ ಅತಿ ಹೆಚ್ಚಿನ ಸದ್ಗುಣವೆಂದರೆ ಸುಳ್ಳಾಡದಿರುವುದೇ ಆಗಿತ್ತು.

ಭಾರತ ಯುದ್ಧದ ಸಮಯ. ದ್ರೋಣಾಚಾರ್ಯರ ಸೇನಾಪತ್ಯ ವಹಿಸಿ ಹಲ ಅಕ್ಷೋಹಿಣಿ ಸೈನ್ಯ ಕಟ್ಟಿಕೊಂಡು ಕೌರವರ ಕಡೆಗೆ ಇದ್ದರು. ಪಾಂಡವರು ವೈರಿ ಸೇನೆ ನೋಡಿ ದಂಗು ಬಡಿದರು. ಸೋಲು ನಿಶ್ಚಿತವೆಂದು ಹೆದರಿದರು. ತಂತ್ರ ಹೂಡಿದರು. 'ಅಶ್ವತ್ಥಾಮ' ಎಂಬ ಹೆಸರಿನ ಆನೆ ಕೊಂದರು ''ಅಶ್ವತ್ಥಾಮೋ ಹತ:'' ಎಂದು ಧರ್ಮರಾಯನಿಂದ ಜೋರಾಗಿ ನುಡಿಸಿದರು. ದ್ರೋಣಾಚಾರ್ಯ ಬೇಸ್ತು ಬಡಿದ. ತಂದೆಯೆದುರು ಮಗ ಸಾಯುವುದೇ? ಆದರೆ ಧರ್ಮರಾಜನ ವಾಕ್ಯ; ಸತ್ಯವೇ ಸರಿ; ಎಂದು ಬಿಲ್ಲುಬಾಣ ಚೆಲ್ಲಿದ. ಆದರೆ ಇತ್ತ ಧರ್ಮರಾಯ ಮೆತ್ತಗೆ ಸಣ್ಣ ಧ್ವನಿಯಲ್ಲಿ, ''ನರೋವಾ, ಕುಂಜರೋವಾ'' ''ಮಾನವನೋ ಇಲ್ಲವೇ ಆನೆಯೋ'' ಎಂದ. ಆದರೇನು? ಗುರುವನ್ನು ಕೊಲ್ಲುವ ಉದ್ದೇಶವಿತ್ತು. ಕುಲದ ಹೆಸರೂ ಹಾಳಾಯ್ತು. ಮೇಲೆ ಧರ್ಮರಾಜನೆಂದುಕೊಂಡರೆ ಆ ಹೆಸರು ಪವಿತ್ರವೆಂತೆನಿಸಬಲ್ಲದು ?

ವಿನ್ನ ಸುದ್ದಿಕೊಂತ ವಿನಸಿಸುದುಲುಕೊನ್ನಿ, ವಿಂತಸುದ್ದುಲೆನ್ನೊ ವಿನಗಜೆಪ್ಪು
ತಾನುಗನ್ನಯಟ್ಟಿ ದಾಂಬಿಕುಂ ಡೆಪ್ಪುಡು, ವಿಶ್ವದಾಭಿರಾಮು ವಿನುರ ವೇಮು.

ಕೇಳಿಕೊಂಡ ಸುದ್ದಿ ಕೆಲವು; ಕೇಳದಿದ್ದ,
ಸುದ್ದಿ ಕೆಲವು ಇಹವು; ಏನೊ ಕೇಳ್ದ ?
ಭೋ ಕೇಳಿ ಪೇಳುವೆ, ಎನ್ನುತಿಹ ಡಾಂಭಿಕ
ವಿಶ್ವದಾಭಿರಾಮ ಕೇಳು ವೇಮ.

ತಾನು ತಿಳಿಯದಿರುವುದನ್ನು ಗೊತ್ತು ಮಾಡಿಕೊಂಡವ ಜಾಣ. ತನಗೆ ತಿಳಿದುದನ್ನೂ ಗೊತ್ತು ಮಾಡಿಕೊಳ್ಳದವ ಕೋಣ ಎಂಬ ನುಡಿಯಿದೆ.

ಇತರರಿಂದ ಕೆಲ ಸುದ್ದಿಗಳನ್ನು ಕೇಳಿಕೊಂಡು, ಕೇಳದೇ ಇರುವ ಕೆಲ ವಿಷಯಗಳನ್ನು ತಾನೇ ಕಲ್ಪಿಸಿಕೊಂಡು, ಇನ್ನುಳಿದ ಹಲವಾರು ವಿಷಯಗಳ ಬಗ್ಗೆ ಏನನ್ನೊ ಕೇಳಿಕೊಂಡು, ತಾನೇ ಇತರರಿಗೆ ತಿಳಿಸುವಷ್ಟು ಜಾಣನಾದೆನೆಂದು ಭಾವಿಸಿ, ಎಲೈ ಕೇಳಿರಿ. ತಿಳಿಸಿ ಹೇಳುವೆ ಎನ್ನುವವನೇ ಡಾಂಭಿಕನು.

೧೪೦

ಪುಡವಿದಿರಿಗಿ ಪಡಯು ಪುಣ್ಯಂಬುಲೆಲ್ಲನು, ಕಲ್ಗು ಸಾಧುಜನುಲಗನ್ನಯಪುಡೆ,
ಪಡಿನ ನೀರು ನದಿನ ಗಡುದೇಟಿಯೈಯುಂಡು, ವಿಶ್ವದಾಭಿರಾಮು ವಿನುರ ವೇಮು.

ಪೊಡವಿ ತಿರುಗಿ ಪಡೆವ ಪುಣ್ಯರಾಶಿಯೆಲ್ಲ,
ಸಾಧು ಜನರ ನೋಡಿದೊಡನೆ ಲಭ್ಯ
ಬಿದ್ದ ನೀರು ನದಿ ತಳದೊಳಿಂಗಲು ಶುದ್ಧ
ವಿಶ್ವದಾಭಿರಾಮು ವಿನುರ ವೇಮು.

ತೀರ್ಥ ಕ್ಷೇತ್ರ ಯಾತ್ರೆಯೆಂದು ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ತಿರುಗಿದರೆ, ಬಹಳಷ್ಟು ಪುಣ್ಯ ಬರುವುದೆಂಬುದು ಕಲ್ಪನೆಯಷ್ಟೇ. ಪ್ರವಾಸದಿಂದ ಹೊಸ ವಿಷಯಗಳ ಅರಿವಾಗಿ, ನವೀನ ಅನುಭವ ಹೊಂದಿ ಬುದ್ಧಿ ವಿಕಾಸಗೊಳ್ಳುವುದು. ಇದುವೇ ಪುಣ್ಯ.

ಆದರೆ ಸಾಧು ಜನರನ್ನು ಸಂದರ್ಶಿಸಿದರೂ ಅವರ ನಿರ್ಲಿಪ್ತ ಭಾವ, ಸಾದಾ ಜೀವನ ಇತ್ಯಾದಿ ವಿಷಯಗಳ ಬಗ್ಗೆ ನಮಗೆ ಮನದಟ್ಟಾಗುವುದು. ಮೇಲಾಗಿ ಸಾಧು ಜನರು ನೂತನ ವಿಷಯ ಜ್ಞಾನ ಮಾಡಿಕೊಡುವರು. ವಿವೇಕವನ್ನೂ ಬಡಿದೆಬ್ಬಿಸುವರು. ಇದೂ ಪುಣ್ಯರಾಶಿ. ಮಳೆಯ ನೀರು ಮೇಲಿಂದ ಬಿದ್ದು ನದಿ ತಳದಲ್ಲಿ ಸೇರಿಕೊಳ್ಳುವುದು. ಇಂಗಿದ ನೀರೇ ತೋಡಿದ ಹೊಂಡಗಳಲ್ಲಿ ಸೆಲೆಯಾಗಿ ಹರಿದು ಬರುತ್ತದೆ. ಪವಿತ್ರ ತೀರ್ಥವೆನಿಸುತ್ತದೆ. ಅದೇ ರೀತಿ ಪ್ರವಾಸದ ಅನುಭವವಾಗಲಿ, ನೂತನ ವಿಷಯಜ್ಞಾನವಾಗಲಿ ಸಾಧು ಜನರಲ್ಲಿ ಹುಗಿದುಕೊಂಡು ಪ್ರಕಟವಾಗುತ್ತದೆ.

೧೪೧

ಬುಂಟವಲೆನು ಲೇವ ಬಂಡಿತಮ್ಮುಮ್ಮುಂಡು, ಸಾಧು ಪಂಡಿತುಂಡು ಶಾಂತುಡಗುನು
ಕುಕ್ಕಮೊರುಗ ನೇಮಿ ಗುರ್ರಮುನಕುಲೆಕ್ಕ ? ವಿಶ್ವದಾಭಿರಾಮು ವಿನುರ ವೇಮು.

ಬಾಯಿಬಡಿಯಲೊಬ್ಬ ಭಂಡ, ಪಂಡಿತೆಂದು
ನ್ಯಾಯವಂತ ಸಾಧುಸಂತ ಶಾಂತ ;
ನಾಯಿಬೊಗಳಲಾಗ ಕುದುರೆಗೇನು ಲೆಕ್ಕ ;
ವಿಶ್ವದಾಭಿರಾಮ ಕೇಳು ವೇಮ.

ಭಂಡನೊಬ್ಬನು ತಾನೇ ಪಂಡಿತನೆಂದು ಬಾಯಿಬಡಿದರೆ, ಸತ್ಯದ ಸಮೀಪಕ್ಕೆ ಕರೆದೊಯ್ಯುವ ನ್ಯಾಯವಂತ ಸಾಧು ಸಂತರು, ಸುಮ್ಮನಾಗಿಬಿಡುತ್ತಾರೆ. ಅಂದಮಾತ್ರಕೆ ಭಂಡನಮಾತಿಗೆ ಮನ್ನಣೆಯಿತ್ತಹಾಗಲ್ಲ. ಇದರ ತಾತ್ಪರ್ಯವಿಷ್ಟೇ: ನಾಯಿಬೊಗಳುತ್ತಿರುತ್ತದೆ, ಆದರೆ ಕುದುರೆಯು ಅದನ್ನು ಲೆಕ್ಕಿಸದೆ ತನ್ನಷ್ಟಕ್ಕೆ ತಾನು ಹೋಗುತ್ತದೆ.

೧೪೨

ಮಾಲಕನ್ನಿಯಲಕು ಮಂಚಿರೂಪಂಬುನ್ನ, ಮುಟ್ಟಿನೇ ? ತ್ರಿಶಂಕು ಪಟ್ಟನಾಡು ;
ಕಾನಿಪನುಲ ಜೇಯ, ಘನುಲಾಸಪಡುದುರಾ ? ವಿಶ್ವದಾಭಿರಾಮು ವಿನುರ ವೇಮು

ಹೊಲತಿ ಕನ್ನೆಗೊಳ್ಳಿ ರೂಪು ಇದ್ದರೇನು ?
ತ್ರಿಶಂಕುಸುತ ಹರಿಶ್ಚಂದ್ರ ಮೆಚ್ಚ ?
ಹೀನಕಾರ್ಯ ಮಾಡಿ, ಘನನಿಗಾಸೆಯೇಕೆ?
ವಿಶ್ವದಾಭಿರಾಮು ಕೇಳು ವೇಮ.

ಹರಿಶ್ಚಂದ್ರ ತ್ರಿಶಂಕುವಿನ ಮಗ. ವಿಶ್ವಾಮಿತ್ರ ಹರಿಶ್ಚಂದ್ರನ ಸತ್ಯಪಾಲನೆಯ ಪರೀಕ್ಷೆಗೆಂದು ನಾನಾ ತರದ ಕಷ್ಟ ನೀಡತೊಡಗಿದ. ಅವನನ್ನು ಸತ್ಯ ಧರ್ಮಮಾರ್ಗದಿಂದ ಪರಾವೃತ್ತಗೊಳಿಸಲು ಅನೇಕ ಆಶೆ–ಆಮಿಶ ತೋರಿದ. ಹರಿಶ್ಚಂದ್ರನಿಗೆ ಮಾರ್ಗದಲ್ಲಿ ಸುಂದರ ಹೊಲತಿ ಕನ್ಯೆಯರು ಭೆಟ್ಟಿಯಾಗುತ್ತಾರೆ. ತಮ್ಮನ್ನು ವರಿಸಲು ಬಗೆ ಬಗೆಯಾಗಿ ಬೇಡುತ್ತಾರೆ. ತಮ್ಮ ರೂಪ-ಲಾವಣ್ಯದ ಪ್ರದರ್ಶನ ಮಾಡುತ್ತಾರೆ. ಆದರೆ ಹರಿಶ್ಚಂದ್ರ ಅವರಿಗೆ ಮಣಿಯುವದಿಲ್ಲ. ತನಗೆ ಸರಿಯೆನಿಸದ ಹೊಲತಿ ಕನ್ನೆಯರೊಡನೆ ಭೋಗದಾಸೆ ತೋರುವದಿಲ್ಲ. ಅದು ಹೀನಕಾರ್ಯವೆಂದು ಅವನ ಎಣಿಕೆ. ಘನನಾದ ಹರಿಶ್ಚಂದ್ರ ರಾಜನಿಗೆ ಹೀನ ಕಾರ್ಯ ಮಾಡುವಲ್ಲಿ ಆಶೆ ಹುಟ್ಟಲಿಲ್ಲವಷ್ಟೇ. ಎಲ್ಲರೂ ಹರಿಶ್ಚಂದ್ರನನ್ನು ಅನುಸರಿಸಬೇಕು.

೧೪೩

ವಿದ್ಯಲೇನಿವಾಡು ವಿಬುಧುಲಸಭಲೋನ, ನುಂಡಗಾನೆ ಪಂಡಿತುಂಡುಗಾಡು
ಕೊಲನಿ ಹಂಸಲಕಡ ಕೊಕ್ಕೆ ರಯುನ್ನಟ್ಲು, ವಿಶ್ವದಾಭಿರಾಮ ವಿನುರ ವೇಮ.

ವಿದ್ಯೆ ಇರದೆ ವಿವಿಧ ಸಭೆಗಳೊಳಿರಲೇನು ?
ಪಂಡಿತ ತಾನೆಂತು ? ತಿಳಿದು ನೋಡೆ ?
ಕೊಳದಿ ಹಂಸ ಮತ್ತೆ ಬಕಗಳಿಪ್ಪ ರೀತಿ
ವಿಶ್ವದಾಭಿರಾಮ ಕೇಳು ವೇಮ

ವಿದ್ಯೆ ಉಳ್ಳವನು ಪಂಡಿತ. ಬೇರೆ ಬೇರೆ ಸಲಹಾ ಸಭೆಗಳಲ್ಲಿ ಇರಬೇಕಾದವನು ಪಂಡಿತರು. ಆದರೆ ವಿದ್ಯೆ ಇಲ್ಲದವನು ಬೇರೆ ಬೇರೆ ಸಭೆಗಳಲ್ಲಿ ಹೋಗಿ ಕುಳಿತರೆ ಬಂದ ಭಾಗ್ಯವೇನು? ವಿಚಾರಿಸಿ ನೋಡಿದರೆ, ವಿದ್ಯೆ ಉಳ್ಳವರು ಇರುವ ಸಭೆಯಲ್ಲಿ ವಿದ್ಯೆ ಇಲ್ಲದವನು ಹೋಗಿ ಕುಳಿತರೆ, ಒಂದೇ ಸರೋವರದಲ್ಲಿ ಹಂಸಗಳೂ ಬಕಗಳೂ ಕೂಡಿ ಇದ್ದಂತೆ ಆಗುವುದಷ್ಟೇ. ಹಂಸದ ಮಾನ ಹಂಸಕ್ಕೆ; ಬಕದ ಮಾನ ಬಕಕ್ಕೆ.

೧೪೪

ವ್ಯಾಧಿಕಲಿಗನೆನಿ ವೈದ್ಯುನಿಚೇತನು, ಮಂದುದಿನಕಕಾನಿ ಮಾನದೆಂದು
ಚೆಂತದೀಪಮಿಡಕ ಚೀಕಟಪಾಯುನಾ ? ವಿಶ್ವದಾಭಿರಾಮ ವಿನುರ ವೇಮ.

ವ್ಯಾಧಿಬಂಡಕಾಲ ವೈದ್ಯನಿತ್ತಮದ್ದು
ತಿನ್ನದಿರಲು ವಾಸಿಯಾಗದೆಂದು
ಅಂತೆದೀಪ ಉರಿಯೆ, ಕತ್ತಲು ಸರಿಯದೇನು?
ವಿಶ್ವದಾಭಿರಾಮ ಕೇಳು ವೇಮ

ರೋಗವು ಬಂದ ನೇಳೆ ವೈದ್ಯನು ಕೊಟ್ಟ ಔಷಧ ಸೇವಿಸದೆ ಇದ್ದರೆ ರೋಗವು ಎಂದೂ ವಾಸಿಯಾಗದು. ಔಷಧ ಸೇವನೆಯಿಂದ ಮಾತ್ರ ರೋಗಿಗುಣಮುಖವಾಗುವನು. ಹೇಗೆಂದರೆ, ಕತ್ತಲು ಹಬ್ಬಿದಾಗ ದೀಪ ಉರಿಯತೊಡಗಿದರೆ, ಕತ್ತಲೆ ತಂತಾನೇ ಮಾಯವಾಗುತ್ತದೆ.

೧೪೫

ಭತ್ರಮುನ್ನ ದಗಿಛಾಯ ಯೇರ್ಪಡುಚುಂಡು, ಶಾಸ್ತ್ರ ಮೆರುಗದಗಿನ ಜ್ಞಾನ ವೊದವು,
ಅಭಯುನ್ನವಾನಿ ಕಂಡಯುಂಡನುಗದಾ ? ವಿಶ್ವದಾಭಿರಾಮ ವಿನುರ ವೇಮ.

ಕೊಡೆಯು ತಾನೀವುದು ಕಡುಸುಖಕರ ನೆರಳು
ಶಾಸ್ತ್ರವರಿಯೆ ತನಗೆ ಶುದ್ಧಜ್ಞಾನ
ತಂದೆ ಇಪ್ಪವಂಗೆ ರಕ್ಷೆ ತಪ್ಪದೆಂದು
ವಿಶ್ವದಾಭಿರಾಮ ಕೇಳು ವೇಮ.

ಕೊಡೆಯು ಹಿಡಿಯುವವನಿಗೆ ಸುಖಕರ ನೆರಳು ನೀಡುವುದು. ಶಾಸ್ತ್ರಗಳನ್ನು ತಿಳಿದು ಕೊಂಡವನಿಗೆ ಶುದ್ಧವಾದ ಜ್ಞಾನ ಉಂಟಾಗುವುದು. ಇದೆಲ್ಲ ತಂದೆ ಇರುವವನಿಗೆ ಎಂದಿಗೂ ರಕ್ಷಣೆ ತಪ್ಪದಂತೆ ನಿಶ್ಚಿತ ಫಲಕಾರಿಯಾದವುಗಳು.

೧೪೬

ಚೀಮುಕಾರುಪುಂಟ ಜೇದಲುಪಟ್ಟನಯಿಂಟ, ಪುರುಗು ಪಟ್ಟಗುಂಟ ಬುಸುಲಕಂಟ
ಬಿಡ್ಡ ಚೀಕು ಚಂಟ ಬಿಗಿಯುಂಡನೇರ್ಚುನಾ? ವಿಶ್ವದಾಭಿರಾಮ ವಿನುರ ವೇಮ

ಇರುವೆ ಶ್ರಮದ ಫಲಕೆ ಗೆದ್ದಲಂಟಿದಲ್ಲಿ
ಹುತ್ತು ಬೆಳೆದು ಹಾವು ಬುಸ್ಸೆನುವುದು
ತನಯ ರೋಗಿಯಿರಲು ತಿಯವು ತಿಳಿಸೆ ಕೇಡು
ವಿಶ್ವದಾಭಿರಾಮ ಕೇಳು ವೇಮ.

ಇರುವೆ ಶ್ರಮಜೀವಿ. ಸದಾ ಕರ್ತವ್ಯತತ್ಪರವಾಗಿರುವ ಪ್ರಾಣಿ. ಅದು ಅತ್ತಿತ್ತ ಆಲೆದು ಮಣ್ಣಿನ ಕಣಗಳನ್ನಾಯ್ದು ತರುತ್ತದೆ. ಆದರೆ ಆ ಮಣ್ಣಿನ ಮುದ್ದೆಗೆ ಗೆದ್ದಲು ಹುಳು ಅಂಟಿಕೊಳ್ಳುತ್ತವೆ, ಹುತ್ತಿನ ನಿರ್ಮಾಣವಾಗುತ್ತದೆ. ಕೊನೆಗೆ ಹಾವು ಹುತ್ತಿನಲ್ಲಿ ಹೊಕ್ಕು ತನ್ನ ನಿವಾಸವನ್ನಾಗಿ ಮಾಡಿಕೊಳ್ಳುವುದು. ಒಳಗೆ ಕುಳಿತು, ಬುಸುಗುಟ್ಟುವುದು. ಅಶಕ್ತನೂ ಅಬಲನೂ ಆದವನು ತನ್ನಿಂದ ಪೂರ್ಣಗೊಳಿಸಲಾರದ, ತಾನು ಪ್ರಯೋಜನ ಪಡೆಯಲಾರದ ಕಾರ್ಯವನ್ನು ಕೈಕೊಳ್ಳಕೂಡದು.

ಮಗನು ರೋಗಿಯಾಗಿದ್ದರೆ ಅವನಿಗೆ ಹಲವಾರು ನಿಯಮಗಳನ್ನು ಮಾಡಹೇಳುವುದು ತಪ್ಪು.

೧೪೭

ಕಾನನಂಬು ಜೇರಿ ಕಡುಶ್ರಮನೊಂದಿನ, ಯಾನಲುಂಡು ರಾಜ್ಯಮೊಂದೆ ಮರಲ
ಗಷ್ಟಮುಲಕುನೋರ್ವ ಗಲ್ಲವಾಸುಖಮುಲು? ವಿಶ್ವದಾಭಿರಾಮ ವಿನುರ ವೇಮ.

ಕಾಡೊಳಲೆದು ಮತ್ತೆ ಭೂರಿ ಕಷ್ಟ ಸೋಸಿ,
ರಾಜ್ಯಸುಖ ಪಡೆಯಲಿಲ್ಲವೇ ನಳ?
ಕಷ್ಟನಷ್ಟ ಉಣದೆ ಸುಖವಹೊಂದಲಾರ
ವಿಶ್ವದಾಭಿರಾಮ ಕೇಳು ವೇಮ.

ನಳರಾಜ ವಿಕೃತರೂಪಿಯಾದ; ಅಡವಿ ಅಡವಿ ತಿರುಗಿದ; ಕಂಡಾಬಟ್ಟಿ ಕಷ್ಟ ಸೋಸಿದ. ಆದರೆ ಈ ಎಲ್ಲ ಕಷ್ಟ–ನಷ್ಟ ಸೋಸಿದ ನಂತರ ಜನ ಅವನ ಸಹನೆ ಮೆಚ್ಚಿತು. ನಳ ಮರಳಿ ರಾಜನಾದ.

ಯಾರೇ ಆಗಲಿ ಸುಖ ಪಡೆಯಲು ಬಯಸಿದರೆ, ಕಷ್ಟ ಸಹಿಸಲೂ ಸಿದ್ಧವಾಗಿರಬೇಕು. ಕೈ ಕೆಸರಾದರೆ ಬಾಯಿ ಮೊಸರು.

೧೪೮

ವಸುಧೆನೆಡ್ಡಿಕೇಲ ವೈದ್ಯಕಾರ್ಯಂಬುಲು? ಗ್ರುಡ್ಡಿವಾನಿಕೇಲ ಗುನುಗುಹರಾಗು?
ಬುಡ್ಡವಾನಿಕೇಲ ಪೋ ಗುಪ್ಪಿಗಂತುಲು? ವಿಶ್ವದಾಭಿರಾಮ ವಿನುರ ವೇಮ.

ಇಳೆಯೊಳು ಹೆಳವಂಗೆ ವೈದ್ಯಕಾರ್ಯವೇಕೆ?
ಅಂಧಕಂಗೆ ಏಕೆ ಶ್ರಮದ ಓಟ?
ಷಂಡಗೇಕೆ? ತೊಲಗು ಜೀಕು ಹಾರುವಾಟ
ವಿಶ್ವದಾಭಿರಾಮ ಕೇಳು ವೇಮ.

(ವಾಹನಸೌಕರ್ಯಗಳ ವಿಶೇಷ ಸೌಕರ್ಯವಿಲ್ಲದ ಹದಿನೈದನೇಯ ಶತಮಾನದಲ್ಲಿ ವೈದ್ಯರು ರೋಗಿ ಪರೀಕ್ಷೆಗೆ ಊರೂರು ಅಲೆಯಬೇಕಿತ್ತು. ಇದಲ್ಲದೆ, ಔಷಧಿ ದೊರಕಿಸಲು ಗುಡ್ಡವೇರಿ ಸುತ್ತಬೇಕಿತ್ತು. ಕಾರಣ,) ಈ ಜಗತ್ತಿನಲ್ಲಿ ಹೇಳವನಾದ ಮನುಷ್ಯನಿಗೆ ವೈದ್ಯ ಕಾರ್ಯದ ಗೊಡವೆ ಏಕೆ? ಕಣ್ಣು ಕಾಣದ ಕುರುಡನಿಗೆ ಪರಿಶ್ರಮದಿಂದ ವೇಗದ ಓಡಾಟವೇಕೆ? ಅದೇ ರೀತಿ, ಜೀಕಾಟ ಹಾರಾಟಗಳಿಂದ ಶಕ್ತಿ ಪ್ರದರ್ಶನ ಮಾಡುವವರು ಶಕ್ತಿವಂತರು ವೀರ್ಯವಂತರು. ಆದರೆ ಷಂಡನಾದವನಿಗೆ ಈ ಜೀಕಾಟ ಹಾರಾಟವೇಕೆ? ತಮಗೆ ಸಲ್ಲದುದನ್ನು ಮಾಡುವ ಗೋಜಿಗೆ ಯಾರೂ ಹೋಗಬಾರದು.

೧೪೯

ರಜ್ಜುಲಾಡರಾದು ರಣಭೂಮಿಲೋಪಲ, ಬುಜ್ಜಗಿಂಪರಾದು ಬೊಂಕುವಾನಿ
ನೊಜ್ಜತೋಡವಾದು ಲೋನರಂಗಮಾನರಾ, ವಿಶ್ವದಾಭಿರಾಮ ವಿನುರ ವೇಮ.

ಅಂತ:ಕಲಹ ಹೊಲ್ಲ ಯುದ್ಧ ಭೂಮಿಯಲ್ಲಿ
ಅಪದ್ಧನುಡಿವನೊಡನೆ ನಲುಮೆ ಹೊಲ್ಲ
ಒಣಮಾತು ನುಡಿವನ ಜೊತೆಯು ತನಗೆ ಹೊಲ್ಲ
ವಿಶ್ವದಾಭಿರಾಮ ಕೇಳು ವೇಮ

ಯುದ್ಧ ಭೂಮಿಗೆ ಹೋದ ಮೇಲೆ ತಮ್ಮ ತಮ್ಮಲ್ಲಿ ಜಗಳವಾಡಬಾರದು. ನೀತಿ ನಿಯಮ ಬಿಟ್ಟು ಮಾತನಾಡುವವನೊಡನೆ, ಪ್ರೀತಿ ತೋರುವುದು ಕೇಡು. ಮನಸ್ಸಿಲ್ಲದೆ, ಕೇವಲ ಮಾತಿಗಾಗಿ ಮಾತು ಬಳಸುವವನೊಡನೆ ಸಹನಾಸ ಮಾಡುವುದೂ ಕೇಡು.

೧೫೦

ಮಾಟಜಿಪ್ಪನಿನಿ ಮನುಜುಡು ಮೂರ್ಖುಡು, ಮಾಟವಿನ್ನ ನರುಡು ಮಾನ್ಯುಡಗುನು
ಮಾಟವಿನಗಜಿಪ್ಪ ಮಾನುಟಕೂಡದು ವಿಶ್ವದಾಭಿರಾಮ ವಿನುರ ವೇಮ.

ಮಾತನಾಲಿಸದಿಹ ಮನುಜ ಮುನ್ನ ಮೂರ್ಖ
ಮಾತನಾಲಿಸುತಿಹ ಮತ್ತೆ ಮಾನ್ಯ
ಮಾತನಾಲಿಸುವನ ಸಂಗ ತೊರೆಯಬೇಡ
ವಿಶ್ವದಾಭಿರಾಮ ಕೇಳು ವೇಮ

ನಾವು ಆಡುವ ಮಾತನ್ನು ಕೇಳದೆ, ಇರುವ ಮನುಷ್ಯನು ಮೊದಲು ಮೂರ್ಖನೆಂದು ಗಣಿಸಬೇಕು. ಯಾರು ನಮ್ಮ ಮಾತನ್ನು ಸಹನೆ ತೋರಿ ಕೇಳಿಕೊಳ್ಳುವರೋ ಅವರೇ ಮಾನ್ಯರು. ಮರ್ಯಾದೆಗೆ ಯೋಗ್ಯರು. ಮಾತು ಕೇಳುವ ಸಹನೆ, ಸಹೃದಯತೆ ಇರುವವರ ಸಂಗವನ್ನು ತೊರೆಯದಿರಬೇಕು.

೧೫೧

ಮಾಟದೆಲಿಸಿ ಯೊಕನಿಮಾಟಕುಬ್ರತಿ ಜೆಪ್ಪ, ಸಂತಸಿಂಚು ನತಡು ಜಾ: ಮೆಚ್ಚು,
ಮನಸುದೆಲಿಯಕನಿನ ಗುನಿಯುಚು ನನುನೇದೊ ವಿಶ್ವದಾಭಿರಾಮು ವಿನುರ ವೇಮು.

ಮಾತು ಮುನ್ನ ಅರಿತು ಮತ್ತೋರ್ವನ ನುಡಿಗೆ
ಪ್ರತಿ ನುಡಿಯೆ ಅಮಿತ ಸಂತಸಕರ
ಮನವರಿಯದೆ ಒಳಗೊಳಗೆ ತಳಮಳವೇಕೆ?
ವಿಶ್ವದಾಭಿರಾಮು ಕೇಳು ವೇಮ

ಇನ್ನೊಬ್ಬನು ಆಡಿದ ಮಾತಿನ ಅರ್ಥವನ್ನು ಪೂರ್ಣ ಗ್ರಹಿಸಿ, ಅದಕ್ಕೆ ಉತ್ತರರೂಪವಾಗಿ ನುಡಿದರೆ, ಅಳತೆ ಮೀರಿ ಆನಂದವಾಗುವುದು. ಆದರೆ ನವ್ಮೊಂದಿಗೆ ಮಾತನಾಡುವವನ ಮನಸ್ಸನ್ನೇ ತಿಳಿದುಕೊಳ್ಳದೆ, ಒಳಗೊಳಗೆ ತಳಮಳಪಡುವುದೇಕೆ? ಪರರ ಮನಸ್ಸಿನ ಭಾವನೆಗಳನ್ನು ತಿಳಿದು ಮಾತು ಬೆಳೆಸಬಹುದಷ್ಟೇ. ತಳಮಳಕ್ಕೆ ಕಾರಣವೇ ಇಲ್ಲ.

೧೫೨

ಭಾರತಮುನಬಲ್ಕು ಪಲುಧರ್ಮಮುಲಯಂದು, ಸತ್ಯನಿಷ್ಠಮೇಟಿ ಸತ್ಯಮುಕದ?
ವಸುಧದಾನಗಲುಗು ವನ್ನೆಯೆ ಮಿನ್ನಯೌ ವಿಶ್ವದಾಭಿರಾಮು ವಿನುರ ವೇಮು.

ಭಾರತ ಹೇಳುತಿಹ ಹಲವು ಧರ್ಮದೊಳು
ಸತ್ಯನಿಷ್ಠೆಗೆ ಸಮ ಸತ್ಯವೊಂದೆ
ಭೂಮಿದಾನದಿಂದ ಮಿನ್ನಕಾಂತಿ ಬೆಳಕು
ವಿಶ್ವದಾಭಿರಾಮು ಕೇಳು ವೇಮ.

ಪುರಾತನ ಕಾಲದ ಮಹಾ ಕಾವ್ಯಗಳಲ್ಲಿ ಮಹಾಭಾರತವು ವ್ರಮುಖವಾದುದು. ಮಹಾಭಾರತದಲ್ಲಿ ವಿವಿಧ ಮತ-ಧರ್ಮಗಳ ಸ್ಥೂಲ ವಿವೇಚನೆ ಇದೆ. ಈ ಮತ-ಧರ್ಮಗಳಲ್ಲಿ ಸತ್ಯನಿಷ್ಠೆಯೂ ಒಂದು. ತಿಳಿದು ನೋಡಿದರೆ ಸತ್ಯ ನಿಷ್ಠೆಯೂ ಸತ್ಯವೂ ಬೇರೆ ಬೇರೆ ಅಲ್ಲ. ಸತ್ಯದ ಅನುಭವದಿಂದ ಸತ್ಯನಿಷ್ಠೆ ಮೂಡುತ್ತದೆ. ಸತ್ಯದ ಅನುಭವವು ಸತ್ಯದೊಂದಿಗೆ ಸಮರಸ ಹೊಂದಿದಾಗ ಮಾತ್ರ ಸಾಧ್ಯ. ಸತ್ ಆಗಿರುವುದೇ ಸತ್ಯ.

ಭೂಮಿ-ಸೀಮೆಗಾಗಿ ಕೌರವ-ಪಾಂಡವರು ಜೂಜಾಡಿದರು. ಹೋರಾಡಿದರು. ರಕ್ತದ ಕಾಲುವೆ ಹರಿಸಿದರು. ನಿಜವಾಗಿ ನೋಡಿದರೆ, ಭೂಮಿ ದೇವದತ್ತವಾದುದು. ದೈವಿಕವಾದುದು. ದೈವಿಕವಾದುದೆ ಸಾರ್ವಜನಿಕ ಸೊತ್ತು. ಭೂಮಿ ದಾನ ಮಾಡುವ ವ್ಯಕ್ತಿ ಶೋಭಿಸುತ್ತಾನೆ. ಸತ್ಯ ಅರಿಯುತ್ತಾನೆ ಭೂಮಿದಾನದಿಂದ ಮಿಗಿಲಾದ ಕಾಂತಿ ಬೆಳಕುಗಳು ಪ್ರಕಾಶಿಸುತ್ತವೆ.

೧೫೩

ಪಲುತೆರಂಗುಲುಗನುಪಗಯುಂಡು ಚೋಟುಲ ಜಿಟುಕುಮನಕ ಪ್ರಿಯಮೆಚಿಪ್ಪವಲಯು
ಗಾಲ್ಪದಗಿನಯಗ್ನಿ ಕಟ್ಟಿಲೊನುಂಡದಾ? ವಿಶ್ವದಾಭಿರಾಮು ವಿನುರ ವೇಮ.

ಹಲವು ಬಣ್ಣ ಕಂಡು ಮನದಿ ದ್ವೇಷ ತಳೆದು
ಒಳಗೆ ಗೊಣಗೆ ಹಿತವೆ ಹೇಳಿರಯ್ಯ?
ದಹಿಪ ಅಗ್ನಿಕಾಷ್ಟ–ದೊಳಗಡಗಿಪ್ಪುದೈ
ವಿಶ್ವದಾಭಿರಾಮ ಕೇಳು ವೇಮ

ಹಲವಾರು ತರದಿಂದ ದ್ವೇಷಭಾವ ತಾಳಿ ಒಳಗೊಳಗೇ ಗೊಣಗಾಡಿದರೆ ಅದೆಂತು ಒಳ್ಳೆಯದೆನಿಸುವುದು? ವೈರವನ್ನು ಮನಸ್ಸಿನಲ್ಲಿಟ್ಟು ರಾಜಾಶ್ರಯದಲ್ಲಿ ಸೇರಿ, ಹೊರಹೊರಗೆ ಪ್ರೀತಿಯನ್ನು ತೋರುವವರು ಕೆಲವರು. ಅವರ ದ್ವೇಷ–ಮತ್ಸರಗಳು ಕಟ್ಟಿಗೆಯೊಳಗಿನ ಬೆಂಕಿ ಕಟ್ಟಿಗೆಯನ್ನೇ ಸುಡಲು ಒಳಗೆ ಅಡಗಿರುವಂತೆ ದ್ವೇಷಿಗಳಲ್ಲಿ ಇರುತ್ತದೆ.



೧೫೪

ಪರುಲಚಿತ್ತಮೊಪ್ಪಿ ಪಾಲನಜೇಸಿನ, ನಿಲಸ್ಥದತ್ತಮುನಕು ನಿನಃಮಡಿಯಗು,
ನವನಿ ಬರುಲ ದತ್ತ ಮುಪಹರಿಂಪಗರಾದು, ವಿಶ್ವದಾಭಿರಾಮು ವಿನುರ ವೇಮ.

ಪರರಾಸ್ತಿಯೊಪ್ಪಿಸೆ ನಿಜಾಸ್ತಿಯೆಂಬಂತೆ
ಅರಿತು ರಕ್ಷಿಸೆ ಲೇಸುಪೇಕ್ಷೆ ಹೊಲ್ಲ
ಧರೆಯೊಳನ್ಯರಾಸ್ತಿ ಅಪಹರಿಸೆ ಹೊಲ್ಲ
ವಿಶ್ವದಾಭಿರಾಮು ಕೇಳು ವೇಮ

ಬಂಧು–ಬಳಗದವರಲ್ಲಿ ಯಾರಾದರೂ ಅಲ್ಪವಯಸ್ಸಿನವರಿದ್ದರೆ, ಇಲ್ಲವೆ ಬೇರೆ ಯಾರಾದರೂ ತಮ್ಮ ಆಸ್ತಿಯನ್ನು ಒತ್ತಿ ಇಟ್ಟು ಸಾಲಕೊಂಡಾಗ ಆ ಆಸ್ತಿಯನ್ನು ತನ್ನ ಸ್ವಂತದ ಆಸ್ತಿಯಂದೇ ಪಾಲಿಸಬೇಕು. ಕೆಡದಂತೆ ನೋಡಿಕೊಳ್ಳಬೇಕು. ಅನ್ಯರ ಆಸ್ತಿಯೆಂದು ಉಪೇಕ್ಷೆ ಮಾಡುವುದು ಯೋಗ್ಯವಲ್ಲ. ಇನ್ನು ಬೇರೆಯವರ ಆಸ್ತಿಯನ್ನು ಎತ್ತಿಹಾಕುವುದಂತೂ ತುಂಬಾ ಕೇಡಿನ ಕೆಲಸ.

೧೫೫

ಪಟ್ಟವಿಡುವರಾದು ಪದಿಲಕ್ಷಲಕನ್ನೆನ, ಪೆಟ್ಟದೆಪ್ಪರಾದು ಪೇದಕ್ಕೆನ,
ವೆಟ್ಟಗೊಲುವರಾದು ವಿಭುಡೆಟ್ಟಘನುಡ್ಡೆನ, ವಿಶ್ವದಾಭಿರಾಮ ವಿನುರ ವೇಮ

ಪಟ್ಟು ಬಿಡಲು ಹೊಲ್ಲ ಹತ್ತುಲಕ್ಷ ಕೊಡಲು,
ಕೊಟ್ಟು ಹೇಳಿ ಹೊಲ್ಲ ಬಡವನಿಹಗೆ
ಬಿಟ್ಟ ಕೆಲಸ ಮಾಡೆ ಹೊಲ್ಲ ಯಾರೆಡೆಯೂ
ವಿಶ್ವದಾಭಿರಾಮ ಕೇಳು ವೇಮ.

ವಿವೇಕಕ್ಕೊಪ್ಪುವ ವಿಚಾರಕ್ಕೆ ಅಂಟಿಕೊಳ್ಳಬೇಕು ಅದುವೇ ನಾವು ಹಿಡಿದ ಪಟ್ಟು, ಯಾರು ಎಷ್ಟೇ ಹಣವೀಯುವ ಆಸೆ-ಆಮಿಷ ತೋರಲಿ; ಹತ್ತು ಲಕ್ಷರೂಪಾಯಿ ಕೊಡುತ್ತೇವೆಂದು ಹೇಳಲಿ, ನಾವು ಹಿಡಿದ ಪಟ್ಟು ಬಿಡಕೂಡದು.

ಇನ್ನು ದಾನಿಗಳಾದ ಜನರು, ಬಡವನಿಗೆ ಏನನ್ನಾದರೂ ನೀಡಿ ಕೆಲಸ ಮಾಡಹೇಳಬಾರದು. (ಮನುವಿನ ಧರ್ಮ ಸೂತ್ರದಲ್ಲಿ ಬ್ರಾಹ್ಮಣರು ಶೂದ್ರನಿಗೆ ಹಿಡಿಕಾಳು ನೀಡಬೇಕಾದರೂ ಅವನಿಂದ ಪ್ರತಿಯಾಗಿ ದೈಹಿಕ ಪರಿಶ್ರಮ ಮಾಡಿಸಿಕೊಳ್ಳಲೇಬೇಕು ಎಂದು ಬರೆಯಲಾಗಿದೆ.)

ಇನ್ನು ಸಮಾಜದಲ್ಲಿ ಪ್ರತಿಷ್ಠಿತರೆನ್ನಿಸಿಕೊಳ್ಳುವವರಲ್ಲಿ ಸೇವೆ ಸಲ್ಲಿಸಿ ಸಂಭಾವನೆ ಪಡೆಯದಿರುವ ಸಂಪ್ರದಾಯಕ್ಕೆ ಬಿಟ್ಟ ಕೆಲಸ ಎನ್ನುತ್ತಾರೆ. ಇದರಿಂದ ಕೆಲವರು ಮೇಲು ಇತರರು ಕೀಳು ಎನ್ನುವ ಭಾವನೆ ಉಂಟಾಗುತ್ತದೆ. ಸಮಾನತೆ ಉದಿಸುವುದಿಲ್ಲ. ಕಾರಣ ಯಾರೆಲ್ಲಿಯೂ ಯಾರೂ ಬಿಟ್ಟ ಕೆಲಸ ಮಾಡಬಾರದು. (ಮನುವಿನ ಧರ್ಮ ಸೂತ್ರದಲ್ಲಿ ಶೂದ್ರರು ಕತ್ತೆಗೆ ಸಮವೆಂದೂ, ದ್ವಿಜರ ಅದರಲ್ಲಿಯೂ ಬ್ರಾಹ್ಮಣರ ಸೇವೆ ಮಾಡುವುದೇ ಶೂದ್ರರ ಧರ್ಮವೆಂದೂ ಬರೆಯಲಾಗಿದೆ.)

೧೫೬

ದೊಮ್ಮತಿಗುಲುಚೇತ ದೂಲಿನಗೇದೆಕು, ವಾತವೇಯ ಬ್ರತಿಕಿವಚ್ಚೆನೇನಿ,
ವಾತಯೆನುಮುಪಾಲು ರೋತನವಚ್ಚುನಾ? ವಿಶ್ವದಾಭಿರಾಮ ವಿನುರ ವೇಮ

ದಮ್ಮು ರೋಗ ಬರಲು ಚಡಪಡಿಸುವೆನ್ಮೆಗೆ
ಗಾಳಿ ಬೀಸಿದೊಡನೆ ಬದುಕುತಿಹುದು
ವಾತರೋಗದೆನ್ಮೆ ಹಾಲು ಹೇಸಿಯಹುದೆ?
ವಿಶ್ವದಾಭಿರಾಮ ಕೇಳು ವೇಮ.

ದಮ್ಮು ರೋಗ ಬಂದಾಗ ಎಮ್ಮೆಯ ಶ್ವಾಸಕೋಶದಲ್ಲಿ ಉಸಿರುಗಟ್ಟಿ ಅದು ವಿಲವಿಲಿ ಒದ್ದಾಡುತ್ತದೆ. ಆಗ ಅದಕ್ಕೆ ಗಾಳಿ ಬೀಸಿದರೆ ಗುಣವಾಗಿ ಬದುಕುವದು. ಗಾಳಿಯನ್ನು ಒಳಗೆ ಸೇವಿಸುವದರಿಂದ ಎಮ್ಮೆಯ ಜೀವ ಉಳಿಯುತ್ತದೆ. ಎಮ್ಮೆಗೆ ಗಾಳಿ ಪ್ರಾಣಪ್ರಾಯ. ಅಂದಮೇಲೆ ವಾತರೋಗ ಬಂದಾಗ ಎಮ್ಮೆಯ ಸಂದು ಕಟ್ಟುಗಳಲ್ಲಿ ಗಾಳಿ ಸೇರಿಕೊಂಡಿರುತ್ತದೆ, ಅಷ್ಟೇ. ಅಂದಮೇಲೆ ವಾತರೋಗ ಬಡಿದ ಎಮ್ಮೆಯ ಹಾಲು ಹೇಸಿಯೆನಿಸಬಾರದು.

ಅದೇ ರೀತಿ ಒಳ್ಳೆಯ ತತ್ವಗಳು ಸರ್ವರಿಗೂ ಪ್ರಾಣಪ್ರಾಯ. ಆದರೆ ಕೆಲ ಪೂರ್ವಗ್ರಹಗಳು ಅಂಟಿಕೊಂಡರೆ ವಾತರೋಗದಂತೆ ಪೂರ್ವಗ್ರಹದೂಷಿತನಾದ ಮಾತ್ರಕ್ಕೆ ಅವನ ಮನಸ್ಸಿನಲ್ಲಿ ಅನಂತ ಒಳ್ಳೆಯ ವಿಚಾರಗಳು, ಎಮ್ಮೆ ಕೆಚ್ಚಲಿನಿಂದ ಬರುವ ಹಾಲಿನಂತೆ, ಹೊರಬಂದು ಸರ್ವಮಾನ್ಯವಾಗಬಹುದು.

೧೫೭

ತನಯುಡೆನ್ನಡೇನಿ ತನತಂಡ್ರಿಕಂಟಿನು, ಪೇರುದೆಚ್ಚುನೆಟ್ಟ ಪೆದ್ದಿಯ್ಯನ,
ಜನಕುಹೀನು ಜೇಯ ಸಾಹಸಿಂಚಿನ,ಜೇಟು, ವಿಶ್ವದಾಭಿರಾಮ ವಿನುರ ವೇಮ

ತನಯನಾವನಿರಲಿ; ತನ್ನ ತಂದೆಗಿಂತ
ಘನತೆಗಳಿಸಿ ಹೆಸರುವಾಸಿಯಾಗಿ
ತನ್ನ ಪಿತನ ಹೀನನೆಣಿಸೆ ಕೇಡು ಕಾಣು
ವಿಶ್ವದಾಭಿರಾಮ ವಿನುರ ವೇಮ.

ಮಗನು ಎಷ್ಟೇ ದೊಡ್ಡ ಮನುಷ್ಯನಾಗಿರಲಿ. ಅದು ಅವನ ಸ್ವಂತಗೆಯ್ಮೆಯ ಪ್ರತ್ಯೇಕ ಫಲವಾಗಿರಲಿ, ದೊಡ್ಡಿಸ್ತನ ಹೊಂದಿ ಸುತ್ತು ಮುತ್ತು ಕೀರ್ತಿವಾಸಿಯಾಗಿರಲಿ, ಆದರೂ ತನ್ನ ತಂದೆಯನ್ನು, ಅವನೆಷ್ಟೇ ಸಣ್ಣ ಮನುಷ್ಯನಾಗಿದ್ದರೂ ತಿಳಿದು ತಿರಸ್ಕಾರ ಮಾಡುವುದು ತರವಲ್ಲ.

೧೫೮

ತಂಡ್ರಿಮಾಟಲುವಿನಿ ತಲ್ಲಿನಿದೆಗಟ್ಟಾರ್ಚಿ. ಪರಶುರಾಮು ಡೇಮಿಬಾಮುಕೊನಿಯೆ?
ನಿಲುವನೀಡಲೇಕ ಕುಲಗಿರಿಜೇರಡಾ? ವಿಶ್ವದಾಭಿರಾಮ ವಿನುರ ವೇಮ

ತಂದೆ ಮಾತು ಕೇಳಿ ತಾಯಿ ತಲೆಯಕಡಿದು
ಪರಶುರಾಮನೆಷ್ಟು ದುಃಖಬಟ್ಟ
ನೆರಳು-ನೆಲೆಯುಳಿಯದೆ ಕುಲಗಿರಿ ಸೇರಿದನು
ವಿಶ್ವದಾಭಿರಾಮ ಕೇಳು ವೇಮ.

ಪರಶುರಾಮ ರೇಣುಕೆಯ ಮಗ. ರೇಣುಕೆ ಜಮದಗ್ನಿ ಋಷಿಯ ಧರ್ಮಪತ್ನಿ. ಋಷಿಯು ಹೊರಗೆ ಹೋದಾಗ ನಾಡಿನ ರಾಜನು ಆಶ್ರಮಕ್ಕೆ ಬರಲು, ಅಸಂಖ್ಯ ರಾಜ ಸೈನ್ಯಕ್ಕೆ ಉಣಬಡಿಸಿದಳು, ಅಡವಿಯ ಆಶ್ರಮದ ಜನರಿಗೆ ಅಸಂಖ್ಯ ಜನಕೆ ಉಣ್ಣಿಸುವ ಶಕ್ತಿಯೆಂತು? ಇದರ ಗುಟ್ಟೇನು? ಎಂದು ತಿಳಿಯಲು ರಾಜ ಹವಣಿಸಿದ. ರೇಣುಕೆಯ ಮುಖ ನೋಡಿದ. ಹೆಣ್ಣು ಹೃದಯ! ಋಷಿಯ ಆಜ್ಞೆ ಮೀರಿ ರೇಣುಕೆ, ಗೌಪ್ಯ ಹೊರಗೆಡಹಿದಳು. ಕಾಮಧೇನು ಆಕಳು ತೋರಿಸಿದಳು.

ಋಷಿ ಆಶ್ರಮಕ್ಕೆ ಮರಳಿದಾಗ ಪತ್ನಿ, ವಚನಭಂಗ ಮಾಡಿದುದನ್ನೂ ವಿಶ್ವಾಸದ್ರೋಹ ಮಾಡಿದುದನ್ನೂ ತಿಳಿದ; ಕೋಪಾವಿಷ್ಟನಾದ. ಪತ್ನಿಯನ್ನು ಕಡಿದು ಚೂರು ಚೂರು ಮಾಡಬಯಸಿದ.


ಮಗ ಪರಶುರಾಮ ಆಶ್ರಮಕ್ಕೆ ಬಂದು ತಂದೆಯ ಬಳಿ ಹೋಗಿ, ಎಲ್ಲ ತಿಳಿದ. ತಂದೆಯ ಕೋಪ ಉಪಶಮನವಾಗುವದಕ್ಕೆ ಏನುಬೇಕಾದರೂ ಮಾಡುವೆನೆಂದು ಆಣೆ ಮಾಡಿದ. ತಂದೆ ರೇಣುಕೆಯ ತಲೆ ಕಡಿಯ ಹೇಳಿದ. ಪರಶುರಾಮ, ತಾಯಿ ತಲೆ ಕಡಿದು ಹಾಕಿದ. ಸಿಟ್ಟನ ಕೈಯಲ್ಲಿ ಬುದ್ಧಿ ಕೊಟ್ಟ. ವಿಕಾರಕ್ಕೊಳಗಾದ. ತಾಯಿ ತಲೆಗಡಿದ ಪರಶುರಾಮ ಅಡವಿ ಅಡವಿ ಸುತ್ತಿದ. ಕೊಂಕಣ ಗುಡ್ಡದ ಸೀಮೆಯನ್ನು ಸೃಷ್ಟಿಸಿಕೊಂಡ. ನೆಲೆಗೆಟ್ಟು ಮಾಡಬಾರದ ಕಾರ್ಯವನ್ನು ಎಂದೂ ಮಾಡಕೂಡದು.

೧೬೦

ಢೀಕೋನಂಗದಗದು ಡೆಂದ ಮೆರುಂಗಕ, ಯಡುಗವಚ್ಚಿಕೊಂತ ಯನಿನವಾನಿ
ಜೆಪ್ಪುನಂತ ವಿನಿಯು ಮೆಪ್ಪುಗಾ ಬಲುಕುವೀ ವಿಶ್ವದಾಭಿರಾಮ ವಿನುರ ವೇಮ.

ನುಡಿಗೆ- ನುಡಿಯ ಮಥಿಸಬೇಡ ಮೂಢನಾಗಿ,
ನಡುವೆ, ಬಾಯಿ ಹಾಕಿ ಕೇಳುವವನೆ
ನುಡಿದುದೆಲ್ಲ ನುಡಿವ ಗೊಪ್ಪುವಂತೆ ಕೇಳು;
ವಿಶ್ವದಾಭಿರಾಮ ಕೇಳು ವೇಮ.

ಸಮಾಧಾನಚಿತ್ತದಿಂದ ಹೇಳುವವನ ಮಾತನ್ನು ಕೇಳಿಕೊಳ್ಳಬೇಕು. ಮೂಢನಂತೆ ಮಾತು ಮಾತಿಗೆ ಎದುರು ನುಡಿಯಬಾರದು. ಹೇಳಿಕೆಯು ಇನ್ನೂ ಮುಗಿಯದಿರುವಾಗ ನಡುವೆ ಬಾಯಿ ಹಾಕಿ ಕೇಳುವುದು ಒಳ್ಳೆಯದಲ್ಲ. ಹೇಳುವವನು, ಏನು ಹೇಳುವನೆಂಬುದನ್ನು ಅವನಿಗೆ ಸರಿಯಿನಿಸುವಂತೆ ಕೇಳಬೇಕು. ಒಬ್ಬನು ತನ್ನ ವಿಚಾರ ಮಂಡಿಸಿ ಮುಗಿದ ನಂತರವೇ ಇನ್ನೊಬ್ಬ ಮರು ವಿಚಾರ ಮಂಡಿಸಬಹುದಷ್ಟೇ.



೧೫೯

ಖಲುಲ ತೋಡಿಪೊಂದು ಕಲುಷಂಬು ಗಲ್ಗಿಂಚು, ವಾನದಂತಮೇಟ ಮೌನಿಕ್ಕೈನ,
ವಾನಿಜೇರದೀಯ ವಲವದು ಚೆಡುದುವು, ವಿಶ್ವದಾಭಿರಾಮ ವಿನುರ ವೇಮ.

ಹೀನ ಮನುಜರೊಡನೆ ಸ್ನೇಹವಿರಿಸೆ ದೋಷ.
ಹಾನಿಯುಂಟು ಎಂಥ ಮೌನಿಯೇನು?
ಹೀನ ಸಂಗ ಬೇಡ; ಕೆಟ್ಟು ಹೋಹೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನನ್ನು ಸಂಗ-ಸಹವಾಸಗಳಿಂದ ಗುರುತಿಸಬಹುದೆಂಬ ಗಾದೆಯುಂಟು. ಒಡನಾಟ ಸಹವಾಸಗಳು ಪರಸ್ಪರರ ಮೇಲೆ ಪ್ರಭಾವ ಬೀರುತ್ತವೆ. ಕಾರಣ ಹೀನಮನುಷ್ಯ ಜೊತೆಗೂಡಿ ಇರುವುದು ಆತ್ಮ-ಸಂಯಮ ಕಾಪಾಡಿಕೊಳ್ಳುವ ದೃಷ್ಟಿಯಿಂದ ಮತ್ತು ಸಾಮಾಜಿಕ ಸದಭಿಪ್ರಾಯ ಮೂಡಿಸುವ ದೃಷ್ಟಿಯಿಂದ ದೋಷಕರವಾದುದು. ಅಂಥ ಹೀನರ ಸಂಗದಿಂದ, ಮೌನಿಯೇ ಇರಲಿ, ಸಾಮಾನ್ಯನೇ ಇರಲಿ ಹಾನಿ ಉಂಟಾಗುವುದು. ಕಾರಣ ಹೀನ ಜನರ ಸಂಗ ಮಾಡಕೂಡದು. ಮಾಡಿದರೆ ಕೆಟ್ಟು ಹೋಗುವದಂತೂ ಶತಸ್ಸಿದ್ಧವಾದ ಮಾತು.

೧೬೧

ಅವುಗಾನಿ ಬಂಟು ನಲ್ಪುಡೇಲಿನಯೆಡ, ಮಾರುಮಲಯುನೊಂಡೆ ಮುಗುನುನೊಂಡಿನ
ದೂಲಮೂತಕೋಲ ದೊರಿಕಿನ ಚಂದಂಬು, ವಿಶ್ವದಾಭಿರಾಮ ವಿನುರ ವೇಮ

ರೂಢಿಯಿರದ ಬಂಟತನವಲ್ಪನ ದಾರಿ
ಒಡೆಯನ ನುಡಿಯರಿತು ನಡೆಯಲಾರ
ದೊಡ್ಡ ತೊಲೆಯ ಊರುಗೋಲು ಹಿಡಿದ ರೀತಿ
ವಿಶ್ವದಾಭಿರಾಮ ಕೇಳು ವೇಮ

ಬಂಟನಾದವನಿಗೆ ಹೋರಾಟದ ಅನುಭವ ಬೇಕು. ಧೈರ್ಯ-ಸಾಹಸಗಳು ಅವನಲ್ಲಿ ಮೈಗೂಡಿರಬೇಕು. ಹೋರುವ ರೂಢಿಯಿಲ್ಲದೆ ಬಂಟನಾಗ ಹೋಗುವುದು ಕೇಳು ಮನುಷ್ಯನ ಹಾದಿ. ಅಂಥವನು ತನ್ನ ಒಡೆಯನ ಆಜ್ಞೆಯನ್ನು ತಿಳಿದು ಪಾಲಿಸಲಾರನು. ಅಧೀರನಾದವನು ಹೊಟ್ಟೆಪಾಡಿಗಾಗಿ ಸೇನಾನಿಯ ಹೊಣೆ ಹೊರುವುದೆಂದರೆ ದೊಡ್ಡ ತೊಲೆಯನ್ನು ಊರುಗೋಲು ಎಂದು ಹಿಡಿಯ ಹೋದಂತೆ.

೧೬೨

ವೀಡವಲಯುವಾನಿ ಗೂಡಿನ ನೆಗ್ಗು, ವೀಟವಾಡಲಂದು ವೆಲಯುವಾಡು,
ಪಾಡುಚೇಯುಪನುಲು ಪರಿಪಾಟಕೊಲದಿನಿ, ವಿಶ್ವದಾಭಿರಾಮ ವಿನುರ ವೇವ .

ತೊರೆಯ ಬೇಕೆಂಬನ ಜೊತೆಗೆ ಸೇರಲಾಗ,
ಬರಿದೆ ಬೀದಿಬೀದಿ ತಿರುಗುವನು;
ಕಾರ್ಯ ಕರ್ಮನೆಲ್ಲ ಹಾಳು ಮಾಡುತಿಪ್ಪ
ವಿಶ್ವದಾಭಿರಾಮ ಕೇಳುವೆ ವೇಮ.

ಕೆಲವರ ಸಂಗ ತ್ಯಾಜ್ಯವಾದುದು. ಅಂಥ ಜನರ ಜೊತೆಗೆ ಸೇರಿದರೆ ಅವನೊಂದಿಗೆ ಬೀದಿಗುಂಟ ಕೆಲಸಗೇಡಿಯಾಗಿ ತಿರುಗಬೇಕಾಗುತ್ತದೆ. ಈ ಹಾಳು ಚಟದಿಂದ ಮಾಡತಕ್ಕ ಕರ್ತವ್ಯ-ಕರ್ಮಗಳೂ ಹಾಳಾಗಿ ಹೋಗುತ್ತವೆ. ಕಾರಣ ಯಾರು ಗೆಳೆತನಕ್ಕೆ ಅನರ್ಹರೋ ಅವರೊಡನೆ ಕೂಡಿ ಅಲೆಯುವುದೂ, ಕೇಡಿಗೆ ಮೂಲ.

೧೬೩

ವಿಜಯುಡೈನವಾಡು ವಿಲ್ಲಂದಿನಂತನೇ ಕುಜನುಲ್ಮೈನವಾರು ಕೂಲಿರಿಕದ
ಭಜನಜೇಯುನತಡು ವಿಜಯಮುಗಾಂಚಡಾ? ವಿಶ್ವದಾಭಿರಾಮ ವಿನುರ ವೇಮ

ವಿಜಯಿ ಪಾರ್ಥ ಬಿಲ್ಲು ಹಿಡಿದ ಕ್ಷಣವೆ ತಾನು
ಕುಜನರೆಲ್ಲರನ್ನು ಕೆಡವಿ ನಿಂತ.
ಭಜನೆಮಾಡುವವನು ವಿಜಯ ಪಡೆಯನೇನು?
ವಿಶ್ವದಾಭಿರಾಮ ಕೇಳು ವೇಮ.

ಪಾರ್ಥ ವೀರ ಪಾಂಡವ. ಭಾರತ ಯುದ್ಧದ ಕಾಲಕ್ಕೆ ತನ್ನನ್ನೆದುರಿಸಿ ನಿಂತ, ಗುರು ದ್ರೋಣ, ಅಜ್ಜ ಭೀಷ್ಮ, ಮಾವ ಶಕುನಿ, ಇತ್ಯಾದಿ ಬಂಧು-ಬಳಗದವರನ್ನು ಕಂಡು ಅನುರಕ್ತನಾಗುತ್ತಾನೆ. ತನ್ನ ಕರ್ತವ್ಯ ಮರೆಯುತ್ತಾನೆ. ಚಿತ್ತವಿವ್ವಲಗೊಳ್ಳುತ್ತಾನೆ. ಪಾರ್ಥನ ಸಾರಥಿ-ಹೃದಯ ಸಾರಥಿಯೂ ಅವನೇ-ಕೃಷ್ಣ ಪಾರ್ಥನಿಗೆ ಐಹಿಕ ವಸ್ತುಗಳ ನಶ್ವರತೆ ತಿಳಿಸುತ್ತಾನೆ. ಕರ್ಮ ಜ್ಞಾನ ಭಕ್ತಿ, ವಿಭೂತಿ, ಇತ್ಯಾದಿ ಯೋಗ ಮಾರ್ಗಗಳನ್ನು ತಿಳಿಸಿ, ಪೂರ್ವ ನಿಶ್ಚಯದಂತೆ ಪ್ರತಿಯೊಬ್ಬರೂ ಮರಣವನ್ನಪ್ಪಲೇಬೇಕು. ಪಾರ್ಥನಿಗೆ ಆತ್ಮಜ್ಞಾನವಾಗುತ್ತದೆ. ತನ್ನ ಅನುರಾಗ, ಮನೋವಿಕಾರಗಳ ಮೇಲೆ ವಿಜಯ ಸಾಧಿಸುತ್ತಾನೆ. ನಿರಪೇಕ್ಷಭಾವದಿಂದ ಕರ್ಮ ಪ್ರವೃತ್ತನಾಗುತ್ತಾನೆ.

ವಿಜಯಿ, ಪಾರ್ಥ ಆನಂತರ ಬಿಲ್ಲು ಧರಿಸುತ್ತಾನೆ. ಕೂಡಲೇ ದುಷ್ಟರಾದವರೂ ದುರ್ಬುದ್ಧಿಯಿಂದ ಪ್ರೇರಿತರಾದ ಕೌರವರು ಸೋತು ನೆಲಕ್ಕೆ ಬೀಳುತ್ತಾರೆ. ಅಂದಮೇಲೆ ಸತತವಾಗಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಭಜನೆಗೈಯ್ಯುವವನು ತನ್ನ ಇಂದ್ರಿಯಗಳನ್ನು ನಿಗ್ರಹಿಸಿ ಜಯಪಡೆಯಲಾರನೇನು ?

೧೬೪

ವಾನಭಯವುಚೇತ ವಡಿದೂರೆದುರು ಲೋನ, ನೆಂಡಕೆಂತಯ್ಮಿನ ಮೊಂಡಿಚರತು.
ರೇಲ ಲೋಕಜನುಲು ಮೇಲೋರ್ವಕುಂದುರು? ವಿಶ್ವದಾಭಿರಾಮ ವಿನುರ ವೇಮ

ಸುರಿವ ಮಳೆಗೆ ಅಂಜಿ ಓಡಿಹೋಗುತಿಹರು.
ಉರಿವ ಬಿಸಿಲೊಳಿಹರು ನೊಂಡರಾಗಿ,
ಧರೆಯ ನರರು ಒಳಿತನೇಕೆ ಬಯಸದಿಹರು?
ವಿಶ್ವದಾಭಿರಾಮ ಕೇಳು ವೇಮ

ಪ್ರಪಂಚದ ಜನರಲ್ಲಿ ತಮ್ಮ ಒಳಿತು ಕೆಡುಕಿನಬಗ್ಗೆ ವಿಚಿತ್ರ ಕಲ್ಪನೆಗಳಿರುತ್ತವೆ. ಎಷ್ಟೋ ಸಲ ತುಂತುರುಹನಿಯುದುರುವಾಗ ತಮಗೆ ಹಿತಕರವೆನಿಸುತ್ತಿದ್ದರೂ ಜನರೂ ಭಯಭೀತರಾದಂತೆ ಓಡಿಹೋಗುತ್ತಾರೆ. ಆದರೆ ತಮಗೆ ತಾಪವೆನಿಸುವ ಸುಡುವ ಉರಿಬಿಸಿಲಿನಲ್ಲಿ ಸ್ವಸ್ಥರಾಗಿ ನಿಲ್ಲುವ ಮೊಂಡತನ ತೋರುವರು. ಈ ಭೂಮಿಯ ಮೇಲಿನಜನರು ಒಳ್ಳೆಯದನ್ನೇ ಏಕೆ ಬಯಸಿ ಅನುಸರಿಸುವದಿಲ್ಲವೋ ತಿಳಿಯದು.

೧೬೫

ನ್ಯಾಯಶಾಸ್ತ್ರಮುರಯ ನನ್ಯಾಯಮೊನರಿಂಚು ಧರ್ಮಶಾಸ್ತ್ರ ಮೊಸಗು ಧರ್ಮತಂಬು
ಜ್ಯೊತಿಷಂಬು ಜನುಲ ನೀತುಲದಪ್ಪಿಂಚು, ವಿಶ್ವದಾಭಿರಾಮ ವಿನುರ ವೇಮ.

ನ್ಯಾಯ ಶಾಸ್ತ್ರ ಮುತ್ತನ್ಯಾಯ ಗೈಯುತಿಹುದು
ಧರ್ಮಶಾಸ್ತ್ರ ದುರ್ಮತವ ನುಡಿವುದು
ಜ್ಯೋತಿಷಿ ನುಡಿ ಜನರ ನೀತಿ ಕೆಡಿಸುತಿಹುದು
ವಿಶ್ವದಾಭಿರಾಮ ಕೇಳು ವೇಮ

ನ್ಯಾಯವೆಂದರೆ ಸತ್ಯದ ಸಮೀಪಕ್ಕೆ ಒಯ್ಯುವುದು. ಆದರೆ ನ್ಯಾಯ ಶಾಸ್ತ್ರಗಳ್ಳು ಬೋಧಿಸುವ ತತ್ವಗಳನ್ನೂ, ಅವು ಒಳಗೊಂಡ ಅಂಶಗಳನ್ನೂ ನೋಡಿದರೆ, ಅದು ಸತ್ಯದಿಂದ ಇನ್ನೂ ದೂರಕ್ಕೆ ಒಯ್ಯುವಂತೆ ಅನ್ನಿಸದಿರದು.

ಧರ್ಮ ಶಾಸ್ತ್ರವು ಸರ್ವಸಮತೆಯನ್ನು ಸಾಧಿಸುವ ಹಂಬಿಕೆ. ಆದರೆ ಪ್ರಚಲಿತ ಧರ್ಮಶಾಸ್ತ್ರಗಳನ್ನು ಪರಿಶೀಲಿಸಿದರೆ, ಒಂದೊಂದು ಧರ್ಮಶಾಸ್ತ್ರದಲ್ಲಿ ಕಾಣಿಸಿದ ವಿಧಿನಿಯಮಗಳು, ಪ್ರಪಂಚದ ಕೆಲವೇ ಜನರಿಗೆ ಮಾತ್ರ ಅನ್ವಯಿಸುವಂತಿದ್ದು, ಇದರಿಂದ ಸರ್ವಸಮತೆ ಸಾಧಿಸುವ ಬದಲು ಭಿನ್ನ-ಭೇದಗಳನ್ನು ಕಲ್ಪಿಸುತ್ತಿವೆ.

ಜನರ ನೀತಿಯು ಆತ್ಮವಿಶ್ವಾಸದಿಂದ ಮುಂದುವರಿಯಬೇಕಾದುದೇ ಆಗಿದೆ. ಜ್ಯೋತಿಷಿ ಹಿಂದುಮುಂದಿನ ಘಟನೆಗಳನ್ನು ಜನ್ಮಕುಂಡಲಿಯನ್ನು ಆಧರಿಸಿ. ಇಲ್ಲವೆ ಮೌಖಿಕ ಪ್ರಶ್ನೆಗಳ ಮೂಲಕ, ಊಹಿಸಿ ತಿಳಿಸುತ್ತಾನೆ. ಇದರಿಂದ ಜನರು ಮುಂದಾಗುವ ಘಟನೆಗಳು ಅಹಿತವೆನಿಸುವಂತಿದ್ದರೆ, ಪರಿಹಾರವೆಂದು ಪ್ರಾಯಶ್ಚಿತ್ತಾದಿ ಕರ್ಮದ ಜಂಜಾಟದಲ್ಲಿ ಸಿಲುಕುವರು. ವಿಧಿಲಿಖಿತ ತಪ್ಪದು; ಮತ್ತು ಪೂರ್ವನಿಶ್ಚಿತದಂತೆ ನಡೆಯುವುದು. ಆದಕ್ಕಾಗಿ ಚಿಂತೆ ಬೇಡ; ಎಂದು ಫಲಾಫಲಗಳನ್ನು ಪರಮಾತ್ಮನಲ್ಲಿ ಅರ್ಪಿಸಿ ಕಾರ್ಯ ಸಾಧಿಸುವ ನೀತಿಯಿಂದ ಜನರು ಪರಾವೃತ್ತರಾಗುತ್ತಾರೆ.

೧೬೬

ತನಕುಗಲ್ಲು ಪೆಕ್ಕುತಪ್ಪುಲಟುಂಡಗಾ, ನೊರುಲ ನೇರಮೆಂಚು ನೋಗೆಪುಡುನು
ಚಕ್ಕಿಲಂಬುಜೂಚಿ ಜಂತಿಕ ನಗಿನಟ್ಲು ವಿಶ್ವದಾಭಿರಾಮ ವಿನುರ ವೇಮ.

ತನ್ನೊಳಿನಿತೊ ಅಧಿಕ ತಪ್ಪು ತಡಿಗಳಿರಲು,
ಅನ್ಯರ ತಪ್ಪೆಣಿಸುತಿಹನೆ ಮೂಢ
ಮಣ್ಣ ಮಡಕೆ ಪಾತ್ರೆ-ಕಪ್ಪಿಗೆ ನಕ್ಕಂತೆ
ವಿಶ್ವದಾಭಿರಾಮ ಕೇಳು ವೇಮ.

ಗಾಜಿನ ಮನೆಯಲ್ಲಿರುವವನು ಬೇರೆಯವರಿಗೆ ಕಲ್ಲುಒಗೆಯುವುದು ಮೂಢತನ ತನ್ನ ಎಡೆಯಲ್ಲಿ ಕತ್ತೆ ಉರುಳಾಡುವಾಗ ಅನ್ಯರ ಎಡೆಯಲ್ಲಿ ನೊಣ ಆರಿಸುವುದು ಮೂಢತನ. ಬೇರೆಯವರ ಕಣ್ಣಲ್ಲಿ ರವದಿ ಆರಿಸುವ ಮೊದಲು ನಿನ್ನ ಕಣ್ಣೊಳಗಿನ ತೊಲೆ ತೆಗೆದ್ದು ಹಾಕು ಎಂಬಿತ್ಯಾದಿ ಗಾದೆ ಮಾತುಗಳನ್ನೂ ಹಿರಿಯರನುಡಿಗಳನ್ನೂ ನಾವು ತಿಳಿದಿದ್ದೇವೆ.

ತನ್ನಲ್ಲಿಯೇ ಸಾಕಷ್ಟು ತಪ್ಪು-ತಡೆಗಳು ತುಂಬಿಕೊಂಡಿರುವಾಗ, ತನ್ನನ್ನು ತಾನು ತಿದ್ದಿಕೊಳ್ಳುವುದನ್ನು ಬಿಟ್ಟು, ಬೇರೆಯವರಲ್ಲಿ ತಪ್ಪು ಎಣಿಸುವವನು ಮೂರ್ಖನಷ್ಟೇ. ಹೀಗೆ ಮಾಡುವುದು, ಮಣ್ಣಿನ ಕಪ್ಪು ಗಡಿಗೆಯು ಕಂಚಿನ ಪಾತ್ರೆಗೆ ಹತ್ತಿದ ಅಲ್ಪ ಕಪ್ಪು ಕಂಡು ನಕ್ಕಂತೆ ಆಗುವುದಷ್ಟೆ.

೧೬೭

ಪಕ್ಷಿಜಾತಿಬಟ್ಟ ಪರಗ ಹಿಂಸಲಬೆಟ್ಟ ಗೂಳ್ಲುಕಟ್ಟ ಯಂದು ಗುದುರ ಬೆಟ್ಟ
ಉಂಚುವಾರಿ ಕಟ್ಟವಂಚನರಾದೊಕೋ, ವಿಶ್ವದಾಭಿರಾಮ ವಿನುರ ವೇಮ.

ಪಕ್ಷಿಹಿಂಡು ಹಿಡಿದು ಮಿಗಿಲು ಹಿಂಸೆಗೈದು,
ಗೂಡು ಮಾಡಿ ಅಲ್ಲಿ ಕೂಡಿ ಹಾಕಿ
ಇರಿಸುವವಗೆ ವಂಚಿಸಿರ್ದ ದೋಷಬರದೆ?
ವಿಶ್ವದಾಭಿರಾಮ ಕೇಳು ವೇಮ

ಹಕ್ಕಿಯಾಟ ಪ್ರತಿಷ್ಠಿತ ಜನರ ಸ್ವೇಚ್ಛೆಯ ಚಟವಾಗಿದೆ. ಸಮಾಜದಲ್ಲಿ ಅತಿಶ್ರೇಷ್ಠ ರೆನಿಸಿಕೊಳ್ಳುವವರಾಗಲಿ, ಆಶ್ರಮವಾಸಿಗಳಾಗಲೀ, ಹಕ್ಕಿಗಳನ್ನೂ ಗಿಳಿ ನವಿಲುಗಳನ್ನೂ ಗುಂಪು-ಗುಂಪಾಗಿ ಹಿಡಿದು, ಅವುಗಳಿಗೆ ಚಿತ್ರಹಿಂಸೆ ಕೊಟ್ಟು, ರೆಕ್ಕೆ ಕತ್ತರಿಸಿ, ಗೂಡಿನಲ್ಲಿ ಕೂಡಿಹಾಕಿ, ಅವುಗಳ ಸಹಜ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಾರೆ. ಅವುಗಳನ್ನು ಪೋಷಿಸುವ ನೆಪದಲ್ಲಿ ಅವುಗಳ ಸ್ವಚ್ಛಂದ ವಿಹಾರವನ್ನು ಅಲ್ಲಗಳೆದು ಆತಂಕಪಡಿಸುತ್ತಾರೆ. ಈ ರೀತಿ ಮೋಸಗೈಯುವುದರಿಂದ ದೋಷಬಾರದೇನು?

೧೬೮

ದೇಹಮೂಲಮುಂದು ದೇಹಿದೇವುಡಟಂಚು, ದೆಲಿಸಿಯುನ್ನ ಬುಧುಲ ತೀರ್ಥಯಾತ್ರೆ
ಲರಯಬೋರು ಜಗತಿ ನಾತ್ಮತಾಮ್ಮೆಯುನ್ಕಿ, ವಿಶ್ವದಾಭಿರಾಮ ವಿನುರ ವೇಮ.

ದೇಹದೊಳಗೆ ಇಪ್ಪ ದೇಹಿ ದೇವನನ್ನು
ಕಂಡುಕೊಂಡ ಬುಧರು ತೀರ್ಥಯಾತ್ರೆ,
ಗೆಯ್ಯರಯ್ಯ ಜಗದಿ; ಆತ್ಮರೂಪ ತಿಳಿದು
ವಿಶ್ವದಾಭಿರಾಮ ಕೇಳು ವೇಮ.

"ದೇಹೋ ದೇವಾಲಯಃ" ದೇಹವೇ ದೇವಾಲಯವೆಂದು ಶಾಸ್ತ್ರ-ಪುರಾಣಗಳೂ ಸಾರುತ್ತವೆ. ಆತ್ಮವೇ ದೇವರು. ನಿಜವರಿತು ನೋಡಿದರೆ, ಈ ತತ್ತ್ವದ ಪ್ರದರ್ಶನ ಇಲ್ಲಿಬಾಹ್ಯ ಸಂಕೇತವಾಗಿ ದೇವಾಲಯಗಳ ನಿರ್ಮಾಣವಾಯಿತು. ದೇವಾಲಯಗಳು ಮೊದಲು ಗುಹೆಯ ರೂಪದಲ್ಲಿ ಇದ್ದುದೂ ಇದನ್ನೇ ಪುಷ್ಟೀಕರಿಸುತ್ತವೆ. ಆದರೆ ವೈಚಿತ್ರ್ಯವೆಂದೆ ಪ್ರದರ್ಶನದ ಕಲ್ಪನೆ ಮೂಲಕಲ್ಪನೆಯನ್ನೂ ಮರೆಸಿತು. ಅನಿಶ್ಚಿತ ಪರಿಣಾಮ ಮೂಡಿಸಿತು. ಕಾರಣ ಅದು ತಪ್ಪು ಹಾದಿಯೆನ್ನಿಸಿತು.

ಕಾರಣ ಯಾರು ಬುಧರು ಅಂದರೆ ತಿಳಿದವರು ಇರುವರೋ, ಅವರು, ಆತ್ಮದ ಸ್ವರೂಪವೇನು? ಎಂಬುದನ್ನು ತಿಳಿದಿರುತ್ತಾರೆ.(ಕಟ್ಟಿಗೆಯಲ್ಲಿಯ ಅಗ್ನಿಯಂತೆ, ಆತ್ಮಜ್ಞಾನಜ್ಯೋತಿ ಬೆಳಗಿದಾಗ, ದೇಹ ಬೇರೆ ಆತ್ಮ ಬೇರೆ ಎಂಬುದೂ ಹೊಳೆಯುತ್ತದೆ. ಈ ತಿಳಿವು ಆತ್ಮಾನುಭವ. ಆತ್ಮವು ಪರಮಾತ್ಮನ ರೂಪವೇ; ಎರಡೂ ಒಂದೇ; ಎಂಬ ಅರಿವು ಆ ಕ್ಷಣವೆ ಹೊಳೆಯುತ್ತದೆ) ದೇಹಿಯೇ ದೇವ. ದೇಹವೇ ಅವನ ವಾಸಸ್ಥಾನ. ದೇಹವೇ ದೇವಸ್ಥಾನ. ಅದುವೇ ಪವಿತ್ರ ತೀರ್ಥಸ್ಥಾನ; ಎಂದು ತಿಳಿದುಕೊಂಡ, ಬುಧರು ಬೇರೆ ತಿರುಗಾಟದ ತೀರ್ಥಯಾತ್ರೆ ಕೈಕೊಳ್ಳುವದಿಲ್ಲ. ಆತ್ಮವೇ ದೇವರೆಂದು ಕಂಡುಕೊಳ್ಳುವ ಸಾಧನೆಯಲ್ಲಿ ನಿರತರಾಗುತ್ತಾರೆ.

೧೬೯

ಪುಕ್ಕಿಟಸತಿವಾನಿ ಪೂಜಿಂಪದೋಷಂಬು, ಉರಮುಸುದತಿವಾನಿ ಯೂಹಲೆಸ್ಸ
ನೆತ್ತಿಯುವಿದವಾನಿ ಬತ್ತಿಯೇ ವರಮಿಚ್ಚು, ವಿಶ್ವದಾಭಿರಾಮ ವಿನುರ ವೇಮ.

ಬಾಯಿಯಲಿ ಪ್ರೀತಿಸುವನ ಪೂಜೆದೋಷ
ಉರದಿ ಪ್ರೀತಿಸುವನ ಊಹೆ ಲೇಸು
ನೆತ್ತಿಯಲಿ ಪ್ರೀತಿಸುವನ ಭಕ್ತಿಗೆ ಫಲ
ವಿಶ್ವದಾಭಿರಾಮ ಕೇಳು ವೇಮ

ನಾಮ ಪಠಣ ಮನದ ಏಕಾಗ್ರಚಿತ್ತತೆಗೆ ಹಾದಿಯಾಗಿದೆ. ಇದುವೆ ಧ್ಯಾನದ ಪ್ರಥಮ ಘಟ್ಟ. ನಾಮಪಠಣ ಧ್ಯಾನದ ಪ್ರಾಥಮಿಕ ಹಂತವೆನಿಸಬೇಕಾದರೂ, ಬಾಯಿಯಿಂದ ನಡೆದ ಪಠಣದೊಂದಿಗೆ ಮಾನಸಿಕ ಏಕಾಗ್ರತೆ ಅವಶ್ಯ. ಮಾನಸಿಕ ಜೋಡಣೆಯಿಲ್ಲದೆ ಮಂತ್ರ ಪಠಿಸಿದರೆ, ಅದು ದೋಷಪೂರ್ಣ.

ಇನ್ನು ಹೃದಯದಲ್ಲಿ ಪರಮಾತ್ಮನಿರುವನೆಂದು ಕಲ್ಪಿಸಿ ಪೂಜಿಸುವವರು ಮನಸ್ಸನ್ನು ಶುದ್ಧಗೊಳಿಸುವರು. ಮನಸ್ಸು ಶುದ್ಧವಾದಷ್ಟೂ ಅದನ್ನು ಏಕಾಗ್ರಗೊಳಿಸುವುದು ಸುಲಭ.

ಅನಂತರದ ಅವಸ್ಥೆಯೇ ನೆತ್ತಿಯಿಂದ ಪೂಜಿಸುವುದು. ಇದುವೇ ಧ್ಯಾನಾವಸ್ಥೆ. ಇದು ಶ್ರೇಷ್ಠವಾದ ಅವಸ್ಥೆ. ಆಗ ಮನಸ್ಸು ಕೇವಲ ವಸ್ತುಗಳನ್ನು ನೋಡಿದರೂ ಅದರಲ್ಲಿ ಬೆರೆಯುವದಿಲ್ಲ. ಆಗ ಸುಖ ದುಃಖದಿಂದ ಬಳಲದ ಸಮಚಿತ್ತತೆ ಉಂಟಾಗುವುದು. ಸುಖದ ಸಂಬಂಧ, ದುಃಖದ ಸಂಬಂಧ ಉಳಿಯದು. ಆಗ ಆತ್ಮವು ಮುಕ್ತವಾಗುತ್ತದೆ. ಮುಕ್ತನಿಗೆ ಅತೀಂದ್ರಿಯ ಶಕ್ತಿ ಸಾಧ್ಯವಾಗುವುದು.

೧೭೦

ಪುಟ್ಟನಜನುಲೆಲ್ಲ ಬುಡಮಿನಿ ಮನಿಯುನ್ನ ಪಟ್ಟುನೇಜಗಮುಲು? ಪಟ್ಟವೆಪುಡು,
ಯಿಮುನಿಲೆಕ್ಕ ಹೆಚ್ಚು ನವಲದಗ್ಗುಚುನುಂಡು, ವಿಶ್ವದಾಭಿರಾಮ ವಿನುರ ವೇಮ

ಜನಿಸಿದ ಜನರೆಲ್ಲ ಮಹಿಯ ಮೇಲುಳಿಯಲು,
ಅನುವು ಇಹುದೆ ಜಗದಿ? ಆಗದೆಂದು
ಗಣನೆ ಯಮನದು ಬೆಳೆದಂತೆಕಳೆಯುತಿಹುದೆ
ವಿಶ್ವದಾಭಿರಾಮ ಕೇಳು ವೇಮ

ಮರಣವು ಹುಟ್ಟಿದವನಿಗೆ ನಿಶ್ಚಿತವಾಗಿದೆ. "ಜಾತಸ್ಯ ಹಿಧ್ರುವೋ ಮೃತ್ಯು" ಇದು ದೇವನಿಯಾಮಕ. ಇದನ್ನು ಬಿಟ್ಟು, ಹುಟ್ಟಿದ ಮನುಷ್ಯರೆಲ್ಲ ಜಗತ್ತಿನ ಮೇಲೆ ಉಳಿದರೆ, ಜಗತ್ತಿನಲ್ಲಿ ಅವರೆಲ್ಲ ಇರಲು ಜಾಗವೇ ಇಲ್ಲದಂತಾದೀತು! ಹೀಗೆ ಎಂದೂ ಆಗಲಾರದು. ಏಕೆಂದರೆ, ಜನಸಂಖ್ಯೆ ಬೆಳೆದಂತೆಲ್ಲ ಕಳೆಯುವುದೇ ಯಮನ ಲೆಕ್ಕ. ಯಮ ಎಂದರೆ ನಿಗ್ರಹ. ನಿಗ್ರಹಿಸುವುದೇ ಯಮನ ಕಾರ್ಯ.

೧೭೧

ಪಕ್ಷಿಜಾತಿಬಟ್ಟ ಪರಗಹಿಂಸಲಬೆಟ್ಟ ಕುಕ್ಷಿನಿಂಡ ಗೂಡು ಕೂರುಟಕುನು
ವಂಡಿತಿನೆಡಿವಾಡು ಜಂಡಾಲುಂಡು, ವಿಶ್ವದಾಭಿರಾಮ ವಿನುರ ವೇಮ

ಹಕ್ಕಿಕುಲವ ಹಿಡಿದು ಹೆಚ್ಚು ಹಿಂಸೆ ಮಾಡಿ,
ಹೊಟ್ಟೆತುಂಬ ಗಟ್ಟಿ ಕೂಳು ತುಂಬಿ
ಚೇಯಿಸಿ ತಿನುವವನೆ ಜಗದೊಳು ಚಂಡಾಲ
ವಿಶ್ವದಾಭಿರಾಮ ಕೇಳು ವೇಮ.

ಸತ್ತ ಪಶುಗಳನ್ನು ಹೊತ್ತು ಒಯ್ದು, ಅದರ ಮಾಂಸ ತಿನ್ನುವವನಿಗೆ ಚಂಡಾಲನ್ನುತ್ತಾರೆ. ಆದರೆ ಚಂಡಾಲ ಯಾವ ಹಿಂಸೆಯೂ ಮಾಡಿದಂತಾಗಲಿಲ್ಲ. ಆದರೆ ಯಾರು ಪ್ರತಿಷ್ಠಿತರೆನ್ನುವ ನೆಪದಲ್ಲಿ ಹಕ್ಕಿಗಳ ಹಿಂಡನ್ನು ಹಿಡಿದು ಅವುಗಳಿಗೆ ಹಿಂಸೆ ನೀಡಿ, ಅದಕ್ಕೆ ಕೂಳು ಹಾಕಿ ಬೆಳೆಸಿ ಕೊನೆಗೆ ಬೇಯಿಸಿ ತಿನ್ನುವವನೇ ಜಗತ್ತಿನಲ್ಲಿ ನೀಚ ಚಂಡಾಲನೇ ಸರಿ.

೧೭೨

ತಾನುವೆಲಯುಭೂಮಿ ದನರಂಗದಿರಿಗೆಡು, ಜನುಲಗಾಂಚಪೊಂಚಿ ಸರಗಗರಚು
ಕುಕ್ಕಬುದ್ಧಿಯಗುಟ ಗುಣಮೇಲಮಾನುನು? ವಿಶ್ವದಾಭಿರಾಮ ವಿನುರ ವೇಮ

ತಾನಲೆಯುವ ಎಡೆಯಿ ಆಗೀಗ ತಿರುಗುವ,
ಜನರ ಹೊಂಚು ಹಾಕಿ ಕಚ್ಚುತಿಹುದು
ಶ್ವಾನಬುದ್ಧಿಯಂಥ ಗುಣ ಬದಲುವುದೆಂತು?
ವಿಶ್ವದಾಭಿರಾಮ ಕೇಳು ವೇಮ.

ತಾನು ಓಡಾಡುವ ಜಾಗದಲ್ಲಿ, ಪೇಲಿಂದ ಮೇಲೆ ಬರುಹೋಗುವ ಜನರನ್ನೇ ಹೊಂಚು ಹಾಕಿ ಕುಳಿತ ನಾಯಿಯು ಕಚ್ಚುವುದು. ನೀಚ ಜನರ ಬುದ್ಧಿಯೂ ನಾಯಿ ಬುದ್ಧಿಯಂತೆ. ತಮಗೆ ಆಶ್ರಯವಿತ್ತ ಜನರಿಗೇ ದ್ರೋಹ ಮಾಡುತ್ತಾರೆ, ನೀಚರು. ಇಂಥ ನೀಚರ ಗುಣವು ಹೇಗೆ ಬದಲಾಗಬೇಕೊ ತಿಳಿಯದು.

೧೭೮

೧೭೩

ಗನುಲ ಬುಟ್ಟು ಲೋಹಗಣಮುನಂದೆಲ್ಲೆಡ, ಬನಿಕಿವಚ್ಚು ನೊಕ್ಕ ಇನುಮೆಚಾಲ
ನೈನಜುಲಕ ಬರತು ರದಿಹೆಚ್ಚುಗಾನುಂಟ, ವಿಶ್ವದಾಭಿರಾಮ ವಿನುರ ವೇಮ

ಗಣಿಯೊಳಗೆ ಹುಟ್ಟುವ ಲೋಹಗಣದೊಳೆಲ್ಲ
ಗಣನೆಯತಿ ಕಬ್ಬಿಣ ಬಳಕೆಗೆಂದು
ತೃಣವೆನಿಪುದದುವೆ ವಿಪುಲವಾಗಿ ದೊರೆಯೆ
ವಿಶ್ವದಾಭಿರಾಮ ಕೇಳು ವೇಮ.

ಗಣಿಗಳಲ್ಲಿ ವಿವಿಧ ಲೋಹಗಳು ದೊರೆಯುತ್ತವೆ. ಅವುಗಳಲ್ಲಿ ಬಳಕೆಯ ದೃಷ್ಟಿಯಿಂದ ಕಬ್ಬಿಣದ ಎಣಿಕೆ ಬಹಳ. ಕಬ್ಬಿಣ ಅನೇಕ ಉಪಕರಣಗಳನ್ನು ತಯಾರಿಸಲು ವಿನಿಯೋಗವಾಗುತ್ತದೆ. ಆದರೆ ಅದಕ್ಕೆ ವಿಶೇಷ ಮಹತ್ವವುಂಟು. ಆದರೆ ಅಂಥ ಕಬ್ಬಿಣವು ಅತಿ ಹೆಚ್ಚಾಗಿ ದೊರೆತರೆ, ಅದಕ್ಕೆ ಬೆಲೆ ಕಡಿಮೆಯಾಗಿ ತೃಣಸಮಾನವೆನಿಸುತ್ತದೆ.

ಅತಿಯಾದರೆ ಯಾವುದಕ್ಕಾದರೂ ಮಹತ್ವ ಕಡಿಮೆಯಾಗುತ್ತದೆ.

೧೭೪

ಕಾಂತಸಿಂದುರಂಬು ಗಡುಪಿತ್ತರೋಗಿಕಿ, ನೊನರ ಮಧುವುತೋಡ ನೊಸಗಿನಂತ
ದನರು ದೇಹಬಲಮು ಧನ್ಯುಡ್ಮೆಗಟ್ಟಿಕ್ಕು ವಿಶ್ವದಾಭಿರಾಮ ವಿನುರ ವೇಮ.

ಕಾಂತ ಸಿಂಧುರವನು ಕಡುಪಿತ್ತರೋಗಿಗೆ
ಸೂಕ್ತ ಮಧುವಿನೊಡನೆ ನೀಡಲಾಗ,
ಸ್ವಾಸ್ಥ್ಯವುಂಟು; ಧನ್ಯ ಭಕ್ತ ದಡವುಟ್ಟುವ
ವಿಶ್ವದಾಭಿರಾಮ ಕೇಳು ವೇಮ.

ವಿಪರೀತ ಪಿತ್ತರೋಗ ಬಂದವನು ಕಾಂತ ಸಿಂಧೂರವನ್ನು ಸರಿಯಾಗಿ ಜೇನುತುಪ ದೊಡನೆ ಸೇವಿಸಿದರೆ, ಗುಣಮುಖವಾಗಿ ಅವನಿಗೆ ದೇಹ ಬಲವು ಬರುತ್ತದೆ. ಅದೇ ರೀತಿ ಭಕ್ತನಾದವನು ಧನ್ಯನಾಗಿ ತನ್ನ ಗುರಿಯನ್ನು ತಲುಪುತ್ತಾನೆ.

೧೭೯

೧೭೫

ಋತಮನೃತಮೆರುಂಗ ನೆವ್ವರಿತರಮಗು? ಸ್ಥಿತಿಯು ಗತಿಯುದೆಲಿಯಃ ದೇಟಪಡುನು
ವಿನ್ನಮೂತ್ರಮುನನೆ ವಿವರಿಂಪಗಾರಾದು, ವಿಶ್ವದಾಭಿರಾಮ ವಿನುರ ವೇಮ.

ದಿಟಸಟಿಗಳನರಿಯೆ ಆರು ಶಕ್ತರಯ್ಯ?
ಸ್ಥಿತಿಗತಿಗಳನರಿಯೆ ತಾನೆ ಸ್ಪಷ್ಟ.
ಎಂತೆಂದು ಕೇಳಲು ವಿವರವೆಂತು ಸಾಧ್ಯ?
ವಿಶ್ವದಾಭಿರಾಮ ಕೇಳು ವೇಮ

ಯಾವುದು ಸತ್ಯ? ಯಾವುದು ಸುಳ್ಳು? ಇದನ್ನು ಅರಿಯಲು ಯಾರು ಶಕ್ತರಾಗಿಹರು? ಆದರೆ ಸ್ಥಾವರ-ಜಂಗಮಗಳನ್ನು, ಸ್ಥಿರವಾದುದನ್ನೂ-ಅಸ್ಥಿರವಾದುದನ್ನೂ, ಸ್ಥಿತಿ-ಗತಿಗಳನ್ನು ಅರಿತರೆ, ಎಲ್ಲವೂ ಸ್ಪಷ್ಟವಾಗುತ್ತದೆ. ಆ ರೀತಿ ತಿಳಿಯುವುದನ್ನು ಬಿಟ್ಟು, ಸತ್ಯ-ಅಸತ್ಯ ಹೇಗಿರುತ್ತದೆಂದು ಪ್ರಶ್ನೆ ಕೇಳಿದರೆ, ಆ ಬಗ್ಗೆ ವಿವರ ನೀಡುವುದಾಗಲೀ ಬಣ್ಣಿಸುವುದಾಗಲೀ ಹೇಗೆ ಸಾಧ್ಯವಾಗಬಹುದು. ?

೧೭೬

ಆಲಿನಮ್ಮಿ ಭುವಿನಿ ನಾಚಾರಹೀನುಡೈ, ಪ್ಯಾಲುಮೂಲೆ ನೊಕ್ಕಪ್ರತಿನಕೊರಕು
ಅಡಿತಪ್ಪಿಕುಂಡ ಗಾಡುಗಾಚಿನವಾಡು, ವಿಶ್ವದಾಭಿರಾಮ ವಿನುರ ವೇಮ

ನುಡಿದಿವಮಾರಿ, ಜಗದಿ ಆಚಾರ ವಿಹೀನ,
ಹೊಣೆಗೇಡಿಯೆನಿಪನು; ಆಣೆಗಾಗಿ,
ನುಡಿಗೆ ತಪ್ಪದಂತೆ ಕಾಡುಕಾಡು ಅಲೆದ
ವಿಶ್ವದಾಭಿರಾಮ ಕೇಳು ವೇಮ

ಹರಿಶ್ಚಂದ್ರ ಮಹಾರಾಜ ಸತ್ಯಪಾಲಕನೆಂದು ಹೆಸರಾದವ. ಕೊಟ್ಟ ಮಾತಿಗೆ ತಪ್ಪವ ಪ್ರತೀತಿ ಪಡೆದವ. ಹರಿಶ್ಚಂದ್ರನ ಸತ್ಯಸಂಧತೆಯನ್ನು ಪರೀಕ್ಷಿಸಲು ವಿಶ್ವಾಮಿತ್ರ ಪರಿಪರಿಯಾಗಿ ಪೀಡಿಸಿದ. ದಾನ ಬೇಡಿದ. ದಾನದ ವಚನ ದೊರೆಯಿತು. ಇಡೀ ರಾಜ್ಯವನ್ನೇ ದಾನವಾಗಿ ಪಡೆದು, ಮೇಲೆ ದಕ್ಷಿಣೆಯ ಮೊತ್ತ ಮುಟ್ಟಿಸಲು ಹಣವಿಲ್ಲದಂತೆ ಮಾಡಿದ ವಿಶ್ವಾಮಿತ್ರ. ಮುನಿಯ ಋಣ ತೀರಿಸಲು ಕಾಶಿಗೆ ದುಡಿಯ ಹೊರಟ. ವಿಶ್ವಾಮಿತ್ರ ಬೆನ್ನಟ್ಟಿದ. ನಕ್ಷತ್ರಕನೂ ಜೊತೆಗಿದ್ದ. ಮುನಿಯ ಋಣ ತೀರಿಸಲು ಪ್ರತಿಜ್ಞೆಗೈದ. ಸೂರ್ಯ ಮುಳುಗುವ ಮೊದಲು ಹಣ ಮುಟ್ಟಿಸಬೇಕಾಗಿತ್ತು. ತನ್ನ ವಚನ ಕಾಪಾಡುವುದೇ ಧರ್ಮವೆಂದು ಬಗೆದ. ತನ್ನನ್ನು ನಂಬಿ ಬಂದ ಹೆಂಡತಿ ಚಂದ್ರದುತಿಯನ್ನೂ ಮಾರಲು ಹಿಂಜರಿ-ಮುಂದೆ ನೋಡಲಿಲ್ಲ. ಧರ್ಮಪತ್ನಿಯನ್ನು ಜಾಹೀರ ಲಿಲಾವಿನಿಂದ ಮಾರಾಟ ಮಾಡುವುದು ಅಧರ್ಮವೆಂದು ಬಗೆಯಲಿಲ್ಲ.

ತನ್ನ ಈ ಕೃತಿಯಿಂದ ಹರಿಶ್ಚಂದ್ರ ಪತಿಯ ಆಚಾರದಿಂದ ವಿಮುಖನಾದ. ತಾನು ತಾನು ಮಾಡಿದ ಆಣೆಯನ್ನು ನೆನಿಸಿ, ತನ್ನ ಹೊಣೆ ಮರೆತು ಹೊಣೆಗೇಡಿಯಾದ. ಮೇಲಾಗಿ ಕೊಟ್ಟ ಮಾತಿಗೆ ತಪ್ಪದೆ, ಅಡವಿ, ಅಡವಿ ತಿರುಗಿ ಪಶ್ಚಾತ್ತಾಪಪಟ್ಟನು.

೧೭೭

ನೇಡುಚುನ್ನಯಟ್ಲಿ ವಿನಯಂಬುಜೂಪುನು, ಗೋತದಿಂಪುಸುಮ್ಮು ಕೊಂಡೆಗಾಡು,
ಚೇರ್ಪರಾದುವಾನಿ ಜೆರಚುನು ದುದಿನೆಟ್ಲೊ, ವಿಶ್ವದಾಭಿರಾಮ ವಿನುರ ವೇಮ.

ಸ್ನೇಹ ಬಯಸುತಿದ್ದು, ವಿನಯ ಸೂಚಿಸುತಿಹ;
ಹೆಣ್ಣಿನಿಂಪು ತೋರ್ಪ ಗುಪ್ತಚಾರ.
ಕೂಡಬಾರದವನನೆಂದೂ ಕೊನೆತನಕ
ವಿಶ್ವದಾಭಿರಾಮ ಕೇಳು ವೇಮ

ಗುಪ್ತಚಾರನು ಸಂಧಿ ಸಾಧಿಸಿ ಒಳಗುಟ್ಟು ತಿಳಿಯಲು ಹವಣಿಸುವ ವ್ಯಕ್ತಿ. ಅವನ ಗತ್ತು ಬಹು ಪರಿಣಾಮಕಾರಿ. ತಂತ್ರವೂ ಅದೇ ರೀತಿ. ಮೊದಲು ಗೆಳೆತನ ಬಯಸುತ್ತಾನೆ. ವಿನಯ ಪ್ರದರ್ಶಿಸುತ್ತಾನೆ. ಸಾಲದೆ ಸ್ತ್ರೀಯರ ಮೋಹವನ್ನೂ ತೋರುತ್ತಾನೆ.



೧೭೮

ಕಲ್ಲುನೀಳ್ಲುದ್ರಾಗಿ ಕಡುಪೆದ್ದವಾರಿಲೋ, ಜೀರವಿಡಿಚಿ ತಿರುಗು ಚೆಡಿನರುಂಡು.
ಪನುಲುತೀರುನೆನುಕ ಪಾತಲುಗಟ್ಟುನು ವಿಶ್ವದಾಭಿರಾಮ ವಿನುರ ವೇಮ

ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ,
ಬಟ್ಟೆ ಕಳಚಿ ತಿರುಗುವಂಥ ದುಷ್ಟ.
ಎಲ್ಲ ಹೋದ ಮೇಲೆ, ಹರಕು ವಸ್ತ್ರ ಹೊದೆವ
ವಿಶ್ವದಾಭಿರಾಮ ಕೇಳು ವೇಮ

ಮದ್ಯ ಕುಡಿದಾಗ ಮದವೇರುತ್ತದೆ. ಅವನ ಪ್ರಜ್ಞೆ ಸ್ಥಗಿತವಾಗುತ್ತದೆ. ಪ್ರಜ್ಞಾಹೀನನಾದವನು ಅಸ್ತವ್ಯಸ್ತನಾಗಿ, ಬಟ್ಟೆಬರೆ ಕಳಚಿ, ದೊಡ್ಡ ಜನರ ಮಧ್ಯೆ ಲಜ್ಜೆಗೆಟ್ಟು ಸಿಕ್ಕಾಬಟ್ಟೆ ಬೊಗಳುತ್ತ ತಿರುಗುತ್ತಾನೆ. ಇದೆಲ್ಲ ಅವನ ಹತ್ತಿರ ಹಣವಿರುವ ವರೆಗೆ ಮಾತ್ರ. ಹಣವೆಲ್ಲ ಹೋದಮೇಲೆ ಅವನು ಹೊದೆಯಲು ಸಹ ಬಟ್ಟೆಯಿಲ್ಲದಾಗಿ ಹರಕು ಚಿಂದಿ-ಬಟ್ಟೆಯನ್ನೇ ಹೊದೆಯುತ್ತಾನೆ. ಬಟ್ಟೆ ಇದ್ದಾಗ ಮದದಿಂದ ಬಟ್ಟೆಗಳನ್ನು ಅಸ್ತವ್ಯಸ್ತವಾಗಿರಿಸಿದ ಕುಡುಕ ಕೊನೆಗೆ ಹೊದೆವ ಬಟ್ಟೆಯೇ ಇಲ್ಲದ ಕಡು-ಬಡವನಾಗುತ್ತಾನೆ.

ಒಪಗಲ್ಲುದುನನಿ ಯೊಕ್ಕಿಂತಮಿನಿಕಿನ ನುನ್ನವಾಸಿಕೂಡ ಸುನ್ನಜುಟ್ಟ
ಮೂಲರಂಕುಲಾಗಿ ಗೇಲಿನೇಯುದುರಯಾ, ವಿಶ್ವದಾಭಿರಾಮ ವಿನುರ ವೇಮ.

ಸಹನ ಶಕ್ತಿ ಎಷ್ಟಿರಲು ಕೊಂಚ ಕೆಡಲು
ನಿನ್ನ ಶುಭ್ರ ಕೀರ್ತಿ ಕೂಡ ಶೂನ್ಯ
ಮುನ್ನಗೈದ ಕೆಡುಕು ಗೇಲಿಯಾಡುತಿಹುದು
ವಿಶ್ವದಾಭಿರಾಮ ಕೇಳು ವೇಮ

ಮಳೆಯು ಸುರಿಯದಿರೆಲು ಬರಗಾಲ ಬರುವುದು. ಮಳೆಯು ಬೀಳಲು, ಎಲ್ಲೆಡೆಗೆ ಅತಿ ಕ್ಷೇಮಕರ ಪರಿಸ್ಥಿತಿ ಉಂಟಾಗುವುದು. ಕ್ಷೇಮವಾಗಲಿ,ಕ್ಷಾಮವಾಗಲಿ, ಒಂದರ ನಂತರ ಇನ್ನೊಂದು ಸರತಿಯಂತೆ ಬರುತ್ತಿರುವಂತೆ ಅನ್ನಿಸುತ್ತದೆ.

ದಿನ-ರಾತ್ರಿಗಳಂತೆ ಸುಖ ದುಃಖಗಳೂ ಒಂದರ ಹಿಂದೊಂದು ಬರುವುವೆಂಬ ತಿಳಿವಳಿಕೆಯೇ ಆಶಾವಾದ.



೧೮೦

ವಾನಕುರಿಯಕುನ್ನ ವಚ್ಚುನು ಕ್ಷಾಮಂಬು ವಾನಕುರಿನೆನೇನಿ ವರದ ಪಾರು
ವರದಕರುವುರೆಂಡುವರುಸಲೋನೆರು ಗುಡೀ ವಿಶ್ವದಾಭಿರಾಮ ವಿನುರ ವೇಮ.

ವಾರಿ ಸುರಿಯದಿರಲು ಒಡನೆ ಬಂತು ಕ್ಷಾಮ
ವಾರಿ ಸುರಿಯುತಿರಲು ಪರಮ ಕ್ಷೇಮ
ಕ್ಷೇಮಕ್ಷಾಮವೆರಡು ಸರತಿಯಿಂ ಬಪ್ಪವು
ವಿಶ್ವದಾಭಿರಾಮ ಕೇಳು ವೇಮ.

ನಮ್ಮಲ್ಲಿ ಅಮಿತ ಸಹನ ಶಕ್ತಿ ಇರಬಹುದು. ಆದರೆ ಬಹುಕಾಲ ಸಹನೆ ತೋರಿ ಕೊನೆಗೊಮ್ಮೆ ತಾಳ್ಮೆಗೆಟ್ಟು ವರ್ತಿಸಿದರೆ, ಅವನ ಶುಭ್ರ ಕೀರ್ತಿಯೆಲ್ಲ ಇಲ್ಲದಂತಾಗಿ ಹೋಗುವುದು. ನಾವೇ ಮೊದಲು ಮಾಡಿದ ಕೆಡುಕು ಕಾರ್ಯಗಳ ಪ್ರತಿಕ್ರಿಯೆಯು ನಮ್ಮ ಇಂದಿನ ಸಹನೆ ಕೆಡಿಸುವ ಕಾರ್ಯಗಳ ರೂಪದಲ್ಲಿ ಗೇಲಿ ಆಡುತ್ತಿರುವುದು.



ಆರ್ಥಿಕ ವಿಭಾಗ



೧೮೧

ಕಲಿಮಿನಾಡುನರುಡು ಕಾನಡು ಮುದಮುನ, ಲೇನಿನಾಡು ಮೊದಲೆ ಲೇದು ಪೆಟ್ಟ
ಕಲಿಮಿಲೇಮಿಲೇನಿ ಕಾಲಂಬುಗಲ್ಗುನಾ ? ವಿಶ್ವದಾಭಿರಾಮ ವಿನುರ ವೇಮ

ಕನಕ ಪಡೆದ ನರನು ಕಾಣನು ಮುದದಿಂದ;
ಇಲ್ಲದಾಗ ಮೊದಲೆ ಇಲ್ಲ ಕೊಡಲು,
ಕನಕವಿಲ್ಲದಾಗ ಕಾಲ ನಡೆಯಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ತನ್ನಲ್ಲಿ ಸಿರಿ-ಸಂಪದಗಳಿರುವಾಗ ಮನುಷ್ಯನು ಗರ್ವದಿಂದ ಇತರರ ಯೋಗಕ್ಷೇಮ ವಿಚಾರ ಮಾಡುವದಿಲ್ಲ. ಇನ್ನು ತನ್ನ ಸಂಪತ್ತು ನಾಶವಾಗಿ ತನಗೇನೂ ಉಳಿಯದಾಗ ಬೇರೆಯವರಿಗೆ ಧನ ಸಹಾಯ ಮಾಡುವುದಾದರೂ ಎಂತು ? ಮೇಲಾಗಿ ತನ್ನಲ್ಲಿ ಸಂಪತ್ತೇ ಇಲ್ಲದಾಗ ಅವನ ಮಾತೂ ನಡೆಯದು.



೧೮೨

ಅರಯದರಚುಕಲ್ಲಲಾಡೆಡು ವಾರಿಂಪ್ಲ ವೆಡಲಕೇಲ ಲಕ್ಷ್ಮಿವಿಶ್ರಮಿಂಚು ?
ಭಿನ್ನಘಟಮುನೀರು ಚನ್ನಚಂದಂಬುನ, ವಿಶ್ವದಾಭಿರಾಮ ವಿನುರ ವೇಮ.

ತಿಳಿಯಲಾಗ ಈಗ ಸುಳ್ಳನ ಮನೆಯೊಳಗೆ
ತೊಲಗದೇಕೆ ಲಕ್ಷ್ಮಿ ವಿಶ್ರಮಿಪಳು!
ಒಡೆದ ಮಡಕೆ ನೀರು ಒಡನೆ ಹರಿವ ರೀತಿ
ವಿಶ್ವದಾಭಿರಾಮ ಕೇಳು ವೇಮ.


ನೀರು ತುಂಬಿದ ಮಡಕೆಯನ್ನು ಒಡೆದೊಡನೆ, ನೀರು ಹೊರಬಿದ್ದು ಹರಿದಲ್ಲಿ ಹೋಗುವದು. ಇನ್ನು ಸೂಕ್ಷ್ಮವಾಗಿ ತಿಳಿದು ನೋಡಿದರೆ, ಮೋಸವಂಚನೆ ನಿರತನಾಗಿರುವವನ ಮನೆಯಲ್ಲಿ ಭಾಗ್ಯಲಕ್ಷ್ಮಿಯು ನಿಲ್ಲಬಹುದೆಂತು? ನಿಲ್ಲಲಾರಳು; ಎಂಬ ಅರಿವೂ ಹೊಳೆಯುತ್ತದೆ. ಮೋಸವಂಚನೆಗಳು ಗಡಿಗೆಯ ಬಿರುಕಿನಂತೆ.

೧೮೩

ಧನಮುಗೂಡಬೆಟ್ಟ ಧರ್ಮಂಬುನೇಯಕ, ತಾನುದಿನಕ ಲೆಸ್ಸದಾಚುಗಾಕ,
ತೀನೆನೀಗಗೂರ್ಚಿ ತೆರುವರಿಕಿಯ್ಯದಾ ? ವಿಶ್ವದಾಭಿರಾಮ ವಿನುರ ವೇಮ.

ಧನವ ಕೂಡಿಹಾಕಿ ಧರ್ಮವಾಚರಿಸದೆ,
ತಾನು ತಿನದೆ ಬಹಳ ಬಚ್ಚಿಡುವನು,
ಜೇನು ಹುಳುವು ಕೂಡಿಸಿಟ್ಟು ಪರಗೀಯದೆ?
ವಿಶ್ವದಾಭಿರಾಮ ಕೇಳು ವೇಮ.

ಜೇನು ಹುಳವು ದಿನಂಪ್ರತಿ ಅಲೆದಲೆದು ಜೇನು ಕೂಡಿ ಹಾಕುತ್ತದೆ. ಯಾರಾದರೂ ಬಳಿಗೆ ಬಂದರೆ ಕಚ್ಚಿ ಘಾಸಿಗೊಳಿಸುತ್ತದೆ. ಕೊನೆಗೆ ಯಾರೋ ಬಂದು ಉರಿ ಹಾಕಿ, ಜೇನು ಹುಳು ಎಬ್ಬಿಸಿ, ಹುಟ್ಟು ಬಿಡಿಸಿಕೊಂಡು ಒಯ್ಯುತ್ತಾನೆ. ಅದೇ ರೀತಿಯಾಗಿ, ಹಣವನ್ನು ಹೊಂದಿದವನು ಅದರಿಂದ ಅನ್ಯರಿಗೆ ಉಪಕಾರವೆನಿಸುವ ಧರ್ಮಕಾರ್ಯಗಳನ್ನು ಕೈಕೊಳ್ಳದೆ ಮತ್ತು ತಾನೂ ಅನುಭವಿಸದೆ, ಮಡಿದು ಹೋಗುವನು. ನಂತರ ಆ ಹಣವು ಅವರಿವರ ಪಾಲಾಗುತ್ತದೆ. ಅನುಕೂಲವಿರುವಾಗ ದಾನಧರ್ಮ ಮಾಡಬೇಕು.



೧೮೪

ಕನುಲುಂಲೇನಿವಾಡು ಗಾಳ್ಳುಪೋಯಿನವಾಡು, ಉಭಯುಲರಯಗೂಡಿ ಯುಂಡುನಟ್ಲು,
ಪೇದಪೇದಗೂಡಿ ಪೆನಗೊನಿಯುಂಡುನು, ವಿಶ್ವದಾಭಿರಾಮ ವಿನುರ ವೇಮ

ಕಣ್ಣು ಇಲ್ಲದವನು ಕಾಲು ಇಲ್ಲದವನು
ಉಭಯರು ಒಡಗೂಡಿ ಉಂಟು, ಅಂತೆ,
ಬಡವ ಬಡವನೊಡನೆ ಬೆರೆತು ಇರುವ ನೋಡು
ವಿಶ್ವದಾಭಿರಾಮ ಕೇಳು ವೇಮ.

ಎಲ್ಲ ಮನುಷ್ಯರೂ ಒಂದಿಲ್ಲೊಂದು ರೀತಿಯಿಂದ ಅಪೂರ್ಣರೇ. ಒಬ್ಬನಿಗೆ ಕಣ್ಣು ಇಲ್ಲದಿರಬಹುದು, ಇನ್ನೊಬ್ಬನಿಗೆ ಕಾಲು ಇಲ್ಲದಿರಬಹುದು. ಇಬ್ಬರೂ ಕೂಡಿಯೇ ಭೂಮಿಯ ಮೇಲಿರುವರು. ಕೂಡಿ ಬಾಳಬಲ್ಲರು. ಅದರಂತೆ ಹಣವಿಲ್ಲದ ಬಡವನೊಬ್ಬನು ಇನ್ನೊಬ್ಬ ಬಡವನೊಡನೆ ಸೇರಿ ಇರಬಲ್ಲನು. ಹೊಂದಿಕೊಂಡು ಹೋಗುವುದೇ ಯಶದ ಗುಟ್ಟಾಗಿದೆ.

೧೮೫

ಪಾಗಪಚ್ಚಡಂಬು ಪೈನಕೂಸಂಬುನು, ಪೋಗು ಲಂಗರಮುಲು ಬೂಜ್ಜಕಡಪು.
ಗಲಿಗಿನಟ್ಟವಾನಿ ಗಂದುರು ಚುಟ್ಟಾಲು, ವಿಶ್ವದಾಭಿರಾಮ ವಿನುರ ವೇಮ

ಪೇಟ ನಿಲುವಂಗಿಯು, ರವಿಕೆ ಕಂಠೀಸರ
ಉಂಗುರ ನೆರೆ ಬೊಜ್ಜು ಉಳ್ಳ ಹೊಟ್ಟೆ
ಇರುವಂಥ ಮನುಜಗೆ ಇಹರೆಲ್ಲ ನೆಂಟರೆ.
ವಿಶ್ವದಾಭಿರಾಮ ಕೇಳು ವೇಮ

ವೇಷ-ಭೂಷಣಗಳಿಗೆ ಮೋಹಗೊಂಡು ಮಾನ ಸಲ್ಲಿಸುವುದು ರೂಢಿ.(ಹದಿನೈದನೆಯ ಶತಮಾನದ) ದೊಡ್ಡ ಮನುಷ್ಯನ ವೇಷ ಭೂಷಣಗಳೆಂದರೆ, ತಲೆಯಮೇಲೆ ಪೇಟ, ಮೈ ಮೇಲೆ ನಿಲುವಂಗಿ, ಮೇಲೊಂದು ಮಡಿಕೆ ಹಾಕಿದ ರೇಶ್ಮೆ ರವಿಕೆ, ಕೊರಳಿಗೆ ಕಂಠೀಸರ, ಬೆರಳಿಗೆ ಉಂಗುರ, ಉಬ್ಬಿದ ಉದರಗಳಾಗಿವೆ. ಈ ರೀತಿ ಇರುವ ಮನುಷ್ಯನನ್ನು ಎಲ್ಲರೂ ತಮ್ಮ ನೆಂಟನೇ ಎಂದು ಹೇಳಿಕೊಳ್ಳುತ್ತಾರೆ.



೧೮೬

ಕಲಿಗಿನಮನುಜುಂಡು ಕಾಮುಂಡು ಸೋವುಂಡು, ಮಿಗುಲತೇಜಮುನನು ಮೆರಯುಂಚುಡು
ವಿತ್ತಹೀನುಡೈನ ರಿತ್ತಯ್ಯೆಪೋವುನು, ವಿಶ್ವದಾಭಿರಾಮ ವಿನುರ ವೇಮ.

ಕನಕವುಳ್ಳ ಮನುಜ ಕಾಮು ಮತ್ತೆ ಸೋಮು
ಮಿಗಿಲು ತೇಜದಿಂದ ಮೆರೆಯುತಿಹನು
ವಿತ್ತಹೀನನಾಗೆ ವ್ಯರ್ಥಹೋಹುದೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

(ಸರ್ವೇ ಗುಣಾ: ಕಾಂಚನಮಾಶ್ರಯಂತಿ. ಅಂದರೆ, ದುಡ್ಡು ಇದ್ದವನನ್ನೆ ಸದ್ಗುಣ ಸಂಪನ್ನನೆಂದು ಲೋಕ ತಿಳಿಯುತ್ತದೆ, ಎಂದು ಭರ್ತೃಹರಿ ಹೇಳುತ್ತಾನೆ. ಅದೇ ರೀತಿ) ಬಂಗಾರ ಉಳ್ಳ ಮನುಜನು ಕಾಮನಂತೆ ಮನೋಹರನು. ಸೋಮನಂತೆ ವಿಷಯಭೋಗ ನೀಡುವವನು, ಹಣವಿದ್ದರೆ ಮಾತ್ರ ಹೆಚ್ಚಿಗೆ ತೇಜಸ್ವಿಯಾಗಿ ಮೆರೆಯುವನು. ಒಂದು ವೇಳೆ ಹಣವು ಹೋದರೆ, ಅವನ ಬಾಳುವೆಯೇ ವ್ಯರ್ಥವಾಗಿ ಹೋಗುವುದು.

೧೮೭

ವಿಡುವವುಂಡುವಲೇಕ ಕುಡುವಗಟ್ಟಗಲೇಕ, ವೆರವುಲೇಕ ವಿದ್ಯನೊರಯಲೇಕ,
ವೆಡಲಲೇನಿವಾನಿ ನಡುಪೀನುಗಂದುರು ವಿಶ್ವದಾಭಿರಾಮ ವಿನುರ ವೇಮ.

ತೆಗೆದು ಮುಡಿಯಲಿಲ್ಲ ತೊಟ್ಟು ಉಣಲು ಇಲ್ಲ.
ಬೋಧಿಯಲ್ಲ ವಿದ್ಯೆ ಶೋಧಕಲ್ಲ.
ಕೂಡಿಹೋಗದವನು ನಡೆವ ಕಳೇಬಕವು.
ವಿಶ್ವದಾಭಿರಾಮ ಕೇಳು ವೇಮ.

ವಸ್ತ್ರಾಭರಣಗಳನ್ನು ಸಂದೂಕದಲ್ಲಿ ಹಾಕಿ, ಮುಚ್ಚಿಟ್ಟು, ಕಳ್ಳಕಾಕರ ಹೆದರಿಕೆಯಿಂದ ಅವುಗಳನ್ನು ಹೊರಗೆ ತೆಗೆದು, ಮುಡಿದುಕೊಳ್ಳದೆ, ತೊಟ್ಟುಕೊಳ್ಳದೆ, ನೀಡದೆ ಇರುವವನು ಸಂಪತ್ತು ಏನೆಂದು ತಿಳಿಯನು. ಮತ್ತು ಸಂಪತ್ತಿನ ಬಳಕೆಯ ವಿದ್ಯೆಯನ್ನು ಒರೆಗಲ್ಲಿಗೆಹಚ್ಚಿ ನೋಡಲಾರನು. ಅಂದರೆ, ನಿಜವಾದ ಸಂಪತ್ತು ಅದನ್ನು ಬಳಸುವ, ಅದನ್ನು ಉಪಭೋಗಿಸುವ ಪರಿಯಲ್ಲಿಯೇ ಇದೆ. ಹಬ್ಬ ಹರಿದಿನಗಳಲ್ಲಿ ಜನರೊಡನೆ ಕೂಡಿ ಉಂಡುಟ್ಟು ಸುಖಿಯಾಗಿರದವನು ನಡೆಯುವ ಹೆಣದಂತೆಯೇ ಸರಿ.

೧೮೮

ಲೇನಿಕಾಲವುನಕು ಲೇಕಿಮನವುನೊಂದು, ನೀನಿನಪುಲಿರೀತಿ ನೆರುಗಕುಂಡು,
ಕಠಿಣ ಬುದ್ಧಿಕಲುಗ ಗಲಿಮೆಟ್ಲುಕಲುಗುರಾ? ವಿಶ್ವದಾಭಿರಾಮ ವಿನುರ ವೇಮ.

ಇರದ ಕಾಲದಲ್ಲಿ ಕರಿಯ ಮನಸು ಹೊಂದಿ,
ಈಡ ಹುಲಿಯ ರೀತಿ ಅರಿಯದಿಹನು
ಕಠಿಣ ಬುದ್ಧಿಯುದಿಸೆ ಕನಕವೆಂತು ಬಹುದು?
ವಿಶ್ವದಾಭಿರಾಮ ಕೇಳು ವೇಮ.

ಸಿರಿ ಸಂಪದಗಳು ಇಲ್ಲದ ಕಾಲದಲ್ಲಿ ಅವರೆ ಮನಸ್ಸು ಕೂಡ ಕ್ಷುದ್ರವಾಗುತ್ತದೆ. ಅದಕ್ಕೆ ಒಳಿತು ಕೆಡಕುಗಳನ್ನು ಗುರುತಿಸುವ ಸೂಕ್ಷ್ಮಗುಣ ಇಲ್ಲವಾಗುವುದು. ಈಡ ಹುಲಿಯು ಒಳಿತು ಕೆಡಕುಗಳನ್ನು ಎಣಿಸದೆ ಮೈಮೇಲೆ ಬೀಳುವಂತೆ ಎಲ್ಲ ಕಳೆದುಕೊಂಡವನೂ ವಿವೇಕ ಶೂನ್ಯನಾಗಿ ಮುನ್ನುಗ್ಗುತ್ತಾನೆ. ಹಿತಾಹಿತಗಳನ್ನು ಅರಿಯುವ ಸಹೃದಯತೆಯನ್ನು ಕಳೆದುಕೊಂಡು ಕಠಿಣವಾದ ಬುದ್ಧಿ ಹುಟ್ಟಿದಾಗ ಅವನು ಕೈಕೊಂಡ ಕಾರ್ಯಗಳು ಫಲಪ್ರದವಾಗುವುದು ಹೇಗೆ ? ಅವನಿಗೆ ಧನಪ್ರಾಪ್ತಿಯುಂಟಾಗುವುದಾದರೂ ಹೇಗೆ ?

೧೮೯

ಪ್ರಿಯಮುಲೇನಿವಿಂದು ಪಿಂಡಿವಂಟಲಚೇಟು, ಭಕ್ತಿ ಲೇನಿಪೂಜ ಪತ್ರಿಚೇಟು,
ಪಾತ್ರಮೆರುಗನೀವಿ ಬಂಗಾರುಚೇಟುರಾ, ವಿಶ್ವದಾಭಿರಾಮ ವಿನುರ ವೇಮ.

ಹದುಳವಿರದ ಹಬ್ಬ, ಹಿಟ್ಟುವುದ್ದೆ ಕೇಡು
ಭಕ್ತಿಯಿರದ ಪೂಜೆ; ಪತ್ರಿ ಕೇಡು
ಪಾತ್ರವರಿಯದೀಯೆ, ಬಂಗಾರನೆ ಕೇಡು
ವಿಶ್ವದಾಭಿರಾಮ ಕೇಳು ವೇಮ.

ಪ್ರೀತಿಯಿಂದ ಬಡಿಸಿದರೆ ಎಂಥ ಅಡುಗೆಯಾದರೂ ಸರಿಯೆ. ಪ್ರೀತಿಯಿಲ್ಲದೆ ಇದ್ದರೆ ಹಬ್ಬದೂಟ ಬಡಿಸಿದರೂ, ಅದೆಲ್ಲ ಒಣ ಹಿಟ್ಟಿನಂತೆ ವ್ಯರ್ಥ. ಅದೇ ರೀತಿ ತಾನು ಗೈಯುವ ಕಾರ್ಯದ ಫಲವೆಲ್ಲ ಪರಮಾತ್ಮನಿಗೇ ಸೇರಿದ್ದು ಎನ್ನುವ ಭಕ್ತಿ ಭಾವ ಮೂಡದೆ, ಕೊಂಡು ಇಲ್ಲವೆ ಆಯ್ದು ತಂದ ಪತ್ರ ಪುಷ್ಪಗಳನ್ನು ಸಲ್ಲಿಸಿ ಪೂಜೆಗೈದರೆ, ಕೇವಲ ಪತ್ರಪುಷ್ಪಗಳಷ್ಟು ಹಾಳು. ಇದರಂತೆ ದಾನ ಸ್ವೀಕರಿಸುವವನ ಯೋಗ್ಯಾಯೋಗ್ಯತೆಯನ್ನೂ, ಅವನು ಸ್ವೀಕರಿಸಲು ತಕ್ಕವನು ಅಹುದೋ ಅಲ್ಲವೋ ಎಂಬುದನ್ನೂ ತಿಳಿಯದೆ, ದಾನ ನೀಡಿದರೆ, ಅವನಿಗಿತ್ತ ಹೊನ್ನು ಹಾಳು. ಏಕೆಂದರೆ ದಾನವಾಗಿಬಂದ ಬಂಗಾರವನ್ನು ಅವನು ಕೀಳುಭೋಗಕ್ಕಾಗಿ ಬಳಸಿಕೊಂಡು, ದಾನದ ಉದ್ದೇಶವನ್ನೇ ಕೆಡಿಸಿ ಬಿಡಬಹುದು.

೧೯೦

ಪೂಸಪೋಗುಲ್ಕೆನ ಪುಟ್ಟಂಬು ವಿಡಿಯಂಬು, ಗಾಯಪುಷ್ಪ ಮಿಗುಲತಗಲ್ಗಿಯುನ್ನ,
ಹೀನಜಾತಿನ್ಗೆನ ನಿಂದುರಮ್ಮಂದುರು, ವಿಶ್ವದಾಭಿರಾಮ ವಿನುರ ವೇಮ

ಮುತ್ತು ಕರ್ಣದೋಲೆ ಮುತ್ತುಡಿಗೆ ತಾಂಬುಲ
ಕಾಯಪುಷ್ಪಿ ಒಡೆದು ಕಾಣಲಾಗ,
ಕೆಳಗು-ಜಾತಿಯೇನು ಒಳಗೆಬಾಯೆನುವರು
ವಿಶ್ವದಾಭಿರಾಮ ಕೇಳು ವೇಮ

ಮೇಲು ನೋಟಕ್ಕೆ ಎಲ್ಲರೂ ಮಾರು ಹೋಗುತ್ತಾರೆ. ಮನುಷ್ಯನ ಮೇಲ್ಮೈ ಸದ್ಗುಣಗಳಿಗಿಂತ ಅವನ ವೇಷ-ಭೂಷಣಗಳಿಮೇಲಿಂದ ನಿರ್ಧರಿಸಲ್ಪಡುವುದು, ನಿತ್ಯದ ಅನುಭವ. ಮುತ್ತು ರತ್ನದ ಹಾರ ಧರಿಸಿ, ಕಿವಿಗೆ ಓಲೆ ಇಟ್ಟುಕೊಂಡು, ಅಂದವಾದ ಉಡುಗೆ ತೊಟ್ಟು ತಾಂಬೂಲ ಸವಿಯುತ್ತ ದಷ್ಟಪುಷ್ಟವಾದ ದೇಹವುಳ್ಳ ಬಲಶಾಲಿಯನ್ನು ಕರೆದು ಮನ್ನಿಸುವರು ಕೀಳುಜಾತಿಯವರನ್ನು ಹೊರಗಿನಿಂದ ಹೊರಗೆ ಕಳಿಸುವ ಪದ್ಧತಿಯ ಮೇಲುಕುಲದವರು ಸಹ ಸುಂದರಾಂಗನನ್ನೂ, ಸರ್ವಾಭರಣಭೂಷಿತನನ್ನು, ಅವನು ಹೀನಕುಲದವನಾದರೂ, ಒಳಗೆ ಕರೆದೊಯ್ಯುವರು.

೧೯೧

ಮಾಸಿನತಲತೋಡ ಮಲಿನವಸ್ತ್ರಮುತೋಡ, ನೊಡಲಜಿಡ್ಡುತೋಡ ನುಂಡೆನೇನಿ,
ಅಗ್ರಜನ್ಮುನೈನ ನಟ್ಟಪೊಮ್ಮಂದುನು, ವಿಶ್ವದಾಭಿರಾಮ ವಿನುರ ವೇಮ.

ಮಾಸಿದ ತಲೆಯಿಂದ ಮಲಿನ ವಸ್ತ್ರದಿಂದ
ಒಡಲು ಜಿಡ್ಡಿನಿಂದ ಇರುವನನ್ನು
ಅಗ್ರ ಕುಲಜನೇನು ಅತ್ತ ಹೋಗೆಂಬರು
ವಿಶ್ವದಾಭಿರಾಮ ಕೇಳು ವೇಮ

ಸಮಾಜದಲ್ಲಿ ಉಡುಗೆ-ತೊಡುಗೆಗಳಿಂದ ಮನಷ್ಯನಿಗೆ ಮಾನ-ಸಮ್ಮಾನಗಳು ದೊರೆಯುತ್ತವೆ. ಎಣ್ಣೆ ಹಚ್ಚಿ ಕೂದಲು ನೇವರಿಸದೆ; ಹೊಲಸು ವಸ್ತ್ರಧರಿಸಿ, ಜಿಡ್ಡುಗಟ್ಟಿದ ದೇಹವಿರುವವನನ್ನು, ಅವನೆಂಥ ಮೇಲು ಕುಲದವನೇ ಆದರೂ ಆಚೆಕಡೆಗೆ ಹೋಗು ಎನ್ನುವರು. ಕಾರಣ, ಜೊಕ್ಕ ವೇಷ-ಭೂಷಣಗಳನ್ನು ತೊಟ್ಟರೆ ಹಸನಾಗಿದ್ದರೆ ಮಾತ್ರ, ಸಮಾಜ ಗೌರವಿಸುವುದು.

೧೯೨

ಅಪ್ಪುದೀಯರೋತ ಹರಿಹರಾದುಲಕ್ಕೆನ, ಮೊಪ್ಪೆತೋಡಮ್ಮೈತ್ರಿ ಮೊದಲೆರೋತ,
ತಪ್ಪುಬಲುಕರೋತ ತಾಕಟ್ಟಿಡುಟರೋತ, ವಿಶ್ವದಾಭಿರಾಮ ವಿನುರ ವೇಮ

ಸಾಲವೀಯ ಹೊಲ್ಲ ಹರಿಹರಾದರೇನು ?
ಮುಳ್ಳನ ಜೊತೆ ಮೈತ್ರಿ ಮೊದಲೆ ಹೊಲ್ಲ.
ಸುಳ್ಳು ನುಡಿಯೆ ಹೊಲ್ಲ, ಅಡವು ಇಡಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ

ಮೈಲಾರ ಲಿಂಗ ತಿರುಪತಿ ತಿಮ್ಮಪ್ಪನಿಗೆ ಲಗ್ನದ ಕಾಲಕ್ಕೆ ಏಳು ಕೋಟಿ ರೂಪಾಯಿ ಸಾಲ ನೀಡಿದ್ದು ಕಲ್ಲಾಗಿನಿಂತ ತಿರುಪತಿಯದೇವರು ಕಲಿಯುಗದಲ್ಲಿ ಜನರಿಂದ ಕಾಣಿಕೆ ಪಡೆದು ಆ ಸಾಲ ಸಂದಾಯ ಮಾಡುವನೆಂದು ದಂತ ಕಥೆ ಹಬ್ಬಿದೆ. ಕೊಟ್ಟ ಸಾಲದ ನೆನಪು ತರಲು ಮೈಲಾರ ಲಿಂಗನ ಗೊಗ್ಗಯ್ಯಗಳು ಏಳು ಕೋಟಿ ಏಳು ಕೋಟಿಗೋ ಎನ್ನುತ್ತಾರೆ. ಸಾಲಗಾರ ತಿಮ್ಮಪ್ಪ, ಗೋವಿಂದರಾಜರು ರನ್ನ-ಹೊನ್ನ ಕಳಸ ಹೊತ್ತು ಮೆರೆಯುತ್ತಾರೆ. ಈ ದಂತ ಕಥೆಯ ತಾತ್ಪರ್ಯವೆಂದರೆ, ಕೊಟ್ಟಸಾಲವನ್ನು ದೇವ ದೇವನಾದರೂ ತೀರಿಸುವದಿಲ್ಲ. ಅದರಿಂದ ದ್ವೇಷವರ್ಧಿಸುತ್ತದೆ ಎಂಬುದೇ ಆಗಿದೆ. ಕಾರಣ.)

ಹರಿಹರಾದಿ ದೇವತೆಗಳು ಸಾಲ ಕೇಳಿದರೂ ಕೊಡುವುದು ಸೂಕ್ತವಲ್ಲ. ಅದೇ ರೀತಿ ಮುಂಕು ಬುದ್ಧಿಯವನ ಕೂಡ ಗೆಳೆತನ ಮಾಡುವುದೂ ಸೂಕ್ತವಲ್ಲ. ಏಕಂದರೆ ಅವನೊಡನೆ ನಡೆಯುವ ಚರ್ಚೆಯಿಂದ ವ್ಯವಹಾರದಿಂದ ಯಾವ ಫಲವೂ ಇಲ್ಲ. ನಮ್ಮ ಜೀವನದಲ್ಲಿ ಶ್ರದ್ಧೆ-ವಿಶ್ವಾಸಗಳೇ ಒಳ್ಳೆಯ ಫಲ ನೀಡುವುವಾದುದರಿಂದ, ಸುಳ್ಳು ಹೇಳುವುದು ಒಳ್ಳೆಯದಲ್ಲ. ಅದೇ ರೀತಿ ವಸ್ತು ವಡವೆಗಳನ್ನು ಅಡವು ಇಡುವುದಾಗಲೀ ಇರಿಸಿಕೊಳ್ಳುವುದಾಗಲೀ ಒಳ್ಳೆಯದಲ್ಲ.

೧೯೩

ತನದುಭ್ರಾತಲೆಲ್ಲ ದಾನಂಬುಜೇಯಂಗ, ದನಕುಗಲದಟಂಚು ಮನಗರಾದು,
ತನದುಕಾಲುಗೋಯ್ ದನತಮ್ಮುಡೇಡ್ಚುನಾ? ವಿಶ್ವದಾಭಿರಾಮ ವಿನುರ ವೇಮ

ತನ್ನ ಬಂಧುವೆಲ್ಲ ದಾನ ಮಾಡಿದೊಡನೆ
ತನಗೆ ಫಲವು ಎಂದು ತಿಳಿಯ ಬೇಡ
ತನ್ನ ಕಾಲು ಕೊಯ್ಕೆ ತಮ್ಮ ತಾನಳುವನೆ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸೋದರನು ದಾನ ಮಾಡಿದರೆ ಬಂಧುತ್ವದಿಂದಾಗಿ ಆ ದಾನ ಫಲವು ತನಗೂ ಬರುವುದೆಂದು ತಿಳಿಯುವದು ತಪ್ಪು. ಏಕಂದರೆ ದಾನ ಶೀಲತೆಯು ವೈಯಕ್ತಿಕ ಹೃದಯ ವೈಶಾಲ್ಯತೆಯ ಸಾಧನೆಯು. ದಾನ ಗೈದವರ ಹೃದಯ ವಿಶಾಲಗೊಳ್ಳಬಹುದಷ್ಟೇ. ಕಾರಣ ರಕ್ತ ಸಂಬಂಧಿಗಳು ಮಾಡಿದ ಪುಣ್ಯದ ಫಲ ತಮಗೂ ಉಂಟೆಂದು ತಿಳಿಯದೆ, ತಾವೇ ತಮ್ಮ ಶಕ್ತಿಯಿದ್ದಷ್ಟು ದಾನ-ಧರ್ಮ ಮಾಡಬೇಕು. ಅದೆಂತೆಂದರೆ, ಅಣ್ಣನ ಕಾಲನ್ನು ಕೊಯ್ದರೆ, ತಮ್ಮನು ಅಳುನನೇ ? ಅದೇ ರೀತಿ, ಅಣ್ಣನ ದಾನ ಶೀಲ ಗುಣ ಅವನಿಗೆ; ತಮ್ಮನದು ತಮ್ಮನಿಗೆ.

೧೯೪

ದಾನಕಾನಿವಾನಿ ದರುಚುಗಾವೇಡಿನ, ವಾಡು ದಾತಯೌನೆ ವಸುಧಲೋನ ?
ಅವುರು ದರ್ಭಯೌನೆ? ಯಬ್ಧಿಲೋಮುಂಚಿನ, ವಿಶ್ವದಾಭಿರಾಮ ವಿನುರ ವೇಮ

ದಾನಿಯಲ್ಲದವಗೆ ದುಂಬಾಲು ಬೀಳಲು,
ದಾನಿಯಾಗುವನೇ ಧರೆಯೊಳವನು ?
ದರ್ಭೆಯಹುದೆ ಗರಿಕೆ, ಅಬ್ಧಿಯೊಳಗದ್ದಲು ?
ವಿಶ್ವದಾಭಿರಾಮ ಕೇಳು ವೇಮ.

ಗರಿಕೆ ಹುಲ್ಲುಕಡ್ಡಿಯನ್ನು ಅಮೃತ ಸಮುದ್ರದಲ್ಲಿ ಎದ್ದಿದರೂ, ಅದು ಪವಿತ್ರ ದರ್ಭೆಯೆನಿಸದು. ಅದೇರೀತಿ,ದಾನಶೀಲ ಗುಣವಿಲ್ಲದವನನ್ನು ಬೆಂಬತ್ತಿ ಹೋಗಿ, ಅವನನ್ನು ಎಷ್ಟೊಂದು ಕಾಡಿ ಬೇಡಿದರೂ ಅವನು ದಾನಮಾಡಲಾರನು. ದಾನಶೀಲಾದಿ ಸದ್ಗುಣಗಳು ಸ್ವಭಾವಜನ್ಯವಾದವು. ವ್ಯಾವಹಾರಿಕ ಉಪಕ್ರಮಗಳಿಂದ ಅವನ್ನು ಸೃಜಿಸಲಿಕ್ಕೆ ಸಾಧ್ಯವಿಲ್ಲ.

೧೯೫

ದೊಡ್ಡವಾಮನುಚು ದ್ರೋವಡೊಂಕಲುಕಟ್ಟ, ಅಡ್ಡಮ್ಮೆನಜನುಲರಿ ನಂಟಗಟ್ಟ,
ದೋಚುಕೊನ್ನ ನಟ್ಟದೋಷಮೆಟಕು ಬೋವು? ವಿಶ್ವದಾಭಿರಾಮ ವಿನುರ ವೇಮ

ದೊಡ್ಡವರೆಂದು ಹಾದಿಯೊಳು ಮುಳ್ಳು ಚೆಲ್ಲಿ,
ಅಡ್ಡ ವಿದ್ದು ಜನರ ಸುತ್ತುಗಟ್ಟಿ,
ದೋಚುತಿರುವ ಕೃತ್ಯ-ದೋಷ ಹೋಹುದೆಂದು?
ವಿಶ್ವದಾಭಿರಾಮ ಕೇಳು ವೇಮ.

ಕೆಲವೊಂದು ಗುಡ್ಡಗಾಡು ಪ್ರದೇಶಗಳಲ್ಲಿ, ಹಳ್ಳಿ-ತಾಂಡೆಗಳಲ್ಲಿ, ಆಯಾ ಹಳ್ಳಿಯಪ್ರಮುಖರೆನಿಸುವ ಜನರೇ ಮುಂದಾಗಿ ರಸ್ತೆಯ ಮೇಲೆ ಮುಳ್ಳು ಕಂಟಿಗಳನ್ನು ಚೆಲ್ಲಿ ತಾವು ಮರೆಯಾಗಿ ನಿಂತು, ಹಾದಿಹೋಕರು ಬಂದೊಡನೆ ಅವರಮೈಮೇಲೆ ಬೀಳುತ್ತಿದ್ದರು:ಅವರಿಂದ

ಗಂಟು-ಗದಡಿ, ವಸ್ತ್ರ-ಒಡವೆಗಳನ್ನು ದೋಚುತ್ತಿದ್ದರು. ಈಯೆಲ್ಲ ಹೀನ ಕಾರ್ಯಗಳನ್ನು ಮಾಡಿದರೂ ಅವರು ಆಯಾ ವಲಸೆಗಳಲ್ಲಿ ಪ್ರಮುಖರಾಗಿ ಜೀವಿಸುತ್ತಿದ್ದರು. ಇದೇ ರೀತಿಯಾದರೆ, ಕೀಳು ಕೆಲಸ ಮಾಡುವ ದೋಷ ಹೇಗೆ ಹಿಂಗಬಹುದು?

೧೯೬

ಎಂತನೇವಜೇಸಿ ಯೇಪಾಟು ಬಡಿನನು, ರಾಚಮೂಕ ನಮ್ಮರಾದುರನ್ನ,
ಪಾಮುತೋಟಪೊಂದು ಪದಿವೆಂಕ್ಕೆನನು, ವಿಶ್ವದಾಭಿರಾಮ ವಿನುರ ವೇಮ

ಎಷ್ಟೊ ಸೇವೆಗೈದು ಎಂಥ ಪಾಡು ಬಡಲು,
ರಾಜಮಂಡಲಗಳ ನಂಬಬಾರದಣ್ಣ.
ಹಾವಿನಾಟ ಬೇಡ ಹತ್ತುಸಾವಿರಾದರು.
ವಿಶ್ವದಾಭಿರಾಮ ಕೇಳು ವೇಮ.

ರಾಜಮಂಡಲಗಳು ರಾಜ್ಯವೊಂದರ ಅಂಕಿತ ಪ್ರದೇಶಗಳು. ರಾಜಮಂಡಲದ ಮುಖ್ಯಸ್ಥ ಮಂಡಲಾಧಿಪತಿ. ರಾಜ್ಯದ ಮುಖ್ಯಸ್ಥ, ಭೂಪತಿ, ಭೂಪಾಲ; ಅರಸು. ಭೂಪಾಲನಿಗೆ ಅಂಕಿತರಾಗಿ ಕಪ್ಪುಕಾಣಿಕೆ ಅರ್ಪಿಸುತ್ತ, ಯುದ್ಧ ಸಮಯದಲ್ಲಿ ಸೈನ್ಯಸಮೇತ ರಾಜಸೇವೆಗೆ ನಿಲ್ಲಬೇಕಾದವರು ಮಂಡಲಾಧಿಪತಿಗಳು. ಇವರೂ ರಾಜವಂಶಜರೇ. ಇಲ್ಲವೆ ನಾಡಿನ ಶೂರ ದಳಪತಿಗಳಾದವರು; ಪರಾಕ್ರಮಶಾಲಿಗಳಾದವರು. ಅರಸು ಬಲಹೀನನಾದಾಗ, ಉದಾಸೀನನಾದಾಗ, ತಮ್ಮ ಮಂಡಲಗಳನ್ನು ಸ್ವತಂತ್ರ ಎಂದು ಸಾರುವ ಇಲ್ಲವೆ ಸಾಧ್ಯವಾದರೆ ರಾಜಪೀಠವನ್ನೇ ಕಬಳಿಸುವ ಮಹತ್ವಾಕಾಂಕ್ಷೆಯು ಬಹುಪಾಲು ಮಂಡಲಾಧಿಪತಿಗಳಿಗಿರುತ್ತಿತ್ತು. ಕಾರಣ ಮಂಡಲಾಧಿಪತಿಗಳು ಮೊದಲು ಎಷ್ಟೇ ಹೆಚ್ಚಾಗಿ ರಾಜ ಸೇವೆ ಮಾಡಿರಲಿ ಕಷ್ಟನಷ್ಟ ಸೋಸಿರಲಿ, ಅವರನ್ನು ಅಷ್ಟೊಂದು ನಂಬಬಾರದು.

ಹಾವು ವಿಷಪ್ರಾಣಿ. ಅದು ನಮ್ಮನ್ನು ಒಮ್ಮೆಲೆ ಕಚ್ಚದಿರಬಹುದು. ನಮ್ಮ ಪುಂಗಿಗೆ ಹೆಡೆಯೆತ್ತಿ ತಲೆದೂಗಬಹುದು. ಆದರೂ ಅದರೊಡನೆ ಸಲುಗೆಯಾಟ ಸಲ್ಲದು. ಹತ್ತು-ಸಾವಿರ ರೂಪಾಯಿ ನೀಡಿದರೂ ಹಾವಿನಾಟ ಆಡಹೋಗಬಾರದು. ಮಂಡಲಾಧಿಪತಿಗಳೂ ಹಾವಿನಂತೆ ರಾಜಕೀಯ ವಿಷದಂತಿಗಳು.

೧೯೭

ವೆರ್ರಿಮೊದ್ದುಕೇಲ ವೇದಶಾಸ್ತ್ರಂಬುಲು? ಮುದ್ದರಾಲಿಕೇಲ ಮುಸಲಿಮುಗಡು ?
ಚಲಿದಿ ಮಿಗುಲನಿಂಟ ಸಂಸಾರ ಮೇಲರಾ? ವಿಶ್ವದಾಭಿರಾಮ ವಿನುರ ವೇಮ

ಪೆದ್ದ ಮುಡ್ಡಗೇಕೆ ವೇದ ಶಾಸ್ತ್ರಂಗಳು ?
ಮುಗ್ಧ ಮಡದಿಗೇಕೆ ಮುದಿಯ ಗಂಡ ?
ತಂಗಳುಳಿಯದ ಮನೆ ಸಂಸಾರವದೇಕೆ ?
ವಿಶ್ವದಾಭಿರಾಮ ಕೇಳು ವೇಮ.

ವೇದ ಶಾಸ್ತ್ರಗಳು ಪಂಡಿತರು ಪಂಡಿತರಿಗಾಗಿ ರಚಿಸಿದ ಪದ್ಯಗಳು; ಮಂತ್ರಗಳು ಭಾಷೆ ಕೂಡ ಬಹು ಸಂದಿಗ್ಧ. ಅಲಂಕಾರಮಯ. ಸೂರ್ಯನಿಗೆ ಏಳು ಕುದುರೆಗಳು. ಎಂದರೆ ಸೂರ್ಯಕಿರಣ ಸಪ್ತವರ್ಣವುಳ್ಳದ್ದು ಎಂಬ ಅರ್ಥ. ಜನಸಾಮಾನ್ಯರು ಅಲ್ಲ ಬುದ್ಧಿಯವರು. ಅವರು ವೇದಶಾಸ್ತ್ರಗಳನ್ನು ಅಭ್ಯಸಿಸ ಹೋದರೆ, ಮಂಕು ಆಗುತ್ತಾರೆ.

ಅರ್ಥ ತಿಳಿಯದೆ, ಕಾಗೆಯಂತೆ ಮಂತ್ರ ಪಠಿಸುತ್ತಾರೆ. ಅರ್ಥವಾಗದ ಪಠನದಿಂದ ಶ್ರದ್ಧೆ ಇಲ್ಲವಾಗುತ್ತದೆ. ಶ್ರದ್ಧೆ ಇಲ್ಲದೆ ಆಚಾರವು ಅಣಕವಿಡಂಬನೆಯಾಗಿ ಕಾಣುತ್ತದೆ. (ಇದನ್ನೇ ನಾವಿಂದು ಕಾಣುತ್ತಿರುವುದು.)

ಮುಗ್ಧ ಹೆಣ್ಣು ಕೋಮಲೆ; ಲಲಿತಾಂಗಿ ಪ್ರಿಯಕರಳು; ಮುದುಕ ಗಂಡನಾದರೋ ಅನುಭವಿ. ಹಾಸ್ಯ ಪ್ರಕೃತಿ ಮೀರಿದವ. ಕಾರಣ ಮುಗ್ಧಳಾದ ಕನ್ನೆಗೆ ಮುದುಕ ಪತಿ ಇದ್ದರೇನು ಬಂತು?

ಸ್ಥಿತಿವಂತರ ಸಂಸಾರ ಜೀವನದಲ್ಲಿ ಉಂಡು ಉಳಿಸುವಷ್ಟು ಇದ್ದೇ ಇರುತ್ತದೆ.

೧೯೮

ಮೊದಟನಾಸಬೆಟ್ಟ ತುದಲೇದುಪೊಮ್ಮನು, ಪರಮುಲೋಭುಲ್ಕೆನ ಪಾಪುಲಿಲನು,
ವಾರಿಯುಸುರುದಾಕೆ ವಗಜೆಡಿಪೋದುರು ವಿಶ್ವದಾಭಿರಾಮ ವಿನುರ ವೇಮ.

ಮೊದಲು ಆಶೆ ಬೆಳೆಸಿ ತುದಿಗೆ ಇಲ್ಲವೆನಲು
ಪರಮಲೋಭಿಯೇನು, ಪಾಪವದುವೆ?
ಬೆಂದ ಉಸಿರು ಸೋಂಕಿ, ಬಳಲಿ ನಾಶವಹರು.
ವಿಶ್ವದಾಭಿರಾಮ ಕೇಳು ವೇಮ.

ಪರರ ಆಸ್ತಿ ಬಯಸುವುದು ಲೋಭ. ತಾನು ಉಂಡುಟ್ಟು ಹೆಚ್ಚಾಗಿ ಉಳಿದ ಆಸ್ತಿ ಕಾಯ್ದೆ ದೃಷ್ಟಿಯಿಂದ ತನ್ನದಾದರೂ ನೈತಿಕ ದೃಷ್ಟಿಯಿಂದ ಹೆರವರಿಗೆ ಸೇರಿದ್ದು. ಅದನ್ನು ಅವರಿಗೆ ನೀಡದಿರುವವನೂ ಲೋಭಿಯೇ. ಮಿತಿಮೀರಿ ಲೋಭವುಳ್ಳವನು ಪರಮ ಲೋಭಿ. ಆದರೆ ಇಲ್ಲದವರಿಗೆ ಮೊದಲು ಕೊಡುತ್ತೇನೆಂದು ಆಶೆ ಹಚ್ಚಿ, ಅವರನ್ನು ಎಡತಾಕಿಸಿ, ಕೊನೆಗೆ ಇಲ್ಲವೆಂದು ಅವನು ಕೊಡುವ ಮನಸ್ಸೇ ಇಲ್ಲದ ಕಡುಲೋಭಿಯಷ್ಟೇ ಅಲ್ಲ. ಇಲ್ಲದವರ ಮನಸ್ಸನ್ನು ಸುಮ್ಮಸುಮ್ಮನೆ ನೋಯಿಸಿದ ಪಾಪಿಯೂ ಆಹುದು. ಮನನೊಂದ ಇಂಥ ಜನರ ನಿಟ್ಟುಸಿರಿನಿಂದ ನೀಡದವನ ಬಗ್ಗೆ ಜನರ ಆದರ ಕಡಿಮೆಯಾಗಿ ಅವನು ಯಾರೂ ನಂಬದ ನಿರ್ಗತಿಕನಾಗಿ ನಾಶಹೊಂದುವನು.

೧೯೯

ಬಡುಗುನೆರುಗಲೇನಿ ಪ್ರಾಭವಂಬದಿಯೇಲ ? ಪ್ರೊತಿಯಿಡನಿ ಬಂಧುಭೂತಿಯೇಲ?
ವ್ಯಾಧಿ ದೆಲಿಯಲೇನಿ ವೈದ್ಯುಡು ಮರಿಯೇಲ ? ವಿಶ್ವದಾಭಿರಾಮ ವಿನುರ ವೇಮ.

ಬಡವನನರಿಯದಂಥ ಒಡೆತನವದು ಏಕೆ?
ಪೋಷಿಸದಿರೆ ಬಂಧು ಭಾವವೇಕೆ?
ವ್ಯಾಧಿ ತಿಳಿಯದಿಪ್ಪ ವೈದ್ಯ ಮತ್ತೆ ಏಕೆ?
ವಿಶ್ವದಾಭಿರಾಮ ಕೇಳು ವೇಮ.

ಶಕ್ತಿವಂತರು ಶಕ್ತಿಹೀನರನ್ನು ಪೀಡಿಸಿ, ಶೋಷಿಸಿ ಬದುಕುವುದನ್ನು ತಪ್ಪಿಸಲೆಂದೇ ಪ್ರಭುತ್ವ ಪದ್ಧತಿಯ ನಿರ್ಮಾಣವಾಗಿದೆ. ಆದರೆ, ಬಡತನದ ಕಷ್ಟಕಾರ್ಪಣ್ಯಗಳೇನು ? ಅವರ ಅನಿಸಿಕೆ ನೆನಸಿಕೆಗಳೇನು ? ಎಂಬುದೇ ಗೊತ್ತಿಲ್ಲದಿದ್ದರೆ ಅಂಥ ಒಡೆತನದಿಂದ ಪ್ರಯೋಜನವೇನು ?

ಬಂಧುವೆಂದರೆ ಬಂಧುತ್ವವುಳ್ಳವ. ಸಮಯ ಬಂದಾಗ ಪೋಷಿಸುವ ಹೊಣೆಗಾರಿಕೆಯ ಬಂಧನವಿರುವವ. ಆ ರೀತಿಯ ಹೊಣೆಗಾರಿಕೆಯೇ ಇಲ್ಲದಿದ್ದರೆ, ಅಂಥ 'ಬಂಧುಭಾವ'ವು ನಾಮಮಾತ್ರವಷ್ಟೇ.

ವೈದ್ಯನು ತಿಳಿದವನು. ವಿದಿತನು. ವ್ಯಾಧಿಯ ಲಕ್ಷಣಗಳನ್ನೂ, ಅದನ್ನು ನಿವಾರಿಸುವ ಉಪಾಯಗಳನ್ನೂ ತಿಳಿದವನು. ವ್ಯಾಧಿಯನ್ನು ತಿಳಿದ ವೈದ್ಯನಿದ್ದರೆ, ಅಂಥವನಿಂದ ಏನು ಪ್ರಯೋಜನ ?

೨೦೦

ತನದು ದಾನವುವನಿ ದನಕೂತುರುಸಮಂಬು, ತಂದ್ರಿದಾನಮೆಲ್ಲ ದನಕುದೋಡು.
ಅನ್ಯುಲಿಚ್ಚುದಾನ ಮುದಿತಲ್ಲಿವಂಟದಿ, ವಿಶ್ವದಾಭಿರಾಮ ವಿನುರ ವೇಮ,

ತಾನು ಗೈದ ದಾನ ತನುಜೆಗೆ ಸಮ ಜಗದಿ,
ತಂದೆ–ದಾನವೆಲ್ಲ ತನಗೆ ಸಮವು.
ತಾಯಿ ಸಮನೆನಿಪುದು ಹೆರನರಿತ್ತ ದಾನ.
ವಿಶ್ವದಾಭಿರಾಮ ಕೇಳು ವೇಮ.

ಪುರುಷನ ವೀರ್ಯಬಿಂದು ಸ್ತ್ರೀ ಯೋನಿಮೂಲಕ ಗರ್ಭಾಶಯ ಸೇರಿ ಪಿಂಡವಾಗಿ ಬೆಳೆದು ಮಕ್ಕಳಾಗುತ್ತವೆ. ಹೀಗೆ ಮಕ್ಕಳು ಪುರುಷನ ದಾನದ ಫಲ. ಕಾರಣ, ತಾನು ಸ್ವಂತಮಾಡುವ ದಾನವು ತನ್ನ ಮಕ್ಕಳ ಸಮ. ಮಕ್ಕಳು ತನಗೆ ಆನಂದವೀಯುವಂತೆ ತನ್ನ ದಾನಕೃತಿಯೂ ಆನಂದಕರವಾಗಿರುವುದು. ಇದೇ ಮೇರೆಗೆ ತನ್ನತಂದೆ ಮಾಡಿದ ದಾನವು ತನಗೆ ಸಮವಾಗಿರುವುದು. ತಾಯಿಯಾದವಳು ಪತಿಯ ವೀರ್ಯಬಿಂದುವನ್ನು ತನ್ನ ಗರ್ಭದಲ್ಲಿ ಇರಿಸಿಕೊಂಡು ಬೆಳೆಸಿ, ನವಮಾಸಾನಂತರ ಪ್ರಸವಿಸಿ ಕಂದನನ್ನು ನೀಡುತ್ತಾಳೆ. ಅದು ಅವಳ ಕೊಡುಗೆಯೇ ? ಅಲ್ಲ. ಆದರೂ ಅವಳ ಕೊಡುಗೆ ಎನ್ನಿಸುತ್ತದೆ. ಆ ರೀತಿ ಬೇರೆಯವರು ಇನ್ನೊಬ್ಬರಿಗೆ ಸಂಬಂಧಿಸಿದ ವಸ್ತುವನ್ನು ದಾನವಾಗಿ ಕೊಡುವುದು ತಾಯಿ ಸಮವಾಗಿದೆ.

೨೦೧

ಒಡ್ಡು ಪೊಡುಗುಗಲ್ಲಿ ಗಡ್ಡಂಬುಬೊಡುಗೈನ ದಾನ ಗುಣಮುಲೇಕ ದಾತಯಗುನೆ ?
ಎನುಮು ಗೊಪ್ಪದೈನ ನೇನುಗುಬೋಲುನಾ ? ವಿಶ್ವದಾಭಿರಾಮ ವಿನುರ ವೇಮ.

ಗಡಸು; ಉದ್ದವಿರಲು, ಗಡ್ಡವೀಸೆಯಿರಲು,
ದಾತಗುಣಗಳಿರದೆ, ದಾತನೆಂತು ?
ಎಮ್ಮೆ ದೊಡ್ಡದಿರಲು, ಆನೆಯ ಹೋಲುವುದೆ ?
ವಿಶ್ವದಾಭಿರಾಮ ಕೇಳು ವೇಮ

ಏನೂ ಇಲ್ಲದ ಬಡವರಿಗೆ ಅವರು ಬಯಸಿವ ಪದಾರ್ಥಗಳನ್ನು ಕೊಡುವುದು ದಾನವೆನ್ನಿಸುತ್ತದೆ. ಇಲ್ಲವೆನ್ನದೆ ಕೊಡುವುದೇ ದಾನಿಯ ಲಕ್ಷಣ. ದಾನ ಗೈಯುವವ ದಾತ. ದಾನ ಗುಣವೇ ದಾತ ಗುಣ. ಇದ್ದುಳ್ಳವರಲ್ಲಿ ದಾತರು ಉಂಟು. ಇದ್ದುಳ್ಳವರು ದಷ್ಟಪುಷ್ಟವಾಗಿ ಗಡುಸಾಗಿರುತ್ತಾರೆ. ಚನ್ನಾಗಿ ಬೆಳೆದು ಎತ್ತರವಾಗಿರುತ್ತಾರೆ. ಗಡ್ಡ ಮೀಸೆಗಳನ್ನು ಬೆಳೆಸಿ, ಪ್ರತಿಷ್ಠಿತರೆನ್ನಿಸಿಕೊಂಡಿರುತ್ತಾರೆ. ಆದರೆ ಇಷ್ಟೆಲ್ಲ ಇದ್ದುಳ್ಳವರು

ಲಕ್ಷಣಗಳು. ಅವರಲ್ಲಿ ದಾನ ಗುಣವೂ ಇದ್ದರೆ ಮಾತ್ರ ಅವರು ದಾತರೆನ್ನಿಸುವರು. ಇಲ್ಲವಾದರೆ ಇಲ್ಲ.

ಹೇಗೆಂದರೆ:ಎಮ್ಮೆ ನಾಲ್ಕು ಕಾಲಿನ ಪ್ರಾಣಿ. ಕಪ್ಪು ಬಣ್ಣದ್ದು. ದೊಡ್ಡ ಎಮ್ಮೆಯು ಮರಿ–ಆನೆಯಷ್ಟಾಗಬಹುದು. ಆದರೆ ಎಮ್ಮೆಯ ಗುಣ ಎಮ್ಮೆಗುಂಟು. ಆನೆಯ ಗುಣ ಆನೆಗುಂಟು. ಎಮ್ಮೆ ದೊಡ್ಡದಿದ್ದರೆ, ಆನೆಯನ್ನಿಸದು.

೨೦೨

ಕುಲಮುಗಲುಗುವಾರು ಗೋತ್ರಂಬುಗಲವಾರು, ವಿದ್ಯಚೇತ ವಿರ್ರವೀಗುವಾರು
ಪಸಿಡಿಕಲಿಗುವಾನಿ ಬಾನಿಸಕೊಡುಕುಲು. ವಿಶ್ವದಾಭಿರಾಮ ವಿನುರ ವೇಮ

ಕುಲದ ಮೇಲ್ಮೆಯುಳ್ಳ ಗೋತ್ರಮೇಲ್ಮೆಯುಳ್ಳ
ಜಾಣ್ಮೆಯಿಂದ ಜಂಭ ಪಡುವ ಜನರು,
ಐಶ್ವರ್ಯವಂತರ ಅಡುಗೆಯವನ ಸುತರೆ.
ವಿಶ್ವದಾಭಿರಾಮ ಕೇಳು ವೇಮ.

[ಕುಲ ಎಂದರೆ ಸಮೂಹ; ಜಾತಿ; ತಂಡ. ಗೋತ್ರವೆಂದರೆ ಪರಂಪರೆ; ಬ್ರಹ್ಮ ಜ್ಞಾನದ ಅಭ್ಯಾಸದ ಒಂದು ಶಾಖೆಯೊಡನಿರುವ ಸಂಬಂಧ. ಒಬ್ಬನು ಆಪಸ್ತಂಭ ಋಷಿಯ ವಂಶಜನಿರಬಹುದು. ಅದು ಅವನ ಕುಲ. ಅವನದು ಭಾರದ್ವಾಜ ಗೋತ್ರವಿರಬಹುದು; ಅದು ಅವನ ವೇದಾಭ್ಯಾಸದ ಶಾಖೆ. ಉಪನಯನ ಕಾಲಕ್ಕೆ ಕಟ್ಟುವ ಜನಿವಾರ ವಿಧಿಯಾಚರಿಸುವುದು, ತಂದೆಯ ಗೋತ್ರವೇ ಮಗನದಾಗಿ ಉಳಿಯಲೆಂದು. ಇಲ್ಲವಾದರೆ, ಮಗನು ಯಾವ ಗುರುಕುಲ ಸೇರುವನೋ ಅದೇ ಗೋತ್ರದವನಾಗುವ ಭಯವುಂಟು.]

ಅಡುಗೆಯವರು ಹೆಚ್ಚಾಗಿ ಭಟ್ಟರೇ. ಶ್ರೀಮಂತನು ಯಾವ ಜಾತಿಯವನೇ ಇರಲಿ ಅವನ ಅಡುಗೆಯ ಭಟ್ಟನು ಆಚಾರಿಯೇ. ಆದರೂ ಅಡುಗೆಯಾಳಿನ ಮಕ್ಕಳು ಜಗದೆಣಿಕೆಯಲ್ಲಿ ಮೇಲು ಕುಲದವರು; ಬ್ರಾಹ್ಮಣರು. ಶ್ರೇಷ್ಠ ಗೋತ್ರದವರು; ಅವರು 'ಋಗ್ವೇದಿಗಳೋ' 'ಯಜುರ್ವೇದಿ' ಗಳೋ ಆಗಿರಬಹುದು, ಮಂತ್ರಾದಿಗಳನ್ನು ಕಂಠಪಾಠಮಾಡಿ ವ್ರತ ವಿಧಿ ನೆರವೇರಿಸುವ ಪಂಡಿತರೂ ಅವರಾಗಿರಬಹುದು.

ಅಡುಗೆಯವನ ಮಕ್ಕಳಾದರೂ ಕುಲ, ಗೋತ್ರ, ಪಾಂಡಿತ್ಯದ ಮೇಲ್ಮೆಯ ಬಗ್ಗೆ ಜಂಭಪಟ್ಟು ತಿರುಗುವುದು ಜೋದ್ಯವೇ ಸರಿ.

೨೦೩

ಕುಲಮುಲೇನಿವಾಡು ಕಲಿಮಿಚೇ ವೆಲಯುನು ಕಲಿಮಿಲೇನಿವಾನಿ ಕುಲಮುದಿಗುನು
ಕುಲಮುಕನನ್ನ ಮಿಗುಲ ಗಲಿಮಿಪ್ರಧಾನಂಬು ವಿಶ್ವದಾಭಿರಾಮ ವಿನುರ ವೇಮ

ಕುಲವು ಇಲ್ಲದವನು ಕನಕದಿಂದ ಮೇಲು
ಕನಕವಿಲ್ಲದವನ ಕುಲವು ಕೀಳು.
ಕುಲದಕಿಂತ ಮಿಗಿಲು ಕನಕ ಮುಖ್ಯವಿಹುದು.
ವಿಶ್ವದಾಭಿರಾಮ ಕೇಳು ವೇಮ.

ದುಡ್ಡೇ ದೊಡ್ಡಪ್ಪ, ಇದು ಲೋಕದ ತಿಳುವಳಿಕೆ. ಒಂದು ಗುಂಪಿಗೆ–ವಂಶ–ಜಾತಿಗೆ ಕುಲಕ್ಕೆ ಸೇರಿದವನು ಇನ್ನೊಂದು ಕುಲಕ್ಕೆ ಸೇರಿದವನಿಗಿಂತ ಮೇಲು ಎಂಬುದು ಲೋಕದಲ್ಲಿ

ಮೂಡಿಬಂದ ವಿಚಾರಸರಣಿ. ಮೇಲು ಕುಲದವನಿಗೆ ಸಮಾಜದಲ್ಲಿ ಹೆಚ್ಚಿನ ಮನ್ನಣೆ ಸ್ಥಾನ ಮಾನಗಳು ಸಿಗಬೇಕೆಂಬ ರೂಢಿ. ಆದರೆ, ವಾಸ್ತವಿಕವಾಗಿ ಯಾರಲ್ಲಿ ಸಂಪತ್ತು ಹೆಚ್ಚಾಗಿ ಇರುವುದೋ, ಅವರಿಗೇ ಮನ್ನಣೆಯುಂಟು. ಸಂಪತ್ತು ಇಲ್ಲದವನಿಗೆ ಸಮಾಜದಲ್ಲಿ ಮನ್ನಣೆ ಇಲ್ಲ. ಮನ್ನಣೆ ಸ್ಥಾನಮಾನ ಇಲ್ಲದವನ ಕುಲವೇ ಕೇಳು. ಕುಲ ಅಂದರೆ ವಂಶ ಇಲ್ಲ ಜಾತಿ. ಇದು ಮುಖ್ಯವಲ್ಲ. ಅವನು ಹೊಂದಿರುವ ಆಸ್ತಿ ಸಂಪತ್ತುಗಳೇ ಮುಖ್ಯ.

(ಮನುವಿರಚಿತ ಧರ್ಮಶಾಸ್ತ್ರದಲ್ಲಿ ಬ್ರಹ್ಮೋಪದೇಶ ಪಡೆಯುವ ಹಕ್ಕು ಉಳ್ಳವನು ಮಾತ್ರ ಆಸ್ತಿ ಹೊಂದುವ ಹಕ್ಕು ಉಂಟು ಎಂದು ವಿಧಿಸಲಾಗಿತ್ತು. ಇದರಿಂದ ದ್ವಿಜನಿಗೆ ಮಾತ್ರ ಆಸ್ತಿ ಸಂಪತ್ತು ಉಳಿಯಿತು. ಅದರಿಂದ ಅವರಿಗೆ ಮನ್ನಣೆ ದೊರೆಯಿತು. ಕುಲ ಕುಲ ಮೇಲು ಎನ್ನಿಸಿತು. ಶೂದ್ರರಿಗೆ ಬ್ರಹ್ಮೋಪದೇಶವಿಲ್ಲ. ಉಪನಯನವಿಲ್ಲ. ಜನಿವಾರವಿಲ್ಲ. ಆಸ್ತಿ ಹೊಂದುವ ಹಕ್ಕೂ ಇಲ್ಲ. ಸ್ತ್ರೀಯರಿಗೂ ಅಷ್ಟೇ. ಅವರು ಕೀಳು ಎನ್ನಿಸಿದರು. ಕಾರಣ, ಕುಲಕ್ಕಿಂತ ಕನಕವೇ ಮೇಲು ಎನ್ನಿಸಿದೆ.)

೨೦೪

ನೆಯ್ಯಿಲೇನಿಕೂಡು ನೀಯಾನ ಕಸವದಿ ಕೂರ ಲೇನಿ ತಿಂಡಿ ಕುಕ್ಕ ತಿಂಡಿ.
ಪ್ರಿಯಮುಲೇನಿಕೂಡು ಪಿಂಡಂಪುಗೂಡುರಾ ವಿಶ್ವದಾಭಿರಾಮ ವಿನುರ ವೇಮ

ತುಪ್ಪವಿರದ ಊಟ ತೃಣದ ಪರಿಯ ಕಸವು.
ಸಾರುಯಿರದ ಊಟ ಶ್ವಾನಯೋಗ್ಯ.
ಪ್ರೀತಿಯಿರದ ಊಟ ಪಿಂಡಕಟ್ಟಿ ಊಟ.
ವಿಶ್ವದಾಭಿರಾಮ ಕೇಳು ವೇಮ.

(ತುಪ್ಪ-ಸಾರು ಕೇವಲ ರುಚಿಯ ಖಾದ್ಯವೆನಿಸಿಲ್ಲ. ವಾಸ್ತವದಲ್ಲಿ ಅವುಗಳನ್ನು ಸೇವಿಸುವವರು, ಸಮಾಜದಲ್ಲಿ ಮೇಲು ಎಂದೂ, ಸೇವಿಸದವರು ಕೀಳು ಎಂದೂ, ತಿಳಿಯುವ ಮಟ್ಟಕ್ಕೆ ಸಾಮಾಜಿಕ ಕಲ್ಪನೆ ತಲುಪಿದೆ.)

ತುಪ್ಪದಲ್ಲಿ ದೇಹಾರೋಗ್ಯಕ್ಕೆ ಅವಶ್ಯವಾದ ಸ್ನಿಗ್ಧ ಪದಾರ್ಥ ಇರುತ್ತದೆ. ಊಟದಲ್ಲಿ ಸೇವಿಸುವ ಪಿಷ್ಟಮಯ ಪದಾರ್ಥದೊಂದಿಗೆ ತುಪ್ಪ ಬೇಕು. ಅದಿಲ್ಲದೆ ಊಟ ಮಾಡುವುದು ಕಸ ಕಡ್ಡಿ ಕಡಿದಂತೆ. ಜಾನುವಾರದ ಜಾತಿಗೆ ಯೋಗ್ಯವಾದದ್ದು.

ಸಾರು ಎಣ್ಣೆ-ಹುಳಿ ಉಳ್ಳ ದ್ರವವಾದ ಪಾಕ. ಅನ್ನ-ಅಂಬಲಿಯ ಜೊತೆಗೆ ಸೇವಿಸುವ ಅಡುಗೆ. ಪಚನಕಾರಕ ಲಾವಾರಸವನ್ನು ಹೆಚ್ಚಾಗಿ ಹುಟ್ಟಿಸುವುದು. ಸತತ ಜೊಲ್ಲು ಸುರಿಸುವ ನಾಯಿಯಂಥ ಪ್ರಾಣಿ ಜಾತಿಗೆ ಇದರ ಅವಶ್ಯಕತೆಯಿಲ್ಲ. ಕಾರಣ ಸಾರು ಇಲ್ಲದ ಊಟ, ನಾಯಿ ಜಾತಿಗೆ ಯೋಗ್ಯವಾದದ್ದು.

ಊಟದಲ್ಲಿ ಬಡಿಸುವ ತಿಂಡಿಗಿಂತಲೂ ಬಡಿಸುವವರ ಪ್ರೀತಿ ಮುಖ್ಯ. ಮನುಷ್ಯನಾದವನು ಪ್ರೀತಿಯ ಅಡುಗೆ ಮೆಚ್ಚುವನು. ಪ್ರೀತಿಯೇ ಇಲ್ಲದೆ, ಹೋಳಿಗೆ-ತುಪ್ಪ- ಅನ್ನ ಸಾರು ನೀಡಿದರೂ, ಅದು ಹಬ್ಬದಡುಗೆಯಾಗದು. ಸತ್ತವರಿಗೆ ನೀಡಿದ ಪಿಂಡದಂತೆ ಅನ್ನಿಸುತ್ತದೆ. ಉಣಬಡಿಸುವಾಗ ಪ್ರೀತಿ ಅತ್ಯಂತ ಅವಶ್ಯವಾಗಿದೆ.

ಅಲ್ಪುಡೈನವಾನಿ ಕಧಿಕಾರಮಿಚ್ಚಿನಾ, ದೊಡ್ಡಕೊಂಚೆಮನಕ ತೂಲಒಲ್ಲು
ಚಿಲ್ಪುಗೊರುಕುಕುಕ್ಕ ಜೆರುಕುತೀಪಿರುಗುನಾ ? ವಿಶ್ವದಾಭಿರಾಮ ವಿನುರ ವೇಮ

ಅಲ್ಪನಾದವನಿಗೆ ಅಧಿಕಾರ ನೀಡಲು
ದೊಡ್ಡ ಸಣ್ಣ ಎನದೆ ದೂಡುತಿಪ್ಪ
ಕೆರಹ ಕಡಿವ ಸೊಣಗ ಕಬ್ಬಿನ ಸಿಹಿಯರಿವುದೆ?
ವಿಶ್ವದಾಭಿರಾಮ ಕೇಳು ವೇಮ.

ಅಧಿ ಎಂದರೆ ಶ್ರೇಷ್ಠ, ಮೇಲ್ಮೆ. ಅಧಿಕಾರವೆಂದರೆ ಮೇಲ್ಮೆ ಗೆಯ್ಯುವುದು. ಸರ್ವರ ಮೇಲ್ಮೆಗೆಯ್ಯಲು ದೊಡ್ಡ ಮನಸ್ಸಿನವರು ಕೇಂದ್ರಸ್ಥಾನದಲ್ಲಿರಬೇಕು. ಅಂಥವರು ಯಾವ ಶಕ್ತಿಗಳನ್ನು ನಿಗ್ರಹಿಸಬೇಕು ? ಯಾವ ಶಕ್ತಿಗಳನ್ನು ಅನುಗ್ರಹಿಸಬೇಕೆಂಬುದು ತಿಳಿದಿರುತ್ತದೆ.

ಆದರೆ ಸಣ್ಣ ಮನಸ್ಸಿನವನು ಸರ್ವರ ಹಿತ ಸಾಧಿಸಲಾರ. ಅದೇಕೆ ಅಲ್ಪನಿಗೆ ಮೇಲು ಗುಣದವರಾರು ? ಕೀಳು ಗುಣದವರಾರು ? ದೊಡ್ಡವರಾರು ? ಸಣ್ಣವರಾರು ? ಎಂಬ ವಿಶ್ಲೇಷಣೆಯ ಬುದ್ಧಿ ಕೂಡ ಇರುವುದಿಲ್ಲ. ಒಳಿತು ಕೆಡುಕುಗಳನ್ನು ಗುರುತಿಸುವ ವಿವೇಕವೂ ಅವನಿಗಿರುವದಿಲ್ಲ. ತತ್ಪರಿಣಾಮವಾಗಿ, ಅವನು ತನಗೆ ಅನುಕೂಲ ಮತ ತಾಳದವರು ದೊಡ್ಡವರಿರಲಿ, ಸಣ್ಣವರಿರಲಿ, ತನ್ನ ಹಿತಚಿಂತಕರಿರಲಿ ಅವರನ್ನು ತನ್ನ ಸಲಹಾ ಮಂಡಳಿಯಿಂದ ದೂಡಿಬಿಡುತ್ತಾನೆ.

ಅಲ್ಪ ಮನುಷ್ಯ ಕೆರವು ಕಡಿಯುವ ನಾಯಿಯಂತೆ. ಹರೆಕು ಕೆರವನ್ನು ಜೀಪುವ ಚಟಕ್ಕೆ ಬಿದ್ದ ನಾಯಿಗೆ ಸಿಹಿಯಾದ ಕಬ್ಬನ್ನು ಎದುರಿಟ್ಟರೂ ಮುಟ್ಟದು.

೨೦೬

ದಾನಮಡುಗುವಾಡು ಧರಲೋನ ನಧಮುಂಡು, ದಾನಮಡುಗಡೇನಿ ದೈವಸಮುಡು.
ದಾನವೀನಿವಾಡು ಧನ್ಯುಂಡು ಕಾಡಯಾ ವಿಶ್ವದಾಭಿರಾಮ ವಿನುರ ವೇಮ

ದಾನ ಕೇಳುವವನು ಧರಣಿಯೊಳಗಧಮನು
ದಾನ ಕೇಳದವನು ದೈವಸಮನು
ದಾನ ಕೊಡದಿರುವವ ಧನ್ಯನಲ್ಲ ನೋಡು
ವಿಶ್ವದಾಭಿರಾಮ ಕೇಳು ವೇಮ.

ಇಲ್ಲದವರಿಗೆ ಬೇಕಾದುದನ್ನು ಈವುದೇ ಕೊಡುಗೆ, ದಾನ.

ಆದರೆ ಇಲ್ಲದವನು ತಾನು ಎಂದು ದಾನ ಕೇಳುವುದು, ಕೀಳುತನ. ಇದ್ದುದರಲ್ಲಿ ತೃಪ್ತಿಪಡೆಯಬೇಕು. ತನಗಿಲ್ಲವೆಂಬ ಭಾವನೆ ತಾಳುವುದು ಮನಸ್ಸಿನ ಸಣ್ಣತನ.

ಯಾರು ಪರರ ಸುಖ-ಸಂತೋಷಗಳಲ್ಲಿ ತಮ್ಮ ಸುಖ-ಸಂತೋಷಗಳನ್ನು ಕಾಣ್ಬಲ್ಲರೋ ಅವರು ತಾವು--ಪರರು ಭೇದವೆಣಿಸರು. ತಮಗೆ ಇಲ್ಲದ ವಸ್ತು ಅವರಿಗುಂಟು ಅದನ್ನು ಕೇಳಿ ದಾನಪಡೆಯಬೇಕು ಎಂಬ ಕೀಳು ಬುದ್ಧಿ ಅವರಲ್ಲಿ ಹುಟ್ಟುವದಿಲ್ಲ. ಇಂಥ ವಿಶಾಲ ದೃಷ್ಟಿಯವರು ದೈವ ಸಮಾನರು.

ಇಲ್ಲಿದವರು ಬೇಡಬೇಕೆಂಬ ಭಾವವಿಲ್ಲದೆ ತನಗೆ ಶಕ್ತಿಯಿದ್ದಷ್ಟು ಕರೆದು ದಾನ ನೀಡುವವನು ಧನ್ಯನು. ಕರೆದು ನೀಡದವನು ಧನ್ಯನಲ್ಲ. ಅವನ ಜೀವನ ಸಾರ್ಥಕವಲ್ಲ.

೨೦೭

ಪೆಕ್ಕು ಜನುಲಜಂಪಿ ಪೇದಲವಧಿಯಿಂಚಿ, ಡೊಕ್ಕ ಡೊರೆಕು ನೂಳ್ಪು ದೊಂಗಿಲಿಂಚಿ
ಎಕ್ಕಡಿಕರಿಗಿನನು ನೆರಿಗಿ ಯಮುಡು ಜಂಪು ವಿಶ್ವದಾಭಿರಾಮ ವಿನುರ ವೇಮ

ಬಹಳ ಜನರ ಇರಿದು, ಬಡವರನ್ನು ವಧಿಸಿ,
ಸುಲಿದು, ಕೊಳ್ಳೆ ಹೊಡೆದು, ಹೊಟ್ಟೆ ಹೊರೆವ;
ಎತ್ತ ಕಡೆಗೆ ಹೋದರೇನು? ಯಮನು ಬಿಡನು.
ವಿಶ್ವದಾಭಿರಾಮ ಕೇಳು ವೇಮ

ದಾರಿ ಬಡಿಯುವವನು ಎಷ್ಟೋ ಜನರನ್ನು ಸುತ್ತುಗಟ್ಟಿ ಚೂರಿಯಿಂದ ಇರಿದು ಅವರ ಗಂಟು–ಮೂಟೆ ಕಿತ್ತುಕೊಳ್ಳುವನು. ಬಡ-ಬಗ್ಗರನ್ನು ಹಿಡಿದು ತರಿಸಿ ಕೊಲ್ಲಿಸುವನು. ದಾರಿಹೋಕರ ಸುಲಿಗೆ ಮಾಡುವನು. ಇದ್ದುಳ್ಳವರ ಮನೆಗೆ ಕನ್ನ ಹಾಕುವನು. ಇಂಥ ಅನೇಕ ಹೀನಕಾರ್ಯಗಳನ್ನು ಹೊಟ್ಟೆಪಾಡಿಗಾಗಿ ಮಾಡುವ ಮನುಷ್ಯನು ಉಂಡು ಉಬ್ಬಿ ಬಹುಕಾಲ ಬಾಳಬೇಕೆಂಬ ಆಸೆ ತಾಳಿರುತ್ತಾನೆ. ಆದರೆ ಅವನು ಇವೆಲ್ಲ ನೀಚ-ಕಾರ್ಯ ಮಾಡಿ ಎಲ್ಲಿಗೆ ಹೋದರೂ ಅವನಿಗೆ ಮರಣ ತಪ್ಪದು. ಯಮನು ಅವನ ಬೆನ್ನು ಬಿಡನು. ತಾನು ಸಾಯುವದನ್ನು ತಿಳಿಯದೆ, ತನ್ನ ಬದುಕಿಗಾಗಿ ಅನ್ಯರ ಬದುಕನ್ನು ಹಾಳುಮಾಡಿ ಅವರನ್ನು ಕೊಲ್ಲುವವನು ನೀಚನು.

೨೦೮

ಧನಮುಲೇಕಯುನ್ನ ಧೈರ್ಯಂಬು ನಿಲುವದು, ಧೈರ್ಯಮೊದವದೇನಿ ಧನಮುಲೇದು
ಧನಮು ಧೈರ್ಯಮುರಯ ದಗುಭೂಮಿಪತುಲಕು ವಿಶ್ವದಾಭಿರಾಮ ವಿನುರ ವೇಮ

ಧನವು ಇಲ್ಲದಿರಲು ಧೈರ್ಯ ನಿಲ್ಲದಯ್ಯ
ಧೈರ್ಯ ಮುನ್ನ ಇರದೆ ಧನವು ಇಲ್ಲ.
ಧನವು ಧೈರ್ಯವರಿಯೆ ದೊರೆಗೆ ಶೋಭೆಯಹುದು
ವಿಶ್ವದಾಭಿರಾಮ ಕೇಳು ವೇಮ

ಧನ-ಸಂಪತ್ತು ಇಲ್ಲದಿದ್ದರೆ, ರಾಜ್ಯ ಸಂರಕ್ಷಣೆಯ ಸಿದ್ಧತೆಗಳನ್ನು ಮಾಡುವ ಧೈರ್ಯವು ಬರುವುದಿಲ್ಲ. ಬಂದರೂ ಬಹುಕಾಲ ಉಳಿಯದು. ಮೊದಲು ಧೈರ್ಯವೇ ಇಲ್ಲದಿದ್ದರೆ, ಯಾವುದೇ ಸಾಹಸಕಾರ್ಯಕ್ಕೆ ಕೈ ಹಾಕಲಾರ. ಸಂರಕ್ಷಣೆಯ ಸಿದ್ಧತೆಗೆ ಮುಂದಾಗುವ ಧೈರ್ಯ ತೋರದಿದ್ದರೂ' ಉಳಿದವರೂ ಸಹಾಯ-ಕಾಣಿಕೆ ಒಪ್ಪಿಸರು.

ತಿಳಿದು ನೋಡಿದರೆ, ಧನ ಮತ್ತು ಧೈರ್ಯಗಳೆರಡೂ ಒಟ್ಟಾಗಿ ಇದ್ದರೆ, ದೊರೆಗೆ ಶೋಭೆಯುಂಟು.

೨೦೯

ಕಲಿಮಿಗ್ಗಲನೇವಿ ಕರುಣಲೇಕುಂಡೆನಾ? ಕಲಿಮಿಯೇಲನಿಲ್ಚು ಕರ್ಮುಲಕುನು?
ತೇನೆಗೂರ್ಚಿಯೀಗ ತೆರುವುನ ಬೋವುದಾ? ವಿಶ್ವದಾಭಿರಾಮ ವಿನುರ ವೇಮ

ಕನಕವಿದ್ದ ರೇನು ಕರುಣೆಯಿಲ್ಲದನಕ;
ಕನಕ ನಿಲುವುದೆಂತು ಕರ್ಮಿಗಳಿಗೆ?
ಹುಟ್ಟು ಮುಟ್ಟಿ ಜೇನು ಹುಳುವು ಹಾರದಿಹುದೆ?
ವಿಶ್ವದಾಭಿರಾಮ ಕೇಳು ವೇಮ

(ಕನಕವು ನೀಚರಲ್ಲಿಯೂ ಇರಬಹುದು. ಕರುಣೆ ನೀಚನಲ್ಲಿ ಕಾಣದು. ಕರುಣಾ ಸಂಪತ್ತು ಸರ್ವಸಂಪತ್ತಿಗಿಂತ ಮೇಲು.)

ಕರುಣೆಯು ಇಲ್ಲದಿರುವ ವರೆಗೆ ಬರಿ ಕನಕವಿದ್ದರೇನು? ಅದು ಮೇಲ್ಮೈಯೆನಿಸದು. ಕನಕ ಈ ಲೋಕದ ಭೋಗಸುಖಗಳನ್ನು ನೀಡಬಹುದು. ಆತ್ಮಸುಖ ಪಡೆಯುವ ಮಾನಸಿಕ ಕ್ಷೇತ್ರದಲ್ಲಿ ಕನಕಕ್ಕೆ ಯಾವ ಸ್ಥಾನವೂ ಇಲ್ಲ. ಅಲ್ಲಿ ಕರುಣೆಯೇ ಮುಖ್ಯ. ಕರ್ಮಬದ್ಧರಾದ ಜನರು ತಾವುಗೆಯ್ದುದರ ಫಲ ಪಡೆಯುವರಷ್ಟೇ. ಕರುಣೆಯಿಲ್ಲದೆ ಕನಕ ಹೊಂದಿ, ಮಾಡುವ ಕರ್ಮದಿಂದ ಅವರು ಒಳ್ಳೆಯ ಫಲ ಹೊಂದರು. ಅವರಲ್ಲಿ ಕನಕವೂ ಬಹುಕಾಲ ಉಳಿಯದು. ಇದ್ದರೂ ಅವರು ಉಪಭೋಗ ಮಾಡರು.

ಹೇಗೆಂದರೆ, ಜೇನು ಹುಟ್ಟಿನಲ್ಲಿ ತುಪ್ಪ ಕೂಡಿಬಿದ್ದಿರುತ್ತದೆ. ಆದರೆ ಜೇನು ನೊಣವು ಹುಟ್ಟಿಗೆ ಬಂದು ಮತ್ತಷ್ಟು ಮಧು ಕೂಡಿಟ್ಟು ಮತ್ತಷ್ಟು ತರುವ ಆಶೆಯಿಂದ ಹುಟ್ಟು ಬಿಟ್ಟು ಹಾರುತ್ತದೆ. ಕೂಡಿಟ್ಟ ಜೇನು ಜೇನುನೊಣಕ್ಕೆ ಸಿಗದೆ, ಯಾರಿಗೋ ದೊರೆಯುವುದು. ಕರ್ಮಬದ್ಧ ಜೇನುನೊಣ ಆಶೆಯಿಂದಾಗಿ ಇರುವ ಮಧುವನ್ನು ಸವಿಯುವ ಭಾಗ್ಯ ಪಡೆಯದು.

೨೧೦

ಕುಕ್ಕಗೋವುಕಾದು ಕುಂದೇಲು ಪುಲಿಕಾದು ದೋಮುಗಜಮುಕಾದು ದೊಡ್ಡದೈನ
ಲೋಭಿದಾತಕಾಡು ಲೋಕಂಬು ಲೋಪಲ, ವಿಶ್ವದಾಭಿರಾಮ ವಿನುರ ವೇಮ

ನಾಯಿಯಾಕಳಲ್ಲ ಮೊಲವು ಹುಲಿಯು ಅಲ್ಲ.
ಸೊಳ್ಳೆಯಾನೆಯಲ್ಲ ದೊಡ್ಡದಿರಲು,
ಲೋಭಿದಾತನಲ್ಲ ಲೋಕದೊಳಗೆ ಎಂದು
ವಿಶ್ವದಾಭಿರಾಮ ಕೇಳು ವೇಮ

ನಾಯಿ ಆಕಳುಗಳು ಸಾಕುಪ್ರಾಣಿಗಳು. ಆದರೆ ಆಕಳು ಹಾಲು ಕರೆಯುತ್ತದೆ. ಹೊಟ್ಟೆಯ ಹಸಿವು ಹಿಂಗಿಸುತ್ತದೆ. ನಾಯಿಯ ಹಾಲು ಸೇವಿಸಲು ಕೇಡು. ನಾಯಿ ಆಕಳು ಸಾಕು ಪ್ರಾಣಿಗಳಾದರೂ ಒಂದೇ ಅಲ್ಲ.

ಪ್ರಾಣಿ ಶಾಸ್ತ್ರದ ಮೇರೆಗೆ ಮೊಲವೂ ಹುಲಿಯೂ ಒಂದೇ ಜಾತಿಗೆ ಸೇರಿದ ಪ್ರಾಣಿ.

ಗಳು. ಆದರೆ ಹುಲಿಯ ಶಕ್ತಿ, ಭೀಕರತೆ ಮೊಲಕ್ಕೆ ಇರದು. ಹುಲಿ ಹುಲಿಯೇ, ಮೊಲವು ಮೊಲವೇ.

ಆನೆ ಸೊಂಡಿಲಿನಿಂದ ತನ್ನ ಶಕ್ತಿ ಪ್ರದರ್ಶಿಸುತ್ತದೆ. ಸೊಳ್ಳೆ ಸೊಂಡಿಲಿನಂತೆ ಮುಂದಿ ಹಾಯ್ದು ಕೊಂಡಿಯಿಂದ ಚುಚ್ಚಿ ರಕ್ತ ಹೀರುತ್ತದೆ. ಇಷ್ಟರಿಂದ ಸೊಳ್ಳೆಯು ಸ್ವಲ್ಪ ದೊಡ್ಡ ದಿದ್ದರೆ ಅದನ್ನು ಆನೆಗೆ ಹೋಲಿಸಬಹುದೇ?

ಅದೇ ರೀತಿ ಲೋಭಿಯಾದ ಮನುಷ್ಯ ಮತ್ತು ದಾತನಾದ ಮನುಷ್ಯ ವೇಷ-ಭೂಷಣ ಗಳಲ್ಲಿ ಅಂದ-ಚೆಂದಗಳಲ್ಲಿ ಒಂದಾಗಿ ಕಾಣಬಹುದು. ಆದರೆ ಲೋಭಿ ಇಲ್ಲದವರನು ಕಂಡು ಹೃದಯ ಕರಗದ ಕಠಿಣಚಿತ್ತನು. ದಾತನಾದರೋ, ಇಲ್ಲದವರನ್ನು ಕಂಡೊಡನೆ ಕರುಣೆ ತೋರುವ ಉದಾರ ಚರಿತ. ಲೋಭಿಯು ಲೋಕದಲ್ಲಿ ಎಂದೂ ದಾತನೆನಿಸನು.

೨೧೧

ತನ್ನು ಜೂಚಿಯೊರುಲು ತಗಮೆಚ್ಚನಲೆನನಿ, ಸೊಮ್ಮುಲೆಲಮಿ ಬೆಟ್ಟು ನೆಮ್ಮೆಮೀಕ,
ಒರುಲಕೊರಕೆ ತಾನು ನುಬ್ಬುಚುನುಂಡುನು, ವಿಶ್ವದಾಭಿರಾಮು ವಿನುರ ವೇಮ.

ಮುಂದಿ ತನ್ನ ಕಂಡು ಮೆಚ್ಚಲಾರರೆಂದು
ಮುತ್ತು ಒಡವೆ ತೊಟ್ಟು ಚೆಲುವು ಮೀರಿ
ಹೆರವರಿಚ್ಛೆ ತಣಿಸೆ, ಹರುಷದುಬ್ಬುತಿಹನು
ವಿಶ್ವದಾಭಿರಾಮು ಕೇಳು ವೇಮ

(ಲೋಕದ ಜನರ ರೀತಿ ವಿಚಿತ್ರ. ತಮ್ಮ ಇಚ್ಛೆ ತಣಿಸುವಂತೆ ನಡೆದರೆ ಅತೃತೃಪ್ತಿ ದೊರೆಯಬಹುದು. ಆದರೆ ಹೆರವರ ಇಚ್ಛೆಯಂತೆ ತಾನು ಕುಣಿಯುವುದೇಕೋ?

ಬೇರೆ ಜನರು ತನ್ನನ್ನು ನೋಡಿ, ತನ್ನ ಸಾದಾ ಉಡುಗೆ-ತೊಡುಗೆಗಳನ್ನು ಮೆಚ್ಚಿ ಕೊಳ್ಳರೆಂದು, ಮುತ್ತಿನ ಸರ ಧರಿಸುತ್ತಾನೆ. ಸುವರ್ಣ ಚಿನ್ನದ ಒಡವೆಗಳನ್ನು ಧರಿಸುತ್ತಾನೆ. ಈ ರೀತಿ ತನ್ನ ರೂಪವನ್ನು ಹೆಚ್ಚಾಗಿ ಅಂದಗೊಳಿಸುತ್ತಾನೆ. ಇಷ್ಟೆಲ್ಲ ವೇಷ-ಭೂಷಣವು ಕೇವಲ ಪರರನ್ನು ತೃಪ್ತಿಪಡಿಸಲು ಮಾತ್ರ. ಯಾರ ಇಚ್ಛೆಯನ್ನೋ ತೃಪ್ತಿಬಡಿಸಿ ತಾನು ಹರುಷದಿಂದ ಉಬ್ಬುತಿರುವನು.

೨೧೨

ಅನ್ನಮುರುಗನತನಿ ಕನ್ನಂಬು ಬೆಟ್ಟನ, ಬಾರವೇಯು ದಾನಫಲಿತಮೇಮಿ?
ಧನಿಕುನಕು ನೊಸಂಗು ದಾನಮು ಲಟ್ಲುಂಡು, ವಿಶ್ವದಾಭಿರಾಮು ವಿನುರ ವೇಮ.

ಅನ್ನ ಜೀರ್ಣಿಸದಗೆ ಅನ್ನನೀಡಲಾಗ,
ಬೀಸಿ ಒಗೆವನದರ ಫಲವು ಏನು ?
ಧನಿಕಗಿತ್ತ ದಾನ ಅಂತೆ ಇಹುದು ನೋಡು
ವಿಶ್ವದಾಭಿರಾಮು ಕೇಳು ವೇಮ

ಯಾವನಿಗೆ ಹಸಿವು ಉಂಟೋ, ಅವನಿಗೆ ಜೀರ್ಣಿಸುವ ಶಕ್ತಿಯುಂಟು. ಜೀರ್ಣಿಸುವ ಶಕ್ತಿ ಇದ್ದವನಿಗೆ ಅನ್ನದ ಪ್ರಯೋಜನವುಂಟು. ಅದರೆ ಜೀರ್ಣಿಸುವ ಶಕ್ತಿಯೇ ಇಲ್ಲದವನಿಗೆ

ಅನ್ನ ನೀಡಿದರೆ ಅವನಿಗೆ ಅದರಿಂದ ಪ್ರಯೋಜನವಿಲ್ಲ. ಬೀಸಿ ಒಗೆಯುತ್ತಾನೆ.

ಅದೇ ರೀತಿ, ಬಡವನಿಗೆ ದಾನ ಪಡೆಯುವ ಅವಶ್ಯಕತೆಯುಂಟು. ಬಡವನೇ ದಾನಕ್ಕೆ ಪಾತ್ರನು. ಆದರೆ ಧನಿಕನಾದವನಿಗೆ ದಾನವಿತ್ತರೆ, ಅದರಿಂದ ಏನು ಪ್ರಯೋಜನ? ಅವನು ತನಗಿತ್ತ ಕೊಡುಗೆಯ ವಸ್ತುಗಳನ್ನು ಎಲ್ಲಿಯೋ ಇಟ್ಟುಬಿಡುತ್ತಾನೆ.

೨೧೩

ಆಕಲನ್ನವಾನಿ ಕನ್ನಂಬು ಬೆಟ್ಟನ, ಹರುನಿಕರ್ಪಿತಮುಗ ನಾರಗಿಂಚು
ಧನವಿಹೀನುನ ಕೆಡು ದಾನಮು ಲಿಟ್ಲುಂಡು. ವಿಶ್ವದಾಭಿರಾಮು ವಿನುರ ವೇಮ

ಹಸಿದು ಬಂದವಂಗೆ ಹಾಕಲನ್ನವನ್ನು
ಹರನಿಗರ್ಪಣೆಂದು ಹರಸಿ ತಿನುವ
ಧನವಿಹೀನನಹಗೆ ದಾನ ಕೊಡಲು ಅಂತೆ
ವಿಶ್ವದಾಭಿರಾಮು ಕೇಳು ವೇಮ

ತನ್ನ ಪಾಲಿನ ಅನ್ನದಲ್ಲಿ ದೈವಕ್ಕೆ ಸ್ವಲ್ಪು ತೆಗೆದಿರಿಸಿ ಊಟ ಮಾಡುವವನೇ ಧರ್ಮ ನಿಷ್ಠ. ದೈವಕ್ಕೆ ಅರ್ಪಿತವಾದ ಪಾಲನ್ನು ಹಸಿದು ಬಂದವರಿಗೆ ನೀಡಿದರೆ ದೈವಾರ್ಪಿತವಾ ಯಿತು. ಹಸಿದವನ ಹಸಿವು ಹಿಂಗಿ ಉಂಟಾದ ತೃಪ್ತಿಯಲ್ಲಿ ತಾನೂ ತೃಪ್ತಿಬಡುವವನೇ ದೈವ ಕಾಣುವ ದೃಷ್ಟಿಯುಳ್ಳವ.

ಇನ್ನು ಹಸಿದು ಬಂದು ಬೇಡುವವನು, ಪಡೆದ ಅನ್ನವು ದೈವದ ಕರುಣೆಯೆಂದು, ಪ್ರಸಾದವೆಂದು ತಿಳಿಯುತ್ತಾನೆ. ಪ್ರಸಾದ ಪ್ರಸನ್ನ ಚಿತ್ತರೆ ಕೊಡುಗೆ. ಪ್ರಸನ್ನ ಚಿತ್ತವೇ ದೈವ. ಪಡೆದ ಅನ್ನ ದೈವದ ಪಾಲು. ಅದಕ್ಕೆ ಅದನ್ನು ಮನಸ್ಸಿನಲ್ಲಿ ಅರ್ಪಿಸಿ ಮರಳಿ ಮನಸ್ಸಿನಲ್ಲಿ ಅದರಿಂದ ಪಡೆದು ಉಣ್ಣಬೇಕು. ಉಂಡಾಗ ಆಗುವ ಹರ್ಷ ದೈವೀ ಪ್ರಸನ್ನತೆಯೇ. ನೀಡಿದವರಿಗೆ ಕಲ್ಯಾಣವಾಗಲಿ ಎಂದು ಹಸಿವು ಹಿಂಗಿದವನು ಹರಸಿದರೆ ಅದೇ ದೈವೀ ಹರಕೆ, ಶುಭಾಶಯ.

ಏನೂ ಇಲ್ಲದ ಬಡವನಿಗೆ ಅವರ ಕೊರತೆ ಹಿಂಗಿಸುವ ವಸ್ತು ನೀಡುವುದೇ ದಾನ. ಧನವಿಲ್ಲದವನಿಗೆ ನೀಡಿದ ದಾನ ಹಸಿದವರಿಗೆ ನೀಡಿದ ಅನ್ನದಂತೆ. ಹರುಷ ಬಿತ್ತಿ ಹರುಷ ಬೆಳೆದುಕೊಳ್ಳುವ ರೀತಿ.

೨೧೪

ಕಲಿಗಿಪೆಟ್ಟಲೇನಿ ಕರ್ಮಜೀವುಲಕೆಲ್ಲ ತಿರಿಪೆಮುನು ದೊರಕದುದೀನುಲಾರ
ತೆಲಿಯ ಜೂಚು ಕೊನುಡು ದೃಷ್ಟಾಂತಮಿದಿ ವೀಕು ವಿಶ್ವದಾಭಿರಾಮು ವಿನುರ ವೇಮ

ಇದ್ದು ನೀಡದಿರಲು ಇದ್ದ ಜೀವಿಗೆಲ್ಲ,
ದೊರಕದವಗೆ ತಿರಿಪೆ. ದೀನ ಜನರೆ !
ತಿಳಿದು ಕಂಡುಕೊಳಿರಿ; ದೃಷ್ಟಾಂತವಿದು ನಿಮಗೆ
ವಿಶ್ವದಾಭಿರಾಮು ಕೇಳು ವೇಮ

ಇದ್ದುಳ್ಳವನು ಕರ್ಮಬದ್ಧ ಜೀವಿಗಳಿಗೆಲ್ಲ ಕರೆದು ನೀಡಬೇಕು. ತಾನು ಗೆಯ್ದ

ಡಾನ ತನ್ನನ್ನು ಕೊಡುವ ಸ್ಥಿತಿಯಲ್ಲಿಯೇ ಇಡುವುದೆಂದೂ, ತಾನು ದಾನ ನೀಡದಿರೆಲು ಡಾನ ನೀಡಲಾರದ ಸ್ಥಿತಿಯೇ ತನ್ನದಾಗುವುದೆಂದೂ ಕರ್ಮ ಸಿದ್ಧಾಂತ ಹೇಳುತ್ತದೆ.

ಉಳ್ಳವನು ಇಲ್ಲದವರಿಗೆ ಕರೆದು ನೀಡದಿದ್ದರೆ ಅವನಿಗೆ ಏನೂ ಇಲ್ಲದ ಸ್ಥಿತಿ ಪ್ರಾಪ್ತಿಯಾಗುತ್ತದೆ. ಬೇಡುವ ದೀನ ಜನರೇ ಈ ದೃಷ್ಟಾಂತದಿಂದ ನೀವೂ ಪಾಠ ಕಲಿಯಿರಿ. ನಿಮಗೆ ಇಲ್ಲವೆಂಬ ಭಾವನೆ ಹೊಂದಿ ನೀವು ಬೇಡ ಹೊರೆಟರೆ ನಿಮಗೂ ಇಲ್ಲವಾಗುವದು. ಕೇಳದೆ ಬಂದುದನ್ನು ಪಡೆಯುವ, ಅದರಲ್ಲಿಯೇ ಸಂತುಷ್ಟಿ ಕಾಣುವ ಸಮಚಿತ್ತತೆ ಅಭಿವೃದ್ಧಿಪಡಿಸಿಕೊಳ್ಳಿರಿ.

೨೧೫

ತಿರಿಪೆಗಾಡಯಿನನು ತಿರಿಪೆಮೆತ್ತಿನಯಟ್ಟ ತಿರಿಪೆಮುಂದುದಾನು ದಿರಿಪೆಮಿಡಿನ
ದಿರಿಪೆಮು ದಿರಿಪೆಮುನ ದಿಗಬಡಿಪೋವುರಾ, ವಿಶ್ವದಾಭಿರಾಮ ವಿನುರ ವೇಮ

ಭಿಕ್ಷುಕಾದ ನರನು ಭಿಕ್ಷೆಯೆತ್ತಿದಂಥ
ಭಿಕ್ಷೆಯಲ್ಲಿ ತಾನು ಭಿಕ್ಷೆ ಕೊಡಲು,
ಭಿಕ್ಷೆ ಭಿಕ್ಷೆಯೊಳಗೆ ಸೇರಿ ಹೋಗುತಿಹುದು
ವಿಶ್ವದಾಭಿರಾಮ ಕೇಳು ವೇಮ

ತಿರುಗಾಡಿ ಪಡೆದದ್ದು, ತಿರಿಪೆ; ದಾತ ತೆಗೆದಿರಿಸಿದ ದೈವದ ಪಾಲು. ದೈವದ ಪಾಲು ಸರ್ವರಿಗೂ ಮುಟ್ಟಬೇಕಾದದ್ದು. ದೈವದ ಪ್ರಸಾದ. ತಿರಿಪೆ ಎತ್ತಿದ್ದರಲ್ಲಿ ಬೇರೆಯವರಿಗೆ ನೀಡಿದರೆ, ತಿರಿಪೆಯಲ್ಲಿ ತಿರಿಪೆಯು ಅಂದರೆ ದೈವದಲ್ಲಿ ದೈವ ಸೇರಿದಂತೆ ಆಗುವುದು.

೨೧೬

ತಾಮುಬಲಿಮಿಬೆಟ್ಟ ದಮಕದಾಮೇಕಲ್ಲು, ನಡುಗನಿಡಿನ ದಾಮು ನಡುಗಗಲ್ಲು
ಇಂದು ನೀನಿವಾನಿ ಕೆಂದುನು ಗಲ್ಗದು, ವಿಶ್ವದಾಭರಾಮ ವಿನುರ ವೇಮ

ತಾವೆ ಒಲಿದು ಕೊಡಲು ತಮಗೆ ಅದುವೆ ಉಂಟು
ಕೇಳಲೀಯೆ ತಮಗೆ ಕೇಳಿದಷ್ಟು
ಕೇಳಲೀಯದಾತಗೆಂದು ಇಲ್ಲವೇನು
ವಿಶ್ವದಾಭಿರಾಮ ಕೇಳು ವೇಮ

ಇಲ್ಲದವರೆನ್ನು ಕಂಡು ತಾವೇ ಚಿತ್ತ ಕರಗಿ, ಒಲಿದು ಕೊಟ್ಟರೆ, ಅದು ಕೊಡುಗೆ; ದಾನ. ಬಡವರ ಹೊಟ್ಟೆ ತುಂಬಿಸಲು ವಿನಿಯೋಗ ಮಾಡಿದ ಹಣ ವ್ಯರ್ಥವೇನಲ್ಲ. ಅದು ಸಮಯಕ್ಕೊದಗುತ್ತದೆ. ಹೀಗೆ ಕೊಟ್ಟದ್ದು ತಮಗೆ ಮರಳಿ ಫಲಕಾರಿಯಾಗಿದೆ.

ದಾನ ಕೇಳಲು ಬಂದರೆ, ಅವರ ಪಾತ್ರತೆ ನೋಡಿ ನೀಡಬೇಕು. ಹಾಗೆ ಕೇಳಿಸಿಕೊಂಡು ನೀಡಿದರೆ, ತಮಗೂ ಕೇಳಿದಾಗ ಮಾತ್ರ ಸಹಾಯ, ಹರಕೆ ದೊರೆಯುವುದು.

ಇದ್ದುಳ್ಳವನನ್ನು ಯಾರಾದರೂ ಇಲ್ಲದವರು ಕೇಳಿದಾಗ, ಏನನ್ನೂ ನೀಡದಿದ್ದರೆ, ಅವನು ಕ್ರೂರ ಮನಸ್ಸಿನವನು. ಅವನು ಯಾರ ಮನಸ್ಸನ್ನೂ ಒಲಿಸಿಕೊಳ್ಳಲಾರ. ಹೆರವರು ಇವನ ಸುಖ ದುಃಖಗಳನ್ನು ಹಂಚಿಕೊಳ್ಳವದಿಲ್ಲ. ಇವನಿಗೆ ಎಲ್ಲರ ಇದ್ದರೂ, ಇಲ್ಲದಂತೆ.

೨೧೭

ತಾಮುಗಡನಜೀಯು ಧನಮು ತಮುದಿಯಂಚು ನಮ್ಮಿಯುಂಡ್ರು ವೆರ್ರಿನರುಲು ಭುವಿನಿ,
ತಾಮೊಕರಿಕಿನಿಚ್ಚು ದಾನಂಬಿ ತಮುದಿಯೌ ವಿಶ್ವದಾಭಿರಾಮ ವಿನುರ ವೇಮ

ತಾವು ಗಳಿಸಿ ಇಟ್ಟ ಧನವು ತಮ್ಮದೆಂದು
ನಂಬಿರುವರು, ಹುಚ್ಚು ನರರು ಜಗದಿ
ತಾವೋರ್ವನಿಗೆ ಕೊಟ್ಟ ದಾನ ತಮ್ಮದಹುದು
ವಿಶ್ವದಾಭಿರಾಮ ಕೇಳು ವೇಮ

(ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ| ಕೊಟ್ಟದ್ದು ಕೆಟ್ಟತೆನಬೇಡ ಅದು ಮುಂದೆ ಕಟ್ಟಹುದು ಬುತ್ತಿ ಸರ್ವಜ್ಞ || ಎಂದು ವೇಮನ ಯೋಗಿಯ ವಿಚಾರಗಳನ್ನು ಕನ್ನಡದಲ್ಲಿ ಸರ್ವಜ್ಞ ಕವಿ ಪ್ರಾಸಬದ್ಧವಾಗಿ ತಿಳಿಸಿದ್ದಾರೆ.)

ಕರ್ಮಬದ್ಧರಾಗಿ ಜೀವನ ಸಾಗಿಸುವಾಗ ಹಣ ಕೂಡಿ ಬೀಳುತ್ತದೆ. ಸಂಪಾದಿಸಿದ ಧನವು ಕೇವಲ ತಮ್ಮ ಉಪಭೋಗಕ್ಕೆಂದು, ತಿಳಿದು, ಅದು ಎಂದಾದರೂ ತಮಗೆ ಪ್ರಯೋಜನಕಾರಿಯೆಂದು ನಂಬಿ ಕುಳಿತಿರುತ್ತಾರೆ ಲೋಕದ ಜನ. ಇದು ಹುಚ್ಚು ವಿಚಾರ. ಏಕೆಂದರೆ ಧನದ ಉಪಭೋಗವಾಗಲಿ ಇಲ್ಲವೆ ಅದರಿಂದ ದೊರೆವ ಫಲ ಪ್ರಾಪ್ತಿಯಾಗಲಿ ಲೋಕ ತಿಳಿದಂತೆ ಇರುವುದಿಲ್ಲ.

ಇಲ್ಲದವರಿಗೆ ಕೊಟ್ಟರೆ, ಅವರು ಸಂತೋಷಪಡುತ್ತಾರೆ. ಅವರ ಸಂತೋಷದಿಂದ ಕೊಟ್ಟವರು ಸಂತೋಷ ಹೊಂದುತ್ತಾರೆ. ಕೊಟ್ಟವರು ಪಡುವ ಈ ಸುಖವನ್ನು ಅನುಭವಿಸದ ಜನರು ಹುಚ್ಚರಲ್ಲದೆ ಇನ್ನೇನು ? ಕಾರಣ ತಾವು ಬೇರೊಬ್ಬನಿಗೆ ದಾನ ನೀಡಿದರೆ ಅದರಿಂಪ ಅವನಿಗೂ ಸುಖವುಂಟು. ತನಗೂ ಸಂತೋಷವುಂಟು. ಆ ದಾನವು ತನ್ನ ಸುಖ–ಸಂತೋಷಕ್ಕಾಗಿಯೇ ವಿನಿಯೋಗವಾದಂತೆ.

೨೧೮

ಅರ್ಥವಂತುಸೊಮ್ಮು ನಾಸಿಂತು ರಕ್ಷುಲ, ಯ್ಯರ್ಥಿಕೀನಿಸೊಮ್ಮು ವ್ಯರ್ಥಮೆ ಸುಮೀ
ವ್ಯರ್ಥಮೈನಸೊಮ್ಮು ವ್ಯರ್ಥುಲ ಜೇರುರಾ ವಿಶ್ವದಾಭಿರಾಮ ವಿನುರ ವೇಮ

ಅರ್ಥವಂತನ ಸಿರಿ ಆಶಿಪರರ್ಥಿಗಳು
ಅರ್ಥಿಗೀಯದ ಸಿರಿ ವ್ಯರ್ಥ ಕಣಾ
ವ್ಯರ್ಥವಾದ ಸಿರಿಯು ವ್ಯರ್ಥವಿಹಗೆ ನೋಡು
ವಿಶ್ವದಾಭಿರಾಮ ಕೇಳು ವೇಮ

ಬೇಡುವವರು ಉಳ್ಳವನ ಸಂಪತ್ತನ್ನು ಆಶಿಸಿ ಬೇಡುವರು. ಬೇಡುವವರಿಗೆ ಕೊಡದಿದ್ದರೆ ಆ ಸಂಪತ್ತು ಹಾಳುಕಾಣೆರೋ. ಹಾಳಾದ ಸಂಪತ್ತು ಹಾಳಾದ ಮನುಷ್ಯನಿಗ ಉಂಟಷ್ಟೇ.

ಬೇಡುವವನಿಗೆ ನೀಡಿದರೆ ಅವನು ಹರುಷಪಡುವನು. ಅವನ ಹರುಷವೇ ಕೊಡುವವನಿಗೂ ಹರುಷ ನೀಡುವುದು. ಇದಿಲ್ಲದಿದ್ದರೆ ಆ ಸಿರಿಯು ನಿಷ್ಪ್ರಯೋಜಕ. ಅಂಥ ಸಂಪತ್ತು ಹೊಂದಿರುವ ಮನುಷ್ಯನೂ ಅದರ ಸರಿಯಾದ ವಿನಿಯೋಗ, ಉಪಭೋಗ ಗೊತ್ತಿರದ ಹಾಳುಜೀವಿಯೇ ಸರಿ.

೨೧೯

ಕಲಿಗಿ ಧರ್ಮವೀಯ ಗಾನನಿವಾರುನು, ಕಲಿಗಿ ತಿನಕ ಚಾಲ ಗ್ಯಾಗುವಾರು
ಕಲಿವಿನೆಚಟಜೂಡ ಗಾನಕ ಚೆಡುದುರು, ವಿಶ್ವದಾಭಿರಾಮ ವಿನುರ ವೇಮ

ಇರುವಕಾಲ ದಾನ ಈಯದಂಥ ಜನರು
ಇದ್ದು ತಿನ್ನದಿಹರು ಇರುವತನಕ
ತಾ ಕಾಣದೆಂದು ಕೆಟ್ಟು ಹೋಹರಯ್ಯ
ವಿಶ್ವದಾಭಿರಾಮ ಕೇಳು ವೇಮ

ತನಗೆ ಸಂಪತ್ತು ಇರುವ ಕಾಲಕ್ಕೆ ದಾನ-ಧರ್ಮ ಮಾಡದ ಜನರೂ, ಮತ್ತು ತಮಗೆ ಸಂಪತ್ತು ಇದ್ದೂ, ಉಪಭೋಗ ಮಾಡದ ಜನರೂ ಕೊನೆ ಕೊನೆಗೆ ತಮ್ಮ ಸಂಪತ್ತು ನಶಿಸಿ, ಕನಕವನ್ನು ಕಾಣದೆ ಹಾಳಾಗಿ ಹೋಗುವರು.

೨೨೦

ಧನಮುಲೇಮಿಯನೆಡು ದಾವಾನಲಂಬಿಲ, ದನ್ನುಜೆರುಚುನು ದರಿದಾಪುಜೆರುಚು,
ಧನಮುಲೇಮಿ ಜೂಡ ದಲಚನೇಪಾಪಂಬು ವಿಶ್ವದಾಭಿರಾಮ ವಿನುರ ವೇಮ

ಧನವು ಇಲ್ಲದವನು ದಾವಾಗ್ನಿಯಂತಿಹ
ಕೆಡುವ ತಾನು ಮತ್ತೆ ಕೆಡಿಸುವ ನೆರೆ.
ಧನಹೀನತೆ ನೋಡಿ, ತಿಳಿಯಬೇಕು ಪಾಪ
ವಿಶ್ವದಾಭಿರಾಮ ಕೇಳು ವೇಮ

ಧನವು ಇಲ್ಲದವನು-ಹೆಚ್ಚಾಗಿ ಇಲ್ಲದವನೆಂಬ ಭಾವನೆಯಲ್ಲಿ ಮುಳುಗಿರುವವನು ಬೇರೆಯವರ ಸುಖ-ಸಂಪತ್ತು ಕಂಡು ಅಸೂಯೆ ಪಡುತ್ತಾನೆ. ಇಂಥವನಿಗೆ ಕೇಡು ಬಗೆಯಲು ಬೇರೆ ಹಗೆಗಳೇ ಬೇಕಾಗಿಲ್ಲ. ಅವನ ಅಸೂಯೆಯೇ ಅವನ ಹಗೆ. ಅವನನ್ನು ಒಳಗೊಳಗೆ ಸುಡುವ ಹೊಟ್ಟೆಕಿಚ್ಚು. ತನ್ನ ಈ ಕೇಡು ಗುಣದಿಂದ ಅಸೂಯೆಪಡುವ ಧನವಿಹೀನನು ತಾನು ಕೆಡುತ್ತಾನೆ. ಮತ್ತು ನೆರೆಹೊರೆಯವರೆನ್ನು ಕಂಡು ಅಸೂಯೆತಾಳಿ ಅನುಚಿತ ವರ್ತಿಸಿ ಅವರೂ ಇವರ ಬಗ್ಗೆ ಕೋಪ ತಾಳುವಂತೆ ಮಾಡಿ, ಅವರನ್ನೂ ಕೆಡಿಸುತ್ತಾನೆ.

ಧನವಿಹೀನನಾದವನು ಸಲ್ಲದ ಕಾರ್ಯವನ್ನು ಪಾಪವನ್ನು ಮಾಡುವ ಸಂಭವವುಂಟು ಕಾರಣ ಧನವಿಲ್ಲದಿರುವದೇ ಪಾಪದಕಾರ್ಯಕ್ಕೆ ಕೈಹಾಕುವನೆಂಬುದಕ್ಕೆ ಸೂಚಿಯೆಂದು ತಿಳಿಯಬೇಕು.

೨೨೧

ಮಾಟಲಾಡನೇರ್ಪಿ ಮನಸುಗರುಗ ಜೇಸಿ, ಪರಗ ಬ್ರಿಯಮುಬುಟ್ಟ ಬಲುಕ ಕುನ್ನ
ನೊಕರಿಚೇತಿಸೊಮ್ಮು ಲೂರಕವಚ್ಚುನಾ? ವಿಶ್ವದಾಭಿರಾಮ ವಿನುರ ವೇಮ

ಮಾತನಾಡಗಲಿತು ಮನವ ನೀರಾಗಿಸಿ,
ಪರಮ ಪ್ರೀತಿ ಹುಟ್ಟದಂತೆ ನುಡಿಯೆ,
ಹೆರವರ ಬಳಿಯ ಸಿರಿ ಬರಿದೆ ಬರುವುದೆಂತು?
ವಿಶ್ವದಾಭಿರಾಮ ಕೇಳು ವೇಮ

(ಕೇಳದೆ ಕೊಡುವದೇ ಉತ್ತಮ. ಆದರೆ ಉತ್ತಮವಾದುದನ್ನೇ ಲೋಕ ಯಾವಾಗಲೂ ಪಾಲಿಸುತ್ತಿರುವುದಿಲ್ಲ. ಆರ್ತರಾಗಿ ಮೊರೆ ಕೇಳಿಸುವಂತೆ ನುಡಿಯಬಲ್ಲವರು, ಕೊಡುವವರೆ ಕಠಿಣ ಮನಸ್ಸು ಕರಗಿಸುತ್ತಾರೆ. ಅನಂತರ ಅವರ ಪ್ರೀತಿಗೆ ಪಾತ್ರರಾಗಿ ಅವರಿಂದ ಧನ ಪಡೆಯುತ್ತಾರೆ. ಇದು ಲೋಕ ರೂಢಿಯಾಗಿದೆ.)

ಪರರ ಮನಸ್ಸಿಗೆ ಒಪ್ಪುವಂತೆ ಮಾತನಾಡುವದನ್ನು ತಿಳಿದು, ಅವರ ಮನಸ್ಸನ್ನು ಕರಗಿಸಿ, ನೀರು-ನೀರು ಮಾಡಿ (ದ್ರವವಾಗಿ ಮಾಡುವುದೆಂದರೆ ವಿಶಾಲಗೊಳಿಸುವದು. ಏಕೆಂದರೆ ಘನಪದಾರ್ಥವು ದ್ರವರೂಪ ತಾಳಿದಾಗ ವಿಶಾಲವಾಗುತ್ತದೆ. ವಾಯುರೂಪ ತಾಳಿದಾಗ ಇನ್ನೂ ಹೆಚ್ಚು ವಿಶಾಲವಾಗುತ್ತದೆ. ವಿಶಾಲವಾಗುವದರ ಜೊತೆಗೆ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ರೂಪಾಂತರವಾದಾಗ ಮೃದುತ್ವ ಹೆಚ್ಚಾಗುತ್ತದೆ.) ಅವರಲ್ಲಿ ಎಲ್ಲವೂ ಒಂದೇ ಎಂಬ ಪರಮಪ್ರೀತಿ ಹುಟ್ಟುವಂತೆ ನುಡಿಯಬೇಕು. ಆಗಮಾತ್ರ ಅವರು ತಮ್ಮ ಸಂಪತ್ತನ್ನು ದಾನಮಾಡಲು ಮುಂದಾಗುವರು. ಇಲ್ಲದೆ ಇದ್ದರೆ ಅವರೆಂದೂ ದಾನನೀಡರು. ಹೆಚ್ಚಿನ ಸಂದರ್ಭಗಳಲ್ಲಿ, ಬೇಡದೆ ದಾನವು ಸುಮ್ಮನೆ ದೊರೆಯಬಹುದೆ?

೨೨೨

ಅರುದುಗಾನಡಿಗಿನ ನತಡರ್ಥಿ ಕಾಬೋಡು, ತರಚುಗಾನೊಸ ದಾತಕಾಡು
ದಾತಕರ್ಥಿ ಕಿಂತ ತಾರತಮ್ಯಮುಗಲ್ಗು ವಿಶ್ವದಾಭಿರಾಮ ವಿನುರ ವೇಮ

ಏನೊ ಒಂದು ಸಾರೆ ಬೇಡಲರ್ಥಿಯಲ್ಲ
ಸತತ ನೀಡದಾತ ದಾತನಲ್ಲ
ದಾತ ಅರ್ಥಿಗಳಲಿ ತಾರತಮ್ಯವುಂಟು
ವಿಶ್ವದಾಭಿರಾಮ ಕೇಳು ವೇಮ

ದಾತನೂ ಅರ್ಥಿಯೂ ಬೇರೆ ಬೇರೆ ವರ್ಗದ ಜನರಲ್ಲ.ದಾತರಾಗಿಯೇ ಕೊನೆಯತನಕ ಉಳಿಯುವವರು ಕೆಲವರು; ಅರ್ಥಿಗಳಾಗಿ ಕೊನೆತನಕ ಉಳಿಯುವ ಕೆಲವರು, ಎಂಬ ಕರ್ಮ ಬಂಧವಿಲ್ಲ. ನೀಡುವವರೂ, ಬೇಡುವವರೂ ಒಂದೇ, ಅವರಲ್ಲಿ ಕೇವಲ 'ತರ" 'ತಮ' ಭಾವವುಂಟಷ್ಟೇ.

ಇದಲ್ಲದೆ ಬೇಡುವವರನ್ನು ಮತ್ತು ನೀಡುವವರನ್ನು 'ತರ''ತಮ'ಭಾವದಿಂದ ವರ್ಗೀಕರಿಸಬಹುದು. ಅವನು ಇವನಿಗಿಂತ ಹೆಚ್ಚು ಬೇಡುವವನು; ಇದು 'ತರ' ಭಾವ. ಅವನು ಎಲ್ಲರಿಗಿಂತ ಹೆಚ್ಚು ಬೇಡುವವನು, ಇದು 'ತಮ' ಭಾವ.

ಏನೋ ಒಂದುಸಲ ಬೇಡಿದವನನ್ನು ಅರ್ಥಿಯೆಂದು ಸದಾ ಕರೆಯಲಾಗದು. ಅದೇ ರೀತಿ, ಎಂದೋ ಒಮ್ಮೆ ಕೊಟ್ಟವನನ್ನು ದಾತ ಎಂದು ಸದಾ ಕರೆಯಲಾಗದು. ದಾತ ಗುಣವುಳ್ಳವನು ದಾತ. ಈ ಗುಣವು ಮೈಗೂಡಿ ಸದಾ ನೀಡುವವನು ಮಾತ್ರ ದಾತನೆನಿಸುವನು. ಇಲ್ಲದಿದ್ದರೆ ಇಲ್ಲ.

೨೨೩

ಪರಗದಾನೊಸಗಕ ಪರುಲುಚೆಪ್ಪಿನದ್ದೆನ, ನೀಯಜಾಲಕ ಭ್ರಮಿಯಿಂಚು ನೆಪುಡು,
ಪೊಟ್ಟದಿನೆಡಿಲೋಭಿ ಬುನ್ನಲುವೆಟ್ಟುನಾ? ವಿಶ್ವದಾಭಿರಾಮ ವಿನುರ ವೇಮ

ಒಟ್ಟು ತಾನು ಕೊಡನು ಎಷ್ಟು ಹೇಳಿದರೂ,
ಕೊಟ್ಟು ಬಿಡದೆ ಭ್ರಮಿಸುತಿಹನೆಂದೂ;
ಹೊಟ್ಟು ತಿನುವ ಲೋಭಿ ಅನ್ನವಿಡುವನೆಂತು?
ವಿಶ್ವದಾಭಿರಾಮ ಕೇಳು ವೇಮ

ತನ್ನ ಉಪಭೋಗಕ್ಕೆ ಸಾಕಾಗಿ ಉಳಿದ ಧನವನ್ನು ಲೋಭಿಯು ಇಲ್ಲದವರಿಗೂ ಕೊಡನು. ನೀಡುವದರಿಂದ ಇಲ್ಲದವರು ಹರ್ಷಚಿತ್ತರಾಗುವರೆಂದೂ, ಅವರ ನಲಿವು ನಗೆಗಳಲ್ಲಿ ತಾನೂ ಪಾಲುಗೊಳ್ಳಬಹುದೆಂದೂ ತಿಳಿಸಿ ಹೇಳಿದರೂ ಅವನಿಗೆ ಅದರ ಪರಿವೆಯಿಲ್ಲ. ತನ್ನ ಧನ ಸಂಪತ್ತನ್ನು ಕೂಡಿಟ್ಟರೆ, ಅದೇ ತನಗೆ ಸಾಯುವ ಮುನ್ನ ಪ್ರಯೋಜನವಾಗುವದೆಂಬ ಭ್ರಮೆ ಅವನನ್ನು ಮುತ್ತಿರುತ್ತದೆ. ಹಣ ಕೂಡಿಹಾಕುವ ಏಕಮೇವ ಗುರಿಯಿರಿಸಿಕೊಂಡ ಲೋಭಿ ತಾನೇ ಹೊಟ್ಟೆತುಂಬ ಸಮೀಚೀನ ಊಟ ಸೇವಿಸದೆ ತೌಡು-ಗಂಜಿಯಿಂದ ಹೊಟ್ಟೆ ತುಂಬಿಕೊಳ್ಳುತ್ತಾನೆ. ಅಂಥ ಲೋಭಿಯು ಇತರರಿಗೆ ಅನ್ನ ಹಾಕುವುದಾದರೂ ಎಂತು?.

೨೨೪

ಧನಮುಲೇಮಿ ಸುತುಲುದಪ್ಪಲನಿಡುದುರು, ಧನಮುಲೇಮಿ ಪತ್ನಿ ತಾಕನೀದು,
ಧನಮುಲೇಮೆವರಿಕಿ ದಾಳಿ ಕೈಯುಂಡದು, ವಿಶ್ವದಾಭಿರಾಮ ವಿನುರ ವೇಮ
ಧನವಿರದಿರೆ ಸುತರು ತಪ್ಪನೆಣಿಸುತಿಹರು.
ಧನವಿರದಿರೆ ಪತ್ನಿ ತಾವ ಬಿಡಳು
ಧನವಿರೆ ಯಾರಿಗೂ ತಾಳಿಕೆಬರಬಹುದು
ವಿಶ್ವದಾಭಿರಾಮ ಕೇಳು ವೇಮ.

ಧನದ ಮೇಲೆ ಲೋಕದ ಜನರ ದೃಷ್ಟಿಕೇಂದ್ರೀಕೃತವಾಗಿದೆ. ಧನವು ಕೊನೆವರೆಗೆ ತಮ್ಮ ನೆರವಿಗೆ ಬಾರದು ಎಂಬ ದೃಷ್ಟಿ ಹೆಚ್ಚಾಗಿ ಬೆಳೆದಿಲ್ಲ. ತಂದೆಯ ಬಳಿ ಧನವಿರದಾಗ ಮಕ್ಕಳು, ತಮ್ಮ ತಂದೆ ತಮಗಾಗಿ ಏನನ್ನೂ ಉಳಿಸಲಿಲ್ಲೆಂದೂ, ತನ್ನ ಕರ್ತವ್ಯ ನೆರವೇರಿಸುವಲ್ಲಿ ತಪ್ಪಿದನೆಂದೂ ಎಣಿಸುತ್ತಾರೆ ಪತಿಯ ಬಳಿ ಹಣವಿರದಿದ್ದರೆ, ಅವನಿಂದ ತನಗೆ ಸುಖ ದೊರೆಯದೆಂದೂ ಹೆಂಡತಿ ಬಗೆಯುತ್ತಾಳೆ. ಮತ್ತು ಅವನ ಮಾತಿಗೆ ಅಷ್ಟೊಂದು ಮನ್ನಣೆ ಕೊಡುವದಿಲ್ಲ. ಅವನನ್ನು ಹೆಚ್ಚಾಗಿ ಲೆಕ್ಕಿಸುವದಿಲ್ಲ.

ಆದರೆ ಲೋಕದ ಜನರು ಧನವೊಂದು ಇದ್ದರಾಯ್ತು.ಅಂಥವನನ್ನು ಬೆಂಬಲಿಸುತ್ತಾರೆ. ಅವನ ಮಾತಿಗೆ ಬೆಲೆ ಕೊಡುತ್ತಾರೆ. ಧನವುಳ್ಳ ಮನುಷ್ಯ ತಾಳಿ ಬಾಳಬಹುದು.

೨೨೫

ಪಚ್ಚ ಜೂಚುವಾರು ಬಚ್ಚ ನೆಚ್ಚೆಡುವಾರು, ಪಚ್ಚಮೀದ ವಾಂಛ ಪಡೆಡುವಾರು.
ಪಚ್ಚೆವಿಡುಚುವಾನಿ ಬ್ರಭುವುಗಾಜೂತುರು, ವಿಶ್ವದಾಭಿರಾಮ ವಿನುರವೇಮ.
ಧನವ ನೋಡುವವರು ಧನವ ಮೆಚ್ಚುತಿಹರು
ಧನದ ಮೇಲೆ ಮೋಹ ಧರಿಸುವವರು
ಧನವ ನೀಡುವವನ ದೊರೆಯೆಂದುನೋಳ್ಪರು
ವಿಶ್ವದಾಭಿರಾಮ ಕೇಳು ವೇಮ.

ಧನವನ್ನು ಆಶಿಸುವವರು, ಅದನ್ನೇ ಕುರಿತು ಚಿಂತಿಸುತ್ತಾರೆ. ಅದನ್ನು ಪಡೆಯಲು ಯೋಚಿಸುತ್ತಾರೆ. ಧನದ ಕಡೆಗೆ ಸದಾ ದೃಷ್ಟಿ ಹರಿಸುತ್ತಾರೆ. ಅವರಿಗೆ ಧನವೇ ಅತ್ಯಂತ ಮೆಚ್ಚುಗೆಯ ವಸ್ತುವಾಗುತ್ತದೆ.

ಯಾರಿಗೆ ಧನದ ಮೇಲೆ ಹೆಚ್ಚಿನ ಮೋಹವಿದೆಯೋ ಅವರು ಧನ ಕೊಡುವವನನ್ನೇ ತಮ್ಮ ಪ್ರಭುವೆಂದು ತಿಳಿಯುತ್ತಾರೆ. ತಮ್ಮನ್ನು ನಿಯಂತ್ರಿಸುವ ಸರ್ವಂತರ್ಯಾಮಿ ಆತ್ಮವೆಂಬುದನ್ನು ಅವರು ತಿಳಿಯರು. (ಸರ್ವಾನ್ ಅಂತರ್ ಸ್ಥಿತ್ವಾ ಯಮಯತೇ ಇತಿ, ಸರ್ವಂತರ್ಯಾಮಿನ್, ಅಂದರೆ ಎಲ್ಲರನ್ನೂ ಒಳಗಿದ್ದುಕೊಂಡು ನಿಯಂತ್ರಿಸುವವನು.)

೨೨೬

ಮೆಲತ ನಡವಿನುಂಚಿ ಮೃಗಮುವೆಂಟನು ಬೋವು, ರಾಮುಚಂದ್ರುಕನ್ನ ರಸಿಕುಡೇಡಿ,
ಚೇಟುಕಾಲಮುನಕು ಚೇಡುಬುದ್ಧಿಪುಟ್ಟುನು, ವಿಶ್ವದಾಭಿರಾಮ ವಿನುರ ವೇಮ.
ಮಡದಿ ಅಡವಿ ಹೊಗಿಸಿ ಮೃಗದ ಹಿಂದೆ ನಡೆದ
ರಾಮಚಂದ್ರಗಿಂತ ರಸಿಕನಾರು ?
ಕೆಡಕುಕಾಲ ಬರಲು ಕೇಡು ಬುದ್ಧಿ ಬಹುದು.
ವಿಶ್ವದಾಭಿರಾಮ ಕೇಳು ವೇಮ.

ರಾಮ ತನ್ನ ಹೆಂಡತಿಯೊಂದಿಗೆ ಅರಣ್ಯಕ್ಕೆ ಹೋದ. ದಂಡಕಾರಣ್ಯದಂಥ ದಟ್ಟಾರಣ್ಯದಲ್ಲಿ ಸಣ್ಣ ಕುಟೀರವೊಂದನ್ನು ನಿರ್ಮಿಸಿಕೊಂಡು ತಮ್ಮ ಲಕ್ಷ್ಮಣ ಮತ್ತು ಪತ್ನಿ ಸೀತೆಯೊಂದಿಗೆ ವಾಸವಾಗಿದ್ದ.

(ರಾವಣನ ಸೋದರಿ ಶೂರ್ಪನಖಿ ಲಕ್ಷ್ಮಣನನ್ನು ವರಿಸಬಯಸಿದಳು. ತನಗೆ ಪ್ರಿಯವೆನಿಸಿದವರೆನ್ನು ವರಿಸುವುದು ಹೆಣ್ಣಿನ ಹಕ್ಕಾದ ಕಾಲವದು. ಅದು ದಕ್ಷಿಣ ಭಾರತದ ವರಣ ಪದ್ಧತಿ. ಉತ್ತರ ಭರತಖಂಡವಾಸಿಗಳಾದ ಆರ್ಯರ ಸಂಸ್ಕೃತಿ ಭಿನ್ನ. ಅಲ್ಲಿ ಪತಿಯ ಒಲುಮೆಗೆ ಹೆಚ್ಚಿನ ಪ್ರಾಧಾನ್ಯ. ಶೂರ್ಪನಖಿಯ ವರ್ತನೆ ಅಸಂಸ್ಕೃತವಾಯ್ತು. ಅನಾರ್ಯವಾಯ್ತು. ಅಸುರ ವರ್ತನೆಯಾಯ್ತು. ಸಿಟ್ಟಿಗೆದ್ದ ರಾಮ ಲಕ್ಷ್ಮಣರು ಶೂರ್ಪನಖಿಯ ಮೂಗು-ಮೊಲೆ ಕೊಯ್ದು ಅಟ್ಟಿದರು. ಶೂರ್ಪನಖಿ ಅಣ್ಣನಾದ ರಾವಣನಿಗೆ ದೂರು ಹೇಳಿದಳು. ರಾವಣ ಸಂಪದ್ಭರಿತ ದೇಶದ ಮಹಾ ಚಕ್ರವರ್ತಿ. ಅವನು, ತಂಗಿ ಹೇಳಿದುದನ್ನು ಕೇಳಿ ತಪ್ತನಾದ. ಉಚಿತ ಅನುಚಿತ ವಿಚಾರಿಸದೆ, ಸೇಡಿನ ಭಾವನೆ ತಾಳಿದ. ರಾಮನ ಪತ್ನಿ ಸೀತೆಯನ್ನು ಹೊತ್ತು ತಂದು ಸೇಡು ತೀರಿಸಲು ಇಚ್ಛಿಸಿದ. ಮರೀಚ ಋಷಿ ಮಂತ್ರ ಸಿದ್ಧಿಯುಳ್ಳವ. ರಾವಣನಿಗೆ ಸಹಾಯಕನಾದ. ಸ್ತ್ರೀ ಅಪಹರಣದ ಹಂಚಿಕೆಯಲ್ಲಿ ಮರೀಚ ಋಷಿ ಕಾಂಚನ ಮೃಗದ ರೂಪ ತಳೆದ. ಸೀತೆಗೆ ಕಾಣಿಸಿಕೊಂಡ. ಸೀತೆ ಸ್ವರ್ಣ ಜಿಂಕೆ ಕಂಡುದನ್ನು ಹೇಳಿದಳು. ಶ್ರೀ ರಾಮ ಲೋಕದಲ್ಲಿ ಸ್ವರ್ಣ ಜಿಂಕೆ ಇರಬಲ್ಲದೋ ಇಲ್ಲವೋ ವಿವೇಚಿಸಲಿಲ್ಲ. ರಸಿಕನಾಗಿ ಭಾವೋದ್ರೇಕದಲ್ಲಿ ಮುಂದುವರೆದ. ಇದೇ ಪಡೆದದ್ದು ವಿಧಿವಶದಿಂದ. ಕೇಡುಗಾಲ ರಾಮಚಂದ್ರನಿಗೆ ವಿಧಿನಿಯಮವಾಗಿತ್ತು. ಕೆಡುಕು ಬುದ್ಧಿ ಅವನಿಗೆ ಅಂತೇ ಹುಟ್ಟಿತು.

ಲಂಕಪೋವುನಾಡು ಲಂಕಾಧಿಪತಿ ರಾಜ್ಯ, ಮಂತಕೇಶಸೇನ ಲಾಕ್ರಮಿಂಚೆ,
ಚೇಟು ಗಾ ಮೈನ ಜೆರುಪ ನಲ್ಪುಡೆಚಾಲು, ವಿಶ್ವದಾಭಿರಾಮು ವಿನುರ ವೇಮ

ಲಂಕೆ ಹೋಗುವಾಗ ಲಂಕಾಧಿಪ ರಾಜ್ಯ
ಎಂಥದೊ ಕಪಿಸೇನೆ ಆಕ್ರಮಿಸಿತು.
ಕೇಡುಗಾಲವಿರಲು ಕೆಡಿಸಲಲ್ಪ ಸಾಕು
ವಿಶ್ವದಾಭಿರಾಮು ಕೇಳು ವೇಮು.

ಲಂಕೆ ಮಹಾ ಸಂಪದ್ಭರಿತ ಸಾಮ್ರಾಜ್ಯ. ರಾವಣ ಲಂಕೆಯ ಅಧಿಪತಿ; ಮಹಾ ಪರಾಕ್ರಮಿ. ವಿಭೀಷಣ ನಿರಪೇಕ್ಷಭಾವದ ಮಿತ್ರ. ರಾವಣನ ಸಹೋದರ. ರಾವಣನ ಸೇನೆ ಅಗಣಿತ. ಆದರೆ ಲಂಕೆ ಹಾಳಾಗುವ ಕಾಲ ಬಂತು. ನಿಮಿತ್ತಮಾತ್ರವಾಗಿ ಕಪಿಗಳ ಸೇನೆಯೇ ಲಂಕೆಯನ್ನು ಆಕ್ರಮಿಸಲು ಶಕ್ಯವಾಯಿತು. ಏಕೆಂದರೆ, ಈ ಮಧ್ಯಂತರದಲ್ಲಿ ರಾವಣ ಸೀತಾಪಹರಣಮಾಡಿದ. ಸೀತಾರಾಮ ತನ್ನ ಪತ್ನಿಯನ್ನು ಹುಡುಕಿಕೊಂಡು ಬಂದು, ಹೇಳಿಕಳಿಸಿದರೂ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಒಪ್ಪಲಿಲ್ಲ. ವಿಭೀಷಣ ರಾವಣನೊಡನೆ ಭಿನ್ನಾಭಿಪ್ರಾಯ ತಾಳಿದ. ರಾವಣನ ಪತ್ನಿ ಮಂಡೋದರಿ ಗಂಡನೊಡನೆ ಸೀತಾವಿಮೋಚನೆಗಾಗಿ ವಾದಿಸಿ ಸೋತಳು. ರಾವಣನು ನಿಂತ ನೆಲ ಬಿರಿಯಿತು. ಇಂಥ ಸಮಯದಲ್ಲಿ ಕಪಿಸೇನೆ ಲಂಕಾರಾಜ್ಯದ ಮೇಲೆ ದಾಳಿ ಮಾಡಿತು. ಕೊನೆಗೆ ಆಕ್ರಮಿಸಿಬಿಟ್ಟಿತು.

ಕೇಡುಗಾಲ ಬಂದಾಗ ಅಲ್ಪ ಜನರೂ ಸಹ ಕೆಡಿಸಬಲ್ಲರು.

೨೨೮

ರಾಮವಿಭುಡು ಪುಟ್ಟ ರಘುಕುಲಂ ಬಲರಿಂಚೆ, ಕುರುವಿಭುಂಡು ಪುಟ್ಟ ಕುಲಮು ಜೆರಚೆ
ಐವರಿಮುಂಚಿಚೆಡ್ಡ ಲೆಂಚಿಚೂಚಿನದೇಲು ವಿಶ್ವದಾಭಿರಾಮು ವಿನುರ ವೇಮು.

ರಾಮವಿಭವ ಹುಟ್ಟಿ ರಘುಕುಲವು ಬೆಳೆಯಿತು.
ಕೌರವರಸು ಹುಟ್ಟಿ ಕುಲದನಾಶ.
ಯಾರು ಒಳಿತು ಕೆಡುಕು ಎಣಿಸಿ ನೋಳ್ಪರು ತಿಳಿ.
ವಿಶ್ವದಾಭಿರಾಮು ಕೇಳು ವೇಮು.

ರಘುವಂಶದಲ್ಲಿ ಅನೇಕ ರಾಜ ಮಹಾರಾಜರು ಆಗಿಹೋದರು. ಆದರೆ ರಘುವಂಶದ ಹೆಸರು ಚಿರಸ್ಮರಣೀಯವಾಗಿ ಉಳಿದುದು, ಪ್ರಭು ಶ್ರೀ ರಾಮಚಂದ್ರನ ಆದರ್ಶ ಜೀವನದಿಂದಾಗಿ. ಒಳ್ಳೆಯವನು ಒಬ್ಬನಾದರೂ ಜನಿಸಿದರೆ ಆ ವಂಶದ ಕೀರ್ತಿ ಬೆಳೆಯುತ್ತದೆ.

ಕುಲದ ಕೀರ್ತಿ ಕೆಡಲು ಸಹ ಆ ವಂಶದಲ್ಲಿ ಹುಟ್ಟಿದ ಯಾವನೋ ಒಬ್ಬ ಅವಿವೇಕಿಯೇ ಕಾರಣನಾಗುವನು. ಮಹಾತ್ಮರಾದ ಭೀಷ್ಮಾದಿಗಳನ್ನು ಪಡೆದ ಕೌರವವಂಶದ ಕೀರ್ತಿ ದುರ್ಯೋಧನನಂಥ ಅವಿವೇಕಿಯ ಕಾರಣದಿಂದ ನಾಶವಾಗಿ ಹೋಯಿತು.

ಇದೆಲ್ಲವನ್ನು ಮನದಟ್ಟಾದು, ಒಳಿತು ಯಾವುದು? ಕೆಡುಕು ಯಾವುದು? ಎಂಬುದನ್ನು ವಿವೇಚಿಸಿ ನೋಡುವವರಾರು? ಎಂಬುದನ್ನು ತಿಳಿಯಿರಿ.

ಶುದ್ಧದೃಷ್ಟಿ ದೆಲಿಸಿ ಶುಕ್ರನಂತಟವಾಡು, ಪಟ್ಟಲೇಕ ಮನಸು ಪಾರವಿಡಿಚಿ,
ಕನ್ನು ಪೋಯಿ ತುದಕು ಗಾಕಿಚಂದಂಬಾಯೆ, ವಿಶ್ವದಾಭಿರಾಮು ವಿನುರ ವೇಮ

ಶುದ್ಧ ದೃಷ್ಟಿಯುಳ್ಳ ಶುಕ್ರನಿಂಥವ ಸಹ
ಹಿಡಿತವಿರದೆ, ಮನಸು ಹದ್ದು ಮೀರಿ,
ಕಣ್ಣು ಹೋಗಿ, ಕೊನೆಗೆ ಕಾಗೆಯಂತೆ ಆದ.
ವಿಶ್ವದಾಭಿರಾಮು ಕೇಳು ವೇಮು.

ಶುಕ್ರಾಚಾರ್ಯ, ಅಸುರರ ಪುರೋಹಿತ, ಬೃಹಸ್ಪತಿ, ಸುರರ ಪುರೋಹಿತ. ಶುಕ್ರಾಚಾರ್ಯ ಶುದ್ಧ ದೃಷ್ಟಿಯುಳ್ಳವ; ಬ್ರಹ್ಮಜ್ಞಾನಿ. ಆದರೂ ಒಮ್ಮೆ ಆಚಾರ್ಯರಿಗೆ ಸ್ತ್ರೀವ್ಯಾಮೋಹ ಹುಟ್ಟಿತು. ಆಚಾರ್ಯರಿಗೆ ಶಾಪ ತಟ್ಟಿತು. ಆಚಾರ್ಯರ ಕಣ್ಣುಗಳು ಕಾಣದಂತಾಗಲಿ ಎಂಬ ಭೀಕರ ಶಾಪ. ನಂತರ ಶಾಪದ ಉಗ್ರತೆ ಸಡಿಲಿ, ಆಚಾರ್ಯರಿಗೆ ಎರಡು ಕಣ್ಣುಗಳಿದ್ದರೂ ಅವರು ಯಾವುದೊಂದು ಕಣ್ಣಿನಿಂದ ನೋಡಬಯಸುವರೋ, ಆ ಕಣ್ಣು ಮಾತ್ರ ವಸ್ತು ರೂಪ ಗ್ರಹಿಸುವಂತಾಯಿತು. ಇದು ಕಾಗೆಯ ದೃಷ್ಟಿಯ ರೀತಿ ಶುಕ್ರಾಚಾರ್ಯರಿಗೆ ಕಾಗೆಯ ದೃಷ್ಟಿ ಉಂಟಾಯಿತು.

ಎಷ್ಟೋ ಒಳ್ಳೆಯವರೂ, ಪರಿಶುದ್ಧರೂ ಆಗಿರಬಹುದು. ಆದರೆ ಎಂದಾದರೊಮ್ಮೆ ನಡೆವಳಿಯಲ್ಲಿ ಎಡವಿದರೆ, ಕಡೆಯತನಕ ಕೇಡು ಪರಿಣಾಮ ಅನುಭವಿಸಬೇಕಾಗುವುದು.

೨೩೦

ದೇಶದೇಶಮುಲನು ಗಾಸಿಲಿತಿರುಗಂಗ, ನಾತ್ಮಯಂದು ಧ್ಯಾನ ಮುಂಟುಕೊನುನೆ?
ಕಾಸುಲಕುನುದಿರುಗ ಗಲುಗುನಾ ಮೋಕ್ಷಂಬು ವಿಶ್ವದಾಭಿರಾಮು ವಿನುರ ವೇಮ

ದೇಶ ದೇಶಗಳನು ದಣಿವಿನಿಂದ ತಿರುಗೆ,
ಆತ್ಮದಲ್ಲಿ ಧ್ಯಾನ ಅಂಟಬಹುದೇ?
ಕಾಸು ಬಯಸಿ ತಿರುಗೆ, ಕಾಣಲಾರ ಮೋಕ್ಷ
ವಿಶ್ವದಾಭಿರಾಮು ಕೇಳು ವೇಮು.

ದೇವರನ್ನು ಕಾಣಬೇಕೆಂದು ಕಾಶಿ ರಾಮೇಶ್ವರಾದಿ ತೀರ್ಥಕ್ಷೇತ್ರಗಳನ್ನು ತಿರುಗಿದರೆ, ಕಾಲುನೋವು ಅಷ್ಟೇ. ದೇವನು ಆತ್ಮದಲ್ಲಿಯೇ ಇರುವನು. ದೇವಧ್ಯಾನವೇ ಆತ್ಮಧ್ಯಾನವು. ಆತ್ಮಧ್ಯಾನವು ಆತ್ಮಸ್ವರೂಪ ಚಿಂತನೆಯಿಂದ ಮಾತ್ರ ಸಾಧ್ಯ. ಆತ್ಮದಲ್ಲಿ ದೈವೀ ಸ್ವರೂಪ ಚಿಂತಿಸುವುದು, ದೇಶ ದೇಶ ತಿರುಗುವುದರಿಂದ ಸಾಧ್ಯವಾಗುವುದೆಂತು?

ಇನ್ನು ತನಗೆ ಸಿರಿ-ಸಂಪದಗಳನ್ನು ದೇವರು ದಯಪಾಲಿಸುವನೆಂದು, ದೇವರನ್ನು ಒಲಿಸಲು ತಿರುಗುವವನಂತೂ, ಭವಚಿಂತೆಯಿಂದ ಪಾರುಗಾಣಿಸುವ ಮೋಕ್ಷದ ಆನಂದವನ್ನು ಅನುಭವಿಸಲಾರನು.

ಕನ್ನೆಖಿಂದನಾಶ ಕನಕಂಬು ಸ್ಯೆನಾಶ ಲೇನಿವಾಡು ಪುಡಮಿಲೇನಿವಾಡು
ಕಲಿಗೆನೇನಿನತಡು ಗಾನಂಗರಾಡಯಾ ವಿಶ್ವದಾಭಿರಾಮ ವಿನುರ ವೇಮು.

ಕನ್ನೆಮೇಲೆ ಆಶೆ ಕನಕದ ಮೇಲಾಶೆ
ಇಲ್ಲದವನೆ ಜಗದಿ ಇಲ್ಲದಾತ.
ಹೊಂದಿರುವಂಥವನು ಹೊರಗೆ ತೋರನಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಈ ಜಗತ್ತಿನಲ್ಲಿ ಇಲ್ಲದವನು, ಅಂದರೆ ಇಲ್ಲಿ ಜೀವಿಸಿದ್ದೂ ಬೇರೊಂದು ಚಿತ್ತಲೋಕದಲ್ಲಿ ವಿಹರಿಸುವವನೆಂದರೆ, ಕನ್ನೆ ಮತ್ತು ಕನಕ ಇವೆರಡರ ಮೇಲೆ ಆಶೆ ಇಲ್ಲದವನು. ಕನ್ನೆ ಮತ್ತು ಕನಕದ ಮೇಲಿನ ಆಶೆಯಿಂದ ಲೋಕದ ಜನರು ಕೇಡು ಬಗೆಯುತ್ತಾರೆ; ಕೆಡುಕು ಮಾಡುತ್ತಾರೆ. ಹೊನ್ನು, ಹೆಣ್ಣು ಮಾಯೆ ಎನ್ನುತ್ತಾರೆ. ಅವುಗಳ ಮೇಲಿನ ಆಸೆ ತೊರೆಯುವುದೆಂದರೆ ಮಾಯೆಯನ್ನು ಹರಿದಂತೆ. ಇಹದಿಂದ ಪರವನ್ನು ಸೇರಿದಂತೆ ಪರ–ಲೋಕ, ಪರಮ–ಪದವಿ ಎಂದರೆ ಆಶೆ ತೊರೆದ ಚಿತ್ತಾನಂದ ಸ್ಥಿತಿ.

ಎಷ್ಟೋ ಜನರು ಈ ಹೊನ್ನು ಹೆಣ್ಣಿನ ಆಶೆ ತೊರೆದೆವೆಂದು ತೋರಿಸಿಕೊಳ್ಳುತ್ತಾರೆ. ಬಿಟ್ಟವರಂತೆ ನಟಿಸುತ್ತಾರೆ. ಆದರೆ, ಈ ಆಶೆ ಹೊಂದಿದವನು ಹೊರಗೆ ಆಶೆಯ ಭಾವನೆಯನ್ನು ವ್ಯಕ್ತ ಮಾಡುವುದಿಲ್ಲವಷ್ಟೇ. ಒಳಗೊಳಗೇ ಕರುಬುತ್ತಾನೆ. ಬಚ್ಚಿಟ್ಟ ಆಶೆಯ ಫಲವಾಗಿ ಅವನು ಪರಮಾನಂದ ಪಡೆಯುವದಿಲ್ಲ. ಲೋಕದ ಬಹು ಜನರು ಇಂಥ ಬಚ್ಚಿಟ್ಟ ಆಶೆಯುಳ್ಳವರೇ.

ಖರಮು ಮೇನಿನಿಂಡ ಗಂಧಂಬುಬೂಸಿನ, ಬೂದಿಲೋನಬಡುಚು ಬೊರ್ಲುಮುರಲ
ವೊಟುವಾರಿಕೂಗಸುಬೋಲು ನಿಯ್ಯದಿ ಸುಮೀ, ವಿಶ್ವದಾಭಿರಾಮ ವಿನುರ ವೇಮ.

ಗಾರ್ದಭ ಮೈತುಂಬ ಗಂಧ ಬಳಿದೊಡೇನು ?
ಬೂದಿ ಕಣದಿ ಮುರಳಿ ಬಿದ್ದು ಉರುಳದಿಹುದೆ ?
ಅಡ್ಡಮೋರೆಯವಗೆ ಸೊಗಸುಡೌಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಯಾರೇ ಆಗಲಿ, ಉಚಿತವಾದುದನ್ನೇ ಆಚರಿಸಬೇಕು. ಕತ್ತೆಯ ಸ್ವಭಾವ ಬೂದಿ ಕಣದಲ್ಲಿ ಬಿದ್ದು ಉರುಳಾಡುವುದು. ಅಂಥ ಹೊಲಸು ಬೂದಿಯಲ್ಲಿ ಬಿದ್ದು ಹೊರಳಾಡುವುದೇ ಕತ್ತೆಗೆ ಹಿತಕರ. ಅದರಲ್ಲಿಯೇ ಸಂತೋಷಪಡುವುದು, ಅದರ ಸ್ವಭಾವ. ಇಂಥ ಕತ್ತೆಗೆ ಸುಗಂಧ ಲೇಪಿಸಿದರೇನು? ಅದಕ್ಕೆ ಗಂಧ ಪವಿತ್ರ; ಅದರ ಲೇಪದಿಂದ ತನ್ನ ಅಂಗ ಪವಿತ್ರ ಎಂಬ ಭಾವನೆ ಬರುವುದೇ ? ಇಲ್ಲ. ಪವಿತ್ರ,–ಅಪವಿತ್ರ; ನಲಿವು–ನೋವು ಚಿತ್ತ ಪ್ರವೃತ್ತಿ ಮಾತ್ರ.

ಅದೇ ರೀತಿ, ಅಡ್ಡಮೋರೆಯವನದು ಅಂದಗೆಟ್ಟ ಮುಖ; ಕುರೂಪಿಯವನು ಸೊಗಸು ಡೌಲು ಜೆಲುವಿಗೆ ಮೆರುಗು ಕೊಡುವ ಭೂಷಣಾಲಂಕಾರಗಳು. ಜೆಲುವು ಇಲ್ಲದಾಗ ಸೊಗಸು ಡೌಲು ಏಕೆ ? ಅದೆಲ್ಲ ಅನುಚಿತ.

ರೂಪವಿಲ್ಲದವನಿಗೆ ಸೊಗಸು-ಡೌಲು ಇಲ್ಲ ; ಮನಸ್ಸು ಶುದ್ಧವಾಗದೆ, ಮೈಗೆ ಗಂಧ ಬಳಿದರೇನೂ ಪ್ರಯೋಜನವಿಲ್ಲ.

ಗ್ರಾಸಮಿಂತಲೇಕ ಕಡುಕಷ್ಟಪಡುಚುನ್ನ, ವಿದ್ಯಯೇಲನಿಲ್ಚು ವೆಡಲುಕಾನಿ ?
ಪಚ್ಚಿಕುಂಡ ನೀಳ್ಳು ಪಟ್ಟನ ನಿಲ್ಚುನಾ ? ವಿಶ್ವದಾಭಿರಾಮ ವಿನುರ ವೇಮ

ಹೊಟ್ಟೆಗಿರದ ಕಾಲ ಕಷ್ಟ ಪಟ್ಟರೇನು ?
ಪಡೆದ ವಿದ್ಯೆ ನಿಲದೆ ಪೋಗದೇನು ?
ಹಸಿಯ ಮಡಿಕೆ, ನೀರು ಹಾಕಲುಳಿಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿದ್ಯೆಯೆಂದರೆ ತಿಳಿವು, ಜ್ಞಾನ. ವಿದ್ಯೆ ಪಡೆದವನು ಹೆಚ್ಚಿನ ತಿಳಿವಳಿಕೆ ಹೊಂದಿರುತ್ತಾನೆ. ತನ್ನ ಕರ್ತವ್ಯವೆಂದು ಕೆಲಸಮಾಡುತ್ತಾನೆ. ಫಲಾಪೇಕ್ಷೆಯಿಲ್ಲದೆ ಸತತ ಕಾರ್ಯೋನ್ಮುಖನಾಗಿರುತ್ತಾನೆ. ಆದರೆ, ಮೇಲಿನಂತೆ ಕಾರ್ಯ ತತ್ಪರನಾಗುವ ವಿದ್ಯೆ ಪಡೆದು, ಆನಂತರ, ತನ್ನ ಉದರಂಭರಣಕ್ಕಾಗಿ, ಕೇವಲ ತನ್ನ ಹೊಟ್ಟೆಪಾಡಿಗಾಗಿ ಕಷ್ಟ ಸೋಸಿದರೆ, ವಿದ್ಯೆ ಪಡೆದ ಉದ್ದೇಶವೇ ನಾಶವಾಗುವುದು. ಹೀಗೆ ವಿದ್ಯೆಯ ಮರ್ಮವನ್ನು ತೊರೆದು ನಡೆದರೆ, ಆ ವಿದ್ಯೆಯೇ ಮರೆತು ಹೋಗಬಹುದಲ್ಲವೇ ?

ಹೇಗೆಂದರೆ, ಹಸಿ ಮಡಕೆಯಲ್ಲಿ ನೀರು ಹಾಕಿದರೆ, ಅದರಲ್ಲಿ ನೀರು ಉಳಿಯಲಾರದು; ಬಸಿದು ಹೋಗುತ್ತದೆ. ಮಡಕೆಯನ್ನು ಮಾಡಿದ ಕಷ್ಟವು ಕುಂಭಾರನಿಗುಂಟು. ಆದರೆ ಅದು ನೀರು ಹಿಡಿಯಲು ಯೋಗ್ಯವಾಗುವಂತೆ ಕಾಯಿಸುವ ತಂತ್ರವೂ ಅವಶ್ಯ.

ವಿದ್ಯಾವಂತನ ಮನಸ್ಸು ಹಸಿ ಮಡಕೆಯಂತೆ. ಅದನ್ನು ಆಚಾರದ ಕುಲುಮೆಯಲ್ಲಿ ಕಾಯಿಸಿ ಗಟ್ಟಿಗೊಳಿಸಬೇಕು.

ದಾನಮರಸಿಚೇಯು ದಃತದಗ್ಗರ ಜೇರಿ, ವಕ್ಕಭಾಷಣಮುಲ ಬಲುಕು ಮೊರಕು
ಚಂದನ ತರುವಂದು ಸರ್ಪಮುಂಡಿನ ರೀತಿ, ವಿಶ್ವದಾಭಿರಾಮ ವಿನುರ ವೇಮ

ದಾನವರಸಿಗೈವ ದಾತನಾಶ್ರಯದೊಳು,
ಕೊಂಕು ಮಾತನಾಡುವಂಥ ಮೂಢ;
ಚಂದನ ಗಿಡದೊಳು ಸರ್ಪವಿಪ್ಪ ರೀತಿ
ವಿಶ್ವದಾಭಿರಾಮ ಕೇಳು ವೇಮ

ಶ್ರೀಗಂಧದ ಗಿಡ ಒಳ್ಳೆಯದು. ಸರ್ವರಿಗೂ ಸುಗಂಧ ಬೀರುವಂಥದು. ಆದರೆ ಶ್ರೀಗಂಧದ ಗಿಡದಲ್ಲಿ ಹಾವು ವಾಸವಾಗಿರುತ್ತವೆ. ಸರ್ವರಿಗೂ ಒಳಿತು ಮಾಡುವ, ಸರ್ವ

ಪ್ರಯೋಜನಕರವಾದ ಶ್ರೀಗಂಧದ ಗಿಡದಲ್ಲಿ, ಸರ್ವರಿಗೂ ಭಯಂಕರವೆನಿಸುವ, ವಿಷಕಾರಿ ಸರ್ಪವು ಇರುತ್ತದೆ.

ಅದೇ ರೀತಿ, ಪಾತ್ರಾಪಾತ್ರತೆಯನ್ನು ಅರಿತು, ಸತ್ಪಾತ್ರದಲ್ಲಿ ದಾನ ಮಾಡುವಂಥ ದಾತನ ಆಶ್ರಯದಲ್ಲಿಯೇ, ಕೊಂಕು ಮಾತನಾಡುವಂಥ ಮೂರ್ಖ ಜನರೂ ಸೇರಿಕೊಂಡಿರುತ್ತಾರೆ.

೨೩೫

ಪೈರುನಿಡಿನವಾನಿ ಫಲಮದಿಸಫಲಂಬು ಪೈರುನಿಡನಿವಾಡು ಫಲಮುಗನುನೆ ?
ಪೈರುನಿಡಿನವಾಡೆ ಬಹುಸೌಖ್ಯವಂತುಡೌ, ವಿಶ್ವದಾಭಿರಾಮ ವಿನುರ ವೇಮ.

ಪೈರು ನೆಡುವ ರೈತ ಫಲಪ್ರಾಪ್ತಿ ಪಡೆವ.
ಪೈರು ನೆಡದವನಿಗೆ ಫಲವು ಎಂತು ?
ಪೈರು ನೆಡುತಿರಲತಿ ಸೌಖ್ಯ ಸೊಗಸು ಕಣಾ.
ವಿಶ್ವದಾಭಿರಾಮ ಕೇಳು ವೇಮ.

ಭತ್ತದ ಚಿಕ್ಕ ಸಸಿಗಳನ್ನು ಗದ್ದೆಗಳಲ್ಲಿ ನೀರು ನಿಲ್ಲಿಸಿ ಊರುತ್ತಾರೆ. ಪೈರು ನೆಡುವ ರೈತನಿಗೆ ಸುಗ್ಗಿಯ ಕಾಲ ಫಲ ಬರುತ್ತದೆ.

ಪೈರು ಊರುವ ಕಾಲ ಊರಲು ತಪ್ಪಿದರೆ ಫಲವೂ ತಪ್ಪುವುದು.

ಇನ್ನು ಪೈರು ನೆಡುವ ಕಾರ್ಯವಾದರೂ ತುಂಬಾ ಹರ್ಷದ ಕಾಲ. ನೀರು ನಿಂತ ಗದ್ದೆಗಳಲ್ಲಿ, ಹಸಿರು ಮುರಿಯುವ ಸಸಿಗಳನ್ನು ಊರುವಾಗ, ಗ್ರಾಮದ ರೈತರು ಜಾನಪದ ಲಾವಣಿ ಪದಗಳನ್ನು ಹಾಡುತ್ತಾರೆ. ಆ ಕಾಲದ ಆನಂದ ಬಣ್ಣಿಸಲಾಸಲ್ಲ.

ಅದೇ ರೀತಿ ಮನಸ್ಸಿನಲ್ಲಿ ಒಳ್ಳೆಯ ವಿಚಾರಗಳನ್ನು ಚಿಂತಿಸಿದರೆ ಅದರೆ ಫಲವೂ ಒಳ್ಳೆಯದಾಗುತ್ತದೆ. ಒಳ್ಳೆಯ ವಿಚಾರಗಳೇ ಇಲ್ಲದಿದ್ದರೆ, ಒಳ್ಳೆಯ ಫಲ ದೊರೆಯುವುದೆಂತು ? ಒಳ್ಳೆಯ ವಿಚಾರಗಳ ಚಿಂತನೆಯು ಸಹ ತುಂಬಾ ಹಿತಕರವಾಗಿರುತ್ತದೆ.

೨೩೬

ಕನಕಮೃಗಮು ಭುವಿನಿ ಕಲದುಲೇದನಕನು, ತರುಣಿ ವಿಡಿಚಿ ಪೋಯೆ ದಾಶರಥಿಯು
ದೈವಮ್ಮೆನ ಧನಮುದಲಚು ಚುಂಡನುಕಾದೆ ? ವಿಶ್ವದಾಭಿರಾಮ ವಿನುರ ವೇಮ

ಹೊನ್ನು ಜಿಂಕೆ ಜಗದಿ ಇಹುದಿಲ್ಲವರಿಯದೆ,
ಮಡದಿ ನುಡಿಯೆ, ಹೋದ ದಾಶರಥಿಯು
ದೇವನಾದರೇನು ಧನದ ಮೋಹವಿರದೆ ?
ವಿಶ್ವದಾಭಿರಾಮ ಕೇಳು ವೇಮ.

ರಾವಣನು ಸೀತಾಪಹರಣಕ್ಕಾಗಿ ಹೂಡಿದ ಹಂಚಿಕೆಯಲ್ಲಿ ಮಾರೀಚ ಋಷಿ ಸ್ವರ್ಣ ಮೃಗವಾಗಿ ಸೀತೆಗೆ ಕಾಣಿಸುತ್ತಾನೆ. ಸೀತೆ ಆಶೆ ಬಟ್ಟು ಸ್ವರ್ಣ ಮೃಗ ಹಿಡಿತರಲು ಪತಿ ಶ್ರೀ ರಾಮಚಂದ್ರನಿಗೆ ಕೇಳುತ್ತಾಳೆ. ಶ್ರೀ ರಾಮ ಪತ್ನಿಯ ಮಾತು ಕೇಳಿ, ಸ್ವರ್ಣಜಿಂಕೆಯ

ಶೋಧದಲ್ಲಿ ಆಸಕ್ತಿ ತಾಳುತ್ತಾನೆ. ಲೋಕದಲ್ಲಿ ಬಂಗಾರದ ಜಿಗರೆ ಇರಬಹುದೋ ಇಲ್ಲವೋ ಎಂಬುದನ್ನು ವಿವೇಚಿಸುವ ವಿವೇಕವೇ ಅವನಲ್ಲಿ ಉಳಿಯುವದಿಲ್ಲ.

ಶ್ರೀ ರಾಮಚಂದ್ರ ದೈವರೂಪಿ ; ದೇವಸ್ವಭಾವದವನು. ಆದರೂ ಧನದ ಮೇಲಿನ ಮೋಹ ಅವನಿಗೂ ಉಂಟು. ಅದರಿಂದ ಅವನ ಬುದ್ಧಿ ಮಂಕಾಯಿತು. ವಿವೇಕ ಮರೆಯಾಯಿತು.

ನಾವು ಎಂಥ ಉಚ್ಚ ಮಾನಸಿಕ ಮಟ್ಟ ಮುಟ್ಟಿದ ನಂತರವೂ ಸಹ ಧನದ ಮೋಹದ ಬಗ್ಗೆ ತುಂಬಾ ಎಚ್ಚರಿಕೆ ಅವಶ್ಯ.

೨೩೭

ಕನಕ ಮುನ್ನವಾಡು ಕಾಮುಡು ಭೀಮುಡೈ ಮಿಗುಲ ತೇಜಮುನನು ಮೆರಯುಚುಂಡು
ವಿತ್ತಹೀನುಡೈನ ವೆರ್ರುಲಲೋನೇಟು, ವಿಶ್ವದಾಭಿರಾಮ ವಿನುರ ವೇಮ.

ಕನಕವಿರಲು ಅವನೆ ಕಾಮ ಮತ್ತೆ ಭೀಮ
ಮಿಗಿಲು ತೇಜದಿಂದ ಮೆರೆಯುತಿಪ್ಪ
ಹೇಮ ಹೀನ ತಾನು ಹುಚ್ಚು ಪೆದ್ದ ನೋಡು
ವಿಶ್ವದಾಭಿರಾಮ ಕೇಳು ವೇಮ

ಹೊನ್ನು ಉಳ್ಳವನೇ ಕಾಮ; ರೂಪವಂತ; ಸರ್ವರನ್ನೂ ಆಕರ್ಷಿಸುವವನು. ಹೊನ್ನು ಉಳ್ಳವನೇ ಭೀಮ, ಶಕ್ತಿವಂತ, ಸರ್ವರನ್ನೂ ದಮನ ಮಾಡುವವನು. ರೂಪವಂತ, ಶಕ್ತಿವಂತರ ಸಮನಾದ ಧನವಂತನೇ ಹೆಚ್ಚಿನ ತೇಜದಿಂದ ಮೆರೆಯುತ್ತಾನೆ.

ಹೊನ್ನು ಇಲ್ಲದವನು ತೇಜೋಹೀನನು. ಅವನ ಬಗ್ಗೆ ಜನರ ಆಕರ್ಷಣೆ ಇಲ್ಲ. ಅವನ ಪ್ರಭಾವವೂ ಅಷ್ಟಕ್ಕಷ್ಟೇ. ಅವನು ಏನಾದರೂ ಒಳಿತು ಹೇಳಹೋದರೆ ಲೋಕದ ಜನರ ದೃಷ್ಟಿಯಲ್ಲಿ ಅವನು ಹುಚ್ಚು ಪೆದ್ದನಾಗಿ ತೋರುತ್ತಾನೆ.

೨೩೮

ಕನಕ ಪರ್ವತಮುನ ಗಾಪುರಂಬುಂಡಿನ, ನನಿಮಿಷೇಶ್ವರನಕು ನಾಸಪೋಡು
ಕನಕ ಕುಂಡಲವುಲು ಕರ್ಣುನಿನಡುಗಡೇ ? ವಿಶ್ವದಾಭಿರಾಮ ವಿನುರ ವೇಮ.

ಕನಕ ಬೆಟ್ಟವಾಸಿಯಾಗಿ ತಾನು ಇರಲು,
ಅನಿಮಿಷೇಶ್ವರನಿಗೆ ಆಶೆ ಬಿಡದು.
ಕನಕ ಕುಂಡಲಗಳ ಕರ್ಣನೊಳು ಕೇಳನೆ ?
ವಿಶ್ವದಾಭಿರಾಮ ಕೇಳು ವೇಮ.

ಅನಿಮಿಷ ಎಂದರೆ ರೆಪ್ಪೆ ಬಡಿಯದವ ; ನಿಶ್ಚಲ ; ಸ್ಥಾಣು. ಅನಿಮಿಷೇಶ್ವರ ನಿಶ್ಚಲವಾದ, ಸ್ಥಾಣುವಿನಂಥ ಇಷ್ಟದೈವ. ಅನಿಮಿಷೇಶ್ವರ, ಮಹಾದಾನಿ ಕರ್ಣನ ಸ್ವರ್ಣ ಕುಂಡಲಗಳನ್ನು ಕೇಳಿಪಡೆದ.

ಅನಿಮಿಷೇಶ್ವರನ ವಾಸ ಕನಕ ಬೆಟ್ಟದಲ್ಲಿ. ಆದರೂ ಹೊನ್ನಿನ ಕರ್ಣಕುಂಡಲಗಳನ್ನು

ಆಶಿಸಿ ಅವನು ಕರ್ಣನಲ್ಲಿಗೆ ಬಂದು ಕೇಳಿದ.

ದೈವೀ ಕಲ್ಪನೆಯನ್ನು ಬಿಂಬಿಸುವ, ಆ ಕಲ್ಪನೆಯ ಮೂರ್ತಿಮಂತ ಚಿತ್ರಣಗಳಲ್ಲಿ ಸಹ ಆಶೆಯನ್ನು ಆರೋಪಿಸಲಾಗುತ್ತದೆ. ಅಶಾನಿಗ್ರಹ ಕಷ್ಟಸಾಧ್ಯ. [ಶಿವ ಪುರಾಣ ನ್ವಯ ಕರ್ಣನ ಸ್ವರ್ಣ-ಕುಂಡಲಗಳನ್ನು ಅನಿಮಿಷೇಶ್ವರನು ಕೇಳಿ ಪಡೆದನೆಂದು ಗ್ರಹಿಕೆ.]

೨೩೯

ಕರ್ಣುಡೊಕಡೆಕಾನಿ ಘನುಡೆವ್ವಡುನುಲೇಡೆ ? ದಾನಶೀಲುಡನುಚು ದಲಪಬಡಗ
ದಲಿಪ ಧನಮು ಕರ್ಣು ದಾತಗಾಜೇನೆನು ವಿಶ್ವದಾಭಿರಾಮ ವಿನುರ ವೇಮ.

ಕರ್ಣನೋರ್ವ ಘನನು ಎಂದು ಕರೆವುದೇಕೆ ?
ದಾನಶೀಲ, ಗುಣದಿ ಮುಕುಟಮಣಿಯು
ಮೇರು ಧನವು, ಕರ್ಣ ದಾತನೆನಿಸೆ ಮೂಲ
ವಿಶ್ವದಾಭಿರಾಮ ಕೇಳು ವೇಮ.

ಅನೇಕರು ಸಜ್ಜನರು ಬಾಳಿ ಹೋಗಿದ್ದಾರೆ. ದಾನ-ಧರ್ಮ ಮಾಡಿದ್ದಾರೆ, ಇವರಲ್ಲಿ ಕರ್ಣನೊಬ್ಬನನ್ನೇ ಘನನೆಂದು ಕರೆಯುವುದೇಕೆ ?

ದಾನ ಮಾಡುವ ಗುಣವು ಎಲ್ಲ ಗುಣಗಳಲ್ಲಿ ಶ್ರೇಷ್ಠವಾದದ್ದು, ಕರ್ಣ ದಾನಶೀಲ. ಆದರಿಂದ ಅವನ ಮೇಲ್ಮೆ ಹೆಚ್ಚು.

ಎರಡನೆಯದಾಗಿ, ಕರ್ಣನ ಬಳಿ ಅಪಾರ ಧನವಿತ್ತು. ಅತಿ ಹೆಚ್ಚು ಸಂಪತ್ತು ದಾನ ಮಾಡುವ ಶಕ್ತಿ ಮತ್ತು ಬುದ್ಧಿ ಉಳ್ಳವ ಕರ್ಣ. ಆದರಿಂದ ಅವನು ಉಳಿದೆಲ್ಲರಿಗಿಂತ ಶ್ರೇಷ್ಠನೆನಿಸಿದ.

೨೪೦

ಕಲಿಮಿಕಲುಗ ಸಕಲಕುಲಮುಲಕೆಕ್ಕುವ, ಕಲಿಮಿ ಭೋಗಭಾಗ್ಯಮುಲಕು ನೆಲವು
ಕಲಿಮಿ ಲೇನಿವಾನಿ ಕುಲಮೇಮಿಕುಲಮಯಾ, ವಿಶ್ವದಾಭಿರಾಮ ವಿನುರ ವೇಮ

ಹೇಮವಿರಲು ಸಕಲ ಕೋಮುಗಳಲಿ ಮಿಗಿಲು,
ಹೇಮ ಭೋಗ ಭಾಗ್ಯಕೆಲ್ಲ ನೆಲೆಯು,
ಹೇಮವಿಲ್ಲದವನ ಕೋಮು ಎಂಥ ಕೋಮು ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮೋಪದೇಶ ಹೊಂದಿದವರಾಗಲೀ, ಉಪನೀತರಾಗಲೀ, ದೀಕ್ಷೆ ಹೊಂದಿದವರಾಗಲೀ ಮೇಲು ಕುಲದವರೆನ್ನುವುದು ಊಹೆ. ಬ್ರಹ್ಮೋಪದೇಶದ ಹಕ್ಕು ಕೆಲವರಿಗೆ ಮೀಸಲಾಗಿ, ಅವರಿಗಾಗದ ಜನರಿಗೆ ಆ ಹಕ್ಕು ನಿರಾಕರಿಸಲ್ಪಟ್ಟಿತು. ಆದರೆ ಇದರಿಂದ ಸಾಮಾಜಿಕ ಮೇಲು ಕೀಳು ಕಲ್ಪನೆ ಬೆಳೆಯಲಿಲ್ಲ. ಏಕೆಂದರೆ, ತಮ್ಮ ಜ್ಞಾನ ಸಂವರ್ಧನೆಗೆ ತಾವು ಮಾಡುವ ಪ್ರಯತ್ನ ಬ್ರಹ್ಮೋಪದೇಶವಾಗಿದೆ. ಆದರೆ ಬ್ರಹ್ಮೋಪದೇಶ ಪಡೆಯಲು ಉಪನೀತರಾದವರು ಉಳಿದವರಿಗಿಂತ ಮೇಲು ಎನ್ನಬಯಸಿದರು. ಧರ್ಮ ಶಾಸ್ತ್ರಗಳು

ರಚಿಸಲ್ಪಟ್ಟವು. ಆಸ್ತಿಸಂಪಾದನೆಯ ಹಕ್ಕು ಉಪನೀತರಾಗುವ ಕುಲದವರಿಗೇ ಮೀಸಲು ಎಂದು ವಿಧಿಸಲಾಯಿತು. ಆಸ್ತಿ ಹೊಂದಿದ ಕುಲದವರ ಬರು-ಬರುತ್ತ ಮೇಲು ಕುಲವೆನ್ನಿಸಿದರು.

ಹೊನ್ನು ಇರುವವನ ಕುಲ ಎಲ್ಲ ಕುಲಗಳಿಗಿಂತ ಮೇಲಾಯಿತು. ಏಕೆಂದರೆ ಹೊನ್ನು ಎಲ್ಲ ಭೋಗ ಭಾಗ್ಯಗಳಿಗೂ ನೆಲೆಯಾಗಿತ್ತು. ಹೊನ್ನು ಇಲ್ಲದವನ ಕುಲವು ಕೀಳು ಕುಲವೆನಿಸಿತು.

೨೪೧

ತನಕುಬಂಧು ವನುಚು ದಾನೆತೋಡ್ಕೊನಿವಚ್ಚಿ, ಕಲಿಮಿಗಲಯಜೂಜಿ ಕಾಂಕ್ಷಬಡುಚು,
ದಕ್ಷಿಣಲನೊಸಂಗಿ ತನಯು ನೀಯಗಜೂಡು ವಿಶ್ವದಾಭಿರಾಮ ವಿನುರ ವೇಮ

ತನ್ನ ಬಂಧುವೆಂದು ಧನಿಕನ ಕರೆತಂದು,
ಧನದ ಮಹಿಮೆ ತೋರಿ ದಾಹವರಿತು,
ತನಯಳ ಸಿಂಗರಿಸಿ ದಕ್ಷಿಣೆಯೊಡನೀವ.
ವಿಶ್ವದಾಭಿರಾಮ ಕೇಳು ವೇಮ.

ಧನವುಳ್ಳವನನ್ನು ತಮ್ಮ ಬಂಧುವೆಂದು, ಸಂಬಂಧಿಯೆಂದು ಕರೆದುಕೊಂಡು ಬರುತ್ತಾರೆ. ಉಪಚರಿಸುತ್ತಾರೆ. ಧನದ ಮಹಿಮೆಯನ್ನು ಅವನೆದುರು ಪ್ರದರ್ಶಿಸುತ್ತಾರೆ. ಅನಂತರ ಧನಕ್ಕಾಗಿ ಅವನು ಪಡುವ ಆಶೆ ಆಕಾಂಕ್ಷೆಯನ್ನು ಗುರುತಿಸಿ, ತಮ್ಮ ಮಗಳನ್ನು ಸ್ವರ್ಣಾಭರಣಗಳಿಂದ ಅಲಂಕರಿಸಿ, ಮೇಲೆ ದಕ್ಷಿಣೆಯೆತ್ತು ಕಳಿಸುವರು.

ಲಗ್ನದಂಥ ಜೊತೆಬಾಳಿನ ವಿಷಯದಲ್ಲಿಯೂ ಸಹ, ಈರ್ವರ ಮನಸ್ಸಿನ ಒಲಿಮೆಗಿಂತ ಅವರ ಧನದ ಆಸೆಯ ಪೂರೈಕೆಯೇ ಹೆಚ್ಚಿನ ಪ್ರಾಧಾನ್ಯತೆ ಹೊಂದಿರುವುದು ಸೋಜಿಗಕರವಾಗಿದೆ.

೨೪೨

ತಲ್ಲಿಕೊಡುಕುಲಕುನು ದಗುವುನು ಬುಟ್ಟಂಚು,ಧನಮುಸುಖಮು ಗೂರ್ಪದನಿ ವಚಿಂತ್ರು,
ಕಾನಿಗಡನಲೇಕ ಗಡುಚುಟಯೆಟ್ಲುರಾ, ವಿಶ್ವದಾಭಿರಾಮ ವಿನುರ ವೇಮ.

ತಾಯಿ ತನಯರಲ್ಲಿ ತಂಟೆ ಹುಟ್ಟಿಸುವುದ
ಧನವು ಸೌಖ್ಯದೊಡನೆ ಇರದೆನುವರು.
ಕನಕ ಗಳಿಕೆಯುಳಿದು ಕಾಲ ಕಳೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ತಾಯಿ ಮಗ ಧನದ ಕಾರಣದಿಂದ ಬಡಿದಾಡುವರು, ಮನಸ್ತಾಪ ಹೊಂದುವರು; ಎನ್ನುತ್ತಾರೆ. ಧನದಮೇಲಿನ ವ್ಯಾಮೋಹದಿಂದ ತಾಯಿ ಮಗನ ಕೈಗೆ ಧನ ನೀಡಳು. ಮಗ ತಾಯಿಯ ಬಳಿ ಇರುವ ಹಣ ತನಗೆ ಮಾತ್ರ ದೊರೆಯುವುದೆಂದು ನಂಬಲಾರ. ಈ ರೀತಿಯ ಅವಿಶ್ವಾಸ ಭಾವನೆಯಿಂದ ತಾಯಿ-ಮಕ್ಕಳು ಪರಸ್ಪರ ಅಸೂಯೆ ಹೊಂದಿ, ಒಬ್ಬರೊಬ್ಬರ ಬಗ್ಗೆ ಕುಕಲ್ಪನೆಗಳನ್ನು ಮೂಡಿಸಿಕೊಳ್ಳುತ್ತಾರೆ. ಇದನ್ನೆಲ್ಲ ನೆನೆದು

ಧನವು ತಾಯಿ–ಮಕ್ಕಳಂಥ ಸಮೀಪ ರಕ್ತಸಂಬಂಧಿಗಳೂ ಸಹ ಪ್ರೇಮವಾತ್ಸಲ್ಯದಿಂದ ಇರದಂತೆ ಮಾಡುವುದು; ಕಾರಣ ಅದರ ಸಂಪರ್ಕ ಬೇಡ; ಸ್ಪರ್ಶವೂ ಬೇಡ ಎನ್ನುತ್ತಾರೆ. ಆದು ಇರುವಲ್ಲಿ ಸೌಖ್ಯ ಇರದು. ಸೌಖ್ಯ ದೊರೆಯಬೇಕಾದರೆ ಧನದ ಸಂಪರ್ಕ ಇರಕೂಡದು, ಎನ್ನುತ್ತಾರೆ.

ಆದರೆ, ವೇಳೆಗಳೆಯಬೇಕಾದರೆ, ಕೆಲಸ ಮಾಡಬೇಕು. ಯಾವ ಕೆಲಸ ಮಾಡಹತ್ತಿದರೂ ಧನಾರ್ಜನೆಯಾಗುತ್ತದೆ. ಅಂದ ಮೇಲೆ, ಧನ ಪಡೆಯದೆ ಇರುವುದೆಂತು?

ನಿಜವಾಗಿ ತಿಳಿದು ನೋಡಿದರೆ, ಧನದ ಬಗ್ಗೆ ಜನರು ತಾಳುವ ದುರಾಶೆ, ದುಃಖ ಕಾರಣವೇ ಹೊರತು, ಧನವಲ್ಲ; ಧನಸಂಪರ್ಕ ಕೆಡುಕಾದುದಲ್ಲ.

೨೪೩

ತರುಣಿ ಸುತುಲು ಧನಮು ಧಾನ್ಯಮುಲ್ ಸಂಪದ ಲಂತಚುಟ್ಟುಕೊನಿನ ನಂತಚೇಟು
ಪಿಸಿರಿಕಾಯಪುರುಗು ಪದ್ಧತಿ ಕಾನಂಗ, ವಿಶ್ವದಾಭಿರಾಮ ವಿನುರ ವೇಮ

ಸತಿಯು ಸುತರು ಧನವು ಧಾನ್ಯಾದಿ ಸಂಪದ,
ಸುತ್ತಿಕೊಂಡು ನುತ್ತೆ ಮುತ್ತುತಿರಲು,
ರೇಶ್ಮೆ ಹುಳುವಿನಂತೆ ಸ್ವೇಚ್ಛೆಯಿಂದ ಬದ್ಧ.
ವಿಶ್ವದಾಭಿರಾಮ ಕೇಳು ವೇಮ.

ಜನರು ಹೆಂಡಿರನ್ನು ಇಚ್ಛಿಸುತ್ತಾರೆ. ಅದು ತೀರ ಸಹಜ. ಮಕ್ಕಳನ್ನು ಪಡೆಯಬಯಸುತ್ತಾರೆ. ತಮ್ಮ ಕುಟುಂಬ ವೆಚ್ಚಕ್ಕಾಗಿ ಧನ ಪಡೆಯಲು ಪ್ರಯತ್ನಿಸುತ್ತಾರೆ. ಧಾನ್ಯ-ಸಂಪತ್ತು ಇತ್ಯಾದಿ ಪಡೆಯಲು ತವಕಬಡುತ್ತಾರೆ. ಹೀಗೆ; ಒಂದಕ್ಕಾತಿಸಿ, ಅದರ ಪಾಲನೆ-ಪೋಷಣೆಗೆ ಇನ್ನೊಂದು ಪಡೆಯಬಯಸುತ್ತಾರೆ. ಒಂದೊಂದಾಗಿ ಆಂಟಿಕೊಂಡು ಸುತ್ತುವರೆಯುತ್ತವೆ.

ಹೇಗೆಂದರೆ, ರೇಶ್ಮೆ ಹುಳು ಸ್ವಯಂಪ್ರೇರಣೆಯಿಂದ ತನ್ನ ಸುತ್ತು ರೇಶ್ಮೆ ಎಳೆಯನ್ನು ಹೆಣೆಯುತ್ತದೆ. ರೇಶ್ಮೆಯ ಗೂಡು ತಯ್ಯಾರಾಗುತ್ತದೆ. ರೇಶ್ಮೆಯ ಹುಳು ಒಳಗೆ ಸತ್ತು ಹೋಗುತ್ತದೆ.

ಜನರು ಸಂಸಾರ ಪಾಶದಲ್ಲಿ ಸಿಲುಕುವುದೂ, ರೇಶ್ಮೆಯ ಹುಳದ ವರ್ತನೆಯಂತೆ. ಪರಿಣಾಮವೂ ಅದೇ ರೀತಿ.

೨೪೪

ಪಾಲಸಾಗರಮುನ ಬವ್ಮಳಿಂಚಿನ ಹರಿ ಗೊಲ್ಲಪಲ್ಲೆ ಬಾಲುಗೋರ ನಗುನೆ ?
ಎದುಟವಾರಿದ್ರವ್ಯ ಮೆಲ್ಲವಾರಿಕಿಂದೀಪೆ. ವಿಶ್ವದಾಭಿರಾಮ ವಿನುರ ವೇಮ

ಹಾಲು ಸಾಗರದೊಳು ಹಾಯಾಗಿರುವ ಹರಿ
ಗೊಲ್ಲ ಕರೆದ ಹಾಲು ಕೋರುತಿಹನು.
ಎಲ್ಲರು ಪರಧನಕೆ ಕರವನೊಡ್ಡುತಿಹರು
ವಿಶ್ವದಾಭಿರಾಮ ಕೇಳು ವೇಮ.

ಶ್ರೀ ಹರಿಯು ಕ್ಷೀರಸಾಗರದಲ್ಲಿ ಶೇಷಶಯನನಾಗಿ ಕ್ರೀಡಾಲೋಲನಾಗಿರುವನೆಂದು ಪುರಾಣದ ಬಣ್ಣನೆ. ಶ್ರೀ ಕೃಷ್ಣನೇ ಶೀ ಹರಿಯು. ಶ್ರೀ ಕೃಷ್ಣನಾದರೊ ಗೊಲ್ಲರು ಹಿಂಡಿದ ಆಕಳ ಹಾಲನ್ನು ಇಚ್ಛಿಸುವನೆಂದೂ ಪುರಾಣದ ಬಣ್ಣನೆ.

ತಮ್ಮಲ್ಲಿ ಏನೂ ಇಲ್ಲದವರೂ ಪರಧನ ಆಶಿಸುವರು. ತಮ್ಮಲ್ಲಿ ಸಾಕಷ್ಟು ಧನ ವಿದ್ದರೂ, ಆಶೆಯ ಸ್ವಭಾವದವರು ಪರಧನ ಆಶಿಸುತ್ತಾರೆ. ದೇವರ ಮೂರ್ತಿಮಂತ ರೂಪನಾದ ಶ್ರೀ ಹರಿಯು ಕ್ಷೀರಸಾಗರವಾಸಿಯೆಂದು ಗ್ರಹಿಸಿದ್ದರೂ ಸಹ, ಅವನು ಗೊಲ್ಲ ಸ್ತ್ರೀಯರು ಹಿಂಡಿದ ಆಕಳ ಹಾಲಿಗಾಗಿ ಆಸೆ ಬಡುತ್ತಿದ್ದನೆಂದು ಚಿತ್ರಿಸಲಾಗಿದೆ.

ದೈವಸ್ವರೂಪರಿರಲಿ, ಯಾರೇ ಆಗಲಿ ಎಲ್ಲರೂ ಪರಧನಕ್ಕೆ ಆಶೆ ಪಡದಿರಬೇಕಾದರೆ, ಎಷ್ಟೊಂದು ಉನ್ನತ ಮಟ್ಟ ಮುಟ್ಟಬೇಕೆಂಬುದನ್ನು ಊಹಿಸಬಹುದು.

೨೪೫

ಪುತ್ತಡಿಕಲವಾನಿ ಪುಂಡುಬಾಧಯಗೂಡ, ವಸುಧಲೋನಜಾಲ ವಾರ್ತಲಿಕ್ಕು,
ಪೇದವಾನಿಯಿಂಟ ಬೆಂಡ್ಲೈನ ನೆರುಗರು ವಿಶ್ವದಾಭಿರಾಮ ವಿನುರ ವೇಮ

ದುಡ್ಡು ಉಳ್ಳ ನರನ ಗಿಡ್ಡ ಹುಣ್ಣು ಕೂಡ
ಪೊಡವಿಯೊಳಗೆ ದೊಡ್ಡ ಸುದ್ದಿಯಹುದು.
ಬಡವನ ಮನೆ ಮದುವೆ ಕುರಿತು ಕೇಳರಾರು ?
ವಿಶ್ವದಾಭಿರಾಮ ಕೇಳು ವೇಮ.

ದುಡ್ಡು ಉಳ್ಳವರಿಗೆ ಮನ್ನಣೆಯುಂಟು. ದುಡ್ಡು ಉಳ್ಳ ಜನರ ಬಗ್ಗೆ ಜನರ ಆಸಕ್ತಿಯುಂಟು. ಅಂಥ ಜನರ ಬಗೆಗೆ ಇರುವ ಸಣ್ಣಪುಟ್ಟ ಘಟನೆಗಳು ಸಹ ಸಮಸ್ತರ ಬಾಯಲ್ಲಿ ಉಳಿದಿರುತ್ತವೆ. ಧನಿಕನಿಗೆ ಸಣ್ಣ ಹುಣ್ಣು ಆದರೂ ಲೋಕದಲ್ಲಿ ಅದೊಂದು ಸುದ್ದಿ ಎನ್ನಿಸುವುದು. ಆದರೆ ಬಡವನ ಬಗ್ಗೆ ಆಸಕ್ತಿ ಕಡಿಮೆ. ಬಡತನಕ್ಕೆ ಜನರು ಹೇಸುತ್ತಾರೆ. ಬಡವನ ಕುರಿತು ಚಿಂತಿಸುವುದಿಲ್ಲ. ಬಡವನ ಕಾರ್ಯಗಳನ್ನು ಕುರಿತು ಆಸಕ್ತಿ ಇರುವುದಿಲ್ಲ. ಬಡವನ ಮನೆಯಲ್ಲಿ ಮದುವೆಯಾದರೂ ಅದರ ಗೊಡವೆ ಹಚ್ಚಿಕೊಳ್ಳುವುದಿಲ್ಲ, ಲೋಕದ ಜನರು.

ಧನವು ಇರದಿರುವುದರ–ಇರುವುದರ ಪರಿಣಾಮವನ್ನು,ಬಡವನ ಮದುವೆ ಸುದ್ದಿಯಾಗದಿರುವುದೂ ಶ್ರೀಮಂತನ ಸಣ್ಣ ಹುಣ್ಣು ಎಲ್ಲೆಡೆ ಸುದ್ದಿಯೆನಿಸುವುದೂ ಸೂಚಿಸುತ್ತವೆ. ಜನರು, ಹೆಚ್ಚು ಲಕ್ಷ್ಯ ನೀಡಬೇಕಾದ ಸಂಗತಿಗಳನ್ನು ಗುಣದ ಮಾನದಿಂದ ಅಳೆಯದೆ, ಧನದ ಮಾನದಂಡದಿಂದ ಅಳೆಯುತ್ತಾರೆ.

೨೪೬

ಗಂಡಿಕೋಟಲೋನ ಗತ್ತಿಪಟ್ಟನಯಂತ, ರಾಜುಗಾರಿ ದೊಡ್ಡ ರೌತುಕಾಡು
ಎಂತವಾರಿನ್ನೈನ ನೆತ್ತಿನಗೊಟ್ಟುನಾ ? ವಿಶ್ವದಾಭಿರಾಮ ವಿನುರ ವೇಮ.

ಗಂಡಿಕೋಟೆಯೊಳಗೆ ಕತ್ತಿ ಝಳುಪಿಸಲವ,
ರಾಜದಳಕಧಿಪತಿ ಎನಿಸಲೆಂತು?
ಎದುರು ನಿಂತು ರಣದಿ ವೈರಿಯಿರಿಯಬೇಕು
ವಿಶ್ವದಾಭಿರಾಮ ಕೇಳು ವೇಮ

(ಧನ ಕನಕಗಳುಳ್ಳ ಜನರನ್ನೇ ರಾಜ್ಯದ ಉಚ್ಚ ಹುದ್ದೆಗೆ ನೇಮಿಸುವುದೂ ಉಂಟು. ಸಕಲ ಭಾಗ್ಯ ಸಂಪದವಿರುವ ರಾಜವಂಶೀಯರನ್ನು ರಾಜ್ಯದ ಸೇನೆಗೆ ಸೇನಾಧಿಪತಿಯೆಂದು ನೇಮಿಸುತ್ತಾನೆ. ಆದರೆ ಸೇನಾಧಿಪತಿಯ ಹುದ್ದೆಗೆ ನೇಮಕಗೊಳ್ಳುವವರಿಗೆ ಶೌರ್ಯ ಧೈರ್ಯಗಳು ಬೇಕು; ಸಾಹಸ ಗುಣ ಬೇಕು. ರಣರಂಗದಲ್ಲಿ ವೈರಿಗಳೊಂದಿಗೆ ಹೋರಾಡುವ ಪ್ರಸಂಗವನ್ನು ಧೈರ್ಯವಾಗಿ ಎದುರಿಸುವವನಿರಬೇಕು.)

ಗಂಡಿಕೋಟೆ (ಕೊಂಡವೀಡು ರಾಜ್ಯದ ಒಂದು ಪ್ರಮುಖ ಪಟ್ಟಣ.) ಯಲ್ಲಿಯೇ ನಿಂತು, ಕತ್ತಿಯನ್ನು ಹೊರತೆಗೆದು ಝಳಪಿಸುವವನು ಶೂರನೆಂತು? ಅವನು ರಾಜ್ಯಕ್ಕೆ ಸೇನಾಧಿಪತಿ ಎನಿಸುವುದು ಹೇಗೆ? ಸೇನಾಧಿಪತಿಯಾದವನು, ಯುದ್ಧ ಭೂಮಿಯಲ್ಲಿ ವೈರಿಯನ್ನು ಎದುರಿಸಬೇಕಷ್ಟೇ.

ಆಯಾ ಸೇವಾರಂಗದಲ್ಲಿ ಉಚ್ಚ ಹುದ್ದೇಗೇರುವವರಿಗೆ ತಕ್ಕ ಅರ್ಹತೆ ಬೇಕು. ಧನದ ಮಹಿಮೆಯ ಮುಸುಕು ಅರ್ಹತೆಯನ್ನು ಮುಚ್ಚಬಾರದು.

೨೪೭

ಪೆಟ್ಟಿಡಪತಿವಂಟ ಪೆಟ್ಟನಿಲೋಭುನ್ನು, ದಿಟ್ಟ ತಿಟ್ಟ ತಿರುಗ ಗೋಟ್ಟು ಚುಂಡು
ಪಂಡ್ಲಚೆಟ್ಟುಕ್ರಿಂದ ಮುಂಡ್ಲಕಂಪಲುವೊಲೆ, ವಿಶ್ವದಾಭಿರಾಮ ವಿನುರ ವೇಮ.

ಕೊಡುವ ಒಡೆಯನೊಡನೆ ಕೊಡದ ಲೋಭಿಯಿರಲು,
ಬೈದು ಬೈದು ಬಡಿದಾಚೆ ತಳ್ಳುವ.
ಮುರದ ಹಣ್ಣು; ಅಡಿಯ ಮುಳ್ಳುಕೊಂಪೆಯಂತೆ.
ವಿಶ್ವದಾಭಿರಾಮ ಕೇಳು ವೇಮ

ಒಳ್ಳೆಯ ಜನರ ಆಶ್ರಯದಲ್ಲಿ ಕೆಟ್ಟ ಜನರು ಸೇರಿರುತ್ತಾರೆ. ಇಲ್ಲದವರಿಗೆ ನೀಡಿ ಅವರೆ ಹರುಷದಲ್ಲಿ ಪಾಲುಗೊಳ್ಳುವ ಸಹೃದಯಿ ಒಡಿಯನಿರುತ್ತಾನೆ. ಆದರೆ ಬಹಳ ಸಲ, ಇಂಥ ಉದಾರ ಗುಣವಂತರ ಆಶ್ರಯದಲ್ಲಿ ಧನಪಡೆದು, ಬಡವರು ಸುಖಿಸುವುದನ್ನು ಕಂಡು ಸಂತೋಷಿಸದ ಕ್ರೂರ ಹೃದಯಿಗಳು ಸೇರಿರುತ್ತಾರೆ. ಅವರು ಕೇಳಬಂದವರನ್ನು ನಿಂದಿಸುತ್ತಾರೆ. ಬಡಿದು ಆಚೆಗೆ ತಳ್ಳುತ್ತಾರೆ,

ಹಣ್ಣಿನ ಮರ ಎಲ್ಲರನ್ನೂ ಕೈಬೀಸಿ ಕರೆಯುವಂತಿರುವುದು. ಆದರೆ ಅದರ ಅಡಿಗೆ ಹೋಗಿ ನೋಡಿದರೆ, ಮುಳ್ಳುಕೊಂಪೆ ತುಂಬಿರುತ್ತವೆ. ಗಿಡವನ್ನು ಮುಟ್ಟಿ ಹಣ್ಣು ಹರಿದು ಕೊಂಡೇವೆಂದರೆ, ಮುಳ್ಳುಕೊಂಪೆ ಚುಚ್ಚುತ್ತವೆ.

ಹಣ್ಣಿನ ಗಿಡವು ಕೊಡುವ ಒಡಯನಂತೆ. ದಾತನಾಶ್ರಯದಲ್ಲಿರುವ ಲೋಭಿಗಳು, ಮುಳ್ಳುಕೊಂಪೆಗಳಂತೆ.

೨೪೮

ಲಕ್ಷ್ಮಿಯೇಲಿನಟ್ಟ ಲಂಕಾಧಿಪಪುರಿ, ಪಿಲ್ಲಕೋತಿಪಾಜು ಕೊಲ್ಲಗೊಟ್ಟಿ,
ಕಲಿಸಿವಚ್ಚುವೇಳ ಘನುಲೌದು ರಲ್ಪುಲು, ವಿಶ್ವದಾಭಿರಾಮ ವಿನುರ ವೇಮ.

ಲಕ್ಷ್ಮಿ ನಲಿಯುತಿಪ್ಪ ಲಂಕಾಧಿಪನಪುರ,
ಕುಳ್ಳ ಕೋತಿ ಸೇನೆ ಕೊಳ್ಳಿಗೀಡು.
ಸಿರಿಯು ಬಪ್ಪ ಕಾಲ ಕಿರಿಯ ಘನನಪ್ಪನು
ವಿಶ್ವದಾಭಿರಾಮ ಕೇಳು ವೇಮ

ಲೋಕ ಕಲ್ಪನೆಯಲ್ಲಿ ಕುಬೇರನ ಭಾಂಡಾರವೆಂದರೆ, ಅತಿ ಹೆಚ್ಚಿನ ಸಂಪತ್ತು. ಆ ಸಂಪತ್ತನ್ನು ಮೀರಿದ ಸಂಪದ, ಲಂಕಾ ರಾಜ್ಯದಲ್ಲಿ ಇತ್ತು; ಎಂದು ಪೌರಾಣಿಕ ಕತೆ ತಿಳಿಸುತ್ತವೆ. ಸಂಪದವೇ ಸಿರಿ, ಶ್ರೀ ಲಕ್ಷ್ಮಿ. ಲಂಕಾರಾಜ್ಯದಲ್ಲಿ ಲಕ್ಷ್ಮಿ ನಲಿಯುತ್ತಿದ್ದ ಕಾಲ. ಲಂಕಾಧಿಪತಿ ರಾವಣನ ರಾಜಧಾನಿ ಲಂಕೆಯನ್ನು, ಚಿಕ್ಕ ಚಿಕ್ಕ ಮಂಗಗಳ ಸೇನಾಸಮೂಹ ಮುತ್ತಿತು. ಕೋತಿ ಸೇನೆ ಲಂಕೆಗೆ ಕೊಳ್ಳಿ ಇಟ್ಟಿತು. ಲಂಕೆಯ ಸಿರಿ–ಸಂಪದಗಳು ಕೋತಿಗಳ ವಶವಾಯಿತು. ಕೋತಿಗಳು ನಿಮಿತ್ತ ಮಾತ್ರವಾದವಷ್ಟೇ. ಅವುಗಳಿಗೆ ಸಂಪತ್ತು ದೊರೆಯುವಂತೆ ವಿಧಿಯ ನಿಶ್ಚಯವಿತ್ತು. ಅದರಿಂದ, ಕೋತಿಗಳೇ ಬಹು ಶ್ರೇಷ್ಠ ಪ್ರಾಣಿ ಎನಿಸಿದವು. ಕಾಲಮಹಿಮೆಯಷ್ಟೇ.

ರಾವಣನಿಗೆ ನೀಚ ಬುದ್ಧಿ ಉದಿಸಿದುದನ್ನೂ ಕೋತಿಗಳಂಥ ಕ್ಷುದ್ರ ಪ್ರಾಣಿಗಳಿಗೆ ಘನತೆ ಶೌರ್ಯ ಆರೋಪಿತವಾದುದನ್ನೂ ನೋಡಿದರೆ, ವಿಧಿಯ ಕೈವಾಡವಿರುವುದಕ್ಕೆ ಉತ್ತಮ ದೃಷ್ಟಾಂತವಾಗಿ ಲಂಕೆಯ ಆಕ್ರಮಣ ಕತೆ ಹೆಣೆಯಲ್ಪಟ್ಟಿದೆ.

೨೪೯

ಪತಕಮಂದುನೊಪ್ಪ ಬಲುರತ್ನಮುಲಪೆಂಪು, ಒಂಗರಂದುಗೂರ್ಪ ಬರುವುಗನುನು,
ಕಾನಿ ಯಿತರಲೋಹಮೈನ ಹೀನಮೆಕದಾ? ವಿಶ್ವದಾಭಿರಾಮ ವಿನುರ ವೇಮ.

ಪದಕದಲ್ಲಿ ಒಪ್ಪುತಿಪ್ಪ ರತ್ನ ಕೆಂಪು
ಕನಕಸೇರೆ, ಮಿಗಿಲು ಕಾಂತಿಯಿಹುದು.
ಬೇರೆಲೋಹದೊಡನೆ ಬೆರೆಯೆ ಹೀನವಯ್ಯ
ವಿಶ್ವದಾಭಿರಾಮ ಕೇಳು ವೇಮ

ಜನರು ತಮಗೆ ತಕ್ಕ ಸ್ಥಾನಮಾನಗಳನ್ನೇ ಬಯಸಬೇಕು. ಅದು ಅವರಿಗೆ ಶೋಭೆಕರ. ಇದಲ್ಲದೆ ಒಳ್ಳೆಯ ಜನರ ಸಂಗದಲ್ಲಿದ್ದರೆ, ಅವರಿಗೆ ಇನ್ನೂ ಹೆಚ್ಚು ಒಪ್ಪ.

ಪದಕದಲ್ಲಿ ಕೆಂಪುರತ್ನ ಒಪ್ಪುತ್ತದೆ. ಇನ್ನು ಬಂಗಾರವು ಆ ಕೆಂಪುರತ್ನಕ್ಕೆ ಸೇರಿಕೊಂಡರಂತೂ ಅದರ ಶೋಭೆ ಇನ್ನೂ ಹೆಚ್ಚುತ್ತದೆ. ಆದರೆ ಬೇರೆ ಲೋಹಗಳು ಕೆಂಪುರತ್ನಕ್ಕೆ ಹೊಂದಿಕೆಯಾಗವು. ಅವುಗಳೊಂದಿಗೆ ಕೂಡಿದರೆ, ಕೆಂಪುರತ್ನವೇ ಹೀನಾಯವಾಗಿ ತೋರುವುದು.

ದಳಮುಕೊನಿಯೊಕಪ್ಪು ದಾರಿದ್ರ್ಯಮೇರ್ಪಡ. ಹೀನ ಕಾರ್ಯಮುಲು ಸಹಿಂಚಿಚೇಯು
ಬರುವು ಮಾಯುನಂತೆ ಫಲಮಿಂತಚಿಕ್ಕದು, ವಿಶ್ವದಾಭಿರಾಮ ವಿನುರ ವೇಮ.

ಒಟ್ಟುಗೂಡಿ ಕಷ್ಟವೊಮ್ಮೆ ಬಂದರಾಗ,
ಹೀನ ಕೆಲಸದಲ್ಲಿ ಸಹಕರಿಸುವ.
ಇರುವ ಘನತೆ ಹಾಳು; ಬರುವ ಫಲವು ಚೂರು.
ವಿಶ್ವದಾಭಿರಾಮ ಕೇಳು ವೇಮ

ಮನುಷ್ಯ ಕೆಡದಂತಿರಲು ಸಾಕಷ್ಟು ಪ್ರಯತ್ನಪಡುತ್ತಾನೆ. ಆದರೆ ಕೆಲವೊಮ್ಮೆ ಸಹನೆ ಕಳೆದುಕೊಳ್ಳುವ ಸಂಭವವುಂಟು. ಆಗ ಹಾದಿ ತಪ್ಪುತ್ತಾನೆ.

ಅನೇಕ ಕಷ್ಟಗಳು ಕೂಡಿ ಬಂದಾಗ, ಜನರು ತಾಳ್ಮೆಗೆಟ್ಟು, ವಿವೇಕ ಕಳೆದು ಕೊಳ್ಳುತ್ತಾರೆ. ವಿವೇಕ ವಿಹೀನ ಮನುಷ್ಯ ಹೀನ ಕಾರ್ಯದಲ್ಲಿ ಸಹಕರಿಸುತ್ತಾನೆ.

ಈ ತೆರನಾದ ತಪ್ಪು ನಡೆವಳಿಯಿಂದ ಅವನಿಗಿರುವ ಘನತೆಯೂ ಹಾಳು; ತಪ್ಪು ಹಾದಿ ಹಿಡಿದರೂ ಸಹ, ಬರುವ ಫಲವು ತೀರ ಅಲ್ಪ.

ಎಂಥ ಕಷ್ಟ ಬಂದರೂ, ಕೆಟ್ಟ ಹಾದಿ ತುಳಿಯಬಾರದು.

ಋಣಮುಬೆಂಚಿ ಸುತುನಿಹೀನುಗಾನೊನರಿಂಚಿ, ವಿಡುಚುತಂಡ್ರಿ ವೈರಿವೀರುಡರಯ,
ನಲವಿಕಾನಿಯಟ್ಟ ಯಾಲುನುನಟ್ಟುಲೀ, ವಿಶ್ವದಾಭಿರಾಮ ವಿನುರ ವೇಮ

ಸಾಲಗೈದು ಮತ್ತೆ ಸುತನ ಹೀನಗೊಳಿಸಿ,
ಲೋಲು ಹೊಡೆವ ತಂದೆ,ದೊಡ್ಡ ವೈರಿ.
ಅಂತೆ ಇಪ್ಪಳಯ್ಯ ಅಂಕೆ ತಪ್ಪಿದ ಸತಿ
ವಿಶ್ವದಾಭಿರಾಮ ಕೇಳು ವೇಮ

(ಅಲ್ಲಿ ಇಲ್ಲಿ ಚಲಿಸದಿದ್ದರೂ ಇದ್ದಲ್ಲಿಯೇ ಆಹಾರ ಪಡೆಯುತ್ತವೆ, ಜಲ–ಜಂತುಗಳು. ದುಡಿಯದೆ, ಕುದಿಸದೆ, ಅಡುಗೆ ಮಾಡದೆ, ಹೊಟ್ಟೆ ಹೊರೆಯುತ್ತವೆ, ಪಶು–ಪಕ್ಷಿಗಳು. ಮನುಷ್ಯ ಇವೆಲ್ಲವುಗಳಿಗಿಂತ ಆಧುನಿಕ ಆವಿಷ್ಕಾರ ಹೊಂದಿದ ಜೀವಿ. ದುಡಿದು ತಿನ್ನುವುದು ಕರ್ತವ್ಯವೆಂದು ವಿಧಿಸಲಾಗಿದೆ. ದುಡಿಯದೆ ತಿನ್ನುವುದು ಹೇಯ ಕೆಲಸ. ಪಡೆದದ್ದನ್ನು ಉಪಭೋಗಿಸುವುದು, ಮಧ್ಯಮ ಮಾರ್ಗ. ಇನ್ನು ದುಡಿಯದೆ, ಪಡೆಯದೆ ಸಾಲ ತಂದು, ಅದರ ಪರಿಣಾಮವಾಗಿ ಮಕ್ಕಳನ್ನು ಹೀನರನ್ನಾಗಿಸಿ, ಹಾಯಾಗಿ ಇರುವ ತಂದೆಯು ನಿಜವಾಗಿಯೂ ವೈರಿಯಂತೆ. ಏಕೆಂದರೆ, ತನ್ನ ಸುಖಕ್ಕಾಗಿ ಪರಹಿತವನ್ನು ಬಲಿಗೊಡುವವನೇ ವೈರಿ. ತನ್ನ ಹಿತಕ್ಕಾಗಿ ಸಾಲ ಮಾಡುವ ತಂದೆ ಮಗನ ವೈರಿಯಿದ್ದಂತೆ.

ಪತಿಯ ನಿಯಂತ್ರಣವಿಲ್ಲದ ಪತ್ನಿ ಸಹ, ತನ್ನ ಹಿತಕ್ಕಾಗಿ ತನ್ನ ಪತಿಯ ಹಿತವನ್ನೂ ಮಾನ-ಮರ್ಯಾದೆಗಳನ್ನೂ ಬಲಿಗೊಡುವಳಾದ್ದರಿಂದ ಅವಳೂ ವೈರಿಯಿದ್ದಂತೆ.

ಸಾಲಮಾಡುವುದು ಎಂದೂ ಯೋಗ್ಯವಲ್ಲ.

ಈಗ ತೇನೆರುಚಿಕಿ ನಿಂಪುಗಾಜಚ್ಚುನು, ಓಗುಕಾಮುರುಚಿಕಿ ನೊದಿಗಿಚಚ್ಚು
ತ್ಯಾಗಿಕಾನಿವಾನಿ ಧರ್ಮಮಡುಗಜಚ್ಚು, ವಿಶ್ವದಾಭಿರಾಮ ವಿನುರ ವೇಮ

ನೊಣಕೆ ಜೇನು ರುಚಿಯ ಇಂಪು ಸವಿಯೆ ಮರಣ
ಕೇಡಿ ನರಗೆ ಕಾಮ ಸುಖವೆ ಮರಣ
ತ್ಯಾಗ ಹೀನ ನರಗೆ ದಾನ ಕೇಳಿ ಮರಣ
ವಿಶ್ವದಾಭಿರಾಮ ಕೇಳು ವೇಮ

ಪ್ರಾಣವು ಹೊರ ಹೋಗಿ, ಇಂದ್ರಿಯ ಚಲನೆ ನಿಂತುಹೋಗುವುದೇ ಮರಣ.

ದಾನ ಕೇಳಿದೊಡನೆ, ಕೊಡುವ ಮನವಿಲ್ಲದ ಮನುಷ್ಯ ಸ್ತಂಭೀಭೂತನಾಗುತ್ತಾನೆ. ಅವನು ಮಾತನಾಡದೆ, ಮೂಕನಂತಾಗುವನು. ಕೇಳಲಿಚ್ಚಿಸದೆ, ಕಿವುಡನಂತಾಗುವನು. ವಿಚಾರಿಸಲಿಚ್ಚಿಸದೆ, ಬುದ್ಧಿಹೀನನಾಗುವನು. ಅಂದರೆ ಶವದಂತಾಗುವನು. ದಾನ ಕೇಳಿದೊಡನೆ ಅವನ ಮರಣವಾದಂತೆ.

ಹೇಗೆಂದರೆ, ಜೇನು ನೊಣವು ಜೇನು ಸೇವಿಸಿ ರುಚಿಯರಿಯಲಾರದು. ಅಪರ ಇಂಪು–ಕಂಪಿನಿಂದ ಅದು ಸ್ತಂಭಿತವಾಗಿ ಸತ್ತು ಹೋಗುವುದು.

ಕೇಡಿ ಮನುಷ್ಯನು ಸ್ತ್ರೀ ವಾತ್ಸಲ್ಯ ಪ್ರೇಮಗಳನ್ನು ಅನುಭವಿಸಿ, ಸುಖಿಸಲಾರನು ಕೇವಲ ರತಿ ಕ್ರೀಡೆ ಕಾಮ ಸುಖದಲ್ಲಿಯೇ ಉದ್ರೇಕಿತನಾಗಿ ನಿಶ್ಚೇಷ್ಟಿತನಾಗುತ್ತಾನೆ ಅದರಲ್ಲಿಯೇ ಅವನು ಸತ್ತಂತೆ.

ಒಳ್ಳೆಯದರಲ್ಲಿ ಜನರು ಸುಖ ಕಾಣರು; ಜೇನು ನೊಣ ಮಧು ಸೇವಿಸದು; ಪುರುಷ ಸ್ತ್ರೀ-ವಾತ್ಸಲ್ಯ ಬಯಸುವದಿಲ್ಲ. ಜನರು ತ್ಯಾಗಿಗಳಾಗಿ, ದಾನ ನೀಡಿ, ಹರುಷದಲ್ಲಿ ಭಾಗಿಗಳಾಗುವದಿಲ್ಲ.

ಸ್ನಾನಸಂಧ್ಯಜಪಮು ಜರಿಯಿಂಚು ಭುಜಿಯಿಂಚು ನಿಷ್ಠಲೆನ್ನಿಯ್ಯೆನ ವೆರಪುಗಾನಿ,
ಒಕನಿಕೀಯ ಡೆಪುಡು ಸುಕೃತಂಬು ನೆರಿಗಿಯು ವಿಶ್ವದಾಭಿರಾಮ ವಿನುರ ವೇಮ

ಸ್ನಾನಸಂಧ್ಯೆ ಜಪವು ತಪಾಹಾರ ನಿಷ್ಠೆ
ಏನೆನಿತೊ ಬೋಧಿಸಲಾಚರಿಪ
ದಾನವೀಯೆ ಕಾಸು ಪುಣ್ಯಫಲವಿರಲುಂ
ವಿಶ್ವದಾಭಿರಾಮ ಕೇಳು ವೇಮ

ದಾನ ನೀಡಿದರೆ, ಇಲ್ಲದವರು ಸಂತೋಷಪಡುತ್ತಾರೆ. ಅವರ ಸಂತೋಷದಲ್ಲಿ ದಾನ ನೀಡುವವರೂ ಪಾಲುಗೊಳ್ಳುತ್ತಾರೆ. ಸಂತೋಷವರ್ಧನೆ ಪುಣ್ಯ ಕಾರ್ಯ. ಅದರಿಂದ ಒಳ್ಳೆಯ ಫಲವುಂಟು. ಆದರೆ ಜನರು ಇದನ್ನರಿತಿದ್ದರೂ, ದಾನ ನೀಡುವುದಿಲ್ಲ.

ಇದನ್ನುಳಿದು, ಬಾಹ್ಯಾಚಾರದ ಸ್ನಾನ, ಸಂಧ್ಯಾ ಪೂಜೆ, ಗಾಯತ್ರಿ ಮಂತ್ರ ಪಠಣ, ನಾಮಸ್ಮರಣ, ಮಾಡುವುದಾಗಲಿ, ಇಲ್ಲವೆ ಮನಸ್ಸು ಇಂದ್ರಿಯ ಮಾರ್ಗದಲ್ಲಿ ಹೋಗ

ದಂತೆ ನಿಲ್ಲಿಸುವುದಕ್ಕಾಗಿ ಆಹಾರವನ್ನು ಕಡಿಮೆ ಮಾಡುವ, ತಪ ಇತ್ಯಾದಿ ಆಚರಿಸಲು ಹೇಳಿದರೂ ಒಪ್ಪುತ್ತಾರೆ. ಆದರೆ, ಸತತ ಹರುಷ ಸಿಗುವ ದಾನಧರ್ಮಾದಿ ಪುಣ್ಯಕಾರ್ಯ ಮಾಡಲೊಲ್ಲರು.

೨೫೪

ಸ್ನಾನಮೊನರಜೇಸಿ ಸದ್ಧರ್ಮಮೀಯಕ, ನೀಳ್ಗಮುನುಗನಗುನೆ? ನೇರ್ಪುಲೇಕ
ನೀರುಕೋಡಿ ನೀಳ್ಕನೆಲುವುಗಾ ಮುನುಗದಾ? ವಿಶ್ವದಾಭಿರಾಮ ವಿನುರ ವೇಮ

ಶುಭ್ರ ಸ್ನಾನಗೈದು ದಾನವೀಯದನಕ,
ನೀರು ಮುಳುಗೆ ಬಂದ ಭಾಗ್ಯವೇನು ?
ನೀರುಗೋಳಿ ನೀರಿನೊಳಗೆ ಮುಳುಗದೇನು?
ವಿಶ್ವದಾಭಿರಾಮ ಕೇಳು ವೇಮ

ಪವಿತ್ರತೆಯ ಭಾವನೆ ಉದಿಸಿದಾಗ, ಪರರ ಸಂತೋಷವೇ ತನ್ನ ಸಂತೋಷ; ಇದು ಮೇಲಲ್ಲ; ಅದು ಕೀಳಲ್ಲ; ಎಂಬ ಸರ್ವಸಮತಾಭಾವ ಬೇರೂರುವುದು. ಇಲ್ಲದವಂಗೆ ಸಹಾಯ ನೀಡಬೇಕೆನಿಸುವುದು. ದಾನವೀಯಬೇಕೆನಿಸುವುದು.

ದಾನ ನೀಡದೆ ಬರಿ ಸ್ನಾನ ಮಾಡಿ ಮೈಯ ಕೊಳೆ ತೊಳೆಯಲು ನೀರಲ್ಲಿ ಮುಳುಗಿದಡೆ, ತ್ವಚೆ ಸ್ವಚ್ಛವಾದಂತೆ ಮಾತ್ರ. ಅದರಿಂದ ಮನಸ್ಸಿನ ಕೊಳೆ ಹೋದಂತಾಗಲಿಲ್ಲ. ಮನಸ್ಸಿನ ಕೊಳೆ ನಿರ್ಮೂಲನೆಗೆ ದಾನವೀಯುವ ಬುದ್ಧಿ ಹುಟ್ಟಬೇಕು.

ಮನದ ಕೊಳೆ ತೊಳೆಯದೆ ಮೈ ಕೊಳ ತೊಳೆಯುವವರು ಕಪಟ ತಪಸ್ವಿಗಳು ಇವರ ಉದ್ದೇಶ ಪಾಪ. ತಮ್ಮ ಪಾಪ ತೊಳೆಯುವುದಲ್ಲ; ಆದರೆ ತೋರಿಕೆಯ ನಟನೆಗಳಿಂದ ಜನರನ್ನು ಮರುಳು ಮಾಡುವುದು.

ನೀರುಗೋಳಿ ನೀರಿನಲ್ಲಿ ಮುಳುಗುತ್ತದೆ. ಅದರ ಉದ್ದೇಶವಾದರೋ, ಜಲ-ಜಂತುಗಳನ್ನು ಹಿಡಿಯುವುದು. ನೀರು ಮುಳುಗಿದರೆ ಪವಿತ್ರವಾಗುವುದಿಲ್ಲವೆಂಬುದಕ್ಕೆ ನೀರುಗೋಳಿಯ ಜೀವನಚರ್ಯೆ ಉತ್ತಮ ದೃಷ್ಟಾಂತವಾಗಿದೆ.

೨೫೫

ಸತ್ಯಪರುಲತೋಡ ಸರಸಮಾಡಗರಾದು, ಪೇದಹಾರಿ ತೋಡ ಬೆನಗರಾದು,
ಕಲಿಮಿಕಲುಗುವಾರಿ ಗಲಿಯನೇ ರಾದಯಾ. ವಿಶ್ವದಾಭಿರಾಮ ವಿನುರ ವೇಮ

ಸತ್ಯಪರರ ಸಂಗದಲ್ಲಿ ಸರಸ ಹೊಲ್ಲ
ಬಡವರೊಡನೆ ಬಲದ ಸೆಣಸು ಹೊಲ್ಲ
ಧನಿಕ ಜನರ ಸಂಗದಾಸೆ ಮೊದಲು ಹೊಲ್ಲ
ವಿಶ್ವದಾಭಿರಾಮ ಕೇಳು ವೇಮ

ಉಚಿತ-ಅನುಚಿತಗಳನ್ನು ತಿಳಿದು ವರ್ತಿಸಬೇಕು. ಯಾರು ಸತ್ಯದ ಅನುಭವಕ್ಕಾಗಿ ಧ್ಯಾನಿಸುವ ಸತ್ಯಪರರಿರುವರೋ, ಅವರೊಂದಿಗೆ ಚಿನ್ನಾಟ-ನಗೆಯಾಟಗಳು ಉಚಿತವಲ್ಲ.

ಬಡವನು ತನ್ನ ದೇಹಬಲ ಬೆಳೆಸುವುದರಲ್ಲಿ ಆಸಕ್ತಿ ತಾಳನು. ಅದರಿಂದ ಶಕ್ತಿಬಲದಲ್ಲಿ ಅವನೊಂದಿಗೆ ಸ್ಪರ್ಧೆಗಿಳಿಯುವುದು ಸರಿಯಲ್ಲ.

ಧನಿಕನು ಅನೇಕ ಕೇಡು ಚಟಗಳಿಗೆ ಅಂಟಿರುತ್ತಾನೆ. ಅವನ ಜೀವನಚರ್ಯೆ ಭಿನ್ನವಾಗಿರುತ್ತದೆ. ಅಂಥವನ ಜೊತೆಗೆ ಸಹವಾಸ ಬೆಳೆಸುವ ಆಸೆ ಬಡವನಿಗೆ ಸರಿಯಲ್ಲ

೨೫೬

ವಲ್ಲನ್ಮೆಪುಲೇಕ ವಾಗ್ದತ್ತಮುಲಜೇಸಿ, ಯದಿಗೊ ಯಿದಿಗೊ ಯನುಚು ನಾಸಬೆಟ್ಟ
ಗಡುವುಬೆಟ್ಟ ರೇಪುಗಡುವಗಾ ಬೊವ್ಮನು, ವಿಶ್ವದಾಭಿರಾಮ ವಿನುರ ವೇಮ

ಹೊತ್ತು ಗೊತ್ತು ಇರದೆ, ಮಾತು ಮೊದಲು ಇತ್ತು,
ಆಗ ಈಗ ಎನುತ ಆಶೆ ನೀಡಿ,
ನೇಳೆ ಹೇಳಿ ಮತ್ತೆ 'ನಾಳೆ ನಾಳೆ' ಎನುವ.
ವಿಶ್ವದಾಭಿರಾಮ ಕೇಳು ವೇಮ

ನಮ್ಮ ನಡೆವಳಿಕೆ ಹೊಣೆಗಾರಿಕೆಯದಾಗಿರೆಬೇಕು. ನಮ್ಮ ವಚನ ಉತ್ತರದಾಯಿಯಾಗಿರಬೇಕು. ಆಗ ನಮ್ಮ ಮಾತಿಗೆ ಬೆಲೆ ಬರುತ್ತದೆ.

ಹೊಣೆಗೇಡಿಗಳಾಗಿ ತಮ್ಮ ಕಾರ್ಯಾವಸರವನ್ನು ನಿಶ್ಚಿತಪಡಿಸಿಕೊಳ್ಳದೆ, ಏನಾದರೂ ಕೊಡುತ್ತೇನೆಂದು ವಚನಕೊಟ್ಟು, ಅನಂತರ ಕೊಡುವುದಾಗದಿರಲು, ಆಗ ಈಗ ಬರಲಿಕ್ಕೆ ಹೇಳಿ ಆಶೆ ತೋರಿಸುವರು. ಹೀಗೆ, ಹೇಳಿದ ಸಮಯಕ್ಕೆ ಕೊಡುವುದಾಗದೆ, ನಾಳೆ' 'ನಾಳೆ' ಎನ್ನುತ್ತ ತಿರುಗುತ್ತಾರೆ.

ಜೀವನ ಚರ್ಯವು ನಿಶ್ಚಿತ ನಿಯಮದಂತೆ ನಡೆದರೆ, ತಮಗೂ ಕ್ಷೇಮ, ಇತರರಿಗೂ ಕ್ಷೇಮ.

೨೫೭

ಪಟ್ಟಿಕುಂಡಿ ಯಧಿಕಭಾಗ್ಯಂಬು ಬಟ್ಟಿನಾ. ದೊಡ್ಡವಾರಿದಿಟ್ಟ ತ್ರುಳ್ಳಿಪಡುನು.
ಅಲ್ಪಜಾತಿಕುಕ್ಕ ಯಧಿಕುಲನೆರುಗನಾ ? ವಿಶ್ವದಾಭಿರಾಮ ವಿನುರ ವೇಮ

ಚಂಚಲಮತಿಯಧಿಕ ಕಾಂಚನ ಪಡೆದೊಡನೆ
ದೊಡ್ಡ ಜನಕಸಡ್ಡಿ ಮಾಳ್ಪ ಸತತ
ಕೀಳು ಜಾತಿ ನಾಯಿ ಮೇಲು ಕುಲವರಿವುದೆ ?
ವಿಶ್ವದಾಭಿರಾಮ ಕೇಳು ವೇಮ

ಸ್ಥಿರಬುದ್ಧಿಯಿಂದರೆ, ನೋವು-ನಲಿವು, ಬಡತನ-ಸಿರಿತನಗಳ ಕಾಲ ಸಮುಚಿತ್ತದಿಂದಿರುವುದು. ಚಂಚಲ ಚಿತ್ತನಾದವನು, ಹೆಚ್ಚು ಧನ ಪಡೆದೊಡನೆ ತಾನು ಶ್ರೇಷ್ಠನೆಂದು ಭಾವಿಸುತ್ತಾನೆ. ಇತರ ಹಿರಿಮನಸ್ಸಿನವರ ಬಗ್ಗೆ ಅಸಡ್ಡೆ ತೋರುತ್ತಾನೆ.

ಹೇಗೆಂದರೆ, ನಾಯಿಗಳಲ್ಲಿ ಅನೇಕ ಜಾತಿಗಳಿದ್ದು, ಅವುಗಳ ಗುಣವು ಸಹ ಅವುಗಳ ತಳಿಯನ್ನವಲಂಬಿಸಿದೆ. ಅಂದ ಮೇಲೆ, ಕೀಳು ಜಾತಿಯ ನಾಯಿ ಮೇಲು ಕುಲದ ಗುಣವನ್ನು ಅರಿಯುವುದೆಂತು ?

೨೫೮

ಅತಿಥಿರಾಕಜೂಚಿ ಯದಲಿಂಜಿ ಪಡವೈಚಿ, ಕಠಿಣಚಿತ್ತುಲಗುಚು ಗಾನಲೇರು.
ಕರ್ಮಮುನಕುಮುಂದು ಧರ್ಮಂಬುಗಾನರು ವಿಶ್ವದಾಭಿರಾಮ ವಿನುರ ವೇಮ

ಅತಿಥಿ ಬಾರದಿರಲು, ನೊಂದು ಭೀತಿಗೊಂಡು,
ಕಠಿಣ ಚಿತ್ತದೊಳಗೆ ಕಾಣಲೇಕೆ ?
ಕರ್ಮಕಿಂತ ಮುನ್ನ ಧರ್ಮವಕಾಣಿಭೋ
ವಿಶ್ವದಾಭಿರಾಮ ಕೇಳು ವೇಮ

ಸ್ನಾನ ಮಾಡುವುದು, ಸಂಧ್ಯಾಪೂಜೆ, ಮಂತ್ರಪಠಣ, ಉಪವಾಸ ವ್ರತ ಆಚರಿಸುವುದು, ಪ್ರತಿದಿನ ಅತಿಥಿಗಳಿಗೆ ಏನಾದರೂ ನೀಡಿ, ಅನಂತರ ಊಟ ಮಾಡಬೇಕೆಂಬ ನಿಯಮ ಪಾಲಿಸುವುದು, ಕರ್ಮಗಳಷ್ಟೇ. ಇಂಥ ಕರ್ಮಗಳು ಧರ್ಮದ ಕಲ್ಪನೆಯನ್ನು ಜಾಗೃತಗೊಳಿಸಲು, ಸಹಾಯಕವಾಗಿವೆ. ಧರ್ಮ ಭಾವನೆಯನ್ನು ಬೆಳೆಯಿಸಿಕೊಳ್ಳಲು ಪ್ರಚೋದಕವಾಗಿವೆ. ಧರ್ಮವೆಂದರೆ, ಇಲ್ಲದವರು ಯಾರಾದರೂ ಬಂದರೆ, ಅವರಿಗೆ ಏನನ್ನಾದರೂ ತಪ್ಪದೇ ನೀಡಬೇಕೆಂಬ ಭಾವನೆ ತಾಳುವುದು. ಆದರೆ, ಧರ್ಮದ ನೈಜ ಕಲ್ಪನೆ ತಿಳಿದ ಮೇಲೆ " ಅತಿಥಿ ಇಂದು ಬರಲಿಲ್ಲ. ನಾವೇನಾದರೂ ಪಾಪ ಮಾಡಿದೆವೊ ? ನಮ್ಮ ಮೇಲೆ ದೇವರು ಆಗ್ರಹ ಮಾಡಿದನೋ ? ಎಂದು ಭೀತಿಗೊಳ್ಳುವುದೇಕೆ ? '' ಆಚಾರದ ಹಿಂದಿನ ಮರ್ಮ ತಿಳಿಯಬೇಕು.

೨೫೯

ಕೈಪುವಸ್ತುವುಲನು ಗಾಕ್ಷಿಂಚಿ ಸೇವಿಂಪ. ಕಾನಿಪನುಲೊನರ್ಚು ಮೇನೆರುಗಕ,
ಅಟ್ಲುಪೂನುವಾರಿ ನಧಮು ಲಟಂದುರು ವಿಶ್ವದಾಭಿರಾಮ ವಿನುರ ವೇಮ

ಮದ್ಯವಸ್ತು ಬೇಡಿ, ಭುಜಿಸಿ ನಿಲದೆ ಮತ್ತೆ,
ನಿಂದ್ಯಕಾರ್ಯನಿರತನಾಗಿ ನಡೆಯೆ,
ಅಂಥ ನರನು ಪತಿತ, ಅಧಮ, ನೀಚನೆನಿಪ
ವಿಶ್ವದಾಭಿರಾಮ ಕೇಳು ವೇಮ

ಮಾದಕ ಪದಾರ್ಥಗಳನ್ನು ಸೇವಿಸುವುದರಿಂದ, ಇಂದ್ರಿಯ ನಿಗ್ರಹ ದುಸ್ಸಾಧ್ಯವಾಗುತ್ತದೆ. ಅದು ಇಂದ್ರಿಯ ನಿಗ್ರಹ ಮಾಡಿ, ವಿಶಾಲ ಮನಸ್ಸು ಹೊಂದಲು ಅಡ್ಡವಾಗುತ್ತದೆ ಆದರೂ ಕಾಳಿಕಾ ಪುರಾಣದನ್ವಯ ಮತ್ತು ಯಜ್ಞಯಾಗಾದಿಗಳಲ್ಲಿ ಮದ್ಯವಸ್ತುವಾದ ಸೋಮರಸವನ್ನು ಕೇಳಿ, ಅದಕ್ಕೆ ಗಂಧ ಬಳಿದು, ದೇವರಿಗೆ ಅರ್ಪಿಸಿದೆವೆಂದು ಭಾವಿಸಿ, ತಾವೇ ಸೇವಿಸುತ್ತಾರೆ. ಸಾಲದೆ, ದೇವಕನ್ನಿಕೆಯರೆಂದು ಕರೆದುತಂದು ಅವರೊಂದಿಗೆ ರತಿಕ್ರೀಡೆ ನಡೆಸುತ್ತಾರ. ಇಂಥ ಭೋಗದಾಶೆಯ ದುಷ್ಟ ಜನರು, ನೀತಿಯ ಮಟ್ಟದಿಂದ ಪತಿತರಾದವರು; ಅತ್ಯಂತ ಕೆಟ್ಟ ಜನರು; ಅಧಮ ನೀಚರು.

೨೬೦

ಅಂಡಲೇನಿಮನುಜು ಡತಿಧಾರ್ಮಿಕುನಿಯಿಲ್ಲು, ಜೇರವಲಯು ಬ್ರತುಕ ಜೇಯುನತಡು
ಆವಿಭೀಷಣು ದೊಲಿ ಯಾರಾಮವಿಭುವೊಲೆ ವಿಶ್ವದಾಭಿರಾಮ ವಿನುರ ವೇಮ

ಅಂಡಲೆಯುವ ಮನುಜ ಅತಿ ಧಾರ್ಮಿಕನೆಡೆಯ
ಸೇರಿ ನೋಳ್ಪ ತನ್ನ ಬಾಳಗತಿಯ.
ವಿಭೀಷಣ ರಾಮನ ನೊರೆಯ ಹೊಕ್ಕ ತೆರದಿ
ವಿಶ್ವದಾಭಿರಾಮ ಕೇಳು ವೇಮ

ಕೆಲಸಗೇಡಿಯಾಗಿ ಅತ್ತಿತ್ತ ತಿರಗುವ ಮನುಷ್ಯ, ಕೇವಲ ಧರ್ಮಮಾರ್ಗದಿಂದ ನಡೆಯುವವನೊಂದಿಗೆ ಸೇರಿ ತನ್ನ ಬಾಳಿನ ಪರಿಣಾಮವು ಏನಾಗಬಹುದೆಂದು ನೋಡುತ್ತಾನೆ.

ಹೇಗೆಂದರೆ, ವಿಭೀಷಣ ತನ್ನ ಬಂಧು, ರಾಜ ರಾವಣನೊಡನೆ ಭಿನ್ನಾಭಿಪ್ರಾಯ ಹೊಂದಿ, ರಾಜಾಶ್ರಯ ಕೆಳೆದುಕೊಂಡ. ಕೆಲಸಗೇಡಿಯಾದ. ಕೊನೆಗೆ ಕೇವಲ ಧರ್ಮ ಮೂರ್ತಿಯಾದ ರಾಮನ ಆಶ್ರಯ ಕೋರಿದನು.

೨೬೧

ಕೋಮುಟಕಿ ದುರಾಶಕೊಂಡಲು ವಾಮುಲು, ಚಂದನಂಪು ಸೊನಲು ಜಂದ್ರಕಳಲು
ಆಶಕುಮಿತಿಲೇದಿಕಕ್ಕಡಗತಿಲೇದು. ವಿಶ್ವದಾಭಿರಾಮ ವಿನುರ ವೇಮ

ಕೊಮುಟಿ ಆಶೆಬಟ್ಟು ಗುಡ್ಡ, ರಾಶಿಯೆನುವ
ಚಂದನ ರಸವೆನುವ ಚಂದ್ರಕಳೆಯ.
ಆಶೆ ಮಿತಿ ಮೀರಲು ಗತಿಯ ಕಾಣರಾರು.
ವಿಶ್ವದಾಭಿರಾಮ ಕೇಳು ವೇಮ

ಆಶೆಯೇ ಕೆಟ್ಟದ್ದು. ಆಶೆ ಮಿತಿಮೀರಿದರಂತೂ ತೀರ ಕೆಟ್ಟದ್ದು. ಅಂಥವರು ತಮ್ಮ ಜೀವನದಲ್ಲಿ ಇರಿಸಿಕೊಂಡ ಗುರಿಯನ್ನು ತಲುಪರು; ಗತಿಗಾಣರು. ಕೊಮುಟಿ ಆಶೆಬುರುಕ ವ್ಯಾಪಾರಿ. ವಿಶೇಷ ಲಾಭದಾಶೆಯಿಂದ ತನ್ನಲ್ಲಿ ಇರುವ ಸರಕಿಗೆ ಅಲ್ಲಸಲ್ಲದ ಗುಣ ಆರೋಪಿಸಿ, ವ್ಯಾಪಾರ ಗಿಟ್ಟಿಸುತ್ತಾನೆ, ಗುಡ್ಡವನ್ನು ತೋರಿಸಿ ಅದುವೇ ಅಡಿಕೆಯ ಬೆಟ್ಟವೆನ್ನುವನು. ತಂಪಾಗಿ, ಇನಿದಾಗಿರುವ ಬೆಳದಿಂಗಳನ್ನು ಶ್ರೀಗಂಧದ ರಸವೆಂದು ಹೇಳಿ ಬಣ್ಣಿಸಿ, ವ್ಯಾಪಾರ ಕುದುರಿಸುತ್ತಾನೆ. ಅತಿ ಆಶೆಯಿಂದ, ನಂಬಲಾರದಂಥ ಸುಳ್ಳು ಹೇಳುತ್ತಾನೆ.

ಸುಳ್ಳು ಹೇಳುವವರು ಒಳ್ಳೆಯ ಗತಿಯನ್ನು ಕಾಣರು.

೨೬೨

ದಶಗಲಾರಿನೆಲ್ಲ ತಮಬಂಧುವುಲಟಂಡ್ರ, ದಶಮುಲೇಮಿನೆಂತ್ರು ತಕ್ಕುವಗನು.
ದಶಯನಂಗನು ಧನದಶಯೊಕ್ಕಟೀ ಸುಮೀ, ವಿಶ್ವದಾಭಿರಾಮ ವಿನುರ ವೇಮ.

ದೆಶೆಯು ತಿರುಗಲವನ ಬಂಧು ತಮಗೆಂಬರು
ದೆಶೆಗೆಡಲು ರಕ್ತದಿ ಅವನೆ ಕೀಳು
ದೆಶೆ; ತಿಳಿದೊಡೆ ಧನದೆಶೆಯೊಂದೆ ಕಾಣಭೋ.
ವಿಶ್ವದಾಭಿರಾಮ ಕೇಳು ವೇಮ.

ಯಾವನಿಗೆ ಅನುಕೂಲ, ಸುಖ-ಸೌಕರ್ಯಗಳು ಇರುವವೋ, ಅವನು ತಮ್ಮ ಬಂಧುವೆನ್ನುತ್ತಾರೆ. ಯಾವನ ದೆಶೆಯು ಸರಿಯಾಗಿಲ್ಲವೋ, ಅವನೇ ರಕ್ತದಿಂದ ಕೀಳು ಎನ್ನಿಸಿ, ತಮ್ಮ ಕುಲದಿಂದ ದೂರವಿರಿಸುವರು. ದೆಶೆ ಯಾವುದರಿಂದ ಬಲಿಯುತ್ತದೆ, ಕ್ಷೀಣಿಸುತ್ತದೆ? ದೆಶೆ ಅನುಕೂಲವಾಗಲು ಯಾವುದು ಮೂಲಕಾರಣವೆಂದು ಯೋಚಿಸಿದರೆ, ದೆಶೆಯೆಂದರೆ, ಧನದೆಶೆಯೊಂದೇ ಎಂಬುದು ಗೊತ್ತಾಗದಿರದು. ಧನದಿಂದ ಮಾತ್ರ ಜನರ ಮೇಲು-ಕೀಳುತನ ನಿರ್ಧರಿಸಲ್ಪಡುವುದು.

೨೬೩

ತಲ್ಲಿಬಿಡ್ಡಲಕುನು ದಗವು ಬುಟ್ಟಂಚಿಡಿ, ಧನವು ಸುಖಮು ಗೂರ್ಚುನನಿಗಡಿಂತ್ರು
ಕಾನಿಯೆಲ್ಲಯೆಡಲ ಘವದುಃಖಕರಮುದಿ, ವಿಶ್ವದಾಭಿರಾಮ ವಿನುರ ವೇಮ

ತಾಯಿ-ತನಯರಲ್ಲಿ ಬಿರುಸು ಬರಿಸುತಿಪ್ಪ,
ಧನವು, ಸುಖವು ಕೂಡಿ ಇರವು ನೋಡಿ.
ಆವ ರೀತಿ ನೋಡಲದನು ದುಃಖಕರವು.
ವಿಶ್ವದಾಭಿರಾಮ ಕೇಳು ವೇಮ.

ಧನಕ್ಕಾಗಿ ಆಸೆ ಪಡುವ ಜನರು ತಮ್ಮ ರಕ್ತ ಸಂಬಂಧಗಳನ್ನು ಮರೆಯುತ್ತಾರೆ. ಧನವೇ ಸರ್ವಪ್ರಧಾನವೆಂದೂ, ಇನ್ನುಳಿದ ಸದ್ಗುಣಗಳು ಗೌಣವಾದವುಗಳೆಂದೂ ತಿಳಿದ ಜನರು ಎಲ್ಲಕ್ಕಿಂತ ಧನವೇ ಹೆಚ್ಚೆಂದು ತಿಳಿಯುತ್ತಾರೆ. ತಾಯಿ-ಮಕ್ಕಳೇ ಆಗಲಿ, ಯಾರೇ ಆಗಲಿ, ಧನದ ನಿಮಿತ್ತ, ತಂಟೆ ಮಾಡಲೂ ಹಿಂಜರಿಯರು.

ಧನವು ಆಶೆಗೆ ಹಾದಿಯಾಗುವುದರಿಂದ, ಸುಖಕರವಾಗದು. ಧನ ಮತ್ತು ಸುಖ ಕೂಡಿ ಇರಲಾರವು.

ಧನದ ವಿಷಯದಲ್ಲಿ ಯಾವ ರೀತಿಯಿಂದ ವಿಚಾರಿಸಿದರೂ ದುಃಖ ಮೂಲವಾಗಿದೆ.

೨೬೪

ಪ್ರಭುಲಕಿಚ್ಚುನಟ್ಲು ರಹೀವೇದಲಕುನೀರು, ವೇಶ್ಯಕಿಚ್ಚುನಟ್ಲು ವೆಲದಿಕೀರು
ಸುರಕುನಿಚ್ಚುಕಟ್ಲು ಸುಧಕುನಿನೀಯರು, ವಿಶ್ವದಾಭಿರಾಮ ವಿನುರ ವೇಮ.

ರಾಜಗೀವ ರೀತಿ ರಂಕಗೀಯರಯ್ಯ
ಗಣಿಕೆಗೀವರೀತಿ ಗರತಿಗಿಲ್ಲ
ಸುರೆಗೆ ಈವ ರೀತಿ ಸುಧೆಗೆ ಈಯರಯ್ಯ
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಕಾರ್ಯಕ್ಕಾಗಿ ದಾನಮಾಡಬೇಕು. ರಾಜನಿಗೆ ರಾಜಾದಾಯ ಸಲ್ಲಿಸುತ್ತಾರೆ. ಆದರೆ ಅದೇ ಸಾಮಾನ್ಯನಿಗೆ ಏನನ್ನೂ ಕೊಡರು. ಗಣಿಕೆಯು ಕುಟಿಲೆ; ಕ್ಷಣ ಭಂಗುರದ ಸುಖ ನೀಡುವಾಕೆ; ಆದರೆ ಗರತಿಯಾದ ಸತಿಗೆ ಏನನ್ನೂ ಕೊಡರು. ಸೆರೆಗುಡಿಯಲು ಬಹಳಷ್ಟು ವೆಚ್ಚಮಾಡುತ್ತಾರೆ. ಆದರೆ, ಸುಧೆ ಪಡೆಯಲು ಹಣ ನೀಡರು.

೨೬೫

ಪೆಟ್ಟಪೋಯುವಾಡು ಕಟ್ಟಡಿಗಲದಾತ, ತಿಟ್ಟಪೋಯುವಾಡು ತುಟ್ಟಿಪುರುಗು
ರಟ್ಟುನೇಯುವಾಡು ರಾಣಿಂಪುನಕುರಾಡು ವಿಶ್ವಧಾಭಿರಾಮ ವಿನುರ ವೇಮ

ಇಟ್ಟು ಸಂದುವಾತ ದಾನ ಶೀಲನಲ್ಲ
ಕೆಟ್ಟನುಡಿಯುವಾತ ಪುಟ್ಟ ಕೀಟ
ಗುಟ್ಟುಗಳುಪುವಾತ ಒಟ್ಟು ಬೆಳಗಲಾರ
ವಿಶ್ವದಾಭಿರಾಮ ಕೇಳು ವೇಮ

ತಮ್ಮ ವಸ್ತು ಒಡವೆಗಳನ್ನು ಬಚ್ಚಿಟ್ಟು ಸತ್ತುಹೋಗುವವರು, ಕಠಿಣ ಮನಸ್ಕರು ಇಲ್ಲದವರಿಗೆ ಕೊಟ್ಟು, ಅವರು ಪಡುವ ಸಂತೋಷವನ್ನು ಸವಿಯುವ ಸಹೃದಯತೆ ಇವರಿಗಿಲ್ಲ. ಆದರೆ ದಾನಶೀಲನಾದವನು ಪರರ ಸಂತೋಷದಲ್ಲಿ ಭಾಗಿಯಾಗಿ ಅದರಿಂದ ತಾನು ಹರ್ಷಗೊಳ್ಳುವ ಸಹೃದಯತೆ ಪಡೆದಿರುತ್ತಾನೆ.

ಕೆಡುಕು ನುಡಿಯುವವನು ತನ್ನ ವರ್ತನೆಯಿಂದ ಪರರ ಮನಸ್ಸು ನೋಯಿಸುತ್ತಾನೆ. ಅವನು ಸಣ್ಣ ಕೀಟದಂತೆ ಕೀಳು ಮನಸ್ಸಿನವನು.

ಕೊಡದೆ ಸತ್ತು ಹೋಗುವವ, ಕೆಡುಕುಮಾತು ಆಡುವವರಿಗಿಂತ, ಕೀಳಾದುದೆಂದರೆ, ರಹಸ್ಯಗಳನ್ನು ಬಯಲಿಗಿಡುವುದು. ವಿಶ್ವಾಸದಿಂದ ಹೇಳಿದ ಗುಟ್ಟಿನ ಸಂಗತಿಗಳನ್ನು ಸಂಬಂಧಿಸದವರಿಗೆ ಹೇಳಿದರೆ ಎಲ್ಲ ಹಂಚಿಕೆಯೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ನಿರರ್ಥಕವಾಗುತ್ತದೆ. ರಾಜ ವ್ಯವಹಾರದಲ್ಲಿ, ಯುದ್ಧಪ್ರಸಂಗಗಳಲ್ಲಿ ಗೌಪ್ಯ ಕಾಪಾಡುವದಕ್ಕೆ ಅತ್ಯಂತ ಪ್ರಾಮುಖ್ಯತೆ ಬರುತ್ತದೆ.

೨೬೬

ದಾತಯ್ಯೆನವಾಡು ತಾನು ಮುನ್ನಿಚ್ಚೆಡು, ಗಾನಿವಾಡೊಸಗುನೆ ? ಕಾಸುನ್ನೆನ
ಜಲಮುದಫ್ಪಿಡೀರ್ಚು ಮಮೆಟ್ಲುದೀರ್ಚುನು? ವಿಶ್ವದಾಭಿರಾಮ ವಿನುರ ವೇಮ

ದಾತನಿರಲು ಕರೆದು ದಾನಕೊಡುವ. ಮೊದಲು
ತನಗೆ ಇರದೆ ತಾನು ಕೊಡುವನೇನು ?
ಜಲವು ತೃಷೆಗೆ ಮದ್ದು, ಮಲೆತರೆ ತೃಷೆ ಕಳೆವುದೇ ?
ವಿಶ್ವದಾಭಿರಾಮ ಕೇಳು ವೇಮ

ದಾನ-ಧರ್ಮದಲ್ಲಿ ಭಕ್ತಿಯುಳ್ಳ, ದಾನ ನೀಡುವ ಶಕ್ತಿಯುಳ್ಳ ದಾತನು ಕೇಳುವ ಮುನ್ನ ಕರೆದು ದಾನ ಕೊಡುವನು. ಆದರೆ ತನ್ನಲ್ಲಿ ಕೊಡಲು ಏನೂ ಇಲ್ಲದವನು ಬಿಡಿಕಾಸನ್ನಾದರೂ ಕೊಡುವುನೆಂತು ?

ಹೇಗೆಂದರೆ, ಬಾಯಾರಿಕೆ ಹಿಂಗಿಸಲು ನೀರು ಸಮರ್ಥವಾಗಿರುತ್ತದೆ. ಆದರೆ, ಅದೇ ನೀರು ಮಲೆತರೆ, ಅದರ ಸೇವನೆಯಿಂದ ಬಾಯಾರಿಕೆ ಹಿಂಗುವುದೇ ?

೨೬೭

ಕಲಿಮಿಗಲಯ ತನಿಕಿಗನ್ಯಕನಿಚ್ಚಿಯು, ಮುರಿಯುಚುಂದ್ರುಕಾದೆ? ಮೂಢಜನುಲು
ಪೂಜಫಲಮುಕಾನಿ ಪೂನಿಕಲೋ ನಿಲ್ಚುನಾ? ವಿಶ್ವದಾಭಿರಾಮು ವಿನುರ ವೇಮು

ಕನಕ ಇಪ್ಪವಂಗೆ ಕರೆದು ಕನ್ನೆಯಿತ್ತು,
ಮನದಿ ಹರುಷ ಪಡರೆ? ಮೂಢಜನರು,
ಪೂಜೆ ಫಲವಿರ್ದೊಡೇಂ; ಪ್ರಯತ್ನ ನಿಲಿಸುವುದೇ ?
ವಿಶ್ವದಾಭಿರಾಮು ಕೇಳು ವೇಮು.

ಬಹಳಷ್ಟು ಸಂಪತ್ತು ಇರುವವನನ್ನು ಶೋಧಿಸಿ, ಕರೆತಂದು ಅವನಿಗೆ ವಧುಗಳನ್ನು ವಿಧಿಪೂರ್ವಕ ಲಗ್ನಮಾಡಿ ಕೊಡುತ್ತಾರೆ. ಲಗ್ನಕಾಲಕ್ಕೆ ಯಜ್ಞ-ಪೂಜೆ ನಡೆಯುತ್ತದೆ. ಲಗ್ನದ ಜೊತೆ ಪೂಜೆಯ ಫಲವೆನ್ನುವರು. ಪೂರ್ಣ ಕಾರ್ಯವಾಯಿತೆಂದು ಸಂತೋಷ ಪಡುತ್ತಾರೆ. ಆದರೆ ಇಷ್ಟರಿಂದ ಸಂತಸಗೊಳ್ಳುವುದು ಮೂಢತನವಲ್ಲವೇ ? ಪೂಜೆಯ ಫಲದ ಮಾತು ಹಾಗಿರಲಿ; ವಧೂ-ವರರು ಸತಿ-ಪತಿಗಳಾಗಿ ಪ್ರೇಮಪೂರಿತರಾಗಿ ದಾಂಪತ್ಯ ಸುಖಪಡೆಯಬೇಕಾದರೆ ಪ್ರಯತ್ನಗೆಯ್ಯಬೇಕು. ಒಬ್ಬರೊಬ್ಬರು ಒಲಿದು ಬಾಳಬೇಕು. ಬಂಧುಬಳಗದವರು ಇಂಥ ಸಮರಸದ ಬಾಳುವೆಗೆ ಅನುಕೂಲಪರಿಸ್ಥಿತಿ ನಿರ್ಮಿಸುವ ಪ್ರಯತ್ನ ಮಾಡಬೇಕು.

೨೬೮

ಕೋಮಟ ಮದಿಗೋರು ಕ್ಷಾಮವೇಯೆಲ್ಲಿಡ, ವೈದ್ಯು ಡೊರುಲಕಪುಡು ವ್ಯಾಧಿಗೋರು
ನೂರಿವೇದ ಧನಿಕು ಜೇರಗಾ ಗೋರುನು, ವಿಶ್ವದಾಭಿರಾಮು ವಿನುರ ವೇಮು

ಕೊಮಟಿ ಕೋರುತಿಪ್ಪ ಸತತ ಕ್ಷಾಮುದಾಶೆ
ವೈದ್ಯಗುಂಟು ನಿತ್ಯ ವ್ಯಾಧಿಯಾಶೆ
ಊರ ಬಡವಗೊಂದೆ ಉಳಿಸುವ ಧನಿಯಾಶೆ
ವಿಶ್ವದಾಭಿರಾಮು ಕೇಳು ವೇಮು

ಲೋಕದಲ್ಲಿ ಸ್ವಂತ ಹಿತ ಸಾಧಿಸಲು ಬಯಸುವವರು, ಬಹಳ ಜನರುಂಟು. ಅವರು ಇತರರಿಗೆ ಕೇಡಾದರೂ ಚಿಂತೆಯಿಲ್ಲ ತಮಗೆ ಹಿತವಾದರೆ ಸಾಕು ಎನ್ನುವವರು.

ಕೊಮಟಿ ವ್ಯಾಪಾರಸ್ಥ; ಸೆಟ್ಟಿ. ದೇಶದಲ್ಲಿ ಬರಗಾಲ ಬಿದ್ದರೆ, ಧಾರಣಿ ಏರುತ್ತದೆ; ತನ್ನಲ್ಲಿದ್ದ ಮಾಲಿನ ಸಂಗ್ರಹಕ್ಕೆ ಎರಡಷ್ಟು ಬೆಲೆ ಬರುವುದು. ಕ್ಷಾಮ ಬರಲಿ ಎಂದು ಆಶಿಸುತ್ತಾನೆ.

ವೈದ್ಯವೃತ್ತಿಯವನು ಹೆಚ್ಚು ರೋಗಿಗಳು ತನ್ನಲ್ಲಿ ಬರಲಿ. ವ್ಯಾಧಿ ಸತತ ಇರಲಿ. ಎಂದು ಆಶಿಸುತ್ತಾನೆ. ಆದರೆ ಊರ ಬಡವನಾದರೋ ತನ್ನನ್ನು ಉಳಿಸುವ ಧನಿಗಳು ಹುಟ್ಟಿಬರಲಿ ಎಂದು ಆಶಿಸುತ್ತಾನೆ. ಬಡವನ ಆಶೆಯೇ ಸಾವಿರಪಾಲು ಮೇಲು.

೨೬೯

ಋಣಮೊಸಂಗುವಾತ ದಿನುಡ ದೊಲುದೊಲ್ತ ನದ್ದಿ ಮರಲನಡುಗ ಯಮುಡುಗನಗು,
ಅಪ್ಪುಜೇಸಿತೀರ್ಪ ನರಯನಿವಾರಿಕಿ ವಿಶ್ವದಾಭಿರಾಮು ವಿನುರ ವೇಮು

ಸಾಲನೀಡುವಾತ ಬೆಡಗಿನಧಿದೇವತೆ
ಕೇಳುವಾಗ ತಿರುಗಿ, ಕಾಲರಾಯ.
ಸಾಲಮಾಡಿ ತಿರುಗಿ ಸಲ್ಲಿಸದಗೆ, ನೋಡು.
ವಿಶ್ವದಾಭಿರಾಮು ಕೇಳು ವೇಮು

ಸಾಲ ನೀಡುವ ಮನುಷ್ಯ ಕೊಡುವ ಕಾಲಕ್ಕೆ ಆಪತ್ಕಾಲಕ್ಕೆ ಸಹಾಯ ನೀಡಿದ ಮಹೋಪಕಾರಿಯೆನಿಸುತ್ತಾನೆ. ಅವನೇ ಸಾಲಗಾರನ ಪಾಲಿಗೆ ಲಕ್ಷ್ಮೀಪತಿ. ಬೆಡಗಿನ ಅಧಿದೇವತೆ.

ಮರಳಿ ಸಾಲವನ್ನು ಕೇಳುವ ಕಾಲಕ್ಕೆ ಅದೇ ಕೊಟ್ಟ ಮನುಷ್ಯನು ಸಾಲಗಾರನ ಪಾಲಿಗೆ ಯಮನಾಗಿ ತೋರುತ್ತಾನೆ. ಸಾಲಗಾರನ ಕಾಲವು ಇನ್ನೇನು ಮುಗಿಯಿತೋ ಎಂದು ಲೆಕ್ಕ ಹಾಕುವ ಕಾಲರಾಯನಂತೆ ಭಯಂಕರನಾಗಿ ತೋರುವನು.

೨೭೦

ಚಮುರುಗ್ಗಲುದಿವ್ವೆ ಚಕ್ಕಗಾವೆಲ್ಲುನು, ಧನಮುಗಲುಗುವಾನಿ ತಲಪು ಜೆಲಗು
ಧನಮುಲೇನಿವಾನಿ ತಲಪುಲುದೀರುನಾ? ವಿಶ್ವದಾಭಿರಾಮು ವಿನುರ ವೇಮು

ಎಣ್ಣೆಯಿಪ್ಪ ದೀಪ ತೊಳಗಿ ಬೆಳಗುತಿಹುದು
ಹೊನ್ನುಉಳ್ಳವನ ವಿಚಾರ ಮಾನ್ಯ
ಹೊನ್ನು ಕಳೆಯುಲೆಷ್ಟು ಹೊಂಚು ಹಾಕಲೇನು ?
ವಿಶ್ವದಾಭಿರಾಮು ಕೇಳು ವೇಮು

ಧನವಿರುವವನ ವಿಚಾರಗಳೂ ಕೆಲವೊಂದು ಕಾಲ ಮನ್ನಿಸಲ್ಪಡುವುವು. ಅವನ ವಿಚಾರಗಳು ತತ್ತ್ವಪ್ರಧಾನವಲ್ಲ. ಧನಪ್ರಧಾನವಾದವುಗಳು. ಅವನಲ್ಲಿ ಧನವಿರುವ ತನಕ, ಅವನ ವಿಚಾರಗಳಿಗೆ ಮನ್ನಣೆಯುಂಟು. ಹೇಗೆಂದರೆ, ದೀಪ ಪ್ರಕಾಶಮಾನವಾಗಿರುತ್ತದೆ. ಆದರೆ ಎಲ್ಲಿಯ ವರೆಗೆ? ಎಣ್ಣೆ ತೀರುವ ವರೆಗೆ ಮಾತ್ರ. ಧನವು ಎಣ್ಣೆಯಂತೆ. ಧನಿಕನ ವಿಚಾರಮಾನ್ಯತೆ ದೀಪದಂತೆ. ಎಣ್ಣೆ ತೀರಿದಾಗ ದೀಪ ನಂದುವಂತೆ, ಧನವು ತೀರಿದಾಗ ಧನಿಕನ ವಿಚಾರಗಳಿಗಿರುವ ಮಾನ್ಯತೆಯೂ ತೀರುತ್ತದೆ. ಧನವು ತೀರಿದ ಮೇಲೆ ಆ ಮನುಷ್ಯ ಎಷ್ಟೋ ಹೊಂಚು ಹಾಕಿದರೂ, ಅವನ ವಿಚಾರಕ್ಕೆ ಯಾರೂ ಬೆಲೆ ಕೊಡುವದಿಲ್ಲ.

೨೭೧

ಅಡುಗಕರ್ಥಮಿಚ್ಚು ನತಡು ಬ್ರಹ್ಮಜ್ಞಾನಿ, ಅಡುಗನರ ಮಿಚ್ಚು ನತಡು ತ್ಯಾಗಿ,
ಅಡುಗನೀಯಲೇನಿ ಯಾತಡು ಪೆನುಲೋಭಿ. ವಿಶ್ವದಾಭಿರಾಮು ವಿನುರ ವೇಮು

ಕೇಳದರ್ಥವೀವ, ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ, ತಾನೆ ತ್ಯಾಗಿ.
ಕೇಳಲೀಯದಾತ, ಇನ್ನು ಮಹಾ ಲೋಭಿ.
ವಿಶ್ವದಾಭಿರಾಮು ಕೇಳು ವೇಮು

ವಿದ್ಯೆಯು ಪರಸುಖ ನೀಡುವ ಸಂಪತ್ತು. ತತ್ತ್ವಗಳನ್ನು ಸರಿಯಾಗಿ ತಿಳಿದು ಕೊಳ್ಳುವದರಿಂದ ಪರಸುಖ ಪಡೆಯಲು ಸಾಧ್ಯ. ಇಂಥ ತತ್ತ್ವಗಳನ್ನು ತಿಳಿಯಲು ಅವುಗಳ ಸರಿಯಾದ ಅರ್ಥವಿವರಣೆ ಬೇಕು. ತತ್ತ್ವಗಳ ಅರ್ಥ ಹೇಳುವವರೇ ಗುರುಗಳು. ದರ್ಶಕರು. ಗುರುಗಳು ಬ್ರಹ್ಮಜ್ಞಾನ ಹೊಂದಿದವರು. ಪರಸುಖದ ಮಾರ್ಗದರ್ಶಕರು. ಕೇಳದೆ, ಸರ್ವರಿಗೂ ಪರಸುಖದ ಹಾದಿ ತಿಳಿಯಲೆಂದು ತತ್ತ್ವಗಳ ಅರ್ಥ ಹೇಳುವವನು ಬ್ರಹ್ಮಜ್ಞಾನಿ. ಸರ್ವರೂ ಸಮವೆಂದು, ತಿಳಿದು ಅವನಿಗೆ ಇನ್ನೊಬ್ಬನು ತನ್ನನ್ನು ಕೇಳಲೇಬೇಕೆಂಬ ಭಾವನೆ ಇರುವದಿಲ್ಲ. ಕೇಳಿದಾಗ ಅರ್ಥ ತಿಳಿಸುವವನು, ತ್ಯಾಗಿ. ಏಕಂದರೆ, ಅವನು ತನ್ನಲ್ಲಿರುವ ವಿದ್ಯಾಸಂಪತ್ತನ್ನು ದಾನ ಮಾಡುತ್ತಾನೆ. ಕೇಳಿದರೂ ಅರ್ಥ ಹೇಳದವನು ಮಹಾಲೋಭಿಯೇ ಸರಿ. (ಶೂದ್ರರಿಗೆ ಸ್ತ್ರೀಯರಿಗೆ ಬ್ರಹ್ಮೋಪದೇಶ ನಿರಾಕರಿಸುವವರು ನಿಜವಾಗಿ ದುಹಾಲೋಭಿಗಳು,)

೨೭೨

ತೋಟಕೂರಕ್ಕೆನ ದೊಗ್ಗಕ್ಕೆನನು, ತವಿಟಕುಡುವುಕ್ಕೆನ ದವುಡು ಕ್ಕೆನ,
ಕಾವ್ಯಮುಲನು ಜೆಪ್ಪು ಕವುಲೆಲ್ಲ ಧನ ಪರುಲಿ, ವಿಶ್ವದಾಭಿರಾಮ ವಿನುರ ವೇಮ

ತೋಟದಿಂದ ಕಾಯಿಪಲ್ಯ ಹಸಿರುಸೊಪ್ಪು.
ರೊಟ್ಟಿಚೂರು, ತೌಡು ಸಿವುಡು ಸಾಕು.
ಚಾಟು ಪದ್ಯ ಬರೆವ ಕವಿಯು ಧನದ ದಾಸ.
ವಿಶ್ವದಾಭಿರಾಮ ಕೇಳು ವೇಮ.

ಚಿಕ್ಕ ಚಿಕ್ಕ ಸ್ತುತಿಪರ ಪದ್ಯಗಳನ್ನು ಬರೆಯುವ ಕವಿಗಳು ಆಶ್ರಿತರ ಇಚ್ಛೆಯಂತೆ ತಮ್ಮ ಪದ್ಯ ರಚಿಸುತ್ತಾರೆ. ಅವರು ತಮ್ಮ ಆಶ್ರಿತರು ನಂಬದ ನೀತಿಯನ್ನೋ, ಅವರು ನಂಬಿದ ದೇವರನ್ನೋ ಸ್ತುತಿಸುತ್ತಾರೆ. ಅವರು ದೈವದ ದಾಸರಲ್ಲ; ಧನದ ದಾಸರು. ತೋಟದಿಂದ ತಂದ ಹಿಡಿ ಕಾಯಿಪಲ್ಯ, ಸೊಪ್ಪು, ಮನೆಯಿಂದ ಸ್ವಲ್ಪು ರೊಟ್ಟಿ, ದನಕ್ಕೆ ಹಾಕಲು ತೌಡು,–ವೇವಿನ ಸಿವುಡು ಕೊಟ್ಟರೂ ಸಾಕು. ಅವರು ಪದ್ಯ ರಚಿಸಿ ಹೊಗಳುತ್ತಾರೆ. ಹಣದಾಸೆಗೆ ಬರೆದ ಚಾಟು ಪದ್ಯಗಳನ್ನು ಓದಿ ಧರ್ಮ–ನೀತಿಗಳ ಬಗ್ಗೆ ತಪ್ಪು ಅಭಿಪ್ರಾಯ ಮೂಡದಂತೆ ಎಚ್ಚರ ವಹಿಸಬೇಕು.

೨೭೩

ತವಿಟ ಕರಯ ಭೋವ ದಂಡುಲಂಬುಗಂಪ, ಶ್ವಾನಮೂಕ್ಕವಿಂಚು ಸಾಮ್ಯಮುಗನು
ವೈಶ್ಯವರುನಿಸೊಮ್ಮು ವಸುಧ ನೀಚುಲಪಾಲು ವಿಶ್ವದಾಭಿರಾಮ ವಿನುರ ವೇಮ.

ತೌಡಿಗಾಗಿ ತಿರುಗಲವನ ಅಕ್ಕಿ ಪಾತ್ರೆ
ನಾಯಿ ತಿಂದು ಬರಿದು ಮಾಡುತಿಹುದು
ಅಂತೆ ವೈಶ್ಯನಾಸ್ತಿ ಜಗದಿ ನೀಚಗಾಯ್ತು
ವಿಶ್ವದಾಭಿರಾಮ ಕೇಳು ವೇಮ.

ತಿರುಗಾಡಿ ಕೇಳಿ ಅಕ್ಕಿಯ ಭಿಕ್ಷೆಯೆತ್ತಿ ತರುತ್ತಾನೆ. ಅದನ್ನು ಪಾತ್ರೆಯಲ್ಲಿಟ್ಟು ಅನ್ನ ಮಾಡುತ್ತಾನೆ. ಇನ್ನೇನು ಊಟ ಮಾಡಬೇಕೆನ್ನುವಷ್ಟರಲ್ಲಿ ಆಶೆ ಬಲಿಯುತ್ತದೆ.

ಇನ್ನಷ್ಟು ತಿರುಗಿ, ಅಕ್ಕಿ ಸಿಗದಿದ್ದರೂ ತೌಡಾದರೂ ಸಿಕ್ಕೀತೆಂದು ಹೊರಡುತ್ತಾನೆ. ಇತ್ತ ಬೀದಿಯ ನಾಯಿ ಅಕ್ಕಿಯ ಪಾತ್ರೆ ಕಂಡು, ಹೊಂಚು ಹಾಕಿ ಕುಳಿತಿರುತ್ತದೆ. ಅವನು ಹೋದೊಡನೆ ನಾಯಿ ಪಾತ್ರೆಯನ್ನು ಎತ್ತಿಕೊಂಡೊಯ್ದು ಅನ್ನವನ್ನು ತಿಂದು ಬಿಡುತ್ತಿದೆ. ವೈಶ್ಯನು ಇರುವ ಧನವನ್ನು ಉಪಭೋಗಮಾಡದೆ ಇನ್ನಷ್ಟು ಗಳಿಸುವ ಆಶೆಗೆ ಮಾರು ಹೋಗುತ್ತಾನೆ. ಕೊನೆಗೆ ಅವನ ಆಸ್ತಿಯನ್ನು ಯಾರೋ ಕೊಳ್ಳೆ ಹೊಡೆಯುತ್ತಾರೆ. ವೈಶ್ಯನ ಆಸ್ತಿ, ನೀಚನ ಪಾಲು.

೨೭೪

ನೀತಿ ಜ್ಯೋತಿಲೇಕ ನಿರ್ಮಲಂಬು ನೇದಿ, ಯೆಟ್ಲು ಕಲುಗುಪರಮು ಡೆಂತದ್ಮೆನ
ಧನಮುಗಲ್ಗಿಯುನ್ನ ದೈವಂಬುಕಲ್ಗುನಾ? ವಿಶ್ವದಾಭಿರಾಮ ವಿನುರ ವೇಮ

ನೀತಿ ಜ್ಯೋತಿಯಿರದೆ ನಿರ್ಮಲವೆಂತಹುದು ?
ಪರಮ ಪದವು ಎಂತು, ಎಲ್ಲಿ ಇಹುದು ?
ಧನ ತನಗಿರಲೇನು, ದೈವಫಲ ದೊರೆವುದೆ ?
ವಿಶ್ವದಾಭಿರಾಮ ಕೇಳು ವೇಮ.

(ತುಪ್ಪ ಬತ್ತಿಯ ದೀಪ ಹಚ್ಚಿ, ನಿರ್ಮಲಾರತಿ ಎತ್ತುವೆ ಎಂದು ಮಂಗಳಾರತಿ ಎತ್ತಿ, ಹಣ ವೆಚ್ಚಮಾಡಿ ಪೂಜಾಕಾರ್ಯ ಗೈದು ಪುರೋಹಿತರಿಗೆ ಬಹಳಷ್ಟು ಹಣವನ್ನು ದಕ್ಷಿಣೆಯಾಗಿ ಕೊಡುತ್ತಾರೆ. ಇದರಿಂದ ಪರದಲ್ಲಿ ಸುಖವುಂಟೆಂದು ಗ್ರಹಿಸುತ್ತಾರೆ.)

ನಿರ್ಮಲವಾಗಬೇಕಾದುದು ಮನಸ್ಸು. ಮನಸ್ಸು ನಿರ್ಮಲವಾಗಬೇಕಾದರೆ ಒಳ್ಳೆಯ ನೀತಿವಂತನಾಗಿರಬೇಕು. ಒಳ್ಳೆಯದನ್ನೇ ವಿಚಾರ ಮಾಡಬೇಕು.

ನೀತಿಯೇ ಜ್ಯೋತಿ. ಕೆಟ್ಟ ವಿಚಾರಗಳೇ ಮಲ; ಹೊಲಸು. ನೀತಿ ಜ್ಯೋತಿ ಬೆಳಗಿದರೆ, ಕೆಟ್ಟ ವಿಚಾರಗಳು ತೊಲಗಿ ಮನಸ್ಸು ನಿರ್ಮಲವಾಗುವುದು. ಪರವು ಆತ್ಮಪರವಾದುದು; ಆತ್ಮಮುಖವಾದುದು. ಅಂದರೆ ಆತ್ಮಕ್ಕೆ ಸಂಬಂಧಿಸಿದುದು. ಪರವೆಲ್ಲಿ? ಪರವು ಹೇಗೆ? ಎಂದು ವಿಚಾರಿಸಿದರೆ, ಆತ್ಮಿಕ ಸಂಬಂಧ ಹೊಳೆಯುವುದು. ಇಂಥ ಆತ್ಮಿಕ ಸೌಖ್ಯ ಸಮಚಿತ್ತತೆಯಿಂದ ಮಾತ್ರ ಲಭ್ಯ. ಧನದಿಂದಲ್ಲ. ಎಷ್ಟು ಧನವಿದ್ದರೂ ಅದು ವ್ಯರ್ಥ.

೨೭೫

ಚಚ್ಚಿಪಡಿನಪಶುವು ಚರ್ಮಂಬುಗಂಡಲ, ಬಟ್ಟಿ ಪೆರಿಕಿತಿನುನು ಪರಗ ಗ್ರದ್ದ,
ಗ್ರದ್ದ ಎಂಟವಾಡು ಗಜಪತಿಡೊಕೋ, ವಿಶ್ವದಾಭಿರಾಮ ವಿನುರ ವೇಮ.

ಸತ್ತು ಬಿದ್ದ ಪಶುವ, ಕತ್ತು,-ಚರ್ಮ ಪಿಡಿದು.
ಮತ್ತೆ ಕರಿದು ತಿನುವುದು, ರಣಹದ್ದು.
ಮತ್ತ ಗಜಪತಿನೃಪ ತಾನೆ ಕೀಳು ಹದ್ದು.
ವಿಶ್ವದಾಭಿರಾಮ ಕೇಳು ವೇಮ.

(ಕ್ರಿ. ಶ. ೧೪೨೦ ರಲ್ಲಿ ಕೊಂಡವೀಡು ರೆಡ್ಡಿ ಸಾಮ್ರಾಜ್ಯದ ಪತನಾನಂತರ ಓರಂಗಲ್ಲಿನ ಗಜಪತಿ ಅರಸರ ಅಂಕಿತಕ್ಕೆ ಕೊಂಡವೀಡು ರಾಜ್ಯ ಸೇರಿತು. ಯುದ್ಧದ ಬೇಗೆಗೆ ಸಿಕ್ಕಿ ಕೊಂಡವೀಡು ಪ್ರಜರು ನಿರ್ಜೀವಿಗಳಂತಾಗಿದ್ದರು.)

ರಣಹದ್ದು ಜೀವಂತ ಪಶು–ಪಕ್ಷಿಗಳನ್ನು ಹರಿದು ತಿನ್ನುವುದಕ್ಕಿಂತಲೂ, ಸತ್ತು ಬಿದ್ದ ಪಶುವಿನ ಕೊರಳಿನ ಚರ್ಮ ಜಗ್ಗಿ ಜಗ್ಗಿ ಹರಿದು ತಿನ್ನುತ್ತದೆ. ಕ್ರೂರನಾದ ಗಜಪತಿ ರಾಜನು ಬಳಲಿ ಬೆಂಡಾಗಿ ಸತ್ತು ಹೋದಂತಾದ. ಕೊಂಡವೀಡು ರಾಜ್ಯದ ಪ್ರಜೆಗಳನ್ನು ಸೇಡು ಬುದ್ಧಿಯಿಂದ ಕಾಡಿಸಿ, ಪೀಡಿಸುತ್ತಾನೆ. ಗಜಪತಿ ರಾಜನು (ಆ ರೀತಿ ನಡೆದುಕೊಳ್ಳುವ ವಿಜಯೀ ರಾಜರು) ಕ್ರೂರೆ ರಣಹದ್ದಿನಂತೆ.

೨೭೬

ವೈಶ್ಯುಲಮನಿಚಿಪ್ಪು ವಾರ್ತಮಾತ್ರಮೆಕಾನಿ, ದೊಂಗಲಿಂತಕನ್ನ ದೊರುಕರೆಂದು,
ನೇಲಮೀದ ವೀರಿನೇರ್ಕಲ ನೇಮುಂದು ! ವಿಶ್ವದಾಭಿರಾಮ ವಿನುರ ವೇಮ

ವೈಶ್ಯನೆಂಬ ಹೆಸರು ಹೊತ್ತು ಬಾಳುತಿಪ್ಪ.
ಅವನಿಗಿಂತ ಮಿಕ್ಕ ಕಳ್ಳನಿಲ್ಲ.
ಜಗದೊಳವನ ಮೋಸವೆನಿತು ಪೇಳಲಾರೆ
ವಿಶ್ವದಾಭಿರಾಮ ಕೇಳು ವೇಮ.

‘ ವಿಶ್ ’ ಅಂದರೆ ಚಲಿಸುವವನು. ಅಲ್ಲಲ್ಲಿ ಹೋಗಿ ಬಂದು ವ್ಯಾಪಾರ ವ್ಯವಹಾರ ಕುದುರಿಸುವವನೇ ವೈಶ್ಯ. ವ್ಯಾಪಾರ ಅವನ ವೃತ್ತಿ. ಆದರೆ ವಾಸ್ತವಿಕವಾಗಿ, ನ್ಯಾಯವಂತರಾಗಿ, ನೀತಿವಂತರಾಗಿ ವ್ಯಾಪಾರ ಮಾಡುವವರೇ ವಿರಳ. ಪರರನ್ನು ವಂಚಿಸಿ ಧನ ಸೆಳೆಯುವುದೇ ಅವರ ಕೆಲಸವಾಗಿದೆ. ಕಳ್ಳನೂ ಪರವಂಚನೆಯಿಂದ ಸಿರಿ ಪಡೆಯುತ್ತಾನೆ. ಈ ದೃಷ್ಟಿಯಲ್ಲಿ ವೈಶ್ಯನೇ ಒಬ್ಬ ದೊಡ್ಡ ಕಳ್ಳನಿದ್ದಂತೆ. ಅವನು ಮಾಡುವ ಮೋಸವು ಇಷ್ಟು ಅಷ್ಟು ಎಂದು ಹೇಳಲು ಅಸಾಧ್ಯವೇ ಸರಿ.

೨೭೭

ಕಲ್ಲುಕಿಚ್ಚುನಟ್ಲು ಚಲ್ಲಕೀಯಗಲೇರು, ಕೊಳ್ಳಕಿಚ್ಚುನಟ್ಲು ಗುರುವುಕೀರು.
ಪೊಲತುಲಕಿಡುನಟ್ಲು ಪುಣ್ಯಾನಿಕೀಯರು, ವಿಶ್ವದಾಭಿರಾಮ ವಿನುರ ವೇಮ.

ಹೆಂಡಕೀಯುವಂತೆ ಹಾಲಿಗೀಯರಯ್ಯ.
ಹುಂಜಕೀಯುವಂತೆ ಗುರುವಿಗೀಯರಯ್ಯ.
ರಂಡೆಗೀಯುವಂತೆ ಪುಣ್ಯಕೀಯರಯ್ಯ.
ವಿಶ್ವದಾಭಿರಾಮ ಕೇಳು ನೇಮ

ಹೆಂಡ ಮತ್ತು ಹಾಲು ಎರಡೂ ಪೇಯಗಳೇ. ಹಾಲಿನ ಸೇವನೆಯಿಂದ ದೇಹಾರೋಗ್ಯ ವರ್ಧಿಸುತ್ತದೆ. ಹೆಂಡದ ಸೇವನೆಯಿಂದ ತುರ್ತು ಸುಖ ದೊರೆಯುತ್ತದೆ. ನರನಾಡಿಗಳೂ ಗ್ರಂಥಿಗಳೂ ಉದ್ರೇಕಗೊಂಡು, ಶಕ್ತಿ ಹ್ರಾಸವಾಗಿ, ಶಕ್ತಿಗುಂದುವುದು. ಆದರೂ ಮನುಷ್ಯ ಕ್ಷಣಕಾಲ ಸುಖವೀಯುವ. ಮದ್ಯವನ್ನೇ ಬಯಸುತ್ತಾನೆ. ಅದಕ್ಕಾಗಿ ಹಣ ಸುರಿಯುತ್ತಾನೆ. ಹುಂಜದ ಕಡಿದಾಟ ನೋಡಲು ಬಹಳ ದುಡ್ಡು ಖರ್ಚು ಮಾಡುತ್ತಾರೆ. ಆದರೆ ವಿದ್ಯೆ ಕಲಿತು ಸತತ ಆನಂದದಲ್ಲಿರಬಹುದಾದ ಪರಿಯನ್ನು ತಿಳಿಸಿಕೊಡುವ ಗುರುವಿಗಾಗಿ ಏನನ್ನೂ ಮಾಡಬಯಸರು ಕ್ಷಣಿಕ ಭೋಗತೃಪ್ತಿ ನೀಡುವ ರಂಡೆಗೆ

ಬಹಳಷ್ಟು ವೆಚ್ಚ ಮಾಡುತ್ತಾರೆ. ಆದರೆ ಯಾವಾಗಲೂ ನಮ್ಮ ನೆರವಿಗೆ ಉಳಿಯುವ ಪುಣ್ಯ ಕಾರ್ಯಕ್ಕಾಗಿ ಏನನ್ನೂ ಕೊಡುವದಿಲ್ಲ. ಲೋಕದ ನಡೆವಳಿಯು ವಿಚಿತ್ರವಾಗಿದೆ.

೨೭೮

ವೆಂಟ ಮೇಳಮುನಕು ಬೆದ್ದಗಾನಿತ್ತುರು, ಕೋತು ಮೇಳ ಮುನಕು ಬೋಕ ನೀರು,
ಪುಂಡ ಮುಸುರುನೀಗ ಪುವ್ವಪೈವ್ರಾಲುನಾ? ವಿಶ್ವದಾಭಿರಾಮ ವಿನುರ ವೇಮ.

ಸ್ತ್ರೀಮೇಳಕೆ ಭೂರಿ ಧನವ ಸುರಿವ ಜನರು
ಪುರುಷಮೇಳ ಕಿನಿತು ಕೈ ನೀಡರು.
ಹುಣ್ಣು ಬಯಸುವ ನೊಣ ಹೂವಿಗೆ ಹಾರುವುದೆ?
ವಿಶ್ವದಾಭಿರಾಮ ಕೇಳು ವೇಮ.

ಕೇಳು ಅಭಿರುಚಿಯಲ್ಲಿ ಆಸಕ್ತನಾದವನು ಮೇಲು ಅಭಿರುಚಿಯ ಗೊಡವೆಯನ್ನೇ ತೊರೆಯುತ್ತಾನೆ.

ನೊಣ ಹೊಲಸು ನಾರುವ ಹುಣ್ಣಿನ ಮೇಲೆ ಕುಳಿತು ಕೊಳ್ಳಬಯಸುತ್ತಿದೆ. ಅಲ್ಲಿಯೇ ತನ್ನ ಆಹಾರ ಹುಡುಕುತ್ತದೆ. ಆದರೆ ಅದು ಹೂವಿನ ಮೇಲೆ ಕುಳಿತು ಮಧು ಹೀರಬಯಸದು.

ಹೆಣ್ಣಿನ ಭೋಗದಾಸೆಗೆ ಬಿದ್ದವನು ನೊಣದಂತೆ. ಸ್ತ್ರೀ ಮೇಳಕ್ಕೆ ಎಷ್ಟು ಬೇಕಾದರೂ ಹಣ ವೆಚ್ಚಮಾಡುತ್ತಾನೆ. ಆದರೆ ಒಳ್ಳೆಯ ಪುರುಷಮೇಳವಾದರೂ ಎಷ್ಟೂ ಸಹಾಯಮಾಡುವದಿಲ್ಲ. ಗಾನ ನೃತ್ಯಗಳ ರುಚಿ ಅವರದಲ್ಲ. ಹೆಣ್ಣಿನ ಭೋಗಾಸಕ್ತಿಯಷ್ಟೇ ಅವರದು.

೨೭೯

ಶ್ರೀಕರ ಪರ ತತ್ತ್ವಶೀಲುಡೌ ವೇಮನ, ಪಲ್ಕಿನಟ್ಟ ವೇಲ ಪದ್ಯಮುಲನು,
ಲೋಕಮುಂದು ಜದಿವಿ ಲೊವೆಲಿಬಾಯುಡೀ, ವಿಶ್ವದಾಭಿರಾಮ ವಿನುರ ವೇಮ

ಶ್ರೀಕರ ಪರತತ್ತ್ವಶೀಲನೈ ವೇಮನ,
ಲಿಖಿತ ಸಾವಿರಾರು ಪದ್ಯಸಮುಚ್ಚಯವ,
ಲೋಕವೆಲ್ಲ ಓದಿ ಒಳಹೊರತಮುವಳಿಯಲಿ,
ವಿಶ್ವದಾಭಿರಾಮ ಕೇಳು ವೇಮ.

ಶ್ರೀ ಯೆಂದರೆ ಸಂಪತ್ತು, ಮೋಕ್ಷ; ಕಲ್ಯಾಣ. ಪರತತ್ತ್ವವೆಂದರೆ ಲೋಕದ (ಇಹದ) ನಡೆವಳಿಯನ್ನು ದಾಟಿದ, ಆತ್ಮಿಕ (ಪರದ) ಸಂಬಂಧದ ತತ್ತ್ವಗಳು.

ವೇಮನ, ಕಲ್ಯಾಣಕರವಾದ ಆತ್ಮಿಕ ಸಂಬಂಧದ ತತ್ತ್ವಗಳಲ್ಲಿ ಆಸಕ್ತಿಯುಳ್ಳವನು. ಅವನಿಂದ ವಿರಚಿತವಾದ ಸಾವಿರಾರು ಪದ್ಯಗಳನ್ನು ಜನರೆಲ್ಲ ಓದಿ ತಿಳಿದುಕೊಂಡರೆ, ಲೋಕವಲ್ಲಿಯ ಹೊಡೆದಾಟ ಹಿಂಸೆಗಳೂ, ಮಾನಸಿಕವಾದ ಕ್ರೋಧ ಅಸೂಯೆ ಇತ್ಯಾದಿ ತಮಸ್ಸಿನ ಪ್ರಕ್ರಿಯೆಗಳೂ ಇಲ್ಲದಂತಾಗುವವೆಂದು ಹಾರೈಸುವೆ.

ವೇಯಿ ಪದ್ಯಮುಲು ವಿವೇಕಿಯೈ ಭಕ್ತಿತೊ, ಬಠನುಜಿಯುನಟ್ಟಿ ಭಕ್ತನಕುನು,
ಬಾಯಕುಂಡು ಮೊಕ್ಷಪದ ಮರಚೇತಿದೈ, ವಿಶ್ವದಾಭಿರಾಮ ವಿನುರ ವೇಮ.

ಸಾಸಿರ ಪದ್ಯಗಳ ಸದ್ಭಕ್ತಿ ವಿವೇಕದಿ
ಪಠಿಸುವಂಥ ಪರಮ ಭಕ್ತ ಜನಕೆ,
ಅವಗತವದು ಮೋಕ್ಷ ಅವರಂಗೈಯೊಳಗೆ
ವಿಶ್ವದಾಭಿರಾಮ ಕೇಳು ವೇಮ.

ಮೋಕ್ಷವೆಂದರೆ ಪರಮ ಮುಕ್ತಿ. ಜಡದಿಂದ ಚೇತನ ಬೇರೆಯೆಂಬ ತಿಳಿವಿನ ಅನುಭವ. ಆತ್ಮ ಬೇರೆ ದೇಹ ಬೇರೆ ಎಂಬ ಹೊಳಹು. ಅದರೊಂದಿಗೇನೇ ಪರಮಾತ್ಮನ ಹೊಳಹು. ಸತ್-ಚಿತ್-ಆನಂದ. ಸಚ್ಚಿದಾನಂದ. ಸ್ಥಿರವಾಗಿ ಈ ಕಲ್ಪನೆ ನಿಲ್ಲುವಂತೆ ಮಾಡಲು ವೇಮನ ವಿರಚಿತ ಪದ್ಯಗಳಲ್ಲಿ ಸಾವಿರದಷ್ಟಾದರೂ, ಭಕ್ತಿಪುರಸ್ಸರವಾಗಿ, ಒಳಿತು ಕೆಡುಕು ತಿಳಿಯುವ ವಿವೇಕದಿಂದ ಪಠಿಸಬೇಕು. ಅಂಥ ಭಕ್ತರಿಗೆ ಮೋಕ್ಷದ ಅನುಭವ ತೀರ ಸುಲಭಸಾಧ್ಯ.



ಸಾಮಾಜಿಕ ವಿಭಾಗ

೨೬೧

ಸತ್ಯ ಮನುರಿಯುಂಡ ಜ್ಞಾನಮನುರಿಯುಂಡು ಜ್ಞಾನಮನುರಿಯುಂಡ ಸತ್ಯಮುಂಡು,
ಜ್ಞಾನಸತ್ಯಮುಲುನು ಸಮಮೈನದ್ವಿಜುಂಡಗು ವಿಶ್ವದಾಭಿರಾಮ ವಿನುರ ವೇಮ.

ಸತ್ಯ ಕಂಡರಿವುದೆ ಜ್ಞಾನದರಿವು ಕಣಾ.
ಜ್ಞಾನದರಿವಾದೊಡೆ ಸತ್ಯದರಿವು
ಜ್ಞಾನ ಸತ್ಯ ಸಮವಾಗಿಹ ದ್ವಿಜನೆನಿಪ
ವಿಶ್ವದಾಭಿರಾಮ ಕೇಳು ವೇಮ

ನಿಜವಾದ ಸತ್ಯಸ್ವರೂಪವನ್ನು ಅರಿತು ಗುರುತಿಸುವುದೇ ಬ್ರಹ್ಮಜ್ಞಾನ, (ಇದನ್ನೇ ಇನ್ನೊಂದು ಬಗೆಯಾಗಿ ಹೇಳುವುದೆಂದರೆ,) ಬ್ರಹ್ಮಜ್ಞಾನವಾದೊಡನೆ ಸತ್ಯದ ಸ್ವರೂಪ ಗೋಚರಿಸುವುದು. ಇಂಥ ಸತ್ಯಸ್ವರೂಪ-ಬ್ರಹ್ಮಜ್ಞಾನಗಳನ್ನು ಸಮಸ್ಥಿತಿಯಲ್ಲಿ ಕಾಣುವವನೇ ದ್ವಿಜನೆಂದು ಕರೆಯಿಸಿಕೊಳ್ಳುವನು. (ದ್ವಿಜ ಎಂದರೆ ಎರಡನೆಯ ಸಲ ಜನಿಸಿದವನು. ಅಂದರೆ ಮೊದಲು ತನ್ನ ತಾಯಿಯ ಗರ್ಭದಿಂದ ಜನಿಸುತ್ತಾನೆ. ತಾಯಿ ಸ್ತ್ರೀಗೆ ವೇದಾಧ್ಯಯನದ ಹಕ್ಕಿಲ್ಲ. ಆದ್ದರಿಂದ ಶೂದ್ರಳು. ಒಂದೇ ಜನ್ಮದವರೆಲ್ಲ ಶೂದ್ರರು. ಉಪನಯನ ಸಂಸ್ಕಾರದಿಂದ ಮಗು ಬ್ರಹ್ಮಚಾರಿ (ಬ್ರಹ್ಮಜ್ಞಾನದ ಅರ್ಥಿ) ಯಾಗಿ ಉಪಾಸಕ ಲೋಕದಲ್ಲಿ ಇನ್ನೊಮ್ಮೆ ಜನ್ಮತಾಳಿದಂತೆ ಆಗುತ್ತದೆ. ಅಲ್ಲಿ ವೇದ-ಶಾಸ್ತ್ರ ಬೋಧಿಸುವ ಗುರು, ಅವನ ತಂದೆ. ವೇದದೇವತೆ ಸಾವಿತ್ರಿ, ಅವನ ತಾಯಿ. ಎಂದು ವಸಿಷ್ಠ ಧರ್ಮ ಸೂತ್ರದಲ್ಲಿ ಹೇಳಿದೆ. " ದೇವಿ ಸಾವಿತ್ರಿ. ಇವನು ನಿನ್ನ ಬ್ರಹ್ಮಚಾರಿ. ಇವನನು ರಕ್ಷಿಸು. ಇವನು ಸಾಯದಿರಲಿ " ಎಂದು ಉಪನಯನದ ಕಾಲಕ್ಕೆ ದೇವಿಯನ್ನು ಪ್ರಾರ್ಥಿಸುತ್ತಾರೆ. ವೇದ-ಶಾಸ್ತ್ರ ಕಲಿಯಲು ಉಪನಯನ ಸಂಸ್ಕಾರ ಹೊಂದಿ, ಎರಡನೆ ಜನ್ಮ ತಾಳಿ ಬ್ರಹ್ಮಚಾರಿಯಾಗುತ್ತಾನೆ, ಹುಡುಗ. ಅಂದಿನಿಂದ ಅವನು ದ್ವಿಜ. ವೇದ ಓದದಿದ್ದರೆ ಬ್ರಹ್ಮಸ್ಪೃಷ್ಟ; ಶೂದ್ರ. ಎಂದು ವೈದಿಕ ಪಂಥದವರ ಕಲ್ಪನೆ. ಕುಲಗೋತ್ರ ನಿರ್ಧರಿಸಲು ಕಟ್ಟುವ ಜನಿವಾರ ಇನ್ನೊಂದು ಸಂಸ್ಕಾರ ಸಂಕೇತ.

೨೬೨

ಹೃದಯಮುಂದುನುನ್ನ ಯೀಶುನಿದೆಲಿಯಕ, ಶಿಲಲಕೆಲ್ಲಮ್ರೊಕ್ಕು ಜೀವುಲಾರ !
ಶಿಲಲನೇಮಿಯುಂದು ? ಜೀವುಲಂದೇಕಾಕ, ವಿಶ್ವದಾಭಿರಾಮ ವಿನುರ ವೇಮ

ಹೃದಯದೊಳಿರುತಿಪ್ಪ ಈಶನನು ತಿಳಿಯದೆ,
ಧರಣಿ ಶಿಲೆಗೆ ನಮಿಪ ಜೀವಿಗಳೇ !
ಕಲ್ಲಿನೊಳೇನುಂಟು? ಜೀವದೊಳಿಹುದೆಲ್ಲ.
ವಿಶ್ವದಾಭಿರಾಮ ಕೇಳು ನೇಮ.

(ವೇದೋಪನಿಷತ್ತುಗಳಲ್ಲಿ ದೇವನನ್ನು ಸರ್ವವ್ಯಾಪಿ, ಸರ್ವಭೂತಾಂತರಾತ್ಮ ಕೇವಲ ನಿರ್ಗುಣ ಎಂದು ವರ್ಣಿಸಲಾಗಿದೆ.)

ಈಶನು ತಂತಮ್ಮ ಹೃದಯದಲ್ಲಿಯೇ ಇರುತ್ತಿದ್ದರೂ, ಪಾಮರ ಜೀವಿಗಳು ಕಲ್ಲಿನ ಪ್ರತಿಮೆ ಕಟಿದು ಕೈಮುಗಿಯುವಲ್ಲಿಯೇ ತೃಪ್ತಿ ಹೊಂದುತ್ತಾರೆ ! (ಆದರೆ ಅನ್ಯ ಜೀವಿಗಳನ್ನೇ ಮರೆಯುತ್ತಾರೆ.) ಎಲ್ಲವೂ ಜೀವಿಯ ಹೃದಯದಲ್ಲಿದೆಯಲ್ಲದೆ, ಕಲ್ಲಿನಲ್ಲಿ ಏನೂ ಇಲ್ಲ.

೨೮೩

ಶಿಷ್ಯವರ್ಗಮುನಕು ಶಿವುಜೂಪನೇರಕ, ಕಾನಿಮತಮು ಲೋನ ಗಲಪುನಟ್ಟ,
ಗುರುನಿಯೆರುಕ ಯರಯಗ್ರುಡ್ಡಿದ್ದುಜೊನ್ನರಾ ವಿಶ್ವದಾಭಿರಾಮ ವಿನುರ ವೇಮ.

ಶಿಷ್ಯವರ್ಗಕೆಲ್ಲ ಶಿವರೂಪ ತಿಳಿಸದೆ,
ಸಲ್ಲದ ಮತಕಟ್ಟು ನೂಕುವವರೆ '
ಗುರುತರಿಯದೆ ನಿಲುವ ಹೊಕ್ಕ ಕುರುಡೆತ್ತಲ !
ವಿಶ್ವದಾಭಿರಾಮ ಕೇಳು ನೇಮ

(ಜಾತಿಮತಗಳ ವ್ರತ-ನೇಮಗಳ ಕಟ್ಟುಪಾಡಿಗೆ ಸತ್ಯರೂಪಿ ಶಿವನು ಬದ್ಧನಾಗಿಲ್ಲ. ಆದರೂ) ತಮ್ಮ ಶಿಷ್ಯರಾದ ಜನರಿಗೆ ಶಿವನ ಸರ್ವಭೂತಾಂತರಾತ್ಮ ಸ್ವರೂಪ ತಿಳಿಸದೆ, ಅಲ್ಲ ಸಲ್ಲದ (ವ್ರತಾಚಾರಗಳಿಂದ ಜನರನ್ನು ವಿಂಗಡಿಸುವ) ಮತ-ಪಂಥಗಳನ್ನು ಸ್ಥಾಪಿಸುವ ಅಯ್ಯನವರೇ, ನಿಮ್ಮ ಸ್ಥಿತಿ, ಮೊದಲೇ ಹಾದಿ ಗೊತ್ತಿಲ್ಲದ, ಮೇಲೆ ಕುರುಡಾದ ಎತ್ತು,ಎತ್ತರವಾಗಿ,ದಟ್ಟವಾಗಿ ಬೆಳೆದ ಜೋಳದ ನಿಲುವಿನಲ್ಲಿ ಹೊಕ್ಕಂತೆ ಆಗುತ್ತದೆಯಷ್ಟೇ.

೨೮೪

ಗುರುವುಲೇಕವಿದ್ಯೆ ಗುರುತುಗಾದೊರಕದು, ನೃಪತಿಲೇಕ ಭೂಮಿ ತೃಪ್ತಿ ಕಾದು,
ಗುರುವು ವಿದ್ಯಲೇಕ ಗುರುತರದ್ವಿಜುಡೌನೆ ? ವಿಶ್ವದಾಭಿರಾಮ ವಿನುರ ವೇಮ.

ಗುರುವಿಲ್ಲದೆ ವಿದ್ಯೆ ಗುರುತಾಗಿ ಸಿಗದು,
ದೊರೆಯಿಲ್ಲದೆ ಧರೆಯು ತೃಪ್ತಿ ಪಡದು;
ಗುರುತರ ದ್ವಿಜನೆಂತು ಗುರುವಿದ್ಯೆ ಹೊರತು ?
ವಿಶ್ವದಾಭಿರಾಮ ಕೇಳು ನೇಮ.

(ಕೇವಲ ಅನುಭವದಿಂದ ತಿಳಿಯಬಹುದಾದ) ಆತ್ಮವಿದ್ಯೆಯನ್ನು ಅರಿಯುವುದು ಗುರುವಿನ ಮಾರ್ಗದರ್ಶನವಿಲ್ಲದೆ ಕಷ್ಟಸಾಧ್ಯ. ಅದೆಂತೆಂದರೆ, ನಾಡಿನಲ್ಲಿ ಸುಖ-ಶಾಂತಿಗಳು ನೆಲೆಸಬೇಕಾದರೆ ಪ್ರಜೆಗಳನ್ನು ನಿಯಂತ್ರಿಸಿ ಮಾರ್ಗದರ್ಶನ ಮಾಡಬಲ್ಲ ಅರಸು ಅವಶ್ಯ ತಾನೇ ? ಅಂದಮೇಲೆ ಅಂಥ ಗುರುವನ್ನೂ, ಅಂಥ ಆತ್ಮ ವಿದ್ಯೆಯನ್ನೂ ಪಡೆಯದೆ, ಶ್ರೇಷ್ಠ ದ್ವಿಜನೆಂತು ಆಗಬಲ್ಲನು ?

೨೮೫

ಶೂದ್ರತನಮು ಬೋಯೆ ಶೂದ್ರುಡಗಾನನಿ, ದ್ವಿಜುಡನುಕೊನುಟಿಲ್ಲ ದೆಲಿವಿಲೇಮಿ,
ಇತ್ತ ಡೆಸಗು ಪಸಿಡಿ ಕೀಡನವಚ್ಚುನಾ? ವಿಶ್ವದಾಭಿರಾಮ ವಿನುರ ವೇಮ.

"ಶೂದ್ರತನ ಹೋಯಿತು; ಶೂದ್ರನು ನಾನಲ್ಲ;
ದ್ವಿಜನು ನಾನು" ಎನಲು ಮೌಢ್ಯವಷ್ಟೆ !
ಹೋಲಿಕೆಯಿರಲು ಹಿತ್ತಾಳೆ ಸ್ವರ್ಣಸಮವೆ ?
ವಿಶ್ವದಾಭಿರಾಮ ಕೇಳು ನೇಮ.

(ಹುಟ್ಟಿನಿಂದ ಎಲ್ಲರೂ ಶೂದ್ರರು. ಸಾಂಸಾರಿಕ ಜಗತ್ತಿನ ಶೂದ್ರನು ಬ್ರಹ್ಮನ ಬಳಿ ಸಾರುವ (ಉಪ-ನಯನ) ಸಂಸ್ಕಾರ ನಡೆಸಿ, ಸಾಧಕ ಜಗತ್ತಿನಲ್ಲಿ ಅವತರಿಸುತ್ತಾನೆ ಈಗ ಎರಡನೇ ಜನ್ಮಪಡೆದನೆಂಬ ಗ್ರಹಿಕೆಯಿಂದ ದ್ವಿಜನೆನಿಸುತ್ತಾನೆ. (ಉಪ-ನಯನದ ನಂತರ,) ' ನನ್ನ ಶೂದ್ರತನ ಕಳೆಯಿತು. ನಾನು ಶೂದ್ರನಲ್ಲ; ದ್ವಿಜ" ಎಂದು ಹೇಳಿದರೆ ಕೇವಲ ಮೂರ್ಖತನವೆನಿಸುತ್ತದೆ. ಏಕೆಂದರೆ ಬ್ರಹ್ಮಜ್ಞಾನ ಅರಿತವನಂತೆ ವೇಷ-ಭೂಷಣ ಧರಿಸಿ, ಒಣ ಆಚಾರಗೈದ ಮಾತ್ರಕ್ಕೆ ಜ್ಞಾನ-ಅನುಭವವಿಲ್ಲದೆ ಬ್ರಹ್ಮಜ್ಞಾನಿಗೆ ಸಮನಾಗಿ ನಿಲ್ಲುವುದೆಂತು ?

೨೮೬

ಪಚ್ಚವಿಲ್ತು ಚೇತ ಗ್ರಚ್ಚರಜನುಲೆಲ್ಲ, ದ್ರಚ್ಚನಾಡಬಡಿರಿ ಧರಣಿ ಲೋನ,
ಗುಲಜು ಡೆವ್ವಡಿಂದು ಗುಲಹೀನು ಡೆವ್ವಾಡು,ವಿಶ್ವದಾಭಿರಾಮ ವಿನುರ ವೇಮ

ಹಚ್ಚ ಹಸಿರು ಬಾಣ ಚುಚ್ಚಿ ದೊಡನೆ ಮೋಹ
ವುದಿಸಿ ಲೋಕದೆದೆಯ ಕಡೆಯಲು ಸುಧೆ;
ಇಂತು ಕುಲಜನಾರು ? ಕುಲಹೀನನದಾರು ?
ವಿಶ್ವದಾಭಿರಾಮ ಕೇಳು ನೇಮ.

(ಹಸಿರು ಮುರಿಯುವ ತೋಟದಲ್ಲಿ ಪ್ರಣಯಿಗಳು ಹೂವುಗಳನ್ನೂ, ಹಸಿರೆಲೆಗಳನ್ನೂ ಒಗೆದಾಡುತ್ತ ಒಬ್ಬರೊಬ್ಬರ ಮನಸ್ಸನ್ನು ಅರಳಿಸಿ ಕಾಮಚೇಷ್ಟೆಗಿಳಿಯುವುದರಿಂದ ಕವಿಕಲ್ಪನೆಯಲ್ಲಿ ಮನ್ಮಥನಿಗೆ ಪುಷ್ಪ, ಹಸುರೆಲೆಗಳೇ ಬಾಣಗಳಾಗಿವೆ.)

ಮನ್ಮಥನು ತನ್ನ ಹಸಿರೆಲೆಯ ಬಾಣದಿಂದ ಘಾಸಿಗೊಳಿಸಿದೊಡನೆ ಮೋಹವುದಿಸಿ, ಪ್ರಪಂಚದ ಸಕಲ ಜನರ ಮನಸ್ಸನ್ನು ಮಥಿಸಿ ಸುಖ-ಸಂತೃಪ್ತಿ ಈಯುವನು. ಅಂದ ಮೇಲೆ (ಕಾಮಚೇಷ್ಟೆ ಕುಲದೆಣಿಕೆಯಿಲ್ಲದೆ ಆವರಿಸುವುದರಿಂದ ಸಂಸಾರ ವಿಮುಖರಾಗಿ ವಿರಕ್ತಿ ಮಾರ್ಗ ಪಡೆಯುವ ಮಾನದಂಡದಿಂದ) ಒಬ್ಬನನ್ನು ಒಳ್ಳೇ ಕುಲದಲ್ಲಿ ಹುಟ್ಟಿದವನೆಂದೂ ಇನ್ನೊಬ್ಬನನ್ನು ಕುಲಹೀನನೆಂದೂ ಹೇಗೆ ಕರೆಯಬಹುದು ? (ಬ್ರಹ್ಮ ಜಿಜ್ಞಾಸುವು ದ್ವಿಜನಾಗಿ, ಬ್ರಹ್ಮಜ್ಞನು ಬ್ರಾಹ್ಮಣನಾಗಿ ಇರುವುದಾದರೆ, ಉಪನಯನದಂತಹ ಇತರ ಧರ್ಮನಿಬಂಧನೆಗಳನ್ನು ವಿಧಿಸುವ ಸೂತ್ರಗಳು ದ್ವಿಜರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಕೆಳವರ್ಣದವರೆನ್ನಲಾದ ಶೂದ್ರ ಸ್ತ್ರೀಯರೊಡನೆ ಕಾಮಚೇಷ್ಟೆಗಿಳಿಯಲು,

ಕಾಮ್ಯಮಿತಿಸಿವೆ. ಋಷಿಮುನಿಗಳು ಕಾಜೇಷ್ಟೆಗಿಳಿದಿದ್ದಾರೆ. ಅಂದ ಮೇಲೆ, ಸಂಸಾರಿ ವಿಟರು ಬ್ರಾಹ್ಮಣರಾಗಲಿಲ್ಲ. ದ್ವಿಜರಾಗಲಿಲ್ಲ. ಇತರರು ಶೂದ್ರರೂ ಅಲ್ಲ, ಬ್ರಾಹ್ಮಣ ಶೂದ್ರ ಶಬ್ದಗಳಿಗೆ ಮೇಲು ಕೀಳಿನ ಅರ್ಥವಿದ್ದರೆ.)

೨೮೭

ಜಾತುಲಂದು ಮಿಗುಲಜಾತಿಯೇದೆಕ್ಕುವೊ, ಯೆರುಕಲೇಕ ತಿರುಗ ನೇಮಿ ಫಲಮು?
ಎರುಕಗಲುಗುವಾಡೆ ಹೆಚ್ಚಿನ ಕುಲಜುಂಡು ವಿಶ್ವದಾಭಿರಾಮ ವಿನುರ ವೇಮ.

ಜಾತಿಯೊಳಗೆ ಮೇಲು-ಜಾತಿ ಕೀಳು ಎಲ್ಲಿ?
ನಿಜವರಿಯದೆ ತಿರುಗಲೇನು ಫಲವು?
ಇದನರಿತ ಮನುಜನ ಕುಲನೆ ಮಿಗಿಲುಕಣಾ!
ವಿಶ್ವದಾಭಿರಾಮ ಕೇಳು ವೇಮ.

(ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಗಳು ಅವರವರ ಗುಣ-ಕರ್ಮದಿಂದ ಉಂಟಾಗುತ್ತವೆ. ಆದರೆ ಅವರ ಹುಟ್ಟಿನಿಂದಲ್ಲ. ಅದೆಂತೆಂದರೆ, "ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ, ಶ್ರುತೇನ ಶ್ರೋತ್ರಿಯಶ್ಚೈವ, ಬ್ರಹ್ಮಂ ಚರತಿ ಬ್ರಾಹ್ಮಣಃ". ವ್ಯಕ್ತಿ ತನ್ನ ಗುಣಕ್ಕೆ ಮತ್ತು ತಾನು ಗೈಯಬಲ್ಲ ಧ್ಯಾನ-ಕರ್ಮಗಳಿಗೆ ತಕ್ಕ, ವರ್ಣಕ್ಕೇರಬಹುದು. ಕ್ಷತ್ರಿಯರಾದ ವಿಶ್ವಾಮಿತ್ರ-ಜನಕಾದಿಗಳು ಮೂದಿಗ ವಸಿಷ್ಠ, ಮಾತಂಗಿಯ ಮಗ ಮಾರ್ಕಂಡೇಯ, ಬೋಯಿತಿಯ ಮಗ ವ್ಯಾಸ, ನಾವಿದ ಕೌಂಡಿಲ್ಯ, ಮಚ್ಚಿಗ ದೂರ್ವಾಸರು ಬ್ರಾಹ್ಮಣರಾದಂತೆ. ಅದು ಕಾರಣ, ವಿರಾಟ್ ಪುರುಷನ ಶಿರ, ಭುಜ, ತೊಡೆ, ಪಾದಗಳಿಗೆ ಹೋಲಿಸಲಾಗುವ ಚತುರ್ವರ್ಣಗಳು ಸಕ್ಕರೆ ಗೊಂಬೆಯ ಅಂಗವಿಭಾಗದಂತೆ ಒಂದೇ ಮಟ್ಟದಲ್ಲಿವೆ. ಶಿರದಲ್ಲಿ ಸಿಹಿಯಿಲ್ಲ; ಪಾದದಲ್ಲಿ ಕಹಿಯಿಲ್ಲ. ಅದು ಕಾರಣ....) ಗುಣ-ಕರ್ಮದಿಂದ ನಿರ್ಮಿತವಾದ ಜಾತಿಗಳಲ್ಲಿ ಯಾವುದೊಂದು ಮೇಲಾಗಲಿ ಇಲ್ಲವೆ ಕೀಳಾಗಲಿ ಇರದು. ಈ ಸತ್ಯವನ್ನು ತಿಳಿಯದೆ ಸುಮ್ಮನೆ ಈ ಜೀವನ ಯಾತ್ರೆ ಗೈದರೇನು? ಇದರ ಮರ್ಮವನ್ನು ಬೇಧಿಸಬಲ್ಲ ಮನುಜನ ಕುಲವೇ ಶ್ರೇಷ್ಠವಾದ ಕುಲವೆಂದು ಗಣಿಸಬಹುದು.

೨೮೮

ಮೂಲಮೂಲಕಾಡು ನುಹಿಮೀದನೇಪ್ರೊದ್ದು, ಮಾಟದಿರುಗುವಾಡೆ ಮೂಲಗಾಕ,
ವಾನಿಮೂಲಯನ್ನ ವಾಡೆಪೊ ಪೆನುಮೂಲ ವಿಶ್ವದಾಭಿರಾಮ ವಿನುರ ವೇಮ.

ಹೊಲೆಯ ಹೊಲೆಯನಲ್ಲ ಜಗದಿ ಜನುಮದಿಂದ;
ಮಾತು ಬದಲಿಸುವನೆ ಹೊಲೆಯನೆಂದ;
ಹೊಲೆಯರೆಂದು ನರರ ಕರೆಯುವವನೆ ಹೊಲೆಯ,
ವಿಶ್ವದಾಭಿರಾಮ ಕೇಳು ವೇಮ

ಜಗತ್ತಿನಲ್ಲಿ ಹೊಲೆಯರೆನಿಸುವದರು ನಿಜವಾಗಿ ಹೊಲೆಯರೇ ಅಲ್ಲ. ಏಕೆಂದರೆ ಜನ್ಮದಿಂದ ಯಾರಿಗೂ ಹೊಲೆತನ [ಮೈಲಿಗೆ] ಬರುವುದಿಲ್ಲ. [ಆದರೆ ಇಂದು ಹೊಲೆಯ ಎಂಬ ವರ್ಗ ನಿರ್ಮಾಣವಾಗಿರುವುದಕ್ಕೆ ಕೆಲ ಸ್ವಾರ್ಥಿ ಜಾತ್ಯಂಧರು ವೇದದಲ್ಲಿರದ ಜಾತಿ-

ವರ್ಣಗಳ ಕುಕಲ್ಪನೆಯನ್ನು ಸ್ಮೃತಿ ಪುರಾಣಗಳ ಮುಖಾಂತರ ಮಾಡಿರುವುದೇ ಕಾರಣವಾಗಿದೆ. ಕಾರಣ ವೇದಗಳಲ್ಲಿ ತಿಳಿಸಿದ, ಮಾತು ಬದಲಿಸುವವನೇ ನಿಜವಾಗಿ ಹೊಲೆಯನಾಗಿದ್ದಾನೆ. (ಇದಲ್ಲದೆ ವೇಶ್ಯೆಯಾದ ಊರ್ವಶಿಯ ಮಗ, ಮಾದಿಗ ಕನ್ಯೆ ಅರುಂಧತಿಯ ಗಂಡನಾದ, ಮಾದಿಗನಾದ ವಸಿಷ್ಠ ಮುನಿಯೇ ರಚಿಸಿದ ಧರ್ಮಸೂತ್ರದಲ್ಲಿ ಅಂತ್ಯ ಮತ್ತು ಅಂತ್ಯವಾಸಿನ ಪದಗಳನ್ನು ಬಳಸಿ ಹೊಲೆಯ ಶಬ್ದಕ್ಕೆ ಹಾದಿ ಮಾಡಿಕೊಟ್ಟಿರುವುದರಿಂದ) ಭೂಮಿಯ ಮೇಲಿನ ಜನರೆನ್ನು ಹೊಲೆಯರೆಂದು ಕರೆದವರೇ ಹೊಲೆಯರು.

೨೮೯

ಎನ್ನಿಮತಮುಲ್ಕಿನ ನೇಮಂತ್ರಮ್ಮೆನನು, ಸತ್ಯಮಿಂತಲೇಕ ಜಾಡವಿಡಡು,
ಸತ್ಯಮುನ್ ಗಲಿಗಿನ ಜಗತಿಲೊದ್ದಿಜಡಗ ವಿಶ್ವದಾಭಿರಾಮ ವಿನುರ ವೇಮ

ಮತ ವೆಂತಿರಲೇನು? ಮಂತ್ರವಾವುದೇನು?
ಸತ್ಯವಿನಿತು ಇರದೆ, ಜಾಡ್ಯ ಬಿಡದು.
ಸತ್ಯವನೇ ತಿಳಿಯೆ, ಜಗದಿ ದ್ವಿಜನಪ್ಪ.
ವಿಶ್ವದಾಭಿರಾಮ ಕೇಳು ವೇಮ

(ಬ್ರಹ್ಮಜ್ಞಾನವರಿಯುವ ಮಾರ್ಗ ತೋರುವಂಥ) ಮತವು (ಲೌಕಿಕ, ವೈದಿಕ, ಆಧ್ಯಾತ್ಮಿಕ, ಅತಿಮಾರ್ಗಿಕ, ಮಾಂತ್ರಿಕ, ಚಾರ್ವಾಕ, ಇಸ್ಲಾಂ,ಕ್ರೈಸ್ತ, ಝರೊತೋಷ್ಟ್ರಿಯಾ ಇತ್ಯಾದಿ ಮತಗಳಲ್ಲಿ) ಯಾವುದಾದರೇನು? ದೇವರನ್ನು ಕುರಿತು ಪಠಿಸುವ ಮಂತ್ರ ಯಾವ ಭಾಷೆಯೊಳಿದ್ದರೇನು? ಹೃದಯದೊಳಗಿನ ಬ್ರಹ್ಮ ಎಲ್ಲೆಡೆಇರುವ ಸತ್ಯವನ್ನು ಕೊಂಚವಾದರೂ ತಿಳಿಯದಿದ್ದರೆ, ಮನದ ಜಾಡ್ಯ ಹೋಗಲಾರದು. ಸರ್ವದಲ್ಲಿ ಬ್ರಹ್ಮನಿರುವನೆಂಬ ಸತ್ಯ ತಿಳಿದೊಡನೆ (ಹುಟ್ಟಿನಿಂದ ಶೂದ್ರನಾದ) ನರನು ಬ್ರಹ್ಮಪ್ರಪಂಚದಲ್ಲಿ ಚಲಿಸತೊಡಗುವುದರಿಂದ ದ್ವಿಜನಾಗುವನು.

೨೯೦

ರಾಮನಾಮು ಪಠನಚಿ ಮಹಿ ವಾಲ್ಮೀಕಿ, ಕರಗಜೋಯಡಯ್ಯು ಬಾಪಡಯ್ಯೆ,
ಕುಲಮುಘನಮುಕಾದು ಗುಣಮು ಘನಂಬುರಾ, ವಿಶ್ವದಾಭಿರಾಮ ವಿನುರ ವೇಮ.

ರಾಮನಾಮ ಪಠನ ಗೈದು ವಾಲ್ಮೀಕಿ
ಜಗದಿ ಬೇಡ ಬ್ರಾಹ್ಮಣ ತಾನಾದ
ಕುಲವು ಘನವು ಅಲ್ಲ ಗುಣವೆ ಘನವೆನ್ನಿರೊ.
ವಿಶ್ವದಾಭಿರಾಮ ಕೇಳು ವೇಮ

[ಬೇಡನೊಬ್ಬನ ಮಗನಾಗಿ ಜನಿಸಿದ ವಾಲ್ಮೀಕಿ, ಸಂತತ ಸಾಧನದಿಂದ ಆತ್ಮಾರಾಮನನ್ನು ಅರಿತುಕೊಂಡನು. ಒಂದು ದಿನ ಪಕ್ಷಿಗಳ ಜೊತೆಯೊಂದು ವೃಕ್ಷದ ರೆಂಬೆಯ ಮೇಲೆ ಕ್ರೀಡಿಸುತ್ತಿರುವಾಗ ಬೇಡನೊಬ್ಬ ಬಾಣ ಬಿಟ್ಟ. ಗಂಡು ಪಕ್ಷಿ ಹತವಾಯಿತು. ಆ ಹೆಣ್ಣು ಪಕ್ಷಿಯ ಶೋಕ ವಾಲ್ಮೀಕಿಯ ಕವಿ ಹೃದಯ ಕಲಕಿತು. ಸರ್ವರೊಳು ಅಡಗಿರುವ ಆತ್ಮಾರಾಮ ಸಂಬಂಧದಿಂದ ಹೆಣ್ಣು ಪಕ್ಷಿಯ ಹೃದಯದ ನೋವನ್ನು ವಾಲ್ಮೀಕಿ

ತಾನೂ ಅನುಭವಿಸಿದ. ಇದೇ ವಿಚಾರ ಮೆಲುಕು ಹಾಕುತ್ತ ಬರುವಾಗ, ಲಕ್ಷ್ಮಣನು ವನದಲ್ಲಿ ಇಳಿಸಿ ಹೋದ ಸೀತೆ ವಿರಹ. ದು:ಖದಿಂದ ತಪಿಸುವುದನ್ನು ಕಂಡು ಕೇಳಿ ತಿಳಿದ. ಹೆಣ್ಣು ಪಕ್ಷಿಯ ಹೃದಯವನ್ನೇ ಸೀತೆಯ ಹೃದಯದಲ್ಲಿಯೂ ಕಂಡ. ಇದನ್ನೇ 'ಬಯಲು ಬ್ರಹ್ಮ' ತತ್ತ್ವದನ್ವಯ ಪ್ರಕೃತಿಯಲ್ಲಿಯೂ ಕಂಡ. ಸೀತೆಯನ್ನು ಪ್ರಕೃತಿ ರೂಪಿಣಿಯಾಗಿ, ರಾಮನನ್ನು ಪುರುಷರೂಪಿಯಾಗಿ, ಸಕಲರು ಹೃದಯದಿಂದ ಅನುಭವಿಸಬಹುದಾದ ಬ್ರಹ್ಮಜ್ಞಾನ ನೀಡುವ ರಾಮಾಯಣ ರಚಿಸಿದ. ಅದು ಕಾರಣ....] ರಾಮ ನಾಮವೆಂಬ ರಾಮಾಯಣ ರಚಿಸಿ, ಜಗತ್ತಿನಲ್ಲಿ ಬೇಡನಾಗಿ ಜನಿಸಿದ ವಾಲ್ಮೀಕಿ ಬ್ರಹ್ಮಜ್ಞಾನ ತಿಳಿಸುವ ಬ್ರಾಹ್ಮಣನಾಗಿ ಬಾಳಿದ. ಆದ್ದರಿಂದ ಯಾರೊಬ್ಬರ ಕುಲವು ಶ್ರೇಷ್ಠವಾದುದಲ್ಲ. ಆದರೆ ಗುಣವೇ ಶ್ರೇಷ್ಠವೆಂದು ಅರಿಯಬೇಕು.

೨೯೦

ಕಲಿಯ ಯುಗಮುನುನ್ನ ಕಾಪುಕುಲಮುನಕು, ವೇಮನ ತನಕೀರ್ತಿ ವಿಕ್ರಯಿಂಚೆ
ಉನ್ನಧರ್ಮಮೆಲ್ಲ ನುರ್ವಿಪೈ ವೆದಜಲ್ಲೆ, ವಿಶ್ವದಾಭಿರಾಮ ವಿನುರ ವೇಮ

ಕಲಿಯುಗದೊಳು ಮುನ್ನ ಒಕ್ಕಲಿಗರ ಕುಲದ
ಘನತೆಗಾಗಿ ವೇಮನ ಕೀರ್ತಿಯಿತ್ತ.
ಭುವಿಯ ಸಕಲ ಧರ್ಮವನೆ ಸಾರಿ ಹರಡಿದ
ವಿಶ್ವದಾಭಿರಾಮ ಕೇಳು ವೇಮ

(ಸಕಲ ಪ್ರಜಾಕೋಟಿಯ ಜೀವನಾಧಾರವೆನಿಸಿದ ಅನ್ನ ನೀಡುವ) ಒಕ್ಕಲಿಗ ಕುಲದಲ್ಲಿ, ಕಲಿಯುಗದಲ್ಲಿ ಜನಿಸಿದ ವೇಮನ ಯೋಗಿ, ಒಕ್ಕಲಿಗ ವೃತ್ತಿಯ ಘನತೆಗಾಗಿ ತನ್ನ ಕೀರ್ತಿ ಲಾಲಸೆಗಳನ್ನು ಬದಿಗೊತ್ತಿ ಶ್ರಮಿಸಿದ. ಭೂಮಿದೇವಿಯ, ವಿಶ್ವ ಧರ್ಮವನ್ನೇ ಭೂಮಿಯ ಮೇಲಿನ ಜನರಿಗೆಲ್ಲ ಸಾರಿ ಹೇಳಿದನು. (ವೇಸಾಯವು ಶೂದ್ರರ ಕಾರ್ಯವೆಂದು ಕೆಲ ಧರ್ಮ ಶಾಸ್ತ್ರಗಳು ಹೇಳುತ್ತಿವೆ. "ವೇದ ಹೀನನಾದವನು ಶಾಸ್ತ್ರ ಓದುವನು. ಶಾಸ್ತ್ರ ವಿಹೀನನಾದವನು ಕೃಷಿಕನಾಗುವನು. ಅದಕ್ಕಿಂದ ಭ್ರಷ್ಟನಾದವನು ಭಾಗವತನಾಗುದನು" ಎಂದು ವ್ಯವಸಾಯ ವೃತ್ತಿಯನ್ನು ಕೇಳಾಗಿ ಅತ್ರಿಸ್ಮೃತಿಯಲ್ಲಿ ಗಣಿಸಲಾಗಿದೆ. ಸಕಲರಿಗೆ ಉಣ್ಣಲು ನೀಡುವ ನಿಷ್ಕಾಮ-ಕರ್ಮಿಯಾದ ಒಕ್ಕಲಿಗನ ಮಟ್ಟವನ್ನು ಎತ್ತರಿಸುವ ಅಗತ್ಯ ಎಲ್ಲರಿಗೂ ಗೊತ್ತು. ಕಾಪು (ಒಕ್ಕಲಿಗ) ಕುಲದಲ್ಲಿ ಜನಿಸಿದ ವೇಮನ ಮುಕ್ಕಾಲು ಪಾಲು ಜನತೆಯನ್ನೂ ಅವರ ವೃತ್ತಿಯನ್ನೂ ಕೇಳಾಗಿ ಕಾಣುವ ಗ್ರಂಥಗಳನ್ನು ಮನ್ನಿಸದೆ, ಒಕ್ಕಲಿಗನಿಂದ ಮೋಕ್ಷ ಸಾಧನೆ ಸಾಧ್ಯವೆಂಬುದನ್ನು ತೋರಿದನು)

೨೯೨

ಪರಧನಮುಲಕು ಜೆಯಿಪಟ್ಟನು ಮಿಕ್ಕಿಲಿ, ಸತ್ಯಮಿಂತಲೇಕ ಜಾರುಡಗುನು,
ದ್ವಿಜುಡನುಕೊನು ದಾನು ದ್ವಿಜಮಿಂತಯುಲೇಕ, ವಿಶ್ವದಾಭಿರಾಮ ವಿನುರ ವೇಮ

ಪರಧನ ಪಡೆಯಲತಿ ಆಸೆಬಡುತಿಪ್ಪನು,
ಸತ್ಯವಂತನಲ್ಲ, ಕೀಳುಜಾರ.
ತೇಜಹೀನನೆಂತು ಆಗಲಪ್ಪ ದ್ವಿಜನು. ?
ವಿಶ್ವದಾಭಿರಾಮ ಕೇಳು ವೇಮ.

ಮಂತ್ರ ಹೇಳುವಾಗ, ಮುಂಜಿವೆ ಮಾಡುವಾಗ, ಪೂಜೆ ಅರ್ಚನಾದಿ ವ್ರತಕರ್ಮ ನೆರವೇರಿಸುವಾಗ) ಅನ್ಯರಿಂದ ಹಣದೋಚುವ ಆಸೆಯನ್ನೇ ಮುಂದು ಮಾಡಿಕೊಂಡವನು ಅಂತರಾತ್ಮನ ಸತ್ಯ ತಿಳಿದ ಗುರುವಲ್ಲ; ಅವನು (ಮನೆಯ ಮಡದಿಗೆ ಎರಡು ಬಗೆಯುವ ಜಾರ ಪುರುಷನಂತೆ ಹೃದಯ ದೇವತೆಗೂ ಎರಡು ಬಗೆಯುವನ.) ಅಂಥ ತೇಜೋಮಯಿಯಾದ ಆತ್ಮ ಕಾಣದ ತಾನು ದ್ವಿಜನೆಂತು ಆಗುವನು?

೨೯೩

ವಿಪ್ರವರುಲಮನುಚು ವೇದಂಬುಜದುವುಚು, ಬ್ರಾಹ್ಮೃತುಲನುಜೂಚಿ, ಪರಿಹಸಿಂಚು,
ಧರಣಿಸುರುಲಕನ್ನ ದಾಸರಿಮತಮೆಚ್ಚು, ವಿಶ್ವದಾಭಿರಾಮ ವಿನುರ ವೇಮ

ವಿಪ್ರವರರು ಎಂದು ವೇದ ಓದುತಿಪ್ಪ;
ಪ್ರಾಕೃತರನು ಕಂಡು ಹಾಸ್ಯಗೈವ,
ಧರಣಿಸುರರಿಗಿಂತ ದಾಸರ ಮತ ಒಪ್ಪ;
ವಿಶ್ವದಾಭಿರಾಮ ಕೇಳು ವೇಮ.

ವಿದ್ವಾನರೆಂದು ಹೇಳಿಕೊಳ್ಳುತ್ತ ವೇದಗಳನ್ನು ಪಠಿಸುತ್ತಿದ್ದು, ಸಾಮಾನ್ಯ ಜನರನ್ನು (ಕೀಳು ಜನರೆಂದು) ಗೇಲಿ ಮಾಡುತ್ತಿರುವಂಥ ಭೂಮಿಯ ಮೇಲಿನ ದೇವತೆಗಳೆನ್ನುವ ಬ್ರಾಹ್ಮಣರಗಿಂತ (ವೈದಿಕ ಆರ್ಯರಿಗಿಂತ ಪೂರ್ವದಲ್ಲಿ ಭಾರತದ ಮೂಲ ನಿವಾಸಿಗಳಾದ, ಪ್ರಾಕೃತರಾದ ನಾಗ ಇಲ್ಲವೆ 'ದಾಸ' ವೆಂದು ಕರೆಯಲ್ಪಡುವ ಜನಾಂಗವಿತ್ತು. ಅವರದೂ ಉತ್ತಮ ಸಂಸ್ಕೃತಿ ಇತ್ತು. ಇಂಥ....) ದಾಸರ ಮತವೇ ಸಮ್ಮತವಾದದ್ದು.

೨೯೪

ಸೋಮಯಾಜಿನನುಚು ಸೊಂಪತೋವೇಷಂಬು, ಗಟ್ಟಮಾಂಸಮೆಲ್ಲ ಗಾಲ್ಚಿತಿನುನು,
ದ್ವಿಜುಡ ನೇನನಗ ನಧಿಕಮೇಖಿತನವಲ್ಲ ? ವಿಶ್ವದಾಭಿರಾಮ ವಿನುರ ವೇಮ.

ಸೋಮಯಾಜಿಯೆಂದು ಸೊಂಪಿನವೇಷದವ,
ಕೆಟ್ಟಮಾಂಸ ಪಾಕಮಾಡಿ ತಿನುವ,
ಮತ್ತೆ ದ್ವಿಜನೆಂದು ಕೂಗಲೆಂತು ಮೆರೆವ ?
ವಿಶ್ವದಾಭಿರಾಮ ಕೇಳು ವೇಮ.

(ಬ್ರಾಹ್ಮಣರಿಗೆ ನಿಜವಾದ ರಾಜನು ಸೋಮ. ಯಜ್ಞದ ಅಧಿದೈವವೂ ಸೋಮ. ಇಂದ್ರನಿಗೆ ತನ್ನ ಮೊಲೆಯುಣಿಸಿದುದೇ ಸೋಮಲತೆ. ವೃಕ್ಷರಾಜ. ಸೋಮಪಾನ ಸುರೇಂದ್ರನ ನಿತ್ಯಪಾನ. ಇನ್ನು ಯಾಜಿ ಎಂದರೆ ಬಲಿಗೊಟ್ಟು ಪುಣ್ಯ ಪಡೆಯುವ ಯಜ್ಞ ಕರ್ಮಗಳನ್ನು ನಡೆಯಿಸಿಕೊಡುವ ದ್ವಿಜೋತ್ತಮ. ಯಜ್ಞದಲ್ಲಿ ಪುರುಷನು ತನ್ನನ್ನೇ ಬಲಿಗೊಡಬೇಕೆಂದು ಭಾವ. ಅದನ್ನು ತಪ್ಪಿಸಲು ಆಕಳನ್ನು ಬಲಿಕೊಡುವ ಸಂಪ್ರದಾಯ ಬೆಳೆಯಿತು. ಏಕೆಂದರೆ ಆಕಳು ಪವಿತ್ರ ಪ್ರಾಣಿ. ಅದು ಸಂಪತ್ತು. ಇದನ್ನು ಬಲಿಕೊಡುವುದರಿಂದ ದೇವರು ಪ್ರೀತಿಗೊಂಡು ವರ ನೀಡುವನೆಂಬ ಗ್ರಹಿಕೆ. ಯಜ್ಞ ನಡೆಸಿಕೊಡುವವರು, ಪುರೋಹಿತರು. ಅವರು ಬಲಿ ನೀಡುವವನ ಪಾತ್ರವನ್ನೂ ಕಟುಕನ ಪಾತ್ರವನ್ನೂ

ವಹಿಸಿ, ಅಧ್ವರ್ಯು ಹೋತಾರ, ಪ್ರತಿಹರ್ತ ಇತ್ಯಾದಿ ವೇಷಗಳಲ್ಲಿ ಕೊಲೆ ನಡೆಸಿ, ಅದರ ಮಾಂಸ ಹಂಚಿಕೊಳ್ಳುತ್ತಾರೆ. ಬ್ರಾಹ್ಮಣರೇ ಯಜ್ಞ-ಪಶುವನ್ನು ತಿನ್ನಬೇಕು. ಬೇರೆಯವರು ತಿಂದರೆ ಮನುಷ್ಯರನ್ನು ತಿಂದಷ್ಟು ಪಾಪ; ಎಂದು ಮುಂತಾಗಿ ಐತ್ತರೇಯ ಬ್ರಾಹ್ಮಣದಲ್ಲಿ ಹೇಳಿದೆ. ಕಾರಣ....) ಸೋಮಯಾಜಿ ಎಂದು ಐಷಾರಾಮೀ ವೇಷ ಹೊತ್ತುಕೊಂಡು ಒಳ್ಳೇ ಮಾಂಸವನ್ನೆಲ್ಲ ತಿನ್ನುವವನು, ತನಗೆ ತಾನೇ ಬ್ರಹ್ಮಜ್ಞಾನದ ಇನ್ನೊಂದು ಜಗದಲ್ಲಿ ಪುನಃ ಜನಿಸಿದ ದ್ವಿಜ ಎಂದು ಕೂಗಿಕೊಂಡರೆ, ಶ್ರೇಷ್ಠತೆ ಹೇಗೆ ಬರಬಲ್ಲದು ?

೨೯೫

ಕಲ್ಲಟಕಕುಬೂದಿ ಗಟ್ಟಗಾ ಬಿಟ್ಟನ, ನಂದುಲೋನಿ ಕಂಪು ಲಡಗನಟ್ಲು
ಮೆಡನು ದ್ರಾಡುವೇಯ ಮೆರಯುಚ್ಚು ದ್ವಿಜುಡೌನ, ವಿಶ್ವದಾಭಿರಾಮು ವಿನುರ ವೇಮ.

ಹೆಂಡ-ಮಡಿಕೆ ಮೈಗೆ ದಟ್ಟಬೂದಿ ಬಳಿಯೆ,
ಕೆಂಪುವಾಸನೆಯದು ಅಡಗಬಹುದೆ ?
ಅಂತೆ ಕತ್ತಿಗೆ ದಾರ ಬಿಗಿಯೆ ದ್ವಿಜನೆಂತು ?
ವಿಶ್ವದಾಭಿರಾಮ ಕೇಳು ವೇಮ

(ವೇದಕಾಲದಲ್ಲಿ ಸೋಮಪಾನವು ಕೆಲ ನಿಯಮಕ್ಕೆ ಒಳಪಟ್ಟಿತ್ತು ಅದನ್ನು ಸೇವಿಸುವ ಮೊದಲು ಹೆಂಡವಿರುವ ಮಡಿಕೆಯ ಹೂರಮೈಗೆ ಯಜ್ಞದ ಅಂಗಾರ ಬಳಿದು ದೇವರಿಗೆ ಅರ್ಪಿಸಿ ಕುಡಿಯಬಹುದಾಗಿತ್ತು, ದ್ವಿಜರು ಕೂಡ. ಕಾರಣ....) ಹೆಂಡ ತುಂಬಿದ ಮಡಿಕೆಯ ಹೊರ ಮೈಗೆ ದಟ್ಟವಾಗಿ ಬೂದಿ ಬಳಿದರೆ, ಅದರ ವಾಸನೆಯಾಗಲೀ, ರುಚಿಯಾಗಲೀ ಹಿಂಗಿ ಅದು ಬೇರೆ ರೂಪತಾಳಬಹುದೇ ? ಇಲ್ಲ. ಅದೇರೀತಿ, ಕೇವಲ ಕುತ್ತಿಗೆಗೆ ಜನಿವಾರ-ಶಿವದಾರ (ಬ್ರಹ್ಮಜ್ಞಾನವನ್ನು ಗಳಿಸಲು ಉಪನಯನ-ದೀಕ್ಷೆ ನಡೆಸುತ್ತಾರೆ, ಈ ಸಂಸ್ಕಾರದಿಂದ ಸಾಧಕನು, ದೈಹಿಕ ನಡೆ-ನುಡಿಯಲ್ಲಿ ಮಾನಸಿಕ ವಿಚಾರ ಸಂಕಲ್ಪಗಳಲ್ಲಿ ಶುದ್ಧಿಪಡೆಯುವವನಾಗುತ್ತಾನೆ. ಕಾರಣ ಇದು ಇನ್ನೊಂದು ಜನ್ಮದಂತೆ. ಈ ಸಂಸ್ಕಾರದ ಫಲವಾಗಿ ಸಾಧಕನು ಓಂ ಎಂಬ ಪ್ರಾಣರೂಪಿ ಪ್ರಣವ ಮಂತ್ರವನ್ನು ಮತ್ತು ಅದರ ವಿಸ್ತೃತರೂಪವಾದ ಗಾಯತ್ರಿ ಮಂತ್ರವನ್ನೂ ಪಠಿಸುತ್ತಾನೆ. ಗಾಯತ್ರಿ ಮಂತ್ರದಲ್ಲಿ ನಿರ್ಮಲ ನಿಷ್ಕಲಂಕ ಸತ್ಯವರಿಯಬಲ್ಲ ಬುದ್ಧಿ ಕೊಡು, ಎಂಬ ಪ್ರಾರ್ಥನೆ ಮಾತ್ರ ಇದೆ. ಆದರೆ ವಾಸ್ತವದಲ್ಲಿ ಇದನ್ನೆಲ್ಲ ವಿಡಂಬನೆಯಾಗಿಸಿ, ಕೇವಲ ಸಾಂಕೇತಿಕ. ದಾರ....) ಕಟ್ಟಿಕೊಳ್ಳಲು, ದ್ವಿಜ ಎಂಬ ಉಕ್ತಿಗೆ ಹೇಗೆ ಯೋಗ್ಯನಾಗುವನು. ?

೨೯೬

ಬಿಂದುರಕ್ತಮುಲನು ಬೆರಸಿನದೇಹಂಬು, ಚಂದಮೆರುಗಕ ದ್ವಿಜಶಬ್ದಮಿಡುಕ,
ನಡಚಿನನು ಮಿಡುಚುನೊ ನರಕಂಬು ಮೃತ್ಯುವು ವಿಶ್ವದಾಭಿರಾಮು ವಿನುರ ವೇಮ.

ಬಿಂದುರಕ್ತದಿಂದ ಬೆರೆತ ದೇಹಕಿಪ್ಪ,
ಚಂದವರಿಯ; ದ್ವಿಜ ಶಬ್ದ ಬಿಡದೆ,
ಸಂದಲೇನವಗೆ ತಪ್ಪವು ಮೃತ್ಯು ನರಕ,
ವಿಶ್ವದಾಭಿರಾಮ ಕೇಳು ವೇಮ

ಮನುಜನ ಈ ದೇಹವು ರಕ್ತ ಬಿಂದುಗಳಿಂದ ಕೂಡಿದೆ. ಅದರಿಂದ ಅದಕ್ಕೆ ರೂಪ ಲಾವಣ್ಯ ಬಂದಿದೆ. ಅದಕ್ಕೆ ನಿಲುವು ಒಲುವು ಇವೆ. ಈ ಸರ್ವ ಸಮತೆಯನ್ನು ಅರಿತುಕೊಳ್ಳದೆ, ' ದ್ವಿಜ ' ಎಂಬ ಶಬ್ದವನ್ನು ಹಚ್ಚಿಕೊಂಡು ಜಗದಲ್ಲಿ ಜೀವಿಸುವವನಿಗೆ (ಎರಡು ಸಾರೆ ಜನ್ಮ ಹೊಂದಿದರೇನು ?) ಸಾವು ತಪ್ಪದು. (ಅವನು ಕೆಟ್ಟ ಕರ್ಮಕ್ಕಿಳಿದರೆ) ನರಕವೂ ತಪ್ಪದು. (ದ್ವಿಜ, ಶೂದ್ರ ಅಂತ್ಯಜಗಳೆಲ್ಲ ಅಧ್ಯಾತ್ಮಿಕ ಬೇಧಸೂಚಕ ಶಬ್ದಗಳಷ್ಟೇ.)

೨೯೭

ಶಿವುಡುಗಲಡಟಂಚು ಶಿಲಲಕುಮ್ಮೊಕ್ಕಡು. ವೆರ್ರಿಜೀವುಲಾರ ವೆತಲವಿಡುಡಿ,
ಜೀವುಲಂದೆಕಾಕ ಶಿಲಲನೇಮುನ್ನದಿ ? ವಿಶ್ವದಾಭಿರಾಮು ವಿನುರ ವೇಮ.

ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ.
ಮೂರ್ಖಜೀವಿಗಳೇ ? ಮೋಹ ಬಿಡಿರಿ
ಜೀವದೊಳಿರುತಿಹುದು, ಶಿಲೆಯೊಳಗೇನುಂಟು ?
ವಿಶ್ವದಾಭಿರಾಮ ಕೇಳು ವೇಮ.

[ಪಾತ್ರೆಯನ್ನೇ ಓಷಧವೆಂದೂ; ಮೂರ್ತಿಯನ್ನೇ ಪರಮಸತ್ಯವೆಂದೂ ತಪ್ಪಾಗಿ ಭಾವಿಸಲಾಗುತ್ತಿದೆ. ಭ್ರಮೆ ಪಡುವುದೂ ಉಂಟು. ಮೂರ್ತಿ ಆರಾಧಕರು ಉತ್ಕಟ ಭಾವೋದ್ರೇಕದ ಪರಿಣಾಮವಾಗಿ ಮಾರ್ಗವನ್ನೇ ಗುರಿಯೆಂದು ಭ್ರಮಿಸುತ್ತಾರೆ. ಅದರಿಂದ ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ :

" ಅವ್ಯಕ್ತಂ ವ್ಯಕ್ತಿಮಾಪನ್ನಂ,
ಮನ್ಯಂತೇ ಮಾಮಬುದ್ಧಯಃ
ಪರಂ ಭಾವಮಜಾನಂತಃ
ಮವಾವ್ಯಯಮನುತ್ತಮಂ॥ ೫-೭-೨೪

" ನಿರಾಕಾರನಾದ ನನ್ನನ್ನು ಮೂಢರು ಸಾಕಾರದಲ್ಲಿ ಕಲ್ಪಿಸಿಕೊಳ್ಳುತ್ತಾರೆ. ಅವರಿಗೆ ನನ್ನ ಅನುಪಮ ನಿರ್ವಿಕಾರ ಪ್ರಕೃತಿ ತಿಳಿಯದು " ಆದರೆ ಸತ್ಯವನ್ನೇ ಹೇಳುವುದಾದರೆ, " ದೇಹೋದೇವಾಲಯಃ ಪ್ರೋಕ್ತಃ ಜೀವಏವಸದಾಶಿವಃ" ಎನ್ನುವುದೇ ಆಗಿದೆ ಕಾರಣ...) ಎಲ್ಲೈ ಮೂರ್ಖ ಜೀವಿಗಳೇ, ದೇವರು ಎಂದು ಕಲ್ಲಿಗೆ ಶರಣಾಗತರಾಗುವ ವ್ಯರ್ಥ ಹುಚ್ಚು ತೊರೆಯಿರಿ. ಜೀವಿಯಲ್ಲಿ, ಜೀವಿಯ ದೇಹದೊಳಗೆ ಎಲ್ಲವೂ ಇದೆ. ಕಲ್ಲಿನಲ್ಲಿ ಏನಿರುತ್ತದೆ ?

೨೯೮

ಎಂಬೆರು ಮುತಮುಂಚು ನೆಸಗಿ ಮಾಂಸಮುದಿನಿ, ಮಾರುವೇರ್ಲ ಬೆಟ್ಟ ಮುಧುವುದ್ರಾವಿ,
ವಾವಿ ವರುಸಂದಪ್ಪಿ ವನಿತ ಪಾಲ್ಮೆ ಚೆಡು, ವಿಶ್ವದಾಭಿರಾಮು ವಿನುರ ವೇಮ.

'ಎಂಬರು' ಮುತ ವೇಷ ಧರಿಸಿ ಮಾಂಸ ಜಿಗಿದು,
ಅನ್ಯ ಹೆಸರು ಹೊತ್ತು ಮದ್ಯ ಕುಡಿದು,
ರಕ್ತ-ಬಂಧ ತೊರೆದು ರತಿಸುಖದಿ ಕೆಡುವುದು
ವಿಶ್ವದಾಭಿರಾಮು ಕೇಳು ವೇಮ

[ಹರಿವಂಶದಲ್ಲಿ ಯಜ್ಞದ ವಿವಿಧ ಪಾತ್ರಧಾರಿಗಳು ಪುರುಷೋತ್ತಮ (ವಿಷ್ಣು)ನಿಂದ ನಿರ್ಮಾಣಗೊಂಡರೆಂದು ಹೇಳುತ್ತ, " ಪುರುಷೊತ್ತಮನ ಅಂಗದಿಂದ ಯಜ್ಞ ನಿವೇದಿಸಲು, ಯಾಜ್ಞಿಕ ಬ್ರಾಹ್ಮಣರು ಎಂದರೆ ಋತ್ವಿಜರೆನಿಸುವವರು ಹುಟ್ಟಿದರು. ದೇವನು ತನ್ನ ಮುಖದಿಂದ ಮುಖ್ಯ ಬ್ರಾಹ್ಮಣನನ್ನೂ, ' ಸಾಮ ' ಪಠಿಸುವ ' ಉದ್ಗಾತ್ರಿ ' ಯನ್ನೂ, ತನ್ನ ತೋಳುಗಳಿಂದ ' ಹೋತ್ರಿ ' ' ಅಧ್ವರ್ಯು ' ಗಳನ್ನೂ ಸೃಜಿಸಿದ..... " ಎಂದು ಮುಂತಾಗಿ ಬರುತ್ತದೆ. ಯಜ್ಞ ಕಾಲದಲ್ಲಿ ಬ್ರಾಹ್ಮಣರು ಈ ವಿವಿಧ ಪಾತ್ರಗಳ ಸೋಗು ಹಾಕಿ, ಯಜ್ಞ ಬಲಿಗೊಟ್ಟ ಪಶುವನ್ನು ಐತ್ತರೇಯ ಬ್ರಾಹ್ಮಣದಲ್ಲಿ ಸೂಚಿಸಿದಂತೆ ಮೂವತ್ತಾರು ಭಾಗ ಮಾಡಿ, ವಿವಿಧ ಪಾತ್ರಧಾರಿಗಳು ಹಂಚಿಕೊಳ್ಳುತ್ತಿದ್ದರಂತೆ. ಯಜ್ಞದೇವನಿಗೆ ಮಧ್ಯವನ್ನು ಅರ್ಪಿಸಿ ಅದನ್ನೇ ಆಮೃತವೆಂದು ಕುಡಿಯುತ್ತಿದ್ದರಂತೆ. ಇದಲ್ಲದೆ ಪುರೋಹಿತನಾಗಿ ನೂತನ ವಧುವಿನ ಪ್ರಥಮ ರಾತ್ರಿ ಸುಖವನ್ನೇ ಬ್ರಾಹ್ಮಣ ಪಡೆಯುವ ಪದ್ಧತಿಯನ್ನೂ ತೀಡಲಾಗಿತ್ತು) ಉದ್ಗಾತ್ರಿ ಎಂಬರು ಹೋತ್ರಿ ಎಂಬರು, ಅಧ್ವರ್ಯು ಎಂಬರು ಎನ್ನುವ ನಾಮಧಾರಿ ಮತದ ವೇಷ ಹಾಕಿ ಯಜ್ಞ ಪಶುವಾದ ಆಕಳನ್ನೋ, ಹೋತನ್ನೋ ಕಡಿದು ಹಂಚಿಕೊಂಡು, ಮಾಂಸ ಜಿಗಿದು, ಅಮೃತವೆಂದು ಹೆಸರಿಟ್ಟು ಮದ್ಯ ಕುಡಿದು ತಮ್ಮ ಬಂಧು-ಮಕ್ಕಳೊಂದಿಗೆ ರಕ್ತ ಸಂಬಂಧ ಮರೆತು, ಭೋಗಕ್ರೀಡೆಯಲ್ಲಿ ನಿರತರಾಗುತ್ತಾರೆ.

೨೯೯

ಜಾತಿಮತವು ವಿಡಿಚಿ ಚಣಿಯೋಗಿಗಾವೇಲು ಜಾತಿತೋನೆಯುನ್ನ ನೀತುಲೇಲ ?
ಮತಮುಬಟ್ಟ ಜಾತಿಮಾನಕುಂಟಿಕೊರಂತ, ವಿಶ್ವದಾಭಿರಾಮ ವಿನುರ ವೇಮ.

ಜಾತಿಮತವ ತೊರೆದು ಯೋಗಿಯಾಗೆ ಮೇಲು;
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿದೊಡೆ ಜಾತಿ ಬಿಡಲಂಜಬೇಡ
ವಿಶ್ವದಾಭಿರಾಮ ಕೇಳು ವೇಮ.

(ಯೋಗಿಗೆ ಕುಲಭೇದ, ಲಿಂಗ-ಭೇದ, ಸಮಾಜದ ಮೇಲು-ಕೀಳು ಭಾವನೆ ಸಲ್ಲದು. ಬ್ರಹ್ಮಭಾವ ತಾಳಬೇಕಾದ ಯೋಗಿ, ಪರಮಾತ್ಮನ ಸಮದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಭೇದ-ಭಾವದ ಕುರುಹುಗಳ ಧಾರಣೆಯನ್ನೂ ಯೋಗಿಗಳು ತಿರಸ್ಕರಿಸುವರು.) ಬ್ರಾಹ್ಮಣ-ಶೂದ್ರಾದಿ ಜಾತೀಯ, ಉಚ್ಚನೀಚ ಭಾವನೆಯನ್ನೂ, ಶೈವ, ವೈಷ್ಣವ ಶಾಕ್ತ, ಸೌರ, ಗಾಣಪತ್ಯ ಕೌಮಾರಾದಿ ವೈದಿಕ ಷಣ್ಮತಗಳನ್ನೂ ಚಾರ್ವಾಕ, ಜಾಡ್ಡ, ಜೈನ್ ಇತ್ಯಾದಿ ಅವೈದಿಕ ಮತಗಳನ್ನೂ, ಮುಸ್ಲಿಂ ಕ್ರೈಸ್ತ, ಝುರೂತಾಷ್ಟ್ರ ಎಂಬಿತ್ಯಾದಿ ವಿದೇಶಿ ಮತಗಳ ಬೇಧಭಾವನೆಗಳನ್ನು ಬಿಟ್ಟು ಯೋಗಿಯಾದರೆ ಶ್ರೇಷ್ಠ. ಅದಿಲ್ಲದೆ ಕೇವಲ ಯಾವುದೋ ಒಂದು ಜಾತಿಯಲ್ಲಿ ಮುಳುಗಿ, ಸಂಕುಚಿತ ಭಾವ ತಾಳಿ ನೀತಿ ಹೇಳಿದರೆ ಅದರಿಂದ ಸತ್ಯಕಲ್ಪನೆಯೂ ಆಗುವುದಿಲ್ಲ; ಬಹುಜನರ ಹಿತವೂ ಆಗುವುದಿಲ್ಲ. ಬ್ರಹ್ಮವನ್ನರಿಯುವ ಮಾರ್ಗ ಬೋಧಿಸುವ ಮತವು ಅರ್ಥವಾದೊಡನೆ, ಜಾತಿ ಭೇದದ ಗಣನೆಯನ್ನು ತೆಗೆದುಹಾಕಬೇಕು.

೩೦೦

ಜನನಮರಣ ಮುಲನು ಸಂಧ್ಯತ್ರಾಡುನು ಲೇದು. ಸಂಧ್ಯತ್ರಾಡುಲೇದು ಜನನಿ ಕೆಪುಡು, ತಲ್ಲಿಶೂದ್ರುಲು ತಾನೆಟ್ಲು ದ್ವಿಜಡಗು ? ವಿಶ್ವದಾಭಿರಾಮ ವಿನುರ ವೇಮ.

ಜನನ ಮರಣ ಸಮಯ ಸಂಧ್ಯಸೂತ್ರವಿಲ್ಲ
ಜಗನಿಗೆಂದೂ ಸಂಧ್ಯ ದಾರವಿಲ್ಲ
ಜನನಿ ಶೂದ್ರಳಿರಲು ತನಯ ದ್ವಿಜನಲ್ಲ.
ವಿಶ್ವದಾಭಿರಾಮ ಕೇಳು ವೇಮ.

(ಸ್ತ್ರೀಯರಿಗೆ ಉಪನಯನ ವಿಧಿಯು ಪೂರ್ವದಲ್ಲಿ ಇದ್ದಿತಾದರೂ ಕಲಿವರ್ಜ್ಯವೆಂದು ಸ್ಮೃತಿಗಳು ಹೇಳುತ್ತಿವೆ. ಅವಳು ವೇದ ಓದಬಾರದು; ಸಾವಿತ್ರೀವಾಚನ ಸಲ್ಲದು; ಎಂಬುದು ಸ್ಮೃತಿಕಾರರ ಮನೀಷೆ.)

ತಾನು ಹುಟ್ಟಿದಾಗ ಮತ್ತು ಎಂಟನೇ ವರುಷಕ್ಕೆ ಇಲ್ಲವೆ ಆ ಮೇಲೆ ಉಪನಯನ ಸಂಸ್ಕಾರ ಹೊಂದಿ ಉಪನೀತನಾಗುವ ವರೆಗೆ ಸಂಧ್ಯೆ ಪೂಜೆ ವ್ರತಗಳೂ ಗಾಯತ್ರಿ ಮಂತ್ರವೆಂಬ (ಓಂ ಭೂರ್ಭುವಸ್ವಾಹಾ ಓಂ ತತ್ ಸವಿತೃವರೇಣ್ಯಂ | ಭರ್ಗೋದೇವಸ್ಯ ಧೀಮಹಿ ಧೀಯೋಯೋನಃ ಪ್ರಚೋದಯಾತ್) ಋಗ್ವೇದದ ಪದ್ಯವೊಂದನ್ನು ಪಠಿಸುವಿಕೆಯೂ ಇಲ್ಲ. ಇನ್ನು ತನಗೆ ಜನ್ಮವಿತ್ತ ತಾಯಿ ಉಪನೀತಳಾಗುವಂತಿಲ್ಲ. ಸಂಧ್ಯೆ ಮಾಡುವಂತಿಲ್ಲ. ದಾರ ಕಟ್ಟುವಂತಿಲ್ಲ. ಹೀಗೆ ತಾಯಿ ಒಂದೇ ಜನ್ಮದವಳು. ಒಂದು ಜನ್ಮದವರು ಶೂದ್ರರೆಂದು ಧರ್ಮಸೂತ್ರಗಳು ಹೇಳುತ್ತವೆ. ಕಾರಣ ತಾಯಿ ಶೂದ್ರಳು. ಶೂದ್ರಳ ಮಗ ಶೂದ್ರ. ಅಂದಮೇಲೆ ದ್ವಿಜ ಎಂಬುದು ಜಾತಿ ಹೇಗೆ? ಶೂದ್ರಳ ಮಗನು ದ್ವಿಜನಾಗುವುದೆಂತು ?

೩೦೧

ಪೆತರಯನ್ನ ಮುನುಚು ಪ್ರೀತಿತೋಬಿಲಿಪಿಂಚಿ ಕಾಕುಲಕನು ಬೆಟ್ಟಿ ಕರ್ಮುಲಾರ ಕಾಕುಲಂದು ನೇಮಿ ? ಘನುಲಕು ಬೆಟ್ಟುಡೀ, ವಿಶ್ವದಾಭಿರಾಮ ವಿನುರ ವೇಮ.

ಪಿತರಾನ್ನವೆಂದು ಪ್ರೀತಿಯಿಂ ಕರೆದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಕಾಗೆಗಿಡಲು ಎನು ? ಘನಗೀಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ತೀರಿ ಹೋದ ಪಿತೃಗಳಿಗೆ ಅರ್ಪಿಸುವ ಅನ್ನವನ್ನು ಬಹಳ ಪ್ರೀತ್ಯಾದರದಿಂದ ಪಿತೃ-ಅನ್ನವೆಂದು ಕರೆದು ಅನಂತರ, ಪಿತೃಗಳೇ ಕಾಗೆಗಳಾಗಿ ಬರುವುರೆಂದು ನಂಬಿ ಆ ಅನ್ನವನ್ನು ಕಾಗೆಗಳಿಗೆ ಇಡುವ ಕರ್ಮನೇಮಗಳಲ್ಲಿ ಬದ್ಧರಾದ ಜನರೇ ! ಕೇಳಿರಿ. ಕಾಗೆಗೆ ಇಟ್ಟರೇನು ? ನೀಡುವ ಮನಸ್ಸು ಇದ್ದರೆ, ನಿಮ್ಮ ಪಿತೃಗಳನ್ನು ಗೌರವದಿಂದ ಸ್ಮರಿಸಬೇಕಾಗಿದ್ದರೆ, ಘನವಂತರಿಗೆ ನೀಡಬೇಕು.

೩೦೨

ಪಿಂಡಮುಲನುಜೇಸಿ ಪಿತರುಲದಲ ಪೋಸಿ, ಕಾಕುಲಕನು ಬೆಟ್ಟು ಕರ್ಮುಲಾರ !
ಪೆಂಟದಿನೆಡಿಕಾಕಿ ವೆತರಯೆಟ್ಲಾಯೆರಾ ? ವಿಶ್ವಧಾಭಿರಾಮ ಕೇಳು ವೇಮ.

ಪಿಂಡಗಳನು ಮಾಡಿ, ಪಿತೃವೆಂದು ತಿಳಿದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಶಗಣಿತಿಂಬ ಕಾಗೆ ಪಿತೃವೆಂತೆನಿಪುದು ?
ವಿಶ್ವದಾಭಿರಾಮ ಕೇಳು ವೇಮ.

ತೀರಿದ ಹಿರಿಯರನ್ನು ಶ್ರದ್ಧೆಯಿಂದ ಸ್ಮರಿಸುವುದೇ ಶ್ರಾದ್ಧ. ತಂದೆ ತೀರಿದ ದಿನ ಶ್ರಾದ್ಧದ ದಿನ. ಅಂದು ಪ್ರೀತಿಯ ಅಡುಗೆ ಮಾಡಿ ಅರ್ಪಿಸಿ ಪಿಂಡವೆಂದು ಭಾವಿಸುತ್ತಾರೆ. ಈ ಪಿಂಡವೇ ಪಿತೃವಿನ 'ಅಂಡ-ಪಿಂಡ,' 'ಜ್ಞಾನ ಪಿಂಡ' ಇತ್ಯಾದಿ ಎಂದು ಭಾವನೆ. ಈ ಪಿಂಡವನ್ನು ಕಾಗೆಗಳಿಗೆ ಇಡುತ್ತೇವೆ. ಕಾಗೆಯಾಗಿ ಪಿತೃ ಬಂದು ತಿಂದು, ಶಾಂತಿಯಾಗುತ್ತಿದೆ ಎಂದು ಭಾವನೆ. ಸ್ಮಶಾನದಲ್ಲಿ ಶವ ಸುಡುವ ಪೂರ್ವದಲ್ಲಿ ಕಾಗೆಗಳಿಗಾಗಿ ಕಾಯುತ್ತಾರೆ. ಶವ ದಹನಕ್ಕೆ ಮೊದಲು ಕಾಗೆ ತಿನ್ನಬೇಕು, ಅಗ್ನಿಯೇ ಆತ್ಮವನ್ನು ಮೇಲಕ್ಕೆ ಕರೆದೊಯ್ಯಲು, ದಾರಿ ತೋರಲು ಬಂದ ದೇವತೆ. ಅಗ್ನಿಯು ಮೇಲೆ ಕರೆದೊಯ್ಯುವ ವರೆಗೆ ಮೃತರ ಆತ್ಮ ಇಲ್ಲಿಯೇ ಇರುವುದೆಂದೂ, ಕಲ್ಪನೆ ಪುರಾಣ ಕತೆಯ ಕಲ್ಪನೆಯಂತೆ ಸತ್ತು ಪಿತೃವಾದವರು ಕಾಗೆಯ ರೂಪದಲ್ಲಿ ಬರುವರೆಂದು ನಂಬುಗೆ. ಕೇವಲ ಮೂಢನಂಬುಗೆ. ಕಾರಣ ಶಗಣಿ ಹುಳು ಇತ್ಯಾದಿ ಹೊಲಸು ತಿನ್ನುವ ಕಾಗೆ ಪಿತೃ ಎನಿಸುವುದೆಂತು ? ಶ್ರದ್ಧೆ ಸನ್ಮಾನದಿಂದ ಕಾಣುವ ಹಿರಿಯರನ್ನು ಕಾಗೆಗಳೆಂದು ತಿಳಿಯುವುದು ಸೂಕ್ತವಲ್ಲ ಇಂಥ ತಪ್ಪು, ವಿಚಾರ ವಿಹೀನ ಪದ್ಧತಿಗಳು ತ್ಯಾಜ್ಯವಷ್ಟೇ.

೩೦೩

ಪಲುಗುರಾಳ್ಲ ದೆಚ್ಚಿ ಪರಗಗುಡುಲಗಟ್ಟ, ಚೆಲಗಿಶಿಲಲನೇವ ಜೇಯನೇಲ ?
ಶಿಲಲನೇವಜೇಯ ಫಲಮೇಮಿಕಲ್ಗುರಾ ? ವಿಶ್ವದಾಭಿರಾಮ ವಿನುರ ವೇಮ.

ಸಂಗಮರಮರಿ ಶಿಲೆ ತಂದು ಗುಡಿಕಟ್ಟಿ
ಹೊಳೆವ ಶಿಲೆಗೆ ಸೇವೆ ಸಲಿಸಲೇಕೆ ?
ಶಿಲೆಯು ಸೇವೆಯಿಂದ ಫಲನೇನು ಬಪ್ಪುದು ?
ವಿಶ್ವದಾಭಿರಾಮ ಕೇಳು ವೇಮ.

("ವೇದಯುಗೆದಲ್ಲಾಗಲೀ, ಹರಪ್ಪ ಸಂಸ್ಕೃತಿಯಲ್ಲಾಗಲೀ ದೇವಾಲಯಗಳಿದ್ದಂತೆ ಕಂಡು ಬರುವದಿಲ್ಲ. ..... ಭಾರತೀಯ ಸಂಸ್ಕೃತಿಯಲ್ಲಿ ಸ ಮೂಹಿಕ ಪ್ರಾರ್ಥನಾ ಪದ್ಧತಿಯು ಇರಲಿಲ್ಲ. ಕೀರ್ತನೆ, ಭಜನೆ ಪದ್ಧತಿಗಳು ಕ್ರಿಸ್ತ ಶತಾಬ್ದದಿಂದ ಈಚೆಗೆ

ಆರಂಭವಾಗಿದೆ. ಆದರೆ ಕೆಲವು ಪುರಾತನ ತೀರ್ಥಕ್ಷೇತ್ರಗಳಲ್ಲಿ ದೇವತೆಗಳ ಪೂಜೆಯು ಪ್ರಾಚೀನವೆಂದು ತೋರುವುದು. ಈ ದೇವಾಲಯಗಳಲ್ಲಿ ಹೊಟ್ಟೆಪಾಡಿಗಾಗಿ ಪೂಜೆ ಮಾಡುವ ಅರ್ಚಕರು [ದೇವಲಕರು] ನೀಚ ಬ್ರಾಹ್ಮಣರೆಂದು ಸ್ಮೃತಿಗಳು ಹೇಳುವವು. ವೈಶ್ಯರು ಹಿರಣ್ಯಾರ್ಥವಾಗಿ ದೇವತಾವಿಗ್ರಹಗಳನ್ನು ಮಾಡಿಸುತ್ತಿದ್ದರೆಂದು ಇದು ಗರ್ಹಣೀಯವೆಂದೂ, ಮೂಢಜನರನ್ನು ಮೊಸಗೊಳಿಸಿ ರಾಜಕಾರ್ಯವನ್ನೂ ಸಾಧಿಸುತ್ತಿದ್ದರೆಂದೂ, ಕೌಟಿಲ್ಯನ ಅರ್ಥಶಾಸ್ತ್ರ ಪತಂಜಲಿಯ ಮಹಾಭಾಷ್ಯಗಳಿಂದ ತಿಳಿದು ಬರುವುದು. ಮೃತರ ಸಮಾಧಿಗಳ ಮೇಲೆ ಅವರ ವಿಗ್ರಹವನ್ನೊ ಲಿಂಗವನ್ನೊ ಸ್ಥಾಪಿಸಿ, ಜೈತ್ಯ ಸ್ತೂಪಗಳನ್ನು ಕಟ್ಟುತ್ತಿದ್ದರೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುವುದು." [ಭಾ. ಸಂ. ಪು. ೧೯೩] ಮುಂದಿರ ಗುಡಿಗಳ ಆವಿರ್ಭಾವ ಈ ರೀತಿಯಾಗಿರುವುದರಿಂದ...)

ಸಂಗಮರಮರಿ ಶಿಲಾಮೂರ್ತಿಯನ್ನು ತೆಗೆದುಕೊಂಡು ಬಂದು, ಅದನ್ನಿಡಲು ಗುಡಿಯೊಂದನ್ನು ಕಟ್ಟಿ, ಹೊಳೆಯುವಂಥ ಆ ಶಿಲೆಗೆ ಸೇವೆಯನ್ನು ಸಲ್ಲಿಸಲೇಕೆ? ಶಿಲೆಯು ಸೇವೆಯಿಂದ ಯಾವ ಫಲಬಂದೀತು?. ಮನಸ್ಸು ಜಡವಾಗುತ್ತ ಸಾಗುವುದಷ್ಟೇ.

೩೦೪

ಉಪವಸಮುಲನುನ್ನ ನೂರಪಂದ್ಮೆಪುಟ್ಟು, ದಪಸಿಯ್ಮೆ ದರಿದ್ರತನು ವಹಿಂಚು.
ಶಿಲಕುನ್ಮೊಕ್ಕನಗುನೆ ? ಜೀವಮುಗಲಬೊವ್ಮ್ಮ ? ವಿಶ್ವದಾಭಿರಾಮ ವಿನುರ ವೇಮ.

ಉಪವಾಸವಿರುವವ ಊರಹಂದಿಯ ಮಗ,
ತಪಸಿಯಾಗೆ, ಬಡತನವನುಭವಿಸು;
ಶಿಲೆಗೆ ಮಣಿಯಲೇಕೆ ? ಜೀವಿಯೊಳಿಹ ಬೊಮ್ಮ
ವಿಶ್ವದಾಭಿರಾಮ ವಿನುರ ವೇಮ.

(ಪುರಾಣ ಕಥೆಯಲ್ಲಿ ಹಿರಣ್ಯಕಶಪುವಿನ ತಮ್ಮ ಹಿರಣ್ಯಾಕ್ಷನು ದೇವೇಂದ್ರನನ್ನು ಯುದ್ಧದಲ್ಲಿ ಸೋಲಿಸಿ ಅವರ ಭೂಮಿಯನ್ನು ನೀರಿನಲ್ಲಿ ಮುಳುಗಿಸಿದ್ದರಿಂದ ದೇವತೆಗಳು ಆಹಾರವಿಲ್ಲದೆ ಕೊರಗಿ ತಂದೆ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದರು. ನಾರಾಯಣನು ಹಂದಿಯ (ವರಾಹ) ರೂಪ ತಾಳಿ ಬಂದು ಹಿರಣ್ಯಾಕ್ಷನನ್ನು ವಧಿಸಿ, ದೇವತೆಗಳಿಗೆ ಭೂಮಿಯನ್ನು ಸಮುದ್ರದಿಂದೆತ್ತಿ ಕೊಟ್ಟನು. ಮತ್ತು ದೇವತೆಗಳಿಗೆ ಹವಿಸ್ಸಿನ ಭಾಗವನ್ನು ಕೊಡುವಂತೆ ಋಷಿಮುನಿಗಳನ್ನು ನಿಯಮಿಸಿದನು. ಹಂದಿಯ ಅವತಾರದಿಂದ ದೇವತೆಗಳ ಉಪವಾಸ ಕೊನೆಗೊಂಡಿತು. ಕಾರಣ.....) ಉಪವಾಸವಿರುವವನು, ಮುಂದೆ ಲಭ್ಯವಾಗುವ ಮೃಷ್ಟಾನ್ನದಾಸೆಯಿಂದ ಕೂಡಿದ ಹಂದಿಯ ಮಗನಂತೆ ಇರುವನು. (ಎಲ್ಲವನ್ನು ತೊರೆದೆ ಎಂದು ಕರ್ಮಗಳನ್ನು ಗೈಯದೆ) ತಪಸ್ಸು ಮಾಡುತ್ತೇನೆಂದು ತಿರುಗುವವನು ಕೇವಲ ಬಡವನಾಗುತ್ತಾನೆ. (ಕಲ್ಲು ಇತ್ಯಾದಿಗಳಲ್ಲಿ ದೇವನಿರುವನೆಂದು ಕಲ್ಲಿಗೆ ಎಡೆ ನೀಡಿ, ಅದರೆದುರು ತಪ ಕೈಕೊಂಡರೆ ಫಲವೇನೂ ಇಲ್ಲ. ಏಕೆಂದರೆ.....) ಬ್ರಹ್ಮನ್ ಜೀವಿಯ ಹೃದಯದಲ್ಲಿದೆಯಲ್ಲದೆ ಕಲ್ಲಿನೊಳಗೆ ಏನೂ ಇಲ್ಲ.

೩೦೫

ಪರಗಬೊಮ್ಮಗ್ರುಡ್ದು ಬರಿಕಿಂಚಿ ಚೂಚಿನ, ಗುಲಮುಲನ್ನಿ ಯೆಂದುಗೂಡಿಪುಟ್ಟೆ.
ಅಂದರೊಕಟಿ ಕಲಿಯ ನನ್ನದಮ್ಮುಲೆಕದಾ ? ವಿಶ್ವದಾಭಿರಾಮ ವಿನುರ ವೇಮ.

ವರಬ್ರಹ್ಮಾಂಡದಿ ಪರಿಕಿಸಿ ನೋಡಿದೊಡೆ,
ಕುಲಗಳೆಲ್ಲ ಕೂಡಿ ಪುಟ್ಟಿದವ್ವೆ.
ಎಲ್ಲರೊಂದಾಗಲಣ್ಣ ತಮ್ಮಂದಿರಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

(" ಋಗ್ವೇದದ ಕಾಲದಲ್ಲಿ ವರ್ಣಭೇದಗಳಿರಲಿಲ್ಲ. ಕ್ರಮೇಣ ಅವರವರ ವೃತ್ತಿಗನು ಗುಣವಾಗಿ ವರ್ಣಭೇದಗಳಾಗಿ, ಅನಂತರ ನೀಚೋಚ್ಚ ಭಾವಗಳು ಮೈದೋರಿರಬೇಕು. " ಬೆಟ್ಟದ ಮೇಲೆ ಸುರಿದ ಅದೇ ಮಳೆಯ ನೀರು ನದಿ ನದಿಗಳಾಗಿ ಝರಿಯಾಗಿ, ಹರಿದು ಬಂದು ವೈವಿಧ್ಯ ತೋರುವಂತೆ. ಹರಿಕಿರಿದು ಎನ್ನಿಸುವಂತೆ. ಕಾರಣ...) ಕುಲಗಳ ಮೂಲವನ್ನು ಶೋಧಿಸುತ್ತ ಈ ಬ್ರಹ್ಮಾಂಡದ ಅಭ್ಯಾಸ ನಡೆಸಿದರೆ, ಎಲ್ಲ ಕುಲಗಳೂ ಒಂದೇ ಮೂಲ ಹೊಂದಿದವುಗಳೆಂದು ತಿಳಿಯದಿರದು. ಇದನ್ನರಿತು ಎಲ್ಲರೂ ಒಂದೇ ಎಂಬ ಭಾವನೆಯಿಂದ ಬಾಳತೊಡಗಿದರೆ, ಸೋದರಭಾವ ತಾನೇ ಮೂಡುತ್ತದೆ.

೩೦೬

ಕೂಡದೇದಿಮಿಚೇಸೆ ಗುಲಮೇಮಿಚೇಸೆನು ? ಭೂಮಿಯೇಮಿಚೇಸೆ ? ಬೊಂದೆ ಕಿಟ್ಲು,
ನರುಡುಪಡೆಡುಪಾಟ್ಲು ನಗುಬಾಟ್ಲು ಚೂಡಗಾ, ವಿಶ್ವದಾಭಿರಾಮ ವಿನುರ ವೇಮ.

ಕೂಳಿನಿಂದಲೇನು ? ಕುಲದಿಂದಿನ್ನೇನು ?
ಭೂಮಿಯಿಂದಲೇನು ? ದೇಹಕಾಗಿ,
ನರ ಪಡುವೀ ಪಾಡು ನಗುಪಾಟ್ಲು ನೋಡಾ !
ವಿಶ್ವದಾಭಿರಾಮ ಕೇಳು ವೇಮ.

ಅನ್ನಾಹಾರ ಯಾವುದಾದರೇನು ? (ನಿಸರ್ಗ ಲಭ್ಯವಾದ ತನ್ನ ದುಡಿಮೆಯಿಂದ ದೊರೆಯುವುದನ್ನು ಸೇವಿಸಬೇಕು.) ತನ್ನ ಜಾತಿ ಯಾವುದಾದರೇನು ? (ಜಾತಿ ಉಪ ಜಾತಿಗಳ ಬೇಧ ಕಲ್ಪನೆ ಮೂಡಿಸಿ, ಕೆಳಜಾತಿಯವರನ್ನು ಶೋಷಿಸುವ ಕಾರ್ಯಹೀನಾಯ) ಆಸ್ತಿ ಸಂಪಾದನೆಯ ಬಗ್ಗೆ ವಿಚಾರಿಸುವಾ. ಇನ್ನು ಆಸ್ತಿ ವಿಸ್ತರಣೆಯ ದಾಹದಿಂದ ಸ್ವಾರ್ಥಿಗಳು ಹೀನ ವೃತ್ತಿಗಿಳಿಯುವುದೆಂದರೇನು ? ಈ ಎಲ್ಲ ಸಾರ್ಥ ಸಾಧನೆಗೆ ಧರ್ಮದ ಹೆಸರನ್ನು ಬಳಸಲಾಗುತ್ತಿದೆ. ಹೊಟ್ಟೆ ತುಂಬಿಕೊಳ್ಳುವ ಅಸೆಬುರುಕರು ನಡೆಸಿರುವ ಅನ್ನ, ಕುಲ, ಆಸ್ತಿ ಬೇಧ ಕಲಹಗಳು ನಿಜವಾಗಿಯೂ ನಗೆ ತರಿಸುವಂಥವಾಗಿವೆ.

೩೦೭

ಪೂಜಕನ್ನ ನೆಂಚ ಬುದ್ಧಿನಿದಾನಂಬು, ಮಾಟಕನ್ರ ನೆಂಚ ಮನಸು ದೃಢಮು.
ಕುಲಮುಕನ್ನ ಮಿಗುಲಗುಣಮು ಪ್ರಧಾನಂಬು ವಿಶ್ವದಾಭಿರಾಮ ವಿನುರ ವೇಮ.

ಒಣಪೂಜೆಗಿಂತ ನಿದಾನ ಬುದ್ಧಿ ಮುಖ್ಯ;
ಶುಷ್ಕ ಮಾತಿಗಿಂತ ದೃಢ ಮನಸು.
ಕುಲಕ್ಕಿಂತ ಮೊದಲು ಮಿಗಿಲು ಗುಣವು ಮುಖ್ಯ
ವಿಶ್ವದಾಭಿರಾಮ ಕೇಳು ವೇಮ.

ಶುದ್ಧ ಧರ್ಮಾಚರಣೆಯಿಲ್ಲದ ಯಜ್ಞ ಪೂಜೆಗಳಿಗಿಂತ ಸ್ಥಿಮಿತವಾದ ಬುದ್ಧಿ ಹೊಂದಿ ಪೂಜೆ ಮಾಡದಿದ್ದರೂ ತಿಳಿದು ಆಚರಿಸಿದರೆ, ಅದೇ ಶ್ರೇಷ್ಠವಾದುದು. ಕೇವಲ ಒಣ ಉಪದೇಶ ನೀಡುವುದಕ್ಕಿಂತ ಇಲ್ಲವೆ ಅರ್ಥವರಿಯದ ಮಂತ್ರೋಚ್ಚಾರಣೆಗಿಂತ ನಮ್ಮ ಗುರಿ ತಲುಪುವ ಬಗ್ಗೆ ಗಟ್ಟಿ ಮನಸ್ಸು ಹೊಂದುವುದೇ ಮೇಲು. ಅದೇ ಮೇರೆಗೆ, ಯಾವ ನೊಬ್ಬನು ಜನಿಸಿದ ಕುಲದಿಂದ ಅವನಿಗೆ ಜೀವನದಲ್ಲಿ ಮಾನ-ಮರ್ಯಾದೆ ಸಲ್ಲಸಲ್ಪಡದೆ, ಅವನು ಹೊಂದಿರಬಹುದಾದ ಗುಣದ ಮೇಲಿಂದ ಅವನಿಗೆ ಮಾನ-ಮರ್ಯಾದೆ ಸಲ್ಲಿಸುವುದು ಮೇಲು.

೩೦೮

ಕುಲಮು ಹೆಚ್ಚು ತಗ್ಗು ಗೊಡವಲಬನಿಲೇದು, ಸಾನುಜಾತಮಯ್ಯ ಸಕಲಕುಲಮು,
ಹೆಚ್ಚು ತಗ್ಗುಮಾಟ ಲೆಟ್ಲಿರುಂಗನಗು ? ವಿಶ್ವದಾಭಿರಾಮ ವಿನುರ ವೇಮ.

ಕುಲದ ಮೇಲು ಕೀಳು ಗೊಡವೆಯಿಂದಲೇನು ?
ಸಾನುಜಾತ ಸಕಲ ಕುಲಗಳೆಲ್ಲ;
ಮೇಲು ಕೀಳು ಮಾತು ತಿಳಿದೊಡೆಲ್ಲಿ ಬಂತು ?
ವಿಶ್ವದಾಭಿರಾಮ ಕೇಳು ವೇಮ

(ಸಕಲರೂ ಯೋನಿಜರೇ. ಸಕಲರೂ ಈ ಭೂಮಿಯಲ್ಲಿ ವಾಸವಾಗಿರುವವರೇ. ಸಕಲ ಜೀವಿಗಳು ಜಲ ಜೀವಿಯಿಂದ ಆವಿಷ್ಕಾರ ಹೊಂದಿವೆ. ಅದು ಕಾರಣ...) ಮನುಜರಲ್ಲಿ ಕೆಲವರು ಮೇಲು ಕುಲದವರು, ಇತರರು ಕೀಳು ಕುಲದವರು, ಎಂದು ಬೇಧ ಮಾಡುವ ಗೊಂದಲವೇಕೆ ? ಎಲ್ಲ ಕುಲದ ಮನುಜರೂ ಒಂದೇ ಮೂಲದಿಂದ ಬಂದವರು. ಆದ್ದರಿಂದ ವಿಚಾರ ಮಾಡಿ ನೋಡಿದರೆ, ಮೇಲು-ಕೀಳು ಬೇಧ-ಭಾವವು ಎಲ್ಲಿದೆ ?

೩೦೯

ಮೂಲವಾನಿನೇಲ ಮಹಿಮೀದನಿಂದಿಂಪ ? ನೂಡಲಿರಕ್ತ ಮಾಂಸ ವೊಕಟಿಕಾದೆ ?
ವಾನಿಲೋನನೆಲುಗು ವಾನಿಕುಲಂಬೇದಿ ? ವಿಶ್ವದಾಭಿರಾಮ ವಿನುರ ವೇಮ.

ಹೊಲೆಯರನೇಕೆ ಮಹಿಯಲ್ಲಿ ನಿಂದಿಪರೊ ?
ಒಡಲ ರಕ್ತಮಾಂಸ ಒಂದೆ ಇರವೆ ?
ಅವನೊಳು ಸುಳಿವನ ಕುಲವಾವುದು ? ಪೇಳು ?
ವಿಶ್ವದಾಭಿರಾಮ ಕೇಳು ವೇಮ

ಈ ಭರತ ಭೂಮಿಯಲ್ಲಿ ಹೊಲೆಯರೆಂದು ಕರೆಯಲಾಗುವ ವರ್ಗವನ್ನು ಯಾವ ಕಾರಣದಿಂದ ತುಚ್ಛವಾಗಿ ಕಾಣುವರೋ ತಿಳಿಯದು. ಅವರ ದೇಹದಲ್ಲಿರುವ ರಕ್ತ ಮಾಂಸಗಳು ಮೇಲು ಕುಲದವರ ರಕ್ತ ಮಾಂಸಗಳೇ ಆಗಿವೆಯಷ್ಟೇ. ಇನ್ನು ಸಕಲ ಜೀವಿಗಳಲ್ಲಿ ಇದ್ದುಕೊಂಡು ನಿಯಂತ್ರಿಸುವ ಆತ್ಮಕ್ಕೆ ಕುಲವೆಂಬುದು ಉಂಟೆ ? ಇದ್ದರೆ ಹೇಳಿರಿ. (ವೈದಿಕ ಧರ್ಮದನ್ವಯ ಜೀವಿಯ ಹೃದಯದಲ್ಲಿ ಪರಮಾತ್ಮರೂಪವಾದ ಆತ್ಮವು ಇರುವದು. ಇದರ ಸ್ವಭಾವವು ಕಟ್ಟಿಗೆಯೊಳಗೆ ಬೆಂಕಿ ಇರುವಂತೆ ಅಗೋಚರವಾದದ್ದು, ಕೊರೆಡುಗಳೆರಡನ್ನು ತಿಕ್ಕಿದಾಗ ಬೆಂಕಿ ಹುಟ್ಟುವಂತೆ; ವಿಚಾರ ಮಂಥನದಿಂದ ಜ್ಞಾನೋದಯವಾದಾಗ, ಆತ್ಮದ ಇರವಿನ ಅರಿವು ಆಗುವುದು. ನಮ್ಮ ಇಂದ್ರಿಯ, ಮನಸ್ಸು,ಬುದ್ಧಿಗಳನ್ನೆಲ್ಲ ನಿಯಂತ್ರಿಸುತ್ತ ನಿರ್ದೇಶಿಸುವುದೇ ಆತ್ಮ. ಇದೇ ಪರಬ್ರಹ್ಮರೂಪ. ಇದನ್ನರಿತರೆ, ಇನ್ನೊಬ್ಬ ಜೀವಿಯನ್ನು ತನ್ನಂತೆ ಪರಮಾತ್ಮರೂಪವಾಗಿ ಕಾಣುವ ಭಾವನೆ ಮೂಡುವುದು. ಕಾರಣ ವೈದಿಕ ಧರ್ಮದ ನಿಜ ಅರ್ಥದಲ್ಲಿ ಜಾತಿಗಳ ಮೇಲು ಕೀಳಿನ ಕಲ್ಪನೆಗೆ ತಳಬುಡವೇ ಇಲ್ಲ.)

೩೧೦

ಮೂಲವಾನಿನಂಟಿ ಮರಿಮುನ್ನುದುರುನೀಟ, ಮನುಜಕರ್ಮಜೀತ ಮೂಲಡಯ್ಯ
ಏಲದೆಲಿಯಜಾಲರೀ ನರಪಶುವುಲು ? ವಿಶ್ವಧಾಭಿರಾಮ ವಿನುರ ವೇಮ.

ಹೊಲೆಯನ ಮುಟ್ಟಿದೊಡೆ ನೀರೊಳು ಮುಳುಗುವಿರಿ.
ಮನುಜ ಪೂರ್ವಕರ್ಮದಿಂದ ಹೊಲೆಯ !
ಏಕೆ ತಿಳಿಯಲೊಲ್ಲರೀ ನರಪಶುಗಳಿದ !
ವಿಶ್ವದಾಭಿರಾಮ ಕೇಳು ವೇಮ

(ಶೂದ್ರ ತಂದೆ ಮತ್ತು ಬ್ರಾಹ್ಮಣ ತಾಯಿಯಿಂದ ಹುಟ್ಟಿದವರು, ಸನ್ಯಾಸಿಯಾದವನು ಮತ್ತೆ ಸಂಸಾರಿಯಾದ ನಂತರ ಅವನಲ್ಲಿ ಹುಟ್ಟಿದವನು, ಕ್ಷತ್ರಿಕ ತಂದೆ ಮತ್ತು ಬ್ರಾಹ್ಮಣ ತಾಯಿಯಲ್ಲಿ ಹುಟ್ಟಿದವರೆಲ್ಲ ಚಂಡಾಲರೆಂದು ಶಾಸ್ತ್ರಗಳಲ್ಲಿ ಬರೆದಿದ್ದಾರೆ. ಈ ಚಂಡಾಲರನ್ನು ಮುಟ್ಟಿದ ಬ್ರಾಹ್ಮಣರು ಪರಿಶುದ್ಧರಾಗಬಹುದಾದ ಉಪಾಯಗಳನ್ನು ನೋಡುವಾ.

ಗೌತಮ ಧರ್ಮಸೂತ್ರದಲ್ಲಿ " ಚಂಡಾಲನನ್ನು, ಜಾತಿಭ್ರಷ್ಟನನ್ನು, ಬಾಣಂತಿಯನ್ನು, ಮುಟ್ಟಾದವಳನ್ನು, ಅಥವಾ ಶವ ಮುಟ್ಟಿದವನನ್ನು ಮತ್ತು ಮುಟ್ಟಿದವನನ್ನು ಮುಟ್ಟಿದವನನ್ನು ಮುಟ್ಟಿದರೆ, ಉಟ್ಟ ಬಟ್ಟೆಯಿಂದಲೇ ಸ್ನಾನ ಮಾಡಿ ಶುದ್ಧನಾಗಬೇಕು "

ವಸಿಷ್ಟ, ಬೌಧಾಯಣ ಮತ್ತು ಮನು ಇತ್ಯಾದಿ ಧರ್ಮಸೂತ್ರಕಾರರೂ ಇದೇ ಮಾದರಿಯ ನಿಯಮ ಸೂಚಿಸಿದ್ದಾರೆ. ಇಂತು ಹೊಲೆತನದ ಕಲ್ಪನೆ ಇರುವಾಗ.....] ಹೊಲೆಯರೆಂದು ಕರೆಯಲಾಗುವ ಮನುಷ್ಯರನ್ನು ಮುಟ್ಟಿದೊಡನೆ, ನೀರಲ್ಲಿ ಮುಳುಗುತ್ತೀರಿ. ಮನುಜನು ಯಾವ ದಂಪತಿಗಳ ಉದರದಲ್ಲಿ ಜನಿಸಬೇಕೆಂಬುದು ಅವರವರ ಪೂರ್ವದ ಕರ್ಮಸಂಸ್ಕಾರ. ಈ ಕರ್ಮಕಲ್ಪನೆಯ ನೈಜ ಅರ್ಥವನ್ನು ಈ ಮಡಿವಂತಿಕೆಯ ನರಪಶುಗಳು ಏಕೆ ತಿಳಿಯಲೊಲ್ಲರೋ ? [ಕರ್ಮ ಕಲ್ಪನೆಯು ಕೇವಲ ಅನುಕೂಲ ಪ್ರತಿಕೂಲಗಳಿಗೆ ಮಾತ್ರ ಸಂಬಂಧಿಸುತ್ತದೆ. ಜಾತಿ ಸ್ಪೃಶ್ಯಾಸ್ಪೃಶ್ಯತೆಗಳು ಕೇವಲ ಕುಹಕ ಕಲ್ಪನೆಗಳು]

೩೧೧

ಮಾದಿಗ, ಯನವದ್ದು ಮರಿಗುಣವೊನರಿನ, ಮಾದಿಗನು ವಸಿಷ್ಠಮೌನಿ ತೇಡೆ ?
ಮಾದಿಗ ಗುಣಮುನ್ನ ಮರಿದ್ವಿಜುಡ ಗುನಯೂ, ವಿಶ್ವದಾಭಿರಾಮ ವಿನುರ ವೇಮ

ಮಾದಿಗನೆನಬೇಡ ವರಗುಣವುಳ್ಳವನ,
ಮಾದಿಗಳು ವಸಿಷ್ಠ ಮುನಿಯ ಪತ್ನಿ
ಮಾದಿಗ; ಗುಣಹೊಂದಿ ವರದ್ವಿಜನಾದನು !
ವಿಶ್ವದಾಭಿರಾಮ ಕೇಳು ವೇಮ

ಶ್ರೇಷ್ಠ ಗುಣವುಳ್ಳವನನ್ನು ಮಾದಿಗನೆಂದು ತುಚ್ಛವಾಗಿ ಗಣಿಸಬೇಡ. ಬ್ರಹ್ಮರ್ಷಿಗಳಾದ ವಶಿಷ್ಟ ಮುನಿಯ ಪತ್ನಿ ಅರುಂಧತಿ ಮಾದಿಗಳು. ಆದರೂ, ಸದ್ಗುಣಗಳನ್ನು ಸಂಪಾದಿಸಿ, ಹುಟ್ಟಿನಿಂದ ಚರ್ಮಕಾರನಾದ ವಶಿಷ್ಟ ಶ್ರೇಷ್ಠ ದ್ವಿಜನಾಗಿ ಮೆರೆದನು. (ವಶಿಷ್ಠನು ಶ್ರೀ ರಾಮಚಂದ್ರನ ಧರ್ಮ ಪುರೋಹಿತನು.)

೩೧೨

ಶಿಲನುಬ್ರತಿಮ ಜೇಸಿ ಚಿಕಟ ಟನುಬೆಟ್ಟ, ವ್ಯೊಕ್ಕವಲದು ವೆರ್ರಿವೂಢುಲಾರ !
ಉಲ್ಲಮುಂದು ಬ್ರಹ್ಮಮುಂಡುಟ ದೆಲಿಯುಂಡೀ ವಿಶ್ವದಾಭಿರಾಮ ವಿನುರ ವೇಮ

ಶಿಲೆಪ್ರತಿಮೆಗೈದು ಕತ್ತಲೆಡೆಯೊಳಿಟ್ಟು,
ಶರಣೆನ್ನಬಾರದು ಮೂಢ ಮನುಜ !
ಹೃದಯದೊಳಗಿರುವ ಬ್ರಹ್ಮನ ತಿಳಿದು ನಡೆ.
ವಿಶ್ವದಾಭಿರಾಮ ಕೇಳು ವೇಮ

ಪ್ರಾಚೀನ ದೇವಾಲಯಗಳೆಲ್ಲವೂ ಗುಹೆಗಳೋ, ಗುಹಾಕಾರವಾಗಿಯೋ ಇದ್ದವು. ಮನುಷ್ಯನ ಹೃದಯವೆಂಬ ಗುಹೆಯಲ್ಲಿ ದಹರಾಕಾಶವಿದೆಯೆಂದೂ ಅದರಲ್ಲಿ ಜ್ಯೋತಿಸ್ವರೂಪನಾದ ಈಶ್ವರನು ಇರುವನೆಂದೂ ಭಕ್ತನು ಈಶ್ವರನ ಸಾಯುಜ್ಯ ಪಡೆಯಬಹುದೆಂದೂ

ದೇವಾಲಯಗಳು ಸ್ಥೂಲ ನಿದರ್ಶನಗಳಿಂದ ಸೂಚಿಸುವುವು. " ಎಂದು ಉಪನಿಷತ್ತುಗಳಲ್ಲಿ ಹೇಳಲಾಗಿದೆ. ದೇವಾಲಯವು ಈ ಸತ್ಯದ ವಸ್ತುಪ್ರದರ್ಶನ ಮಾತ್ರ. ಆಯಾ ಕಾಲದ ಮಾನವನ ದೇಹರಚನೆ, ಜೀವನ ಪ್ರಗತಿಗಳನ್ನು ವಾಸ್ತು ಶಿಲ್ಪದಲ್ಲಿ ತೋರಿಸುವ ಕುರುಹುಗಳು ಮಾತ್ರ. ಕಾರಣ....] ಕತ್ತಲು ಕವಿದ ಗರ್ಭಗುಡಿಯಲ್ಲಿ ಇರಿಸಿದ ಕಲ್ಲಿನ ಪ್ರತಿಮೆಗೆ ಶರಣೆಂದು ಮೊರೆಹೋಗುವದು ಶುದ್ಧ ಮೂರ್ಖತನ. ಎಲೈ ಮನುಜನೇ, ಇದನ್ನು ತಿಳಿ. ನಿನ್ನ ಹೃದಯವಲ್ಲಿ ಇರುವ ಬ್ರಹ್ಮನನ್ನು ಅರಿತುಕೊಂಡು ಬಾಳಬೇಕು. ("ಕಟ್ಟಿಗೆ ಲೋಹದಲ್ಲಿ ಮೂರ್ಖರು ದೇವತೆ ಕಾಣುತ್ತಾರೆ. ಆದರೆ ಯೋಗ್ಯ ಮನುಷ್ಯನು ಆತ್ಮದಲ್ಲಿ ಕಾಣುತ್ತಾನೆ. ಅಲ್ಪ ಬುದ್ಧಿಯವರು ಪ್ರತಿಮೆಯಲ್ಲಿ ಹರಿ ಇರುವನೆನ್ನುವರು. ಆದರೆ ಯೋಗಿಗಳೆಲ್ಲರೂ ಹೃದಯದಲ್ಲಿಯೇ ಹರಿ ಇರುವನೆನ್ನುವರು' ಎಂದು ನೃಸಿಂಹ ಪುರಾಣದಲ್ಲಿ ಹೇಳಿದೆ)

೩೧೩

ಮೂಲವಾಡಯಿನನು ಮರಿಯಾತ್ಮಮೀದನು, ಮನಸುನಿಲ್ವೆನೇನಿ ಮೂಲಕಾಡು,
ಮನಸುನಿಲ್ವಕುನ್ನ ಮಹಿಮೀದಮಾಲಡು, ವಿಶ್ವದಾಭಿರಾಮ ವಿನುರ ವೇಮ.

ಹೊಲೆಯನಿರಲುಂ ಮತ್ತೆ ಆತ್ಮದಲ್ಲಿ
ಮನವ ನಿಲಿಸಲಾರನೇನು ? ಹೊಲೆಯ,
ಮನಸು ನಿಲಿಸದವನೆ ಮಹಿಯ ಮೇಲೆ ಹೊಲೆಯ
ವಿಶ್ವದಾಭಿರಾಮ ಕೇಳು ವೇಮ

ಹೊಲೆಯರು ಅಪವಿತ್ರರು ಎಂದು ಹೀಗಳೆಯಲಾಗುತ್ತದೆ. ಆದರೆ ಯಾವನೊಬ್ಬನು ಚರ್ಮಕಾರ ಇತ್ಯಾದಿ ವೃತ್ತಿಯಲ್ಲಿ ತೊಡಗಿದ್ದರೇನು ? ಆತ್ಮದಲ್ಲಿ ತನ್ನ ಮನಸ್ಸನು ನಿಲ್ಲಿಸುವ ಮನೋನಿಗ್ರಹ ಶಕ್ತಿ ಹೊಂದಲಾರನೇನು.? ತನ್ನ ಆತ್ಮದ ಸ್ವರೂಪ ತಿಳಿದವನೇ ಬ್ರಹ್ಮಜ್ಞಾನಿ. ಅವನು ಚರ್ಮಕಾರನಾದರೇನು.? ತನ್ನ ಆತ್ಮದಲ್ಲಿ ಮನಸ್ಸು ನಿಲ್ಲಿಸಲಾರದೆ, ಸರ್ವ ಜೀವಿಗಳೂ ತನ್ನಂತೆ ಎಂದು ತಿಳಿದುಕೊಳ್ಳದವನು ಯಾವ ವೃತ್ತಿ ಮಾಡುತ್ತಿದ್ದರೇನು ? ಅವನೇ ನಿಜವಾಗಿ ಅಪವಿತ್ರ ವ್ಯಕ್ತಿ; ಹೊಲೆಯ.

೩೧೪

ತಾತಗನ್ನತಲ್ಲಿ ತನ ತಂಡ್ರಿಗನುತಲ್ಲಿ. ತನ್ನುಗನ್ನತಲ್ಲಿ ತಲ್ಲಿ ತಲ್ಲಿ.
ತಲ್ಲಿಶೂದ್ರುರಾಲು ತಾನೆಟ್ಲು ಬಾಪಡು ? ವಿಶ್ವದಾಭಿರಾಮ ವಿನುರ ವೇಮ.

ತಾತ ಹೆತ್ತತಾಯಿ ತನ್ನ ತಂದೆ ತಾಯಿ,
ತನ್ನ ಹೆತ್ತ ತಾಯಿ ತಾಯಿ-ತಾಯಿ;
ತಾಯಿ ಶೂದ್ರಳಿರಲು ತಾನೆಂತು ಬೊಮ್ಮಣ ?
ವಿಶ್ವದಾಭಿರಾಮ ಕೇಳು ವೇಮ.

(ಜಾತಿ ಬೇಧ ಲಿಂಗ ಬೇಧವಿಲ್ಲದೆ ಹಿಂದಿನ ಕಾಲದಲ್ಲಿ ಸರ್ವರಿಗೂ ಉಪನಯನಾದಿ ಸಂಸ್ಕಾರಗಳು ಸಮಾನವಾಗಿದ್ದವು. ಆದರೆ ಮುಂದೆ ಸ್ಮೃತಿಕಾರರು ಜಾತಿ ಬೇಧಮಾಡಿ

ದ್ವಿಜ-ಶೂದ್ರ ಬೇಧ ನಿರ್ಮಿಸಿದಂತೆ ಪುರುಷ ಸ್ತ್ರೀ ಬೇಧ ಕಲ್ಪಿಸಿ, ಸ್ತ್ರೀಯರ ಹಕ್ಕುಗಳನ್ನು ಕಿತ್ತುಕೊಂಡರು. ಕಲಿಯುಗದಲ್ಲಿ ಆವರಿಗೆ ಉಪನಯನ–ಯಜ್ಞೋಪವೀತ ಸಂಸ್ಕಾರಗಳಿಲ್ಲವೆಂದೂ ಅವರು ಬ್ರಹ್ಮಜ್ಞಾನ ಬೋಧನೆಗೆ ತಕ್ಕವರಲ್ಲವೆಂದೂ ನಿರ್ಬಂಧಿಸಿ, ಅವರನ್ನು ಶೂದ್ರರನ್ನಾಗಿಸಿದರು. ಕಾರಣ....) ತನ್ನ ಅಜ್ಜನನ್ನು ಹಡೆದ ಮುತ್ತಜ್ಜಿ, ತಂದೆಯನ್ನು ಹಡೆದ ಅಜ್ಜಿ, ತಾಯಿಯನ್ನು ಹಡೆದ ಅಜ್ಜಿ ಮತ್ತು ಸ್ವಂತ ತಾಯಿ ಇವರೆಲ್ಲರೂ ಶೂದ್ರರಾಗಿರುವಾಗ ತಾನು ಬ್ರಾಹ್ಮಣನೆಂಬ ಜಾತಿಗೆ ಹೇಗೆ ಸೇರುವನು ?

೩೧೫

ತನದುತಲ್ಲಿವೇಶ್ಯ ತನಯಾಲುಮಾದಿಗ, ಶ್ರೀಪತಿಕಿಗುರುವು ವಶಿಷ್ಮುಡರಯ
ದಪಮುಚೇತ ದ್ವಿಜುಡು ತರ್ಕಿಂಪಗುಲಮೆಟ್ಲು ? ವಿಶ್ವದಾಭಿರಾಮ ವಿನುರ ವೇಮ.

ತನ್ನ ತಾಯಿ ವೇಶ್ಯೆ ಮಡದಿ ಮಾದಿಗ ಕನ್ಯೆ
ಇರುವ ವಸಿಷ್ಮಮುನಿ ರಾಮನ ವರಗುರು
ಅರಿತೊಡೆ ತಪದಿಂದ ದ್ವಿಜ, ಜಾತಿಯೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ.

ವಶಿಷ್ಮ ಮಹರ್ಷಿಯ ತಾಯಿ ಊರ್ವಶಿಯೆಂಬ ವೇಶ್ಯೆ. ವಸಿಷ್ಮಋಷಿಯ ಹೆಂಡತಿ ಮಾತಂಗಿ ಕನ್ಯೆ, ಅರುಂಧತಿಯು. [ಮಾದಿಗಳು] ತನ್ನ ಹುಟ್ಟು ಮತ್ತು ತನ್ನ ಹೆಂಡತಿಯ ಹುಟ್ಟು ಈ ರೀತಿ ಇದ್ದರೂ, ಸಹ ವಸಿಷ್ಮನು ಸಾಧನೆ ಮಾಡಿ ಬ್ರಹ್ಮಜ್ಞಾನಗಳಿಸಿ ದ್ವಿಜನೇ ಆದನು. ಮತ್ತು ಅವತಾರಪುರುಷನೆನಿಸಿದ ಶ್ರೀ ರಾಮನಿಗೆ ಪೂಜ್ಯ ರಾಜ ಪುರೋಹಿತನಾದನು. ಇದೆಲ್ಲವನ್ನೂ ಅರಿತು ನೋಡಿದರೆ, ತಪಸ್ಸು ಸಾಧನೆಗಳಿಂದ ದ್ವಿಜನಾಗಬಹುದಲ್ಲದೆ, ಹುಟ್ಟು ಜಾತಿಯು ಗಣನೆಗೆ ಬರಲಾರದು.

೩೧೬

ಜಾತಿವೇರು ಲೇಕ ಜನ್ಮಕ್ರಮಂಬುನ, ನೆಮ್ಮದಿನಿ ನಭವುನಿ ನಿಲ್ವೆನೇನಿ,
ನಖಿಲಜನುಲಕೆಲ್ಲ ನಾತಂಡೆ ಘನುಡಯಾ, ವಿಶ್ವದಾಭಿರಾಮ ವಿನುರ ವೇಮ.

ಜಾತಿ ಭೇದವೇಕೆ? ಜನ್ಮಕ್ರಮದಿಂದ,
ನೆಮ್ಮದಿಯ ಭುವಿಯಲಿ ನಿಲಿಸುವವನೆ,
ಅಖಿಲ ಜನತೆಗೆಲ್ಲ ಮಹಾಘನ ಕಾಣಾ,
ವಿಶ್ವದಾಭಿರಾಮ ಕೇಳು ವೇಮ

ಬ್ರಾಹ್ಮಣ, ಕ್ಷತ್ರಿಯ,ವೈಶ್ಯ, ಶೂದ್ರ, ಅಂತ್ಯಜ ಇತ್ಯಾದಿ ಜಾತಿಗಳೆಂದು ಪರಸ್ಪರರಲ್ಲಿ ಅವರ ಹುಟ್ಟಿನಿಂದ ಭೇದ ಕಲ್ಪಿಸುವುದೇಕೆ ? ಸರ್ವಸಮತೆ ಸಾಧಿಸಿ ಭೂಮಿಯ ಮೇಲೆ ಶಾಂತಿ-ಸೌಹಾರ್ದ್ರ–ಸೌಖ್ಯ ಪ್ರಸ್ಥಾಪಿಸುವವನೇ ಅಖಿಲ ಜನತೆಗೆ ಮಹಾ ಘನವಂತನೆಂದು ದನ್ನು ತಿಳಿದುಕೊಳ್ಳಬೇಕು.

೩೧೭

ಉರ್ವಿವಾರಿಕೆಲ್ಲ ನೊಕ್ಕ ಕಂಚಮುಬೆಟ್ಟ, ಪೊತ್ತುಗುಡಿಫಿ ಕುಲಮುಬೊಲಿಯ ಜೇಸಿ,
ತಲನುಜೇಯಿವೆಟ್ಟ ತಗನಮ್ಮಜೆಪ್ಪರಾ, ವಿಶ್ವದಾಭಿರಾಮ ವಿನುರ ವೇಮ

ಉರ್ವಿವಾಸಿಗೆಲ್ಲ ಒಂದೆ ತಾಟನಿಟ್ಟು,
ಸ್ನೇಹ ವರಳಿಸಿ, ಕುಲ ಭಾವವಳಿಸಿ,
ಶಿರದ ಮೇಲೆ ಕರವಿಟ್ಟು ಉಣ ಹೇಳಿರೊ.
ವಿಶ್ವದಾಭಿರಾಮ ಕೇಳು ವೇಮ

ಭೂಮಿಯ ಮೇಲೆ ವಾಸಿಸುವ ಎಲ್ಲ ಜನರೂ, ಊಟ–ಪಂಕ್ತಿ ಭೇದ ತೊರೆದು, ಸ್ನೇಹ ಪ್ರೀತಿಯಿಂದ ಕೂಡಿ, ಮೇಲು–ಕೀಳು ಜಾತಿಯ ಭಾವನೆಯನ್ನು ಬಿಟ್ಟು ಕೂಡಿ ಕೊಂಡು ಊಟ ಮಾಡುವಂತೆ [ಜೀವಿಸುವಂತೆ] ತತ್ತ್ವಜ್ಞಾನದ ಉಪದೇಶ ನೀಡಿದರೆ, ಅವರ ಭೇದ–ಭಾವದ ಹುಚ್ಚು ತೊರೆಯುವುದು.

೩೧೮

ಗಟ್ಟುರಾಳ್ಳದೆಚ್ಚಿ ಕಾಳ್ಳವ್ರೇಳ್ಳನುದ್ರೊಕ್ಕಿ, ಕಾಸೆಯುಲುಲಜೇತ ಗಾಸಿ ಜೇಸಿ,
ಮುರುಪರಾಳ್ಳಕೆರಗು ಮೊಪ್ಪೆಲನೇಮುಂದು ? ವಿಶ್ವದಾಭಿರಾಮ ವಿನುರ ವೇಮ

ಗಟ್ಟಿಕಲ್ಲು ತಂದು ಕಾಲು ಬೆರಳಿನಿಂದ,
ಒತ್ತಿ ಉಳಿಯ ಬಳಸಿ ಗಾಸಿಗೊಳಿಸಿ,
ಬಂಡೆಗಲ್ಲಿಗೆರಗುತಿಪ್ಪನೆಂಥ ಮೂರ್ಖ.
ವಿಶ್ವದಾಭಿರಾಮ ಕೇಳು ವೇಮ

ಶಿಲ್ಪಿಯು ಬೆಟ್ಟದ ಕಲ್ಲುಗಳಲ್ಲಿ ಏಕಸಾಂದ್ರತೆಯ, ಗಟ್ಟಿಕಲ್ಲು ಆಯ್ದುಕೊಂಡು ತರುತ್ತಾನೆ. ಆ ಮೇಲೆ ಕುಳಿತುಕೊಂಡು ತನ್ನ ಕಾಲಿನ ಹೆಬ್ಬೆರಳಿನಿಂದ ಆ ಕಲ್ಲನ್ನು ಮೆಟ್ಟಿ, ಕೈಯಲ್ಲಿ ಹಿಡಿದ ಉಳಿಯಿಂದ ಕಟಿದು ಚೂರುಗಳನ್ನೆಬ್ಬಿಸುತ್ತಾನೆ. ಆ ನಂತರ ಆ ಕಲ್ಲಿನಲ್ಲಿ ಪೂರ್ವನಿಯೋಜಿತ ಆಕಾರದ ಮೂರ್ತಿಯಾಗುತ್ತದೆ. ಇಂಥ ಕಲ್ಲಿಗೆ ಬಾಗಿ ನಮಸ್ಕರಿಸುವವನು ಎಂಥ ಮೂರ್ಖನೆನ್ನಬೇಕು ?

೩೧೯

ರಾತಿಬಸವನಿಗನಿ ರಂಗುಗಾಮ್ಮುಕ್ಕುಚು, ರೂಢಿಬಸವನಿಗನಿ ಕ್ರುವ್ಮುಚುಂದ್ರು
ಬಸವುಭಕ್ತುಲೆಟ್ಟಪಾಪುಲೊ ! ತಲಪೋಯು, ವಿಶ್ವದಾಭಿರಾಮ ವಿನುರ ವೇಮ

ಕಲ್ಲುಬಸವನಿಗತಿ ರಂಗು ಪೂಜಾರ್ಚನ
ರೂಢಿ ಬಸವ ಕಂಡು ಉಗಳುತಿಹರು.
ಬಸವ-ಭಕುತರೆಷ್ಟು ಪಾಪಿಯರಿತು ನೋಡು,
ವಿಶ್ವದಾಭಿ ತಾವುಕೇಳು ವೇಮ.

(ಮನುಷ್ಯನಲ್ಲಿರುವ ಸಾತ್ವಿಕ, ರಾಜಸಿಕ ತಾಮಸಿಕ ಪ್ರವೃತ್ತಿಗಳಿದ್ದು ಅವುಗಳನ್ನೇ ದೇವರಿಗೆ ಆರೋಪಿಸಿ, ಬ್ರಹ್ಮ, ವಿಷ್ಣು, ರುದ್ರರೆಂಬ ನಾಮ-ರೂಪ ಕಲ್ಪಿಸಿಕೊಂಡನು. ಜಗದ ಸೃಷ್ಟಿ, ಸ್ಥಿತಿ ಲಯಗಳ ಕಾರ್ಯವನ್ನು ಒಬ್ಬೊಬ್ಬರು ಅನುಕ್ರಮವಾಗಿ ನಿರ್ವಹಿಸುವರೆಂದೂ ಕಲ್ಪಿಸಿದ. ವಾಹನವೇರುವುದು ಮಾನ–ಮರ್ಯಾದೆ ಎಂಬ ತನ್ನ ಕಲ್ಪನೆಗೆ ತಕ್ಕಂತೆ, ಕಮಲ ಪುಷ್ಪ, ಗರುಡ, ನಂದಿಗಳೆಂಬ ವಾಹನಗಳನ್ನು ಕಲ್ಪನೆಯ ದೇವರಿಗೆ ಆರೋಪಿಸಿದ. ಹೀಗೆ ಎತ್ತು ಶಿವನ ವಾಹನ-ವಾಯಿತು.....) ಗುಡಿ–ಗುಂಡಾಕಗಳಲ್ಲಿ ಕಟಿದು ನಿಲ್ಲಿಸಿದ. ಎತ್ತಿನ ಮೂರ್ತಿಯನ್ನು ಮೂಢ ಭಕ್ತರುಸಿಂಗಾರಮಾಡಿ, ಫಲ–ಪುಷ್ಪ ಅರ್ಪಿಸಿ, ಪೂಜೆಗೈಯುವರು. ಆದರೆ ಆ ಕಲ್ಲಿನ ಮೂರ್ತಿಯು ಏನನ್ನು ಪ್ರತಿನಿಧಿಸುವುದೋ, ಆ ಜೀವಂತ ಎತ್ತಿನ ಮೇಲೆ ಉಗುಳುತ್ತಾರೆ. ಈ ರೀತಿಯ ವರ್ತನೆಯುಳ್ಳ ನಂದಿಯ ಭಕ್ತರುಪಾಪಿಗಳಲ್ಲವೇ? ಇದೆಲ್ಲವನ್ನೂ ಪೂರ್ಣವಾಗಿ ಅರಿತು ವಿಚಾರಿಸಬೇಕು.

೩೨೦

ಮುನ್ನು ಮೆತ್ತಿಕರಗಿ ಮರಿರೂಪುಗಾವಿಂಚಿ, ಗುಂಟನಿಂಟಬೂಡ್ಚಿ ಗುರುತುನಿಲಿಪಿ,
ಮನುಜುಲೆಲ್ಲಗೂಡಿ ಮರಿದೇವುಡಂದುರು, ವಿಶ್ವದಾಭಿರಾಮ ವಿನುರ ವೇಮ.

ಮಣ್ಣು ಮೆತ್ತಿ, ಮೇಣಕರಗಿ ರೂಪುಗೊಂಡ
ಪೊಳ್ಳುತುಂಬಿ ಮೂರ್ತಿ ಗುರುತು ನಿಲಿಸಿ,
ಮನುಜರೆಲ್ಲಗೂಡಿ ಮತ್ತೆ ದೇವನೆಂಬರು.
ವಿಶ್ವದಾಭಿರಾಮ ಕೇಳು ವೇಮ.

ಲೋಹದ ಮೂರ್ತಿ ಮಾಡುವ ವಿಧಾನ ಕ್ರಮವು ಹೀಗೆ : ಮೊದಲು ನಮಗೆ ಇಚ್ಛಿತವಾದ ರೂಪದಲ್ಲಿ ಮೇಣದ ಬೊಂಬೆ ತಯಾರಿಸುತ್ತಾರೆ. ನಂತರ ಅದರ ಮೇಲೆ ಜಿಗುಟು ಮಣ್ಣು ಮೆತ್ತಿ ಒಣಗಿಸುತ್ತಾರೆ. ಈ ರೀತಿ ಒಣಗಿದ ಮೇಣ ಸಹಿತ ಮಣ್ಣಿನ ಮುದ್ದೆಯನ್ನು ಕಾಯಿಸುತ್ತಾರೆ. ಆಗ ಒಳಗಿನ ಮೇಣ ಕರಗಿ ಮೂರ್ತಿಯ ಆಕಾರದ ಪೊಳ್ಳು ಮಾತ್ರ ಮಣ್ಣಿನಲ್ಲಿ ಉಳಿಯುತ್ತದೆ. ಇದರಲ್ಲಿ ಕರಗಿದ ಲೋಹವನ್ನು ತುಂಬಿ ಮಣ್ಣು ತೊಡೆದರೆ, ಮೂರ್ತಿ ತಯ್ಯಾರಾಗುವುದು. ಈ ವಿಧದಲ್ಲಿ ಪ್ರತಿಮೆ ತಯ್ಯಾರಿಸಿ, ಜನರೆಲ್ಲ ಕಲೆತು, ಪ್ರಾಣಪ್ರತಿಷ್ಠಾಪನೆಯ ನಾಟಕಗೈದು ಆ ಲೋಹದ ಬೊಂಬೆಗೆ ದೇವರೆಂದು ಕರೆಯುತ್ತಾರೆ.

೩೨೧

ತಿರುಮಲಕುನುಬೋನ ದುರಕ ದಾಸರಿಕಾಡು, ಕಾಸಿಕೇಗ ಲಂಜೆ ಗರಿತಕಾದು,
ಕುಕ್ಕಸಿಂಗಮೌನೆ ಗೋದಾವರಿಕಿ ಬೋವ ? ವಿಶ್ವದಾಭಿರಾಮ ವಿನುರ ವೇಮ

ತಿರುಪತಿಗೆ ಹೋದೊಡಲ್ಲಿ ತುರುಕ ದಾಸ;
ಕಾಶಿಗೆ ಹೋಗೆ, ಗಣಿಕೆ ಗರತಿಯಲ್ಲ;
ಶ್ವಾನಸಿಂಹ ಅಹುದೆ ಗೋದಾವರಿ ಸೇರಲು ?
ವಿಶ್ವದಾಭಿರಾಮ ಕೇಳು ವೇಮ

(ಸತಿ ಅನಸೂಯೆಯ ತಂಗಿ ಸುಮತಿಯ ಗಂಡ ಕೌಶಿಕ ರಾಜನು ಕುಷ್ಠರೋಗದಿಂದ ಬಳಲುವಾಗ ರೋಗ ಪರಿಹಾರವು ವಿಷ್ಣು ತೀರ್ಥದ ನೀರು ಸಿಂಪಡಿಸಿದರೆ ಹೋಗುವದೆಂದು ತಿಳಿದು, ಅವನನ್ನು ಬುಟ್ಟಿಯಲ್ಲಿ ಹೊತ್ತು ಸಾಗುತ್ತಾಳೆ. ಆಗ ಮಾರ್ಗ ಮಧ್ಯದಲ್ಲಿ ಗಿಡದ ಬೊಡ್ಡೆಯಂತೆ ಯೋಗ ಸಮಾಧಿಯಲ್ಲಿದ್ದ ಮಾಂಡವ್ಯ ಋಷಿಗೆ ಅವನ ಕಾಲು ಬಡಿಯುತ್ತದೆ. ಆ ಋಷಿ ಸಿಟ್ಟಿಗೆದ್ದು ಶಾಪ ಕೊಡುತ್ತಾನೆ. ಶಾಪದ ಫಲವಾಗಿ ಕೌಶಿಕನು ಸಾಯುತ್ತಾನೆ. ನಂತರ ಗಂಗೆಯ ನೀರು ಸಿಂಪಡಿಸಿದಾಗ ಜೀವ ಪಡೆಯುತ್ತಾನೆ.

ಇದೇ ರೀತಿ ಬಾಲರಾಜ ಕಥೆಯಲ್ಲಿ ಅವನಿಗೂ ಮುನಿಶಾಪ ತಟ್ಟುತ್ತದೆ. ಅದ್ದು ಪರಿಹಾರಾರ್ಥ ಪ್ರಾರ್ಥಿಸಲು ಸಕಲ ತೀರ್ಥಯಾತ್ರೆ ಮಾಡಿ ರಾಮೇಶ್ವರ ತೀರ್ಥಕುಂಡದಲ್ಲಿ ಮುಳುಗಿ ಎದ್ದರೆ ಅವನು ಪುನಃ ತನ್ನ ರೂಪ ತಾಳುತ್ತಾನೆಂಬ ಉಪದೇಶವಾಗುತ್ತದಂತೆ. ಮೂಢ ಜನರಿಗೆ ಊರು ತಿರುಗ ಹಚ್ಚಲು. ಕಲ್ಪಿಸಿ ಇಂಥ ಹಲವಾರು ಕಥೆಗಳು ಪುರಾಣದಲ್ಲಿ ತುಂಬಿವೆ. ಋಷಿಗಳಿಗೆ ಇದಿರಾಗಿ ನಡೆಯುವುದೆಂದರೆ, ಪಶುವಿನ ವರ್ತನೆಗಿಂತಲೂ ಕಡೆ. ದೇಶ ಸುತ್ತಿ ಬಂದರೆ, ಜನಜೀವನ, ನಡೆ-ನುಡಿಗಳ ಪರಿಚಯವಾಗಿ ವಿಶಾಲಭಾವನೆ ಮೂಡುವುದೆಂಬುದನ್ನು ನಿವೇದಿಸಲು ಹಲವಾರು ಕಥೆಗಳು ಕಲ್ಪಿತವಾಗಿವೆ, ಅಷ್ಟೇ.

ತಿರುಪತಿ ಬೆಟ್ಟ ಹತ್ತಿ ಬಂದರೆ ಅಲ್ಲಾನ ಭಕ್ತನು ಹರಿದಾಸನಾಗಿ ಬದಲಾಗಲಾರ. ಅಂತೆಯೇ ಶೀಲಗೆಟ್ಟ ಹೆಣ್ಣು ಕಾಶಿಗೆ ಹೋಗಿ ಮರಳಲು ಸುಶೀಲೆಯೆನಿಸಳು. ಮತ್ತು ಗೋದಾವರಿಯಲ್ಲಿ ಮುಳುಗಿ ಬರಲು ನಾಯಿಯು ಸಿಂಹವೆನಿಸದು. (ಮಾಡಿದ ಪಾಪಕ್ಕೆ ತೀರ್ಥಯಾತ್ರೆ ಪರಿಹಾರವೆಂದು ಮೂಢರನ್ನು ನಂಬಿಸುವದು ನಿಂತಿಲ್ಲ.)

೩೨೨

ಕಾಶಿಕಾಶಿಯನುಚು ಗಡುವೇಡ್ಕಬೋದುರು, ಅಂದುಗಲುಗುದೇವು ಡಿಂದುಲೇಂಡ ?
ಇಂದುನಂದುಗಲಡು ಹೃದಯಂಬುಲೆನ್ನೆನ, ವಿಶ್ವದಾಭಿರಾಮ ವಿನುರ ವೇಮು.

ಕಾಶಿ ಕಾಶಿಯೆಂದು ಬಡಕೊಂಡು ಹೋಹರು,
ಅಲ್ಲಿ ಇಪ್ಪ ದೇವರಿಲ್ಲಿಲ್ಲವೆ ?
ಇಲ್ಲಿ ಅಲ್ಲಿ ಇರುವ, ಹೃದಯ ಲೇಸಾಗಿರೆ,
ವಿಶ್ವದಾಭಿರಾಮ ಕೇಳು ವೇಮು.

(ಪ್ರವಾಸದಿಂದ ದೃಷ್ಟಿ ವಿಶಾಲವಾಗುತ್ತದೆ; ಅಲ್ಲಲ್ಲಿಯ ಸತ್ಯಚಿತ್ರ ಕಂಡು ಹೃದಯ ಮಿಡಿಯುತ್ತದೆ. ಸ್ವಂತದ ಸ್ಥಾನಮಾನದ ಅರಿವೂ ಆಗಿ ಒಣ ಬಿಮ್ಮು ಇಂಗುತ್ತದೆ. ಆದರೆ ನೀರು- ಥಾಲಿಯನ್ನೋ, ಮೂರ್ತಿ ಚಿತ್ರಗಳನ್ನೋ ಪ್ರಸಾದ-ಪೊಟ್ಟಣಗಳನ್ನೊ ಹೊತ್ತು ತರುವುದು ಶುದ್ಧ ಮೂಢತನ. ನಮ್ಮ ದೃಷ್ಟಿಗೆ ಸಂಬಂಧಿಸಿದ್ದು ಯಾತ್ರೆಯ ಪ್ರಭಾವ. ಕಾರಣ.....) ಅನೇಕರು, ಕಾಶಿಗೆ ಹೋಗುವೆವೆಂದು ಪತಿ ಪುತ್ರಂಗೆ ತೊಂದರೆ ಕೊಟ್ಟು ಪ್ರವಾಸ ಗೈಯ್ಯುತ್ತಾರೆ. ಆದರೆ ಅಲ್ಲಿ ಇರುವ ದೇವರು, ತಮ್ಮಲ್ಲಿ ತಮ್ಮ ಹೃದಯದಲ್ಲಿ ಇಲ್ಲವೇ? ನಮ್ಮ ಹೃದಯ ವಿಶಾಲವಾಗಿರಿಸಿಕೊಂಡು ನೋಡಿದರೆ, ಅಲ್ಲಿ ಇರುವ ದೇವರು ಇಲ್ಲಿಯೇ ಇದ್ದಾನೆ. ಎಲ್ಲೆಲ್ಲಿಯೂ ಇದ್ದಾನೆ.

೩೨೩

ನೀಳ್ಳ ಮುನುಗನೇಲ? ನಿಧುಲ ಮೆಟ್ಟಗ ನೇಲ? ಮನಸಿ ಚೇಲ್ಪುಲಕುನು ವ್ರೊಕ್ಕ ನೇಲ?
ಕಪಟ ಕಲ್ಮಷಮುಲು ಕಡಪು ಲೋನುಂಡನಾ, ವಿಶ್ವದಾಭಿರಾಮ ವಿನುರ ವೇಮು.

ನೀರು ಮುಳುಗಲೇನು ? ನಿಧಿಯ ಹೂಳಲೇನು ?
ಮನದಿ ಗುಡಿಯೆಡೆ ಕರಮುಗಿದರೇನು ?
ಕಪಟ ಕಲ್ಮಷಗಳು ಒಡಲ ತುಂಬಿ ಇರಲು,
ವಿಶ್ವದಾಭಿರಾಮ ಕೇಳು ವೇಮು.

ಜಾತಿ ಭೇದ, ನೋಸ-ವಂಚನೆಯ ಕಲ್ಮಶಗಳನ್ನು ಒಳಗೆ ಇರಿಸಿಕೊಂಡು, ಬಹಿರಂಗದಲ್ಲಿ ನೀರಿನಲ್ಲಿ ಮುಳುಗಿ ಬಂದರೆ ಏನಾಗುವುದು? ಅಂತೆಯೇ ಕಲ್ಲು ದೇವರನ್ನು ನಿಲ್ಲಿಸುವ ಪೂರ್ವದಲ್ಲಿ ತಳಕ್ಕೆ ಚಿನ್ನ ಹೂಳಿದರೆ ಏನಾಗುವದು? ಕಲ್ಲಿನ ಗುಡಿಯೆದುರು ಕೈಮುಗಿದರೆ ತಾನೆ ಏನಾಗುವುದು. (ಇದಕ್ಕೆ ಪ್ರತಿಯಾಗಿ, ಸರ್ವರೂ ಒಂದೇ ಎಂಬ ಭಾವನೆ ಹೊಂದಿ ಪವಿತ್ರನಾಗಬೇಕು. ಕಲ್ಲಿಗೆ ಕೈಮುಗಿಯುವ ಬದಲು ಅನ್ಯ ಜೀವಿಗಳಿಗೆ ಮಾನ-ಮರ್ಯಾದೆ ಇತ್ತು ವಿನಯದಿಂದ ಬಾಳಬೇಕು.)

೩೨೪

ಪರಗ ಜಲಕ ಮಾಡಿ ಪಟ್ಟಿ ನಾಮಮುದೀರ್ಚಿ, ನೀರು ಕಾವಿ ಪಂಚೆ ನೆರಯಂಗಟ್ಟಿ,
ವಾರಕಾಂತ ಜೂಚಿ ವ್ರತಮೆಲ್ಲ ಮರಚುರಾ, ವಿಶ್ವದಾಭಿರಾಮ ವಿನುರ ವೇಮು.

ಶುದ್ಧ ಸ್ನಾನ ಮಾಡಿ ಪಟ್ಟಿ ನಾಮ ಬಳಿದು,
ನೀರು ಕಾವಿ ಪಂಚೆ ನಿರಿಗೆಗಟ್ಟಿ,
ನೃತ್ಯಗಾತಿ ಕಾಣಲೆಲ್ಲ ವ್ರತ ಮರೆವರು.
ವಿಶ್ವದಾಭಿರಾಮ ಕೇಳು ವೇಮು.

(ಸ್ಮೃತಿಗಳ ಪ್ರಕಾರ "ಗೃಹಸ್ಥನು ದಿನವನ್ನು ಹದಿನಾರು ಭಾಗ ಮಾಡಿ ಆಯಾ ಕಾಲಕ್ಕೆ ವಿಹಿತವಾದ ಕರ್ಮಗಳನ್ನು ಮಾಡಬೇಕು. ಬ್ರಾಹ್ಮೀ ಮುಹೂರ್ತದಲ್ಲೆದ್ದು ಯಥಾವಿಧಿಯಾಗಿ ದೇಹಶೌಚ, ಸ್ನಾನ, ನೂತನ ವಸ್ತ್ರಧಾರಣೆ, ಪುಂಡ್ರಧಾರಣೆ, ಆಹ್ನಿಕ ತರ್ಪಣ, ಪಂಚಯಜ್ಞ ದೇವತಾ ಪೂಜೆಗಳಲ್ಲಿ ಪ್ರಾತಃಕಾಲ ಕಳೆದು ಅಪರಾಹ್ಣಾನಂತರ ಭೋಜನ ಮಾಡಬೇಕು. ಅನಂತರ ಜೀವನೋಪಾಯಕ್ಕೆ ಗಮನಕೊಟ್ಟು, ಸಾಯಂಕಾಲದಲ್ಲಿ ಪುರಾಣ ಶ್ರವಣ ಸಾಯಂಸಂಧ್ಯೆ ಮುಂತಾದುವನ್ನು ಮಾಡಿ, ಭೋಜನವಾದ ನಂತರ ಶತಪಥ ಮುಗಿಸಿ, ಆರು ಗಂಟೆಕಾಲ ನಿದ್ರೆ ಮಾಡಬೇಕು" ಎಂದು ದಕ್ಷಸ್ಮೃತಿಯಲ್ಲಿ ಹೇಳಲಾಗಿದೆ: ಆದರೆ.....)

ನಿತ್ಯ ವ್ಯವಹಾರದಲ್ಲಿ ನೋಡಿದರೆ, ಕೇವಲ ಶುದ್ಧ ಸ್ನಾನ ಮಾಡಿ, ವಸ್ತ್ರ ಉಟ್ಟು ಪುಂಡ್ರ-ಬಳಿದು ಮುಂದಿನ ಅರ್ಚನ ಪೂಜಾದಿಗಳಿಗೆಂದು ಗುಡಿಗೆ ಬಂದಾಗ, ಅಲ್ಲಿರುವ ದೇವದಾಸಿ, ದೇವಕನ್ನಿಕೆಯರ ನೃತ್ಯನೋಡಿ ಮರುಳಾಗಿ, ತಾವು ಆಚರಿಸಬೇಕಾದ ದಿನದ ಇತರೆ ಮುಖ್ಯವ್ರತಗಳನ್ನೇ ಮರೆತು ಬಿಡುತ್ತಾರೆ. (ಮನಸ್ಸು ಶುದ್ಧವಾಗದೆ ಡಾಂಭಿಕ ಆಚರಣೆಗಿಳಿದರೆ, ಎಲ್ಲವೂ ಅರ್ಧಂಬರ್ಧವಾಗಿ ಹಾಸ್ಯಾಸ್ಪದವಾಗುತ್ತದೆ.)

ಸಕಲ ತೀರ್ಥ ಮುಲನು ಸಕಲ ಯಜ್ಞಂಬುಲ, ದಲಲುಗೊನುಗಕುನ್ನ ಫಲಮುಕಲದೆ?
ಮುಂತ್ರ ಜಲಮುಕಂಟೆ ಮುಂಗಲಿ ಜಲ ಮೆಚ್ಚು ವಿಶ್ವದಾಭಿರಾಮ ವಿನುರವೇಮ.

ಸಕಲ ತೀರ್ಥಂಗಳಲಿ ಸಕಲ ಯಜ್ಞಗಳಲಿ
ತಲೆಯ ಬೋಳಿಸದೊಡೆ ಫಲವು ಇರದೆ ?
ಮುಂತ್ರ ಜಲಕ್ಕಿಂತ ಮುಂಡನ ಜಲ ಹೆಚ್ಚೆ?
ವಿಶ್ವದಾಭಿರಾಮ ಕೇಳು ವೇಮ.

(ತೀರ್ಥಯಾತ್ರೆಯೆಂದರೆ, ಪವಿತ್ರ ಸ್ಥಲದ ದರ್ಶನ. ಯಾತ್ರೆಯೆಂದರೆ, ಜೀವನಕ್ಕೆ ಪಾವಿತ್ರ್ಯವನ್ನು ತಂದೆರೆಯುವ ಅನುಭವ. ತೀರ್ಥಸ್ನಾನ ಮಾಡಿದರೆ, ಮನಸ್ಸುಪ್ರಸನ್ನ ನಾಗುವುದು ಇದಕ್ಕೆಶುದ್ಧಿಅವಶ್ಯ ಅಂತಃಶುದ್ಧಿಯಾಗಬೇಕಾದುದು ಮುಖ್ಯ. ಆದರೆ ಮಾಡು ವುದೆಲ್ಲ ಬಹಿರಂಗದ ಶುದ್ಧಿಯಷ್ಟೇ. ಹಳೆಯ ಜನಿವಾರ ಕಳಚಿ ಹೊಸದು ಕಟ್ಟುತ್ತಾರೆ. ತಲೆಯ ಕೂದಲು ಬೋಳಿಸಿ ಮೈಲಿ ಕಳೆದು ಕೊಳ್ಳುತ್ತಾರೆ. ಇದಕ್ಕೆ ಶುದ್ಧಿ ಎನ್ನುತ್ತಾರೆ. ತೀರ್ಥ ಕ್ಷೇತ್ರಗಳಲ್ಲಿ ಶ್ರಾದ್ಧ ಕರ್ಮಗಳನ್ನೂ ನೆರವೇರಿಸಿದರೆ ಪಿತೃಗಳು ಶಾಂತಿ ಹೊಂದುವ ರೆಂದು ನಂಬುಗೆ.) ಏನು? ತೀರ್ಥಯಾತ್ರೆಯ ಕಾಲಕ್ಕೆ, ಯಜ್ಞದ ಕಾಲಕ್ಕೆ ತಲೆಯನ್ನು ಬೋಳಿಸದಿದ್ದರೆ, ಪವಿತ್ರಭಾವನೆಯ ಫಲವು ಬರುವದಿಲ್ಲವೇ? ಮಂತ್ರಪಠಿಸಿ ಅರ್ಪಣೆಗೈದ ಜಲ ಪವಿತ್ರವೆನ್ನುತ್ತಾರೆ. ಈಗ ಅದಕ್ಕಿಂತ ತಲೆ ಬೋಳಿಸಿ, ಮೈತೊಳೆದುಕೊಂಡ ಮುಂಡನ ಜಲವೇ ಪವಿತ್ರವಾಯಿತೇನೋ?

೩೨೬

ಪಟ್ಟು ಬಟ್ಟಗಟ್ಟ ಪಟ್ಟ ನಾಮವು ಬೆಟ್ಟ, ವಟ್ಟ ಭ್ರಾಂತಿ ಜೆಂದಿ ವೈಷ್ಣವುಡಂಬಿ,
ಲೊಟ್ಟತ್ಯಾಗಿಯತಡು ಲೊಕಲ ಜೇರ ಚುರಾ,ವಿಶ್ವದಾಭಿರಾಮ ವಿನುರ ವೇಮ

ಬಟ್ಟೆರೇಶ್ಮೆಯುಟ್ಟು ಪಟ್ಟನಾಮ ವಿಟ್ಟು
ಒಟ್ಟು ಭ್ರಾಂತಿ ತಾನೆ ವೈಷ್ಣನೆಂದು,
ಕಂಠಪೂರ್ತಿ ಕುಡುಕ, ಲೋಕ ನಂಚಿಸುವನು,
ವಿಶ್ವದಾಭಿರಾಮ ಕೇಳು ವೇಮ.

(ವೇದಕಾಲದಲ್ಲಿ ಮತ್ತು ಆನಂತರ ಹಲವಾರು ವಿಶಿಷ್ಟ ಸಂದರ್ಭಗಳಲ್ಲಿ ಮಧು ಪಾನವು ಶಾಸ್ತ್ರ ಸಮ್ಮತವೆನಿಸಿತ್ತು. ಯಜ್ಞಯಾಗಾದಿಗಳಲ್ಲಿ ಮಧುಪಾನ ಮಾಂಸಸೇವನೆ ಮಾನ್ಯವಾಗಿತ್ತು, ಶುದ್ಧಾಚಾರಗಳೆಂದು)

ಮಡಿಯ ರೇಶ್ಮೆ ಬಟ್ಟೆಯುಟ್ಟುಕೊಂಡು ಉದ್ದನೆಯ ನಾಮದ ಪಟ್ಟೆಯನ್ನು ಹಣೆಗೆ ಬಳಿದುಕೊಂಡು ಈ ವೇಷ ಮಾತ್ರದಿಂದ ತಾನು ಪವಿತ್ರನಾದ ವೈಷ್ಣವನೆಂದ ಭ್ರಮೆಪಟ್ಟು ಹೇಳಿಕೊಂಡರೇನು ಬಂತು? ಒಳಹೊಕ್ಕು ನೋಡಿದರೆ, ಯಜ್ಞಾದಿಗಳ ನೆಪದಲ್ಲಿ ಮದ್ಯದ ಮಡಿಕೆಗೂ ನಾಮಬಳಿದು, ಅದನ್ನು ಅಮೃತವೆಂದು ಕುಡಿಯುವನಷ್ಟೇ. ಜಾತಿಭೇದದ ನೆನಪು ಕೊಡುವ ಈ ಬಾಹ್ಯಸಂಕೇತಗಳು ಸರ್ವ ವ್ಯಾಪಿಯಾದ ವಿಷ್ಣುರೂಪಿ ಬ್ರಹ್ಮನ ಸಾಕ್ಷಾತ್ಕಾರಕ್ಕೆ ಆತಂಕಕಾರಕವಷ್ಟೇ.

ಬಾಪಲನ್ನ ಮೌತ್ರ ಬರುವುನ ಜೂಡರು, ಕಾನಿಪನುಲ ಜೇಯು ಗಡುಲ ಕೊನರು,
ಕುಲುಮು ಲೆಕ್ಕಯೇಮಿ? ಗುಣಮೆ ಪ್ರಧಾನಂಬು, ವಿಶ್ವದಾಭಿರಾಮ ವಿನುರ ವೇಮ.

ಹಲವು ಹೀನ ಕಾರ್ಯಮಾಡಿ ಬ್ರಾಹ್ಮಣೆಂದು,
ಗಳಪಿದೊಡನೆ ಗೌರವಿಸ ಬಪ್ಪುದೆ?
ಕೆಲವು ಲೆಕ್ಕಕುಂಟೆ? ಗುಣದ ಗಣನೆ ಲೇಸು.
ವಿಶ್ವದಾಭಿರಾಮ ಕೇಳು ವೇಮ

(ಬ್ರಾಹ್ಮಣನು ಹುಟ್ಟಿನಿಂದ ಶೂದ್ರನೇ. ಅವನಿಗೆ ಬ್ರಹ್ಮಜ್ಞಾನ ಪಡೆಯುವ ಸಂಸ್ಕಾರಗೈದು, ಹೊಣೆ ಹೊರಿಸಿದ ಬಳಿಕ ಅವನು ಬ್ರಾಹ್ಮಣನಾಗುತ್ತಾನೆ. ಅನೇಕರು ಈ ಅವಸ್ಥೆಗೆ ಬಂದ ಬಳಿಕ ಸಹ ತಮ್ಮ ಹೊಣೆ ಮರೆತು ತೀರ ಸರಳವಾದ ಅವಶ್ಯಕ ಜೀವನ ನೀತಿ-ನಿಯಮಗಳನ್ನೂ ಮರೆತು ನಡೆಯುತ್ತಾರೆ. ಜಾತಿ ಮತ್ತು ನೀತಿ ಒಂದನೊಂದು ಅವಲಂಬಿಸಿವೆ. ನೀತಿಯಿಲ್ಲದೆ ಯಾವ ಜಾತಿಯೂ ಇರದು. ಕಾರಣ ತನ್ನ ಅವಸ್ಥೆಗೆ ತಕ್ಕುದಲ್ಲದ.....) ಹಲವಾರು ಹೀನ ಕಾರ್ಯಗಳನ್ನು ಮಾಡಿ ತಾನು ಬ್ರಾಹ್ಮಣನೆಂದು ಹೇಳಿಕೊಂಡು ತಿರುಗಿದರೆ, ಅವನನ್ನು ಕರೆದು ಗೌರವ ನೀಡುವುದು ಹೇಗೆ ? ಕುಲವು ಯಾವ ಲೆಕ್ಕದ್ದು? ಮನುಷ್ಯನ ಗುಣದ ಎಣಿಕೆಯು ನಿಜವಾದ ಪರೀಕ್ಷೆಯಾಗಿದೆ.

೩೨೮

ಬ್ರಾಹ್ಮಣುಲಕು ಸಕಲ ಭಾಗ್ಯಂಬುಲೀವಚ್ಚು, ಗೌರವಿಂಪವಚ್ಚು ಗಲಿಯವಚ್ಚು,
ಜ್ಞಾನಮೊಸಗಿ ಜನುಲಗಡತೇರ್ಚುನಟಲ್ಗಿನ, ವಿಶ್ವದಾಭಿರಾಮ ವಿನುರ ವೇಮ.

ಬ್ರಾಹ್ಮಣಂಗೆ ಸಕಲ ಭಾಗ್ಯವಿರಲು ಲೇಸು.
ಗೌರವ ನಿಧಿ ಲೇಸು, ಸಖ್ಯ ಲೇಸು.
ಜ್ಞಾನ ನೀಡಿ ಜನಕೆ ಮುಕ್ತಿ ಮಾರ್ಗ ತೋರೆ,
ವಿಶ್ವದಾಭಿರಾಮ ಕೇಳು ವೇಮ

ಬ್ರಹ್ಮಜ್ಞಾನ ತಿಳಿದು, ಅದನ್ನು ಇತರರಿಗೆ ಉಪದೇಶಿಸಿ, ಸಕಲ ಜನರಿಗೆ ಮೋಕ್ಷ ಮಾರ್ಗ ತೋರುವಂಥ ಬ್ರಾಹ್ಮಣರಿಗೆ ಸುಖಸೌಖ್ಯಗಳು ಇರುವದೇ ಲೇಸು. ಇದಲ್ಲದೆ ಅಂಥ ಪಂಡಿತರಿಗೆ ಗೌರವವನ್ನು ಎಷ್ಟು ಕೊಟ್ಟರೂ ಕಡಿಮೆಯೇ.ಅವರೊಂದಿಗೆ ಸಂಗ-ಸಹ ವಾಸ ಇರಿಸಿಕೊಳ್ಳುವುದೂ ತುಂಬಾ ಕ್ಷೇಮಕರ.

೩೨೯

ಒರುಲಕೊರಕು ಭೂಮಿ ನೊದಿಗಿಂಚುವಾರುನು, ಅವನಿಪತಿಕಿ ವಶ್ಯುಲೈನವಾರು,
ಪಾಲವಂಟಕುಲಮುವಾರು ಕಾಪುಲೆರುಂಗ, ವಿಶ್ವದಾಭಿರಾಮ ವಿನುರ ವೇಮ.

ತಗ್ಗು ದಿನ್ನೆ ಭೂಮಿ ಉತ್ತಿ ಬಿತ್ತಿ ಬೆಳೆದು.
ಅವನಿಪತಿಗೆ ಅಂಕಿತನಾಗಿಪ್ಪ,
ಹಾಲಿನಂಥ ಕುಲಜನವನು ' ಕಾಪು ' ಕಣಾ.
ವಿಶ್ವದಾಭಿರಾಮ ಕೇಳು ವೇಮ

ದಿನ್ನೆ ಕೊರಕಲಾಗಿರುವ ಭೂಮಿಯನ್ನು ಹದಗೊಳಿಸಿ, ಫಲಬರುವಂತೆ ಮಾಡಲು ಕಷ್ಟಪಡುತ್ತಾನೆ. ನಂತರ, ತನ್ನ ಪರಿಶ್ರಮದ ನಿರ್ದಿಷ್ಟ ಪಾಲನ್ನು ಅರಸನಿಗೆ ಕರಕಂದಾಯ ರೂಪದಲ್ಲಿ ಕೊಡುತ್ತಾನೆ. ಅಂಥ ಒಕ್ಕಲಿಗನು (ಕಾಪು) ಬಹಳ ಉಪಯೋಗಕರವಾದ ಹಾಲಿನಂಥ ಗುಣವುಳ್ಳವನು. ಅವನ ಕುಲವೂ ಅಷ್ಟೇ ಒಳ್ಳೆಯದು.

೩೩೦

ಕಸವುನೇರಿತಿನೆಡು ಪಸರಮುದಿನುವಾನಿ, ಮಾಲಯಂಡ್ರುಕಾದೆ ? ಮಹಿನಿ ನರುಲು
ಪಟ್ಟಕೋಡಿದಿನ್ನ ಬಾಪವಿಟಂದುರಾ, ವಿಶ್ವದಾಭಿರಾಮ ವಿನುರ ವೇಮ

ಕಸವ ಮೇವ ಪಶುವ ತಿನ್ನುವಾತನನ್ನು,
ಹೊಲೆಯರೆನುವ-ರೇಕೊ ? ಜಗದಿ ಜನರು.
ಮುರಿಗೋಳಿ ತಿನ್ನುವವ, ಬ್ರಾಹ್ಮಣ ತಾನೆಂತು
ವಿಶ್ವದಾಭಿರಾಮ ಕೇಳು ವೇಳು ?.

[ಸಾಮಾನ್ಯವಾಗಿ ಅಸ್ಪೃಶ್ಯರೆಂದು ಪರಿಗಣಿಸಲಾದ ಜಾತಿಗಳ ಜನರ ಆಹಾರದಲ್ಲಿ ಸತ್ತ ದನಗಳ ಮಾಂಸವು ಮುಖ್ಯ ಆಹಾರವಾಗಿದೆ. ಈ ದನಗಳಲ್ಲೂ ಎತ್ತು-ಆಕಳು ಅತಿ ಮುಖ್ಯವಾದವು. ಸತ್ತ ದನದ ಮಾಂಸ ತಿನ್ನುವಲ್ಲಿ ಹಿಂಸೆಯ ಪ್ರಶ್ನೆಯೇಳುವುದಿಲ್ಲ. ಆದರೆ ಯಜ್ಞ ಸಮಯದಲ್ಲಿ ಜೀವಂತ ಆಕಳು ಹೋತುಗಳನ್ನು ಸ್ವತಃ ಕಡಿದು ಭಕ್ಷಿಸುವವರೇ ಬ್ರಾಹ್ಮಣರೆನಿಸಿದ್ದರು. ಸ್ಮೃತಿಕಾರರಲ್ಲಿ ಅಗ್ರಗಣ್ಯನಾದ 'ಮನು' "ಮುಳ್ಳುಹಂದಿ, ಕಾಡಿಲಿ, ನೀರಾನೆ, ಆಮೆ ಮೊಲ, ಕೆಲ ಜಾತಿಯ ಮೀನುಗಳು ಮತ್ತು ಒಂಟಿಯ ಹೊರತು, ಇತರ ಒಂದು ದವಡೆಯಿಂದ ತಿನ್ನುವ ಸಾಕು ಪ್ರಾಣಿಗಳನ್ನು" ತಿನ್ನಬಹುದೆಂದು ವಿಧಿಸಿದ್ದಾನೆ ಕೋಳಿಯನ್ನು ತಿನ್ನಬಾರದೆಂಬ ಪ್ರತಿಬಂಧವಿದೆ. ಆದರೂ ಇಂದು ಅನೇಕ ಬ್ರಾಹ್ಮಣರ ಉಪಶಾಖೆಗಳಲ್ಲಿ ಕೋಳಿ ಮತ್ತು ಎಲ್ಲ ಮೀನು, ತಿನ್ನುವುದು ತೀರ ಸಾಮಾನ್ಯವಾಗಿದೆ. ಕಾರಣ.....]

ಸಸ್ಯಾಹಾರವಾದ ಹೊಟ್ಟು ಮೇವು ತಿನ್ನುವ ಪ್ರಾಣಿಯನ್ನು, ಹಿಂಸೆ ಮಾಡದೆ ಕೇವಲ ಸತ್ತ ಮೇಲೆ ತಿಂದರೆ ಅವನನ್ನು ಅಪವಿತ್ರನೆಂದು ಹೊಲೆಯನೆಂದು ಈ ನಾಡಿನ ಜನರು ಏಕೆ ಕರೆಯುವರೋ ತಿಳಿಯುತ್ತಿಲ್ಲ. ಅದೇ ಶಾಸ್ತ್ರ ನಿಷಿದ್ಧವಾದ, ಕ್ರಿಮಿ-ಕೀಟಗಳನ್ನೂ ತಿನ್ನುವ ಕೋಳಿಯನ್ನು ತಿನ್ನುತ್ತಿರುವ ಜನರು ಅದೆಂತು ಬ್ರಾಹ್ಮಣರೆನ್ನಿಸಬಹುದು?

೩೩೧

ಪಾಲಪಿಟ್ಟ ಶಕುನಫಲಮಿಚ್ಚುನಂದುರು, ಪಾಲಪಿಟ್ಟ ಕೇಮಿ ಫಲಮುದೆಲಿಯು,
ದನದು ಮೇಲುಕೀಳ್ಗು ತನತೋಡನುಂಡಂಗ, ವಿಶ್ವದಾಭಿರಾಮ ವಿನುರ ವೇಮ.

ಹಾಲಹಕ್ಕಿ ಶಕುನ ಫಲವೀವುದೆಂಬರು;
ಹಾಲಹಕ್ಕಿಯೆಷ್ಟು ಫಲವರಿವುದು ?
ತನ್ನ ಮೇಲು ಕೀಳು ತನ್ನಿಂದಲಿಪ್ಪವು
ವಿಶ್ವದಾಭಿರಾಮ ಕೇಳು ವೇಮ.

[ಪುರಾಣ ಕಾಲದ ಸಾಹಿತ್ಯದಲ್ಲಿ ಅದ್ಭುತರಮ್ಯ ವಿಚಾರಗಳನ್ನೂ; ಅಸ್ವಾಭಾವಿಕ, ಅವಾಸ್ತವಿಕ ಘಟನೆಗಳಿಗೆ ಮೂಲವನ್ನೂ ಹಾಲಹಕ್ಕಿಗಳ ಧ್ವನಿಯೇ ಒದಗಿಸುತ್ತಿತ್ತು. ಒಂದು ಗಿಡದ ಬುಡಕ್ಕೆಕುಳಿತ ಒಬ್ಬ ರಾಜನಿಗೆ, ಗಿಡದ ಮೇಲಿಂದ ಹಕ್ಕಿಯ ನುಡಿ ಕೇಳಿಬಂದೊಡನೆ "ಹಾಲಹಕ್ಕಿ ಶಕುನ ನುಡಿಯಿತು" ಎಂದು ರಾಜ ನಂಬಿ, ಕಾರ್ಯ ತತ್ಪರನಾಗುತ್ತಿದ್ದ. ಈ ಆಶಾ ಭಾವದಲ್ಲಿ ತನ್ನ ಸ್ವಶಕ್ತಿಯಿಂದ, ಹಿಡಿದ ಕಾರ್ಯಗಳೂ ಅನೇಕ ಸಲ ನೆರವೇರ್ರುತ್ತಿದ್ದವು. ರಾಜನು ತನ್ನ ಕಾರ್ಯದಲ್ಲಿ ಯಶಸ್ವಿಯಾದ ಗುಟ್ಟು ಹಕ್ಕಿಯ ಧ್ವನಿಯೇ ಎಂದೂ ನಂಬುತ್ತಿದ್ದ. ಹೀಗೆ ನುಡಿದರೆ, ಒಳ್ಳೇದು; ಹೀಗಾದರೆ ಕೆಟ್ಟದ್ದು ಎಂದೂ ನಂಬುತ್ತಿದ್ದ. ಬಾಣಕವಿ ರಚಿಸಿದ 'ಕಾದಂಬರಿ' ಗ್ರಂಥದ ಕಥೆಯನ್ನು ಶೂದ್ರಕ ರಾಜನಿಗೆ ಚಂಡಾಲ ಕನ್ಯೆ ಸಾಕಿದ ವೈಶಂಪಾಯನ ಎಂಬ ಗಿಳಿ ಹೇಳಿತು, ಎಂದು ಹೇಳಲಾಗಿದೆಯೆಂದ ಮೇಲೆ ಹಕ್ಕಿಗಳ ಧ್ವನಿಯಲ್ಲಿ ಜನರು, ಇಟ್ಟ ಮೂಢ ನಂಬುಗೆ ವ್ಯಕ್ತವಾಗುವುದು. ಇದನ್ನೇ ಹೊಟ್ಟೆ ಹೊರೆಯಲು ಹಲವರು ಬಳಸಿಕೊಂಡು, ಬೀದಿಗುಂಟ ಹಾಲಹಕ್ಕಿ, ಗಿಳಿಗಳನ್ನಿಟ್ಟುಕೊಂಡು, ಭವಿಷ್ಯ ಹೇಳಲು ಕುಳಿತುಬಿಡುತ್ತಾರೆ.]

ಹಾಲಹಕ್ಕಿಯು ಗೈಯುವ ಇಂಚರದಿಂದ ಭವಿಷ್ಯದ ಒಳಿತು-ಕೆಡುಕು ಫಲಗಳು ಉಂಟಾಗುತ್ತವೆ, ಎಂದು ನಂಬುವವರು, ಎಷ್ಟೋ ಜನ. ಹಾಲಹಕ್ಕಿಗೆ ಮಾನವನ ಭವಿಷ್ಯದ ಫಲ ಏನು ತಿಳಿಯಬಹುದು? ನಿಜವಾಗಿ ಆಲೋಚಿಸಿ, ನೋಡಿದರೆ, ತನ್ನ ಭವಿಷ್ಯವನ್ನೂ, ಹಿಗ್ಗು-ಕುಗ್ಗುಗಳನ್ನೂ ಸ್ವಪ್ರಯತ್ನದಿಂದಲೇ ಪ್ರತಿಯೊಬ್ಬನೂ ನಿರ್ಧರಿಸುವನು.

೩೩೨

ಪಾಡಿಕಾದುಜಗಕಿ ಪಂಚಾಂಗಮುಲುನೆಪ್ಪಿ, ಕೊಂಚೆಮ್ಮಿನ ಬುದ್ಧಿನೊಂಚಲೇಕ,
ಬ್ರಹ್ಮಮೆರುಗಕಿಟ್ಲು ಪೌರೋಹಿತಮುಜೀಯ, ವಿಶ್ವದಾಭಿರಾಮ ವಿನುರ ವೇಮ.

ಪಾಡಲ್ಲವೊ ಜಗದಿ ಪಂಚಾಂಗ ಪೇಳಲು.
ಇನಿತಾದರು ಬುದ್ಧಿ ದಣಿಸದನಕ;
ಬ್ರಹ್ಮವರಿಯುವನಕ ಪೌರೋಹಿತ್ಯ ಹೊಲ್ಲ
ವಿಶ್ವದಾಭಿರಾಮ ಕೇಳು ವೇಮ

(ನೂತನ ವರ್ಷಾವಧಿಯಲ್ಲಿ ಸಂಭವಿಸಬಹುದಾನ ಮಳೆ-ಬೆಳೆ, ಬೆಳ್ಳಿ-ಬಂಗಾರದ ಬೆಲೆಗಳ ಏರಿಳಿತ, ಭೂಕಂಪ, ಮಹಾಪೂರ, ಗ್ರಹಣ ಇತ್ಯಾದಿ ಹಲವಾರು ವಿಷಯಗಳ ಬಗ್ಗೆ ಜ್ಯೋತಿಷಿಗಳು ಬರೆದುದೇ ಪಂಚಾಂಗ,) ಇದರ ಪುಟ ತಿರುವಿ, ಕೇಳುವವರಿಗೆ ಕಾಸು ಕೊಂಡು, ಏನನ್ನೋ ಹೇಳುವುದು ಒಳ್ಳೆಯದಲ್ಲ. ಪಂಚ ಅಂಗಗಳನ್ನು ಶುದ್ಧ ಮನಸ್ಸಿನಿಂದ ನಿಗ್ರಹಿಸಿಕೊಂಡು ಮನಶ್ಶಾಂತಿ ಮಾಡಿಕೊಳ್ಳಬೇಕು. ಆಗ ಪೇಟೆಯ ಬೆಲೆ ಯಾವುದಿದ್ದರೂ ಶಾಂತಿ ಲಭಿಸುತ್ತದೆ. ಬ್ರಹ್ಮಜ್ಞಾನ ಮಾಡಿಕೊಳ್ಳದೆ, ಪ್ರಕೃತಿಯ ಸ್ವಭಾವ ಭೇದಿಸಿ ತಿಳಿಸಿ ಹೇಳುವ ಪಂಚಾಂಗ ಹೇಳದ ಪೌರೋಹಿತ್ಯಕಾಯಕವು ಸರಿಯೆನ್ನಿಸಲಾರದು.

೩೩೩

ದ್ವಿಜಕುಲಂಬುನಂದು ದೇಜರಿಲ್ಲುಚು ಬುಟ್ಟ, ತಾದರಿಂಚಿ ಯೊರುಲ ದಾಟ ಜೇಯ.
ಲೇನಿಯಾತಡುನ್ನ ಲೇಕುನ್ನನೊಕ್ಕಟೀ, ವಿಶ್ವದಾಭಿರಾಮ ವಿನುರ ವೇಮ.

ದ್ವಿಜ ಕುಲದೊಳು ತೇಜವಂತನಾಗಿ ಜನಿಸಿ.
ತಾನು ದಾಟ; ಅನ್ಯರ ದಾಟಿಸನು;
ಆವನಿದ್ದರು ಒಂದೆ; ಇರದಿದ್ದರು ಒಂದೆ.
ವಿಶ್ವದಾಭಿರಾಮ ಕೇಳು ವೇಮ.

ದ್ವಿಜ ಕುಲದಲ್ಲಿ ಜನಿಸಿದವರು ಅಧ್ಯಯನ, ಇಜ್ಯಾ ದಾನಾದಿಗಳನ್ನು ಮಾಡಬೇಕೆಂಬ ನಿಯಮನ್ನು ಧರ್ಮ ಸೂತ್ರಗಳಲ್ಲಿ ವಿಧಿಸಲಾಗಿದೆ. ಈ ದ್ವಿಜರು ವೇದ ವಿದ್ಯೆ ಕಲಿಯಲು ಅನುಕೂಲ ಪಡೆದವರು; ಬ್ರಹ್ಮಚಾರಿಗಳು. ಇವರೇ ವೇದಾಭ್ಯಾಸದಿಂದ, ಯೋಗ ಸಾಧನೆಯಿಂದ ಋಷಿಗಳಿನಿಸಹತ್ತಿದ್ದರು. ತಾನು ಬ್ರಹ್ಮಜ್ಞಾನ ಪಡೆದು ಮುಕ್ತನಾಗಬೇಕಾದವನು. ಸಂಸಾರ ದಾಟಬೇಕಾದವನು. ಆದರೆ ಸಂಕುಚಿತ ದೃಷ್ಟಿ, ಮೇಲು ಕೀಳಿನ ದೃಷ್ಟಿಯಿಂದ ತಾನೂ ಮುಕ್ತಿ ಹೊಂದಲಾರ; ಇತರ ಉದಾರ ಚರಿತ್ರರು ಸಹೃದಯರು ಮುಕ್ತಿ ಹೊಂದಲು ಬಿಡಲಾರ; ವೇದಾದಿಗಳನ್ನು ಅವರು ಓದಲೇ ಕೂಡದೆಂದು ಇವನ ಹಟ. ಇಂಥ ದ್ವಿಜನು ಈ ಭೂಮಿಯಲ್ಲಿ ಹುಟ್ಟಿ ಜೀವಿಸಿದ್ದರೂ ಒಂದೇ, ಹುಟ್ಟದೆ ಇದ್ದರೂ ಒಂದೇ.

೩೩೪

ಐದುವ್ರೆಳ್ಳಬಲಿಮಿ ಹಸ್ತಂಬುಪನಿಜೇಯು, ನಂದೊಕಟಯುವೀಡ ಜೊಂದಿಕ ಚೇಡು,
ಸ್ತೀಯುಡೊಕಡಃವಿಡಿನ ಜೇಡುಗದಾ ತನಬಲ್ಕಿ ? ವಿಶ್ವದಾಭಿರಾಮ ವಿನುರ ವೇಮ.

ಐದುಬೆರಳ ಶಕ್ತಿಯಿಂದ ಕೈಯ ಕಾರ್ಯ
ಒಂದು ಕಳೆಯೆ ಹೊಂದಿಕೆಹಿಂಗುವುದು
ನಂಬಿದವರೊಳೊಬ್ಬ ಕೊರೆಯೆ ಕೇಡು ಕಣಾ !
ವಿಶ್ವದಾಭಿರಾಮ ಕೇಳು ವೇಮ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಪಂಚಮರೆಂದು ಐದು ಭಾಗಗಳಲ್ಲಿ ಸಮಾಜವನ್ನು ಒಡೆದು ಹಾಕಿದ್ದಾರೆ. ಇದರಿಂದ ಸಮಾಜ ಪ್ರಗತಿಪರವಾಗಿ ಮುಂದುವರೆಯಲಾರದಾಗಿದೆ. ಹೇಗೆಂದರೆ. ಹಸ್ತದ ಐದೂ ಬೆರಳುಗಳು ಕೂಡಿ ಕೆಲಸ ಮಾಡಿದರೆ ಕಾರ್ಯವು ಸರಿಯಾಗಿ ಯುಕ್ತಿ ಪೂರ್ಣವಾಗಿ ಆಗುವುದು. ಆದರೆ ಆ ಐದು ಬೆರಳುಗಳಲ್ಲಿ ಒಂದು ಬೆರಳು ಹೋದರೆ, ಇರುವ ಹೊಂದಿಕೆ ಇಲ್ಲವಾಗುವುದು. ಹೇಗೆಂದರೆ. ನಂಬಿದವರಲ್ಲಿ ಒಬ್ಬನು ಬಿಟ್ಟು ಹೋದರೆ, ಕೇಡಾಗುವುದಿಲ್ಲವೇ ?

೩೩೫

ಸೋಮುಲತರಸವು ಸೋಲಲಕೊಲದಿನಿ, ದ್ರಾವಿ ಮಿಗುಲ ದಾಮೆ ಚೇವಟಂಡ್ರು
ಕ್ರತುಫಲಂಬು ಕಂತಗತಮುಗು ಗಾಬೋಲು ? ವಿಶ್ವದಾಭಿರಾಮ ವಿನುರ ವೇಮ.

ಸೋಮಲತಾರಸವ ಪಾವಿನಳತೆಯುಷ್ಟು
ಸೇವಿಸಿ, ನೇಣದನೆ ಸಾರವೆಂಬರು.
ಕ್ರತುಫಲಗಳು ಕಂತಗತವಾಗಿರಲಳವೆ ?
ವಿಶ್ವದಾಭಿರಾಮ ಕೇಳು ವೇಮ.

(ಅಥರ್ವ ವೇದದಲ್ಲಿ ಹೀಗೆ ಹೇಳಿದೆ:" ಹತ್ತು ತಲೆ ಮತ್ತು ಹತ್ತು ಮುಖಗಳನ್ನು ಹೊತ್ತ ಬ್ರಾಹ್ಮಣನು ಪ್ರಪ್ರಥಮನಾಗಿ ಹುಟ್ಟಿದನು. ಅವನು ಸೋಮಪಾನ ಮಾಡಿದನು. ಅವನು ವಿಷವನ್ನು ಶಕ್ತಿ ವಿಹೀನವಾಗಿ ಮಾಡಿದನು") ಯಜ್ಞ ಪೂಜೆ ಗೈದು, ಹೆಂಡದ ಮಡಿಕೆಗೆ ಬೂದಿ ಬಳೆದು ದೇವರಿಗೆ ಅರ್ಪಿಸಿದರೆ, ಅದು ಅಮೃತ ಸಮಾನ ಪ್ರಸಾದವೆಂಬ ಭಾವನೆಯುಂಟು. ಅದನ್ನು ಎಲ್ಲರೂ ಸೇವಿಸುತ್ತಿದ್ದರು. ಅಷ್ಟೇ ಈ ಅಮೃತ ಸಮಾನ ಮದ್ಯವೇ ಯಜ್ಞದ ಫಲವೆಂದೂ, ಯಜ್ಞ ಫಲದ ಸಾರವೆಂದೂ ಹೇಳುತ್ತಿದ್ದರು. ಅಂದರೆ ಯಜ್ಞದ ಫಲವು ಆತ್ಮ ದರ್ಶನವೂ ಮೋಕ್ಷವೂ ಆಗಿರದೆ, ಕಂಠಮಟ ಕುಡಿಯುವ ಪೇಯ ರೂಪವಾಗಿದೆಯೇ ?

೩೩೬

ಸಮುದಯಂಬುನಂದು ಸರ್ವವೊಕ್ಕಟಯ್ಯೆನ, ವೈರವೊದವ ದೆಟ್ಟವಾರಲ್ಯೆನ,
ಹೆಚ್ಚುತಗ್ಗುಲಂದು ನೇರ್ಪಡುರಾ ಹಾನಿ, ವಿಶ್ವದಾಭಿರಾಮ ವಿನುರ ವೇಮ.

ಸರ್ವೋದಯದಿ ಸರ್ವರೊಂದೆಯಾಗಿ ಬಾಳಿ
ಸನುತ ನೆಯ್ಮೆಯಿಂದ ವೈರ ಹೂಳಿ,
ನಿಲಲು, ಮೇಲುಕೀಳು ಬುಡಮೇಲು ಕೇಳಿ,
ವಿಶ್ವದಾಭಿರಾಮ ಕೇಳು ವೇಮ.

ಎಲ್ಲರೂ ಸಮ್ಯಕ್ ಜ್ಞಾನದಿಂದ ಒಂದೇ ಎಂಬ ಭಾವನೆಯನ್ನು ಹೊಂದಿ, ಸತ್ಕಾರ್ಯ ನಿರತವಾಗಿ ಸರಸ್ಪರ ದ್ವೇಷಾಸೂಯೆ ವೈರ-ಹಗೆತನದ ಭಾವನೆಯನ್ನು ನಿಗ್ರಹಿಸಿ, ಬಾಳಬೇಕು. ಅಂಥ ಸರ್ವೋದಯ ಸಮಾಜದಲ್ಲಿ ಮೇಲು-ಕೀಳು ಎಂಬ ಭೇದ-ಭಾವಗಳು ಹಾನಿಕಾರಕವೆಂದೇ ಗಣಿಸಲ್ಪಡುವವು.

೩೩೭

ವೇಷಧಾರಿನೆಪುಡು ವಿಶ್ವಸಿಂಪಗರಾದು, ವೇಷದೋಷಮುಲೊಕ ವಿಧಮೆ ಯಗುನು
ರಟ್ಟು ಕಾದೆಮುನ್ನು ರಾವಣುವೇಷಂಬು ? ವಿಶ್ವದಾಭಿರಾಮ ವಿನುರ ವೇಮ.

ವೇಷಧಾರಿಗಳಲಿ ವಿಶ್ವಾಸವಿಡಹೊಲ್ಲ;
ವೇಷದೋಷ ಪೂರ್ಣ ಲೋಕದೊಳಗೆ,
ವೇಷ ರಟ್ಟು ಆಯ್ತು, ರಾವಣನದು ಮೊದಲು.
ವಿಶ್ವದಾಭಿರಾಮ ಕೇಳು ವೇಮ.

(ಭಸ್ಮವು ಯಜ್ಞದ ಅವಶೇಷವು. ಭಸ್ಮ ಹಚ್ಚಿದರೆ ಸ್ವಾರ್ಥ ಸುಖವಿಲಾಸಗಳನ್ನು

ಸುಟ್ಟು ಭಸ್ಮ ಮಾಡಿದಂತೆ ಎಂಬ ಭಾವನೆಯಂತೆ. ಹಣೆಗೆ, ಮೈಗೆ ಭಸ್ಮ ಬಳಿದುಕೊಳ್ಳುತ್ತಾರೆ. ಕಾಮ ಲೋಭದಾಸೆಗೆ ದಾಸರಾಗಿ ಕುಣಿಯುತ್ತಾರೆ. ಹಣೆಗೆ ಗಂಧ ಹಚ್ಚುವುದು ದೇವರಿಗೆ ಹಚ್ಚಿದ ಗಂಧವೇ. ಹಣೆಗೆ ಗಂಧ ಹಚ್ಚಿದೊಡನೆ ಈ ಮಸ್ತಕ ದೇವನದೇ ಎಂಬ ಭಾವನೆ ಬಂದು ಅವನ ಬುದ್ಧಿ ಪರಿಶುದ್ಧವಾಗುತ್ತಿದೆಯಂತೆ. ಕೈಗೆ, ಕಾಲಿಗೆ ಹೊಟ್ಟೆಗೆ ಭಸ್ಮ ಗಂಧ ಬಳಿದಾಗ,ಆಯಾ ಅವಯವ ದೇವರವೇ ಎಂಬ ಭಾವನೆ ಬರುತ್ತದಂತೆ, ಮೂರೆಳೆಯ ಜನಿವಾರ ಹಾಕಿದರೆ, ಕರ್ಮ ಜ್ಞಾನ ಭಕ್ತಿಗಳ ಮೂರೆಳೆ ಕೂಡಿಸಿದ ಬ್ರಹ್ಮಗಂಟ್ಟೆ ಅದಾಗುತ್ತದಂತೆ. ಆದರೆ ವಾಸ್ತವದಲ್ಲಿ ಎಲ್ಲರೂ ಈ ಸಂಕೇತಗಳನ್ನು ಧರಿಸಿ ಕೇವಲ ಹೊಟೆ ಹೊರೆಯುವ,ಮೋಸ ಮಾಡುವ ಕೆಲಸ ಕಾರ್ಯಗಳನ್ನು ಕೈಕೊಳ್ಳುತ್ತಾರೆ. ಭಸ್ಮಧಾರಿಯಾಗಿ ದಂಡ–ಕಮಂಡಲು ಧರಿಸಿ, ಯತಿ ವೇಷದಲ್ಲಿ ಬಂದ ರಾವಣನು ಸೀತಾದೇವಿಯನ್ನು ಎತ್ತಿಕೊಂಡು ಒಯ್ದ,ರಾಮಾಯಣ ಕಥೆ ಎಲ್ಲರಿಗೂ ಗೊತ್ತೇ ಇದೆ. ಕಾರಣ.)

ಯಾರಾದರೂ ಬಾಹ್ಯ ಸಂಕೇತಗಳನ್ನು ಧರಿಸಿ, ಸಾಧು ಸಂತರೆಂದು ವೇಷ ಹಾಕ್ಕಿಕೊಂಡು ಬಂದರೆ, ನಾವು—ಭಸ್ಮ ಬಳಿದು ವೈಷ್ಣವ, ಸ್ಮಾರ್ತ ಭಾಗವತರೆಂದು ನಟಿಸಿದರೆ ಅವರಲ್ಲಿ ವಿಶ್ವಾಸವಿಡಬಾರದು. ವೇಷ ಹಾಕುವುದು ಲೋಕ ದೃಷ್ಟಿಯಲ್ಲಿ ದೋಷಪೂರ್ಣವಾದುದು. ರಾವಣನು ಮರೆ ವೇಷದಿಂದ ಬಂದು ಅಪಹರಿಸಿದರೂ, ಕೊನೆಗೆ ಗುಟ್ಟುರಟ್ಟಾಯಿತಲ್ಲವೇ ?

೩೩೮

ಊಪಿರುನ್ನಯಪುಡೆ ಯುಪದೇಶಮುಂದುಮು, ರೂಪುವ ಯು ನೆಪುಡೊ ರೂಢಿಗಾನು,
ಬಾಹಡ್ಮೆನನೇಮಿ ? ಬಡಬಾಗ್ನಿಮ್ರಿಂಗುನಾ ? ವಿಶ್ವದಾಭಿರಾಮ ವಿನುರ ವೇಮ.

ಊಸಿರು ಹೋಹ ಮುನ್ನ ಉಪದೇಶವ ಹೊಂದು,
ರೂಪು ಹೋಹುದಿದುವೆ ಸತ್ಯರೂಢಿ;
ಬೊಮ್ಮಣೇನು ವಡವಾಗ್ನಿ ಭುಂಜಿಪನೇ ?
ವಿಶ್ವದಾಭಿರಾಮ ಕೇಳು ವೇಮ.

(ಯಮ—ನಿಯಮಾದಿ ಯೋಗ ಸಾಧನೆಯ ಹಂತಗಳನ್ನು ದಾಟಿ ನಿರ್ವಿಕಲ್ಪ ಸಮಾಧಿಯ ಹಂತವನ್ನು ತಲುಪಬೇಕಾದರೆ, ದೀರ್ಘ ಕಾಲ ಬೇಕು. ದೇಹಾರೋಗ್ಯದ ಬಗೆಯೋಗ್ಯ ಲಕ್ಷ್ಯ ವಹಿಸಬೇಕು. ಇದುವೇ ಹಠಯೋಗದ ಗುರಿ. ರಾಜಯೋಗದ ಗುರಿ ಮುಟ್ಟಲು ಇಂಥ ಪ್ರಾಥಮಿಕ ಸಾಧನೆ ಅವಶ್ಯಕ. ಕಾರಣ ....) ಈ ಜೀವನವು ಕೊನೆಗೊಳ್ಳುವ ಮೊದಲೇ ಮುಕ್ತಿ ಪಥದ ಬಗ್ಗೆ ಉಪದೇಶವನ್ನು ಪಡೆಯಬೇಕು. ಏಕೆಂದರೆ ಈ ರೂಪಧಾರಿ ದೇಹವು ನಾಶವಾಗತಕ್ಕದ್ದೇ. ಇದರ ನಾಶವು ಸತ್ಯವಾದ ನಿತ್ಯ ನಿಯಮ ಬದ್ಧವಾದುದು. ಬ್ರಾಹ್ಮಣ ಜಾತಿಯವನಾಗಿ ಹುಟ್ಟಿದರೇನಾಯ್ತು ? ಈ ತೆರನಾದ ಉಪದೇಶ ಬೇಕೇ ಬೇಕು. ಅವನೇನು ಮರಣವನ್ನು ಮೀರಿದವನೇ ? ಅವನು ಇತರರಂತೆ ಅನ್ನ ತಿನ್ನದೆ ಅಗ್ನಿಯನ್ನು ತಿನ್ನುತ್ತಿರುವನೇ ?

೩೩೯

ಶೂದ್ರಯುವತಿಕೊಡುಕು ಶುದ್ಧಾಂತರಂಗುಡ್ಮಿ, ವೇದವೇದ್ಯಮ್ಮೆನ ಪಾದುದೆಲಿಸಿ,
ಬ್ರಹ್ಮಪದವಿಗನ್ನ ಬ್ರಾಹ್ಮಣುಡೇಕದಾ ? ವಿಶ್ವದಾಭಿರಾಮ ವಿನುರ ವೇಮ.

ಶೂದ್ರಯುವತಿಸುತಗಿದೆ, ಶುದ್ಧಾಂತರಂಗ;
ವೇದ ವೇದ್ಯಮೂಲವಯಲಾಗ,
ಬೊಮ್ಮ ಪದವಿ ಹೊಂದಿ ಬೊಮ್ಮಣನಾಗನೇ ?
ವಿಶ್ವದಾಭಿರಾಮ ಕೇಳು ವೇಮ.

ಹಿನ್ನೆಲೆ:– ಶೂದ್ರ ವೇದ ಓದುವ ಅರ್ಹತೆಯ ಬಗ್ಗೆ ಗೌತಮ ಧರ್ಮಸೂತ್ರದಲ್ಲಿ ಹೀಗೆ ಹೇಳಲಾಗಿದೆ. "ಅವನು (ಶೂದ್ರನು) ವೇದಗಳನ್ನು ಬುದ್ಧಿಪೂರ್ವಕವಾಗಿ ಕೇಳಿದರೆ, ಅವನ ಕಿವಿಯಲ್ಲಿ ಕರಗಿಸಿದ ಅರೆಗು ಇಲ್ಲವೆ ಸತುವನ್ನು ಹಾಕಬೇಕು. ಅವನು ವೇದಗಳನ್ನು ಪಠಿಸಿದರೆ, ಅವನ ನಾಲಗೆಯನ್ನು ಕತ್ತರಿಸಬೇಕು. ಅವನು ವೇದಗಳನ್ನು ನೆನಪಿಟ್ಟುಕೊಂಡಿದ್ದರೆ, ಅವನ ದೇಹವನ್ನು ಸೀಳಿ ಹಾಕಬೇಕು.'' ಗೌತಮ ಧರ್ಮ ಸೂತ್ರದ ಧ್ವನಿಯಲ್ಲಿಯೆ ಇತರ ಧರ್ಮ ಸೂತ್ರಗಳೂ ನುಡಿಯುತ್ತಿವೆ. ಇದರಿಂದಾಗಿ ವೇದವನ್ನು ನೂರಕ್ಕೆ ತೊಂಭತ್ತರಷ್ಟು ಜನ ಓದಬಾರದೆಂದಾಗಿ ಜ್ಞಾನ ಪ್ರಸಾರ ಕುಂಠಿತವಾಯಿತು. ಆದರೆ ಸ್ಮೃತಿ ಸೂತಗಳ ಕಾಲದ ಈ ನಿರ್ಬಂಧವು ವೇದ ಕಾಲದಲ್ಲಿ ಇರಲಿಲ್ಲ. ಋಗ್ವೇದದಲ್ಲಿ ಮೂರೇ ವರ್ಣಗಳ ಉಲ್ಲೇಖವಿದೆ.

೩೪೦

ಬ್ರಾಹ್ಮಣುನಕುಮ್ಮೊಕ್ಕ ಬಲುದೀವೆನಲೊಸಂಗು, ನಾತ್ಮಶುದ್ಧಿಕಲುಗು ನಾತಡ್ಮೆನ,
ಗಲಗುನೆನ್ನಿ ಕಾಮಿ ಕಂಠಶೋಷಯೆಸುಮೀ ವಿಶ್ವದಾಭಿರಾಮ ವಿನುರ ವೇಮ.

ಬೊಮ್ಮಣಂಗೆ ನಮಿಸಲವನು ಹರಕೆಯೀವ;
ಆತ್ಮಶುದ್ಧಿ ಹೊಂದಿ ಅತನಿರಲು,
ಎಲ್ಲ ಸಫಲವಲ್ಲದಿರಲು ಕಂಠಶೋಷ,
ವಿಶ್ವದಾಭಿರಾಮ ಕೇಳು ವೇಮ.

(ಮನು ಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ: "ಬ್ರಾಹ್ಮಣನು ಹತ್ತು ವರ್ಷದವನಿದ್ದು, ಕ್ಷತ್ರಿಯನು ನೂರು ವರುಷದವನಿದ್ದರೆ ಅವರಿಬ್ಬರು ತಂದೆ—ಮಕ್ಕಳೆಂದು ಭಾವಿಸಬೇಕು. ಆದರೆ ಅವರಲ್ಲಿ ಬ್ರಾಹ್ಮಣನೇ ತಂದೆಯೆಂದು ತಿಳಿಯಬೇಕು.

"ತಲೆ ನೆರೆತ ಮಾತ್ರಕ್ಕೆ ಹಿರಿಯನಾಗಲಿಲ್ಲ. ತೀರ ಚಿಕ್ಕವನಿದ್ದರೂ ಸಹ ವೇದಗಳನು ತಿಳಿದವನೇ ಹಿರಿಯನೆಂದು ದೇವರು ಗಣಿಸುತ್ತಾರೆ.")

ಆದರೆ ಈ ರೀತಿಯ ಉಲ್ಲೇಖಗಳು ಆತ್ಮ ಶುದ್ಧಿ ಹೊಂದಿದ ಬ್ರಾಹ್ಮಣನನ್ನು ಕುರಿತವೆ. ಏಕೆಂದರೆ ಅವನು ಸರ್ವವನ್ನು ತನ್ನಂತೆ ಕಂಡು, ಸರ್ವಹಿತದಲ್ಲಿ ಸಂತೋಷ ಕಾಣು

ತ್ತಾನೆ. ಅಂಥ ಬ್ರಾಹ್ಮಣನಿಗೆ ನಮಿಸಿದರೆ, ಅವನು ನಮಗೆ ನಾಲ್ಕು ತಿಳಿವಳಿಕೆಯ ಉಪದೇಶ ಹೇಳಿ, ಒಳ್ಳೆಯದಾಗುವ ಮಾರ್ಗ ತೋರಿ, ಯಶಸ್ಸಾಗಲಿ ಎಂದು ಆಶಿಸಿ, ಹರಸುತ್ತಾನೆ. ಹರಕೆಯನ್ನೂ ಮಂತ್ರ ರೂಪವಾಗಿ ಪಠಿಸುತ್ತಾನೆ. ಆದರೆ ಆ ಬ್ರಾಹ್ಮಣನಿಗೆ ಸರ್ವ ಕಲ್ಯಾಣ ಬಯಸುವ ಆತ್ಮ ಶುದ್ಧಿ ಇಲ್ಲದಿದ್ದರೆ ಅವನ ಉಪದೇಶಗಳು ಕೇವಲ ಕಂಠ ಶೋಷಣೆ (ಮಾತನಾಡುವಾಗ ಉಸಿರು ಬಿಡುವುದರಿಂದ ಗಂಟಲು ತೇವ ಒಣಗುವದೆಂಬ ಅರ್ಥ) ಅಷ್ಟೇ.

೩೪೧

ಬಾಹಡ್ಮೆನನೇಮಿ ? ಭಕ್ತುಡ್ಮೆನನುನೇಮಿ ? ಯತಿಯುನ್ಮೆನ ನನ್ಯುಡ್ಮೆನ ನೇಮಿ ?
ಇನ್ನಿಯ್ಮೆನವೆನುಕ ನಿನಜುಂಡು ಪನಿದೀರ್ಚು, ವಿಶ್ವದಾಭಿರಾಮ ವಿನುರ ವೇಮ.

ಬ್ರಾಹ್ಮಣಾದರೇನು ? ಭಕ್ತನಾದರೇನು ?
ಯತಿಯು ಆದರೇನು ? ಇತರರೇನು ?
ಯಾರಾದರೂ ಯೆಮ ತಾನು ಬೆನ್ನು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿದವನಿಗೆ ಮರಣ ನಿಶ್ಚಯವು. ಅವನು ಬ್ರಾಹ್ಮಣ ಇವನು ಶೂದ್ರ; ಅವನು ಭಕ್ತ ಇವನು ನಾಸ್ತಿಕ; ಅವನು ಯತಿ ಇವನು ಮ್ಲೇಚ್ಛ ಎಂದು ಯಮನ ದೃಷ್ಟಿಯಲ್ಲಿ ಯಾವುದೇ ಭೇದ ಭಾವ ಇರುವುದಿಲ್ಲ. ಹುಟ್ಟಿದ ಜೀವಿಗೆ ಅವನ ಕರ್ಮಕ್ಕನುಸರಿಸಿ, ಅವನ ಆಯುಷ್ಯವು ಪೂರ್ವನಿಯಾಮಕವಾಗಿದ್ದು, ಹಾಗೇ ಸಂಭವಿಸುತ್ತದೆ.

೩೪೨

ಕಲ್ಲುತ್ಯಾಗುವಾನಿ ಗಲ್ಲುವುಚ್ಚನರಾದು, ಕಲ್ಲಲಾಡುವಾಡೆ ಕಲ್ಲುಮ್ಮುಚ್ಚು,
ನಿಜಮುಬಲ್ಕುನ್ನ ನೀಚಚಂಡಾಲುಂಡು, ವಿಶ್ವದಾಭಿರಾಮ ವಿನುರ ವೇಮ.

ಕಳ್ಳು ಕುಡಿಯುವವನು ಕಳ್ಳ ಕುಡುಕನಲ್ಲ
ಸುಳ್ಳು ನುಡಿಯುವವನೆ ಕಳ್ಳ ಕುಡುಕ.
ನಿಜವ ನುಡಿಯದವನೆ ನೀಚ ಚಂಡಾಲನು
ವಿಶ್ವದಾಭಿರಾಮ ಕೇಳು ವೇಮ.

(ವೈದಿಕ ಧರ್ಮ ಸೂತ್ರಗಳನ್ವಯ ಮಾಂಸ ಭಕ್ಷಣವಾಗಲಿ ಸುರಾಪಾನವಾಗಲಿ ನಿಷೇಧಿಸಲ್ಪಟ್ಟಿಲ್ಲ. ಆದರೆ ಸುಳ್ಳು ಹೇಳುವುದು ಮಾತ್ರ ಎಂದಿನಿಂದಲೂ ನಿಷೇಧಿಸಲ್ಪಟ್ಟಿದೆ. ಯಾರೂ ಬ್ಬರು ಮದ್ಯ ಕುಡಿಯಬಹುದು. ಆದರೆ ಯಾರೊಬ್ಬರೂ ಸುಳ್ಳು ನುಡಿಯಬಾರದು. ಕಾಳೀದೇವತೆಯ ಆರಾಧಕರು ದೇವಿಗೆ ಮದ್ಯ ಮಾಂಸ, ಮೀನು, ಮುದ್ರಾ (ಹುರಿಗಾಳು) ಮತ್ತು ಮೈಥುನಾದಿ ಅರ್ಪಿಸುತ್ತಿದ್ದರೂ, ಸುಳ್ಳು ಹೇಳುವುದನ್ನು ಪಾಪವೆಂದೇ ಗಣಿಸಿದ್ದಾರೆ. ಕಾರಣ ....)

ಮದ್ಯ ಕುಡಿಯುವವನು ಕಳ್ಳ ಕುಡುಕನಲ್ಲ. ಆದರೆ ಸುಳ್ಳು ಹೇಳಿ, ತನ್ನ ಬಗ್ಗೆ, ಧರ್ಮದ ಬಗ್ಗೆ, ಸತ್ಯದ ಬಗ್ಗೆ ಅಪಚಾರ ಗೈವವನು ನಿಜವಾಗಿ ಅಹಂಭಾವ, ದ್ವೇಷಾಸೂಯೆಗಳ ಮದ ನೆತ್ತಿಗೇರಿದ ಹೆಂಡ – ಕುಡುಕನಿಗಿಂತ ಕಡೆಯಾದ---ಮನುಷ್ಯನಾಗಿದ್ದಾನೆ. ಯಾರು ಬ್ರಹ್ಮನ್ ಸ್ವರೂಪದ ಬಗ್ಗೆ, ಸತ್ಯವಾದುದನ್ನು ನುಡಿಯುವದಿಲ್ಲವೋ ಅವನೇ ನೀಚನು. ಸತ್ಯ ವಿಚಾರದ ಸರ್ವ ಸಮತೆಯನ್ನು ಮುಚ್ಚಿ ಮರೆ ಮಾಡುವ ಅವನೇ ಭ್ರಷ್ಟನಾದ ಚಂಡಾಲ.

೩೪೩

ದಾಸರನಗವಚ್ಚು ವೇಸಾರ್ಲಕ್ಕೆನನು, ಜಂಗಮನಗವಚ್ಚು ಲಿಂಗಮುನ್ನೆ,
ಬಾಪಡನಗರಾದು ಪದಿವೇಲಕ್ಕೆನನು, ವಿಶ್ವದಾಭಿರಾಮ ವಿನುರ ವೇಮ.

ದಾಸನೆನಲೇಸು ಸಾವಿರಸಲವೋರ್ವನ
ಜಂಗಮನೆನಲೇಸು ಲಿಂಗವಿರಲು,
ಬ್ರಾಹ್ಮಣನೆನಬೇಡ; ದಶಸಹಸ್ರಕೊಬ್ಬನ.
ವಿಶ್ವದಾಭಿರಾಮ ಕೇಳು ವೇಮ.

ಸರ್ವಾಂತರ್ಯಾಮಿ ಪರಮಾತ್ಮನಿಗೆ ಸಂಪೂರ್ಣ ಶರಣು ಹೋದ ಯಾರೊಬ್ಬನನ್ನೂ ದಾಸನೆಂದು ಸಾವಿರ ಸಲ ಕರೆಯಬಹುದು. ಏಕೆಂದರೆ ಎಲ್ಲರೂ ಪರಮಾತ್ಮನ ಹಂಚಿಕೆಯಂತೆ ವ್ಯವಹರಿಸುವ ದಾಸರಷ್ಟೇ. ಅದೇ ರೀತಿ, ಸ್ಥಾವರ ಪರಮಾತ್ಮನ ಲಿಂಗ ಅಂದರೆ ಗುರುತು ಇರುವ, ಯಾವುದೇ ಜೀವಿಯನ್ನು ಜಂಗಮನೆಂದು ಕರೆಯಬಹುದು. ಆದರೆ, 'ಬ್ರಹ್ಮನ್' ಅರಿತು, ಅದರೊಂದಿಗೆ ಜೀವಿಸುವವನು ಮಾತ್ರ ಬ್ರಾಹ್ಮಣನೆನಿಸುವನು. ಬ್ರಹ್ಮಂ ಚರತಿ ಇತಿ ಬ್ರಾಹ್ಮಣಃ ಅಂಥವನಿಗೆ ವಿಶೇಷ ಗೌರವಾದರಗಳನ್ನು ನೀಡಬೇಕು. ಅವನ ಮಾತಿಗೆ ಅನುಸರಿಸಿ ನಡೆಯಬೇಕು. ಕಾರಣ ಕಂಡ-ಕಂಡವರನ್ನು, ಹುಟ್ಟಿನಿಂದ ಶ್ರೇಷ್ಠರೆನ್ನುವವರನ್ನು ಬ್ರಾಹ್ಮಣನೆನ್ನಲಾಗದು. ನಿಜವಾಗಿ ಬ್ರಾಹ್ಮಣನೆನ್ನಿಸುವವನು ಹತ್ತು ಸಾವಿರಕ್ಕೊಬ್ಬರಾದರೂ ಸಿಕ್ಕುವರೋ, ಇಲ್ಲವೋ ಗೊತ್ತಿಲ್ಲ.

೩೪೪

ದರ್ಶನಮುಲಯಂದು ಧರಷಣ್ಮತಮುಲಂದು. ವರ್ಣಮಾಶ್ರಮಮುಲ ವದಲ–ಕಪುಡು,
ತಿರುಗುಚುನ್ನುವಾಡು ಧರಲೋನ ನಜ್ಞಾನಿ, ವಿಶ್ವದಾಭಿರಾಮ ವಿನುರ ವೇಮ.

ದರ್ಶನಗಳೊಳು ಸಲೆ ಷಣ್ಮತಂಗಳೊಳಗೆ,
ಧರೆಯ ವರ್ಣಾಶ್ರಮ ಬಿಡದೆಂದಿಗು,
ಬರಿದೆ ತಿರುಗುವನನು ಧರಣಿಯೊಳಜ್ಞಾನಿ
ವಿಶ್ವದಾಭಿರಾಮ ಕೇಳು ವೇಮ

ದರ್ಶನಗಳು ಆರು. ಪುರುಷ-ಪ್ರಕೃತಿ, ಎಂಬ ತತ್ತ್ವಗಳನ್ನು ಸ್ವೀಕರಿಸಿ, ಅವರೆಡಕ್ಕೂ ಮಿಗಿಲಾದ ಪುರುಷೋತ್ತಮನಲ್ಲಿ ಭಕ್ತಿಯನ್ನು ಬೋಧಿಸುವುದು ಸಾಂಖ್ಯದರ್ಶನ.

ಚಿತ್ತವೃತ್ತಿ ನಿರೋಧದಿಂದ ಸಂಯಮ ಸಮಾಧಿ ಹೊಂದುವುದೇ ಯೋಗದರ್ಶನ. ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಮೂರು ಮುಖ್ಯ ಪ್ರಮಾಣಗಳನ್ನಾಧರಿಸಿ ಜ್ಞಾನದ ಕಡೆಗೆ ಎಳೆದುಕೊಂಡು ಹೋಗುವುದೇ ನ್ಯಾಯ-ವೈಶೇಷಿಕ [ತಾರ್ಕಿಕ] ದರ್ಶನ. ವೇದವು ಅಪೌರುಷೇಯವಾದುದರಿಂದ ನಿತ್ಯವಾದುದು; ನಿರ್ದೋಷವಾದುದು. ಈಶ್ವರನಿಗಿಂತಲೂ ಯಜ್ಞಕರ್ಮವೇ ಮುಖ್ಯ. ದ್ರವ್ಯ ಮತ್ತು ದೇವತೆಗಳು ಸಿದ್ಧವಸ್ತುಗಳಾದುದರಿಂದ ಗೌಣ. ಎನ್ನುವುದೇ ಪೂರ್ವ ಮೀಮಾಂಸೆ ದರ್ಶನ. ಆತ್ಮ-ಬ್ರಹ್ಮ ಸಂಬಂಧವನ್ನು ತಿಳಿಸುವುದೇ ವೇದಾಂತ ದರ್ಶನ. ವೇದ ಪ್ರಾಮಾಣ್ಯವನ್ನು ಅಂಗೀಕರಿಸದ ಮತವೇ ಚಾರ್ವಾಕದರ್ಶನ.

ಸ್ವದೇಶೀಯ ಮತಗಳಲ್ಲಿ ಆಯಾ ದೇವತೆಯೇ ಪ್ರಾಧಾನ್ಯವಾದ ಶೈವ, ವೈಷ್ಣವ, ಶಾಕ್ತ, ಸಾರ, ಗಾಣಪತ್ಯ ಮತ್ತು ಕೌಮಾರ ಎಂಬವು ಷಣ್ಮತಗಳು.

ವೇದದಲ್ಲಿ ಪುರುಷಸೂಕ್ತದಲ್ಲಿ ಹೇಳಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರವೆಂಬವು ನಾಲ್ಕು ವರ್ಣಗಳು. ಧರ್ಮಸೂತ್ರಗಳಲ್ಲಿ ಹೇಳಿದ, ಬ್ರಹ್ಮಚರ್ಯ ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳೆಂಬವು, ನಾಲ್ಕು ಆಶ್ರಮಗಳು.

ಸತ್ಯವರಿಯಲು ಇರುವ ಮೆಟ್ಟಿಲುಗಳಂತೆ ಬೇರೆ ಬೇರೆಯವರು ಈ ಭೇದ ಪ್ರಭೇದಗಳನ್ನು ಬಳಸಿ ಸಾಗಿದರು. ಆದರೆ ಸತ್ಯವು, ದರ್ಶನ, ಮತ, ವರ್ಣಾಶ್ರಮಗಳ ಸಂಕೋಲೆದಾಟಿದ ಪರವಸ್ತು. ಈ ಕೃತ್ರಿಮ ಭೇದಗಳನ್ನು ಕೊನೆಯವರೆಗೆ ಬಿಡದೆ ಉಳಿವವನು, ಅಜ್ಞಾನಿಯೇ ಸರಿ.

ತ್ರಿಪದಿ ೫

ಟೀಕವ್ಯಾಸಿನಟ್ಲನೇಕುಲು ಪೆದ್ದಲು, ಲೋಕಮಂತ ಚೆಪ್ಪಿ ರೇಕಮನುಚು,
ಗಾಕುಲಟ್ಟ ಜನುಲು ಕಾನರೀಮರ್ಮಮ್ಮು, ವಿಶ್ವದಾಭಿರಾಮ ವಿನುರ ವೇಮ

ಟೀಕೆ ಬರೆಯುವಂಥನೇಕ ಹಿರಿಯರೆಲ್ಲ,
ಲೋಕಕೆ ಹೇಳಿದರು : ' ಏಕದೇವ. '
ಕಾಗೆಯಂಥ ಜನರು ಕಾಣರಿದರ ಭಾವ.
ವಿಶ್ವದಾಭಿರಾಮ ಕೇಳು ವೇಮ.

[' ಏಕಂ ಸದ್ವಿಪ್ರಾ ಬಹುಧಾ ವದಂತಿ ' ; ' ಏಕಂ ಸಂತಂ ಬಹುಧಾ ಕಲ್ಪಯಂತಿ ' ಇತ್ಯಾದಿ ಮಂತ್ರಗಳು ವೇದದಲ್ಲಿವೆ. ಜಗತ್ತಿನ ಸೃಷ್ಟಿ ಸ್ಥಿತಿ-ಲಯಗಳಿಗೆ ಕಾರಣನಾದ ಪರಮಾತ್ಮನೊಬ್ಬನೇ ' ಏಕತ್ವೇ ಸತಿ ನಾನಾತ್ವಂ, ನಾನಾತ್ವೇಸತಿ ಚೈಕತಾ ' ಎಂದು ಹಿರಿಯರು ಹೇಳಿದ್ದಾರೆ.] ವೇದೋಪನಿಷತ್ತುಗಳಿಗೆ ಟೀಕೆ ಬರೆದ ಭಾಷ್ಯಕಾರರೆಲ್ಲ ದೇವನೊಬ್ಬ ನಾಮ ಹಲವು ಎಂದರು.

ಇ ನವುದೊಂದು ; ಅದನ್ನೇ ಋಷಿಗಳು ಭಿನ್ನ ಭಿನ್ನ ಹೆಸರಿನಿಂದ ಕರೆದರೆಂದು ಲೋಕವ ಜನರಿಗೆ ಹೇಳಿದ್ದಾರೆ. ಆದರೂ ಸಹ ಯಾರೊಬ್ಬರು, ಶಿವ, ವಿಷ್ಣು, ಗಣಪತಿ, ಸೂರ್ಯ,ಶಕ್ತಿ, ಕುಮಾರಸ್ವಾಮಿ ಇತ್ಯಾದಿ ದೇವತೆಯೇ ಶ್ರೇಷ್ಠವೆಂದೊಡನೆ,ಅದನ್ನೇ ನಂಬಿ ಒಂದು ದೇವತೆಯನ್ನು ಇನ್ನೊಂದು ಹೆಸರಿನ ದೇವತೆಯಿಂದ ಭಿನ್ನವೆಂದು ಗಣಿಸಿ, ತಾವು

ನಂಬಿದ ದೇವತೆಯೇ ಉಳಿದವುಗಳಿಗಿಂತ ಶ್ರೇಷ್ಠವೆನ್ನುತ್ತಾರೆ. ಪರಸ್ಪರ ದ್ವೇಷಾಸೂಯೆಗಿಳಿಯುತ್ತಾರೆ. ಒಂದು ಕಾಗೆ ಇನ್ನೊಂದು ಕಾಗೆಯನ್ನು ಕಂಡು ' ಕಾವ್ ಕಾವ್ ' ಎನ್ನುವಂತೆ ಲೋಕದ ಜನರ ಸ್ವಭಾವ.

ತ್ರಿಪದಿ ೬

ಜಾತಿಮತ ಮುಲಂದು ಜನುಲೆಲ್ಲ ಬದ್ಧುಲ್ಕೈ, ಭಾವ ಪರಮುನುದು ಬ್ರಾಲು ಮಾಲಿ,
ಚಚ್ಚಿ ಪುಟ್ಟಚುಂದ್ರು ಜಡಮತುಲ್ಕೈ ಭುವಿ. ವಿಶ್ವದಾಭಿರಾಮ ವಿನುರ ವೇಮ.

ಜಾತಿ ಮತದಲ್ಲಿ ಜನತೆಯೆಲ್ಲ ಬದ್ಧ;
ಭಾವ ಪರವಶತೆಯಲಿ ಜಡರಾಗಿ,
ಸತ್ತು ಸತ್ತು ಹುಟ್ಟುತಿಹರು ಜಡಮತಿಗಳೊ.
ವಿಶ್ವದಾಭಿರಾಮ ಕೇಳು ವೇಮ.

ಹಲವಾರು ಜಾತಿಮತಗಳಲ್ಲಿ ಬದ್ಧರಾದ ಜನರು ತಮ್ಮ ತಮ್ಮಲ್ಲಿ ಭಿನ್ನಾಭಿಪ್ರಾಯ ತಾಳಿ, ಯಾವುದೋ ಒಂದು ಅಂಶವನ್ನೇ ನಂಬಿ ಇನ್ನುಳಿದ ಅಂಶಗಳನ್ನು ನಿರ್ಲಕ್ಷಿಸಿ, ಇಲ್ಲವೆ ಅನವಶ್ಯಕವಾದ ವಿವರಗಳನ್ನು ಕುರಿತು ಆಲೋಚಿಸಿ, ಭಾವನಾಪರವಶತೆಯಲ್ಲಿ ಜಡರಾದ ಮನುಷ್ಯರು ನಿರಾಶೆಯಿಂದ ಆತ್ಮನ ಅನ್ವೇಷಣೆಯನ್ನು ತೊರೆದುದು ಮಾತ್ರವಲ್ಲ; ಇದೊಂದು ನಿಷ್ಪ್ರಯೋಜನ, ಇದರಿಂದ ಯಾವ ಸಾರ್ಥಕವೂ ಇಲ್ಲವೆಂದು ಸಾರಿದ್ದಾರೆ. ಜಡತೆಯನ್ನು ವ್ಯಕ್ತಪಡಿಸಿದ್ದಾರೆ. ಆತ್ಮನ ಅಮರತ್ವವನ್ನೂ ದೇಹದ ಜಡತ್ವವನ್ನೂ ತಿಳಿದುಕೊಳ್ಳುವ ಯೋಗ ಸಾಧನೆಗೈಯಲಾರದ ಇವರೆಲ್ಲ ಸಚ್ಚಿದಾನಂದ ಸ್ಥಿತಿಯ ಮುಕ್ತಿಯನ್ನು ಹೊಂದದೆ ಇಚ್ಛಾಶಕ್ತಿಯ ದಾಸರಾಗಿ ಕರ್ಮ ಬಂಧನದಿಂದ ಪುನಃ ಪುನಃ ಜನನ-ಮರಣ ಚಕ್ರದಲ್ಲಿ ಸಿಲುಕಿ ತೊಳಲಾಡುವರು.

ತ್ರಿಪದಿ ೭

ಗುಡುಗು ದೇವತಲನಿ ಗುರ್ತುಲುಗಾವಿಂತ್ರು. ಮುಷ್ಟಿ ಬಾಪಲನುಚು ಮೂಲ್ಗನೇಲ ?
ಪೊಪ್ಪೆಲಕುನು ದಾರಿ ಮುರಿಯಂಗ ಜೂಪಿರಿ, ವಿಶ್ವದಾಭಿರಾಮ ವಿನುರ ವೇಮ.

ಗುಡಿಯು ದೇವರೆಂದು ಗುರುತು ನಿಲಿಸಿದವರು,
ಹಿಡಿಯ ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

(ಮೌರ್ಯರು ಹಿರಣ್ಯಾರ್ಥವಾಗಿ ದೇವತಾ ವಿಗ್ರಹಗಳನ್ನು ಮಾಡಿಸುತ್ತಿದ್ದರೆಂದೂ, ಇದು ಹೇಯವೆಂದೂ, ಮೂಢಜನರನ್ನು ಮೋಸಗೊಳಿಸಿ ರಾಜಕಾರ್ಯ ಸಾಧಿಸುವ ಹಾದಿಯೆಂದೂ ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಪತಂಜಲಿಯ ಮಹಾಭಾಷ್ಯಗಳಿಂದ ತಿಳಿದು ಬರುತ್ತದೆ. ಪ್ರಾಚೀನ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಪದ್ಧತಿ ಇದ್ದರೂ ಹೊಟ್ಟೆಪಾಡಿಗಾಗಿ ಪೂಜೆ ಮಾಡುವ ಅರ್ಚಕರು ನೀಚ ಬ್ರಾಹ್ಮಣರೆಂದು ಸ್ಮೃತಿಗಳು ಹೇಳುತ್ತಿವೆ.)

ಆದರೆ ಮುಷ್ಟಿ ದಕ್ಷಿಣೆಯ ಆಸೆಯ ಬ್ರಾಹ್ಮಣರು ದೇವಾಲಯಗಳನ್ನೂ ದೇವ ವಿಗ್ರಹಗಳ ಅರ್ಚನೆಯನ್ನು ಕಲ್ಪಿಸಿಟ್ಟರೆಂದು ಆ ಬಗ್ಗೆ ಗೊಣಗಾಡುವುದೇತಕ್ಕೆ? ಮೂಡರಾಗಿ ಜಡಶಿಲೆಗಳಿಗೆ ಶರಣೆನ್ನುವ ಜನಸಾಮಾನ್ಯರಿಗೆ ರೂಪ ಮೀರಿದ ನಾವು ಮಹಿಮೆಯನ್ನು ನಾವು ರೂಪ ಮೀರಿದ ನಿರಾಕಾರ ಸತ್ಯ ಸ್ವರೂಪವನ್ನೂ ಮೊದಲು ತಿಳಿಸಿ ಹೇಳುವುದು 'ಮೇಲು. ಹಿರಿಯರು ನಮ್ಮನ್ನು ಕೆಡಿಸಿದರು, ಎನ್ನುವದಕ್ಕಿಂತ ನಾವೇ ಎಚ್ಚರವಾಗಿರುವದು ಮೇಲು.

೩೪೮

ಬರ್ರೆಲಟ್ಟು ಲರವ ಫಲಮೇಮಿಕಲದಯಾ, ಅಂದು ಸಾರ್ಥಕಂಬು ಜೆಂದಕುನ್ನ,
ನಿನ್ನವಾರು ವಾರಿ ವೆರ್ರುಲುಗಾನೆಂತ್ರು, ವಿಶ್ವದಾಭಿರಾಮ ವಿನುರ ವೇಮ

ಮಹಿಷದಂತೆ ಕೂಗಲು ಮಹಾಫಲವುಂಟೆ ?
ಅರ್ಥವಿರದ ನುಡಿಯು ಕೊರಳಗಂಟೆ?
ಕೇಳುವವರ ಕಣ್ಣಿಗವರು ಮರುಳರಷ್ಟೆ.
ವಿಶ್ವದಾಭಿರಾಮ ಕೇಳು ವೇಮ

(ನೀನೆ ತಂದೆ, ನೀನೆ ತಾಯಿ, ನೀನೇ ಬಂಧು, ನೀನೆ ಗುರು, ನೀನೆ ಸರ್ವಸ್ವ-ನೀನು ದೇವರ ದೇವ; ಎಲ್ಲ ಜಗತ್ತು ನಿನ್ನದು. ಸರ್ವರಿ ಪ್ರೇರಕನು ನೀನು' ಎಂಬಿತ್ಯಾದಿ ವಿಶಾಲವಾದ ಅರ್ಥದ ವೇದ ಮಂತ್ರಾದಿಗಳಲ್ಲಿ ಮೂಲ ಸಂಸ್ಕೃತದಲ್ಲಿ ಸಾಮ ಗಾನಕ್ಕೆ ಹಾ, ಹೇ, ಹೂ ಪದ ಸೇರಿಸಿ ಪಠಿಸಿದರೂ, ಅದರ ಅರ್ಥ ಮಾಡಿಕೊಳ್ಳದಿದ್ದರೆ, ಅದಕ್ಕೆ ಅರ್ಥ ತಿಳಿದು ಅದಕ್ಕೆ ತಕ್ಕಂತೆ ಆಚರಿಸದಿದ್ದರೆ, ಎಮ್ಮೆ ಧ್ವನಿ ತೆಗೆದು ಕೂಗಿದಂತೆ ಮಾತ್ರ.)

ಅರ್ಥವಿಲ್ಲದೆ ಮಂತ್ರ ಪಠಿಸಿದರೆ ಎಲ್ಲವೂ ವ್ಯರ್ಥವಷ್ಟೆ. ಅದರಿಂದ ಫಲವಿಲ್ಲ. ಎಮ್ಮೆ ಒದರಿದ ರೀತಿ. ಅದೇ ರೀತಿ ಎತ್ತಿನ ಕೊರಳಿಗೆ ಗಂಟೆ ಕಟ್ಟಿದರೆ ಉಂಟಾಗುವ ಶಬ್ದದಂತೆ, ಗುಡಿಯ ಗಂಟೆಯ ಶಬ್ದವೂ. ನಾಟಕೀಯವಾಗಿ ಧ್ವನಿತೆಗೆದು ಮಂತ್ರ ಪಠಿಸುವ (ದಕ್ಷಿಣಾರ್ಥವಾಗಿ) ಅರ್ಚಕರನ್ನು ಕಂಡವರೆಲ್ಲರಿಗೂ ಅರ್ಚಕರಿಗೇನು ಹುಚ್ಚು ಹಿಡಿಯಿತೇ ಎನ್ನಿಸುತ್ತದೆ.

೩೪೯

ಪ್ರಾಕಟಮುಗ ನಿಂತ ಲೋಕಮಂದುನ ಗುಂಟ. ಪಲ್ಲೆಮುತ್ತಡೆನ್ನ ಬರಮ ಗುಣುಡು,
ಅನ್ನದಾನವುನನು ಹರಿಭಕ್ತಿ ಚೇತನು, ವಿಶ್ವದಾಭಿರಾಮ ವಿನುರ ವೇಮ.

ಪ್ರಕಟವಾಗಿ ಲೋಕದೊಳಗೆ ಬಾಳುತಿಪ್ಪ,
ಗುಂಟಪಲ್ಲಿ ಮುತ್ತನೆಂಬ ಸುಗುಣಿ,
ಅನ್ನದಾನಿಯಾತ, ಹರಿಭಕ್ತಿ ಚೇತ;
ವಿಶ್ವದಾಭಿರಾಮ ಕೇಳು ವೇಮ

ಗುಂಟಪಲ್ಲಿಯ ಮುತ್ತನೆಂಬ ದಾನಿಯೂ ಸದ್ಗುಣಿಯೂ ಈ ಲೋಕದಲ್ಲಿ ಒಳ್ಳೆಯ ಆದರ್ಶ ವ್ಯಕ್ತಿಯಾಗಿ ಬಾಳುತ್ತಿದ್ದಾನೆ. [ಇವನೋ ಅಥವಾ ಇದೇ ನಾಮಾಂಕಿತ ಇವನ ವಂಶಜರೋ, ಕೂಂಡವೀಡು ವೀನುಗೊಂಡ, ಬೆಲ್ಲಮುಕೊಂಡ, ನಾಗಾರ್ಜುನಕೊಂಡ ಇತ್ಯಾದಿ ನಾಲ್ಕು ದುರ್ಗಗಳಿಗೆ ಅಧ್ಯಕ್ಷನಾಗಿದ್ದನು. ಶ್ರೀ ಶೈಲಾದಿ ರಾಮೇಶ್ವರ ವರೆಗಿನ ಸಕಲ ದೇವಾಲಯ ದಾನಗೈದನು. ಈತನು ಗೋಲಕೊಂಡದ ನವಾಬನ ಪ್ರತಿನಿಧಿಯಾಗಿ ಸರ್ವಾಧಿಕಾರಿಯೆಂದು ನೇಮಕಗೊಂಡಿದ್ದನಂತೆ) ಈ ಮುತ್ತ ಮಹಿಮನು ಸುಪ್ರಸಿದ್ಧ ಅನ್ನದಾನಿಯು ; ಮೇಲಾಗಿ ಹರಿಭಕ್ತಿಯಿಂದ ತುಂಬಿದ ಮನಸ್ಸುಳ್ಳವನು.

೩೫೦

ಋಗ್ಯಜುಸ್ಸುಲೆರಿಗಿ ಯೋಗ್ಯತಲೇಕುನ್ನ, ವಿಪ್ರುಡೈನ ನೆಟ್ಲು ವಿಹಿತುಡಗುನು ?
ಭರ್ತಕಲ್ಲಿ ಯನ್ಯುಭಾವಿಂಚುಸತಿವಲೆ, ವಿಶ್ವದಾಭಿರಾಮ ವಿನುರ ವೇಮ.

ಋಗ್ಯಜುಸ್ಸನರಿತು, ಯೋಗ್ಯತೆಯಿರದಾಗ,
ವಿಪ್ರನಾದರೆಂತು ವಿಹಿತವಹುದು ?
ಗಂಡನಿರಲು ಅನ್ಯಗೊಲಿವ ಪತ್ನಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

(ಬ್ರಾಹ್ಮಣನಿಗೆ ವಿಪ್ರ ಎನ್ನುವುದು ಸಾಮಾನ್ಯ ಅರ್ಥ. ವೇದಗಳನ್ನು ಓದಿ, ಉಪದೇಶ ನೀಡುವ ಪೌರೋಹಿತ್ಯ ವಹಿಸುವವರೂ ಕೇವಲ ಬ್ರಾಹ್ಮಣರೇ. ವೇದೋಪನಿಷತ್ತುಗಳನ್ನು ಅರಿತೊಡನೆ ಅವರಿಗೆ ಸರ್ವಸಮತೆಯ ಭಾವ ಮೂಡಬೇಕು. ಸರ್ವವೂ ದೇವರ ಲೀಲೆ. ದೇವರ ಸೊತ್ತು ಎಂಬ ಭಾವ ಅವನದಾಗಬೇಕು. ಸರ್ವ ಜೀವಾತ್ಮಗಳೂ ಪರಮಾತ್ಮನ ಪ್ರತಿರೂಪ ಎಂಬ ಭಾವನೆ ಉದಯಿಸಬೇಕು. ಈ ತಿಳಿವಳಿಕೆಯು ಅವರಲ್ಲಿ ಬರಬೇಕಾದರೆ ಆವರಿಗೆ ಯೋಗ್ಯತೆ ಇದ್ದರೆ ಮಾತ್ರ ಸಾಧ್ಯ- ಹೇಗೆಂದರೆ, ವಿವಾಹದ ಕಾಲಕ್ಕೆ ವಧೂ-ವರರು ಪರಸ್ಪರ ವಚನ ಕೊಡುತ್ತಾರೆ: "ನಮ್ಮ ನಿಮ್ಮ ಉದ್ದೇಶ, ಮನಸ್ಸು ಮತ್ತು ಹೃದಯಗಳು ಒಂದಾಗಲಿ; ನಮ್ಮ ನಿಮ್ಮ ಸಂಘಟನೆಗೆ ಬೆಲೆ ಬರುವಂತೆ ನೋಡಿಕೊಳ್ಳುವಾ" ಎಂಬಿತ್ಯಾದಿ. ಅನಂತರ, ಗಂಡನು ಜೀವಂತವಿದ್ದರೂ ಬೇರೆಯವರನ್ನು ಒಲಿದರೆ ಆ ಹೆಣ್ಣು ತ್ಯಾಜ್ಯವೆಂದು ಗಣಿಸುತ್ತೇವೆ. ಪ್ರಾಚೀನ ಹಿಂದೂ ಶಾಸ್ತ್ರದಲ್ಲಿ ಮದುವೆ ಒಂದು ಸಂಸ್ಕಾರವೆಂದು ಗಣಿಸಿದ್ದರಿಂದ ಅಗಲಿಕೆ ಸ್ವೈರವೃತ್ತಿಯಿಂದ ವಿವಾಹ ರದ್ದಾಗುತ್ತಿರಲಿಲ್ಲ. ಆದರೂ ಆ ಶಾಸ್ತ್ರ ವಿರೋಧವಾಗಿ ವಿವಾಹ ವಿಚ್ಛೇದನ ನಡೆಸುತ್ತೇವೆ. ಅದೇ ರೀತಿ.....) ಋಗ್ವೇದ ಯಜುರ್ವೇದಗಳನ್ನು ಓದಿಕೊಂಡರೂ ಸಹ, ಯೋಗ್ಯತೆ ಇಲ್ಲದೆ ಇರುವವನು, ತಾನು ವಿಪ್ರನೆಂದು ಅಂದರೆ ಪಂಡಿತನೆಂದು ಹೇಳಿಕೊಂಡರೆ ಯಾರಿಗೆ ಹಿತವಾದೀತು? ಗಂಡನು ಜೀವಂತವಿರುವಾಗ ಬೇರೆಯವನನ್ನು ವರಿಸುವ ಹೆಂಡತಿಯನ್ನು ಬಿಡುವಂತೆ, ಇಂಥ ವಿಪ್ರನನ್ನೂ ತ್ಯಜಿಸಬೇಕು.

ಮೂಢಭಕ್ತಿಚೇತ ಮುಕ್ಕಂಟ ಬೂಜಿಂಪ, ಮುನ್ನು ಬೋಯನರುಡು ಮುಕ್ತುಡಾಯೆ,
ಪೂಜಕೇಮಿ? ತನದು ಬುದ್ಧಿ ಪ್ರಧಾನಂಬು, ವಿಶ್ವದಾಭಿರಾಮ ವಿನುರ ವೇಮ.

ಮೂಢ ಭಕ್ತಿಯಿಂದ ಮುಕ್ಕಣ್ಣನ ಭಜಿಸಿ
ಮುಂಚೆ ಬೇಡ ನರನು ಮುಕ್ತಿ ಪಡೆದ
ಪೂಜೆಯೆಷ್ಟೊ? ತನ್ನ ಬುದ್ಧಿ ಪ್ರಧಾನವೈ.
ವಿಶ್ವದಾಭಿರಾಮ ಕೇಳು ವೇಮ.

ಮೂರು ಕಣ್ಣುಳ್ಳ ಪರಶಿವನನ್ನು ಮೂಢಭಕ್ತಿಯಿಂದ ಬೇಡರ ಕಣ್ಣಪ್ಪನು ಆರಾಧಿಸಿ, ತನ್ನ ಕಣ್ಣನ್ನೇ ಕಿತ್ತುಕೊಟ್ಟನೆಂಬ ಕಥೆ ಹೇಳಿ ಮೂರ್ತಿ ಪೂಜೆಗೆ ಜನರನ್ನು ಸೆಳೆಯುತ್ತಾರೆ. ಆದರೆ ಕಣ್ಣಪ್ಪನು ಗೈದ ಬಾಹ್ಯಕರಣದ ಪೂಜೆ ಅರ್ಚನದ ಫಲ ಹೆಚ್ಚಾಗಲಾರದು. ಅವನು ಪರಶಿವನ ಸ್ವರೂಪದರ್ಶನಕ್ಕಾಗಿ ಅಹರ್ನಿಶ ಧ್ಯಾನಚಿಂತನ ಗೈದು, ದೃಷ್ಟಿ ವೈಶಾಲ್ಯ ಹೊಂದಿ ಸಚ್ಚಿದಾನಂದ ಸ್ವರೂಪನಾದ ಪರಶಿವನನ್ನು ಕಾಣಲು ಹೊರಗಣ್ಣು ತೊರೆದು ಒಳಗಣ್ಣು ತೆರೆದು ಕಂಡುಕೊಂಡಿರಬೇಕು. ಬಾಹ್ಯಚಕ್ಷುಗಳು ಪರಶಿವನ ಸ್ವರೂಪ ಕಾಣಲು ನಿರುಪಯೋಗಿ ಎಂಬುದನ್ನು ನಿರ್ದೇಶಿಸಲೆಂದೇ ಅವನು ತನ್ನ ಹೊರಗಣ್ಣುಗಳನ್ನು ಕಿತ್ತು ಬಿಟ್ಟನೆಂದೂ ಆಗ ಶಿವನು ಗೋಚರಿಸಿದನೆಂದೂ ಕಥೆ ಹಬ್ಬಿದೆ.ಇಂಥ ಕಥೆಗಳ ಒಳಮರ್ಮ ಅರಿತುಕೊಳ್ಳಬೇಕು.

೩೫೨

ಕೊಂಡ ದಂಡಿವಾವು ಕೊಂಡಕೂತುರೆ ಯಾಲು, ಕೊಂಡಮೇಟವಿಲ್ಲು ಕೊಂಡಯಿಲ್ಲು,
ಕೊಂಡವಂಟ ದೊರಯು ಗುಂಡಯಿಪೋಯೆನು, ವಿಶ್ವದಾಭಿರಾಮ ವಿನುರ ವೇಮ.

ಗಿರಿಯು ಹಿರಿಯ ಮಾವ; ಗಿರಿ ಕುವರಿ ವರಸತಿ;
ಗಿರಿಯೆ ವೀರ-ಬಿಲ್ಲು, ಗಿರಿಯೆ ಗೇಹ;
ಗಿರಿಯಂಥ ದೊರೆಯು ಗುಂಡುಗಲ್ಲಾದನೆ ?
ವಿಶ್ವದಾಭಿರಾಮ ಕೇಳು ವೇಮ.

ಹಿಮವಂತ ಪರ್ವತವೇ ಮಾವ ; ಆ ಪರ್ವತರಾಜನ ಪುತ್ರಿ ಪಾರ್ವತಿಯೇ ಹೆಂಡತಿ. ಮೇರು ಪರ್ವತವೇ ಧನಸ್ಸು ರಜತಾದ್ರಿ ಪರ್ವತವೇ ನಿವಾಸ. ಈ ರೀತಿಯಾದ ಪರ್ವತದಂಥ ದೊರೆಯಾದ ಪರಶಿವನು ಗುಂಡು ಕಲ್ಲಾಗಿಬಿಟ್ಟನು.

(ಪುರಾಣ ಕರ್ತೃಗಳು ಪರಶಿವನ ನಿರ್ಗುಣ ಕಲ್ಪನೆಗೆ ಸಾಕಾರ ರೂಪ ಕಲ್ಪಿಸುವಾಗ ಕಲ್ಲಿನಲ್ಲಿ ಲಿಂಗ ಸ್ಥಾಪಿಸಲಾಗುವುದರಿಂದ, ಕೇವಲ ಕಲ್ಲಿನ ಬೃಹದಾಕಾರ ರೂಪವಾದ ಪರ್ವತಗಳನ್ನೇ ಪರಮಾತ್ಮನೆಂದೂ; ಪರಮಾತ್ಮನ ಹೆಂಡತಿ, ಮಾವ, ಆಯುಧಗಳೆಂದೂ ಹೇಳಿದ್ದರೂ ಜನರು ಕಲ್ಲು ಕೇವಲ ಸಂಕೇತವೆಂದು ಅರಿಯದೆ ಅದರಲ್ಲಿಯೇ ಮೂಢಭಕ್ತಿ ತಾಳಿ ನಿಜವನ್ನೇ ಮರೆಯುತ್ತಾರೆ.)

ವಿಷ್ಣುಭಕ್ತುಲೆಲ್ಲ ವೆದಿಬೂದಿ ಪಾಲ್ಕೆರಿ, ವಾದಮೇಲ ? ಮತವಿಭೇದ ಮೇಲ ?
ತೆಲಿಯು ಲಿಂಗಧರುಲು ತಿರುಮಣಿ ಪಾಲ್ಕೆರಿ, ವಿಶ್ವದಾಭಿರಾಮ ವಿನುರ ವೇಮ.

ವಿಷ್ಣು ಭಕ್ತರೆಲ್ಲ ಕೊನೆಗೆ ಬೂದಿ ಪಾಲು
ವಾದ ವೇಕೆ ? ಮತ ವಿಭೇದವೇಕೆ ?
ಲಿಂಗಧಾರಿ ಮರಳಿ ಆದ ಮಣ್ಣು ಪಾಲು
ವಿಶ್ವದಾಭಿರಾಮ ಕೇಳು ವೇಮ

(ವೈಷ್ಣವರು ತಮ್ಮ ಶವಗಳನ್ನು ದಹನ ಮಾಡುತ್ತಾರೆ. ಶೈವರಾದ ಲಿಂಗಧಾರಿಗಳು ದಫನ ಮಾಡುತ್ತಾರೆ. ಈ ಎರಡು ಪದ್ಧತಿಗಳು ತುಂಬಾ ಅರ್ಥಗರ್ಭಿತವಾಗಿವೆ. ಬದಲಾಯಿಸುವ ದೇಹ ನಿಜವಾದ ಆತ್ಮವಲ್ಲ. ಜೀವವೇ ನಿಜವಾದ ಆತ್ಮ. ಎಂದು ತಿಳಿದವರು ಕಾಲವಾದವರ ದೇಹವನ್ನು ದಹಿಸುತ್ತಿದ್ದರು. ಅಷ್ಟೇಕೆ, ಆ ದೇಹದಲ್ಲಿರುವ ಜೀವಾತ್ಮನನ್ನು ಕರೆದೊಯ್ಯಲು ದೇವತೆಗಳ ಪ್ರತಿನಿಧಿಯಾದ ಅಗ್ನಿಯೇ ಸ್ವತ: ಮುಂದೆ ಮುಂದೆ ಕೆರೆದುಕೊಂಡು ಹೋಗಿ ಶವ-ಸಂಸ್ಕಾರದನಂತರ ಎದ್ದ ಉರಿಯು ಮೇಲು ಮೇಲಕ್ಕೆ ಹೋದಾಗ ಜೀವಾತ್ಮನೂ ಅದೇ ಹಾದಿ ಹಿಡಿಯುವನೆಂದು ಕಲ್ಪನೆ. ಆದರೆ ಯಾರು ಈ ದೇಹವೂ ಲಿಂಗರೂಪವೆಂದು ತಿಳಿಯುವರೋ ಅವರು ದೇಹವನ್ನು ಭೂಮಿಯಾಳದಲ್ಲಿ ಹುಗಿಯುತ್ತಾರೆ. ಇದಕ್ಕೆ ದಫನ ಸಂಸ್ಕಾರವೆಂದು ಹೆಸರು. ಕೆಲ ಸಂಸ್ಕೃತಿಗಳಲ್ಲಿ ಆ ಜೀವ ಮತ್ತೆ ಈ ದೇಹಗಳಲ್ಲಿ ಬಂದು ಸೇರಿಕೊಳ್ಳುವುದೆಂಬ ಕಲ್ಪನೆಯೂ ಇತ್ತು. ಇಜಿಪ್ತದ ಮಮ್ಮಿಗಳು ಇದೇ ವಿಚಾರ ಪ್ರಚೋದಿತವಾದವುಗಳು.)

ಹುಟ್ಟಿದವನಿಗೆ ಮರಣವು ನಿಶ್ಚಯವು. ಇದೇ ಸತ್ಯ.ಆದರೆ ಸತ್ತ ಮೇಲೆ ವೈಷ್ಣವನಾಗಿದ್ದರೆ ಅವನ ಶವವನ್ನು ಸುಡಬಹುದು. ಲಿಂಗಧಾರಿಯಾಗಿದ್ದರೆ ಅವನ ಶವವನ್ನು ಹೂಳಬಹುದು. ದಫನ-ದಹನಗಳು ಮತ ವಿಭೇದದ ಪರಿಣಾಮ. ಅದರಿಂದ ತನಗೇನಾಗಬೇಕು. ಸುಟ್ಟರೇನು ? ಹೂಳಿದರೇನು ? ಬೂದಿ ಪಾಲಾದರೇನು ? ಮಣ್ಣು ಪಾಲಾದರೇನು ? ಕಾರಣ ಮತ ವಿಭೇದದ ಹುಚ್ಚಿನಲ್ಲಿ ಸಿಕ್ಕು ಹೆಚ್ಚಾಗಿ ತೊಳಲಾಡಬಾರದು.

೩೫೪

ದೊಮ್ಮಮಾಯು ಕೊರಕು ನಮ್ಮವಾರಿಕಿವೇಟ, ಲಿಮ್ಮಟ ಡ್ರದೇಮಿ ದೊಮ್ಮತಿವುಲೊ?
ಅಮ್ಮವಾರಿ ಪೇರ ನಂದರುದಿನುಟಕಾ, ವಿಶ್ವದಾಭಿರಾಮ ವಿನುರ ವೇಮ.

ದಮ್ಮು ಗುಣಹೊಂದಲು ದುರುಗಮ್ಮಗೆ ಬೇಟಿ
ಭಕ್ಷ್ಯ ಬೇಕೆ ? ಏನಮ್ಮಗೆ ದಮ್ಮೆ ?
ಮಾರಿಯಮ್ಮ ಹೆಸರು! ಮಾಡುವುದು ತಿನ್ನಲು;
ವಿಶ್ವದಾಭಿರಾಮ ಕೇಳು ವೇಮ

(ಶಕ್ತಿ ದೇವತೆ ಶಿವನ ಹೆಂಡತಿ, ಪಾರ್ವತಿಯ ರೂಪವೆಂದು ಕಲ್ಪನೆ. ದುರ್ಗಾ, ಕಾಮಾಕ್ಷಿ, ಚಾಮುಂಡಿ, ಮಾರಿಯಮ್ಮ ಇತ್ಯಾದಿ ಹೆಸರಿನಿಂದ ಈ ಭೀಕರ ದೇವತೆಗೆ ಪೂಜೆ ಸಲ್ಲಿಸುತ್ತಾರೆ. ತಮಗೆ ರೋಗ ರುಜಿನುಗಳಾದರೆ, ಈ ಶಕ್ತಿದೇವತೆಗೆ ಮದ್ಯಮಾಂಸಗಳನ್ನು ಬಲಿಗೊಡುತ್ತಾರೆ. ಅದರಿಂದ ಸಂತುಷ್ಟಳಾದ ದೇವಿ, ಭಕ್ತರ ಕಷ್ಟ ಪರಿಹಾರ ಮಾಡುವಳೆಂಬ ನಂಬುಗೆಯಿದೆ. ಪಂಚತತ್ತ್ವಗಳೆಂದು ಕರೆಯಲ್ಪಡುವ ಮದ್ಯ, ಮಾಂಸ, ಮತ್ಸ್ಯ, ಮುದ್ರಾ (ಹುರಿಗಾಳು) ಮತ್ತು ಮೈಥುನ [ಪಂಚಮಕಾರಗಳು] ಎಂಬವುಗಳಿಂದ ದೇವಿ ಸಂತುಷ್ಟಳಾಗುವಳೆಂದು ತಿಳಿವಳಿಕೆ. ಮಾತೃರೂಪಿಣಿಯಾಗಿ ತೋರಬೇಕಾದ ಸಹೃದಯದ ದೇವತೆ ಮಾರಿ ರೂಪಿಯಾಗಿ ಮೃತ್ಯುರೂಪಿಣಿಯಾಗಿ ತೋರುತ್ತಿದ್ದಾಳೆ. (ಇದೆಲ್ಲ ಕೇವಲ ಜನರ ಅಜ್ಞಾನದ, ಮೂಢ ಭಕ್ತಿಯ ಪರಿಣಾಮವಷ್ಟೆ.)

ತನಗೆ ಬಂದ ದಮ್ಮುರೋಗವು ವಾಸಿಯಾಗಬೇಕಾದರೆ, ದುರಗಮ್ಮನಿಗೆ ಬೇಟೆ-ಭಕ್ಷ್ಯಗಳನ್ನು ಏಕೆ ಕೊಡಬೇಕು? ಏನು ದುರುಗಮ್ಮನಿಗೆ ದಮ್ಮುರೋಗ ಅಂಟಿದೆಯೆಂದು ಕಲ್ಪನೆಯೇ? ಆ ದೇವಿ ಬಲಿಕೊಟ್ಟ ಪಶುವಿನ ಮಾಂಸ ತಿಂದು, ರಕ್ತ ಸೇವಿಸಿದರೆ ಅವಳ ರೋಗ ಗುಣವಾಗಿ ತಾವೂ ಗುಣವಾಗುವರೇ? ತಮ್ಮ ನಾಲಗೆ-- ರುಚಿಯನ್ನೂ ಹಸಿವನ್ನೂ ತೃಪ್ತಿ ಬಡಿಸಿಕೊಳ್ಳಲು, ಮಾರಿಯಮ್ಮನ ಹೆಸರಿನಲ್ಲಿ ಪಶು ಕಡಿದು ತಿನ್ನುತ್ತಾರಷ್ಟೇ

೩೫೫

೩೫೫

ಮನಸುನದಯಲೇನಿ ಮಾಲಕೊಡುಕು ನೊದ್ದ ಜೀರಿಯುನ್ನಪ್ರಜಕು ಜೇಟುನಿಜಮು,
ಪೆದ್ದ ತನಮುಲೇದು ಪೆಂಕೆಲ ಕೆಪುಡುನು, ವಿಶ್ವದಾಭಿರಾಮು ವಿನುರ ವೇಮ.

ಮನದಿ ದಯವಿಲ್ಲದ, ಹೀನ ಹೊಲೆಯನ ಬಳಿ
ಕೂಡಿಕೊಂಡ ಜನಕೆ ಕೇಡು ನಿಜವು;
ದೊಡ್ಡ ತನವಿರದೊಡೆ, ಮಡ್ಡ ಮುಂಕೆಂದಿಗು
ವಿಶ್ವದಾಭಿರಾಮ ಕೇಳು ವೇಮ.

ದಯೆಯೇ ಧರ್ಮದ ಮೂಲ. ದಯೆಯಿಲ್ಲದಿದ್ದರೆ, ಅಂಥವನು ಪವಿತ್ರಾತ್ಮನೆನಿಸನು; ಹೊಲೆಯನೆನಿಸುತ್ತಾನೆ. ಅಂಥವನ ಬಳಿಗೆ ಸೇರಿದ ಜನರಿಗೆ ಕೇಡು ಬಾರದಿರದು. ದೊಡ್ಡ ಮನಸು, ಗಂಭೀರ ವರ್ತನೆ ಜಾಣನ ಲಕ್ಷಣ. ಅಂಥ ಘನತೆ, ದೊಡ್ಡಸ್ತಿಕೆ ಇಲ್ಲದಿದ್ದರೆ, ಅವನೇ ಮೂಢ. ಮಂದಮತಿ.

೩೫೬

ತಗವುದೀರ್ಚ್ಯವೇಳ ಧರ್ಮಂಬುದಪ್ಪಿನ, ಮಾನವುಂಡು ಪಾಪ ಮೂನಿಯುಂಡು,
ಧರ್ಮಮು ನೆಪಲಿಕಿನ ದೈವಂಬುತೋಡಗು ವಿಶ್ವದಾಭಿರಾಮ ವಿನುರ ವೇಮ-

ನ್ಯಾಯತೀರ್ಪು ನೀಡುವಾಗ ಧರ್ಮ ತೊರೆಯೆ,
ಹೇಯನವನು; ಪಾಪ ಸೋಸಬೇಕು;
ಧರ್ಮವಚನ ನುಡಿಯೆ, ದೈವವವಗೆ ನೆರವು
ವಿಶ್ವದಾಭಿರಾಮ ಕೇಳು ವೇಮ.

(ನ್ಯಾಯವೆಂದರೆ ಜ್ಞಾನದ ಕಡೆಗೆ ಎಳೆದುಕೊಂಡು ಹೋಗುವಿಕೆ. 'ನಿತರಾಂ ಈಯಂತೇ, ಗಮ್ಯಂತೇ ಗತಿ' ಯಾವುದರಿಂದ ವಿಷಯಜ್ಞಾನ ಲಭಿಸುತ್ತದೋ ಅದಕ್ಕೆ ನ್ಯಾಯವೆನ್ನುತ್ತಾರೆ.) ಇಂತು ವಿಷಯದ ಚರ್ವಿತ ಚರ್ವಣದಿಂದ, ಸಾಕ್ಷಿವಚನಗಳ ಆಧಾರದಿಂದ, ಧರ್ಮಾಧರ್ಮಗಳ ವಿವೇಚನೆಯಿಂದ ನ್ಯಾಯತೀರ್ಪು ನೀಡಬೇಕು. ಆದರೆ ತೀರ್ಪು ನೀಡುವಾಗ ಧರ್ಮ ತೊರೆದರೆ, ಅಂಥವನು ನ್ಯಾಯವಾದಿಯಲ್ಲ. ಹೇಯ ಮನುಷ್ಯ. ಇಂಥ ಅಪಚಾರ ಪಾಪವಮಯ. ಅದಕ್ಕಾಗಿ ಅವನಿಗೆ ಪ್ರಾಯಶ್ಚಿತ್ತವಿರಬೇಕು. ಯಾವನು ನ್ಯಾಯದಾನದ ಕಾಲಕ್ಕೆ ಧರ್ಮದ ವಿವೇಕ ಬುದ್ಧಿಯಿಂದ ತೀರ್ಪು ನೀಡುವನೋ ಅವನಿಗೆ ಆತ್ಮಬಲವೂ ಬರುತ್ತದೆ. ಅದೇ ದೈವದ ನೆರವು.

೩೫೭

ಭಾಷಲಾಡಕುನ್ನ ಬರುಲುಮೆಚ್ಚರುಕಾನ, ಭಾಷಲಾಡವಲಯು ಬರುವುಜಾಚಿ,
ಭಾಷಪರುವುತೆರಗು ಬರಮಾತ್ಮುಡೆರುಗುನು, ವಿಶ್ವದಾಭಿರಾಮ ವಿನುರ ವೇಮ.

ಭಾಷೆಯಾಡದಿರಲು ದೇಶ ಮೆಚ್ಚದಯ್ಯ
ಭಾಷೆಯಾಡುವಾಗ ಹೊಣೆಯು ಬೇಕು.
ಭಾಷೆಹಿರಿಮೆಯರಿತು, ಈಶನರಿಯಬೇಕು
ವಿಶ್ವದಾಭಿರಾಮ ಕೇಳು ವೇಮ

(ಬ್ರಹ್ಮನೆಂದರೆ ಸಚ್ಚಿದಾನಂದ ಸ್ಥಿತಿ. ನಿರ್ಗುಣ; ಸಿಷ್ಕ್ರಿಯ; ಶಬ್ದಾತೀತ; ಅನಿರ್ವಚನೀಯ ಎಂದು ಬಣ್ಣಿಸುತ್ತೇವೆ. ಕಾರಣ ನಿರ್ವಿಕಲ್ಪ ಸಮಾಧಿಗೇರಿ ಬ್ರಹ್ಮವರಿತವನು ಬ್ರಹ್ಮವಿತ್' ಆಗಿ ಬ್ರಹ್ಮ ಸ್ವರೂಪನೇ ಆಗುತ್ತಾನೆ. ಆ ಸ್ಥಿತಿಯಲ್ಲಿ ತಾನು ಬೇರೆ, ಉಳಿದವರು ಬೇರೆಯೆಂಬ ಭಿನ್ನಭಾವವಳಿದು, ಹೇಳುವುದು ಕೇಳುವುದು ಎಂಬ ಭಾವವುಳಿಯುವದಿಲ್ಲ. ಮಾತು ಮೂಕವಾಗುತ್ತದೆ. ಮೌನ ಸ್ಥಿತಿಯಾಗುತ್ತದೆ. ಉಪದೇಶ ನೀಡಬೇಕಾದರೆ ಈ ಸ್ಥಿತಿಯಿಂದ ಕೆಳಗಿಳಿದು ಬರಬೇಕು ಎಂದು ಯೋಗಿಗಳು ಹೇಳುತ್ತಾರೆ.) ನಾವು ಕಂಡ ಸತ್ಯವನ್ನು ಲೋಕಕ್ಕೆ ಸಾರಲು ಭಾಷೆಯನ್ನು ಬಳಸಬೇಕಾಗುತ್ತದೆ. ಸತ್ಯವರಿತು ಮೌನಿಯಾಗಿದ್ದರೆ ಲೋಕಪ್ರಯೋಜನವಿಲ್ಲ. ಕಾರಣ ಲೋಕ ಅದನ್ನು ಮೆಚ್ಚದು. ಆದರೂ, ಭಾಷೆಯ ಪರ್ಯಾಪ್ತಿಯಲ್ಲಿ, ಅಂದರೆ ಅಳವಿನಲ್ಲಿ ಸತ್ಯದ ಬಣ್ಣನೆಗೆ ಇಳಿದಾಗ ಹೊಣೆಗಾರಿಕೆಯಿಂದ ಇರಬೇಕು. ಉತ್ತರಿಸಬಲ್ಲ ಶಕ್ತಿ ಇರಬೇಕು. ಹೀಗೆ ಭಾಷೆಯ ಇತಿ-ಮಿತಿಯನ್ನು ಗುರುತಿಸಿದ ಮೇಲೆ ಮಾತಿನ ಚೌಕಟ್ಟಿನಲ್ಲಿ ಚಿತ್ರಿಸಿದ ಬ್ರಹ್ಮನ ಸ್ವರೂಪದಿಂದ ಬ್ರಹ್ಮನ ನೈಜ ಸ್ವರೂಪವನ್ನು ಮಾತಿನಾಚೆ ಹೋಗಿ, ಧ್ಯಾನ ಚಿಂತನಾದಿ ಸಾಧನೆಯಿಂದ ಕಂಡುಕೊಳ್ಳಬೇಕು.

೩೫೮

ವಾವಿವರ್ತನಲುನು ಪರುಸಲು ಮರ್ಯಾದ, ದಪ್ಪಿನಡಿಚೆನೇನಿ ದಗುಲು ಗೀಡು;
ವದಲದೆಪುಡು ದಾಕು ಮುಂದುರ ದಪ್ಪದು, ವಿಶ್ವದಾಭಿರಾಮ ವಿನುರ ವೇಮ

ಭಾವ-ಬಂಧು ಸಂಬಂಧಿ ಮರ್ಯಾದೆಗಳೊಳು,
ನೀತಿ ತಪ್ಪಿದಾಗ ತಾಪಕೀಡು;
ಬಿಡದೆಂದು ಬಪ್ಪುದು; ತಪ್ಪದಯ್ಯ ನೋವು.
ವಿಶ್ವದಾಭಿರಾಮ ಕೇಳು ವೇಮ

(ದುರ್ಗಾದೇವತೆಯ ಪ್ರತಿರೂಪಗಳಾದ ಕೆಲ 'ಅಮ್ಮ' ದೇವತೆಗಳ ಪೂಜೆಯ ಹೆಸರಿನಲ್ಲಿ ಮದ್ಯ ಮಾಂಸ, ಮೀನು, ಅರ್ಪಣೆ-ಸೇವನೆಗಳಲ್ಲದೆ, ವೈಧುನವೂ ಒಂದಾಗಿತ್ತು. ಕಾಳಿಯ ಪುರಾಣದಲ್ಲಿಯೇ ದೇವ ಕನ್ನೆಯ ವೈಧುನದ ವಿಧಿಯ ಉಲ್ಲೇಖವಿದೆ. ಕನ್ಯಾದೇವಿಯೊಡನೆ ಸಂಭೋಗ ಮಾಡುವುದರಿಂದ ತ್ರಿಪುರಸುಂದರಿ ದೇವತೆಯ ಸಂಗವಾಗಿ ಮುಕ್ತಿ ದೊರೆಯುತ್ತದೆ ಎಂಬ ಭಾವವಿತ್ತು. ಈ ಕನ್ಯಾದೇವತೆಗಳು ತಮ್ಮ ತೀರ ಹತ್ತಿರ ಸಂಬಂಧಿಗಳಿದ್ದರೂ ಲಕ್ಷಿಸುತ್ತಿರಲಿಲ್ಲ. ತಾಂತ್ರಿಕರ ಈ ವಿಚಿತ್ರ ವರ್ತನೆ ಧರ್ಮಕ್ಕೆ ಕೊಡಲಿಯೇಟು ಹಾಕಿತು.)

ಬಂಧು--ಬಳಗದವರಲ್ಲಿ, ರಕ್ತಸಂಬಂಧಿಗಳಲ್ಲಿ ವರ್ತಿಸಬೇಕಾದ ಮರ್ಯಾದೆಯ ಭಾವನೆಯನ್ನು ಬಿಟ್ಟು, ನೀತಿಯ ಕಟ್ಟುಪಾಡು ತೊರೆದು ವರ್ತಿಸಿದರೆ ಕಷ್ಟಕ್ಕೆ ಈಡಾಗುವರು. ಪಾಪಕಾರ್ಯ ಮಾಡುವಾಗ ಪರಿಣಾಮದ ಭೀತಿ ಮರೆಯುತ್ತೇವೆ. ಆದರೆ ಆಗಬೇಕಾದುದು ಆಗುತ್ತದೆ. ಅದೆಂದೂ, ತಪ್ಪಲಾರದು.

೩೫೯

ಹಿಂಸಜೇಯಕುಟಯೇ ಮುಖ್ಯಧರ್ಮಂಬು, ಪ್ರಾಣಿಜಂಪಿತಿ ನೆಡುವಾರಿಕನ್ನ
ಚಾವು ಪಶುವುದಿನೆಡಿ ಚಂಡಾಲುಡೇವೇಲು, ವಿಶ್ವದಾಭಿರಾಮ ವಿನುರ ವೇಮ.

ಹಿಂಸೆಗೈಯದಿಹುದೆ ಮುಖ್ಯಧರ್ಮವಯ್ಯ;
ಪ್ರಾಣಿಕೊಂದು ತಿನ್ನುವವನಿಗಿಂತ,
ಸತ್ತಪಶುವ ತಿಂಬ ಚಂಡಾಲನೆ ಮೇಲು
ವಿಶ್ವದಾಭಿರಾಮ ಕೇಳು ವೇಮ.

ಪ್ರಾಣಿಯನ್ನು ಬಳಲಿಸುವುದು, ಕೊಲ್ಲುವುದು ಹಿಂಸೆ. ಸಕಲ ಪ್ರಾಣಿಗಳಲ್ಲಿ ಪರಮಾತ್ಮನನ್ನು ಕಂಡರಿಯುವುದು ಧರ್ಮ. ಕಾರಣ ಹಿಂಸೆಗೈಯದೆ ಇರುವುದೇ ಮುಖ್ಯ ಧರ್ಮ. [ಆದರೆ ಧರ್ಮದ ಹೆಸರಿನಲ್ಲಿ ಯಜ್ಞ ನಡೆಸಿ, ಆಕಳು ಆಡುಗಳನ್ನು ಬಲಿಕೊಟ್ಟು, ಕಡಿದು ದೇವರ ಹೆಸರಿನಲ್ಲಿ ತಿನ್ನುವುದು ವೈದಿಕ ಧರ್ಮಸಮ್ಮತವಾಗಿತ್ತು. ಯಜ್ಞ ನಡೆಸುವ ಬ್ರಾಹ್ಮಣರು ಜೀವಂತ ಪ್ರಾಣಿ ಕೊಂದು ತಿನ್ನುತ್ತಿದ್ದರು. ಆದರೆ ಸತ್ತ ಪ್ರಾಣಿಯ ಮಾಂಸಭಕ್ಷಣೆ ತ್ಯಾಜ್ಯವೆನ್ನುತ್ತಿದ್ದರು. ಆದರೆ ಗೋಹತ್ಯೆಯಾಗಲೀ ಜೀವಂತ ಹೋತು ಕದಿಯುವದಾಗಲೀ ಹಿಂಸೆಯೇ ಹೊರತು ಸತ್ತ ಪ್ರಾಣಿಯ ಮಾಂಸಭಕ್ಷಣವಲ್ಲ. ಕಾರಣ....! ಜೀವಂತ ಪ್ರಾಣಿಗಳನ್ನು ಕೊಂದು ತಿನ್ನುವ ವಿಪ್ರಾದಿ ಮೇಲು ವರ್ಣದವರಿಗಿಂತ ಸತ್ತ ಪ್ರಾಣಿಯ ಮಾಂಸ ತಿನ್ನುವ ಚಂಡಾಲನು ಧಾರ್ಮಿಕ ನೈತಿಕ ದೃಷ್ಟಿಯಿಂದ ಎಷ್ಟೋ ಪಾಲು ಮೇಲು.

೩೬೦

ವೇಮುಡಿಟ್ಲು ಸೆಪ್ಪ ವೇಲಪದ್ಯಂಬುಲ, ದಪ್ಪ ಲೆನ್ನಿಯುನ್ನ ನೊಪ್ಪೆಯುಂಡು,
ತತ್ತರ ಪಡಕಂದು ಬಿತ್ತರಿವ್ಯೆಯುಂಡು, ವಿಶ್ವದಾಭಿರಾಮ ವಿನುರ ವೇಮ.

ವೇಮು ಹಾಡಿದ ಹಲ ಸಾಸಿರ ಪದ್ಯಂಗಳ
ತಪ್ಪನುಳಿದು ಒಪ್ಪು ಕಂಡು ತಿಳಿದು,
ಗುಣ ಗುರಿಯರಿತೋದಿ ಗಳಿಸು ವಿದ್ಯೆ ಬುದ್ಧಿ
ವಿಶ್ವದಾಭಿರಾಮ ಕೇಳು ವೇಮ

ವೇಮನ ಹಲವು ಸಾವಿರ ಪದ್ಯಗಳನ್ನು ರಚಿಸಿ ಹಾಡಿದನು. ಅದರಲ್ಲಿ ಅಲ್ಪ ಸ್ವಲ್ಪ ತಪ್ಪು ನುಸುಳಿಕೊಂಡಿದ್ದರೆ, ಅದನ್ನು ತೊರೆದು, ಒಪ್ಪು ಎನಿಸುವ ಪದ್ಯಗಳ ಅರ್ಥಗಳನ್ನೂ ಅವು ಸಮರ್ಥಿಸುವ ಗುಣವನ್ನೂ, ತೋರಿಸುವ ಗುರಿಯನ್ನೂ ತಿಳಿದು, ವಿದ್ಯೆ ಬುದ್ಧಿಗಳನ್ನು ಸಂಪಾದಿಸು. (ಕವಿಹೃದಯದ ಸವಿನಯತೆಯ ಸಾಕ್ಷಿಯಾಗಿ ಈ ಪದ್ಯವಿದೆ.)



ಸಾಂಸಾರಿಕ ವಿಭಾಗ

೩೬೧

ಕೂಟಕೆ ನೆಡಬಾಸಿ ಕೂರ್ಬುನ್ನ ಮನುಜಡುನೆ, ವೆಲದುಲಗನುಗೊನ್ನೆ ವೆತಲಜಿಕ್ಕು,
ಚಿಲಗಿ ಯಗ್ನಿಜೂಚು ಶಲಭಂಬು ಚಾಡ್ಪುನ, ವಿಶ್ವದಾಭಿರಾಮು ವಿನುರ ವೇಮು.

ಅನ್ನಕಿನಿತು ಗತಿಗಾಣದೆ ಕುಳಿತ ನರನು,
ಕನ್ನೆಕಂಡು ಮೋಹದಿ ಸಿಲುಕುವನು;
ಧಗಿಸುವಗ್ನಿ ಕಂಡ ಪತಂಗದಂತಯ್ಯ
ವಿಶ್ವದಾಭಿರಾಮು ಕೇಳು ವೇಮು.

ಜೀವಶಕ್ತಿ ದೇಹಕ್ಕೆ ಅನ್ನದಿಂದ ದೊರೆಯುತ್ತದೆ. ತನಗೆ ಸೇವಿಸಲು ಅನ್ನವೇ ಇಲ್ಲದಾಗ ಅವಶ್ಯಕವಾದ ಜೀವಶಕ್ತಿ ಇಲ್ಲದಾಗುವುದು. ಹೊಟ್ಟಿತುಂಬ ಅನ್ನ ದೊರಕಿಸಲು ಸಹ ಗತಿಯಿಲ್ಲದ ಮನುಷ್ಯನು ಶಕ್ತಿವಿಹೀನನಾಗುವನು.

ಸ್ತ್ರೀ ಸಂಗದಿಂದ ಶಕ್ತಿ ಹ್ರಾಸವಾಗುತ್ತದೆ. ಇದನ್ನು ತಿಳಿದಿದ್ದರೂ ಸಹ, ಶಕ್ತಿವಿಹೀನನಾದ ಮನುಷ್ಯನು ಸಹ ಹರೆಯದ ಕನ್ನೆಯನ್ನು ನೋಡಿದೊಡನೆ, ಭೋಗದಾಸೆಯಿಂದ ಮೋಹಗೊಳ್ಳುವನು. ಶಕ್ತಿ ಹ್ರಾಸವಾದರೂ ಚಿಂತೆಯಿಲ್ಲ !

ಹೇಗೆಂದರೆ, ಧಗ-ಧಗಿಸಿ ಉರಿಯುವ ಬೆಂಕಿಯ ಬಳಿ ಹೋದರೆ ತಾವು ಸುಟ್ಟು ಸತ್ತು ಹೋಗುತ್ತೇವೆಂಬುದು ಪತಂಗಗಳಿಗೆ ಗೊತ್ತಿದ್ದರೂ ಸಹ, ಬೆಂಕಿಯಿಂದ ಆಕರ್ಷಿತವಾಗಿ, ಕೊನೆಗೆ ಅದರಲ್ಲಿಯೇ ಬಿದ್ದು ಸತ್ತು ಹೋಗುತ್ತವೆ.

೩೬೨

ಎವ್ವರಿಗುಣಮುಲುನು ನೇಮುನ್ನವಾನವು, ಚಿಕ್ಕಜೇಯರಾದು ಕುಕ್ಕತೋಕ,
ಗಡಸುರಾಲು ಮುಗನಿಗಂಪ ಬೆಟ್ಟಯುನಮ್ಮು, ವಿಶ್ವದಾಭಿರಾಮು ವಿನುರ ವೇಮು.

ಎಷ್ಟು ಗೈದೊಡೇನು ? ಹುಟ್ಟುಗುಣವಳಿಯದು;
ನೀಟ ಮಾಡಬಹುದೆ, ನಾಯಿ ಬಾಲ ?
ಕೆಟ್ಟ ನಾರಿ-ಪತಿಗೆ ಮಾರುವ ಬುಟ್ಟಿಗತಿ !
ವಿಶ್ವದಾಭಿರಾಮು ಕೇಳು ವೇಮು

'ಸ್ವಭಾವಃ ದುರತಿಕ್ರಮಃ' 'ಸ್ವಭಾವ ಮೀರಲಸಾಧ್ಯ' ಎನ್ನುವ ಭಾವನೆಯುಂಟು. ಮನುಷ್ಯನ ಹುಟ್ಟು ಗುಣ ಎಷ್ಟು ತಿಳಿಸಿ ಹೇಳಿದರೂ ಬದಲಾಗದು. ಹುಟ್ಟು ಗುಣ ನಾಯಿಯ ಬಾಲದಂತೆ. ನೀಟ ಮಾಡಲು ಎಷ್ಟೇ ಪ್ರಯತ್ನಬಟ್ಟರೂ ಮರಳಿ ತನ್ನ ಪೂರ್ವ ಸ್ಥಿತಿಗೆ ತಲುಪುತ್ತದೆ.

ಸ್ತ್ರೀ ಸಹಜವಾದ ಲಜ್ಜೆ ತೊರೆದು, ನಡೆವಳಿ ಕೆಟ್ಟು, ಗಡಸುಗಾರ್ತಿಯಾದ ಹೆಣ್ಣು ಮಗಳು ಗಂಡನ ಮಾನಕ್ಕೆ ಚ್ಯುತಿ ತರುತ್ತಾಳೆ. ಬುಟ್ಟಿಯಲ್ಲಿ ಗಂಡನನ್ನು ಕುಳ್ಳಿರಿಸಿ, ಹೊತ್ತು ಪೇಟೆಯಲ್ಲಿ ಮಾರಿದಂತೆ.

೩೬೩

ಅಂಗಮೆಲ್ಲವದಲಿ ಯಟುದಂತಮುಲುನೂಡಿ, ತನುವು ಮುದಿವಿಜೇತ ದರಚು ವಣಕ,
ಮುಪ್ಪು ತಿಪ್ಪಲಬಡಿ ಮೋಹಂಬುವಿಡುವಡು, ವಿಶ್ವದಾಭಿರಾಮು ವಿನುರ ವೇಮು.

ಅಂಗವೆಲ್ಲ ಸಡಲಿ ಅಂತೆ ಹಲ್ಲು ಹೋಗಿ,
ತನುವು ಮುಪ್ಪಿನಿಂದ ತೀರ ಒಣಗಿ,
ಮುಪ್ಪು ಅಪ್ಪಿದರೂ, ಮೋಹ ಬಿಡನು ಭೋಗಿ
ವಿಶ್ವದಾಭಿರಾಮು ಕೇಳು ವೇಮು

ಮನುಜನ ಅವಯವಗಳ ಬಿಂಕವೂ ಬಿಗಿಯೂ ನಶಿಸಿ, ಹಲ್ಲು ಕಳಚಿ ಬಿದ್ದು, ಇಳಿವಯಸ್ಸಿನಿಂದ ದೇಹವು ಮುಪ್ಪಾಗಿ ಅಶಕ್ತಿಯಿಂದ ಬಲಗುಂದಿ ಕೃಶವಾಗಿ ಮುಪ್ಪು ಆವರಿಸಿದರೂ, ಅವನು ಸ್ತ್ರೀಯ ಮೇಲೆ ಮೋಹಿತನಾಗುವುದನ್ನು ಬಿಡಲಾರೆನು.

[ಇಂದ್ರಿಯಗಳ ತೃಪ್ತಿ ಭೋಗ. ಇಂದ್ರಿಯ ನಿಗ್ರಹವೆಂದರೆ ಭೋಗಲಾಲಸೆಯಿಂದ ನಿವೃತ್ತನಾಗುವುದು. ಮುಪ್ಪಿನಕಾಲದಲ್ಲಾದರೂ ಇಂದ್ರಿಯ ನಿಗ್ರಹ ಮಾಡಿ, ಯೋಗ ಸಾಧನೆ ಗೈದರೂ ಎಷ್ಟೋ ಸಾಲು, ಮೇಲು.]

೩೬೪

ಆಡುವಾರಿಗನ್ನ ನರ್ಥಂಬು ಬೊಡಗನ್ನ, ಸಾರಮ್ಮೆನರುಚುಲ ಚವುಲುಗನ್ನ,
ಅಯ್ಯಗಾರ್ಲಕ್ಕೆನ ನಾಶಲು ಪುಟ್ಟನಾ? ವಿಶ್ವದಾಭಿರಾಮು ವಿನುರ ವೇಮು.

ನಾರಿರೂಪ ಕಂಡು, ಸಿರಿಯ ಸೊಬಗ ಸವಿದು,
ಸಾರವಿಪ್ಪ ರಸದ ಮಹಿಮೆ ಕೇಳಿ;
ಆರ್ಯನಾದರೇನು, ಆಶೆ ಉದಿಸದಿಹುದೆ?
ವಿಶ್ವದಾಭಿರಾಮು ಕೇಳು ವೇಮು.

ಜಗತ್ತು ತಮೋಭೂತವಾದುದು. ಮಾನಿನಿ ಮದಿರೆಯ ಸೆಳವಿನಲ್ಲಿ ಕ್ರೀಡಿಸ ಬಯಸುತ್ತಾರೆ; ಲೋಕದ ಜನರು.

ಕಾಮಿನಿ, ಕಾಂಚನ, ಮದಿರೆಯನ್ನು ಸಕಲ ಜನರು ಆಶಿಸುತ್ತಾರೆ. ಅಯ್ಯ ಎಂದರೆ ಆರ್ಯ ಘನವಂತ ವ್ಯಕ್ತಿ. ಅಯ್ಯನಾಗಿದ್ದರೂ ಕಾಮಿನಿ ಕಾಂಚನ, ಮದಿರೆಗಳಿಗೆ ಮನ ಸೋಲದವರು ಬಹಳ ಕಡಿಮೆ.

ನಾರಿಯ ರೂಪವನ್ನು ಕಂಡೊಡನೆ, ಸಿರಿಸಂಪದಗಳನ್ನು ಭೋಗಿಸಿದೊಡೆ, ಮದಿರಾ ರಸದ ಮಹಿಮೆಯನ್ನು ಕೇಳಿದೊಡನೆ ಸಂಯಮವು ಅಳಿದು, ಮನುಷ್ಯ ಆಸೆಯಿಂದ ದಾಸ ನಾಗುತ್ತಾನೆ.

[ಕನ್ನಡ ಕವಿ ಸರ್ವಜ್ಞ ಮೂರ್ತಿಯೂ. ಈ ಭಾವವನ್ನು ವ್ಯಕ್ತ ಪಡಿಸಿದ್ದಾನೆ:

"ಹೆಣ್ಣಿನ್ನು ಹೊನ್ನನ್ನು| ಹಣ್ಣಾದ ಮರಗಳನು|
ಕಣ್ಣಲ್ಲಿ ಕಂಡು ಮನದಲಿ ಬಯಸದಿಹ|
ಅಣ್ಣಗಳು ಯಾರು ಸರ್ವಜ್ಞ||"]

೩೬೫

ಸ್ತ್ರೀಲ ಸುಖಮು ಜೂಚಿ ಚಿತ್ತಂಬು ನಿಲುಕಡ, ನೇಯನಿಮನುಜುಂಡು ಚೇಡುನಿಜಂಬು,
ಏಟಗಟ್ಟವ್ಯಾನು ಕೆಪ್ಪುಡು ಜಲನಂಬಿ, ವಿಶ್ವದಾಭಿರಾಮ ವಿನುರ ವೇಮ.

ನಾರಿ ನೋಡಿ ತಾನು ಚಿತ್ತನಿಲಿಸಿ ಮುತ್ತೆ,
ಸೇರಿ ಕೊಳಿವ ನರನ ನಾಶ ಸತ್ಯ.
ನದಿಯ ದಡದಿ ನೆಟ್ಟ ಗಿಡದ ಬಾಳಿನಂತೆ.
ವಿಶ್ವದಾಭಿರಾಮ ಕೇಳು ವೇಮ

ಸ್ತ್ರೀಯನ್ನು ನೋಡಿದೊಡನೆ, ಎಂಥವನ ಮನಸ್ಸಾದರೂ ಚಲಿಸದು. ಮೋಹವು ಹುಟ್ಟಿ, ಭೋಗಕಾಶಿಸಿ, ತನ್ನ ನಾಶವನ್ನು ಖಚಿತಗೊಳಿಸುವನಷ್ಟೇ.

ಹೇಗೆಂದರೆ, ನದಿಯ ದಂಡೆಯ ಮೇಲೆ, ನೆಟ್ಟ ಗಿಡವು, ಪ್ರವಾಹದ ರಭಸದಿಂದ ದಿನದಿನವೂ ಕೊರೆಯಲ್ಪಡುವ ದಡವನ್ನು ನೆಚ್ಚುತ್ತದೆ. ದಿನಗಳೆದಂತೆ, ಮಣ್ಣು ಕುಸಿದು, ಗಿಡ ಬಾಗುತ್ತದೆ. ಕೊನೆಗೆ, ಮಹಾಪೂರ ಬಂದಾಗ ಬೇರು ಸಹಿತ ಗಿಡವೇ ಕೊಚ್ಚಿ ಹೋಗುತ್ತದೆ.

ಮೋಹವು ಪ್ರವಾಹದಂತೆ. ಸ್ತ್ರೀ ನದಿಯ ದಡದಂತೆ. ಪುರುಷನು ದಡದಲ್ಲಿ ನೆಟ್ಟ ಗಿಡದಂತೆ. ಸ್ತ್ರೀ ಮೋಹ ಹೆಚ್ಚಿ, ಪುರುಷ ಕೆಟ್ಟು, ನಾಶ ಹೊಂದುವನು.

೩೬೬

ಕೂಲಿನಾಲಿಚೇಸಿ ಗುಲ್ಲಾಪುಪನಿಜೇಸಿ, ತೆಚ್ಚಿಪೆಟ್ಟ ನಾಲು ಮೆಚ್ಚನೇರ್ಚು,
ಲೇವಿಜಿಕ್ಕುವಿಭುನಿ ವೇಮಾರುದಿಟ್ಟುನು, ವಿಶ್ವದಾಭಿರಾಮ ವಿನುರ ವೇಮ.

ಕೂಲಿನಾಲಿಮಾಡಿ ಗುಲಾಮಾಗಿ ದುಡಿದು,
ಕಾಸು ಕೊಡಲು 'ಬೇಶೆ' ನುವಳು ನಾರಿ,
ಇಲ್ಲದಿರಲು ನಲ್ಲಗೆಷ್ಟೊ ನೂರು ಮಾತು.
ವಿಶ್ವದಾಭಿರಾಮ ಕೇಳು ವೇಮ.

ನಾರಿ ಬಯಸುವದು ಮೊದಲು ಧನವನ್ನು ತನ್ನ ಪತಿಯು ಕೂಲಿಕುಂಬಳಯಂಥ ಕೆಲಸವನ್ನೇ ಮಾಡಲಿ, ಯಾವನೋ ದೊರೆಯ ಆಶ್ರಯವಲ್ಲಿ ಸೇವಕನಾಗಿ ದುಡಿಯಲಿ,

ಅವನು ಸಂಬಳ ತಂದು ಕೈಗಿತ್ತರಾಯಿತು. ಅವನ ಬಗ್ಗೆ ವೇಚ್ಚಗೆ ಪ್ರಕಟಪಡಿಸುವಳು. ಇಲ್ಲದಿದ್ದರೆ ಗಂಡನಿಗೆ ಅಲ್ಲ ಸಲ್ಲದ ನೂರಾರು ಮಾತುಗಳನ್ನು ಆಡಿ ಅವನ ಮನಸ್ಸನ್ನು ಘಾಸಿಗೊಳಿಸುವಳು.

೩೬೭

ವೆರ್ರಿವಾನಿಕೈನ ವೇಷಧಾರಿಕಿನೈನ, ರೋಗಿಕೈನ ಬರಮುಯೋಗಿಕೈನ
ಸ್ತ್ರೀಲಜೂಚಿನಪುಡು ಚಿತ್ತಂಬುರಂಜಿಲ್ಲು, ವಿಶ್ವದಾಭಿರಾಮ ವಿನುರ ವೇಮ.

ಮರುಳಾದೊಡೇನು ? ಮಾರುವೇಷಿಯೇನು ?
ರೋಗಿಯೇನು ? ಪರಮಯೋಗಿಯೇನು ?
ನಾರಿ ನೋಡಿದೊಡನೆ ಚಿತ್ತ ಕದಡದೇನು ?
ವಿಶ್ವದಾಭಿರಾಮ ಕೇಳು ವೇಮ.

ಹುಚ್ಚ ಮನುಷ್ಯನಾಗಲಿ, ವೇಷಧಾರಿಯಾಗಿರುವ ಗೌಪ್ಯ ಕಾಯ್ದುಕೊಳ್ಳಬೇಕಾದ ವನಾಗಲಿ, ದೇಹಾರೋಗ್ಯ ಸರಿಯಿರದ ರೋಗಿಯಿರಲಿ, ಇಂದ್ರಿಯ ಸಂಯಮವನ್ನು ಒಳ ಗೊಂಡ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಹಾರ ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗ ಯೋಗಸಾಧಕನಿರಲಿ, ಸ್ತ್ರೀಯನ್ನು ನೋಡಿದೊಡನೆ ಮನಸ್ಸು ಕದಡುತ್ತದೆ.

(ಗೌತಮ ಋಷಿಪತ್ನಿ ಅಹಲ್ಯೆಯ ಪಾತಿವ್ರತ್ಯ ಕೆಡಿಸಿ, ಇಂದ್ರ ಮೈತುಂಬ ಹುಣ್ಣು ತಂದುಕೊಂಡ; ಶಾಪಗ್ರಸ್ತನಾದ. ಮಹಾಶಕ್ತಿಶಾಲಿ ಕೀಚಕನು ದ್ರೌಪದಿಯನ್ನು ಕೆಡಿಸಲೆಳಸಿ, ಭೀಮನಿಂದ ಗುದ್ದಿಸಿಕೊಂಡು ಹತನಾದ. ಲಂಕಾಸಾಮ್ರಾಜ್ಯದ ಚಕ್ರ ವರ್ತಿ ಮಹಾತಪಸ್ವಿ ರಾವಣ, ಸೀತೆಯನ್ನು ಅಪಹರಿಸಿ, ಶ್ರೀರಾಮನಿಂದ ಹತನಾದ.

ಮೇನಕೆಯ ನೋಟದಿಂದ ವಿಶ್ವಾಮಿತ್ರನ ತಪೋಭಂಗವಾಯಿತೆಂದು ಭಾಗವತ ಪುರಾಣ ವಿವರಿಸುವುದು. ಅದೇಕೆ? ಅದೆಲ್ಲ ದೇವರ ಹಂಚಿಕೆಯೆಂದೂ ಹೇಳುವರು. ಇದೇ ಕತೆ ಮಹಾಭಾರತದಲ್ಲಿದೆ. ಈ ಇತಿಹಾಸ ಪುರಾಣ ಗ್ರಂಥಗಳು ಒಳಗೊಂಡ ಕತೆ ಗಳು ಅಂದಿನ ಕಾಲದ ಘಟನೆಗಳ ಕಾಲ್ಪನಿಕ ಚಿತ್ರಗಳಷ್ಟೇ. ಸ್ತ್ರೀವ್ಯೋಹ ತೊರೆಯುವುದು ಕಷ್ಟ ಸಾಧ್ಯ. ಸಂಯಮ ಸಾಧನೆಯಲ್ಲಿ ಎಚ್ಚರ ವಹಿಸಬೇಕು.)

೩೬೮

ಗುಣವತಿಯಗುಯುವತಿ ಗುರಮುಚಕ್ಕಗನುಂಡು, ಜೀಕಟಾಟ ದಿನ್ನೆ ಚೆಲಗು ರೀತಿ,
ದೇವಿಯುನ್ನಯಿಲ್ಲು ದೇವಾರ್ಚನ ಗೃಹಂಬು, ವಿಶ್ವದಾಭಿರಾಮ ವಿನುರ ವೇಮ.

ಗುಣವತಿಯಿರೆ ಯುವತಿ, ಗೃಹವು ಚೊಕ್ಕಟಯ್ಯ,
ಬೀಳು ಮನೆಯ ದೀಪ ಬೆಳಗಿದಂತೆ.
ದೇವಿಯಿಪ್ಪ ಗೃಹವು ದೇವಾಲಯವಯ್ಯ
ವಿಶ್ವದಾಭಿರಾಮ ಕೇಳು ವೇಮ

ಒಳ್ಳೆಯ ನಡೆನುಡಿಯ ಸ್ತ್ರೀ ಇದ್ದರೆ, ಅಲ್ಲಿ ಶಾಂತಿ ನೆಲೆಸುವುದು. ಸುಖ ದೊರೆಯುವುದು. ಅಂಥ ಮನೆ ಚೊಕ್ಕಟವಾಗಿರುತ್ತದೆ.

ಸ್ತ್ರೀ ಇಲ್ಲದಾಗ ಸಂಸಾರದಲ್ಲಿ ನಿರಾಶೆಯ ಕತ್ತಲೆ ತುಂಬಿರುತ್ತದೆ. ಒಳ್ಳೆಯವಳು ತನ್ನ ಪ್ರತಿಫಲ ಬೇಡದ ಕರ್ಮದಿಂದ ವನಕುಸುಮದಂತೆ ಕೆಲಸ ಕಾರ್ಯಗೈದು, ಆನಂದ ತರಿಸುತ್ತಾಳೆ. ಆನಂದದಿಂದ ನಿರಾಶೆಯ ಕತ್ತಲು ಸರಿದು ಶಾಂತಿಯ ಪ್ರಕಾಶ ತಲೆದೋರುವುದು.

ಸಚ್ಚಿದಾನಂದ ಸ್ವರೂಪಿಯಾದ ಆತ್ಮ, ದೇಹದಲ್ಲಿರುವುದರ ಪ್ರತೀಕವೇ ದೇವಾಲಯಗಳು. ಮೂರ್ತಿ, ನಿಶ್ಚಲ, ವಿರಕ್ತ ಆತ್ಮದ ಪ್ರತೀಕ. ಗರ್ಭಗುಡಿ, ಹೃದಯದ ಪ್ರತೀಕ. ಸಂಸಾರವಂದಿಗರ ಮನೆಗಳ ಆನಂದ ತುಂಬುವ, ಆನಂದಮಯಿಯಾದ ಸ್ತ್ರೀ, ಪ್ರತ್ಯಕ್ಷ ದೇವ ಮೂರ್ತಿ. ಆ ಮನೆಯೆ ದೇವಾಲಯ.

(ಸಹಧರ್ಮಿಣಿಯಾದ ಸತಿಯ ಮೇಲ್ಮೆಯನ್ನು ಬಣ್ಣಿಸುವ ಸರ್ವಜ್ಞಮೂರ್ತಿಯ ವಚನಗಳಿವು.

ಬೆಚ್ಚನ ಮನೆಯಾಗಿ|| ವೆಚ್ಚಕೆ ಹೊನ್ನಾಗಿ||
ಇಚ್ಛೆಯನು ಅರಿವ ಸತಿಯಾಗೆ, ಸ್ವರ್ಗಕ್ಕೆ||
ಕಿಚ್ಚು ಹಚ್ಚಿಂದ ಸರ್ವಜ್ಞ॥)

೩೬

ಮಗನಿ ಕಾಲಮುಂದು ಮಗು ಕಷ್ಟಿಂಚಿನ, ಸುತುಲಕಾಲಮುಂದು ಸುಖಮುನೊಂದು,
ಕಲಮಿಲೇಖಿ ರೆಂಡುಗಲ ವೆಂತವಾರಿಕಿನ್, ವಿಶ್ವದಾಭಿರಾಮು ವಿನುರ ವೇಮ.

ಪತಿಯ ಕಾಲದಲ್ಲಿ ಸತಿ ಕಷ್ಟಪಡುತಿರೆ,
ಸುತರ ಕಾಲ ಸುಖವ ಸವಿಯುತಿಹಳು;
"ಉಳ್ಳ" 'ಇಲ್ಲ' ವೆಂಬೆರಡು ತಪ್ಪದಾರಿಗು
ವಿಶ್ವದಾಭಿರಾಮು ಕೇಳು ವೇಮ.

ತ್ಯಾಗ ಮತ್ತು ಭೋಗ, ಕಷ್ಟ ಮತ್ತು ಸುಖ ಒಂದಾದ ಮೇಲೊಂದು ಸರತಿಯಿಂದ ಬರುತ್ತವೆ. ರಾತ್ರಿಯ ನಂತರ ದಿನವು ಬರುವಂತೆ. ಸ್ತ್ರೀಯ ಜೀವನದಲ್ಲಿಯೂ ಇದೇ ರೀತಿ.

ಪತಿಯು ದುಡಿದು ಹೊಟ್ಟೆ ಹೊರೆಯುವಾಗ ಸತಿಯು ಸಹ ಅವನ ಅನುಕೂಲ ನೋಡಿ ತಾನೂ ದುಡಿಯುತ್ತಾಳೆ. ತನ್ನ ನಿತ್ಯದ ದಿನ ಕರ್ಮ, ಪತಿಯ ಕ್ಷೇಮ ವಿಚಾರ, ಚಿಕ್ಕ ಮಕ್ಕಳ ಆರೈಕೆ, ಗೃಹ ಧರ್ಮಾಚರಣೆ ಹೀಗೆ ಸ್ತ್ರೀ ಸದಾ ಕಾರ್ಯನಿರತಳಾಗಿ ಶ್ರಮಿಸುತ್ತಿರುತ್ತಾಳೆ.

ಮುಂದೆ ತನ್ನ ಮಕ್ಕಳು ದೊಡ್ಡವರಾದ ಮೇಲೆ, ತಾಯಿ ಗೃಹಕೃತ್ಯದ ಕೆಲಸದ ಹೊಣೆಯನ್ನು ತನ್ನ ಸೊಸೆಗೆ ಒಪ್ಪಿಸಿ, ಹಾಯಾಗಿ ಜೀವನ ಸಾಗಿಸಬಹುದು.

(ಮಹಿಳೆಗೆ ಪುರುಷನಂತೆ ತನ್ನ ಕಷ್ಟಸುಖದ ಫಲ ತನಗುಂಟು ಎಂಬ ಭಾವನ್ನು ವೇಮನಯೋಗಿ ಪ್ರಕಟಿಸಿದ್ದಾರೆ. ಮಹಿಳೆಯನ್ನು ಸಂತತ ಅಸ್ವತಂತ್ರಳನ್ನಾಗಿಸುವನು ಧರ್ಮಸೂತ್ರದ ಉದ್ದೇಶ ಬೇರೆ. ಮನು ಮಹಿಳೆಯರ ಸ್ಥಾನಮಾನ ತಗ್ಗಿಸುತ್ತಾನೆ;
"ಬಾಲ್ಯದಲ್ಲಿ ತಂದೆಯಿಂದ ಮುಪ್ಪಿನ ಕಾಲದಲ್ಲಿ ಗಂಡು ಮಕ್ಕಳಿಂದ ಸ್ತ್ರೀ ರಕ್ಷಿಸಲ್ಪಡುತ್ತಾಳೆ. ಕಾರಣ ಸ್ತ್ರೀ ಎಂದೂ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ.")

೩೭

ದೊಂಗತನಮು ರಂಕು ದೊರೆಸಿಯುಂಡು ಜಗತಿ, ರಂಕುಲಾಡಿ ಕಿಂಟ ಶಂಕಪುಟ್ಟು,
ದೊಂಗಕೆನ್ನ ರೇವೆಲುಂ ಗೊಪ್ಪುಕಾನಟ್ಟು, ವಿಶ್ವದಾಭಿರಾಮು ವಿನುರ ವೇಮ.

ಚೋರತನವು ಜಾರತನವು ಜಗವ ತುಂಬಿ,
ಜಾರೆ ಗೃಹದಿ ಶಂಕೆಯೂರುತಿಹಳು;
ಚೋರ ಚಂದ್ರಕಾಂತಿ ಭೂರಿಯೆನುವ ರೀತಿ,
ವಿಶ್ವದಾಭಿರಾಮು ಕೇಳು ನೇಮು

ಬೆಳದಿಂಗಳು ಸರ್ವರಿಗೂ ಪ್ರಿಯಕರ; ಸಂತಸಕರ. ಆದರೆ ಕಳ್ಳನಿಗೆ ಕಾರ್ಗತ್ತಲೆಯೇ ಹೆಚ್ಚು ಪ್ರಿಯಕರವಾದುದು. ತನ್ನ ಕಳ್ಳತನವು ಕತ್ತಲೆಯಲ್ಲಿ ನಿರಾತಂಕವಾಗಿ ನಡೆಯುವುದೆಂದು ಅವನ ಕಲ್ಪನೆ. ಕಳ್ಳತನದ ಹಂಚಿಕೆಯಲ್ಲಿ ಸ್ವಲ್ಪು ಬೆಳಕು ಎಲ್ಲಿಯಾದರೂ ಕಾಣಿಸಿತೆಂದರೆ ಕಳ್ಳನು ಬೆಚ್ಚಿ ಬೀಳುತ್ತಾನೆ. ಸ್ವಚ್ಛ ಬೆಳದಿಂಗಳು ಇದ್ದರಂತೂ ಕಳ್ಳ ಭೀತಿ ತಾಳುತ್ತಾನೆ.

ಅದೇ ರೀತಿ, ನಡತೆಗೆಟ್ಟ ಜಾರೆಯು ಪಾತಿವ್ರತ್ಯವೇ ಎಲ್ಲಿಡೆ ಉಳಿದರೆ, ತನ್ನ ಕೆಟ್ಟ ಜಾಳಿಗೆ ಅನುವು ದೊರೆಯದೆ ಗುಟ್ಟು ಹೊರಬೀಳಬಹುದೆಂದು ಭೀತಿಗೊಳ್ಳುತ್ತಾಳೆ. ತತ್ಪರಿಣಾಮವಾಗಿ ಇತರರ ನಡೆವಳಿಯ ಬಗ್ಗೆ ಸಂಶಯ ಹುಟ್ಟಿಸುವ ಯೋಚನೆ ಮಾಡುತ್ತಾಳೆ. ಮನೆಯಲ್ಲಿ ಸಾಧ್ವಿಗಳ ಬಗ್ಗೆ ಶಂಕೆ ಹುಟ್ಟಿಸಿ ತನ್ನ ಹುಳುಕು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಾಳೆ.

೩೭

ಆಪದಂದು ಜೂಡು ಮಾರಸಿ ಬಂಧುಲ, ಭಯಮು ವೇಳ ಜೂಡು ಬಂಟುಗುಣಮು,
ಪೀದವಡಿನವೆನ್ನ ವೆಂಡ್ಲಾಮುಗತಿ ಜೂಡು. ವಿಶ್ವದಾಭಿರಾಮು ವಿನುರ ವೇಮ.

ಆಪತ್ತಿರುವಾಗ ನೋಡು ಬಂಧುಭಾವ;
ಭಯದ ವೇಳೆ ನೋಡು, ಬಂಟಗುಣವ;
ಬಡತನ ಬಂದಾಗ ಮಡದಿಯ ಗತಿ ನೋಡು
ವಿಶ್ವದಾಭಿರಾಮು ಕೇಳು ನೇಮು.

ಬಡತನವು ಮನುಷ್ಯನ ಗುಣಗಳ ಒರೆಗಲ್ಲು ಎಂದು ಹೇಳುತ್ತಾರೆ.

ಧನವುಳ್ಳ ಸಮಯದಲ್ಲಿ ಸಕಲರೂ ಆಪ್ತತ್ವ ತೋರಿ, ಸೇರುತ್ತಾರೆ. ಆದರೆ ನಿಜವಾದ ಬಂಧು-ಭಾವವಿದೆಯೋ ಇಲ್ಲವೋ ಎಂಬುದನ್ನು ಆಪತ್ತಿನ ಸಮಯದಲ್ಲಿ ನೋಡಬೇಕು.

ಅಂಥ ಗುಣವು ತನ್ನಲ್ಲಿ ಇರುವುದೆಂಬ ನಟನೆಯನ್ನು ಮಾಡುವವರೇ ಹೆಚ್ಚು. ನಿಜವಾಗಿ ಅಂಥ ಗುಣವು ಇರುವುದೋ, ಇಲ್ಲವೋ, ಎಂಬುದನ್ನು ನಿರ್ಧರಿಸಬೇಕಾದರೆ, ಭಯಪ್ರದ ಸಂದರ್ಭಗಳಲ್ಲಿ ಬಂಟನು ಹೇಗೆ ನಡೆದುಕೊಳ್ಳುವನೆಂಬುದನ್ನು ಕಂಡು ನಿರ್ಧರಿಸಬಹುದು.

ಅದೇ ರೀತಿ, ಧನವಿರುವಾಗ ಮಡದಿ ಪತಿಯ ಬಗ್ಗೆ ತಾಳಿದ ಗೌರವವು; ಪತಿಪ್ರೇಮ ಜನ್ಯವೋ ಇಲ್ಲವೆ ಧನವೋಹ ಜನ್ಯವೋ ಗೊತ್ತಾಗದು. ಧನವಿರುವಾಗ ಮಡದಿ, ಬೀರುವ ನಗೆ ಧನಭೋಗ ತೃಪ್ತಿಯ ಅಭಿವ್ಯಕ್ತಿಯೋ, ಇಲ್ಲವೆ ಪತಿಯ ಸಂತೋಷದಲ್ಲಿ ಪಾಲುಗೊಂಡದ್ದರ ಪ್ರತೀಕವೋ ಗೊತ್ತಾಗದು. ಆದರೆ ಬಡತನ ಬಾದಾಗ ಧನದ ಗೊಡವೆ ಇರುವುದಿಲ್ಲ. ಅವಳ ನಿಜವಾದ ಭಾವನೆಗಳು ವ್ಯಕ್ತವಾಗುತ್ತವೆ. ಅವಳ 'ಗತಿ' ತಿಳಿಯುತ್ತದೆ.

೩೭೨

ಮಗಡು ಮದನು ಡೈನ ಮಂಚಿಕಾಪುರ ಮೈನ, ಸಹಜ ಮೇಲವಾನು? ಜಾರಕಾಂತ
ಪಾಲುದ್ರಾವು ಕುಕ್ಕ ಪಡಿಪಡಿಪೋವದಾ? ವಿಶ್ವದಾಭಿರಾಮ ವಿನುರ ವೇಮ.

ಮದನನಂಥ ಪತಿ, ಮುದದ ಬಾಳಿರಲೇನು?
ನೀತಿಗೇಡಿ ಜಾತಿ ಗುಣ ತೊರೆವಳೆ?
ಹಾಲು ಕುಡಿವ ನಾಯಿ, ಹೊಲಸಿಗೆ ಹೋಗದೇ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀ ರೂಪವಂತ ಗಂಡನನ್ನಾಶಿಸುವಳು. ಪ್ರೀತಿಯ ಸಂಸಾರ ಅಪೇಕ್ಷಿಸುವಳು. ಅದರಿಂದ ಅವಳಿಗೆ ತೃಪ್ತಿಯುಂಟು. ಆದರೆ ಕಾಮನಂಥ ಸ್ಫುರದ್ರೂಪಿ ಗಂಡನಿರಲಿ, ಪ್ರೀತಿಕರ ಬಾಳುವೆಯಿರಲಿ, ತಾನು ಒಳ್ಳೆಯ ನಡತೆಯವಳಾಗದಿದ್ದರೆ ಸುಖ ಪಡೆಯಳು. ಶೀಲಗೆಟ್ಟ ಹೆಣ್ಣು ತನ್ನ ಸಹಜ ಗುಣವಾದ ಪರಪುರುಷ ಸಂಗವನ್ನು ತೊರೆಯಳು. ಗೃಹಿಣಿಯಾಗಿ ಪಡೆಯುವ ಸೌಖ್ಯದ ಅರಿವು ಅವಳಿಗಾಗದು.

ಹೇಗೆಂದರೆ ನಾಯಿಯ ಸಹಜ ಗುಣ ಹೇಸಿಗೆ ಆಶಿಸಿ ತಿರುಗುವುದು. ಹಾಲು ಇತ್ತರೆ ಸೇವಿಸುತ್ತದೆ. ಆದರೆ ಹಾಲು ಸೇವಿಸಿದ ನಂತರ ಸಹ ಹೇಸಿಗೆ ಆಶಿಸಿ ತಿರುಗುವ ತನ್ನ ಸಹಜ ಗುಣವನ್ನು ಅದು ಬಿಡುವುದಿಲ್ಲ. ಜಾರಕಾಂತೆ ನಾಯಿ ಗುಣದವಳು.

೩೭೩

ಪುರುಷುಡೆರುಗಜಂಪು ಭೂಪತಿನಿ ಜೇಟು, ಅಖಿಲನಿಂದಲಕುನು ನಾಲಯಂಬು,
ಪರಪುರುಷಗಮನಮು ಪ್ರತ್ಯಕ್ಷನರಕಂಬು, ವಿಶ್ವದಾಭಿರಾಮ ವಿನುರ ವೇಮ.

ಪುರುಷನರಿಯೆ ಮರಣ, ಅರಸನರಿಯೆ ಕಠಿಣ
ಸಕಲ ನಿಂದೆಗಳಿಗೆ ಒಂದೆ ನೆಲೆಯು;
ಪರಪುರುಷ ಗಮನವು ಪ್ರತ್ಯಕ್ಷ ನರಕ
ವಿಶ್ವದಾಭಿರಾಮ ಕೇಳು ವೇಮ.

ನರಕವೆಂದರೆ ಹೇಸುಗೆಯ ಗೂಡು; ಶಾಪ–ತಾಪಗಳಿಂದ ಪಾಪ ಕಾರ್ಯ ಮಾಡುವ ಮನುಷ್ಯನಿಗೆ ದೊರೆಯುವ ದುರ್ಗತಿ.

ತನ್ನ ಗಂಡನನ್ನು ಬಿಟ್ಟು ಬೇರೊಬ್ಬ ಮನುಷ್ಯನೊಡನೆ ಕ್ರೀಡಿಸುವುದೆಂದರೆ ಪತಿಗೆ ದ್ರೋಹ ಬಗೆದಂತೆ ಅದರಿಂದ ಅವನು ಕೋಪಾವಿಷ್ಟನಾಗಿ ದಂಡಿಸುತ್ತಾನೆ. ಸಾಯ ಹೊಡೆಯುತ್ತಾನೆ. ಪರಪುರುಷ ಗಮನದ ವಿಷಯ ತಿಳಿದೊಡನೆ, ಅರಸನು ಸಹ ನಿಷ್ಕರುಣಿಯಾಗಿ ವರ್ತಿಸುತ್ತಾನೆ.

ಶೀಲಗೆಟ್ಟ ನಾರಿಯ ಮೇಲೆ ಅಲ್ಲ ಸಲ್ಲದ ಆರೋಪ ಬರುವುದುಂಟು. ಪ್ರಥಮತಃ ಅವಳ ಶೀಲದ ಬಗ್ಗೆ ಶಂಕೆ ತಾಳಿದವರು ಅವಳ ಬಗ್ಗೆ ಎಂಥ ಆರೋಪವೇ ಇರಲಿ ನಂಬಿ ಬಿಡುತ್ತಾರೆ. ಇದರಿಂದ ಅವಳು ಸಕಲರ ನಿಂದೆಯ ವಸ್ತುವಾಗುತ್ತಾಳೆ.

ಹೆಂಗಳೆಯರಿಗೆ ಶೀಲ ಅತ್ಯಂತ ಮುಖ್ಯ. ಅದಿಲ್ಲದೆ ಅವರಿಗೆ ಸುಖಶಾಂತಿಗಳೇ ಇಲ್ಲ.

೩೭೪

ಅಲಿವಂಚಲೇಕ ಯಧಮತ್ವಮುನನುಂಡಿ, ವೆನುಕವಂತುನನುಟ ವೆರ್ರಿತನಮು,
ಚೆಟುಮುದುರನಿಚ್ಚಿ ಚಿದಿಮಿನ ಬೋವುನಾ? ವಿಶ್ವದಾಭಿರಾಮ ವಿನುರ ವೇಮ.

ಮಡದಿಯನು ಮಣಿಸದೆ, ಮೊದಲು ಅಧಮನಾಗಿ,
ಮೀರೆ, ಹಣೆವೆ ನೆನಲು ಮುಂಕುತನವು
ಮುರವಾಗಿ ಬೆಳೆದುದು ಚಿವುಟಲು ಅಳಿವುದೇ?
ವಿಶ್ವದಾಭಿರಾಮ ಕೇಳು ವೇಮ.

ಪುರುಷನು ಸ್ತ್ರೀಯನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳುವುದು ಲೋಕಾಚಾರ. ಈ ನಿಯಂತ್ರಣವು ಬಲಾತ್ಕಾರವಲ್ಲ; ಪ್ರೇಮದ ಓಜಸ್ಸು ತೇಜಸ್ಸುಗಳಿಗೆ ಸ್ತ್ರೀ ಮಾಡಿದ ಶರಣಾರ್ತಿ.

ಸ್ತ್ರೀಯನ್ನು ಮೊದಲು ಅಂಕೆಯಲ್ಲಿಟ್ಟುಕೊಳ್ಳಲು ತಪ್ಪಿ, ಅವಳು ಹದ್ದು ಮೀರಿ ವರ್ತಿಸತೊಡಗಲು ಪುರುಷ ಮುಖಭಂಗಿತನಾಗುತ್ತಾನೆ. ಅವಮಾನಿತನಾಗುತ್ತಾನೆ; ಅಧಮನಾಗುತ್ತಾನೆ. ಅಂಕೆ ತಪ್ಪಿದ ಬಳಿಕ ನುತ್ತಿ ಅವಳನ್ನು ನಿಯಂತ್ರಿಸಿ ಹಾದಿಗೆ ತರುವೆನೆಂಬ ಭಾವನೆಯು ಹುಚ್ಚುತನವಷ್ಟೇ.

ಹೇಗೆಂದರೆ, ಚಿವುಟುವ ಶಕ್ತಿ ಮಾತ್ರ ಇದ್ದವರು, ಸಸಿಯನ್ನು ತೆಗೆದುಹಾಕಬಹುದು. ಆದರೆ ಅದೇ ಸಸಿಯು ಬೆಳೆದು ಗಿಡವಾದ ಮೇಲೆ ಚಿವುಟಿ, ಚಿವುಟಿ ಅದನ್ನು ತೆಗೆದೊಗೆಯುವೆನೆಂಬುದು ಹಾಸ್ಯಾಸ್ಪದ ಸಂಗತಿಯೆನ್ನಿಸೀತು!

೩೭೫

ಆಲುನುಗನಿವಾಟ ಕಡ್ಡಂಬುವಚ್ಚೆನಾ, ಆಲುಕಾದುವಾನಿ ವ್ರಾಲುಕಾನಿ.
ಅಟ್ಟಯಾಲಿವಿಡಿಚಿ ಯಡವಿನುಂಡುಟ ಮೇಲು, ವಿಶ್ವದಾಭಿರಾಮ ವಿನುರ ವೇಮ.

ನಾರಿನಾಥನ ಮಾತಿಗಡ್ಡ ನುಡಿಯುತಿರೆ,
ಭಾರ್ಯೆಯಲ್ಲ; ಬರೆದ ಹಣೆಯ ಬರೆಹ
ಮುಡದಿ ಸಂಗಕಿಂತ ಅಡವಿ ವಾಸ ಲೇಸು
ವಿಶ್ವದಾಭಿರಾಮ ಕೇಳು ವೇಮ.

ಹಣೆಯ ಬರೆಹವೆಂದರೆ ವಿಧಿಲಿಖಿತ. ಕೊಡುವ ಕೊಳ್ಳುವ ಕರ್ಮಗಳ ಫಲವು ಮಾಡಿದವರನ್ನೇ ಹೋಗಿ ಸೇರುವುದಕ್ಕೆ ಹೇತುವಾಗಿರುವ ನಿಯತಿಯೇ ವಿಧಿ.

ಸತಿ ಗಂಡನ ಮಾತಿಗೆ ಎದುರು ನುಡಿಯಬಾರದು. ಇದು ಸದ್ಗೃಹಿಣಿಯ ಮುಖ್ಯ ಲಕ್ಷಣ. ದೈವ-ದಿಂಡರುಗಳಿಗಿಂತ ತನ್ನ ಪತಿಗೆ ಎರಗಿ ಏಳುವ ಸಾಧ್ವಿ, ಮಹಿಮಳು ಎಂಬ ಭಾವನೆ. ಆವಳೇ ದೇವಿ. ಆದರೆ ಪತಿಯ ಮಾತಿಗೆ ಅಡ್ಡ ಮಾತನಾಡುವ ನಾರಿ, ತಾನು ಭಾರ್ಯೆಯಲ್ಲ. ಪುರುಷನನ್ನು ನಿಸ್ಸಹಾಯಕನನ್ನಾಗಿ ಮಾಡುವ ವಿಧಿ.

ಇಂಥ ಹೆಂಡತಿಯ ಸಹವಾಸಕ್ಕಿಂತ ಅಡವಿಗಳಲ್ಲಿ ದುಡಿದು ತಿನ್ನುವುದು ಶ್ರೇಯಸ್ಕರ. ಏಕೆಂದರೆ ಪತ್ನಿಯನ್ನು ನಿಗ್ರಹಿಸದ ಹೇಡಿ ಎಂದು ಸಮಾಜ-ನಿಂದೆಯನ್ನು ಅಡವಿ ವಾಸದಲ್ಲಿ ಕೇಳದಿರಬಹುದು.

ಹೆಂಡತಿ ಕೆಟ್ಟ ಹೆಸರು ಪಡೆದರೆ, ಅವಳ ಗಂಡ ಆಡಿಕೊಳ್ಳುವವರೆದುರು ತಲೆಯೆತ್ತಿ ತಿರುಗಲಾರನು.

೩೭೬

ಮಾಟವಿನನಿಯಾಲು ಮಗನಿಕಿಮೃತಿಯೌನು, ಓರಪಡಗಸರ್ಪ ವೊಂಟಗ್ರಹಮು,
ತನಕುಗಾನಿಯಾಲು ದಾನವುರಾಲಯಾ, ವಿಶ್ವದಾಭಿರಾಮ ವಿನುರ ವೇಮ.

ಮಾತು ಕೇಳದ ಸತಿ, ತಾ ಮೃತ್ಯು ದೇವತೆ;
ಫಣಿ ಹೊತ್ತ ನಾಗಿಣಿ; ಗೃಹಪಿಶಾಚಿ;
ತನಗೊಲಿಯದ ಮುಡದಿ ಕಡುರಕ್ಕಸಿ ಜಗದಿ;
ವಿಶ್ವದಾಭಿರಾಮ ಕೇಳು ವೇಮ.

ಮನೆತನ ನಡೆಸುವ ಭಾರ ಹೊರುವವರು ಸಾಮಾನ್ಯವಾಗಿ ಪುರುಷರು. ಗೃಹಕೃತ್ಯದ ಹೊಣೆ ಹೊರುವವರ ಮಾತಿಗೆ ಗೃಹದಲ್ಲಿ ಮನ್ನಣೆ ಅವಶ್ಯ.

ಪುರುಷನ ಮಾತಿನಂತೆ ಸತಿ ನಡೆದುಕೊಳ್ಳಬೇಕು. ಅದು ಸದ್ಗೃಹಿಣಿಯ ಧರ್ಮ. ಮಾತು ಕೇಳದಿದ್ದರೆ ಅಂಥವಳು ಅಶಾಂತಿಯ ವಿಷ ಬೀರುವಳು. ಅವಳು ಹಾವಿನಂತಾಗುವಳು. ಅವಳು ಗಂಡನಿಗೆ ಅಸಡ್ಡೆ ಮಾಡಿದರೆ, ಅವನು ಮನಸ್ಸಿನಲ್ಲಿ ಕ್ಷೋಭೆಗೊಳ್ಳುವನು; ಚಿಂತೆಗೀಡಾಗುವನು. ಗಂಡನ ಪಾಲಿಗೆ ಅವಳು ಗೃಹಶಾಂತಿಭಂಗ ಮಾಡುವ ಪಿಶಾಚಿಯೆನಿಸುವಳು.

ಹೆಂಡತಿ ಗಂಡನಿಗೊಲಿಯದಿದ್ದರೆ, ಅವಳು ಅವನ ಕೇಡು ಬಯಸುವಳು. ಶ್ರೇಯ ಬಯಸುವವರು ಮಾನವರು; ಕೇಡು ಬಗೆವವರು ದಾನವರು. ಕೇಡು ಬಯಸುವ ಹೆಂಡತಿ ಜಗತ್ತಿನಲ್ಲಿ ಕಡುರಕ್ಕಸಿಯಾಗಿದ್ದಾಳೆ.

೩೭೭

ಓಜಮಾಲುಪೊಲತಿ ಯೊಲಿಮಾಡಲಚೇಟು, ಪೋಟುಕೆಡಲು ಬಂಟು ಕೂಟಚೇಟು,
ಪನಿಕಿ ಮಾಲು ತೆತ್ತು ಬತ್ತೆಂಬುಚೇಟುರಾ ವಿಶ್ವದಾಭಿರಾಮ ವಿನುರ ವೇಮ.

ರೀತಿಯಿರದ ಕನ್ನೆ ಗಿತ್ತ ಶುಲ್ಕ ದಂಡ;
ಕಾದದ ಬಂಟನಿಗೆ ಕೂಳು ದಂಡ;
ಕೆಲಸಗೇಡಿ ದಾಸಿಗೀವ ಕಾಸು ದಂಡ;
ವಿಶ್ವದಾಭಿರಾಮ ಕೇಳು ವೇಮ

ಲಗ್ನ ನಿಶ್ಚಯದ ಪೂರ್ವಭಾಗವಾಗಿ ವರನಿಗೆ ದಕ್ಷಿಣೆ ಈಯುವ ಪದ್ಧತಿ ಇರುವಂತೆ, ಕೆಲಭಾಗದಲ್ಲಿ ಕನ್ನೆಗೆ ಶುಲ್ಕ ಕೊಡುವ ಪದ್ಧತಿಯೂ ಇದೆ.

ಸದ್ಗುಣ ಸದಾಚಾರಗಳು ಗೃಹಿಣಿಯ ರೀತಿನೀತಿಗಳು. ಇವಿಲ್ಲದ ಕನ್ನೆಗೆ ಶುಲ್ಕವೀಯುವುದು ದಂಡ ತೆತ್ತ ರೀತಿ.

ಸೇನಾನಿ ದುರ್ಧರ ಪ್ರಸಂಗಗಳಲ್ಲಿ ಯುದ್ಧ ಮಾಡುವನೆಂಬ ತಿಳಿವಳಿಕೆಯಿಂದ ಅವನಿಗೆ ವರ್ಷಪರ್ಯಂತ ಕೆಲಸವಿಲ್ಲದಿದ್ದರೂ ಊಟ ಹಾಕುತ್ತಾರೆ. ಆದರೆ ಹೋರಾಡುವ ಪ್ರಸಂಗ ಬಂದಾಗ ಹಿಂದೆ ಬೀಳುವವನಿಗೆ ವರ್ಷ ಪರ್ಯಂತ ಹಾಕಿದ ಕೂಳು, ದಂಡದಂತೆ.

ಅದೇ ರೀತಿ ದಾಸಿಗೆ ಅವಳು ಮಾಡುವ ಸೇವೆಗಾಗಿ ಹಣ ನೀಡುತ್ತಾರೆ. ಆದರೆ ದಾಸಿ ಕೆಲಸಗೇಡಿಯಾದರೆ, ಅಂಥವಳಿಗೆ ನೀಡುವ ಕಾಸು ಕೂಡ ದಂಡದಂತೆ.

ಒಳ್ಳೆಯ ನಡತೆ, ಮತ್ತು ತಮ್ಮ ಕರ್ತವ್ಯದ ಹೊಣೆ ಸರ್ವರಿಗೂ ಮುಖ್ಯ.

೩೭೮

ಕಲ್ಲಲಾಡುವಾನಿ ಗ್ರಾಮುಕರ್ತ ಯೆರುಂಗು, ಸತ್ಯಮಾಡುವಾನಿ ಸಾಮಿಯೆರುಂಗು
ಪೆಕ್ಕು ತಿಂಡಿ ಪೋತು ಬೆಂಡ್ಲಾ ಮೆರುಂಗುರಾ ಶ್ವದಾಭಿರಾಮ ವಿನುರ ವೇಮ.

ಸುಳ್ಳು ನುಡಿಯುವವನ ಹಳ್ಳಿಗೌಡ ಬಲ್ಲ;
ಸತ್ಯ ನುಡಿಯುವವನ ಸ್ವಾಮಿ ಬಲ್ಲ;
ಮಿತಿಗೆಟ್ಟು ಭಕ್ಷಿಪನ ಸತಿಯು ಬಲ್ಲಳಲ್ಲ!
ವಿಶ್ವದಾಭಿರಾಮ ಕೇಳು ವೇಮ

ಹುಳುಕು, ಕೇಳು ಸ್ವಭಾವವು ಯಾರಿಗೂ ಗೊತ್ತಾಗದೆಂದು ಜನರು ಭಾವಿಸಿರುತ್ತಾರೆ. ಆದರೆ ಅದನ್ನೆಲ್ಲ ತಿಳಿಯಬಲ್ಲ ಹಲಕೆಲವರಾದರೂ ಸಮಾಜದಲ್ಲಿರುತ್ತಾರೆ.

ಗ್ರಾಮದ ಮುಖ್ಯಸ್ಥನಿಗೆ ಗ್ರಾಮಸ್ಥರ ವಿಷಯವು ಚನ್ನಾಗಿ ಪರಿಚಿತವಾಗುತ್ತದೆ. ಯಾರಾದರೂ ಹೆಚ್ಚು ಕಡಿಮೆ ಮಾಡಿ, ಹೇಳಿದರೆ, ಅವನಿಗೆ ತಿಳಿಯುತ್ತದೆ. ಸುಳ್ಳು ಪೇಳುವವನನ್ನು ಅವನು ಬಲ್ಲನು.

ಯಾವುದು ಹೆಚ್ಚು ಕಡಿಮೆಯಾಗದೆ, ಇದ್ದಂತೆ ಇರುವುದೋ ಅದು ಸತ್ಯ. ಒಡೆಯನಿಗೆ ನಂಬಿಗಸ್ಥ ಸೇವಕನಾರೆಂಬುದು ಗೊತ್ತು. ವಿಶ್ವಾಸಾರ್ಹನಾದವನು ಇದ್ದುದನ್ನು ಇದ್ದಂತೆ ಹೇಳುತ್ತಾನೆ. ಸತ್ಯ ನುಡಿಯುತ್ತಾನೆ. ಇದು ಸ್ವಾಮಿಗೆ ಗೊತ್ತು.

೩೭೯

ಹೆಚ್ಚಾಗಿ ಊಟ ಮಾಡುವುದು ಒಳ್ಳೆಯದಲ್ಲ. ಕೂಳಬಾಕನೆಂದು ಜನರು ಗೇಲಿ ಮಾಡುತ್ತಾರೆಂದು ಇಂಥವನು, ಇತರರೆದುರು ಹೇಳಹೋಗುವದಿಲ್ಲ. ಆದರೆ, ಇವನು ಮಿತಿ ಮೀರಿ ತಿನ್ನುವ ವಿಷಯವು ಹೆಂಡತಿಗೆ ಗೊತ್ತುಂಟು.

೩೭೯

ಕಲಿಮಿಕಲಿಗೆನೇನಿ ಗಾಮುಗಾಜೂತುರು, ಲೇಮಿಚೇತ ಜಿಕ್ಕಿ ಲೇವಲೇನಿ.
ಮದನುವಂಟಮಗನಿ ಮೂಲಗಾಜೂತುರು, ವಿಶ್ವದಾಭಿರಾಮ ವಿನುರ ವೇಮ

ಕನಕ ಕೈಯೊಳಿರಲು ಕಾಮನಂತೆ ಮಾನ;
ಇಲ್ಲವಾಗಲೇನು ಇಲ್ಲವಿಲ್ಲ!
ಮದನನಂಥ ಮನುಜನಾಗ ಹೊಲೆಯನಂತೆ;
ವಿಶ್ವದಾಭಿರಾಮ ಕೇಳು ವೇಮ

(ಸ್ತ್ರೀಯರು ಕೇವಲ ಪುರುಷನ ರೂಪ-ಸೌಂದರ್ಯಗಳನ್ನು ಮೆಚ್ಚಿ ಮೋಹಗೊಳ್ಳುವರೆಂದು ಸಾಮಾನ್ಯ ಕಲ್ಪನೆ. ಆದರೆ ಸ್ತ್ರೀಯರಿಗೆ ಧನದ ಮೇಲಿನ ಆಸೆಯು ಇನ್ನೂ ಹೆಚ್ಚಾಗಿರುತ್ತದೆ. ಸ್ತ್ರೀಯರ ಈ ಸ್ವಭಾವವನ್ನನುಸರಿಸಿ, ಕಾಮಸೂತ್ರಗಳು ಉತ್ತೇಜಿತ ಪುರುಷರಿಂದ ಹೆಚ್ಚು ಹೆಚ್ಚಾಗಿ ಹಣ ಸೆಳೆಯಬೇಕಾದರೆ, ವೇಶ್ಯೆಯರು ಸಂಭೋಗದ ವಿವಿಧ ಹಂತಗಳಲ್ಲಿ ಆತಂಕ ಒಡ್ಡಿ ಹಣದೋಚಲು ಒತ್ತಾಯಪಡಿಸಬೇಕೆಂದು ವಿಧಿಸುತ್ತವೆ.)

ಹಣವು ವಿಪುಲವಾಗಿ ಹತ್ತಿರವಿದ್ದರೆ ಕಾಮನಿಗೆ ಸಮಾನವೆನಿಸುವ ಗೌರವ ದೊರೆಯುವುದು. ಹಣವು ತೀರಿ, ಏನೂ ಇಲ್ಲದಂತಾಗಲು ಮಾನ-ಸನ್ಮಾನಗಳು ಇಲ್ಲವಾಗುತ್ತವೆ. ಹಣ ಕಳೆದುಕೊಂಡ ಮನುಷ್ಯ ರೂಪ-ಗಾಂಭೀರ್ಯಗಳಲ್ಲಿ ಕಾಮನಂತಿದ್ದರೂ ಸಹ ಸೂಳೆ ಅವನನ್ನು ದೂರ ಸರಿಸುತ್ತಾಳೆ. ಅವನು ತನ್ನನ್ನು ಮುಟ್ಟದಂತೆ ಎಚ್ಚರ ವಹಿಸುತ್ತಾಳೆ. ಧನ ವಿಹೀನನು ಸೂಳೆಯ-ಪಾಲಿನ ಹೊಲೆಯನಾಗುವನು.

೩೮೦

ವಿಟುಲ ಕನುಲ ಕೆಂತೊವಿಭ್ರಮ ಮ್ಮೆಯುಂಡು, ಸಾಟಲೇನಿ ಪೊಲತಿ ಚಕ್ಕದನವು
ಕಂಟಲೋನಿಪಾಪ ಕುಂಟೆನಕಾಡಯಾ, ವಿಶ್ವದಾಭಿರಾಮ ವಿನುರ ವೇಮ.

ವಿಟನ ದೃಷ್ಟಿಪಥದಿ ಎಷ್ಟೊ ವಿಭ್ರಮಕರ !
ಸಾಟಿಯಿರದ ಸುರತಿ ಸರಸದಾಟ !!
ನೋಟದೊಳಿಹ ಮಾಟ ತಾನೆ ಕುಂಟಗಿತ್ತಿ !!!
ವಿಶ್ವದಾಭಿರಾಮ ಕೇಳು ವೇಮ

ವಿಟ ಪುರುಷನನ್ನು ನೋಡಿದೊಡನೆ ಜಾರಕಾಂತೆಯ ಮನಸ್ಸು ಭ್ರಮೆಗೊಳ್ಳುವುದು. ಅವಳ ದೇಹವು ಉದ್ವೇಗ ಉದ್ರೇಕಗಳಿಗೆ ಒಳಗಾಗುವುದು. ಆ ಕಾಮುಕ ನೋಟದಲ್ಲಿ ಸರಸ-ಸಲ್ಲಾಪಗಳ ಆಟವಿದೆ. ಅದಕ್ಕೆ ಸಮನಾದುದು ಬೇರಾವುದೂ ಇಲ್ಲ.

ವಿಟಪುರುಷನ ದೃಷ್ಟಿ ಮತ್ತು ಜಾರಕಾಂತೆಯ ದೃಷ್ಟಿ ಒಂದರೊಳಗೊಂದು ಸೇರಿದರೆ ತೀರಿತು. ಅವರ ಕೂಡಿಕೆಗೆ ಅದೇ ಮಧ್ಯವರ್ತಿ; ಕುಂಟಲಗಿತ್ತಿ.

೩೮೧

ಗುರುವುನಕುನು ಪುಚ್ಚುಕೂರ್ಮೆನನೀಯರು, ಅರಯು ವೇಶ್ಯೆಕಿತ್ತು ರರ್ಥಮೆಲ್ಲ,
ಗುರುಡು ವೇಶ್ಯಕನ್ನ ಗುಣಹೀನುಡೇಮೊಕೋ ! ವಿಶ್ವದಾಭಿರಾಮ ವಿನುರ ವೇಮ.

ಗುರುವಿಗೆ ಹಿಡಿಸೊಪ್ಪ ನೀಡಲಾರರಯ್ಯ,
ಅರಿಯೊ ! ವೇಶ್ಯೆಗೀವರರ್ಥವೆಲ್ಲ !!
ಗುರುವು ವೇಶ್ಯೆಗಿಂತ ಗುಣಹೀನನಾದನೆ?
ವಿಶ್ವದಾಭಿರಾಮ ಕೇಳು ವೇಮ.

(ವಿಟಪುರುಷರು ವೇಶ್ಯೆಯರಿಗೀವ ಸಮಾಧಾನ ದ್ವಿವಿಧವಾಗಿದೆ; ಕಾಮತೃಪ್ತಿ ಮತ್ತು ತಜ್ಜನ್ಯ ಸುಖ-ಸಂತೋಷ; ಎರಡನೆಯದಾಗಿ ಉದರನಿರ್ವಹಣದ ವೆಚ್ಚ. ವೇಶ್ಯೆ ವಿಟಪುರುಷನಿಂದ ಹಣ ಪಡೆಯುವುದೂ ದ್ವಿವಿಧವಾಗಿದೆ. ಸಾಹಜಿಕ ಮತ್ತು ಪೂರ್ವ ನಿರ್ಧರಿತ ದರದಂತೆ; ಎರಡನೆಯದಾಗಿ ಮೋಸ-ಮಾಟಗಳಿಂದ.)

ವೇಶ್ಯೆ ಇಂದ್ರಿಯ ಕಾಮ ತೃಪ್ತಿಪಡಿಸುತ್ತಾಳೆ. ಗುರು ಮೋಕ್ಷಕಾಮವನ್ನು ತೃಪ್ತಿಪಡಿಸುತ್ತಾನೆ. ಕಾಮ ಸುಖ ಕ್ಷಣಿಕ. ಮೋಕ್ಷ ಸುಖ ಶಾಶ್ವತ. ಆದರೆ ಜನರು ಕ್ಷಣಿಕ ಸುಖವೀವ ವೇಶ್ಯೆಗೆ ತಮ್ಮ ಸಕಲ ಸಂಪದ ನೀಡುತ್ತಾರೆ. ಶಾಶ್ವತ ಮೋಕ್ಷ ಸುಖದ ಹಾದಿ ತೋರುವ ಗುರುವಿಗೆ ಏನನ್ನೂ ಕೊಡಲು ಮುಂದಾಗುವುದಿಲ್ಲ. ಗುರುವಿಗೆ ತಮ್ಮ ತೋಟಗದ್ದೆಗಳಲ್ಲಿ ಬೆಳೆದ ಹಿಡಿಸೊಪ್ಪು ಕಾಳುಕಡಿ ನೀಡಿ ಅವನ ಹೊಟ್ಟೆ ಚಿಂತೆ ಪರಿಹರಿಸಿದರೆ, ಅವನ ವಿದ್ಯೆ ಸರ್ವರಿಗೆ ಪ್ರಯೋಜನಪ್ರದವಾಗುವುದು.

ಆದರೆ ಜನರು ಈ ರೀತಿ ಏಕೆ ನಡೆದುಕೊಳ್ಳುವುದಿಲ್ಲವೊ? ಏನು? ಗುರುವು ಅವರ ದೃಷ್ಟಿಯಲ್ಲಿ ವೇಶ್ಯೆಗಿಂತ ಗುಣಹೀನನಾದನೇನು?

೩೮೨

ತೀಪಿಲೋನದೀಪಿ ತೆಲಿಯುಂಗ ಬ್ರಾಣಂಬು, ಪ್ರಾಣವಿತತಿಕನ್ನ ಬಸಿಡಿತೀಪಿ,
ಪಸಿಡಿಕನ್ನ ಮಿಗುಲ ಬಡತಿವಾಟಲುತೀಪಿ, ವಿಶ್ವದಾಭಿರಾಮ ವಿನುರ ವೇಮ.

ಸಿಹಿಯೊಳಗತಿ ಸಿಹಿಯು, ಅರಿತೊಡನೆ-ಪ್ರಾಣ;
ಪ್ರಾಣಕಿಂತ ಬಹಳ ಹಣವೆ ಸಿಹಿಯು;
ಹಣದಕಿಂತ ಮಿಗಿಲು, ತರುಣಿ ಮಾತಿನ ಸಿಹಿ;
ವಿಶ್ವದಾಭಿರಾಮ ಕೇಳು ವೇಮ.

(ವೈದಿಕ ಕತೆಯೊಂದು ಹೀಗಿದೆ: ಪ್ರಾಣ, ವಾಣಿ, ಕಿವಿ, ಕಣ್ಣು ಮತ್ತು ಮನಸ್ಸು ಇತ್ಯಾದಿ ಇಂದ್ರಿಯಗಳಲ್ಲಿ ಯಾರು ಶ್ರೇಷ್ಠರೆಂಬ ಬಗ್ಗೆ ವಾದವೆದ್ದಿತು. ತಂಟೆ ಪ್ರಜಾಪತಿಯ ಬಳಿಗೆ ವಿಚಾರಣೆಗೊಯ್ಯಲ್ಪಟ್ಟಿತು. ಪ್ರತಿಯೊಂದರ ಮಹತಿಯನ್ನು ನಿರ್ಣಯಿಸಲು ಒಂದು ಸೂಚನೆ ಮಾಡಲ್ಪಟ್ಟಿತು. ದೇಹವನ್ನು, ಇಂದ್ರಿಯಗಳಲ್ಲಿ ಯಾವುದೋ ಒಂದು ಮಾತ್ರ, ತೊರೆದಾಗ ಅದರ ಕ್ರಿಯೆ ನಿಂತು ಬಿಡುವುದು; ಎಂಬುದೇ ಪ್ರಜಾಪತಿಯ ಆ ಸೂಚನೆ. ವಾಣಿ ಹೋದಾಗ ಮೂಕವಾಗಿ, ದೇಹಕ್ರಿಯೆ ಯಥಾರೀತಿ ಸಾಗಿತು. ಕಿವಿ, ಕಣ್ಣು, ಒಂದೊಂದಾಗಿ ಹೋದಾಗ, ಕಿವುಡ, ಕುರುಡವಾಗಿ ದೇಹ ಕ್ರಿಯೆ ಯಥಾ ರೀತಿ ಸಾಗಿತು.

ಕೊನೆಗೆ ಪ್ರಾಣ ದೇಹ ತೊರೆದೊಡನೆ, ನಾಲಗೆ ಇಳಿಬಿತ್ತು, ಕಿವಿ ಕೇಳಲಿಲ್ಲ; ಕಣ್ಣು ಬೆಳ್ಳಗಾದವು. ಮನಸ್ಸು ಸುಂದಾಯಿತು. ಕೊನೆಗೆ ಪ್ರಾಣವೇ ಸರ್ವಶ್ರೇಷ್ಠವೆಂದು ನಿರ್ಣಯ ಹೊರಬಿದ್ದಿತು.)

ದೇಹದ ಸೂಕ್ಷ್ಮವಿಚಾರಗಳನ್ನು ಅರಿತರೆ, ಪ್ರಾಣವು ಅತ್ಯಂತ ಪ್ರಿಯಕರವೆಂಬುದು ಗೊತ್ತಾಗುವುದು. ಪ್ರಾಣ ಹೋದರೂ ಚಿಂತೆಯಿಲ್ಲ; ಹಣ ಸಿಕ್ಕರೆ ಸಾಕು ಎಂಬ ದುರಾಸೆಗೊಳಗಾಗಿ ಜನರು ಅನೇಕ ದುಃಸ್ಸಾಹಸಗಳಿಗೆ ಕೈಹಾಕುವುದನ್ನು ನೋಡಿದರೆ, ಇಂಥ ಕುಜನರಿಗೆ ಪ್ರಾಣಕ್ಕಿಂತ ಹಣವೇ ಮುಖ್ಯವೆನಿಸುವುದು.

ಕಾಮುಕರಾದ ಜನರು ತಮ್ಮ ಪ್ರಿಯತಮೆಯ ಮೋಹಕನುಡಿಗಾಗಿ ಹಣ ಸೂರೆ ಮಾಡಲು ಸಿದ್ಧರಿರುತ್ತಾರೆ. ಅವರಿಗೆ ಹಣ ಮುಖ್ಯವಲ್ಲ; ಹಣ ಹೋದರೆ ಹೋಗಲಿ; ಪ್ರೇಯಸಿಯ ನಲ್ವಾತು ಕೇಳ ಸಿಕ್ಕರೆ ಸಾಕು, ಎನ್ನುತ್ತಾರೆ.

ತಿಲಕ

ಪನಸತೊನಲಕನ್ನ ಬಂಚದಾರಲಕನ್ನ, ಜುಂಟತೇನೆಕನ್ನ ಜುನ್ನುಕನ್ನ
ಚಿರಕುರಸಮುಕನ್ನ ಜಿಲಿಮಾಟತೀಪಿರಾ ವಿಶ್ವದಾಭಿರಾಮ ವಿನುರ ವೇಮ.

ಹಲಸಿನ ತೊಳೆಗಿಂತ ಹರಳು ಸಕ್ಕರೆಗಿಂತ,
ಮಧುಪಿಯೂಷ, ಮಧುರ ಗಿಣ್ಣಕಿಂತ,
ಕಬ್ಬಿನ ರಸಕಿಂತ ಪ್ರೇಯಸಿ ಮಾತು ಸಿಹಿ;
ವಿಶ್ವದಾಭಿರಾಮ ಕೇಳು ವೇಮ

ಹಲಸಿನ ಹಣ್ಣಿನ ತೊಳೆ, ಕಲ್ಲುಸಕ್ಕರೆ, ಜೇನುತುಪ್ಪ, ರುಚಿಕರ ಗಿಣ್ಣ ಮತ್ತು ಕಬ್ಬಿನ ರಸ ಇತ್ಯಾದಿ ಖಾದ್ಯ, ಪೇಯ ವಸ್ತುಗಳು ಅತ್ಯಂತ ಸಿಹಿಯಾಗಿರುವುದು, ಎಲ್ಲರಿಗೂ ಗೊತ್ತು. ಪ್ರೇಯಸಿಯ ಪ್ರೇಮಪೂರ್ಣ ಮಾತು ಇವೆಲ್ಲವುಗಳಿಗಿಂತ ಹೆಚ್ಚು ಸಿಹಿಯಾಗಿದೆ. ಖಾದ್ಯ, ಪೇಯ ವಸ್ತುಗಳು ಕರ್ಮೇಂದ್ರಿಯ (ನಾಲಗೆ) ದ್ವಾರಾ ಸುಖ ನೀಡಿದರೆ, ಪ್ರೇಯಸಿಯ ಮೋಹಕ ನುಡಿ ಜ್ಞಾನೇಂದ್ರಿಯ (ಮನಸ್ಸು) ದ್ವಾರಾ ಸುಖ ನೀಡುವುದು.

ಪ್ರೇಮದ ಮಾತುಕತೆ ಮನಸ್ಸನ್ನು ಅರಳಿಸುತ್ತದೆ. ಪರಸ್ಪರರು ಸುಖ-ಸಂತೋಷಗಳಲ್ಲಿ ಪಾಲುಗೊಳ್ಳಲು ನೆರವಾಗುತ್ತದೆ.

ತಿಲಕ

ಕೊಮ್ಮದ್ರಿಮ್ಮರ್ಕೆನ ದ್ರಿಮ್ಮರುಲನೆಕೋರು, ಸರಸವಿಟುಲ ನೇಲಸಮ್ಮತಿಂಚು?
ಪೇಡದಿನೆಡಿಪುರುಗು ಬೆಲ್ಲಮೇಮೆರುಗುರಾ, ವಿಶ್ವದಾಭಿರಾಮ ವಿನುರ ವೇಮ.

ಬೀದಿ ಬಸವಿಗಾಸೆ ಬೀದಿ ಕಾಮು ಮೇಲೆ,
ಸರಸ ವಿಟನ ಸಂಗವೆಂತು ಸಹ್ಯ ?
ಶಗಣಿ ತಿಂಬ ಹುಳಕೆ ಬೆಲ್ಲದ ಸಿಹಿ ಎಲ್ಲಿ?
ವಿಶ್ವದಾಭಿರಾಮ ಕೇಳು ವೇಮ.

ಬೀದಿ ಬಸವಿಯರು ವೇಶ್ಯೆಯರೆಲ್ಲಿಯ ಒಂದು ವರ್ಗ. ಹಾದಿಹೋಕರನ್ನು ಹಣ ದಾಸೆಯಿಂದ ಕಾಮಭೋಗಕ್ಕೆ ಆಕರ್ಷಿಸಲು, ಹೂ ಮುಡಿದು, ಅಲಂಕರಿಸಿ ಬೀದಿಯತ್ತ ನೋಟಬೀರುತ್ತ ಕುಳಿತುಕೊಳ್ಳಬೇಕು. ಬೀದಿಕಾಮರು ಇಂಥ ಬೀದಿ ಬಸವಿಯರನ್ನೇ ವರಿಸುವುರು. ಇಂಥ ಹೆಣ್ಣು ಕೇವಲ ಬೆಲೆವೆಣ್ಣು. ಈ ಸ್ಥಿತಿಗೆ ಮುಟ್ಟಿದ ಮೇಲೆ, ಅವಳು ಯಾರೊಬ್ಬರ ಸಂಗದಲ್ಲಿ ನಿತ್ಯ ಇರಬಯಸಳು. ವೇಶ್ಯೆಯ ವರ್ಗ ಸಮಾಜದಲ್ಲಿ ಅಸ್ತಿತ್ವದಲ್ಲಿದೆ. ಅವರು ಉದರ ನಿರ್ವಹಣಕ್ಕಾಗಿ ವೇಶ್ಯೆಯರಾಗಿ ಇರಬೇಕಾಗಿದೆ; ಆದರೆ ವೇಶ್ಯೆಯು ಸಹ ಯಾವನಾದರೂ ಒಬ್ಬ ವಿಟ ಪುರುಷನ ಬಳಿ ಆಶ್ರಯ ಪಡೆದು, ಅವನ ಹೆಂಡತಿಯಂತೆಯೇ ಸದಾ ಉಳಿಯಬಹುದು. ಆದರೆ ಬೀದಿಬಸವಿಯಾದವಳು ಸರಸ ವಿಟ ಪುರುಷನ ಸಂಗವನ್ನು ಮೆಚ್ಚದೆ ಕಷ್ಟಕ್ಕೆ ಗುರಿಯಾಗುವಳು.

ಹೇಗೆಂದರೆ, ಕೆಲ ಜಾತಿಯ ಹುಳು ಶಿಗಣಿಯನ್ನೇ ಸೇವಿಸುತ್ತವೆ. ಅವುಗಳಿದುರು ಬೆಲ್ಲವಿಟ್ಟರೂ ಅವು ಮುಟ್ಟುವುದಿಲ್ಲ. ಶಗಣಿಹುಳುವಿನಂತೆ ಬೀದಿಬಸವಿಯ ಆಶೆ-ಆಕಾಂಕ್ಷೆಗಳು.

ತಿಲಕ

ಕುಕ್ಕಯೇಮೆರುಂಗು ಗುರುಲಿಂಗಜಂಗಂಬು, ಬಿಕ್ಕಯೊಡಿಸಿಪಟ್ಟ ಪೀಕುಗಾನಿ,
ಸಂತ ಪಾಕತೊತ್ತು ಸನ್ಯಾಸಿನೆರುಗುನಾ ? ವಿಶ್ವದಾಭಿರಾಮ ವಿನುರ ವೇಮ.

ನಾಯಿಗೇನು ಗೊತ್ತು ಗುರುಲಿಂಗಜಂಗವು,
ಕಾಲು ಖಂಡ ಕಚ್ಚಿ ಎಳೆವುದೊಂದೆ;
ಸಂತೆ ತಿನಿಸಿನಾಕೆ ಸಂತನೆಂತು ಬಲ್ಲಳು ?
ವಿಶ್ವದಾಭಿರಾಮ ಕೇಳು ವೇಮ

' ಗುರುವಿಗೆ ತನುವಿತ್ತು ಲಿಂಗಕ್ಕೆ ಮನವಿತ್ತು ಜಂಗಮಕ್ಕೆ ಧನವಿತ್ತು ' ಆಚಾರವಂತನಾಗಬೇಕೆಂಬುದು ಭಕ್ತನಿಗೆ ಗೊತ್ತು. ಜಂಗಮವೇ ಲಿಂಗವೆಂದು ಅರಿಯಬೇಕು.

ಜಂಗಮನು ಭಿಕ್ಷುಕ ಆಸೆಬುರುಕನಲ್ಲ. ಕಾಡಿ ಬೇಡಿ, ಕೊಟ್ಟರೆ ಕೊಂಡಾಡಿ, ಕೊಡದಿದ್ದರೆ ಜರೆಯುವವನಲ್ಲ. ನಿರಾಸಕ್ತನವನು. ಕೊಟ್ಟರೂ ಅಷ್ಟೇ. ಕೊಡದಿದ್ದರೂ ಆಷ್ಟೇ. ಉಂಡವರನ್ನೇ ಕಂಡು ಸಂತೋಷಪಡುವ ದೈವೀ ಭಾವ, ಅವನದು. ಇವನೇ ಭಿಕ್ಷು; ಸನ್ಯಾಸಿ, ಫಕೀರ. ಇವನ ಮಹತ್ವ ಭಕ್ತನಿಗೆ ಗೊತ್ತು. ಆದರೆ, ಬಾಗಿಲು ಕಾಯುವ ನಾಯಿಗೇನು ಗೊತ್ತು ? ಹರಕು ಚಿಂದಿಯ ಈ ನಿರಾಸಕ್ತ ದೈವೀಭಾವದವನನ್ನು ಕಂಡು ಅದು ಅವನ ಕಾಲಿನ ಖಂಡಮಾಂಸದ ಭಾಗವನ್ನು ಕಚ್ಚಲು ಹೋಗುವುದು.

ಅದೇ ರೀತಿ ಸಂತೆಯಲ್ಲಿ ತಿಂಡಿ-ತಿನಿಸ ಗಳ ವ್ಯಾಪಾರದಲ್ಲಿ ಅನುರಕ್ತಳಾಗಿರುವವಳು ಸಾಮಾನ್ಯವಾಗಿ ಶೀಲಗೆಟ್ಟ ಹೆಣ್ಣು. ಇಂಥವಳಿಗೆ ಹರಕು ಚಿಂದಿಯ, ಸಾಧು ಪುರುಷನ ಮಹಿಮೆ ಗೊತ್ತಾಗುವುದೆಂತು ?

ಸಾಮಾನ್ಯರಿಗೆ ಸಾಧು ಪುರುಷರ ಮಹಿಮೆ ಗೊತ್ತಾಗುವುದಿಲ್ಲ.

ತೆನದುನ್ನಪತಿ ತೋಡ ದಗನಾಯುಧಮುತೋಡ, ನಗಿ, ತೋಡ ಬರುನಿಯಾಲಿ ತೋಡ,
ಹಾಸ್ಯ ಮಾಡು ಟಿಲ್ಲ ಬ್ರಾಣಾಂತಮೌ ಸುಮ್ಮಿ ವಿಶ್ವದಾಭಿರಾಮ ವಿನುರ ವೇಮ.

ತನ್ನ ಒಡೆಯ ನೊಡನೆ, ಹರಿತಾಯುಧದೊಡನೆ,
ಉರಿವ ಬೆಂಕಿ, ಪರರ ನಾರಿಯೊಡನೆ,
ಗೇಲಿ ಮಾಡಲಾಗ ಕಾಲ ತೀರಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಒಡೆಯನೊಂದಿಗೆ ಸಲುಗೆಯಿಂದ ಚೇಷ್ಟೆ ಮಾಡುವುದು ಒಳಿತಲ್ಲ. ಸಲುಗೆಯ ಮಾತು ತೂಕ ತಪ್ಪುವ ಸಂಭವವುಂಟು. ಒಡೆಯನ, ಚಿತ್ತವೃತ್ತಿ ಅರಿಯುವುದೂ ಕಠಿಣ. ಎಂದಾದರೊಮ್ಮೆ ಆಡಿದ, ತೂಕ ತಪ್ಪಿದ ಮಾತಿನಿಂದ ಕುಪಿತನಾದ ಒಡೆಯನು ಸೇವಕನನ್ನು ಕೆಲಸದಿಂದ ತೆಗೆದು ಹಾಕಬಹುದು.

ಹರಿತವಾದ ಆಯುಧ, ಉರಿಯುವ ಬೆಂಕಿಗಳೊಂದಿಗೆ ಚಿನ್ನಾಟಕ್ಕಿಳಿದರೆ ಕೇಡುಂಟು.

ಅದೇ ರೀತಿ ಪರಸ್ತ್ರೀಯೊಂದಿಗೆ ಕುಚೇಷ್ಟೆಗೆ ಇಳಿದುದುನ್ನು, ಅವಳ ಕಡೆಯವರು ಕಂಡರೆ, ಪರಿಸ್ಥಿತಿ ಕೈಮೀರಿ ಕೇಡು ಸಂಭವಿಸಬಹು.

(ಸರ್ವಜ್ಞ ಮೂರ್ತಿಯೂ ಇದೇ ಆಶಯ ವ್ಯಕ್ತಪಡಿಸಿದ್ದಾನೆ:
"ಕೊಟ್ಟು ಮರುಗಲು ಬೇಡ | ಬಿಟ್ಟು ಹಿಡಿಯಲು ಬೇಡ |
ಕೆಟ್ಟ ನಡೆಯವಳ ನೆರೆ ಬೇಡ | ಪರಸತಿಯ ಮುಟ್ಟಬೇಡೆಂದ ಸರ್ವಜ್ಞ||")

೩೬೭

ತರುಣಿ ಸೊಗಸುಗಾನಿ ದನಯುನಿಗನ್ನನು, ಮರುನಿಕಳಲಮಿಂಚಿ ಮನಮುಜಾರು,
ಪಾಪಜಾತಿಮನಮು ಬಟ್ಟಂಗರಾದಯೂ, ವಿಶ್ವದಾಭಿರಾಮ ವಿನುರ ವೇಮ.

ತರುಣಿ ಸೊಗಸು ಗಾರ್ತಿ; ತನಯ-ಕುಲವ ಕಂಡು,
ಮರುಕ ತುಂಬಿ ಮನವು ಹರಿಯುತಿಹುದು;
ಪಾಪ ಮೂಡಲೆಳಿಪ; ಮನವ ಮೆಟ್ಟಲಾರ!
ವಿಶ್ವದಾಭಿರಾಮ ಕೇಳು ವೇಮ.

ಸೊಗಸುಗಾರ್ತಿಯಾದ ಯುವತಿಯನ್ನು ಕಂಡು ಪ್ರೇಮ ಅಂಕುರಿಸುತ್ತದೆ. ಪುತ್ರರ ಬಳಗ ಕಂಡು ವಾತ್ಸಲ್ಯ ಉಕ್ಕೇರುತ್ತದೆ. ಇವರಿಗಾಗಿ ಮನುಷ್ಯ ಮೋಹ ತಾಳುತ್ತಾನೆ. ಅವನ ಮನಸ್ಸು ಮುಗ್ಧವಾಗುತ್ತದೆ.

ಮೋಹದ ಬಲೆಗೆ ಸಿಕ್ಕ ಮನಸ್ಸು ಪಾಪಕೃತ್ಯ ಮಾಡಹಚ್ಚುವುದು. ಆಗ ಪಾಪ ಮಾಡುತ್ತಾನೆ. ಆದರೆ ಪಾಪಕ್ಕೆ ಪ್ರಚೋದಿಸುವ ಮನಸ್ಸನ್ನು ನಿಗ್ರಹಿಸಲಾರನು.

ತೀನೆ ಪಂಚದಾರ ತಿಯ್ಯಮಾಮಿಡಿಪಂಡು, ದಿನ್ನಗಾನಿ ತೀಪಿ, ತೆಲಿಯರಾದು.
ಕನ್ನನಿಂಪುವುಟ್ಟು ಗಾಮಿನಿಯಧರಂಬು, ವಿಶ್ವದಾಭಿರಾಮ ವಿನುರ ವೇಮ.

ಜೇನು, ಕಲ್ಲು-ಸಕ್ಕರೆ ಸಿಹಿ ಮಾವಿನ ಹಣ್ಣು
ತಿನ್ನದಿರಲು ಸವಿಯೆಂತು ತಿಳಿವುದು ?
ಕಣ್ಣು ಕಂಡೊಡೆ ಸಿಹಿಕರ ಕಾಮಿನಿಯಧರ!
ವಿಶ್ವದಾಭಿರಾಮ ಕೇಳು ವೇಮ.

ಜೇನುತುಪ್ಪ, ಕಲ್ಲುಸಕ್ಕರೆ ಮತ್ತು ಮಾವಿನ ಹಣ್ಣುಗಳು ರುಚಿಕರವೆಂಬುದು ನಮಗೆ ಗೊತ್ತು. ಅವು ತುಂಬಾ ಸಿಹಿಕರವೆಂಬುದೂ ಗೊತ್ತು. ಅವುಗಳನ್ನು ನೋಡಿದಾಗ ಅವುಗಳ ಬಗೆಗೆ ಆಶೆ ಹುಟ್ಟುತ್ತದೆ. ಅವುಗಳ ರುಚಿ ಜ್ಞಾಪಕಕ್ಕೆ ಬರುತ್ತದೆ. ಆದರೆ ಆ ರುಚಿಯ ಆಸ್ವಾದನೆಯ ಅನುಭವಾನಂದ ಆಗದು.

ಆದರೆ, ಕಾಮಿನಿಯ ತುಟಿಯ ರೀತಿ ಬೇರೆ. ಸುಂದರಿಯ ಜೆಲುವ ತುಟಿಗಳನ್ನು ನೋಡಿದೊಡನೆ, ಅವುಗಳ ಸಿಹಿಯನುಭವ ಉಂಟಾಗುವುದು. ಅದರ ಪ್ರತಿಕ್ರಿಯೆ ಪರಿಣಾಮಗಳು ಕಾಮುಕ ಪುರುಷನಲ್ಲಿಯೂ ವ್ಯಕ್ತವಾಗುವವು.

ಒಳಿತಿನ ಆಕರ್ಷಣೆಗಿಂತ ಕೆಡುಕಿನ ಆಕರ್ಷಣೆ ಮನುಷ್ಯರಿಗೆ ಹೆಚ್ಚಾಗಿರುತ್ತದೆ.

೩೬೯

ಸುತುಲವಲನ ಬುಣ್ಯಸುಖಮುನೊಂದು ದಮನಿ, ಮನುಜುಂಡುಂಡು ಗರ್ಮಮತಮು ದವಿಲಿ
ಏನುಗುಪಡಿಯುನ್ನ ನೆತ್ತುನಾ ಮಶಕಂಬು ? ವಿಶ್ವದಾಭಿರಾಮ ವಿನುರ ವೇಮ

ಪುಣ್ಯ ಸುಖವ ಪುತ್ರರಿಂದ ಪಡೆಯಬಹುದೆ ?
ಮನುಜ ಕರ್ಮ ಮತದಿ ಬಿದ್ದನಯ್ಯ !
ಆನೆ ಬೀಳಲಾಗ ಎತ್ತಬಹುದೆ ಸೊಳ್ಳೆ ?
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣುಮಕ್ಕಳಿಗೆ ಇರುವ ಎಲ್ಲ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ನಿಯಮಗಳನ್ನು ಧರ್ಮಸೂತ್ರಗಳನ್ನು ವಿಧಿಸಿದ ಮನು " ಅಪುತ್ರಸ್ಯ ಗತಿರ್ನಾಸ್ತಿ " ಎಂದು ಘೋಷಿಸಿದನು

ತಾಯಿ-ತಂದೆಗಳು ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ ಕರ್ಮಗಳ ಫಲವೇ ಮಕ್ಕಳು ಎನ್ನುತ್ತಾರೆ. ಆತ್ಮವೇ ದೇವರು. ಮಕ್ಕಳೇ ಆತ್ಮ. ಕಾರಣ ಮಕ್ಕಳನ್ನು ಪಡೆಯುವುದು, ದೇವ ಸಾಕ್ಷಾತ್ಕಾರ ಎಂಬ ಭಾವನೆಯೂ ಇತ್ತು. ಮಕ್ಕಳು ತಾವು ಸಂಪಾದಿಸಿದ ಸಂಪತ್ತಿನಿಂದ ಮಾಡುವ ಸತ್ಕರ್ಮಗಳ ಫಲವು ಅವರ ತಂದೆ-ತಾಯಿಗಳಿಗೆ ಸೇರುತ್ತದೆ. ಆದ್ದರಿಂದ ಮಕ್ಕಳೇ ತಮ್ಮ ಸಂಪತ್ತು ಎಂದೂ ಬಗೆಯುತ್ತಾರೆ. ಮಕ್ಕಳಿಂದ ತಮಗೆ ಸದ್ಗತಿ ಎಂದು ನಂಬುತ್ತಾರೆ. ಕರ್ಮಬದ್ಧರಾಗುತ್ತಾರೆ. ತಮ್ಮನ್ನು ತಾವೇ ಮರೆಯು-

ತ್ತಾರೆ. ಆದರೆ ಮಕ್ಕಳು, ತಾವು ಹಡೆದ ಹಸುಗೂಸುಗಳು. ತಾಯಿ-ತಂದೆ, ಹಿರಿಯರು, ಅನಭವ ಸಂಪನ್ನರು; ಒಳಿತು ಕೆಡುಕು ತಿಳಿಯಬಲ್ಲ ಶಕ್ತಿ ಉಳ್ಳವರು. ಇಂಥವರು ತಾವೇ ಹಾದಿ ತಪ್ಪಿ ನಡೆದರೆ, ಕೀಳು ಕೆಲಸ ಮಾಡಿದರೆ, ಇವರ ಮಕ್ಕಳು ಇವರನ್ನು ಉದ್ಧರಿಸಲಾರರು. ಹೇಗೆಂದರೆ, ಆನೆ ಬಿದ್ದರೆ ಸೊಳ್ಳೆ ಅದನ್ನು ಎತ್ತಿ ಉದ್ಧರಿಸಬಲ್ಲದೇ ? ತನ್ನ ಉದ್ಧಾರ ತನ್ನಿಂದ ಮಾತ್ರ ಸಾಧ್ಯ. " ಉದ್ಧರೇತ್ ಆತ್ಮಾನ್ ಆತ್ಮಾನಮ್ " ಎಂದು ಗೀತೆಯೂ ಉಪದೇಶಿಸುತ್ತದೆ.

೩೯೦

ವಾಡಕುರಿಕಿತಿಟ್ಟು ವಲದನ್ನ ವೊರಬಿಟ್ಟು, ಮುಂದು ಮಗನಿದಿಟ್ಟು ಮುಸುಗು ಬಿಟ್ಟು,
ಗಡುಸುರಾಲು ಮಗನಿ ಗಂಪಬಿಟ್ಟಯು ನಮ್ಮು, ವಿಶ್ವದಾಭಿರಾಮ ವಿನುರ ವೇಮ.

ಹಾದಿಗುಂಟೆ ಹೊಲಸು ನಿಂದೆ; ಬೇಡವೆನಲು,
ನೊದಲು ಪತಿಯ ನಿಂದೆ; ಮುಸುಕು ಬೇರೆ !
ಗಂಡು-ಬೀರಿ ಗಂಡ ಕಾಸಿಗೆ ಪಂಥೇರು
ವಿಶ್ವದಾಭಿರಾಮ ಕೇಳು ವೇಮ.

ಸೌಜನ್ಯಕರ ನಡೆನಳಿ ಹೆಣ್ಣಿಗೆ ಒಪ್ಪುವ ಗುಣ. ಸೌಜನ್ಯವಿಲ್ಲದವಳು ಗಡಸುಗಾರ್ತಿ; ಗಂಡುಬೀರಿ.

ಹಾದಿಗುಂಟೆ ಹೊಲಮನೆಗೆ, ಪರವೂರಿಗೆ ಹೋಗುವಾಗ, ಅವರಿವರನ್ನು ಆಡಿಕೊಳ್ಳುವುದು, ಅಲ್ಲಸಲ್ಲದ ಅಪವಾದ-ನಿಂದೆಗಳನ್ನು ಕಂಡ ಕಂಡವರ ಬಗ್ಗೆ ಹೊರಿಸುವುದು ಅವಳ ರೂಢಿ. ಇಂಥ ಪರನಿಂದೆ ಬೇಡ ಎಂದರೆ, ತನ್ನ ಪತಿಯನ್ನೇ ಮೊದಲು ದೂಷಿಸತೊಡಗುತ್ತಾಳೆ. ಇಷ್ಟೆಲ್ಲ ಹೆಣ್ಣಿಗೆ ಶೋಭಿಸದ ನಡತೆ ಹೊಂದಿ ಲಜ್ಜೆಗೆಟ್ಟವಳಾದರೂ' ಬಾಹ್ಯಾಚಾರ ಹೆಚ್ಚು. ಸೆರಗಿನಿಂದ ಮುಖ ಮುಚ್ಚುವಂತೆ ಮುಸುಕು ಎಳೆಯುತ್ತಾಳೆ. ಇಂಥ ಗಂಡುಬೀರಿಯ ಗಂಡನ ಮಾನವೆಲ್ಲ ಹಾಳಾಗಿ ಹೋಗುವುದು.

೩೯೧

ಅಲುರಂಭಯ್ಯೆನ ನತಿಶೀಲವತಿಯ್ಯೆನ, ಜಾರಪುರುಷು ಡೇಲ ಜಾಡವಾನು ?
ಮಾಲವಾಡಗುಕ್ಕ ಮರಿಗಿನಚಂದಂಬು ವಿಶ್ವದಾಭಿರಾಮ ವಿನುರ ವೇಮ.

ಭಾರ್ಯೆ ರಂಭೆಯಿರಲು, ಸುಶೀಲವತಿಯಿರಲು,
ಜಾರ ಪುರುಷನೆಂತು ಜಾಡು ಬಿಡುವ ?
ಹೊಲಗೇರಿಯ ನಾಯಿ ತಿರು ತಿರುಗುವ ರೀತಿ
ವಿಶ್ವದಾಭಿರಾಮ ಕೇಳು ವೇಮ.

ನಾಯಿಗೆ ಹೊಟ್ಟಿತುಂಬ ಕೂಳು ಹಾಕಿದರೆ ಮನೆಯನ್ನೇ ಕಾಯುತ್ತ ಬೀಳಬೇಕಾದುದು, ಅದರ ಕರ್ತವ್ಯ. ಆದರೆ ನಾಯಿಗೆ ಹೊಲಗೇರಿಯಲ್ಲಿ ಬಿದ್ದ ಎಲುಬು ಚೂರು

ಕಡಿಯುವ ಚಟ ಅಂಟಿಕೊಂಡರೆ, ಅದು ಒಂದು ಎಲುಬು ಚೀಪಿ ಒಗೆದು, ಇನ್ನೊಂದನ್ನು ಹುಡುಕುತ್ತ ತಿರುಗುತ್ತದೆ. ಏನಾದರೂ ಅದಕ್ಕೆ ಸಮಾಧಾನವೇ ಇಲ್ಲ.

ಅದೇ ರೀತಿ, ಮನೆಯ ರೂಪವಂತೆಯೂ, ಒಳ್ಳೆಯ ನಡೆವಳಿಯುಳ್ಳವಳೂ ಆದ ಹೆಂಡತಿ ಇರುವಾಗ ಸಹ ಪುರುಷನು ಪರಸ್ತ್ರೀ ಸಂಗವನ್ನು ಆಶಿಸುತ್ತಾನೆ. ಅವನ ಜಾರತನವೇ ಅವನನ್ನು ಹಾದಿ ತಪ್ಪಿಸುವುದು. ಜಾರ ಪುರುಷನು ಹೊಲಗೇರಿ ತಿರುಗುವ ನಾಯಿಯಂತೆ ಸುಖದ ಮೇಲು-ಕೀಳು ಅರಿಯದವನು.

೩೯೨

ಕಲಿಮಿನಾಡು ಮಗನಿ ಗಾವಿಂಚಿಚೂಚುನು ಲೇಮಿಜಿಕ್ಕು ನಾಡು ಲೇವಕುಂಡು
ಮನಿನ ಮಗನಿ ನೈನ ಪಡಿಸಿನಟ್ಲುಗ ಜೂಚು, ವಿಶ್ವದಾಭಿರಾಮ ವಿನುರ ವೇಮ.

ಕಾಸು ಕಂಡು ಪತಿಯ ಕಾಮಿಸಿ ಕಾಣುವಳು,
ತ್ರಾಸು ತೊಂದರೆಯಿರೆ, ಕಾಸು ತೀರೆ,
ಅಸುವಿರುವವ ಮೃತ್ಯು ವಶವಾದ ರೀತಿ,
ವಿಶ್ವದಾಭಿರಾಮ ಕೇಳು ವೇಮ.

(ಸತಿಯು ಸಹಧರ್ಮಿಣಿ ಎನ್ನುತ್ತಾರೆ. ಸದ್ಗುಣ ಸದಾಚಾರಗಳುಳ್ಳ ಸತಿ ತನ್ನ ಪತಿಯ ನೋವು- ನಲಿವುಗಳಲ್ಲಿ ಪಾಲುಗೊಂಡರೆ ಅವಳು ನಿಜವಾಗಿ ಸಹ ಧರ್ಮಿಣಿಯೇ.)

ಕೇವಲ ಧನದ ಮೇಲಿನ ಮೋಹದಿಂದ ಪತಿಯ ಮೇಲೆ ಮೋಹ ತಾಳಿದವಳು ಸಹ ಧರ್ಮಿಣಿಯಲ್ಲ. ಪತಿಗೆ ಅನನುಕೂಲ ವೇಳೆ ಒದಗಿ ಅವನ ಕಾಸು ಹೋಗಿ ಕೈ ಬರಿದಾದರೆ, ಆಗ ಅವಳು ಪತಿಯನ್ನು ಲೆಕ್ಕಿಸುವುದೇ ಇಲ್ಲ. ಏಕೆಂದರೆ, ಅವಳು ಆಶಿಸುವ ಹಣ ಅವನಲ್ಲಿ ಉಳಿದಿರುವುದಿಲ್ಲ.

(ಸತಿಯ ಈ ಗುಣ ಸೂಳೆಯ ಗುಣಕ್ಕೆ ಸಮ. ಅದನ್ನೇ
" ಬಳ್ಳಿ ತೋಟಿಗ ಬಲ್ಲ | ಎಳ್ಳು ಗಾಣಿಗ ಬಲ್ಲ |
ಕಳ್ಳನು ಬಲ್ಲ ತಳವಾರ, ಸೂಳೆ ಹಣ |
ವುಳ್ಳನರಿದಿಹಳು, ಸರ್ವಜ್ಞ || ಎಂದು ಸರ್ವಜ್ಞಮೂರ್ತಿ ತ್ರಿಪದಿ ಪದ್ಯದಲ್ಲಿ ಹೇಳಿದ್ದಾರೆ,)

೩೯೩

ಕಡುವಿಚಿತ್ರಮುರಯ ಗಾಮುನಿಯಂತ್ರಂಬು, ಪುವ್ವುಜೋಡಿಚುಕ್ಕ ಬೊಟ್ಟುಗನ್ನ,
ಗಾಂಚಿಬೆಳುಕುಗನ್ನ ಗಡುಸೊಕ್ಕುಪುಟ್ಟುರಾ, ವಿಶ್ವದಾಭಿರಾಮ ವಿನುರ ವೇಮ.

ಕಡು ವಿಚಿತ್ರ ಅರಿಯೆ, ಕಾಮುಗೈದ ಯಂತ್ರ.
ಚಲುವೆ ನಾರಿ ಚಿಕ್ಕೆ ಬೊಟ್ಟು ಕಂಡು,
ಗಾಡಿ ನೋಡಿ ನೋಡಿ ಕಡು ನೋಹ ಮೂಡದೆ ?
ವಿಶ್ವದಾಭಿರಾಮ ಕೇಳು ವೇಮ.

ಕಾಮ ಪ್ರೇಮದೇವತೆ. ಸ್ತ್ರೀಪುರುಷರಲ್ಲಿ ಪರಸ್ಪರ ಮೋಹ ಹುಟ್ಟುವ ವಿಧವು ವಿಚಿತ್ರವಾಗಿದೆ. ಸ್ತ್ರೀ ಹೊಂದಿದ ರೂಪ–ಲಾವಣ್ಯ, ತನ್ನ ರೂಪಕ್ಕೆ ಮೆರುಗು ತಂದು ಕೊಡುವ, ಹಣೆಯ ಮೇಲಿನ ಚುಕ್ಕೆ ಬೊಟ್ಟು ಇತ್ಯಾದಿ ಪುರುಷನನ್ನು ಆಕರ್ಷಿಸುವ ಸ್ತ್ರೀಯ ಅಂಗ ಶೃಂಗಾರ ಸಾಧನಗಳು, ಇವೆಲ್ಲ ಜನರ ಕಣ್ಣಿಗೆ ಬೀಳುವಂತೆ ಸ್ತ್ರೀ ಅನುಸರಿಸುವ ನಡೆ–ನುಡಿ, ಅವಳು ತೋರುವ ಹಾವ–ಭಾವ ಇತ್ಯಾದಿ ಕಂಡು ಪುರುಷನ ಚಿತ್ತ ಕದಡುತ್ತಿದೆ. ಸ್ತ್ರೀಯ ಬಗ್ಗೆ ಆಕರ್ಷಿತನಾಗುತ್ತಾನೆ. ಅವಳಲ್ಲಿ ಮೋಹ ತಾಳುತ್ತಾನೆ ಅಲ್ಲವೇ ?

[ಅವತಾರ ಪುರುಷ ದತ್ತಾತ್ರೇಯ ವಿರಚಿತ ಅವಧೂತ ಗೀತೆಯಲ್ಲಿ ವ್ಯಕ್ತವಾದ ಅಭಿಪ್ರಾಯ ಹೀಗೆ :

" ಮನಸಾ ಕರ್ಮಣಾ ವಾಚಾ | ತ್ಯಜ್ಯತೇ ಮೃಗಲೋಚನೇ | ನ ತೇ ಸ್ವರ್ಗೋ s ಪವರ್ಗೋ | ವಾ ಸಾನಂದಂ ಹೃದಯಂಯದಿ |

ಅನುವಾದ:— ಮೃಗಲೋಚನೆಯಂತೆ ಕಣ್ಣು ಇರುವ ಸ್ತ್ರೀಯನ್ನು ಕಾಯಾ, ವಾಚಾ, ಮನಸಾ ತ್ಯಜಿಸಬೇಕು. ನಿನ್ನ ಮನಸ್ಸು ಅದರಲ್ಲಿ ಆನಂದಿಸಿದರೆ, ನಿನಗೆ ಸ್ವರ್ಗವೂ ಇಲ್ಲ, ಮೋಕ್ಷವೂ ಇಲ್ಲ. "

ಇಲ್ಲಿ ಸ್ತ್ರೀಯ ಬಗ್ಗೆ ಹೀನಭಾವನೆ ಬರುವಂತಿದೆ. ವೇವನಯೋಗಿ ಕಾಮ ಪ್ರೇರಣೆಯ ಕಾರಣಗಳನ್ನು ಮಥಿಸಿ, ಕಾಮುಕತೆಯ ನಿಗ್ರಹ–ಸಂಯಮ ಗೆಯ್ಯಲು ಹಾದಿ ತೋರುವರು.]

೩೯೪

ಕನಕಮೆಡಲ ಮುಂಚಿಕಾಂತಲಯೆಡಲನು, ವಲಚಿಯುಂದು ರೆಂತವಾರಲ್ಕೆನ
ದೋಯಜಾಕ್ಷಿಬಾಯು ದೊರಲೆವ್ವರುನುಲೇರು, ವಿಶ್ವದಾಭಿರಾಮ ವಿನುರ ವೇಮ.

ಕನಕ ಕಂಡು ಮತ್ತೆ ಮಿನ್ನ ಕಾಂತೆ ಕಂಡು,
ಹದುಳ ಹುಟ್ಟದಿಹುದೆ ? ಯಾರು ಏನು ?
ಮಿರುಗು ಕಣ್ಣ ಹೆಣ್ಣು ತೊರೆವ ಅಣ್ಣರಾರು ?
ವಿಶ್ವದಾಭಿರಾಮ ಕೇಳು ವೇಮ

ಪುರುಷರಿಗೆ ಭೋಗ ಸುಖದಾಸೆಯುಂಟು; ಸ್ತ್ರೀಯರಿಗೆ ಧನದ ಮೇಲಾಸೆಯುಂಟು.

ಒಳ್ಳೆಯ ಜೆಲುವೆಯನ್ನು ಕಂಡು ಪುರುಷ ಆಕರ್ಷಿತನಾಗುವನು. ತನ್ನಲ್ಲಿ ನಾರಿ ಇಚ್ಛಿಸುವ ಹಣವೂ ಇರುವುದನ್ನು ಕಂಡರೆ, ಅವನಿಗೆ ಭೋಗದ ಹಾದಿ ನಿರಾತಂಕವೆನಿಸುವುದು. ತಾನು ಎಂಥವನಾದರೂ ಇರಲಿ, ಕಾಂಚನ ಹೊಂದಿದ ಪುರುಷನು ಕಾಮಿನಿಯನ್ನು ಕಂಡು ಮೋಹ ತಾಳುತ್ತಾನೆ. ಅವಳ ಹೊಳೆಯುವ ಕಣ್ಣಿನ ನೋಟಕ್ಕೆ ಮಾರು ಹೋಗುತ್ತಾನೆ. ಸ್ತ್ರೀಗೆ ಮಾರು ಹೋಗದ ಹಿರಿಯರಾದರೂ ಯಾರು ? ಅವಳ ಆಕರ್ಷಣೆ ಅಷ್ಟು ಬಲವತ್ತರವಾದುದು.

(ಅವಧೂತ ಗೀತೆಯಲ್ಲಿ ದತ್ತಾತ್ರೇಯ "ನ ಜಾನಾಮಿ ಕಥಂ ಕೇನ ನಿರ್ಮಿತಾ ಮೃಗಲೋಚನಾ | ವಿಶ್ವಾಸ ಘಾತಕೀಂ ವಿದ್ಧಿ ಸ್ವರ್ಗ ಮೋಕ್ಷ ಸುಖಾರ್ಗಲಾಮ್ ||

ಅನುವಾದ:— ಹೇಗೆ ಮತ್ತು ಯಾರಿಂದ ಈ ಮೃಗಲೋಚನೆ ನಿರ್ಮಿತಳಾದಳೋ ಗೊತ್ತಿಲ್ಲ. ವಿಶ್ವಾಸ ಘಾತಕಿ ಸ್ತ್ರೀಯೇ ಸ್ವರ್ಗ, ಮೋಕ್ಷ ಮತ್ತು ಎಲ್ಲ ಸುಖಕ್ಕೂ ಆತಂಕ." ಎಂದು ಹೇಳುತ್ತಾರೆ. ಆದರೆ ವೇಮನ ಯೋಗಿ ಸ್ತ್ರೀ ಪುರುಷರೀರ್ವರೂ ಆತ್ಮ ಸಂಯಮದಿಂದ ವರ್ತಿಸಬೇಕೆಂದು ಬೋಧಿಸುತ್ತಾರೆ. ಸ್ತ್ರೀಯ ಮೇಲೆ ತಪ್ಪು ಹೊರಿಸುವ ಪೂರ್ವ ಸಂಪ್ರದಾಯದ ಜಾಡು ಬಿಟ್ಟು,ಸಮಾನತೆಯ ಸತ್ಯವನ್ನು ಎತ್ತಿ ಹಿಡಿಯುತ್ತಾರೆ.)

೩೯೫

ತೊತ್ತು ತೋಡಿಪೊಂದು ದೋಷಂಬು ದೋಷಂಬು, ಲಂಜತೋಡಿಪೊಂದು ಲಜ್ಜ ಚೆಡುನು,
ಜಾರತೋಡಿಪೊಂದು ಚಾವುಕುಮೂಲಮೌ ವಿಶ್ವದಾಭಿರಾಮ ವಿನುರ ವೇಮ.

ದಾಸಿ ಸಂಗ ಮಾಡೆ ದೋಷ ದೋಷ ನೋಡು
ವೇಶ್ಯೆ ಸಂಗ ಮಾಡ ಲಜ್ಜೆಗೇಡು
ಜಾರೆ ಸಂಗ ಮಾಡೆ ಮತ್ತೆ ಸಾವಿಗೀಡು
ವಿಶ್ವದಾಭಿರಾಮ ಕೇಳು ನೇಮ

(ಭರತ ಖಂಡದಲ್ಲಿ ಸ್ತ್ರೀಯರೆನ್ನು ಸ್ವೀಯ, ಪರಕೀಯ ಮತ್ತು ಸಾಧಾರಣ್ಯಾ ಎಂದು ವಿಭಾಗಿಸುತ್ತಿದ್ದರು. ಸಾಧಾರಣಾ ಸ್ತ್ರೀಯರಲ್ಲಿ ಗಣಿಕಾ, ವೇಶ್ಯಾ, ನಟೀ, ಅಜ್ಜುಕಾ, ಅಭಿಸಾರಿಕಾ, ಅಪ್ಸರಾ, ಉರ್ವಶೀ, ಕುಲಟಾ, ಕುಟ್ಟನೀ, ಕುಂಭದಾಸೀ ಮುಂತಾದ ಭೇದಗಳಿದ್ದವು.

ಗಣಿಕೆಯರು ಅರುವತ್ತು ನಾಲ್ಕು ಕಲೆಗಳಲ್ಲಿ ಪರಿಣತರಾಗಿರಬೇಕು. ವೇಶ್ಯೆಯರು ಪಂಚ ಚೂಡರೆಂಬ. ಅಪ್ಸರೆಯರಿಗೆ ಜನಿಸಿದವರು. ರಾಜರ ಆಸ್ಥಾನಗಳಲ್ಲಿ ಮಂಗಳ ದ್ರವ್ಯ ಹಿಡಿದು ರಾಜನ ಅಂಗರಕ್ಷಕರಾಗಿ, ಅಂತಃಪುರದ ಸೇವಕಿಯರಾಗಿ ಇರುತ್ತಿದ್ದರು. ದೇವಾಲಯಗಳಲ್ಲಿ ದೇವದಾಸಿಯರು ವಂಶಪರಂಪರೆಯಾಗಿ ಸೇವೆ ಮಾಡುತ್ತಿದ್ದರು.)

ಪರಸ್ತ್ರೀ ಗಮನ ಧರ್ಮಬಾಹಿರ ಕೆಲಸ. ಪರಸ್ತ್ರೀ ಗಮನವನ್ನು ಸಾಮಾಜಿಕ ಪರಿಣಾಮದ ದೃಷ್ಟಿಯಿಂದ ವಿಶ್ಲೇಷಿಸುವಾಗ ಸ್ತ್ರೀಯರಲ್ಲಿ ಸ್ಥೂಲವಾಗಿ ಮೂರು ವರ್ಗ ಕಲ್ಪಿಸಬಹುದು; ದಾಸಿ, ವೇಶ್ಯೆ ಮತ್ತು ಜಾರೆ. ರಾಜರಲ್ಲಿ ಸೇವಕಿಯಾಗಿರುವವಳು, ಒಡೆಯನ ಕೂಲಿಯ ಕೆಲಸದವಳು, ದಾಸಿ; ತಮ್ಮ ಉದರ ನಿರ್ವಹಣಕ್ಕಾಗಿ ನಿರ್ದಿಷ್ಟ ಹಣ ಪಡೆದು ಭೋಗತೃಪ್ತಿ ನೀಡುವ ವೃತ್ತಿ ಕೈಕೊಂಡವಳು, ವೇಶ್ಯೆ; ತನ್ನ ಪತಿಯು ಇರುವಾಗ, ಉಣ್ಣಲು–ತಿನ್ನಲು ಇರುವಾಗ, ಪರ ಪುರುಷ ಸಂಗಕ್ಕಿಳಿವವಳು ಜಾರೆ.

ದಾಸಿಯ ಸಂಗ ಮಾಡಕೂಡದು. ಏಕೆಂದರೆ, ಅದು ಧರ್ಮವಿರುದ್ಧ. ತನ್ನ ಮಡದಿಯ ವಿಶ್ವಾಸದ್ರೋಹ ಮಾಡಿದಂತೆ. ವೇಶ್ಯೆಯ ಸಂಗ ತಂವಲ್ಲ. ಏಕೆಂದರೆ ವೇತೆ ಬೆಲೆವೆಣ್ಣು, ಸಮಾಜದಲ್ಲಿ ಕೀಳುಮಟ್ಟದವಳು. ಅವಳಲ್ಲಿ ಅನುರಕ್ತಿ ತಾಳುವುದು ನಾಚುಗೆ ಬಿಟ್ಟ ಕೆಲಸ. ಜಾರೆ ಶೀಲಗೆಟ್ಟವಳು. ಅವಳ ಸಂಗ ಮಾಡಿದರೆ ವಿಪತ್ತುಂಟು. ಅವಳ ಪತಿಗೆ ವಿಷಯ ತಿಳಿದರೆ, ಅವನು ಕುಪಿತನಾಗಿ ಸಾಯ ಹೊಡೆಯುತ್ತಾನೆ.

ಸಿಇಒ

ಸಾಧುಚರಿತಯೆ ೈನ ಸತಿ ಸದ್ವರ್ತನ, ಜಾರಯೇನೆಂರುಂಗು ? ಸಾಧುವ್ನೆನ,
ಬ್ರಹ್ಮನಿಷ್ಠೆಯೆರುಗು ಬ್ರಾಕೃತುಡೆರುಗುನಾ ? ವಿಶ್ವದಾಭಿರಾಮ ವಿನುರ ವೇಮ.

ಸಾಧು ಚರಿತೆಯುಳ್ಳ ಸಾಧ್ವಿ—ಸದ್ವರ್ತನೆ,
ಜಾರನೆಂತು ಅರಿವ ? ಸಾಧು ತಾನೆ,
ಬ್ರಹ್ಮನಿಷ್ಠೆಯರಿವ; ಪ್ರಾಕೃತನರಿಯುವನೆ ?
ವಿಶ್ವದಾಭಿರಾಮ ಕೇಳು ವೇಮ

ಪತಿವ್ರತೆಯಾದ ಹೆಂಡತಿ ಸರ್ವೋತ್ತಮ ವಸ್ತು. ಅವಳ ಸದ್ಗುಣ—ಸದಾಚಾರಗಳೇ ಅವಳ ಸಾಧು ಗುಣ. ಒಪ್ಪುವ ನಡೆಯೇ ಅವಳ ಸದ್ವರ್ತನೆ. ಒಳ್ಳೆಯ ಚರಿತೆಯನ್ನೂ ನಡೆವಳಿಯನ್ನೂ ಅರಿಯಬೇಕಾದರೆ ಒಳ್ಳೆಯ ನಡೆಯನ್ನು ಪಾಲಿಸುವವರಿಂದ ಸಾಧ್ಯ. ಸಾಧು ಎಂದರೆ ಸಂಯಮವುಳ್ಳವರು. ಸಾಧುವಾದ ಸ್ತ್ರೀ ಸಾಧ್ವಿ. ಸಂಯಮದ ಮಹತಿ. ಸಂಯಮಿ ಮಾತ್ರ ತಿಳಿಯಬಲ್ಲ. ಜಾರ ಪುರುಷ ಸಂಯಮ ಇಲ್ಲದವನು. ತನ್ನ ಆಶೆಯ ದಾಸ. ಚಂಚಲ ಮತಿ. ಅವನಿಗೆಸಾಧ್ವಿಯ ಮಹಿಮೆ ತಿಳಿಯದು.

ಸಿಇಎ

ಚಕ್ಕದನಮುಲೇಲ ? ಸಂಪತ್ಕರಮುಲೇಲ ? ವಿದ್ಯೆಯೇಲ ? ಭೂಮಿವಿರಿವಿಯೇಲ ?
ಪುತ್ರಪದವಿಕನ್ನ ಬುಟ್ಟುನಾಪದವುಲು ? ವಿಶ್ವದಾಭಿರಾಮ ವಿನುರ ವೇಮ.

ಸೌಂದರ್ಯವು ಏಕೆ ? ಸಿರಿಸಂಪದವೇಕೆ ?
ಶಿಕ್ಷಣ ಪಡೆಯಲೇಕೆ ? ಭೂಮಿಯೇಕೆ ?
ಪುತ್ರಪದವಿಗಿಂತ; ಮಿನ್ನಪದವಿಯೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ

(ಮನುಸ್ಮೃತಿಯಲ್ಲಿ ಆಸ್ತಿಗಳಿಕೆಯ ಬಗ್ಗೆ ಹೀಗೆ ಹೇಳಿದೆ: "ಶೂದ್ರನಿಗೆ ತನ್ನದಾದ ಆಸ್ತಿಯೇ ಇರದು; ಕಾರಣ ಬ್ರಾಹ್ಮಣನು ಸಂಪೂರ್ಣ ಸಮಾಧಾನ ಚಿತ್ತದಿಂದ ಶೂದ್ರನಲ್ಲಿರುವ ಯಾವತ್ತೂ ವಸ್ತು-ಒಡವೆಗಳನ್ನೂ ಆಸ್ತಿ-ಪಾಸ್ತಿಯನ್ನೂ ಪಡೆಯಬೇಕು.

"ನಿಜವಾಗಿ ಶೂದ್ರನು, ಸಮರ್ಥನಾಗಿದ್ದರೂ, ಆಸ್ತಿಯನ್ನು ಸಂಪಾದಿಸಬಾರದು. ಏಕೆಂದರೆ, ಅವನು ಆಸ್ತಿ ಹೊಂದಿದುದನ್ನು ನೋಡಿದರೆ ಬ್ರಾಹ್ಮಣನಿಗೆ ಕಸಿವಿಸಿಯಾಗುವುದು."

"ಹೆಂಡತಿ, ಮಗ ಮತ್ತು ಗುಲಾಮ ಈ ಮೂವರು ಆಸ್ತಿ ಹೊಂದುವಂತಿಲ್ಲ. ಅವರು ಹೇಗಾದರೂ ಗಳಿಸಿದ ಆಸ್ತಿ ಅವರನ್ನು ಪಡೆದವರಿಗೆ ಹೋಗುವುದು.

"ಸ್ತ್ರೀಯರಿಗೆ ವೇದಾಭ್ಯಾಸದ ಅಧಿಕಾರವಿಲ್ಲ. ಆ ಕಾರಣದಿಂದಾಗಿ ಅವರ ಸಂಸ್ಕಾರಗಳನ್ನು ವೇದ ಮಂತ್ರ ಪಠಿಸದೆ ಮಾಡುತ್ತಾರೆ. ವೇದಾಭ್ಯಾಸದ ಹಕ್ಕು ಇಲ್ಲದ್ದರಿಂದ ಸ್ತ್ರೀಯರಿಗೆ ಧರ್ಮಜ್ಞಾನವೇ ಇಲ್ಲ. ಪಾಪನಿವಾರಣೆಗೆ ವೇದಮಂತ್ರ ಪಠಣ ಅವಶ್ಯ. ಸ್ತ್ರೀ ವೇದಮಂತ್ರ ಪಠಿಸುವಂತಿಲ್ಲವಾದುದರಿಂದ ಅವಳು ಅಸತ್ಯದ ಮುದ್ದೆಯಂತೆ."

"ಸ್ತ್ರೀಗೆ ಸೌಂದರ್ಯದ ಚಿಂತೆಯಿಲ್ಲ. ಅವಳಿಗೆ ವಯಸ್ಸಿನ ಚಿಂತೆಯೂ ಇಲ್ಲ. ಪುರುಷನಾದರಾಯ್ತು. ಚೆಲುವನಿರಲಿ, ಅಂದಗೇಡಿಯಿರಲಿ, ತನ್ನನ್ನು ಅವರಿಗೆ ಒಪ್ಪಿಸುತ್ತಾರೆ."

"ಪುತ್ರಹೀನರಿಗೆ ಗತಿಯೇ ಇಲ್ಲ" ಸ್ತ್ರೀಯರ ಬಗ್ಗೆ ಸ್ಮೃತಿಕಾರ ಮನುವಿನ ವಿಕ್ಷಿಪ್ತ ವಿಚಾರನ್ನು ವೇಮನಯೋಗಿ ಆಹ್ವಾನಿಸಿದ್ದಾರೆ:

ಸ್ತ್ರೀ ಸೌಂದರ್ಯ ಲೆಕ್ಕಿಸಳು. ಅವಳು ವಸ್ತು-ಒಡವೆ ಹೊಂದಕೂಡದು. ವೇದಾಭ್ಯಾಸಕ್ಕೆ ಅನರ್ಹಳು. ಆಸ್ತಿ-ಪಾಸ್ತಿ ಗಳಿಸಕೂಡದು. ಅವಳಿಗೆ ಪುತ್ರನೇ ಗತಿ. ಅದನ್ನು ಬಿಟ್ಟು ಬೇರೆ ಹೆಚ್ಚಿನ ಯಾವ ಪದವಿ ಪ್ರಶಸ್ತಿಗಳಿಲ್ಲವೆಂದು ಹೇಳಿದ್ದಾರಲ್ಲವೇ ?

ಸಿಇಅ

ತುಂಟ ವಿಂಟವಾನಿ ತೂಪುಲಪೂತಕು, ಮಿಂಟ ಮುಂಟನಡುಮು ಮಿಡುಕದರಮೆ ?
ಇಂಟಯಾಲಿವಿಡಿಚಿ ಯೆಟ್ಟುಂಡವಚ್ಚುರಾ ? ವಿಶ್ವದಾಭಿರಾಮ ವಿನುರ ವೇಮ.

ಮದನ ಬಿಲ್ಲಿನಂಬು ಬಡಿದು ಘಾತಗೊಂಡು;
ಪೃಥಿವಿಯಾಗಸ ಮಧ್ಯೆ ಮಿಡುಕಬಹುದೆ ?
ಮದುವೆ-ಹೆಂಡತಿಯನು, ಬಿಟ್ಟು ಇರುವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯ ಮೋಹ ಮದನನ ಬಿಲ್ಲು. ಸ್ತ್ರೀ ಪುರುಷನ ಮನಸ್ಸನ್ನು, ಚೂತ, ಜಾಜಿ, ಮಲ್ಲಿಗೆಯೊಂದಿಗೆ ಪುಷ್ಪಬಾಣವನ್ನು ಪ್ರೀಯತಮನ ಮೇಲೆ ತೂರಿ ಘಾಸಿಗೊಳಿಸುವಳು. ಪರುಷ ಭೋಗದಾಸೆಯಿಂದ ಆಕರ್ಷಿತನಾದ ಮೇಲೆ ಅದನ್ನುತೋರುವದು ಹೇಗೆ? ಬಿಟ್ಟರೆ, ಇಹಸುಖವಿಲ್ಲ. ತೊರೆದರೆ, ಆಸೆಗೆ ದಾಸನಾದ ಪ್ರಯುಕ್ತ ಪರಸುಖ ಪಡೆಯುವಂತಿಲ್ಲ. ಕಾರಣ ಬೇಕು-ಬೇಡಗಳನ್ನು ನೆನೆದು, ಪೃಥ್ವಿ-ಆಕಾಶಗಳ ಕುರಿತು ಚಿಂತೆ ಮಾಡುವುದೆಂತು ? ಅದು ಶಕ್ಯವೇ ?.

ಇಂಥ ಸ್ಥಿತಿಯಲ್ಲಿರುವವನು ಸರ್ವದಾ ತನ್ನ ಇಚ್ಛೆಯರಿತು ವರ್ತಿಸುವ ಲಗ್ನದ ಹೆಂಡತಿಯನ್ನು ಬಿಟ್ಟು ಹೇಗೆ ಇರಬಲ್ಲನು ?.

[ಸ್ತ್ರೀ ಆಸ್ತಿ ಸಂಪಾದನೆ ವಿನ್ಯಾರಣೆ,ವಿದ್ಯಾಭ್ಯಾಸದ ಚಿಂತೆಯಲ್ಲಿ ಕಾಲ ಕಳೆಯುತೊಡಗಿದರೆ, ಕಾಮ ಪೀಡಿತ ಪುರುಷನ ಗತಿಯೇನು ? ಕಾರಣ ಅವಳಿಗೆ ಇವು ಬೇಕಾಗಿಲ್ಲ. ಪುರುಷನ ಸ್ವಾರ್ಥ ಸಾಧನೆಗೆಂದು ಸ್ಮೃತಿಗಳು ಸ್ತ್ರೀಗೆ ಸ್ವಾತಂತ್ರ್ಯ, ವಿದ್ಯೆ, ಆಸ್ತಿಯ ಪಕ್ಕುಗಳನ್ನು ನಿರಾಕರಿಸಿವೆಯೆಂದು ತೋರುವುದು.]

ಸಿಇಳ

ತಗಿನಕುಲಜುಡ್ಮೆನ ದಲಯೆತ್ತು ಧನ ಮ್ಮೆನ, ಭಾಗ್ಯ ಪುರುಷು ನೇಲಪಟ್ಟನೆಚು?
ಪರಮಸಾಧ್ವಿಜೂಡ ಬರುಲನಂಟದು ಸುಮೀ, ವಿಶ್ವದಾಭಿರಾಮ ವಿನುರ ವೇಮ

ಶ್ರೇಷ್ಠ ಕುಲಜನಿರಲು, ಶಿರಸನು ಸಿರಿಯಿಡಲು,
ಭಾಗ್ಯ ಪುರುಷನೆಂತು ಕೈಹಚ್ಚುವ ?
ಪರಮಸಾಧ್ವಿ ಪರಸ್ಪರ್ಶವರಿಯಳಯ್ಯ
ವಿಶ್ವದಾಭಿರಾಮ ಕೇಳು ವೇಮ.

ಧನ ಕನಕಗಳೆಲ್ಲ ನಶ್ವರ. ಪರಮ ಸುಖವೀವುದೊಂದೆ. ಅದೇ ಬ್ರಹ್ಮ ಜ್ಞಾನ. ತನ್ನಂತೆ ಇತರರನ್ನು ಕಾಣುವುದು. ಇತರರ ಹಣಕ್ಕಾಗಿ ಆಶೆಪಡದಂತೆ ಅರಿವು ನೀಡುವುದು. ಇದನ್ನರಿತವನ ಕುಲ ಶ್ರೇಷ್ಠ ಕುಲ. ಅಂಥವರ ವಂಶದವನು ಶ್ರೇಷ್ಠಕುಲಜನು.

ತಾನು ಶ್ರೇಷ್ಠ ಕುಲಜನೆನಿಸಿದ ಮೇಲೆ, ತನ್ನ ತಲೆಯೆತ್ತರ ಧನ ಕನಕ ಒಟ್ಟಿ ನೀಡ ಬಂದರೂ, ಅವನು ಕೈಹಚ್ಚುವದಿಲ್ಲ. ಏಕೆಂದರೆ, ಅದರಲ್ಲಿ ಅವನಿಗೆ ಆಸ್ಥೆಯೇ ಇರದು.

ಅದೇ ರೀತಿ, ಪರಮ ಸಾಧ್ವಿಯಾದವಳು, ಶ್ರೇಷ್ಠ ನಡೆವಳಿಯನ್ನು ಸಾಧಿಸಿದವಳು. ಅವಳಿಗೆ ಪರಪುರುಷರಲ್ಲಿ ಆಸ್ಥೆ ಇರದು; ಅವರ ಸ್ಪರ್ಶ ಕೂಡ ಬಯಸಳು.

೪೦೦

ಕೂಟಕಿಗತಿಲೇಕ ಕೂರ್ಚುನ್ನವಾರಿಕಿ, ನಾಡುದಾನಿಮೀದ ನಾಸಯುನ್ನೆ ?
ಅನ್ನಮದುಮುಚೇತ ನನ್ನಿಮದಂಬುಲೌ. ವಿಶ್ವದಾಭಿರಾಮ ವಿನುರ ವೇಮ.

ಕೂಳಿಗು ಗತಿಯಿವದೆ ಕುಳಿತುಕೊಂಡಿರುವಗೆ,
ನಾಡಿನಾಗು ಹೋಗಿನಾಶೆಯುಂಟೆ ?
ಅನ್ನದ ಮದದಿಂದ ಇನ್ನು ಮದಗಳೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

(ಹುಟ್ಟಿದ ಮನುಷ್ಯನಿಗೆ ಹೊಟ್ಟೆಯ ಚಿಂತೆಯುಂಟು. ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂಬುದು ನಾಣ್ನುಡಿ. ಪರಚಿಂತೆ ಎಮಗೆ ಏಕೆ ? ಅಯ್ಯೋ ಎಮ್ಮ ಚಿಂತೆ ಎಮಗೆ ಸಾಲದೇ ? ಇದು ಶರಣರ ವಚನ.)

ದೇಹವು ಪಂಚಕೋಶಗಳಿಂದಾಗಿದೆ ಎನ್ನುತ್ತಾರೆ. ಅನ್ನಮಯ ಕೋಶ, ಪ್ರಾಣ ಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಆನಂದಮಯ ಕೋಶ. ಅವುಗಳಲ್ಲಿ ಸರ್ವ ಪ್ರಥಮವಾದುದು ಅನ್ನಮಯ ಕೋಶ. ಅನ್ನಮಯವಾದುದೇ ಅಂಗ-ಶರೀರದ ಮದಗಳೆಲ್ಲ ಅನ್ನದಿಂದ ಹುಟ್ಟಿದವು. ಅನ್ನಮದದಿಂದ ಉಳಿದೆಲ್ಲ ಮದ.

ದೇಶದ ಚಿಂತೆ; ಅಭಿಮಾನಗಳು ಹೊಟ್ಟಿ ತುಂಬಿದ ನಂತರ ಹುಟ್ಟುತ್ತವೆ. ಹಸಿವೆಯಿಂದ ಬಳಲುವವನು ದೇಶದ ಆಗು-ಹೋಗುಗಳತ್ತ ಲಕ್ಷ್ಯ ಹಾಕಲಾರ. ಹೊಣೆಗಾರ ಪ್ರಜೆಗಳು ಹೆಚ್ಚಾಗಬೇಕಾದರೆ, ಪ್ರಜೆಗಳ ಸಾಂಪತ್ತಿಕ ಸ್ಥಿತಿ ಸುಧಾರಿಸಬೇಕು.

೪೦೧

ಸತುಲಜೂಚಿ ನರುಡು ಸೌಖ್ಯಂಬುಗೋರುನು, ಗತುಲಗಾನಲೇಡು ಕರ್ಮಮುಂದು
ಗತುಲು ಸತುಲವಲನ ಗಾನಂಗಲೇರಯಾ, ವಿಶ್ವದಾಭಿರಾಮ ವಿನುರ ವೇಮ.

ನಾರಿ ಕಂಡು ನರನು ಸೌಖ್ಯಕೋರುತಿಹನು;
ದಾರಿಕಾಣಲಾರ ನಿಜಕರ್ಮದಿ;
ನಾರಿ ಸೇರಿ ದಾರಿ ಗಾಣದಾದನಯ್ಯ
ವಿಶ್ವದಾಭಿರಾಮ ಕೇಳು ವೇಮ.

(ನಮ್ಮ ಕಾರ್ಯ ನಮ್ಮ ಇಚ್ಛೆ, ವಿಚಾರಗಳ ಫಲ. ಇಚ್ಛೆ ಪ್ರಚೋದಿಸುತ್ತದೆ; ವಿಚಾರ ಯೋಚನೆ ಹೂಡುತ್ತದೆ. ಹಂಚಿಕೆ ಬಲವಂತವಾದರೆ ಕಾರ್ಯ ನೆರವೇರುತ್ತದೆ. ಆದರೆ ಕಾರ್ಯಸಿದ್ಧಿಯ ಮೇಲೆ ಪರಿಣಾಮ ಬೀರುವ ಮೂರನೆಯ ಘಟಕವೆಂದರೆ ಪರಿಸರ. ಪರಿಸರ ಅನುಕೂಲವಿಲ್ಲದಿದ್ದರೆ ಇಚ್ಛೆ ವಿಚಾರಗಳ ಶಕ್ತಿ ಅದುಮ್ಮಾಡುತ್ತದೆ. ಅನುಕೂಲ ಪರಿಸರ ಬಂದಾಗ ಕಾರ್ಯ ನೆರವೇರುವುದು. ಅದೇ ಜನ್ಮದಲ್ಲಿ ಅನುಕೂಲತೆ ಒದಗದಿದ್ದರೆ ಮುಂದಿನ ಜನ್ಮದಲ್ಲಿ ಅನುಕೂಲ ಪರಿಸರ ಒದಗಿದರೆ, ಕಾರ್ಯ ನೆರವೇರುವುದು. ಇದುವೆ. ಮಾನವನ ಕರ್ಮ. ಮರು ಜನ್ಮದಲ್ಲಿ ಕರ್ಮ ತಂತಾನೇ ಆಗುವುದು. ಆದರೆ ಇಚ್ಛೆ ವಿಚಾರಶಕ್ತಿಯ ಮೇಲೆ ಮರುಜನ್ಮದ ಆಶೆ ವಿಚಾರಗಳಿಂದ ಪರಿಣಾಮವಾಗುತ್ತದೆ. ಇದರಿಂದ, ಮನುಷ್ಯ ಕರ್ಮಕ್ಕೆ ದಾಸನಾಗದೆ ಅದನ್ನು ನಿಯಂತ್ರಿಸುವ ಒಡೆಯನಾಗುತ್ತಾನೆ ತನ್ನ ಕರ್ಮಗತಿಯನ್ನು ತಾನೇ ನಿರ್ಧರಿಸಬಲ್ಲನು.)

ಸುಖ ಸೌಖ್ಯಗಳು ನಾರಿಯಿಂದ ಒದಗುತ್ತವೆಂದು ಪುರುಷ ತಿಳಿಯುತ್ತಾನೆ. ಹೀಗೆ ತನ್ನ ಕರ್ಮದಿಂದ ತನಗೆ ಸುಖ-ದುಃಖಗಳು ಉಂಟು ಎಂದು ತಿಳಿಯದೆ ಹೋಗುವನು. ಸ್ವಂತ ಇಚ್ಛಾಶಕ್ತಿ ಮತ್ತು ವಿಚಾರಶಕ್ತಿಗಳಿಂದ ತನ್ನ ಕರ್ಮದ ಗತಿಯನ್ನು ನಿಶ್ಚಯಿಸಬೇಕು. ಸತಿಯಿಂದ ಯಾರೂ ತಮ್ಮ ಗತಿಯನ್ನು ಕಂಡುಕೊಳ್ಳಲಾರರು.

೪೦೨

ಅಲಿಮಾಲುವಿನಿ ಯನ್ನದಮ್ಮುಲರೋಸಿ, ವೇರುಬಡಿಪುವಾಡು ವೆರ್ರಿವಾಡು,
ಕುಕ್ಕಲೊಕಬಟ್ಟ ಗೋದಾವರೀದುನಾ ? ವಿಶ್ವದಾಭಿರಾಮ ವಿನುರ ವೇಮ.

ನಾರಿ ಮಾತು ಕೇಳಿ ಸೋದರರನೆ ತೊರೆದು,
ಬೇರೆಯಾಗುವವನು ಬುದ್ಧಿಗೇಡಿ.
ನಾಯಿಬಾಲ ಹಿಡಿದು ಗೋದಾವರಿ ದಾಟಿ.
ವಿಶ್ವದಾಭಿರಾಮ ಕೇಳು ವೇಮ

ಅಣ್ಣತಮ್ಮಂದಿರು ಸೋದರರು. ಒಂದೇ ಹೊಟ್ಟೆಯಿಂದ ಹುಟ್ಟಿದವರು. ತೀರ ಸಮೀಪದ ರಕ್ತ-ಸಂಬಂಧಿಗಳು. ಪರಸ್ಪರ ವಾತ್ಸಲ್ಯವುಳ್ಳವರು.

ಹೆಂಡತಿ ನಡೆಯಲು ಬಂದ ಮೇಲೆ ಪುರುಷನಿಗೆ ಅವಳಲ್ಲಿ ಪ್ರೇಮ ಅಂಕುರಿಸುತ್ತದೆ. ಅವಳೇ ಹಿತೈಷಿ ಎಂದು ಅವನು ನಂಬುತ್ತಾನೆ. ಅಣ್ಣ ತಮ್ಮಂದಿರಿಗಿಂತ ಅವಳ ಮಾತು ಮಾನ್ಯವೆನ್ನಿಸುತ್ತದೆ. ಇದನ್ನು ತಿಳಿದ ನಾರಿ, ಸ್ವಾರ್ಥಪರಳಾಗಿದ್ದರೆ, ಅವಿವೇಕಿಯಾಗಿದ್ದರೆ, ತನ್ನ ಭಾವ-ಮೈದುನರ ಬಗ್ಗೆ, ಇಲ್ಲವೆ ಹೆಚ್ಚಾಗಿ ನೆಗೆವೆಣ್ಣಿಯರ ಬಗ್ಗೆ, ಅಲ್ಲ-ಸಲ್ಲದ ತಕರಾರು ಹೇಳಿ, ಪತಿಯ ಮನಸ್ಸು ಕೆಡಿಸುತ್ತಾಳೆ. ಗಂಡ ಮನಸೋಲುತ್ತಾನೆ. ಅಣ್ಣ-ತಮ್ಮಂದಿರನ್ನು ತೊರೆದು ಬೇರೆಯಾಗುತ್ತಾನೆ. ಆದರೆ ಸಿಡಿದು ಹೋದ ಮೇಲೆ ಪೂರ್ವಸ್ಥಿತಿಯನ್ನು ನೆನೆದು ದುಃಖಪಡುತ್ತಾನೆ.

ಅನ್ನಮದಮುವಲನ ಸತಿವಲು ಬುರುಷುಲು, ನೇಪುರೇಗಿ ಮದನು ಡೇಜೆನೆಂಡ್ರು
ಅನ್ನಮುಡುಗುವೆನ್ಕ ನತಡೆಂದು ಬೋವುರಾ, ವಿಶ್ವದಾಭಿರಾಮು ವಿನುರ ವೇಮು.

ಅನ್ನದ ಮುದದಿಂದ ನಾರಿ ಪುರುಷರೆಲ್ಲ;
ಮುನ್ನ ಉದ್ರಿಕ್ತರು; ಕಾಮನಾಟ !
ಅನ್ನ ಹಿಂಗಲಾಗ, ಮದನನೆಲ್ಲಿ ಹೋದ ?
ವಿಶ್ವದಾಭಿರಾಮ ಕೇಳು ವೇಮ.

ಅನ್ನದ ಮದದಿಂದ ಸ್ತ್ರೀ-ಪುರುಷರು ತಮ್ಮ ಇಂದ್ರಿಯ ನಿಗ್ರಹ ಕಳೆದುಕೊಳ್ಳುತ್ತಾರೆ. ಇಂದ್ರಿಯಗಳ ದಾಸರಾಗುತ್ತಾರೆ. ಉದ್ರಿಕ್ತರಾಗುತ್ತಾರೆ. ಇದೆಲ್ಲ ಕಾಮನ ಆಟ ! ಎನ್ನುತ್ತಾರೆ.

ಉಣ್ಣಲು ತಿನ್ನಲು ಸಾಕಷ್ಟು ಇಲ್ಲದವರಲ್ಲಿ ಕಾಮ-ದಾಹ ಇರುವುದಿಲ್ಲವೇ? ಹೊಟ್ಟಿಗಿಲ್ಲದಾಗ ಕಾಮ ಇವರನ್ನು ತೊರೆದು ಹೋಗುವವನೇ ? ಹಾಗಾದರೆ ಎಲ್ಲಿಗೆ ?

(ಶ್ರವಣ, ಸ್ಪರ್ಶ, ನೋಟ, ರುಚಿ ಮತ್ತು ವಾಸನೆ ಇತ್ಯಾದಿ ಮಾಧ್ಯಮಗಳ ಮೂಲಕ ಭೌತಿಕ ವಸ್ತುಗಳ ಸುಖಭೋಗವೇ ಕಾಮ.

ಇಂದ್ರಿಯ ಮತ್ತು ವಸ್ತುಗಳ ಸಂಪರ್ಕದಿಂದ ಹುಟ್ಟುವುದೇ ಕಾಮ. ಕಾಮ ಪ್ರವೃತ್ತಿ ಜನ್ಮದಾರಭ್ಯ ಕಂಡುಬರುವ ಸಹಜ ಸ್ವಭಾವ. ನಮ್ಮ ಇಂದ್ರಿಯಗಳ ಮೇಲಿನ ನಮ್ಮ ಹಿಡಿತದಿಂದ ಕಾಮದಾಸೆಯ ನಿಗ್ರಹವೂ ಸಾಧ್ಯ.)

೪೦೬

ಎಗ್ರಿದಾನಿ ಬುರಷು ಡೇಪಾರಜೂಚಿನ, ವೇಕಿಪುಟ್ಟ ಚಾಲವೆಗ್ರಿ ಪಟ್ಟು,
ಪಲ್ಲುದೆರಚಿ ನಗಿನ ಬಟ್ಟುಜೆನ್ಪೊತಂಬು, ವಿಶ್ವದಾಭಿರಾಮು ವಿನುರ ವೇಮು.

ಮರುಳನಾದ ನರನು ಮೆರಗಿನವಳ ಕಂಡು,
ಜ್ವರೋನ್ಮಾದ ಜನಿಸಿ, ಮರುಳುಗೊಳುವ,
ತೆರೆದು ಹಲ್ಲು ನಗಲು, ನಾರಿ ಪೆಡಂಭೂತ !
ವಿಶ್ವದಾಭಿರಾಮು ಕೇಳು ವೇಮು

("ನಿಸರ್ಗವು ಪುರುಷನ ಹೃದಯದಲ್ಲಿ ಕಾಮದಾಶೆಯ ಬೀಜ ಬಿತ್ತುತ್ತದೆ. ಪ್ರೇಮ ಕಲೆಯು, ಆ ಕಾಡು ಬೀಜ ಅಂಕುರಿಸುವಲ್ಲಿ ನೆರವಾಗುವುದು. ಆದರೆ ಬುದ್ಧಿಯು ಕಾಮದಾಸೆಯಿಂದ ಉದಿಸುವ ಕೇಡುಗಳಿಂದ ಅವನನ್ನು ರಕ್ಷಿಸುತ್ತದೆ." ಎಂದು ವ್ಯಾತ್ಸ್ಯಾಯನ ಕಾಮ ಸೂತ್ರ ತಿಳಿಸುತ್ತದೆ.)

ಸುಂದರಿಯಾದ ಯುವತಿಯನ್ನು ಕಂಡು, ಪುರುಷನು ಮೋಹ ತಾಳುವನು. ಮನಸ್ಸು ಕಾತರಗೊಂಡು ತಳಮಳಿಸುವನು. ಮೋಹದಿಂದ ಬುದ್ಧಿ ಭ್ರಮೆ ಉಂಟಾಗುತ್ತದೆ. ಅವನು ಹುಚ್ಚನಂತಾಗುತ್ತಾನೆ.

ಇನ್ನು ನಾರಿ ಪ್ರಸನ್ನವದನಳಾಗಿ ಬಾಯಿ ತೆರೆದು ನಕ್ಕು ಬಿಟ್ಟಳೆಂದರೆ ತೀರಿತು. ಪುರುಷ ಭೂತ ಬಡಿದವನಂತೆ ತನ್ನ ನಿಯಂತ್ರಣ ಕಳೆದುಕೊಂಡು ಬಿಡುತ್ತಾನೆ. ಹಲ್ಲು ಕಿರಿದು ಹಾಸ್ಯ ಸೂಸುವ ಹೆಣ್ಣು ಅವನ ಪಾಲಿನ ಹಿರಿಯ ಭೂತವಾಗಿ ಪರಿಣಮಿಸುತ್ತಾಳೆ.

ಸ್ತ್ರೀಲುಗಲ್ಗುಚೋಟ ಜಿರ್ಲಾಟಮುಲುಗಲ್ಗು, ಸ್ತ್ರೀಲು ಲೇನಿ ಚೋಟು ಚಿನ್ನಬೋವು,
ಸ್ತ್ರೀಲ ಚೇತ ನರಲು ಚಿಕ್ಕು ಚುನ್ನಾರಯಾ, ವಿಶ್ವದಾಭಿರಾಮು ವಿನುರ ವೇಮು-

ಸ್ತ್ರೀಯು ಬಂದುಗೂಡೆ, ಕೇಳಿಯಾಟವಾಡು
ಸ್ತ್ರೀಯು ಇರದ ಬೀಡು ಹಾಳು ಗೂಡು.
ಸ್ತ್ರೀಯ ವಶದಿ ಗಂಡು ಗೋಳು ಗರೆವ ನೋಡು.
ವಿಶ್ವದಾಭಿರಾಮು ಕೇಳು ವೇಮು.

ಸ್ತ್ರೀ ಒಲಿದು ಬಂದವಳಾದರೆ ಅವಳೊಂದಿಗೆ ಚಕ್ಕಂದದಿಂದ ರಸಕ್ರೀಡೆಯಾಡಿ ಆನಂದಿಸಬಹುದು.

ಸ್ತ್ರೀ ಇಲ್ಲದ ಜಾಗ ಹಾಳು ಸುರಿಯುತ್ತದೆ: (ಪುರುಷ ಮದದಿಂದ, ದಾಷ್ಟ್ರ್ಯದಿಂದ ಸ್ತ್ರೀಯರನ್ನು ಹೀನರಾಗಿ ಕಂಡ ಸ್ಮೃತಿಕಾರ ಮನು ಸಹ "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಅಂದರೆ ನಾರಿಯರು ಪೂಜಿತರಾಡೆಡೆಗಳಲ್ಲೆಲ್ಲ ದೇವತೆಗಳು ಅನುಗ್ರಹಿಸುತ್ತಾರೆ, ಎಂದಿದ್ದಾನೆ.)

ಆದರೆ ಸ್ತ್ರೀಯ ಬಗ್ಗೆ ಸಮ್ಮೋಹ ತಾಳಿದರೆ, ಪುರುಷನು ಭ್ರಮಿಷ್ಮನಾಗುತ್ತಾನೆ. ಭ್ರಮಿತನಾದ ಪುರುಷ ಸ್ತ್ರೀಯ ವಶದಲ್ಲಿ ಸಿಲುಕಿ, ತನ್ನ ವಿವೇಕ ಕಳೆದುಕೊಂಡು, ಗೋಳಿಗೀಡಾಗುತ್ತಾನೆ.

೪೦೪

ಕರುಗ ಗರುಗಬುಟ್ಟು ಗನಕಂಬುಕುವನ್ನೆ, ಪೆನಗ ಬೆನಗಬುಟ್ಟು ಪ್ರೇಮಸತಿಕಿ,
ಮುದಿಯ ಮುದಿಗಬುಟು ಮೋಹಂಬು ಲೋಭಂಬು ವಿಶ್ವದಾಭಿರಾಮು ವಿನುರ ವೇಮು.

ಒಪ್ಪ ಕರಗಿ ಬಂತು ಕನಕಕಿರುವ ಬಣ್ಣ.
ಅಪ್ಪಿ ಅಪ್ಪಿ ಬಂತು ಸತಿಯ ಪ್ರೀತಿ,
ಮುಪ್ಪು ಅಡರಿ ಹುಟ್ಟುತಿಹುದು ಮೋಹ ಲೋಭ.
ವಿಶ್ವದಾಭಿರಾಮು ಕೇಳು ವೇಮು.

ಬಂಗಾರದ ಬಣ್ಣವು, ಬಂಗಾರವನ್ನು ಕರಗಿಸಿ ಒಪ್ಪ ಹಾಕುತ್ತಿದ್ದಂತೆ ಅಂದವಾಗಿ ತೋರುತ್ತದೆ. ಅದೇ ರೀತಿ, ಹೆಂಡತಿಯನ್ನು ಅಪ್ಪಿದಂತೆಲ್ಲ, ಅವಳ ಮೇಲಿನ ಪ್ರೀತಿ ಹೆಚ್ಚಾಗುತ್ತ ಹೋಗುವುದು.

ಇದೇ ಪರಿಯಿಂದಲೋ ಏನೋ, ಆಗೀಗ ಮೋಹ-ಲೋಭಾದಿಗಳಿಗೆ ಅಲ್ಪಸ್ವಲ್ಪ ಮಾಸು ಹೋದ ಮನುಷ್ಯ ದಿನಗಳೆದು ಮುಪ್ಪಾದಾಗ, ಅವನಲ್ಲಿ ಮೋಹ-ಲೋಭಾದಿಗಳು ಮನೆ ಮಾಡಿಕೊಳ್ಳುವುವು.

೪೦೭

ಎಟ್ಟಸ್ತ್ರೀಲಗನಿನ ನಿಂತಿಂತಯನರಾದು, ಕಾಲವೆಹ್ನಿಲಕ್ಕ ಕರಗಿನಟ್ಲು,
ಇಟ್ಟಗಾಢವೋಹ ನೆಂತೈನ ಜೀಯುರಾ, ವಿಶ್ವದಾಭಿರಾಮ ವಿನುರ ವೇಮ.

ಎಂಥ ನಾರಿ ನೋಡೆ ಅಂತೆ ಇಂತೆ ಇಲ್ಲ.
ಕಾಲದಗ್ನಿಗರಗು ಕರಗಿದಂತೆ.
ಇಂಥ ಗಾಢ ಮೋಹ ಎಂಥ ಕೆಡುಕಿನ ಪಂಥ ?
ವಿಶ್ವದಾಭಿರಾಮ ಕೇಳು ವೇಮ.

ನಾರಿಯ ನೋಟದ ಪರಿಣಾಮ ಅಷ್ಟಿಷ್ಟು ಅಲ್ಲ. ಕಾಲಾಗ್ನಿಯ ಶಾಖಕ್ಕೆ ಅರಗು ಕರಗುವಂತೆ, ನಾರಿ ನೋಟದಿಂದ ಪುರುಷನ ಮನಸ್ಸು ಕರಗಿ ಮೋಹ ಹುಟ್ಟುತ್ತದೆ.

ಸ್ತ್ರೀ ಪುರುಷರು ತಾಳುವ ಪರಸ್ಪರ ಮೋಹವು ತುಂಬಾ ಗಾಢವಾದುದು. ಆದರೇನು ? ತಂತಾನೇ ಹುಟ್ಟುತ್ತಿರುವ ಇಂಥ ಗಾಢ ಮೋಹವು ಎಷ್ಟೊಂದು ಭಾವೀ ಅನರ್ಥಗಳಿಗೆ ಕಾರಣವಾಗಿದೆಯೆಂಬುದನ್ನು ನೆನೆದರೆ ಸೋಜಿಗವಾಗದಿರದು.

೪೦೮

ಕಾಂತಕುಂಕಯ್ಮೆನ ಕಾನಿಕುಲಂಬ್ಮೆನ, ಬಾಯಲೇಕ ವಿಟುಡು ಬ್ರಮಿಸಿಯುಂಡು,
ಮರಗಿ ಗ್ರುಡ್ಡಿಕುಕ್ಕು ಮಾಂಸಂಬು ದಿನ್ನಟ್ಲು ವಿಶ್ವದಾಭಿರಾಮ ವಿನುರ ವೇಮ.

ಕಾಂತೆ ಕುಲಟೆಯಿರಲಿ; ಕೀಳು ಕುಲಜೆಯಿರಲಿ;
ಕೇಡಿ ವಿಟನು ಕೂಡುತಿಹ ಭ್ರಮಿಸಿ,
ಕುರುಡ ನಾಯಿ ಮಾಂಸಕೆಳಸಿ ಕಚ್ಚುವಂತೆ,
ವಿಶ್ವದಾಭಿರಾಮ ಕೇಳು ವೇಮ

ಹೆಣ್ಣು ಶೀಲಗೆಟ್ಟವಳಿರಲಿ, ಕೀಳು ಕುಲದವಳಿರಲಿ ಕೇಡು ಬಗೆಯುವ ವಿಟ ಪುರುಷನು, ಭೋಗದಾಸೆಗಾಗಿ ಭ್ರಮಿಸಿ ಅವಳ ಸಂಗ ಪಡೆಯುವನು. ಇದರಿಂದ ತನ್ನ ಶೀಲ-ಧರ್ಮಗಳು ನಾಶವಾಗುವುವೆಂಬುದರ ಅರಿವು ಅವನಿಗಾಗದು,

ಹೇಗೆಂದರೆ, ಕಣ್ಣು ಕಾಣದ ನಾಯಿ ಮಾಂಸವಾದರೆ ತೀರಿತು; ಅದರಲ್ಲಿ ಹುಳು ಬಿದ್ದಿರಲಿ, ಹೊಲಸು ಸೇರಿರಲಿ ಕಾತರಬಟ್ಟು ತಿನ್ನಬಯಸುವುದು. ಏಕೆಂದರೆ, ಅದರ ಕಣ್ಣು ಇಲ್ಲದಿರುವುದರಿಂದ ಅದು ಬೇಟೆಯಾಡಿ ಮಾಂಸ ದೊರಕಿಸದು. ಸಿಕ್ಕದ್ದು ಹೇಗಿದ್ದರೂ ಹಪಾಪಿಯಾಗಿ ತಿನ್ನುತ್ತದೆ.

(ಅವಧೂತ ಗೀತೆಯಲ್ಲಿ ಅವತಾರ ಪುರುಷ ದತ್ತಾತ್ರೇಯ ಹೀಗೆ ಹೇಳಿದ್ದಾರೆ :

" ಕೌಟಿಲ್ಯ ದಂಭಸಂಯುಕ್ತಾಃ ಸತ್ಯಶೌಚವಿವರ್ಜಿತಾಃ |
ಕೇನಾಸಿ ನಿರ್ಮಿತಾ ನಾರೀ ಬಂಧನಂ ಸರ್ವದೇಹಿನಾಮ್ ||

ಅನುವಾದ: ಸ್ತ್ರೀ ಕುಟಿಲತೆ-ದಂಭಗಳಿಂದ ಕೂಡಿರುವಳು; ಸತ್ಯಪರತೆಯನ್ನೂ, ಶೌಚವನ್ನೂ ಬಿಟ್ಟವಳು. ಇಂಥ ಸ್ತ್ರೀಯನ್ನು ಎಲ್ಲ ದೇಹಿಗಳ ಬಂಧನಕ್ಕಾಗಿ ಯಾರೋ ಸೃಷ್ಟಿಸಿರುವರು. ")

ಸ್ತ್ರೀಯ ಬಗ್ಗೆ ತಿರಸ್ಕಾರ ಬರುವಂತೆ ದತ್ತಾತ್ರೇಯ ಹೇಳಿದ್ದರೆ, ಸ್ತ್ರೀಯ ಬಗ್ಗೆ ಆಕರ್ಷಣೆ ತಳೆದು ಪುರುಷ ತಂತಾನೇ ಕೆಡುವುದನ್ನು ವೇಮನಯೋಗಿ ತಿಳಿಸಿ ಎಚ್ಚರಿಸಿದ್ದಾರೆ.)

೪೦೯

ವಾರಕಾಂತಲೆಲ್ಲ ವಲಚಿಯೇತೆಂತುರಾ ? ಪೊಂದುಜೇಸಿ ಧನಮು ಪುಚ್ಚುಕೊರಕೆ,
ಮಾರಿಸೊಚ್ಚಿ ಯಿಲ್ಲು ಮರಿಯೂರಕೇಗುನಾ, ವಿಶ್ವದಾಭಿರಾಮ ವಿನುರ ವೇಮ.

ಕುಲಟೆ ಲಲನೆ ತಾನು ಒಲಿವ ಮೂಲವೇನು ?
ಕಲೆತು ಕನಕ ಕೊಚ್ಚಿ ಕೊಳ್ಳಲಷ್ಟೆ;
ಛಲದ ಮಾರಿ ಬಂದು ಬರಿದೆ ಹೋಹಳೆಂತು ?
ವಿಶ್ವದಾಭಿರಾಮ ಕೇಳು ವೇಮ.

('ಇಂದಿನ ಲಾಭ ಮತ್ತು ಮುಂದಿನ ಲಾಭಗಳ ದೃಷ್ಟಿಯಿಂದ ಸೂಳೆ ಧನಿಕನೂ, ಉದಾರಿಯೂ ಆದವನನ್ನು ವರಿಸಬೇಕು. ಅವಳಿಗೆ ಇಂಥವನ ಸಿಡುಕಿನಿಂದ ಅಪಾಯವಾದರೂ ಚಿಂತೆಯಿಲ್ಲ. ತುರ್ತು ನಷ್ಟವಾದರೂ ಚಿಂತೆಯಿಲ್ಲ. ಅವಳು ಉತ್ಸಾಹಿಯಾದ ಉದಾರಿಯನ್ನೇ ಮೆಚ್ಚಬೇಕು. ಏಕೆಂದರೆ ಅವನು ಸೂಳೆಯಿಂದ ಪಡೆಯುವ ಸೇವೆಯಿಂದ ಸಂತುಷ್ಟನಾಗಿ ಅವಳಿಗೆ ಬೇಕಾದಷ್ಟು ಪ್ರತಿಧನವನ್ನು ಎಂದಾದರೂ ನೀಡಬಹುದಾಗಿದೆ' ಎಂದು ವ್ಯಾತ್ಸ್ಯಾಯನ ಕಾಮಸೂತ್ರ ವೇಶ್ಯೆಯರಿಗೆ ಉಪದೇಶಿಸುತ್ತದೆ.)

ವೇಶ್ಯೆ ವಿಟ ಪುರುಷನಿಗೆ ತನ್ನನ್ನು ಒಪ್ಪಿಸುವುದರ ಹಿಂದೆ ಅಡಗಿದ ಉದ್ದೇಶವಾದರೂ ಏನು ? ಅವನೊಡನೆ ಬೆರೆತು, ಅವನ ಕಾಮದಾಹ ತಣಿಸಿ ಹಣ ದೋಚಲಿಕ್ಕೆ ತಾನೆ ? ತನ್ನ ಉದ್ದೇಶ ಈಡೇರಿಸಿಕೊಳ್ಳಲು ನಿಂತ ಹೆಣ್ಣು ಹಣ ದೋಚಿಕೊಳ್ಳದೆ ಹೋಗಲಾರಳು.

ಸೂಳೆಯ ಪ್ರೀತಿಯ ಹಿಂದೆ ಧನಗಳಿಕೆಗಿಂತ ಹೆಚ್ಚಿನದೇನನ್ನಾದರೂ ಗುರುತಿಸಬಯಸುವುದು ಹುಚ್ಚುತನ.

೪೧೦

ಕುಲಮುವಲನಗೊಂತ ಬಲಮುವಲನಗೊಂತ, ಕಲಿವಿವಲನಗೊಂತ ಗರ್ವವುನನು,
ರಂಕುಚದುವುಚದಿವಿ ರಂಕುನ ಬಡುದುರು, ವಿಶ್ವದಾಭಿರಾಮ ವಿನುರ ವೇಮ.

ಕುಲದಿಂದ ಸ್ವಲ್ಪ, ಬಲದಿಂದ ಸ್ವಲ್ಪ
ನೆಲದಿಂದ ಸ್ವಲ್ಪ ಗರ್ವವುಂಟು.
ಕುಲಟೆಯೋದು ಓದಿ ಕುಲಟೆಯನ್ನೆ ಬಿಡರು.
ವಿಶ್ವದಾಭಿರಾಮ ಕೇಳು ವೇಮ

(ಮನು ಸ್ಮೃತಿಯಲ್ಲಿ ಬರುವ ಕೆಳಗಿನ ಸೂತ್ರಗಳನ್ನು ನೋಡಿರಿ :—

ಪ್ರಥಮತಃ ದ್ವಿಜನು ತನ್ನ ವರ್ಣದ ಕನ್ನೆಯನ್ನು ವರಿಸಬೇಕು. ಅವನೇನೋ ಕಾಮದಾಸೆಗೆ ಬಲಿಯಾದರೆ, ಅನುಕ್ರಮವಾಗಿ ಕೆಳವರ್ಣದವರನ್ನೂ ವರಿಸಲಡ್ಡಿಯಿಲ್ಲ.

ಹೆಂಡತಿ, ಮಗ ಮತ್ತು ಗುಲಾಮ ಈ ಮೂವರಿಗೂ ಆಸ್ತಿ ಇರತಕ್ಕದ್ದಲ್ಲವೆಂದು ಸಾರಲ್ಪಟ್ಟಿದೆ. ಇವರು ಸಂಪಾದಿಸಿದ ಆಸ್ತಿಯೆಲ್ಲ ಇವರನ್ನು ಹೊಂದಿದವರಿಗೆ ಮಾತ್ರ ಸಲ್ಲುತ್ತದೆ.

ಹೆಂಡತಿ ಮದ್ಯಾಸಕ್ತಳಿರಲಿ ಶೀಲಗೆಟ್ಟವಳಿರಲಿ, ಪರಪುರುಷರಲ್ಲಿ ಭೋಗಾಸಕ್ತಿ ಉಳ್ಳವಳಿರಲಿ, ಗಡಸುಗಾರ್ತಿಯಿರಲಿ, ರೋಗಿಯಿರಲಿ, ಕಪಟಿಯಿರಲಿ, ದುಂದುಗಾರ್ತಿಯಿರಲಿ, ಅಂಥವಳಿಗೆ ಸವತಿ ತರಬಹುದು. ಒಂದು ವೇಳೆ ಅಂಥವಳು ಸಿಟ್ಟಾಗಿ ಮನೆ ಬಿಟ್ಟರೆ, ಅವಳನ್ನು ಮನೆಯೆದುರು ರಕ್ಷಣೆಯಲ್ಲಿಡಬಹುದು. ಆದರೆ ಅವಳನ್ನು ತೊರೆಯ ತಕ್ಕದ್ದಲ್ಲ. ಏಕೆಂದರೆ ಮದುವೆಯೆಂದರೆ ಸಂಸ್ಕಾರ '')

ಮೇಲು ಕುಲದವರೆ ಎಂದು ಬ್ರಾಹ್ಮಣಾದಿಗಳಿಗೆ ಗರ್ವವುಂಟು. ಇವರು ಧನ ಬಲ, ಆಸ್ತಿಪಾಸ್ತಿ ಹೊಂದುವ ಅಧಿಕಾರ ಪಡೆದುದರಿಂದಲೂ ಇವರಿಗೆ ಗರ್ವವುಂಟು. ಇವರ ಓದು ಬುದ್ಧಿಗೆಡಿಸುವಂಥ ಕುಲಟಿಯೋದು. ಅದನ್ನೋದಿ, ಕುಲಟಿಯಾದ ಸ್ತ್ರೀಸಂಗ ತೊರೆಯದವರಾಗುತ್ತಾರೆ.

೪೧೧

ಇಚ್ಚಿಪುಚ್ಚುಕೊನ್ನ ಹಿತವೈನಮನುವುಲು, ತಗ್ಗುಲೇಕ ಯಲ್ಲು ದಾವುರವಲೆ
ಕಾಚಿಪೂಚಿಪಂಡಿ ಕಡುರವ್ಯಮ್ಮಯುಂಡು, ವಿಶ್ವದಾಭಿರಾಮ ವಿನುರ ವೇಮ.

ಕೊಡುವ ಕೊಳುವ ಲಗ್ನ ಹಿತಸಂಬಂಧಗಳು;
ಕಡಿಮೆಗೊಳದೆ, ಕಮಲದಂತೆ ಹಬ್ಬಿ,
ಕುಡಿಯು ಮೊಗ್ಗೆಯಾಗಿ ಕಡು ರಮ್ಯಫಲಕರ.
ವಿಶ್ವದಾಭಿರಾಮ ಕೇಳು ವೇಮ

ಕನ್ಯಾಸ್ವೀಕಾರ, ಕನ್ಯಾದಾನ, ಲಗ್ನ ಇತ್ಯಾದಿ ಹಿತ ಸಂಬಂಧಗಳನ್ನು ಸ್ಥಾಪಿಸುವ ಸಮಾರಂಭಗಳು ತಗ್ಗದೆ, ತಾವರೆಯು ಹಬ್ಬುವಂತೆ ಹೆಚ್ಚಾಗುತ್ತವೆ. ಮುಂದೆ ಕಮಲ ಲತೆಯು ಕುಡಿಬಿಟ್ಟು, ಮೊಗ್ಗೆಯಾಗಿ, ಕಮಲಪುಷ್ಪ ಅರಳುತ್ತದೆ. ಅದೇ ರೀತಿ ಲಗ್ನ ಹಿತ ಸಂಬಂಧಗಳು ಬಳ್ಳಿಯಂತೆ ಹಬ್ಬಿ ಪ್ರೇಮ-ವಾತ್ಸಲ್ಯಗಳ ಕುಡಿ ಬಿಟ್ಟು, ಪಿಂಡೋತ್ಪತ್ತಿಯ ಮೊಗ್ಗೆ ಮೂಡಿ, ಬಲಿತು, ಅರಳಿದ ಕಮಲದಂತೆ ಪುತ್ರರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇದೆಲ್ಲ ನೆನೆದರೆ, ಹಿತಸಂಬಂಧಗಳು ಅತ್ಯಂತ ಹೆಚ್ಚಿನ ಫಲನೀಡುವಂಥವುಗಳಾಗಿವೆಯೆಂಬುದು ಖಚಿತವಾಗುವುದು.

೪೧೨

ಕೂಡುಗುಡಿಚಿ ಲೆಸ್ಸಕೂರ್ಚುನ್ನವಾಡ್ಯೆನ, ನಾಡುದಾನಿಗನ್ನ ನಟ್ಟಿತಗಲು,
ಅನ್ನರಸಮು ಯೊಡಲಿ ಕತಿಮುದಂಬಗು ಜುಮೀ, ವಿಶ್ವದಾಭಿರಾಮ ವಿನುರ ವೇಮ.

ಊಟವುಂಡು ಮತ್ತೆ ವಿರಾಮದಿಂದಿರಲು,
ಮಾಟಗಾತಿ ಕಂಡು ಮನಸು ನೆಡದೆ ?
ಊಟದನ್ನ ರಸವು ಅಂಗಕತಿಮುದಕರ !
ವಿಶ್ವದಾಭಿರಾಮ ಕೇಳು ವೇಮ.

ನಾವು ಉಂಡ ಅನ್ನದಿಂದ ದೇಹ ಸತ್ತ್ವ ಉಂಟಾಗುತ್ತದೆ. ಅನ್ನದಿಂದ ರಕ್ತ; ರಕ್ತದಿಂದ ವೀರ್ಯ ನಿರ್ಮಾಣವಾಗುತ್ತವೆ. ಉಂಡುಂಡು ವಿರಾಮದಿಂದ ಇದ್ದರೆ, ಮನಸ್ಸು ಇಂದ್ರಿಯ ಸುಖಭೋಗಕ್ಕೆಳಸುವುದು. ಆಗ ಮೋಹಕವಾದ ಲಲನೆ ದೃಷ್ಟಿಗೆ ಬಿದ್ದರೆ, ಮನಸ್ಸು ಅವಳಲ್ಲಿ ನೆಟ್ಟು ಹೋಗುವುದು. ಸದಾ ಅವಳದೇ ಚಿಂತೆಯಾಗುತ್ತದೆ.

ಉಂಡ ಅನ್ನ ರಸದಿಂದ ದೇಹದಲ್ಲಿ ವಿವಿಧ ರಾಗ ರಸಗಳು ಹುಟ್ಟುತ್ತವೆ. ಕಾಮ ಪ್ರೇರಣೆಯೂ ಆಗುತ್ತದೆ.

(ಆಸೆ ನಿಗ್ರಹದಿಂದ ಆನಂದ ಪಡೆಯಬಹುದು. ಆದರೆ ವ್ರತ- ವಿಧಿ ನೇಮಗಳಿಂದ ಕಷ್ಟ ಪರಿಹಾರವಾಗುವುದೆಂದೂ, ಶುದ್ಧಿಗೆ ದಾರಿಯಾಗುವುದೆಂದೂ ನಂಬಿ, ವ್ರತನೇಮ ನೆರವೇರಿಸಿ, ಸಮೀಚೀನ ಭೋಜನ ಗೆಯ್ದು, ಅನಂತರ ನೃತ್ಯಾದಿಗಳನ್ನು ದೇವದಾಸಿಯರಿಂದ ನೆರವೇರಿಸಿದರೆ ಮನಸ್ಸು ಶುದ್ಧವಾಗದೆ ಕೆಡುವುದು. ಪೂಜಾ ನಂತರ ದೇವರೆ ಸಂತೃಪ್ತಿಗೆಂದು ನೃತ್ಯ-ಗಾನ ಗೆಯ್ಯುವ ಒಂದು ವರ್ಗವನ್ನೇ ಅಂದಿನ ಸಮಾಜ ಹೊಂದಿತ್ತು.)

೪೧೩

ತಲ್ಲಿಕೆದುರುಕೊನುಟ ತಂಡ್ರಿಕೆದುರುಕೊಂಟ, ಅನ್ನಕೆದುರು ಕೊನುಟ ಲರಯ ಮೂಡು
ಪಾತಕಮುಲ ನೆರಿಗಿ ವರ್ತಿಂಪಗಾವಲೆ, ವಿಶ್ವದಾಭಿರಾಮ ವಿನುರ ವೇಮ.

ತಾಯಿಗೆದುರಿಪ್ಪುದು, ತಂದೆಗೆದುರಿಪ್ಪುದು,
ಅನ್ನಕೆದುರಿಪ್ಪುದು ತಿಳಿಯೆ ಮೂರು,
ಪಾತಕಗಳನರಿತು ವರ್ತಿಸಬೇಕಯ್ಯ,
ವಿಶ್ವದಾಭಿರಾಮ ಕೇಳು ವೇಮ.

ಬಿಂದು ರೂಪದಿಂದ ಮೂರ್ತರೂಪ ತಾಳುವವರೆಗೆ ಹೊತ್ತು, ಹಡೆದು ದೊಡ್ಡವರಾಗುವವರೆಗೆ ಪೋಷಿಸಿದವಳು ತಾಯಿ. ಬೀಜರೂಪವಿತ್ತು ಪಾಲನೆ ಪೋಷಣೆಯ ಹೊಣೆ ಹೊತ್ತವನು ತಂದೆ. ಅನ್ನದಿಂದ ಜೀವವಸ್ತು ದೊರೆಯುತ್ತದೆ. ಕಾರಣ ತಾಯಿಗೆ ಎದುರಾಗಿ ವರ್ತಿಸುವುದು, ತಂದೆಯನ್ನು ಮೀರಿ ವರ್ತಿಸುವುದು ಮತ್ತು ಅನ್ನ ದೊರೆಯುವಾಗ, ಇಲ್ಲವೆ ಬೇರೆಯವರಿಗೆ ದೊರೆಯುವಂತೆ ಮಾಡುವ ಅವಕಾಶವಿರುವಾಗ, ಸಮಯಾನುಸಾರ ವರ್ತಿಸದೆ ಇರುವುದು, ನಿಜವಾಗಿ ಮಹಾಪಾತಕ ಗೆಯ್ದಂತೆ. ಕಾರಣ ತಾಯಿತಂದೆಗಳಿಗೆ ವಿಧೇಯನಾಗಿ ವರ್ತಿಸಬೇಕು. ಮತ್ತು ಅನ್ನವು ವ್ಯಯವಾಗದಂತೆ ನೋಡಿಕೊಳ್ಳಬೇಕು.

೪೧೪

ಇಂತಿ ತನದು ಸೇರು ನೆಲ್ಲಕಾಲಂಬುನು, ಬ್ರಜಲುತಲಚುನಟ್ಲು ಪ್ರತಿಭಗಾಂಚು,
ಇಂತಿಕಿ ಬತಿಭಕ್ತಿಯೆಂತನವಚ್ಚುನು ? ವಿಶ್ವದಾಭಿರಾಮ ವಿನುರ ವೇಮ.

ಕಾಂತೆ ತನ್ನ ಕೀರ್ತಿ ಸರ್ವಕಾಲಮಾನ,
ಸಂತತಿ ಸ್ಮರಿಸುವಂತೆ ಪ್ರತಿಭೆವಂತೆ.
ಕಾಂತೆಗೆ ಪತಿ ಭಕ್ತಿ ಎಂತೆಷ್ಟು ಹಿತವಹ !
ವಿಶ್ವದಾಭಿರಾಮ ಕೇಳು ವೇಮ

('ಎಲ್ಲಿ ಸ್ತ್ರೀಯರು ಪೂಜೆಗೊಳ್ಳುವರೋ ಅಲ್ಲಿ ದೇವತೆಗಳೂ ಸಂಪ್ರೀತಗೊಳ್ಳುವರು' ಎಂದು ಸ್ತ್ರೀಯರ ಹಕ್ಕುಗಳನ್ನು ಮೊಟಕುಗೊಳಿಸಿದ ಸ್ಮೃತಿಕಾರ ಮನು ಸಹ ಹೇಳಿದ್ದಾನೆ. ಒಳ್ಳೆಯ ಹೆಂಡತಿ ಇರುವ ಮನೆಯಲ್ಲಿ ದೇವರು ಇರುತ್ತಾನೆ ಎಂಬ ಅನುಭವವಾಣಿ ಕೇಳಿದ್ದೀವೆ. ತಾನು ಹಡೆದವರನ್ನು, ತನಗಿಂತ ಹೆಚ್ಚಾಗಿ ಪ್ರೀತಿಸುವ ತಾಯಿ, ನಿಜವಾಗಿ ದೈವದ ಮೂರ್ತರೂಪ. ಎಲ್ಲರೊಂದೆಂಬ ಭಾವನೆಯನ್ನು ನೆನಪಿಗೆ, ಊಹೆಗೆ ತರುವುದಕ್ಕಾಗಿ ಸೃಜಿಸಿದ ದೇವತೆಗಳಿಗಿಂತ, ಪುರಾಣ ಕತೆಗಳ ಪಾತ್ರಗಳಿಗಿಂತ ಸದ್ಗೃಹಿಣಿ ಪರಮ ದೇವತೆ. ಪತಿ ಭಕ್ತಿ ಕಾಂತೆಗೊಪ್ಪುವ ಆಭರಣ. ಸದ್ಗೃಹಿಣಿ ನಿರಾಭರಣ ಸುಂದರಿ.)

ಒಳ್ಳೆಯ ಗೃಹಿಣಿಯಾದವಳು ತನ್ನ ವಂಶದ ಜನರೆಲ್ಲ, ಎಲ್ಲ ಕಾಲದಲ್ಲಿ, ತನ್ನ ಸುವಿಚಾರ-ಸದ್ವರ್ತನೆಗಳ ಮಹತಿಯನ್ನು ಸ್ಮರಿಸುವಂತೆ ಮಾಡುವ ಪ್ರತಿಭೆಯುಳ್ಳವಳಾಗಿದ್ದಾಳೆ.

ಒಳ್ಳೆಯ ಸತಿಗೆ ಪತಿ-ಭಕ್ತಿಯು ತುಂಬಾ ಸಂತೋಷವುಂಟು ಮಾಡುತ್ತದೆ. ಪತಿಯ ಹರ್ಷವೇ ಅವಳ ಹರ್ಷವಾಗುತ್ತದೆ. ಪತಿಯ ಅರ್ಧಾಂಗಿಯಾಗುತ್ತಾಳೆ.

೪೧೫

ಇಂಗಲಂಬು ತೋಡ ವಿಲನಲ್ಲುತೋಡನು, ಪರುನಿಯಾಲಿತೋಡ ಬತಿತು ತೋಡ,
ಪರಸಮಾಡುಟಿಲ್ಲ ಜಾವುಕು ಮಾಲಂಬು, ವಿಶ್ವದಾಭಿರಾಮ ವಿನುರ ವೇಮ

ಉರಿವ ಅಗ್ನಿ ಜೊತೆಗೆ ಕರಿಯ ನರನ ಜೊತೆಗೆ
ಪರನಾರಿಯ ಜೊತೆಗೆ ಪತಿತ ಜೊತೆಗೆ
ಸರಸದಾಟವೆಲ್ಲ ಮರಣ ಕಾರಣವೋ
ವಿಶ್ವದಾಭಿರಾಮ ಕೇಳು ವೇಮ.

ಉರಿಯುವ ಬೆಂಕಿಯೊಂದಿಗೆ ಚಿನ್ನಾಟ ತರವಲ್ಲ. ಯಾವಾಗ ತಗಲಿಕೊಳ್ಳುವುದೋ ತಿಳಿಯದು. ಅಲ್ಪ, ಮನುಷ್ಯನೊಡನೆ ಸರಸ-ಸಲ್ಲಾಪವಾಡಿದರೆ, ಅವನು ಅದನ್ನು ಅಪಾರ್ಥ ಮಾಡಿಕೊಂಡು ಅಂಥ ಸಂದರ್ಭಗಳನ್ನು ದುರುಪಯೋಗಪಡಿಸಿಕೊಳ್ಳುವನು.

ಪರರ ಸತಿಯೊಡನಾಗಲಿ ಇಲ್ಲವೆ ಪತಿತ ಸ್ತ್ರೀಯೊಡನಾಗಲಿ ಸರಸ-ಸಲ್ಲಾಪಕ್ಕಿಳಿದರೆ, ಅದರಿಂದ ವಿಪತ್ತು ಉಂಟು. ಏಕೆಂದರೆ, ಪರಸತಿಯ ಗಂಡ ಇಂಥ ಸರಸ-

ಸಲ್ಲಾಪದ ವಿಷಯ ತಿಳಿದರೆ ವ್ಯಗ್ರನಾಗಿ, ಕೋಪ ತಾಳಿ ಸೇಡು ತೀರಿಸಿಕೊಳ್ಳಲು ಮುಂದಾಗಿ ಅನಾಹುತಕ್ಕೆಳೆಯುವನು.

[ಸರ್ವಜ್ಞ ಮೂರ್ತಿಯು ಪರಸತಿಗಮನವನ್ನು ವಿರೋಧಿಸಿ ಹೇಳಿದ ನುಡಿ ಇಂತಿದೆ :

" ಮೆಚ್ಚದಿರು ಪರಸತಿಯ । ಕಚ್ಚೆಯೊಳು ಬೆರೆಯದಿರು ।
ನಿಚ್ಚನೆರೆಯೊಳೆನೆ ಕಾದದಿರು, ಒಬ್ಬರ ।
ಇಚ್ಛೆಯಲಿರೆದಿರು ಸರ್ವಜ್ಞ ॥]

೪೧೬

ಪರಯುವತಿರತಂಬು ಬಾಟಂಚಿಕೋರಿನ, ಗೋಟಪೂಜಲೆಲ್ಲ ಗೊಲ್ಲಬೋವು,
ನೆಗಕುಬೊಂತ ನೆನ್ನ ಚೆಡದೆ ? ತಾಪಮುಚೇತ, ವಿಶ್ವದಾಭಿರಾಮ ವಿನುರ ವೇಮ.

ಪರನಾರಿಯ ಸಂಗ ಕೋರಿ ಹಾರೈಸಲು
ಬರಿದೆ, ಕೋಟಿ ಪೂಜೆ ಸರಿಯುತಿಹುದು.
ಉರಿಯ ತಾಪದಿಂದ ಬೆಣ್ಣೆ ರೂವು ಗೆಡದೆ ?
ವಿಶ್ವದಾಭಿರಾಮ ಕೇಳು ವೇಮ

ಪರನಾರಿಯ ಸಂಗವನ್ನು ಬಯಸುವವನು, ಗೃಹಸ್ಥ ಧರ್ಮವನ್ನು ನಡೆಸಿದಂತಾಗುವುದಿಲ್ಲ. ಮೇಲಾಗಿ, ಅದು ದೋಷಪೂರಿತ. ತನ್ನ ಇಂದ್ರಿಯ ನಿಗ್ರಹಿಸಿ ಧರ್ಮಪಾಲನೆಗೆಯ್ಯಲಾಗದ ಇಂಥವನು ಸಲ್ಲಿಸುವ ಅಸಂಖ್ಯ ಪೂಜೆ-ವ್ರತಗಳೆಲ್ಲ ವ್ಯರ್ಥವಾಗುವುವು. ಅವನ ಶೀಲ ಕೆಟ್ಟು, ಮರ್ಯಾದೆ ಕುಂದುತ್ತದೆ.

ಬೆಣ್ಣೆಗೆ ನಯವಾದ ರೂಪು ಇದೆ. ಅದಕ್ಕೆ ಬೆಂಕಿಯ ಝಳ ತಾಕಿದರೆ ರೂಪ ಕೆಡುತ್ತದೆ. ಅದೇ ರೀತಿ ಪರಸತಿಗಮನದಿಂದ ಗೃಹಸ್ಥನ ಶೀಲ-ಮರ್ಯಾದೆಗಳೂ ಕೆಡುತ್ತವೆ.

(ಅವತಾರ ಪುರುಷನೆಂದು ಪೂಜೆಗೊಳ್ಳುವ ದತ್ತಾತ್ರೇಯ-ವಿರಚಿತ ಅವಧೂತ ಗೀತೆಯಲ್ಲಿ ಅರ್ಥ ಹೋಲಿಕೆಯಳ್ಳ ಪದ್ಯ ಕೆಳಗಿನಂತಿದೆ,

" ಅಗ್ನಿ ಕುಂಡ ಸಮಾ ನಾರೀ ಘೃತಕುಂಭ ಸಮೋ ನರಃ ।
ಸಂಸರ್ಗೇಣ ವಿಲೀಯೇತ ತಸ್ಮಾತ್ ತಾಂ ಪರಿವರ್ಜಯೇತ್ ॥

ಅನುವಾದ : – ನಾರಿ ಅಗ್ನಿಕುಂಡದಂತೆ ನರ ಬೆಣ್ಣೆಯ ಮುದ್ದೆಯಂತೆ. ಇವಳ ಸಂಗದಿಂದ ಅವನು ನಾಶವಾಗುವನು. ಆದ ಕಾರಣ ಅವಳನ್ನು ತ್ಯಜಿಸು.

ವೇಮನಯೋಗಿ ಕೇವಲ ಪರಸ್ತ್ರೀಯರ ಬಗ್ಗೆ ಹೇಳಿದುದನ್ನು ದತ್ತಾತ್ರೇಯ ಸಕಲ ಸ್ತ್ರೀಯರ ಬಗ್ಗೆ ಹೇಳಿದ್ದಾನೆ.)

ಮುಂಚಿಶಕುನಮುಲನಿ ಯೆಂಚಿವೆಂಡಿಲಿಯಾಡು ವಾರಲೊಕರುಲೇರು ವಸುಧಲೋನ,
ಜನುಲ ಕರ್ಮಮುಲನು ಶಕುನಮುಲ್ ನಿಲ್ಪುನಾ ? ವಿಶ್ವದಾಭಿರಾಮ ವಿನುರ ವೇಮ.

ಶುಭದ ಶಕುನ ನಂಬಿ, ಶುಭಲಗ್ನವೆಂಬರು
ಒಬ್ಬರವರೊಳಿಲ್ಲ; ಅಬ್ಬ! ಜಗದಿ.
ಹಬ್ಬ ಹರುಷ ಜಗದಿ ಶಕುನದಲ್ಲಿಹವೆ ?
ವಿಶ್ವದಾಭಿರಾಮ ಕೇಳು ವೇಮ.

ಶಕುನವೆಂದರೆ ಮುಂದಾಗಬಹುದಾದ ಘಟನೆಯ ಪೂರ್ವಸೂಚನೆ ಮನುಷ್ಯನ ಜೀವನದ ಘಟನೆಗಳು ಯಾವುದೋ ಒಂದು ನಿಯತಿಗೊಳಪಟ್ಟವೆ. ಅದೇ ವಿಧಿನಿಯಮ. ಪೂರ್ವ ಇಲ್ಲವೆ ಪ್ರಸ್ತುತ ಜನ್ಮದಲ್ಲಿ, ಮನುಷ್ಯ (ಆತ್ಮ) ನ ಇಚ್ಛಾಶಕ್ತಿ ಮತ್ತು ವಿಚಾರ ಶಕ್ತಿಗಳ ಹೊಂದಿಕೆಯಾಗಿದ್ದರೂ, ಅನನುಕೂಲ ಪರಿಸ್ಥಿತಿಯ ಕಾರಣದಿಂದ ಕಾರ್ಯಗಳಾಗದೆ ಹಿಂದೆ ಬೀಳುತ್ತವೆ. ಅನನುಕೂಲ ಪರಿಸ್ಥಿತಿಯ ಅಡ್ಡಗೋಡೆ ಸರಿದಾಗ ವಿಧಿನಿಯಮದಂತೆ ಕರ್ಮ ನೆರವೇಕುತ್ತದೆ.

ನಮ್ಮ ಜೀವನದ ಘಟನೆಗಳನ್ನು ಮುಂದಾಗಿ ತಿಳಿಸುವುದೇ, ' ಶಕುನ ಹೇಳುವುದು.' ಇವುಗಳಲ್ಲಿ ಒಳ್ಳೆಯ ಶಕುನ, ಕೆಟ್ಟ ಶಕುನಗಳೆಂದು ಸಂಭಾವ್ಯ ಘಟನೆಗಳ ಒಳಿತು-ಕೆಡುಕಿನ ಊಹೆಯಿಂದ ಕಲ್ಪಿಸುತ್ತಾರೆ. ಲಗ್ನ ನಿಶ್ಚಯಕ್ಕೆ ಮೊದಲು ಒಳ್ಳೆಯ ಶಕುನ ಹುಡುಕಿ ನೋಡುತ್ತಾರೆ. ಶುಭಶಕುನ ಕೇಳಿ ಶುಭಲಗ್ನವೆನ್ನುತ್ತಾರೆ. ಆದರೆ ಶುಭಶಕುನಗಳನ್ನು ನಂಬಿ ಕೆಲಸ ಮಾಡಿದವರಾರೂ ಇಂದು ಭೂಮಿಯ ಮೇಲೆ ಉಳಿದಿಲ್ಲ. ಶಕುನಗಳು ನಮ್ಮ ಹರುಷ ಮತ್ತು ಸುಖದ ಸಮಯಾವಕಾಶಗಳಾದ ಹಬ್ಬದ ಅವಸರಗಳನ್ನು ಸೂಚಿಸುವವೇ? ಶುಭಲಗ್ನವೆಂದು ಶಕುನ ಹೇಳುವವರು ದಂಪತಿಗಳ ಮಧುರಪ್ರೇಮ ಅಚಂದ್ರಾರ್ಕವಾಗಿ ಉಳಿಯುವುದೆಂದು ಹೇಳುತ್ತಾರೆ. ನಕ್ಷತ್ರ ರಾಶಿಗತಿ ಗುಣಿಸಿ ಹೇಳುತ್ತಾರೆ. ಆದರೆ ಸಾಯದೆ ಯಾರುಂಟು? ಶುಭಲಗ್ನ ಸೂಚಿತ ಅಚಂದ್ರಾರ್ಕ ಪ್ರೇಮದ ಅರ್ಥವೇನು ? ಆ ರೀತಿ ಲಗ್ನವಾದವರೇ ಅಕಾಲ ಮರಣಕ್ಕೆ ತುತ್ತಾಗುವುದು ಯಾವುದರ ದ್ಯೋತಕ? ಹಬ್ಬ ಹರುಷ ಒಳ್ಳೆಯ ಕರ್ಮದಲ್ಲಿಯೇ ಉಂಟು.

೪೧೬

ವಾಡವದಿನಕೇಲ ವಾವಿವರ್ತಮುನಲು ? ಚಾಡಿಗಾನಿಕೇಲ ಜಾಡ ಬುದ್ಧಿ ?
ಮೂಢಮತುಲಕೇಲ ಮುದಮುತೋಜ್ಞಾನಂಬು, ವಿಶ್ವದಾಭಿರಾಮ ವಿನುರ ವೇಮ.

ಬೀದಿ ಬಸವಿಗೇಕೆ ? ಒಡಲು ಸಂಬಂಧವು ?
ಚಾಡಿ ನುಡಿವಗೇಕೆ; ಜಾಡದರಿವು ?
ಮೂಢ ಮತಿಗೆ ಏಕೆ, ಜ್ಞಾನದಾನಂದವು ?
ವಿಶ್ವದಾಭಿರಾಮ ಕೇಳು ವೇಮ

ಶೀಲಗೆಟ್ಟ ಹೆಂಗಳೆಯರನ್ನು ದಾಸಿ, ಜಾರೆ, ವೈಶ್ಯೆ ಎಂದು ಸ್ಥೂಲವಾಗಿ ವಿಂಗಡಿಸಬಹುದು. ವೇಶ್ಯೆ ಬೆಲೆವೆಣ್ಣು. ಇಂತಿಷ್ಟು ಹಣ ನೀಡಿದರಾಯ್ತು, ಅವಳ ಸಂಗ ಸುಖ ದೊರೆಯುವುದು. ವೇಶ್ಯೆ ಒಬ್ಬನೊಡನೆ ಹೆಂಡತಿಯಂತೆ ಬಾಳಬಹುದು. ಇಲ್ಲವೆ ಅವಳು ವಿಟಪುರುಷರನ್ನು ಆಕರ್ಷಿಸುತ್ತ ಬೀದಿಯಲ್ಲಿ ತಿರುಗಾಡಬಹುದು, ಇಲ್ಲವೆ ಅಲಂಕರಿಸಿಕೊಂಡು ಬೀದಿಯತ್ತ ಇಣಿಕಿ ಹಾಕುತ್ತ ಮನೆಬಾಗಿಲಿಗೆ ಕುಳಿತುಕೊಳ್ಳಬಹುದು. ಇಂಥವಳು ಬೀದಿ ಬಸವಿ. ಇಂಥ ಸ್ಥಿತಿಗಿಳಿದವಳಿಗೆ ತಾನು ಯಾರ ಅರ್ಧಾಂಗಿ; ತನ್ನ ಪುತ್ರರು ಯಾರ ವಂಶಜರು ಎಂಬಿತ್ಯಾದಿ ಒಡಲು ರಕ್ತ ಸಂಬಂಧದ ಯೋಚನೆ ಎಲ್ಲಿ ಉಂಟು. ?

ಚಾಡಿ ನುಡಿಯವವನು ಏನೋ ಕೇಳಿ, ಇನ್ನೇನನ್ನೋ ತನ್ನ ದುರುದ್ದೇಶ ಈಡೇರಿಸಿಕೊಳ್ಳಲು ಹೇಳುವವನು. ಇವನು ನಿಜವಾದ ಘಟನೆಯೇನು ? ಮೂಲ ಕಾರಣವೇನು? ಸತ್ಯವೇನು? ಅದರ ಜಾಡು ಏನು ? ಎಂಬುದರ ಗೊಡವೆಗೆ ಹೋಗನು.

ಸರಿಯಾದ ವಿಷಯ ಗ್ರಹಣಕ್ಕೆ ತಕ್ಕ ಬದ್ಧಿ ಶಕ್ತಿ ಇಲ್ಲದವನು ಮೂಢಮತಿ. ಚತುರ ಬುದ್ಧಿಯವನು ಜ್ಞಾನ ಪಡೆಯಬಲ್ಲನು. ಜ್ಞಾನ ಪ್ರಾಪ್ತಿಯಿಂದ ಆಗುವ ಆನಂದವನ್ನೂ ಅನುಭವಿಸಬಲ್ಲನು. ಆದರೆ ಜ್ಞಾನಾನಂದ ಅರಿಯುವ ಶಕ್ತಿಯೇ ಇಲ್ಲದ ಮೂಢ ಮತಿಯು ಅದರ ಆನಂದ ಪಡೆಯುವುದೆಂತು ?

೪೧೯

ತೊತ್ತು ತೊತ್ತೆ ಕಾನಿ ದೊರೆಸಾನಿಕಾಬೋದು, ಹತ್ತದೆಪುಡು ದಾನಿಕ್ಕೆನಗುಣಮು
ಮಿತ್ತಿಕೂಳ್ಳದೊಂಗ ಮೇಲೆನ್ನ ನೇರ್ಚುನಾ ? ವಿಶ್ವದಾಭಿರಾಮ ವಿನುರ ವೇಮ.

ತೊತ್ತು ತೊತ್ತೆನಿಪಳು ದೊರೆಸಾನಿಯಲ್ಲ.
ಹತ್ತದೆಂದು ಸದ್ಗುಣಲೇಪವವಳಿಗೆ
ಸತ್ತವರ ಕೂಳು ಕದಿನವ ಮಿಗಿಲನರಿಯ.
ವಿಶ್ವದಾಭಿರಾಮ ಕೇಳು ವೇಮ.

ರಾಜರ ಅಂತಃಪುರದಲ್ಲಿ ಅವನ ಅಂಗರಕ್ಷಕರಾಗಿ, ಸೇವಿಕೆಯರಾಗಿ ಕಾರ್ಯ ಮಾಡುವವರು, ವಂಶಪಾರಂಪರ್ಯವಾಗಿ ಆ ಕಾರ್ಯದಲ್ಲಿರುತ್ತಿದ್ದರು. ಇವರು ಅಂತಃಪುರದ ದಾಸಿಯರು. ಇವರಲ್ಲಿ ಮುಖ್ಯಳಾದವಳಿಗೆ ಗಣಿಕಾ ಎನ್ನುತ್ತಿದ್ದರು. ಅವಳಿಗೆ ದೊಡ್ಡ ಮಾನವಿತ್ತು. ಖಾಸಗಿ ಸಭೆಗಳಲ್ಲಿ, ದರಬಾರದ ಸದಸ್ಯರೊಂದಿಗೆ ಆಸನದ ಮೇಲೆ ಕುಳಿತುಕೊಳ್ಳುವ ಹಕ್ಕು ಸಹ ಅವಳದು. ಅವಳಿಗೆ ಈ ರೀತಿ ಮಾನ ದೊರೆತರೆ ಅವಳು ದೊರೆಯ ಹೆಂಡತಿಯಾಗಳು; ದೊರೆಸಾನಿಯಾಗಳು. ರಾಜನು ಅವಳಲ್ಲಿ ಮೋಹ ತಳೆದರೂ ಅವಳ ಮಾನ ಹೆಚ್ಚಿದು. ಅವಳಿಗೆ ಸದ್ಗುಣವು ಸಾಧ್ಯವೆನಿಸದು. ಏಕೆಂದರೆ, ತನ್ನ ಮಾನ ಕಳೆದುಕೊಂಡು ಹೆಚ್ಚಿನ ಸ್ಥಾನ ಪಡೆಯಲು ಹಪಾಹಪಿಸುವ ಅವಳು, ಮುಗ್ಧ ಸತಿಯರಿಗೆ ಮೀಸಲಾದ ದೊರೆಯ ಪ್ರೇಮ ದೋಚಿದ ಪಾಪಿ.

ಹೇಗೆಂದರೆ ಸತ್ತವರು ಉಣ್ಣುವರೆಂದು ಶ್ರಾದ್ಧದ ಕಾಲಕ್ಕೆ ಅಡುಗೆ ಬಡಿಸಿ, ಪಿತೃ-ಪಿಂಡವೆಂದು ಕರೆದು ಅವರು ಇಲ್ಲದುದರಿಂದ ತಾನೇ ಸವಿಯೂಟ ತಿನ್ನುವವನು, ಇಂಥ ನಾಟಕ ಹೂಡದೆ ನೇರವಾಗಿ ನಡೆಯುವ ಮೇಲು ಬುದ್ಧಿಯನ್ನು ಪಡೆಯನು.

೪೨೦

ನಾಡೆಮ್ಮನಚಿಡಿಪೆ ನಯಮೆರಿಂಗಿಮೆಲಂಗು, ವಿಟುನಿಗುಸ್ತರಿಂಚು ವಿವರ ಮೆರುಗು,
ಬಾನಿಸ್ಮೆನತೊತ್ತು ಪಾಟಂಚಲೇದಯಾ, ವಿಶ್ವದಾಭಿರಾಮ ವಿನುರ ವೇಮ.

ನೀಟ ವೇಶ್ಯೆ ನಯವನರಿತು ನಟಿಸುವಳು,
ವಿಟನ ವಶದಲಿದ್ದು ವಿವಶವರಿವ,
ಅಡುಗೆ ಹುಡುಗೆಯೆಂದವಳ ಕೊಡವೆ ಬಿಡುವರು.
ವಿಶ್ವದಾಭಿರಾಮ ಕೇಳು ವೇಮ.

ರಾಜ-ಶಾಸನ ಪದ್ಧತಿ ನಮ್ಮ ದೇಶದಲ್ಲಿ ಪ್ರಚಲಿತವಿದ್ದಾಗ, ಗಣಿಕಾ ಸ್ತ್ರೀಯರಲ್ಲಿ ಹಲವರು ಗುಪ್ತಚಾರಿಣಿಯರಾಗಿರುತ್ತಿದ್ದರು.(ಈಗಲೂ ಈ ಪದ್ಧತಿ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ.) ಅವರು ಶತ್ರು ರಾಜ್ಯಕ್ಕೆ ಕೆಲಸದ ಆಳಾಗಿ, ಇಲ್ಲವೆ, ರಾಜನ ಅತಿಥಿಗಳ ಸೇವಿಕೆಯರಾಗಿ ನೇಮಕಗೊಳ್ಳುತ್ತಿದ್ದರು. ಜಾಣರೂ, ಸ್ಫುರದ್ರೂಪಿಗಳೂ ಆದ ಇವರು ಇಚ್ಛಿತ ವ್ಯಕ್ತಿಯನ್ನು ಮೋಹಪಾಶದಲ್ಲಿ ಕೆಡವಿಕೊಂಡು, ಅವನ ಇಚ್ಛೆಯರಿತುಕೊಂಡು ಕಾರ್ಯಗೆಯ್ಯುವರು. ಹೀಗೆ ವಿಟನ ಇತಿಮಿತಿಗಳು ವಿದಿತವಾದೊಡನೆ, ಅವನಿಂದ ಕ್ರಮೇಣ ಗೌಪ್ಯ ವಿಷಯಗಳನ್ನು ಕೇಳಿಕೊಳ್ಳ ತೊಡಗುವಳು. ವಿಟಪುರುಷನು ತನ್ನ ಹೊಣೆ ಮರೆತು,ಗೌಪ್ಯಕಾಯ್ವುಕೊಳ್ಳುವ ಪ್ರತಿಜ್ಞೆ ಮೀರಿ,ಏನೋ ಸಣ್ಣ ಕೆಲಸದಾಕೆ! ಅಡುಗೆ ಕುಚ್ಚುವ ಕುನ್ನಿ ; ಇವಳಿಗೆ ತನ್ನ ಮುತ್ಸದ್ದಿತನ ತಿಳಿವುದೆಂತು?" ಎಂದುಕೊಂಡು, ಅವಳೆದುರು ಎಲ್ಲ ವ್ಯಕ್ತಪಡಿಸುತ್ತಾನೆ.

ರಾಜ್ಯದ ಭವಿತವ್ಯವು ಇಂಥ ಸಡಿಲುಗಚ್ಚೆಯ ರಾಜಕಾರಣಿಗಳಿಂದ ಹಾಳಾದುದನ್ನು ಇತಿಹಾಸ ಸದಾ ಸೂಚಿಸುತ್ತದೆ.

೪೨೧

ಕುಲಕುಗುಬ್ಬಜೂಸಿ ಗೊಬ್ಬುನಗರಗಿಂಚಿ, ಚೇತಿಕಾಸುಲೆಲ್ಲ ಜೇರ್ಚುಕೊಂದು,
ರತನುಚೇತಿಕತ್ತು ಲರಯಂಗ ಗಾಂತಲು, ವಿಶ್ವದಾಭಿರಾಮ ವಿನುರ ವೇಮ.

ಸ್ಫುಟಗೊಂಡ ಸ್ತನವ ತೋರಿ ಮನ ಕರಗಿಸಿ,
ಕೈಯ ಕಾಸ ಕಿತ್ತುಕೊಳ್ಳುತಿಹಳು.
ಕಾಂತೆ ಕಾಮು ಪಿಡಿದ ಕತ್ತಿ ಕಾಣೆರಯ್ಯ
ವಿಶ್ವದಾಭಿರಾಮ ಕೇಳು ವೇಮ.

ವೇಶ್ಯೆ ಬೆಲೆವೆಣ್ಣು. ತನ್ನ ಉದರ ನಿರ್ವಾಹಕ್ಕಾಗಿ ಹೀನವೃತ್ತಿಗಿಳಿದವಳು. ಕಾಮ ಸೂತ್ರಗಳೆಲ್ಲ ಅವಳು ಹಣ ಸೆಳೆಯುವುದನ್ನು ಸಮರ್ಥಿಸುತ್ತವೆ. ತನ್ನ ಅಂಗದ ಗುಪ್ತ

ಭಾಗಗಳನ್ನು ಪ್ರದರ್ಶಿಸಿ, ಕುಡಿನೋಟ ಓರೆನೋಟಗಳಿಂದ ಮೋಹಗೊಳಿಸಿ, ಮನಸ್ಸು ಕರಗಿಸಿ, ಕೈಯಲ್ಲಿರುವ ಗಂಟನ್ನೆಲ್ಲ ಕಸಿದುಕೊಳ್ಳುತ್ತಾಳೆ. ಅವನ ಹಣವೂ ಹೋಗುತ್ತದೆ. ಗುಣವೂ ಹೋಗುತ್ತದೆ. ಅವನು ನಾಶವಾಗುತ್ತಾನೆ. ವೇಶ್ಯೆ ಕಾಮನು ಹಿಡಿದ ಕತ್ತಿಯಂತೆ. ಕಾಮ ಪ್ರಚೋದಿಸಿ ಎಂಥವನನ್ನಾದರೂ ಅವಳು ನಾಶಮಾಡಬಲ್ಲಳು.

೪೨೨

ಅನುಕೂಲ್ಯಮುಗಲ ಯಂಗನಕಲಿಗಿನ, ಸತಿಕಿಬತಿಕಿ ಬರಮುಸೌಖ್ಯಮುವುರು,
ಪ್ರಾತಿಕೂಲ್ಯಮ್ಮೈನ ಬರಿಹರಿಂಗ ಸುಖಂಬು, ವಿಶ್ವದಾಭಿರಾಮ ವಿನುರ ವೇಮ.

ಅತಿ ಅನುಕೂಲವಿಹ ಅಂಗನೆ ದೊರೆತಾಗ
ಸತಿಪತಿ ಜೊತೆ ಪರಮ ಸೌಖ್ಯವಿಹುದು.
ಪ್ರತಿಕೂಲವಾಗಲು ಪರಲು ಹರಿವುದೆ ಸುಖ
ವಿಶ್ವದಾಭಿರಾಮ ಕೇಳು ವೇಮ.

ಗಂಡ ಹೆಂಡತಿಯನ್ನು ಮೆಚ್ಚಬೇಕು; ಹೆಂಡತಿ ಗಂಡನನ್ನು ಮೆಚ್ಚಬೇಕು. ಗಂಡ-ಹೆಂಡಿರ ಪರಸ್ಪರ ಮೆಚ್ಚುಗೆಯೇ ಅವರ ಸಂಸಾರದಲ್ಲಿ ಸಂತೋಷದ ಬೀಜ ಊರಬಹುದು. ಸತಿ ಅನುಕೂಲವಾಗಿ ನಡೆದುಕೊಂಡರೆ ಪತಿಯ ಸೌಖ್ಯ ಹೇಳಲಾಸಲ್ಲ. (ಈ ಆದರ್ಶದ ಅತಿರೇಕವೆಂದರೆ, ಮಾಂಡವ್ಯ ಋಷಿಯ ಪತ್ನಿ ತನ್ನ ಪತಿಯನ್ನು ವೇಶ್ಯೆಯ ಮನೆಯವರೆಗೆ ಸ್ವತಃ ಕರೆಯೊಯ್ಯುವಷ್ಟು, ಸಹನತೆಯುಳ್ಳ, ಪತಿಗನುಕೂಲ, ಸತಿಯಾಗಿದ್ದಳೆಂಬ ಕತೆ ಹೇಳುತ್ತಾರೆ. ಆದರೆ ಇಂಥ ಆದರ್ಶದ ಅತಿರೇಕ ಒಳ್ಳೆಯದಲ್ಲ.)

ಹೆಂಡತಿ ಪ್ರತಿಕೂಲಳಾದರೆ, ಅವಳೊಂದಿಗೆ ಬಾಳುವೆ ಸಾಗಿಸುವುದು ಕಠಿಣ. ಕಾರಣ ವಿಷಮ, ಭಾವ ತಾಳಿ, ಸಂತಸಕರವಲ್ಲದ ಬಾಳುವೆ ಸಾಗಿಸುವುದಕ್ಕಿಂತ, ಹೆಂಡತಿಯೊಂದಿಗೆ 'ಪರಲು' ಹರಿದುಕೊಂಡು ಬೇರೆಯಾಗುವುದೇ ಮೇಲು.

(ಈ ಅಭಿಪ್ರಾಯವು ಪ್ರಗತಿಪರವಾಗಿದ್ದು ಸ್ಮೃತಿಕಾರ ಮನುವಿನ ಅಭಿಪ್ರಾಯಕ್ಕೆ ಪೂರ್ಣ ವಿರೋಧವಾಗಿದೆ. ಮನು ಹೀಗೆ ಹೇಳಿದ್ದಾನೆ. "ಪತಿಯು ಸತಿಯೊಂದಿಗೆ ಒಂದಾಗಿ ಹೋದುದನ್ನು ಲಗ್ನ ಕಾಲಕ್ಕೆ ಸೇರಿ ಹೇಳಲಾಗಿದೆ. ಅಂದ ಮೇಲೆ, ಮದುವೆಯಾದ ಹೆಣ್ಣು ಬಿಡುಗಡೆ ಹೊಂದುವ ಮಾತೇ ಇಲ್ಲ" "ಹೆಂಡತಿಯನ್ನು ಗಂಡ ಮಾರಾಟ ಮಾಡಿದರೂ ಸ್ತ್ರೀ ಅವನ ಹೆಂಡತಿಯೇ ಆಗಿ ಉಳಿಯುತ್ತಾಳೆ.")

೪೨೩

ಗೊಪ್ಪಪಿರುದುಗನ್ನ ಗುಚಕುಂಭಮುಲಗನ್ನ, ಜಿಪ್ಪರಾನಿಚೋಟು ಚೆಲುಮಗನ್ನ,
ಮುಪ್ಪಿರಿಗೊನುನಯ್ಯ ಮುನಿಕ್ಕೈನ ಮೋಹಂಬು ವಿಶ್ವದಾಭಿರಾಮ ವಿನುರ ವೇಮ.

ತೊಡೆಕುಂಡಿಯ ಕಂಡು, ತುಂಬಿದೆದೆಯ ಕಂಡು,
ಶಬ್ದ ಬಳಸದಂಥ ಸ್ಥಳ ಕಂಡು,
ಮೋಹ ಮುಕುರುತಿಹುದು; ಮುನಿಯೆ ಅದರೇನು ?
ವಿಶ್ವದಾಭಿರಾಮ ಕೇಳು ವೇಮ.

(ಆಧ್ಯಾತ್ಮಿಕ ಕವಿ " ಸ್ತ್ರೀ ಶರೀರದಲ್ಲಿ ಕಣ್ಣು, ಕಿವಿ, ಮೂಗು, ಎದೆ, ಕೈಕಾಲುಗಳು ಇತ್ಯಾದಿ ಅವಯವಗಳನ್ನು ಮಾಂಸ-ಖಂಡಾದಿಗಳ ವಿಕಾರವನ್ನೂ, ರಕ್ತಪೂರಿತವಾದ, ಮಜ್ಜ, ಮೇದ, ಅಸ್ಥಿ, ಶ್ಲೇಷ್ಮಾದಿಗಳನ್ನೂ ವಿವರಿಸುತ್ತಾನೆ. ಅವನ ಉದ್ದೇಶವೆಂದರೆ, ಅಂಗಾಂಗಗಳ ಪರಿಚಯ ಜ್ಞಾನವಾದರೆ, ಕಾಮನ ಬಲೆಗೆ ಜನರು ಬೀಳಲಾರರೆಂಬುದೇ ಆಗಿದೆ)

ಹೊರೆ ತೋರದೆ ಮುಚ್ಚಿಕೊಂಡಿರುವ ಸ್ತ್ರೀಯ ತೊಡೆ-ಕುಂಡಿಗಳಂಥ ಕಾಲಿನ ಭಾಗಗಳನ್ನೂ ಕುಂಭ ಸದೃಶ ಕುಚಗಳುಳ್ಳ ಎದೆಯ ಭಾಗವನ್ನೂ, ಶಬ್ದದಿಂದ ವರ್ಣನೆ ಮಾಡಲಾರದಷ್ಟು ಹೇಸುಗೆ ತರಿಸುವ ಮರ್ಮಸ್ಥಾನವನ್ನೂ ಆಗೊಮ್ಮೆ ಈಗೊಮ್ಮೆ ಕಾಣುವ ಅವಕಾಶ ದೊರೆತರೆ, ಮನೋನಿಗ್ರಹ ಸಾಧಿಸಲು ಹೆಣಗುವ ಸಾಧು-ಮುನಿಗಳೂ ಸಹ ಮೋಹಿತರಾಗುತ್ತಾರೆ. ಸಹಜಗುಣ ಪುಟಿದು ಮೇಲೆ ಬರಬಹುದು.

(ಅರ್ಥ ಸಾಮ್ಯವಿರುವ ಅವತಾರ ಪುರುಷ ದತ್ತಾತ್ರೇಯ ವಿರಚಿತ ಅವಧೂತ ಗೀತೆಯ ಪದ್ಯವಿಂತಿದೆ.

ಮೂತ್ರ ಶೋಣಿತ ದುರ್ಗಂಧೇ ಅಮೇಧ್ಯದ್ವಾರದೂಷಿತೇ |
ಚರ್ಮಕುಂಡೇ ಯೇ ರಮಂತಿ ತೇ ಲಿಪ್ಯಂತೇ ನ ಸಂಶಯಃ ||

ಅನುವಾದ :— ಚರ್ಮದಿಂದ ಆದ ದ್ವಾರವು ಮೂತ್ರ ಮತ್ತು ರಕ್ತದ ದುರ್ಗಂಧದಿಂದ ಕೂಡಿದೆ. ಅಮೇಧ್ಯ ಹೊರಗೆ ಬರುವ ದ್ವಾರದಿಂದ ಕಲುಷಿತವಾಗಿದೆ. ಯಾರು ಇದರಲ್ಲಿ ರಮಿಸುವರೋ ಅವರು ನಿಃಸಂಶಯವಾಗಿ ಪತಿತರು.)

೪೨೪

ಮುತಮುದ್ದಾಮರಚು ಮಧುರಾಧರಮುಂಜೂಚಿ, ಮಗುವರೂಪುಜೂಚಿ ಮನಸು ಮೆರಚು,
ಉಕ್ತು ಲಾಲಕಿಂಚಿ ಯೋಗಂಬುಮರಚುರಾ, ವಿಶ್ವದಾಭಿರಾಮ ವಿನುರ ವೇಮ.

ಮುತಪಂಥ ಮರೆವುದು ಮಧುರ ಅಧರ ನೋಡಿ,
ಮನವೆ ಮರೆವುದು ಮದನಿಕೆಯ ನೋಡಿ,
ಮತ್ತೆ ಮಾತನಾಡೆ, ಯೋಗ ಮರೆವ ನೋಡಿ.
ವಿಶ್ವದಾಭಿರಾಮ ಕೇಳು ವೇಮ.

(ಬ್ರಾಹ್ಮಣಾದಿ ದ್ವಿಜರು ಮಾಡುವ ಅನೇಕ ಪಾಪಕರ್ಮಗಳಿಗೆ ಪಶ್ಚಾತ್ತಾಪ ವಿಧಿ ಪರಿಹಾರರೂಪವಾಗಿದೆಯೆಂದು ಹೇಳುವ ಸ್ಮೃತಿಕಾರ ಮನು, ಬ್ರಾಹ್ಮಣ-ಶೂದ್ರ ಸ್ತ್ರೀ-ಪುರುಷರ ಸಮಾಗಮದ ಬಗ್ಗೆ ಹೀಗೆ ಹೇಳುತ್ತಾನೆ.

"ಶೂದ್ರ ಸ್ತ್ರೀಯ ತುಟಿಗಳ ಮೇಲಿನ ದ್ರವವನ್ನು ಸೇವಿಸಿದವನಿಗೆ, ಅವಳ ಉಚ್ಛ್ವಾಸದ ಹದ್ದಿನಲ್ಲಿರುವವನಿಗೆ ಮತ್ತು ಅವಳಿಂದ ಮಗನನ್ನು ಪಡೆದವನಿಗೆ ಪಶ್ಚಾತ್ತಾಪ ಕರ್ಮ ಶುದ್ಧಿಯಿಲ್ಲ."

ಆದರೆ, ವೈದಿಕ ಕತೆಗಳಲ್ಲಿ, ಇಂದ್ರ ಅಹಲ್ಯೆ, ಪುರೂರವ-ಊರ್ವಶಿಯರ ಪ್ರಣಯ ಪ್ರಸಂಗಗಳು; ಭಾಗವತಾದಿ ಪುರಾಣಗಳಲ್ಲಿ ಚಿತ್ರಿಸಿದ ಪರಾಶರ-ದುರ್ಗಂಧಿನಿಯರ ಪ್ರಣಯ, ಗುರುಪತ್ನಿ ತಾರೆಯೊಡನೆ ಚಂದ್ರನ ಪ್ರಣಯ, ವಿಶ್ವಾಮಿತ್ರ-ಮೇನಕೆಯರ ಪ್ರಣಯ ಇತ್ಯಾದಿ ಪ್ರೇಮ ಘಟನೆಗಳು ಉಲ್ಲೇಖಿಸಲ್ಪಟ್ಟವೆ.)

ಯಜ್ಞ ಕರ್ಮ ನಡೆಸಿ, ಮದ್ಯ ಸೇವಿಸಿ, ಬೇರೆ ಹೆಸರಗಳನ್ನಿಟ್ಟುಕೊಂಡು, ಪರಸ್ತ್ರೀಗಮನ ಮಾಡುವುದು ಧರ್ಮಕರ್ಮವೆಂದೂ, ಶಾಸ್ತ್ರ ಸಮ್ಮತವೆಂದೂ ಇತ್ತೀಚಿನ ವರೆಗೆ ಬಹಳ ಕಡೆಗಳಲ್ಲಿ ತಿಳಿದು ಆಚರಿಸಲ್ಪಡುತ್ತಿತ್ತು.- ಇಂಥ ಕಡೆ ಕಡಿಮೆ ಜಾತಿಯವರೆನ್ನುವ ವರ್ಗದ ಸ್ತ್ರೀಯರ ಸಂಗವನ್ನೆ ಉಚ್ಚ ಜಾತಿಯವರೆಂದುಕೊಳ್ಳುವವರು ಪಡೆಯುತ್ತಿದ್ದರು. ಹೀಗೆ ಮಧುರ ಅಧರ ನೋಡಿ ಮತ ಪಂಥ ಮರೆಯುತ್ತಿದ್ದರು.

ಕಾಮ ಪ್ರಚೋದಿಸುವ ಸುಂದರಾಂಗಿಯ ಅಂಗ-ಸೌಷ್ಟವವನ್ನೂ ಚೆಲುವಾದ ಚೆಂದುಟಿಗಳನ್ನೂ ನೋಡಿದರೆ, ಅವನು ಮನೋವಿಹಾರಿಯಾಗಿ ತನ್ನನ್ನು ತಾನೇ ಮರೆಯುವನು. ಒಂದು ವೇಳೆ ಅವಳೊಂದಿಗೆ ಮಾತನಾಡುವ ಅವಕಾಶ ದೊರೆತರಂತೂ, ಯೋಗವನ್ನೇ ಮರೆಯುತ್ತಾನೆ !

೪೨೫

ತೊಡಲಮೆರುಪುಜೂಚಿ ತೋರಂಪುಕುಚಮುಲು, ವಾರಕೊಪ್ಪುಗಲುಗು ವನಿತಜೂಚಿ,
ವಿಟುಡುನಿಲ್ಚುಟಿಟ್ಲು ವಿರಹಾಗ್ನಿ ಜೊರಕನು ? ವಿಶ್ವದಾಭಿರಾಮ ವಿನುರ ವೇಮ.

ತೊಡೆಯ ಮೆರುಗು ಕಂಡು; ತೂಗುವ ಮೊಲೆ ಕಂಡು
ಕಡೆಸರಿದ ಮುಡಿಯಾ ವನಿತೆ ಕಂಡು,
ಬಿಡದೆ ವಿರಹಾಗ್ನಿಗೆ ಬೀಳದಿರುವನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯು ಲಜ್ಜೆಯಿಂದ ಪುರುಷರ ದೃಷ್ಟಿಗೆ ಸದಾ ಕಾಣದಂತೆ ವಸ್ತ್ರಗಳಿಂದ ಮುಚ್ಚಿಕೊಂಡ, ತೊಡೆಯ ಮೆರುಗನ್ನೂ, ತೂಗುವ ಸ್ತನಗಳನ್ನೂ, ಓರೆಯಾಗಿ ಇಳಿಬಿದ್ದ ಜಡೆಯನ್ನೂ ಯಾವಾಗಲೋ ಒಮ್ಮೆ ಕಾಣುವ ಸಂದರ್ಭ ಒದಗಿದಾಗ, ಕಂಡು, ಪುರುಷನು ಆಕರ್ಷಿತನಾಗುವನು. ಅವುಗಳಿಂದ ತನ್ನ ಮನಸ್ಸನ್ನು ಪರಾಙ್ಮುಖಗೊಳಿಸಲು ಶಕ್ತನಾಗುವುದಿಲ್ಲ. ಇಂಥ ಆಕರ್ಷಕ ವಸ್ತುಗಳನ್ನು ನೋಡುವ ಸಂದರ್ಭ ಮೇಲಿಂದ ಮೇಲೆ ಬರದಲ್ಲ ! ಎಂದು ವಿರಹಾಗ್ನಿಗೆ ಬಲಿಯಾಗುತ್ತಾನೆ.

ರಹಸ್ಯ ಅಂಗಾಂಗಗಳ ಕಲ್ಪನೆಯೂ, ಅವುಗಳ ಪೂರ್ವಾಪರಗಳೂ, ಅವನಿಗೆ ತಿಳಿದಿದ್ದರೆ, ಅವನೇನೂ ಈ ರೀತಿ ಮೋಹಿತನಾಗುವುದಿಲ್ಲ.

ಚದುವುಲೆಲ್ಲಜದಿವಿ ಸರ್ವಜ್ಞುಡ್ಯೆಯುಂಡಿ, ಬ್ರಹ್ಮವಿದ್ಯೆಲೆಲ್ಲ ಬದಟಗಲಿಪಿ.
ಯುವತಿಜೂಚಿ ಪೊಂಗಿಯೊಗಂಬು ಮರಚುರಾ, ವಿಶ್ವದಾಭಿರಾಮು ವಿನುರ ವೇಮ.

ಓದನೆಲ್ಲ ಓದಿ, ಸರ್ವಜ್ಞನಾಗಿದ್ದು,
ಬ್ರಹ್ಮವಿದ್ಯೆಯೆಲ್ಲ ಹೊಲೆಗೆಡಿಸಿ,
ಯುವತಿ ನೋಡಿ, ದಗ್ಧನಾಗಿ ಯೋಗ ಮುರೆವ.
ವಿಶ್ವದಾಭಿರಾಮು ಕೇಳು ವೇಮು.

ವೇದ ಶಾಸ್ತ್ರಾದಿಗಳನ್ನೆಲ್ಲ ಓದಿ, ಶ್ರೋತ್ರಿಯನಾಗಿ, ಬಳಿಕ ಸಕಲ ಶಾಸ್ತ್ರ ಅಭ್ಯಸಿಸಿ, ಸರ್ವಜ್ಞನಾಗಿ, ಸಕಲವನ್ನೂ ತಿಳಿಯುವ ಶಕ್ತಿ ಪಡೆದು, ಸರ್ವವನ್ನು ಸಮನಾಗಿ ಕಾಣುವ ಸರ್ವವೂ ತಾನೇ ಆಗಿ ಕಾಣುವ ಆತ್ಮ ಜ್ಞಾನ (ಬ್ರಹ್ಮ ವಿದ್ಯೆ) ಪಡೆಯುತ್ತಾನೆ. ಪರಮಾತ್ಮನಲ್ಲಿ ಸೇರಿ ಒಂದಾಗುವಿಕೆಯನ್ನು ಅಂದರ ಯೋಗವನ್ನು ಸಾಧಿಸುತ್ತಾನೆ

ಅನಂತರ ಯಾವಳೋ ಸುಂದರ ಕನ್ನೆಯನ್ನು ಕಂಡು ಚಿತ್ತಶುದ್ಧಿ ಕಳೆದುಕೊಂಡು ಮನೋ ನಿಗ್ರಹದ ಶಕ್ತಿಯೆಲ್ಲ ದಗ್ಧವಾಗಿ, ಯೋಗವನ್ನು ಮರೆಯುವನು. ಬ್ರಹ್ಮ ವಿದ್ಯೆಯೇ ಅಪವಿತ್ರವೆನಿಸುವಂತೆ ಮಾಡುವನು.

(ವಿಶ್ವಾಮಿತ್ರ-ಮೇನಕೆಯರ ಪ್ರಣಯ ಪ್ರಸಂಗದಂಥ ಅಸಂಖ್ಯ ಉದಾಹರಣೆಗಳು, ವೇದಕಾಲದ ಸಾಹಿತ್ಯದಿಂದ ಇಂದಿನ ವರೆಗಿನ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ.)

೪೨೭

ಊರೆಗಂದೆರುಂಗ ದುತ್ತಮಗಂಧಂಬು, ಚೆಡ್ಡನರಕ ಮೆಲ್ಲ ಜೆಂದುಗಾನಿ,
ಸಾಧ್ವಿಮಹಿಮ ಮೆಟ್ಲು ಸ್ವೈರಿಣಿಯೆರುಗುರಾ ? ವಿಶ್ವದಾಭಿರಾಮ ವಿನುರ ವೇಮ.

ಊರಹಂದಿಗೇನು ಗೊತ್ತುತ್ತಮ ಗಂಧ ?
ಭೂರಿ ನರಕ ತಿಂದು; ತೇಗುತಿಹುದು.
ಸ್ವೈರಿಣಿಯೆಂತು ಬಲ್ಲಳು; ಸಾಧ್ವಿ ಮಹಿಮೆ ?
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಗಂಧವು ಯಾವುದು ಎಂಬುದರ ಅರಿವು. ಊರಲ್ಲಿ ತಿರುಗಾಡುವ ಹಂದಿಗೆ ಇರದು. ಹೊಲಸು ನಾರುವ ವಿಸರ್ಜಿತ ಮಲಾದಿಯನ್ನೇ ತಿಂದು ಸಂತುಷ್ಟಿಯಿಂದ ತೇಗುತ್ತದೆ. ಒಳ್ಳೆಯದು-ಕೆಟ್ಟದ್ದು ಯಾವುದೆಂಬ ವಿವೇಕವೇ ಹಂದಿಗಿಲ್ಲ.

ಸ್ವೈರಿಣಿ ಸ್ತ್ರೀ ಊರಹಂದಿಯಂತೆ. ಐಂದ್ರಿಕ ಸುಖಭೋಗಕ್ಕಾಗಿ ಆಚಾರ ತೊರೆದು ಧರ್ಮಮೀರಿ ನಡೆಯುವ ಇವಳಿಗೆ ತನ್ನ ಸಡಿಲು ವರ್ತನೆಯೇ ಹಿಡಿಸಬಹುದು. ಅದರಲ್ಲಿಯೇ ಸುಖವೆನಿಸಬಹುದು. ಆದರೆ ಅದು ಅಲ್ಪಾವಧಿಯದು; ವಿಪತ್ಕಾರಕ; ಮಾಸಗೇಡಿತನಕ್ಕೆ ಮೂಲ; ಎಂಬುದನ್ನು ಅರಿಯಳು. ಸಾಧ್ವಿಯಾದರೋ, ಇಂದ್ರಿಯಗಳನ್ನು

ಸಾಧಿಸಿದವಳು ಆಚಾರವಂತೆ. ಇವಳ ಆತ್ಮನಿಗ್ರಹದಿಂದ ಇವಳಿಗಾಗುವ ಒಳಿತು, ಇವಳು ಪಡೆಯುವ ಜನಮೆಚ್ಚುಗೆ ಇತ್ಯಾದಿ ಮಹಿಮೆಗಳನ್ನು ಸ್ವೈರಿಣಿ ಅರಿಯಲಾರಳು. ಏಕೆಂದರೆ ಸದ್ವರ್ತನೆಯ ಫಲಸುಖ ಅನುಭವವೇದ್ಯವಷ್ಟೇ.

೪೨೮

ಕಲಿಮಿಜೂಚಿ ಯೀಯಗಾಯಮಿಚ್ಚಿನಯಟ್ಲು, ಸಮುನಕೀಯ ನದಿಯುಸರಸತಯಗು,
ಪೇದಕಿಚ್ಚುಮನುವು ಪೇನವೇಸಿನಟ್ಲುಂಡು, ವಿಶ್ವದಾಭಿರಾಮ ವಿನುರ ವೇಮ.

ಕನಕ ಕಂಡು ಕೊಡಲು ಕಾಯ ಕೊಯ್ದ ರೀತಿ.
ಸರಿಕನೆನಿಪಗಿಡಲು ಸರಸಕರವು.
ಬರಿಯ ಬಡವ ಜೋಡಿ, ಬಂಧುರವದು ನೋಡಿ.
ವಿಶ್ವದಾಭಿರಾಮ ಕೇಳು ವೇಮ.

ಕನ್ನೆಯ ಮನವೊಪ್ಪಿದ ವರನೇ (ಆಯ್ಕೆಗೊಂಡವನೇ) ಅವಳಿಗೆ ತಕ್ಕ ಪತಿ. ಪರಸ್ಪರ ಪ್ರೇಮ ಆದರ ಭಾವಗಳೇ ಒಳ್ಳೆಯ ಸಂಸಾರಕ್ಕೆ ಮೂಲ.

ಕೇವಲ ಹೆಚ್ಚು ಹಣವುಳ್ಳವನೆಂದು ಯಾವನೊಬ್ಬನಿಗೆ ಕನ್ನೆ ಕೊಡುವುದೆಂದರೆ, ತಮ್ಮ ದೇಹವನ್ನೇ ಕೊಯ್ದುಕೊಂಡ ರೀತಿ. ಏಕೆಂದರೆ, ಧನಿಕ ಪುರುಷ ಮತ್ತು ಹಣದ ಹೆಮ್ಮೆಯ ಅವನ ಮನೆಯವರು, ಬಡವರ ಮನೆತನದ ಕನ್ನೆಯನ್ನು ಕೀಳಾಗಿ ಕಾಣುತ್ತಾರೆ. ಅವಳನ್ನು ಕಾಡಿಸಿ, ಪೀಡಿಸಿ ಅವಳ ಚಿತ್ರಹಿಂಸೆಗೆ ತೊಡಗುತ್ತಾರೆ. ಇದನ್ನೆಲ್ಲ ಕಂಡ ಹೆಣ್ಣಿನ ತಾಯಿ ತಂದೆಯವರು ತಮ್ಮ ಕರುಳು ಹಿರಿದು ಜಗ್ಗಿದಂಥ ನೋವು ಅನುಭವಿಸುತ್ತಾರೆ.

ತಮ್ಮ ಸಮಾನ ಸ್ಥಿತಿಯವರಿಗೆ ನೀಡುವುದು ಒಳ್ಳೇದು. ತುಂಬಾ ಹರ್ಷಕರ. ಎರಡೂ ಮನೆತನಗಳು ಆರ್ಥಿಕವಾಗಿ, ಬೌದ್ಧಿಕವಾಗಿ ಸಮಾನ ಸ್ಥಿತಿಯಲ್ಲಿರುವುದೇ ತುಂಬಾ ಚೆನ್ನು.

ಬಡವ ಕನ್ನೆಯು ಬಡವ ವರನೊಂದಿಗೆ ಬೆರೆತರೆ, ಆ ಸಂಸಾರ ಗಟ್ಟಿಮುಟ್ಟಾದ ತಳಹದಿ ಹೊಂದಿರುತ್ತದೆ. ("ನಾನು ಬಡವಿ; ಆತ ಬಡವ. ಒಲಿಮೆ ನಮ್ಮ ಬದುಕುs; ಬಳಸಿಕೊಂಡೆವದನೆ ನಾವು, ಅದಕು ಇದಕುs ಎದಕುs" ಎಂಬ ಕನ್ನಡದ ಹಿರಿಯ ಕವಿ ಅಂಬಿಕಾತನಯ ದತ್ತರ ಭಾವ, ಬಡವ-ಬಡವ ಜೋಡಿಯ ಭಾವವಾಗುತ್ತದೆ.)

೪೨೯

ಪಲಿಕಿಬೊಂಕಲೇಕ ಬಲ್ಲಾಣರಾಜಟು, ಪಡತಿಗೂಡನಿಚ್ಚಿ ಬರುನ ಕಪುಡು,
ಬಾಳಿಮೀರ ನತಡು ಬಾಲುಡ್ಯೆ ಪಡಿಯುಂಡೆ, ವಿಶ್ವದಾಭಿರಾಮ ವಿನುರ ವೇಮ.

ಮಾತಿನಂತೆ ನಡೆದ ಬಲ್ಲಾಣರಾಯತಾ,
ಸತಿಯನು ಸಹ ಇತ್ತ ಪರನಿಗಾಗ
ಮತ್ತ ಕಾಮಿಯಾಗ ಹೆತ್ತ ಹಸುಳೆಯಾದ
ವಿಶ್ವದಾಭಿರಾಮು ಕೇಳು ವೇಮ

ಪೂರ್ವ ಕಾಲದಲ್ಲಿ ದೊರೆಯಾದ ಬಲ್ಹಣ ಮನೆಗೆ ಬಂದ ಅತಿಥಿಯೊಬ್ಬನಿಗೆ ಜೇಡಿ ದುದನ್ನು ನೀಡುವೆನೆಂದು ವಚನವಿತ್ತ. ಅತಿಥಿ ಶಿವಭಕ್ತ. ಆದರೂ ದೊರೆತ ದೊರೆಯ ವಚನದ ದುರ್ಲಾಭಕ್ಕೆಳಸಿದ. ದೊಳಿಸಾನಿಯನ್ನೇ ಕೇಳಿಬಿಟ್ಟ. ಮಾತು ಕೊಟ್ಟಾಗಿತ್ತು. ಮಾತಿಗೆ ತಪ್ಪಲಾರದೆ ದೊರೆ ಸತಿಯನ್ನು ಕೊಟ್ಟುಬಿಟ್ಟ. ಇತ್ತ ಬಲ್ಹಣದೊರೆಯ ಪತ್ನಿ ತನ್ನ ಮಾನರಕ್ಷಣೆಯ ಪೇಚಿನ ಪ್ರಸಂಗದಲ್ಲಿ ಸಿಲುಕಿದವಳು. ಭ್ರಷ್ಟ ಶಿವಭಕ್ತನ ಕಾಮುಕ ದೃಷ್ಟಿಯನ್ನು ತನ್ನ ಪಾತಿವ್ರತ್ಯ ಭಾವನೆಯನ್ನು ಪ್ರದರ್ಶಿಸಿ ಸರಿಪಡಿಸಿದಳು. ಭ್ರಷ್ಟ ಶಿವ ಭಕ್ತ ತಪ್ಪು ತನ್ನ ತಿಳಿದ. ಪತಿವ್ರತೆಯರನ್ನು ಬಯಸುವುದು ಒಳಿತಲ್ಲ ಎಂದು ಅರಿತ. ಪಶ್ಚಾತ್ತಾಪ ಬಡಹತ್ತಿದ. ಕಾಮುಕತೆ ಕರಗಿ ಅವನು ಸಣ್ಣ ಬಾಲಕನಿಂತಾಗಿ ಬಿಟ್ಟ.

ದೃಢ ಮನಸ್ಸಿನ ಮಹಿಳೆ ತನ್ನ ಶೀಲವನ್ನು ತಾನು ಕಾಪಾಡಿಕೊಳ್ಳಬಲ್ಲಳು. ಆದರೆ ಎಲ್ಲದಕ್ಕೂ ಮನಸ್ಸು ಬೇಕು.

೪೩೦

ಮಗನಿಕಲಿಮಿ ಬಲಿಮಿ ಮುಗುವಕುನುಬಲಂಬು, ಕಲಿಮಿಲೇನಿಮುಗಡು ಕಾಸುಗಾಡು,
ಪನಿಕಿರಾನಿಮಗನಿ ಬಾಟಂಚಿಮಾಡರು ವಿಶ್ವದಾಭಿರಾಮ ವಿನುರ ವೇಮ.

ಪತಿಯ ಧನದ ಬಲವೆ ಸತಿಗಿಹ ಬಲವೆಲ್ಲ.
ಕನಕ ತೀರೆ ಕಾಸಿಗಿಂತ ಕಡೆಗು.
ಕೆಲಸಗೇಡಿ ಪತಿಯ ಕಣ್ಣೆತ್ತಿ ನೋಡರು.
ವಿಶ್ವದಾಭಿರಾಮ ಕೇಳು ವೇಮ

ತನ್ನ ಗಂಡನು ಧನಿಕನಾಗಿರುವ ವರೆಗೆ ಮಾತ್ರ ಹೆಂಡತಿಗೆ ಸಂಪತ್ತಿನ ಶಕ್ತಿ ಇಹುದು. ಗಂಡನಲ್ಲಿರುವ ಹಣವು ತೀರಿ ಹೋದರೆ, ಅವನು ಕಾಸಿಗಿಂತ ಕಡೆಯ ವ್ಯಕ್ತಿ ಎನ್ನಿಸುತ್ತಾನೆ. ತೀರ ಅಲ್ಪನೆನ್ನಿಸುತ್ತಾನೆ. ಕೆಲಸ ಕಾರ್ಯ ಮಾಡದೆ ಇರುವ ಗಂಡನು ಸಂಪತ್ತು ಗಳಿಸಲಾರ. ಅವನನ್ನು ಯಾರೂ ಕಣ್ಣೆತ್ತಿ ನೋಡರು. ಇದು ಸಂಸಾರ ವಂದಿಗರ ಸಹಜ ಸ್ವಭಾವ.

ಕಾರಣ, ಪತಿಯ ಸಂಪತ್ತು ಹಾಳಾಗದಂತೆ ಕಾಯ್ದುಕೊಳ್ಳುವುದೇ ಸತಿಗೆ ಹಿತ. ಏಕೆಂದರೆ ಆ ಸಂಪತ್ತು ಅವಳ ಶಕ್ತಿಯೂ ಆಹುದು. ಇನ್ನು ಪತಿಯಾದರೋ, ದುಡಿದು ಬಾಳುವವನಾಗಬೇಕು. ದುಡಿಯದವರಿಗೆ ಯಾರೂ ಮರ್ಯಾದೆ ನೀಡರು.

೪೩೧

ವಿಟುಡು ಸ್ತ್ರೀನಿರೋಸಿ ವಿಡಿಚಿವೆಟ್ಟುಪಿದಪ, ನೇಡನುನ್ನ ಸಿಗ್ಗು ನೆಂಚನೇಲ ?
ಕುಡಿಚಿನೇಯುಪುಲ್ಲೆ ಗೋತುಲ ದೊರ್ಲದಾ ? ವಿಶ್ವದಾಭಿರಾಮ ವಿನುರ ವೇಮ.


ವಿಟ ಸಿಡಿದು ಲಲನೆಯ ತೊರೆದಟ್ಟಿದ ಬಳಿಕ,
ಎಲ್ಲಿ ಇದ್ದರೇನು ? ನಾಚಲೇಕೆ ?
ಉಂಡು ಒಗೆದ ಎಲೆಯು, ಕಂಡಲ್ಲಿ ಉರುಳದೆ ?
ವಿಶ್ವದಾಭಿರಾಮ ಕೇಳು ವೇಮ.

ವಿಟಪುರುಷನು ಯಾವಳೊಬ್ಬ ಸ್ತ್ರೀಯೊಡನೆ ಕೂಡಿ, ಭೋಗಿಸಿ ಕೊನೆಗೆ ಅವಳನ್ನು ಬಿಟ್ಟ ಮೆಲೆ, ಶೀಲಗೆಟ್ಟ ಅವಳಿಗೆ ಲಜ್ಜೆಯ ಪ್ರಶ್ನೆಯುಳಿಯುವದಿಲ್ಲ. ಇತರರು ಏನನ್ನುವರೋ ಎಂಬ ಭಯ ಮತ್ತು ತನ್ನ ಮನೋನಿಗ್ರಹ ಶಕ್ತಿ ಕುಂದಿಹೋಗುವುದೆಂಬ ಚಿಂತನೆಯೇ ಲಜ್ಜೆಗೆ ಕಾರಣ. ಇಂಥ ಭಯ ಮತ್ತು ಚಿಂತನೆಗಳು ಶೀಲಗೆಡುವ ಮುನ್ನ ಮಾತ್ರ.

ಊಟ ಮಾಡುವ ಮೊದಲು ಮುತ್ತಲ ಎಲೆಯು (ಪತ್ರಾವಳಿ) ಪರಿಶುದ್ಧವಾದ ದ್ದೆಂಬ ಕಲ್ಪನೆ. ಒಂದು ಸಲ ಅದು ಊಟಕ್ಕೆ ಬಳಕೆಯಾದರೆ, ತೀರಿತು; ಅದು ಏತಕ್ಕೂ ಬಾರದು. ಅದನ್ನು ಬೀಸಿ ಒಗೆಯಬೇಕಷ್ಟೇ. ನಾಚುಗೆ ಬಿಟ್ಟು ವರ್ತಿಸುವವಳಿಗೆ "ಎಲೆ ಪತ್ರೋಳಿ" ಎಂದು ನಿಂದ್ಯಾತ್ಮಕವಾಗಿ ನುಡಿಯುವ ವಾಡಿಕೆಯುಂಟು.

[ವಿಟನು ಬಿಟ್ಟ ಹೆಣ್ಣನ್ನು ಉಂಡು ಒಗೆದ ಎಲೆಗೆ ಹೋಲಿಸಿದ ಸರ್ವಜ್ಞ ಮೂರ್ತಿಯ ಪದ್ಯವಿಂತಿದೆ :

" ಅಪ್ಪಿ ಸಪ್ಪಾದವಳ | ನಪ್ಪುವನು ಕಡು ಹೆಡ್ಡ |
ತುಪ್ಪ ಉಂಡೊಗೆದ ಎಲೆನೆಕ್ಕಿ ನಾಯಿ ಬಾಯ್ |
ಚಪ್ಪರಿಸಿದಂತೆ ಸರ್ವಜ್ಞ "]



೪೩೨

ವಿಟುಡುಚೆರಚಿಪಿದಪ ವಿಡಿಚಿವೆಟ್ಟನಯದಿ, ಪೇದಪೆನಿಮಿಟಗನಿ ಪ್ರಿಯಮು ಜೇಯು,
ಕುಪ್ಪಲೋನಿಚೆಪ್ಪ ಕುಕ್ಕತಿನ್ನಟ್ಲಯಾ, ವಿಶ್ವದಾಭಿರಾಮ ವಿನುರ ವೇಮ.

ವಿಟ ಬಳಸಿದ ಬಳಿಕ ತೊರೆದುಳಿಯುತಿರುವಳು,
ಬಡಗಂಡನ ಬಯಸಿ ಬಳಿ ಸಾರಳೆ ?
ತಿಪ್ಪೆ ಗುಂಡಿ ಕೆರಹ ಸೊಣಗ ಕಚ್ಚುವಂತೆ.
ವಿಶ್ವದಾಭಿರಾಮ ಕೇಳು ವೇಮ

ಗಂಡನು ಬಡವನಿದ್ದಾಗ ಅವನೊಡನೆ ನಂಬಿ, ಸಂಸಾರ ಮಾಡಿದರೂ, ಧನ ಸಂಪತ್ತು ತನಗೆ ದೊರೆಯದೆಂದು, ದುಡ್ಡುಳ್ಳವನನ್ನು ನಂಬಿ ಅವನೊಡನೆ ಸೇರಲು ಹೋಗುತ್ತಾಳೆ. ವಿಟನು ಅವಳನ್ನು ಭೋಗಿಸಿ ಬಿಟ್ಟ ಬಳಿಕ, ಮರಳಿ ಬಡವನಾದರೂ ಇರಲಿ, ತನ್ನ ಪೂರ್ವದ ಗಂಡನೊಂದಿಗೆ ಬಾಳುವೆ ಸಾಗಿಸಿದರಾಯಿತು ಎಂದು ಮರಳುತ್ತಾಳೆ.

ಹೆಣ್ಣಿನ ಈ ತೆರನಾದ ನಡೆಯು ತಿಪ್ಪೆಗುಂಡಿಯ ಕೆರವು ಮುಚ್ಚುವ ನಾಯಿಯ ಸ್ವಭಾವದಂತೆ. ಹೇಸುಗೆ ತರಿಸುವ ವಸ್ತುವನ್ನು ಕಚ್ಚಿ, ಕಡಿದು,ಸಂತೋಷಿಸಿದ ನಾಯಿಯು ಕೊನೆಗೆ ಹಸಿದಾಗ ಕೂಳಿಗೆ ಬಂದು ಕಾಯುವುದಷ್ಟೇ.

ಳಷಿಷ

ದುನ್ನಪೋತುಮಡಕ ದುರುಸುಗಾಸಾಗದು, ಎದ್ದುನುಡಕಕಂಟಿ ಹೆಚ್ಚುಕಾದು,
ವುದ್ದರಾಲಿಮಗಡು ಮುದುಸಲಿಮೆಚ್ಚುನಾ ? ವಿಶ್ವದಾಭಿರಾಮ ವಿನುರ ವೇಮ.

ಕೋಣ ಜೊತೆಯ ಕುಂಟೆ ವೇಗವೊಳು ಸಾಗದು.
ಕೋಣ-ಎತ್ತು ಕುಂಟೆ ಹೆಚ್ಚು ಅಲ್ಲ.
ಮುಗುದೆ ಲಲನೆಯಿರಲು ಗಂಡ ಮುದುಕಿ ಮೆಚ್ಚ.
ವಿಶ್ವದಾಭಿರಾಮ ಕೇಳು ವೇಮ.

(ಇತ್ತೀಚಿನ ವರೆಗೆ ಭಾರತದಲ್ಲಿ ಬಹು ಪತ್ನಿತ್ವವು ರೂಢಿಯಲ್ಲಿತ್ತು. ವಯಸ್ಸಾದ ಹೆಂಡತಿಯೊಬ್ಬಳಿರುವಾಗ, ಯೌವನದವಳು ಸವತಿಯಾಗಿ ನಡೆಯಲು ಬಂದರೆ ಗಂಡನ ಪ್ರೇಮ ಕಿರಿಯಳ ಮೇಲೆ ಆಕರ್ಷಿತವಾಗುತ್ತದೆ.) ಇಬ್ಬರೂ ಹೆಂಡಂದಿರು ಮುದುಕಿಯರಾದರೆ ಜೀವನ ರಥ ಹುರುಪು-ಹುಮ್ಮಸ್ಸಿನಿಂದ ಸಾಗದು. ಇದು ಕೋಣಗಳ ಜೋಡಿ ಹೂಡಿದ ನೇಗಿಲಿನಂತೆ, ಮಂದಗತಿಯಿಂದ ಸಾಗುವುದು.

ಇಬ್ಬರು ಹೆಂಡಂದಿರಲ್ಲಿ, ಒಬ್ಬಳು ಮುದುಕಿಯಿದ್ದು ಇನ್ನೊಬ್ಬಳು ತರುಣಿಯಾದರೆ ಆ ಜೋಡಿ ಹೊಂದಿಕೆಯಾಗಿ ಸಾಗದು. ಇದು ಎಮ್ಮೆ ಎತ್ತುಗಳ ಜೋಡಿ ಹೂಡಿದ ನೇಗಿಲಿನಂತೆ, ಅಡ್ಡಡ್ಡವಾಗಿ ಸಾಗಿ ಶ್ರೇಯಸ್ಸದವೆನಿಸದು.

ಇವರಲ್ಲಿ ಗಂಡಾದರೋ, ತರುಣಿಯನ್ನೇ ಮೆಚ್ಚಿ, ಹೆಚ್ಚು ವಯಸ್ಸಾದವಳನ್ನು ನಿರ್ಲಕ್ಷಿಸುತ್ತಾನೆ.

ಳಷಿಳ

ಕಾವುಕಾವುನುನುಚು ಗರುಣಕ್ಕೆಯೇಡ್ಚಿಡಿ, ಶಿಶುವು ಜೇರದೀಸಿ ಚಿತ್ತಮುಲರ,
ಬಾಲನಿಚ್ಚುನಟ್ಟ ಪಡತಿ ಪುಣ್ಯಾತ್ಮರಾ, ವಿಶ್ವದಾಭಿರಾಮ ವಿನುರ ವೇಮ.

' ಕಾಯೊ ' ' ಕಾಯೊ ' ಎಂದು ಕರುಣೆಯಿಂದ ಕರೆವ,
ಕಂದನನ್ನು ಕಂಡು, ಕರೆದು ಮುದಿಸಿ,
ಕೊಟ್ಟು ಹಾಲು ಕುಡಿಸೆ, ಕಡುಪುಣ್ಯವತಿಯಲ !
ವಿಶ್ವದಾಭಿರಾಮ ಕೇಳು ವೇಮ

' ಕಾಪಾಡಿರಿ ' ' ಕಾಪಾಡಿರಿ ' ಎಂದು ಚಿಕ್ಕ ಬಾಲಕರು ಹಸಿದು ಕೂಗುವ ಕರುಣೆಯನ್ನು ಪ್ರಚೋದಿಸುವ ಕೂಗು ಕೇಳಿ, ಅವರನ್ನು ಕರೆತಂದು ಪ್ರೀತಿಯಿಂದ ಹಾಲು ಕುಡಿಸಿದರೆ ಸಂತೋಷವಾಗುವುದಿಲ್ಲವೇ ? ಅಂಥ ಎಳೆಯ ಹೂವಿನ ಮನಸ್ಸಿನ ಬಾಲಕರು ದೇವರೂಪರು. ಅವರಿಗೆ ಹಾಲು ಕುಡಿಸಿ ಕಳಿಸುವವರು ನಿಜವಾಗಿ ಪುಣ್ಯವತಿಯರು.

ಳಷಿಜ

ಮುಂಡಮೋಪಿಕೇಲ ಮುತ್ಯಾಲಪಾಪಟ ? ವನ್ನೆಲೆಲ್ಲ ಬುಣ್ಯವತಿಕಿಗಾಕ,
ಕುಕ್ಕ ಕೇಲತಲಪ ಗುಚ್ಚುಲಪಾಲಕೀ, ವಿಶ್ವದಾಭಿರಾಮ ವಿನುರ ವೇಮ.

ಮುಂಡೆಗೇಕೆ ಬೇಕು, ಮುತ್ತೆ ದೆ ಬೈತಲೆ ?
ರತುನ ಹಾರ ಪುಣ್ಯವತಿಗೆ ಹೊರತು,
ಸೊಣಗಗೇಕೆ ಪುಚ್ಚದಾ ಪಾಲಕಿಯಾಸೆ ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀ ತನ್ನ ಕೇಶಾಲಂಕಾರ ಮಾಡಿಕೊಳ್ಳುವುದು. ಆಕರ್ಷಕಳಾಗಿ ಕಾಣುವಾಸೆಯಿಂದ ಹೆರಳು ಹಾಕುವುದು, ಬೈತಲೆ ತೆಗೆಯುವದು, ಪರ ಪುರುಷರನ್ನೋ ಇಲ್ಲವೆ ಪತಿಯನ್ನೋ ಆಕರ್ಷಿಸುವ ಉದ್ದೇಶದಿಂದ ಮಾತ್ರ ಚಿಕ್ಕ ಮಕ್ಕಳು ಜನರ ಪ್ರೀತಿ ವಾತ್ಸಲ್ಯ ಸಂಪಾದಿಸಲು ಕೇಶಾಲಂಕಾರ ಮಾಡಿಕೊಳ್ಳುತ್ತಾರೆ.

ಆದರೆ ವಿಧವೆ ಪತಿ ವಿಹೀನಳು; ಪತಿಯೇ ಮಡಿದು ಹೋದ ಬಳಿಕ ಅವಳು ಬೈತಲೆ ಇತ್ಯಾದಿ ಕೇಶಾಲಂಕಾರ ರತ್ನಹಾರಾದಿ ಕಂಠಾಭರಣ ಧಾರಣೆಯ ಮಾರ್ಗಗಳಿಂದ ಯಾರನ್ನು ಆಕರ್ಷಿಸಬೇಕು ? ಆದ್ದರಿಂದ ಅವಳಿಗೆ ಬೈತಲೆಯೇಕೆ? ರತ್ನಹಾರಾದಿ ಆಭರಣಗಳೇಕೆ?

ಪಾಲಕಿಯಲ್ಲಿ ಕುಳಿತು ಹೋಗುವವರು ಧನಿಕರು: ರಾಜ ಮನೆತನದವರು ಪಾಲಕಿಯನ್ನು ಬಣ್ಣ ಬಣ್ಣದ ತೋರಣ ಪುಚ್ಚಗಳಿಂದ ಶೃಂಗರಿಸಿ, ಇವರನ್ನು ಕುಳ್ಳಿರಿಸಿ ಹೊತ್ತು ಒಯ್ಯುತ್ತಾರೆ. ಆದರೆ ನಾಯಿಗೆ ಅಂಥ ಯಾವುದೇ ಮಾನಬೇಕಾಗಿಲ್ಲ. ತನ್ನ ಕುಕ್ಕಲೋಟ ಅದಕ್ಕೆ ಒಳ್ಳೆದು ?

ಜನರು ತಮ್ಮ ಸ್ಥಾನಮಾನ, ಪರಿಸ್ಥಿತಿಗಳಿಗೆ ತಕ್ಕಂತೆ ಇರಬೇಕು. ಅವರಿಂದ ಅವರಿಗೆ ಕಲ್ಯಾಣ ಉಂಟು.

ಳಷಿಟ

ಮಗನಮೀದ ಭಕ್ತಿಮಾನ ಕುಂಡಿನಕಾಂತ, ಮೂಡು ಲೋಕಮುಲನು ಮುಕ್ತಿಗನುನು,
ಮಗುವಲಂದರಕುನು ಮಗಲೆ ದೇವತಲಯಾ, ವಿಶ್ವದಾಭಿರಾಮ ವಿನುರ ವೇಮ.

ಪತಿಯ ಮೇಲೆ ಭಕ್ತಿ ಕಳೆದುಕೊಳದ ಕಾಂತೆ,
ಮೂರು ಲೋಕದೊಳಗೆ ಮುಕ್ತಿ ಪಾತ್ರ
ಸತಿಮಣಿಯರಿಗೆಲ್ಲ ಪತಿಯೆ ದೇವದೇವ.
ವಿಶ್ವದಾಭಿರಾಮ ಕೇಳು ವೇಮ.

(ಇಹ, ನರಕ ಮತ್ತು ಸ್ವರ್ಗ ಇವು ಮೂರು ಲೋಕಗಳು. ಭೌತಿಕ ದೇಹವನ್ನು ಮಧ್ಯಮವಾಗಿಸಿಕೊಂಡು ಜೀವ ಕಾರ್ಯನಿರತವಾದುದು ಇಹ ಲೋಕ. ಇಲ್ಲಿ ವಸ್ತುಗಳು ಘನ, ದ್ರವ ಮತ್ತು ವಾಯುರೂಪಗಳಲ್ಲಿ ಅನುಭವವೇದ್ಯವಾಗುತ್ತವೆ ಭೌತಿಕ ಜಗತ್ತು

ಮರಣ ಪರ್ಯಂತ ಗೋಚರಿಸುವುದು. ಅನಂತರ ದೇಹದಲ್ಲಿರುವ ಸೂಕ್ಷ್ಮ ಭೌತಿಕ ವಸ್ತುವಿನೊಂದಿಗೆ ಪ್ರಾಣ ಬಿಡುಗಡೆ ಹೊಂದುವುದು. ಸೂಕ್ಷ್ಮಭೌತಿಕ ಲೋಕದಲ್ಲಿ ನಮ್ಮ ಪೂರ್ವದ ವಿಚಾರಗಳು ಅತೀಂದ್ರಿಯ ಸುಖದತ್ತ ತಿರುಗಿದ್ದರೆ, ಸೂಕ್ಷ್ಮಭೌತಿಕ ಲೋಕದಲ್ಲಿ ಆನಂದ ಹೊಂದುವ ಭಾಗ್ಯವುಂಟು. ಏಕೆಂದರೆ ಅಲ್ಲಿ ನಮ್ಮ ಮನದಲ್ಲಿ ಬಂದ ಕಲ್ಪನೆಗಳೆಲ್ಲ ರೂಪುಗೊಂಡು ನಿಲ್ಲುವುವು. ಕಣಸಿನ ಸ್ಥಿತಿಯಂತೆ. ಇನ್ನು ಐಂದ್ರಿಕ ಭೋಗ, ಕೇಳು ಪ್ರವೃತ್ತಿ, ಕುಹಕ ವಿಚಾರಗಳೇ ಪೂರ್ವದಲ್ಲಿದ್ದರೆ, ಸೂಕ್ಷ್ಮಭೌತಿಕ ಲೋಕದಲ್ಲಿ ಕಷ್ಟ ಪಡಬೇಕಾಗುತ್ತದೆ. ಏಕೆಂದರೆ, ಭೌತಿಕ ಲೋಕದಲ್ಲಿ ಇಂಥ ಭೋಗವಸ್ತು ದೊರಕಿಸಿದಷ್ಟು ಆಗ ಸುಲಭವಲ್ಲ. ಅದರಿಂದ ಯಾತನೆ ಗೋಳು ಸಂಕಟ ಅನುಭವಿಸಬೇಕಾಗುವುದು.) ಎಲ್ಲ ಲೋಕಗಳು ಇಲ್ಲಿಯೇ ಇದ್ದು, ನಮ್ಮ ಅರಿವಿನ ಮಟ್ಟದ ಮೇಲಿಂದ ಅನುಭವವೇದ್ಯವಾಗುತ್ತವೆ.)

ಪತಿಯ ಮೇಲೆ ಭಕ್ತಿಯನ್ನು ಕಳೆದುಕೊಳ್ಳದ ಹೆಂಡತಿ, ಸುವಿಚಾರಿ, ಸದಾಚಾರಿ. ಅವಳ ಮನಸ್ಸು ಹಸನಾದುದು. ಸೂಕ್ಷ್ಮಜ್ಞಾನ ಉಳ್ಳದ್ದು. ಇಂಥವಳಿಗೆ ಇಹದಲ್ಲಿ ಮಾನವುಂಟು. ಸ್ವರ್ಗದ ಸೌಖ್ಯವುಂಟು. ನರಕಯಾತನೆಯ ಭಯವಿಲ್ಲ. ಮೂರು ಲೋಕಗಳಲ್ಲಿ ಅವಳು ಮುಕ್ತಳು. ಒಳ್ಳೆಯ ಹೆಂಡತಿಗೆ ಪತಿಯೇ ಪರಮದೈವ.

೪೩೭

ಭಾವ ಮರಸಿ ತನ್ನು ಭಾರ್ಯನೇವಿಂಚಿನ, ನಿಂಟಕ್ಕೆನ ನಗುನು ನೀಶ್ವರುಂಡು,
ಅದಿಯುಲೇಕ ಬ್ರತುಕು ಟಥಮುಂಬು ಭುವಿಲೋನ, ವಿಶ್ವದಾಭಿರಾಮ ವಿನುರ ವೇಮು.

ಮನವಾರೆ ಮುದಿಸುವ ಮಡದಿ ತನ್ನವಳಿರೆ,
ಮನೆಗಾದರು ಒಡೆಯನೆನಿಸಬಹುದು.
ಇನಿತಾದರು ಇರದ ಬದುಕು ಅಧಮ ಜಗದಿ
ವಿಶ್ವದಾಭಿರಾಮ ಕೇಳು ವೇಮ.

ಪತಿ-ಪುತ್ರರ ಬೇಕು ಬೇಡಗಳು, ಸುಖಸಂತೋಷಗಳು, ಮಾನಾಪಮಾನಗಳು ತನ್ನವೆಂದು ತಿಳಿಯುವ ಹೆಂಡತಿ ಗಂಡನ ಅರ್ಧಾಂಗಿ ಎನಿಸುವಳು. ದಾಂಪತ್ಯದ ಸುಖಾನುಭವವಿರುವುದು ಹೆಚ್ಚಾಗಿ ಸತಿಪತಿಯರ ಒಲಿಮೆಯಲ್ಲಿ. ಮನಸ್ಸಿನಲ್ಲಿ ಪ್ರೀತಿಸುವ ಹೆಂಡತಿ ಇದ್ದರೆ, ಪತಿ ಎಂಥ ಬಡವನೇ ಇರಲಿ, ಆಸ್ತಿಹೀನನೇ ಇರಲಿ; ತನ್ನ ಮನೆಗಾದರೂ ತಾನು ಒಡೆಯನಾಗಿ, ಗೌರವ ಪಡೆದು ಇರಬಹುದು. ಆದರೆ ಸಂಸಾರವಂದಿಗನಿಗೆ ಏನೂ ಇಲ್ಲದಿದ್ದರೂ, ಪ್ರೀತಿಸುವ ಹೆಂಡತಿಯಾದರೂ ಇದ್ದರೆ, ಎಷ್ಟೋ ಸಮಾಧಾನ. ಅದೂ ಇಲ್ಲದಿದ್ದರೆ, ಅವನ ಬಾಳು ತುಂಬಾ ಕೇಳಿನ್ನಿಸುವುದು.

೪೩೮

ಪಡುಚು ನಿಚ್ಚಿನತನಿ ಬತ್ತೆಮಿಚ್ಚಿನವಾನಿ, ಕಡುಪು ಚಲ್ಲಜೇಸಿ ಘನತ ನಿಡುಚು,
ನಡುವನೇರ ನತಡು ನಾಲಿಮುಚ್ಚೇಕದಾ? ವಿಶ್ವದಾಭಿರಾಮ ವಿನುರ ವೇಮು.

ಮಡದಿ ನೀಡಿದವನ ಒಡಲು ತುಂಬಿದವನ,
ಒಡಲು ತಣಿಸಿ, ಘನತೆ ಮೆರೆಸದವನು,
ನಡತೆ ತಪ್ಪಿದವನು; ನೀಚಾಧಮನವನು.
ವಿಶ್ವದಾಭಿರಾಮ ಕೇಳು ವೇಮ

ಕನ್ನೆಯ ತಂದೆ ಅವಳನ್ನು ಪ್ರೀತಿಯಿಂದ ಸಾಕಿ ಸಲಹುತ್ತಾನೆ. ಕನ್ನೆ ಅವನ ಕರುಳಿನ ಕೂಸು. ಬೇರೊಬ್ಬನ ಸುಖ-ಭೋಗಕ್ಕಾಗಿ ಮಗಳನ್ನು ಪೋಷಿಸಿ, ಬೆಳೆಸುವವನು ನಿಜವಾಗಿ ಮಹಿಮನು. ಬೇರೆಯವರು ಹಸಿದಾಗ, ಅನ್ನ ನೀಡುವವನೂ ಮಹಿಮನು. ಇಂಥ ಪರೋಪಕಾರಿಗಳ ಹೃದಯಕ್ಕೆ ಶಾಂತಿಯಾಗುವಂತೆ ನಡೆದುಕೊಳ್ಳದವನು ಉಪಕಾರಗೇಡಿ. ಮಾವ ಮತ್ತು ಪೋಷಕನ ಘನತೆಯನ್ನು ಎತ್ತಿ ಮೆರೆಸದವನು, ದುರಾಚಾರಿಯು, ನೀಚನು; ಅಧಮನು.

೪೩೯

ತರುಣಿ ಪುಣ್ಯವತಿಗ ವರುನಿಬಟ್ಟಯೆಯಗು, ಪಾಪಿ ನಿಯಗು ಮಗನಿಪ್ರಾಪುವಲನ,
ಭರ್ತವರ್ತನಂಬಿ ಪಡತುಲಯಂದುಂಡು, ವಿಶ್ವದಾಭಿರಾಮ ವಿನುರ ವೇಮು

ತರುಣಿ ಪುಣ್ಯವತಿ; ವರನರನ ಕರಪಿಡಿಯೆ,
ತಿರುಗಿ ಪಾಪಿ; ಪತಿಯು ಎಂತೊ ಇರಲು
ಪುರುಷನ ನಡೆವಳಿಯೆ ನಾರಿಯೊಳು ಇಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

(ಸ್ಮೃತಿಕಾರ ಮನು ಪತಿತ ಪುರುಷನ ನಡೆವಳಿ ಹೇಗಿದ್ದರೂ ಸ್ತ್ರೀ ಅವನನ್ನು ದೇವರಂತೆ ತಿಳಿಯಬೇಕೆನ್ನುತ್ತಾನೆ: "ಗುಣ ವಿಹೀನನಿರಲಿ, ಪರಸ್ತ್ರೀಯರಲ್ಲಿ ಅನುರಕ್ತನಿರಲಿ, ಸದಾಚಾರವಿಲ್ಲದಿರಲಿ, ಶ್ರದ್ಧೆಯ ಸತಿ ಯಾವಾಗಲೂ ಗಂಡನನ್ನು ದೇವರಂತೆ ಪೂಜಿಸುತ್ತಿರಬೇಕು. "....." ಪುರುಷರಿಗೆ ದುರ್ನಡತೆಯ ಬಗ್ಗೆ ಇಷ್ಟೊಂದು ಸಡಿಲು ನಿಯಮ ತೋರಿದ, ಮನು, ಸ್ತ್ರೀಯಳು ಶೀಲಗೆಟ್ಟಾಗ, ಪುರುಷನಿಂದ ಮಾರಲ್ಪಡುವುದಕ್ಕೆ ಸಹ ಅನುಮತಿ ಇತ್ತಿದ್ದರೂ ಅವಳನ್ನು ಸ್ವತಂತ್ರಗೊಳಿಸಲಾರ. "ಮಾರಾಟ ಮಾಡಲಿ, ಅಲ್ಲಗಳೆಯಲಿ, ಸ್ತ್ರೀ ತನ್ನ ಗಂಡನಿಂದ ಬಿಡುಗಡೆ ಹೊಂದಳು."

ನಡೆವಳಿಯ ನಿಯಮ ಸ್ತ್ರೀ ಪುರುಷರಿಬ್ಬರಿಗೂ ಒಂದೇ. ಒಬ್ಬರು ಶೀಲಗೆಟ್ಟಾಗ ಇನ್ನೊಬ್ಬರ ಮೇಲೆ ಅದರ ಪರಿಣಾಮ ತಂತಾನೇ ಆಗುವುದು.

ಸದ್ವರ್ತನೆಯ, ಸುವಿಚಾರಿ ಸ್ತ್ರೀ ಪುಣ್ಯವಂತೆ. ಇಂಥವಳು ಮಡದಿಯಾಗಿರುವಾಗ ಪುರುಷ ತತ್ಪೂರ್ವದಲ್ಲಿ ಪಾಪದ ಕಾರ್ಯ ಮಾಡಿದ್ದರೂ, ತದನಂತರ ಸುಧಾರಿಸಬೇಕು. ಇಲ್ಲದಿದ್ದರೆ, ಅಂಥ ಪುರುಷನ ನಡಿಲು ವರ್ತನೆಯು ನಾರಿಯಲ್ಲಿಯೂ ಪ್ರತಿಧ್ವನಿಸುವುದು.

ಪದ್ಯ ೪೪೦

ತನ್ನು ಗನ್ನಯಟ್ಟ ತಲ್ಲಿವಂಟದಿ ಸುಮ್ಮು, ಅನ್ಯಕಾಂತ ನ್ಯಾಯ ಮುರಸಿಚೂಡ,
ಗನ್ನದಾನಿಜನುಲು ಕಾನಂಗಲೇರಯಾ, ವಿಶ್ವದಾಭಿರಾಮ ವಿನುರ ವೇಮ.

ತನ್ನ ಹೆತ್ತು ಹೊತ್ತ ತಾಯಿಯಂತೆ ಕಾಣು,
ಅನ್ಯರ ಸತಿ; ನ್ಯಾಯವರಿತು ನೋಡಿ,
ತನ್ನ ತಾಯಿಯಂತೆ ಕಾಣಲಾರ ನರನು.
ವಿಶ್ವದಾಭಿರಾಮ ಕೇಳು ವೇಮ.

ನರನು ಜನಿಸಿದುದು, ಯೋನಿಯಿಂದ. ಬಾಲನಿದ್ದಾಗ ಅವನ ಉದರ ಪೋಷಣೆಯಾದುದು ಕುಚಗಳಿಂದ, ಈರೆಸ್ತ್ರೀಯರ ಯೋನಿ ಕುಚಗಳ ಮೇಲೆ ಮೋಹ ತಾಳುವ ನರನು ತನ್ನ ತಾಯಿಯ ಯೋನಿಕುಚಗಳನ್ನು ಸ್ಮರಿಸಿಕೊಳ್ಳಬೇಕು. ತನ್ನ ಜನನ ಪೋಷಣೆಯನ್ನೂ ಸ್ಮರಿಸಿಕೊಳ್ಳಬೇಕು. ಅಂದರೆ ಬೇರೆಯವರ ಪತ್ನಿಯರನ್ನು ತಾಯಿಯಂತೆ ಕಾಣುವ ದೃಷ್ಟಿ ಬೆಳೆಯುತ್ತದೆ. ಆದರೆ ಸಾಮಾನ್ಯವಾಗಿ ಜನರು ಈ ತೆರನಾದ ಭಾವನೆಯನ್ನು ಹೊಂದಿರುವುದಿಲ್ಲ. ಕಾಮ-ಪ್ರೇರಿತರಾಗಿ ಪರಸ್ತ್ರೀಯರ ಮೇಲೆ ಕೀಳು ದೃಷ್ಟಿ ಹರಿಸಿ ಸಂಕಟಕ್ಕೀಡಾಗುತ್ತಾರೆ.

(ಸಮಾನಾರ್ಥವೀಯುವ ಸರ್ವಜ್ಞಮೂರ್ತಿಯ ಪದ್ಯ ಹೀಗಿದೆ:

"ಅನ್ಯ ಸತಿಯನು ಕಂಡು | ತನ್ನ ಹೆತ್ತವಳೆಂದು |
ಮನ್ನಿಸಿ ನಡೆವ ಪುರುಷರಿಗೆ, ಇಹಪರದಿ |
ಮುನ್ನ ಭಯವಿಲ್ಲ, ಸರ್ವಜ್ಞ ||"

ಪದ್ಯ ೪೪೧

ಐಕ್ಯಮತ್ಯಮೆನ್ನ ನಾಲ್ಕಗಲಕುವಾಸಿ, ಮಗನಿ ಬುದ್ಧುಲೆಲ್ಲ ಮಗುವನೇರ್ಪು,
ದಾನಿರಕ್ಷಣಂಬೆ ವಾನಿರಕ್ಷಣಮಗು, ವಿಶ್ವದಾಭಿರಾಮ ವಿನುರ ವೇಮ.

ಒಂದಾದ ದಂಪತಿ ಚಂದದ ಸಂಸಾರ,
ನಂದನನ ನಡೆನುಡಿ ನಂದಿನಿಯೊಳು;
ಸತಿಗಿತ್ತ ರಕ್ಷಣೆಯೆ ಸ್ವಂತಕ್ಕೆ ರಕ್ಷಣೆ
ವಿಶ್ವದಾಭಿರಾಮ ಕೇಳು ವೇಮ.

ಸತಿಪತಿಯರು ಪರಸ್ಪರ ಪ್ರೇಮ–ಸಹಕಾರಗಳಿಂದ ಇರತೊಡಗಿದರೆ, ಅವರ ಸಂಸಾರ ಚೆಲುವಾಗಿರುವುದು. ನಲ್ಲನ ನಡೆ–ನುಡಿಗಳೇ ನಲ್ಲೆಯಲ್ಲಿ ಕಾಣಬರುವವು- ಗಂಡನ ಅನಿಸಿಕೆ, ಬೇಕು-ಬೇಡಗಳೇ, ಹೆಂಡತಿಯ ಅನಿಸಿಕೆ, ಬೇಕು-ಬೇಡಗಳಾಗುತ್ತವೆ. ಗಂಡನು ಹೆಂಡತಿಗೆ ನೀಡುವ ರಕ್ಷಣೆಯಿಂದ ಅವಳ ಮಾನ ಉಳಿಯುವುದು. ಅವಳ ಮಾನದಿಂದ ತನ್ನ ಮಾನ. ಕಾರಣ ಸತಿಗಿತ್ತ ರಕ್ಷಣೆಯು ಸ್ವಂತದ ರಕ್ಷಣೆಯಂತೆ.

ಪದ್ಯ ೪೪೨

ವಾದ ಮಾಡಿತಿಟ್ಟು ವರುನನೆನ್ನರಿ ನೈನ, ಜೇರರಾದಟನ್ನ ಜೇಟುದೆಚ್ಚು,
ಗಡುಸುರಾಲು ತೆಲಿಯು ವಡಿಸೇಲ ರಾಯಿರಾ, ವಿಶ್ವದಾಭಿರಾಮ ವಿನುರ ವೇಮ.

ವಾದ-ನಿಂದೆ; ಗಂಡನೇನು ಮಿಂಡನೇನು ?
ಕೂಡಬಾರದೆನಲು ಕೇಡಿಯಾಕೆ.
ಗಡಸುಗಾರ್ತಿ ಅರಿಯೆ, ಒಗೆದ ಕವಣೆ ಗಲ್ಲು.
ವಿಶ್ವದಾಭಿರಾಮ ಕೇಳು ವೇಮ.

ಗಡಸುಗಾರ್ತಿಯಾದ ಹೆಣ್ಣು ಸೂಕ್ಷ್ಮವರಿಯದವಳು. ಹದ್ದುಮೀರಿ ವರ್ತಿಸುವವಳು. ಅಂಥವಳು ಲಗ್ನ ಮಾಡಿಕೊಂಡ ಗಂಡನೊಡನೆ ಇರಲಿ, ಇಲ್ಲವೆ ಕೂಡಿಕೊಂಡು ಬಿಟ್ಟಪುರುಷನೊಡನೆ ಇರಲಿ, ಮಾತು–ಮಾತಿಗೆ ವಾದಿಸಲು ಮತ್ತು ನಿಂದಿಸಲು ತೊಡಗುತ್ತಾಳೆ. ಇಂಥ ಜೊತೆ ಬೇಡವೆನಿಸಿ, ಅವಳನ್ನು ಕೂಡದೆ ದೂರವಿರಬೇಕೆಂದರೆ, ಅವಳು ಸುಮ್ಮನೆ ಬಿಡಳು. ಕೇಡು ಬಗೆಯಲು, ಉದ್ಯುಕ್ತಳಾಗುತ್ತಾಳೆ. ಗಡಸುಗಾರ್ತಿ ಹೆಣ್ಣು, ಜೋರಿನಿಂದ ಬೀಸಿ ಒಗೆದ ಕವಣೆಗಲ್ಲಿನಂತೆ. ಬೀಸಿದರಾಯಿತು. ಅದುಯಾರಿಗಾದರೂ ಹೋಗಿಬಡಿಯದೆ, ನಿಲ್ಲದು.

ಪದ್ಯ ೪೪೩

ನಾವಸತ್ಯಮೆಲ್ಲ ನಡಿಸಮುದ್ರಮುಲೋನ, ಬಂಡಿಸತ್ಯಮೆಲ್ಲ ಬಟ್ಟಬಯಲು,
ನಾಡುದಾನಿಸತ್ಯ ಮೇಡನುಲೇದುರಾ, ವಿಶ್ವದಾಭಿರಾಮ ವಿನುರ ವೇಮ.

ನಾವೆ ಸತ್ಯವೆಲ್ಲ ನಡುನೀರಿನಲ್ಲಿ.
ಬಂಡಿ ಸತ್ಯವೆಲ್ಲ ಬಯಲಿನಲ್ಲಿ,
ನಾರಿ ಸತ್ಯವರಿಯೆ ದಾರಿ ಎಲ್ಲು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ನೀರು ಒಳ ಸೇರುವಂಥ ಬಿರುಕು-ತೂತುಗಳಿವೆಯೋ ಹೇಗೆ? ಎಂಬಿತ್ಯಾದಿ ನಾವೆಯ ಸ್ಥಿತಿ; ಗಾಳಿಯ ರಭಸಕ್ಕೆ ಹೊರಳಿ ಮುಳುಗದಂತೆ ಅದರ ರಚನೆಯುಂಟೇ ಹೇಗೆ ಎಂಬಿತ್ಯಾದಿ ನಾವೆಯ ರಚನೆ ಇತ್ಯಾದಿ ವಿಷಯಗಳ ಪರೀಕ್ಷೆಯು ನಾವೆಯು ನಡುನೀರಲ್ಲಿ ಚಲಿಸುವಾಗ ಒದಗುವ ವಿಪತ್ಕಾಲದಲ್ಲಿ ಅರಿವಾಗುತ್ತದೆ. ಅದನ್ನು ಅಲ್ಪ ಮುನ್ಸೂಚನೆಯಿರತು ತಪ್ಪಿಸಬಹುದು. ಇನ್ನು ಬಂಡಿ-ಗಾಡಿಯು ಬಟ್ಟ ಬಯಲಿನಲ್ಲಿ ಚಲಿಸುವಾಗ ಅದರ ಗಾಲಿ, ಅಚ್ಚು ಇತ್ಯಾದಿ ಗಟ್ಟಿ ಮುಟ್ಟಾಗಿ ಇವೆಯೋ ಇಲ್ಲವೋ ಗೊತ್ತಾಗುವುದು. ಆದರೆ ಹೆಣ್ಣಿನ ಸತ್ಯ ಪರೀಕ್ಷೆ ಮಾಡಲು ಅವಳ ಸ್ವಯಂ ಕಥನ ಹೊರತು ಬೇರಾವ ಮಾರ್ಗಗಳೂ ಇಲ್ಲ.

(ಸರ್ವಜ್ಞ ಮೂರ್ತಿಯು ಮೇಲಿನ ಭಾವ ಸೂಚಿಸಿದ ಪದ್ಯವಿಲ್ಲಿದೆ :
ಹೆಂಡಿರ ಕೌತುಕವ| ಗಂಡರು ಬಲ್ಲರೇ?
ಗುಂಡಿ ನೀರೊಳಗೆ ಕಿರಿ ಮೀನ ಹೆಜ್ಜೆಯನು
ಕಂಡಾತನಾರು ಸರ್ವಜ್ಞ ||")

ಳಳಳ

ವಶಮುಕಾನಿಯಾಲಿ ವೈರಮೇಮನವಚ್ಚು ? ಯಶಮುಜೆರುಚುಗಾನಿ ಯನುವುಪಡೆದು
ಕೊಸರುಟೆಲ್ಲ ದಾನಿಕೋರ್ಕೆದೀರ್ಚುಟಯೆ ವಿಶ್ವದಾಭಿರಾಮ ವಿನುರ ವೇಮ.

ವಶವಾಗದ ನಾರಿ ವೈರವೆಷ್ಟು ನುಡಿಯೆ ?
ಯಶವ ಕೆಡಿಸಲನುವು ನೀಡಬೇಡ.
ಕೊಸರಿ ಕೊಳುವುದೆಲ್ಲ ಆಸೆ ಹಿಂಗುವನಕ
ವಿಶ್ವದಾಭಿರಾಮ ಕೇಳು ವೇಮ.

ತನಗೆ ವಶವಾಗದಂಥ ಸ್ತ್ರೀ ತನ್ನ ಬಗ್ಗೆ ಮಾಡುವ ವೈರವೆಷ್ಟೆಂದು ವರ್ಣಿಸಲಸಾಧ್ಯ. ಆದರೂ ಅವಳಿಂದ ಕೀರ್ತಿಯು ಕೆಡದಂತೆ ಜಾಗೃತರಾಗಿರಬೇಕು, ಅಂಥವಳು ಮರಳಿ, ಮರಳಿ ತನ್ನ ಕಾಮಿತಾರ್ಥ-ಗಳನ್ನು ತೀರಿಸಿಕೊಳ್ಳಲು, ಬಿಗುವು ಬಿಮ್ಮಾನದಿಂದ ವರ್ತಿಸುವಳೇ ಹೊರತು, ತನ್ನ ಗಂಡನಿಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದಲ್ಲ.

ಳಳಜ

ವರುಡುಚಕ್ಕನೈನ ವಜ್ರಾಲಗನಿಯೈನ, ದಳುಕು ಮೆರಪುವಂಟ ತತ್ತ್ವಮುನ್ನ,
ಅನ್ಯಪುರುಷವಾಂಛ ಯೂಡುದಾನಿಕಿನುಂಡು, ವಿಶ್ವದಾಭಿರಾಮ ವಿನುರ ವೇಮ.

ವರನು ಚೊಕ್ಕಟವಿರೆ, ವಜ್ರವೊನೆಯಾಗಿರೆ,
ತೊಳಗುತ ಬೆಳಗುತಿಹ ತತ್ತ್ವವಿರಲು
ಪರಪುರುಷರ ಆಸೆ ನೃತ್ಯಗಾತಿಗಿಹುದು.
ವಿಶ್ವದಾಭಿರಾಮ ಕೇಳು ವೇಮ.

ನೃತ್ಯಗಾತಿ ಚಂಚಲ ಚಿತ್ತದವಳು. ಅ ವಳು ವರಿಸಿದ ಪತಿಯು ಎಷ್ಟೇ ಸುಂದರನಾಗಿರಲಿ ವಜ್ರದ ತುಂಡಿನಂತೆ ಗಟ್ಟಿಯಾಗಿ ಶಾಂತಿಯುಕ್ತ ದೇಹಿಯಾಗಿರಲಿ, ಆದರ್ಶ ದಾಂಪತ್ಯ ಸುಖವನ್ನು ಸಾಧಿಸಲು ಹೇಳಿದ ಮಿನ್ನ ಮಿನ್ನ ತತ್ತ್ವಗಳು ಎದುರಿಗಿರಲಿ, ಆದರೂ ಸಹ ನೃತ್ಯಗಾತಿ ಪರಪುರುಷರ ಮೇಲೆ ಆಸೆ ಗೆಯ್ಯುವ ತನ್ನ ಚಾಳಿಯನ್ನು ಬಿಡಲಾರಳು.

ಳಳಟ

ಮಾನಧನವು ವಿಡದು ಮರಿ ಪುಣ್ಯವತಿಯೈನ ಬೂನಿ ಪತಿಕಿ ಭಕ್ತಿ ಹೊಸಗ ಜೇಯು
ಲೋನಮೆಚು ಚುಂಡು ಲೋಗುಟುಕನವಲೆ, ವಿಶ್ವದಾಭಿರಾಮ ವಿನುರ ವೇಮ

ಮಾನಧನವ ಬಿಡದೆ, ಮತ್ತೆ ಪುಣ್ಯವಂತೆ,
ವನಿತೆ, ಪತಿ ಪೂಜಿಪ ಭಕ್ತಿವಂತೆ.
ತನ್ನೊಳಗೆ ನೆಚ್ಚುವ ಅವಳೊಳಗುಣವರಿಯ.
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಹೆಂಡತಿ ತನ್ನ ಮತ್ತು ತನ್ನ ಪತಿಯ ಮಾನವನ್ನೂ, ಸಂಪತ್ತನ್ನೂ ರಕ್ಷಿಸುತ್ತಾಳೆ; ಸತ್ಕರ್ಮಗಳನ್ನಾಚರಿಸಿ ಪುಣ್ಯ ಪಡೆಯುತ್ತಾಳೆ. ಪತಿಯನ್ನು ಭಕ್ತಿಪೂರ್ವಕ ಪೂಜಿಸುತ್ತಾಳೆ; ಅವನನ್ನು ಒಳಗೊಳಗೆ ಮೆಚ್ಚುತ್ತಾಳೆ. ಅವಳಲ್ಲಿ ಮನೆಮಾಡಿದ ಇಂಥ ಸದ್ಗುಣಗಳನ್ನು ಪತಿಯು ಎಷ್ಟೋ ವೇಳೆ ಅರಿಯದೆ ಸತಿಯ ಬಗ್ಗೆ ಅಜ್ಞಾನದಿಂದ ವರ್ತಿಸುತ್ತಾನೆ.

ಳಳಒ

ಮುಗಡು ತಪ್ಪುಗನಕ ಮನಸಿಚ್ಚಿಯುನ್ನನು, ಸಹಜ ಗುಣಮುವಿಡದು ಜಾರಕಾಂತ,
ಪಿಂಡಿ ತಿನೆಡಿಕಿ-ಕ್ಕ ವೆಂಟಕಾಶಿಂಚದಾ, ವಿಶ್ವದಾಭಿರಾಮ ವಿನುರ ವೇಮ.

ಪತಿಯ ತಪ್ಪು ಕಂಡು, ಮನದೊಳಿಟ್ಟುಕೊಂಡು,
ಸಹಜ ಗುಣವ ಬಿಡಳು; ಜಾರ ಹೆಣ್ಣು.
ಹಿಟ್ಟು ತಿಂದ ನಾಯಿ ಹೇಸಿಗೆಗಾಶಿಸದೆ?
ವಿಶ್ವದಾಭಿರಾಮ ಕೇಳು ವೇಮ.

ಗಂಡನಿದ್ದರೂ ಪರಪುರುಷರ ಸಂಗವನ್ನು ಆಶಿಸುವವಳು ಜಾರ ಹೆಣ್ಣು. ಇವಳ ಸಹಜ ಗುಣವು ಅನ್ಯಪುರುಷರಲ್ಲಿ ಅನುರಕ್ತಿ ತಾಳುವುದು. ತನ್ನ ಈ ತಪ್ಪು ನಡೆವಳಿಯು ತನ್ನ ಗಂಡ-ತನ್ನೊಡನೆ ಸರಿಯಾಗಿ ವರ್ತಿಸದೆ ಇರುವುದರ ಪರಿಣಾಮವೆಂದು ಜಾರೆ ಹೇಳುತ್ತಾಳೆ. ಅವನೊಮ್ಮೆ ಗೆಯ್ದ ತಪ್ಪನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸಾಗುವಳು.

ನಾಯಿಯ ಸಹಜ ಗುಣ ಹೇಸುಗೆ ತಿನ್ನುವುದು. ನಾಯಿಗೆ ಮುದ್ದೆ-ರೊಟ್ಟಿ ಅಂಬಲಿ ಹಾಕುತ್ತ ಸಲಹಿದರೂ, ನಾಯಿ ಹೇಸುಗೆ ಆಶಿಸದೆ ಇರದು. ಅಲ್ಲವೇ ?

ಳಳಲ

ಬೊಲ್ಲಿಮೂಟಲಾಡು ಭೋಗಮುದಾನಿತೋ, ದೊಲ್ಲಿ ಡುಲ್ಲ ನಿಲ್ಲುಗುಲ್ಲ ಜೇಸಿ,
ವೆಲ್ಲಿ ರಮ್ಮಟಂಚು ವೆಡಲಿಂಚು ನಿಂಟನಿ ವಿಶ್ವದಾಭಿರಾಮ ವಿನುರ ವೇಮ

ಸುಳ್ಳು ನುಡಿವ ರಂಡೆ ಭೋಗಕೂಪಕೆಳೆದು,
ಉಳ್ಳಾಡಿಸಿ ಮನೆ ನಾಶಗೊಳಿಸಿ,
ತಳ್ಳುವಳು ಹೊರಗಡೆ ತನ್ನ ಮನೆಯೊಳಿಂದ.
ವಿಶ್ವದಾಭಿರಾಮ ಕೇಳು ವೇಮ.

ವೇಶ್ಯೆ ಸಾವಿರ ಸುಳ್ಳು ನೆಪಗಳನ್ನೊಡ್ಡಿ ಆಕರ್ಷಿಸುತ್ತಾಳೆ. ಭೋಗಕ್ಕೆ ಎಳೆಯುತ್ತಾಳೆ. ಕಾಮಜೇಷ್ಟೆಗಿಳಿದು, ಅತ್ತಿತ್ತ ಉರುಳಾಡಿಸುತ್ತಾಳೆ. ಅವಳ ಈ ಸೋಗುಲಾಡಿತನ ವೆಲ್ಲ ವಿಟನ ಆಸ್ತಿ—ಪಾಸ್ತಿ ನಾಶವಾಗುವ ವರೆಗೆ ಮಾತ್ರ. ವಿಟನು ಹಾಳಾದನೆಂದರೆ ತೀರಿತು, ಅವನನ್ನು ತನ್ನ ಮನೆಯೊಳಗಿಂದ ಹೊರಗೆ ತಳ್ಳುವಳು.

ವೇಶ್ಯೆಯರ ಪ್ರೀತಿ ವಿಟನ ದೇಹದ ನೀಟು ಮಾಟುಗಳನ್ನು ಕುರಿತಲ್ಲ; ಅದರೆ ಅವನ ಆಸ್ತಿಯನ್ನು ಕುರಿತು ಮಾತ್ರವೆಂಬುದು, ಕೊನೆಗೆ ಹಾಳಾದ ನಂತನ ಗೊತ್ತಾಗುವುದು.

(ಸರ್ವಜ್ಞ ಮೂರ್ತಿಯ ಪದ್ಯವು ಇದೇ ಹೋಲಿಕೆಯ ಅರ್ಥ ನೀಡುತ್ತಿದೆ:

ಹಕ್ಕಿಯ ಸೊಳೆಯ | ಠಕ್ಕೆರಡು ಒಂದಯ್ಯ!
ಹಕ್ಕಿಗೆ ಹಾಲ್ದಿನೆಯ ಹರಿತಿಂದು ಕಂಕೆಯನು!
ಇಕ್ಕಿ ಹೋದಂತೆ ಸರ್ವಜ್ಞ||)

ಳಳ೯

ಪಿಚ್ಚಿವಾನಿಕ್ಕೆನ ಬೇದವಾನಿಕಿ ನೈನ, ಗುಷ್ಮ ರೋಗಿ ಕ್ಕೆನ, ಗುಂಟ ಕ್ಕೆನ.
ಭಾಮು ಕಾನುಪಿಂಪ ಬಾಮುಲ ಬೆಟ್ಟರಾ, ವಿಶ್ವದಾಭಿರಾಮು ವಿನುರ ವೇಮು.

ಹುಚ್ಚು ಪೆದ್ದನೇನು; ಹುಟ್ಟು ಬಡವನೇನು ?
ಕುಷ್ಠ ರೋಗಿಯೇನು; ಕುಂಟನೇನು ?
ಭಾನೆ ಕಾಣಲಾಗ, ಕಾಮು ಮುತ್ತುತಿಹುದು.
ವಿಶ್ವದಾಭಿರಾಮು ಕೇಳು ವೇಮು.

(ಕಾಮದಾಸೆ ಮಾನವನ ಅಂಗಾಂಗಳ ನ್ಯೂನತೆಯನ್ನಾಗಲಿ, ಅವನ ದೇಹ ಇಲ್ಲವೆ ಮನಸ್ಸಿನ ಆರೋಗ್ಯಕರ ಸ್ಥಿತಿಯನ್ನಾಗಲಿ ಅವಲಂಬಿಸಿಲ್ಲ. ಅದು ಸಹಜ ಗುಣ.)

ಹುಚ್ಚು ಪೆದ್ದನಿರಲಿ; ಆಜನ್ಮ ಬಡವನಿರಲಿ; ಯಾರೇ ಇರಲಿ, ಎಂತೇ ಇರಲಿ, ಸ್ತ್ರೀಯನ್ನು ಪುರುಷ ನೋಡಿದೊಡನೆ ಕಾಮ ಹುಟ್ಟುವುದು. ಇದು ಸಹಜ ಗುಣ.

ಈ ಕಾಮದ ಅಭಿವ್ಯಕ್ತಿಯು ಆಚಾರ ವಿಚಾರಗಳ, ಶೀಲ—ಸಂಸ್ಕೃತಿಗಳ ಹದ್ದು ಮೀರದಂತೆ ನಿಗ್ರಹಿಸುವುದು ಮಾತ್ರ ಮನುಷ್ಯನ ಪ್ರಯತ್ನವನ್ನು ಅವಲಂಬಿಸಿದೆ.

ಳಜಂ

ದೇಹ ಭಾವಮೆಲ್ಲ ದೆಲಿಯಂಗ ಜೂಚಿನ, ನಖಿಲ ಹೇಯ ಮುಲಕು ನಾಲಯಂಬು
ಪರಸತಿ ಗಮನಂಬು ಪ್ರತ್ಯಕ್ಷ ನರಕಂಬು ವಿಶ್ವದಾಭಿರಾಮು ವಿನುರ ವೇಮು.

ಅಂಗ ಭಾವವೆಲ್ಲ ಅರಿತು ನೋಡಲಾಗ.
ಅಖಿಲ ಹೇಯಗಳಿಗೆ ಆಲಯವದು.
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕ.
ವಿಶ್ವದಾಭಿರಾಮು ಕೇಳು ವೇಮು.

ಸ್ತ್ರೀಯ ಗುಪ್ತ ಅಂಗಾಂಗಗಳನ್ನು ಅರ್ಥಪೂರ್ಣವಾಗಿ ನೋಡಿದರೆ, ಮಲ ಮೂತ್ರ ಮಾಂಸ-ಮಜ್ಜನಾದಿ ಹೇಯವಾದ ವಸ್ತುಗಳ ಬೀಡಿನಂತೆ ಅವಳ ಅಂಗ ತೋರದಿರದು. ಹೊಲೆ-ಹೇಸುಗೆಯ ಸ್ಥಳವೇ ಅದು. ಅದುವೇ ನರಕ.

ಪರಸ್ತ್ರೀಯರ ಸಂಗಕ್ಕೆಳಿದರೆ, ಇಂಥ ನರಕ ಕೂಪದಲ್ಲಿ ಬಿದ್ದಂತೆ. ಏಕೆಂದರೆ, ಪರ ಸ್ತ್ರೀಯರೊಡನೆ ಕಾಮ ಚೇಷ್ಟೆಗಿಳಿಯುವಾಗ ಕೇವಲ ಇಂದ್ರಿಯ ಚಪಲ ತೀರಿಸುವುದಷ್ಟೇ

ಹೇತುವಾಗಿರುತ್ತದೆ. ಅಲ್ಲಿ ಕರ್ತವ್ಯ–ಕರ್ಮಗಳ ಗೊಡವೆ ಇರುವುದಿಲ್ಲ. ಆಗ ಸ್ತ್ರೀಯೋನಿ ಅವಳ ಅಂಗಾಗದ ಭಾಗವೆಂದು ಮಾತ್ರ ಮೋಹ ತಾಳುತ್ತಾರೆ. ಅದರ ನಿಜ ಸ್ವರೂಪ ತಿಳಿದರೆ, ಅದೇ ಪ್ರತ್ಯಕ್ಷ ನರಕವೆಂದೂ ತಿಳಿಯದಿರರು.

ಳಜಂ

ಜಗಡ ಮುನಕು ಬೋದು ಜಾರಿಣಿಯೆಪ್ಪುಡು ಮಾಯಜೇಸಿ ಪುರುಷು ಮುಮುತಬೆಟ್ಟು
ಗಾನಿ ಮಾಟಲಾಡು ಗಯ್ಯಾಳಿ ಸತತಂಬು ವಿಶ್ವದಾಭಿರಾಮು ವಿನುರ ವೇಮು.

ಜಗಳ ಕಾಯುಳವಳು ಜಾರಿಣಿ ತಾನೆಂದು;
ಮಾಯ ಮಾಡಿ ವಿಟನ ಮುಮತೆ ಹೊಂದಿ,
ಗಳಪುತಿಪ್ಪ ನಾರಿ ಗೈಯ್ಯಾಳಿಯೆನಿಪಳು.
ವಿಶ್ವದಾಭಿರಾಮು ಕೇಳು ನೇಮು

ಜಾರಿಣಿಯಾದವಳು ಎಂದೂ ಗಂಡನೊಡನಾಗಲಿ ಮಿಂಡನೊಡನಾಗಲಿ ಜಗಳ-ತಂಟಿಗೆ ನಿಲ್ಲುವುದಿಲ್ಲ. ಅವಳು ತನ್ನ ಗತ್ತು ಸಾಧಿಸಿ, ಮೊದಲು ತನ್ನ ವಿಟ ಪುರುಷನನ್ನು ಮೋಹಪಾಶದಲ್ಲಿ ಬಂಧಿಸುವ ಯುಕ್ತಿ ಹೂಡಿ ವಿಜಯಿಯಾಗುತ್ತಾಳೆ. ಅವನು ತನ್ನಲ್ಲಿ ಅಚಲ ಪ್ರೀತಿ ಹೊಂದಿದ ನಂತರ ಧೈರ್ಯ ತಾಳಿ, ಜನರೊಂದಿಗೆ ಧೈರ್ಯವಾಗಿ ಮಾತನಾಡತೊಡಗುತ್ತಾಳೆ. ಇಂಥವಳು ಗಯ್ಯಾಳಿಯೇ ಸರಿ.

ಳಜಿ೨

ಜಾಲಲೋನನುಂಡಿ ಸ್ತ್ರೀಲವೀಧುಲವಂಕ, ಜೂಡನೀಯರಾದು ಸುಮ್ಮವಿನಕ
ಚೇತುರೇನಿ ಗುಟ್ಲು ಚೇಟುಮೂಡುನು ಜ: ಮೀ ವಿಶ್ವದಾಭಿರಾಮು ವಿನುರ ವೇಮು.

ಕಿಡಕಿಯಿಂದ ಬೀದಿ ಕಡೆಗೆ ಇಣಿಕಿಯಿಣಿಕಿ,
ನೋಡಲೆಂದು ಬಿಡಲು ಹೊಲ್ಲ; ಕೇಳದಾಕೆ
ನೋಡುತಿರಲು, ಕೇಡು ಬಪ್ಪುದಾಗ ನೋಡು.
ವಿಶ್ವದಾಭಿರಾಮು ಕೇಳು ನೇಮು.

ವಿಟಪುರುಷರನ್ನು ಆಕರ್ಷಿಸುವ ವೇಶ್ಯೆಯು ಕಿಡಕಿಯಿಂದ ಇಣಿಕಿ ನೋಡುತ್ತಾಳೆ. ಬಾಗಿಲು ಬಳಿ ಕುಳಿತುಕೊಳ್ಳುತ್ತಾಳೆ. ಅದು ಅವಳ ಸ್ವಭಾವ.

ಆದರೆ ಸದ್ಗೃಹಿಣಿ ಕಿಡಕಿಯತ್ತ ಇಣಿಕಿ ನೋಡುವ ಪ್ರಮೇಯವೇ ಇಲ್ಲ: ಯಾವ ಪರಪುರುಷರನ್ನು ಆಕರ್ಷಿಸುವುದೂ ಅವಳ ವೃತ್ತಿಯೂ ಅಲ್ಲ; ಗುಣವೂ ಅಲ್ಲ. ಒಂದು ವೇಳೆ, ಯಾವಳಾದರೂ ಆಗೀಗ ಕಿಡಕಿಯತ್ತ ಇಣಿಕಿ ನೋಡುವ ಚಟ ಬೆಳೆಸಿಕೊಂಡರೆ, ಅವಳಿಗೆ ತಿಳಿಹೇಳಿ, ಹಾಗೆ ನಡೆಯದಂತೆ ನೋಡಿಕೊಳ್ಳುವುದು ಮೇಲು. ಇಂಥ ಹಿತನುಡಿಗೆ ಅವಳು ಒಪ್ಪಿ ಮನ್ನಣೆ ನೀಡದಿದ್ದರೆ. ಅವಳು ಯಾರನ್ನಾದರೂ ಮೋಹಿಸಿ, ಶೀಲಗೆಡುತ್ತಾಳೆ. ಆಗ ಕೇಡು ಉಂಟಾಗುತ್ತದೆ.

ಶೀಲಗೆಟ್ಟ ಮೇಲೆ ಸ್ತ್ರೀಯನ್ನು ನಿಯಂತ್ರಿಸುವುದಕ್ಕಿಂತ ಮೊದಲು ಎಚ್ಚರ ವಹಿಸುವುದು ಮೇಲು.

ಪದ್ಯ ೩

ಚಕ್ಕನೈನವಾನಿ ಮಕ್ಕುವಗನ್ನಂತ, ದಕ್ಕುವಗನುಜೂಚು ದನದು ವಿಭುನಿ
ಅಡುಬುದ್ಧಿ ಕಂಟೆ ನವರ ಬುದ್ಧಿಯು ಲೇದು ವಿಶ್ವದಾಭಿರಾಮ ವಿನುರ ವೇಮ

ಚೊಕ್ಕವಾಗಿರುವನ ಅಕ್ಕರೆಯಿಂದ ನೋಡೆ,
ತಕ್ಕನಲ್ಲವೆನಿಪ ತನ್ನ ಗಂಡ.
ಜಾರ ಬುದ್ಧಿಯಷ್ಟೆ; ಒರೆಯ ಬುದ್ಧಿಯಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಲಗ್ನ ಸಂಬಂಧವು ಕೇವಲ ರೂಪಲಾವಣ್ಯಗಳ ಜೊತೆಯಲ್ಲ. ಸ್ತ್ರೀ ಪುರುಷರು ಮನಸ್ಸಿನಿಂದ ಒಲಿದು ಒಂದಾಗುವುದೇ ಆಗಿದೆ. ಆದರೆ ಲಗ್ನವಾದ ಸ್ತ್ರೀ, ಪರಪುರುಷರನ್ನು ಅವರ ರೂಪಾಲಂಕಾರಗಳ ದೃಷ್ಟಿಯಿಂದ ನೋಡಹತ್ತಿದರೆ, ಅವಳ ಮನಸ್ಸು ಸುಂದರಾಂಗನ ಮೇಲೆ ಆಕರ್ಷಿತವಾಗುತ್ತದೆ. ಆಗ ಅವಳು ತನ್ನ ಗಂಡನ ರೂಪವನ್ನು ಇತರರ ರೂಪದೊಂದಿಗೆ ಹೋಲಿಸುವಳು. ಅಷ್ಟು ಸುಂದರನಲ್ಲದ ಗಂಡನಿದ್ದರೆ, ಅವನು ತನಗೆ ತಕ್ಕವನಲ್ಲವೆಂದು ಭಾವಿಸುವಳು.

ಸ್ತ್ರೀಯರ, ಈ ರೀತಿಯ ಬುದ್ಧಿ ಕೇವಲ ಜಾರತನದ ಬುದ್ಧಿ ಎನಿಸೀತೇ ಹೊರತು, ಗುಣಾಂಶಗಳನ್ನು ಶೋಧಿಸಿ ಕಂಡು ಹಿಡಿಯುವ ಒರೆಯ ಬುದ್ಧಿ ಎನ್ನಿಸದು. ಬಂಗಾರ ಎಷ್ಟು ಅಂಶ ಅಪ್ಪಟವೆಂಬುದನ್ನು ತಿಕ್ಕಿ ನೋಡುವ ಕಲ್ಲಿಗೆ ಒರೆಗಲ್ಲು ಎನ್ನುತ್ತೇವೆ. ಗುಣಾಂಶ ಶೋಧಿಸಿ ನೋಡುವ ಬುದ್ಧಿಯು ಒರೆಯ ಬುದ್ಧಿಯೆನ್ನಿಸುವುದು.

ಪದ್ಯ ೪

ಕಾಂತಮೇನು ಜೂಚಿ ಕಲವರ ಪಡೆದರು, ಕಡುಪುಲೋನಿರೋತ ಗಾನಲೇಕ
ಇಂತರೋತಗಲ್ಗು ನೀದೇಹಮೇಲರಾ? ವಿಶ್ವದಾಭಿರಾಮ ವಿನುರ ವೇಮ.

ಕಾಂತೆಯಂಗ ಕಂಡು ಕಸಿವಿಸಿಗೊಳುವರಲ!
ಅಂತರಾಳ ಕಿಲುಬು ಕಾಣಲಾರ!
ಇಂಥ ಮಲವುದಿಸುವ ದೇಹವೇತಕಯ್ಯ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯರ ದೇಹ—ರಚನೆಯನ್ನು ಅಂದರೆ ತುಂಬಿದ ಎದೆ, ಸಣ್ಣ ನಡು, ಚಂಚಲ ಕಣ್ಣು ಇತ್ಯಾದಿ-ನೋಡಿ, ಮನಸ್ಸಿನಲ್ಲಿ ಮೋಹಿಸಿ ಕಸಿವಿಸಿಪಡುತ್ತಾರೆ. ಆದರೆ ಈ ದೇಹದಲ್ಲಿ ಹೇಸುಗೆಯೆನಿಸುವ ಮಲ ಹುಟ್ಟುತ್ತದೆ. 'ಮಲದ ಗೂಡಿನಂತಿದೆ ದೇಹ,' ಎಂದು ತಿಳಿದರೆ ಕಸಿವಿಸಿ ಆಗುವುದೆಂತು? ದೇಹದ ಒಳಗಿನ ಈ ಕಿಲುಬು–ಕಲ್ಮಶಗಳನ್ನರಿತರೆ, ದೇಹದ ಮೇಲಿನ ಒಣ ಮೋಹ ನಶಿಸುವುದು.

(ಅತ್ರಿ ಮಹರ್ಷಿ ಅನಸೂಯೆಯರ ವರಪುತ್ರ ದತ್ತಾತ್ರೇಯ ವಿರಚಿತ 'ಅವಧೂತ' ಗೀತೆಯಲ್ಲಿ ಇದೇ ಹೋಲಿಕೆಯ ಅರ್ಥವೀಯುವ ಪದ್ಯವಿದೆ.

ಅಂತರೇ ನರಕಂ ವಿದ್ಧಿ ಕೌಟಿಲ್ಯಂ ಬಾಹ್ಯ ಮುಂಡಿತಮ್ | ಲಲಿತಾಮಿಹ ಪಶ್ಯಂತಿ ಮಹಾಮಂತ್ರ ವಿರೋಧಿನೀಮ್|| ತಾ|| ಒಳಗೆ ನರಕ, ಹೊರಗೆ ಮೋಸ ಇಲ್ಲಿ ಸೌಂದರ್ಯವನ್ನು ಕಾಣುವರು! ಮುಕ್ತಿಗಳಿಸುವ ಮಹಾಮಂತ್ರಕ್ಕೆ ಪರಮ ಶತ್ರು ಅವಳು ಎಂದು ಸ್ತ್ರೀ ಜಾತಿಯನ್ನೇ ಹಳಿದಿದ್ದಾರೆ. ವೇಮನ ಯೋಗಿಯಾದರೋ, ಪುರುಷನ ನ್ಯೂನತೆ ತೋರಿಸಿ, ತಿಳಿಹೇಳಿ ತಿದ್ದುತ್ತಾರೆ.)

ಪದ್ಯ ೫

ಆಡುದಾನಿಬೊಂಕು ಗೋಡಬೆಟ್ಟನಯಟ್ಲು ಪುರುಷವರುನಿಬೊಂಕು ಪೂರಿತಡಕ
ಸ್ತ್ರೀಲನೇರ್ಪುಮಗಲ ಜೀಕಾಕುಬರಚುರಾ ವಿಶ್ವದಾಭಿರಾಮ ವಿನುರ ವೇಮ

ನಾರಿ ನುಡಿದ ಸುಳ್ಳು ಅಡ್ಡ ಗೋಡೆಯಂತೆ.
ಪುರುಷ ನುಡಿದ ಸುಳ್ಳು ಹುಲ್ಲುಬೇಲಿ.
ನಾರಿಯು ಧೂರ್ತತನ ನರಗೆ ಪೀಕಲಾಟ
ವಿಶ್ವದಾಭಿರಾಮ ಕೇಳು ವೇಮ

ಸ್ತ್ರೀ ಮನೆತನದಲ್ಲಿ ಇನ್ನೊಬ್ಬರ ಬಗ್ಗೆ ಆರೋಪ ಹೊರಿಸಿ, ತನ್ನ ಗಂಡನ ಮನಸ್ಸು ಕೆಡಿಸಬಲ್ಲಳು. ಅಣ್ಣ–ತಮ್ಮಂದಿರಲ್ಲಿ ವೈರ ಕಲ್ಪಿಸಿ ಮನೆ ಇಬ್ಭಾಗ ಮಾಡಬಲ್ಲಳು. ಇರುವ ಮನೆಯ ನಡುವೆ ಅಡ್ಡ ಗೋಡೆ ನಿರ್ಮಿಸುವುದಕ್ಕೆ ಕಾರಣಳಾಗಬಹುದು.

ಪುರುಷನು ಸುಳ್ಳು ಹೇಳಿದರೆ, ನೆರೆ ಹೊರೆಯಲ್ಲಿ ಮನಸ್ಸು ಕೆಡಬಹುದು. ತಮ್ಮ ತಮ್ಮ ಹದ್ದು ನಿರ್ಮಿಸಲು ತೊಪ್ಪಲುಗಂಟೆಗಳನ್ನು ಹಚ್ಚಬಹುದು.

ಇನ್ನೊಂದು ಅರ್ಥದಲ್ಲಿ, ನೋಡಿದರೆ; ಸ್ತ್ರೀ ನುಡಿದ ಸುಳ್ಳು ತುಂಬಾ ಗಂಭೀರ ಪರಿಣಾಮಕಾರಿ. ಅದರ ಪರಿಣಾಮ ಅತಿಕ್ರಮಿಸಲಾರದಂಥದು. ಆದರೆ ಪುರುಷ ನುಡಿದ ಸುಳ್ಳು, ಅಂಥ ಗಂಭೀರವಾದುದೇನೂ ಅಲ್ಲ. ಅದನ್ನು ಸಹಜವಾಗಿ ದಾಟಬಹುದು.

ಸ್ತ್ರೀ ಧೂರ್ತಳಾದರೆ ಮೋಸ–ವಂಚಕಳಾದರೆ, ಅವಳ ಸಂಚು–ಹೊಂಚುಗಳಿಂದ ಮನುಷ್ಯ ಗೋಳಿಗೀಡಾಗುವನು.

ಪದ್ಯ ೬

ಸುಗುಣವಂತುರಾಲು ಸುದತಿಯ್ಯೆಯುಂಡಿನ ಬುದ್ಧಿವಂತುಲಗುಚು ಬುತ್ರುತೊಪ್ಪ
ಸ್ವರ್ಗಮೇಟಕಯ್ಯ? ಸಂಸಾರಿಕಿಂಕನು ವಿಶ್ವದಾಭಿರಾಮ ವಿನುರ ವೇಮ

ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸಗ್ಗವೇತಕಯ್ಯ? ಸಂಸಾರ ಸಾಲದೆ?
ವಿಶ್ವದಾಭಿರಾಮ ಕೇಳು ವೇಮ

ಗೃಹಸ್ಥ ಜೀವನಕ್ಕೆ ಗೃಹಿಣಿಯ ಸಚ್ಚರಿತ್ರೆ ಮುಖ್ಯ. ಅವಳು ಒಳ್ಳೆಯ ಗುಣ ಹೊಂದಿದವಳಾಗಿರಬೇಕು. ಇಷ್ಟಾದರೆ, ಅವನು ಸಂಸಾರ ಸುಖ ಅನುಭವಿಸಬಹುದು. ಇನ್ನು ಶ್ರೇಷ್ಠ ಬುದ್ಧಿಯುಳ್ಳ ಮಕ್ಕಳಿದ್ದರೆ, ಅವನ ಕೀರ್ತಿ ಸರ್ವತ್ರ ಹಬ್ಬುತ್ತದೆ. ಸಂಸಾರ ಸುಖ–ಕೀರ್ತಿಗಳು ಲಭ್ಯವಾದರೆ, ಈ ಸಂಸಾರದಲ್ಲಿ ಇನ್ನೇನು ಬೇಕು? ಮರಣಾನಂತರ, ಮನೋಲೋಕವಾದ ಸ್ವರ್ಗಕ್ಕಿಂತ ಸಂಸಾರವೇನು ಕಡಿಮೆ ?

("ಅರ್ಥ ಹೋಲಿಕೆಯಿರುವ ಸರ್ವಜ್ಞ ಮೂರ್ತಿಯ ಪದ್ಯವಿಂತಿದೆ:

ಬೆಚ್ಚನ ಮನೆಯಾಗಿ] ವೆಚ್ಚಕ್ಕೆ ಹೊನ್ನಾಗಿ |
ಇಚ್ಛೆಯನು ಅರಿವ ಸತಿಯಾಗೆ ಸ್ವರ್ಗಕ್ಕೆ |
ಕಿಚ್ಚು ಹಚ್ಚೆಂದ ಸರ್ವಜ್ಞ ||)

ಳಜಿಲ

ಸತಿಯೊನರ್ಚು ಚೆಡುಗು ಪತಿಕವಶ್ಯಮುವಚ್ಚುಬತಿಯೊನರ್ಚುಮಂಚಿ ಸತಿಕಿ ಸಗಮು
ಪತಿಯೊನರ್ಚು ಚೆಡುಗು ಸತಿಕೇಲರಾದುರಾ? ವಿಶ್ವದಾಭಿರಾಮು ವಿನುರ ವೇಮು.

ಸತಿಗೆಯ್ಯುವ ಕೆಡುಕು ಪತಿಗವಶ್ಯ ಬಪ್ಪುದು.
ಪತಿಗೆಯ್ಯುವ ಒಳಿತು ಸತಿಗರ್ಧವು.
ಪತಿಗೆಯ್ಯುವ ಕೆಡುಕು ಸತಿಗೇಕೆ ಬಾರದು?
ವಿಶ್ವದಾಭಿರಾಮು ಕೇಳು ವೇಮು

(" ತನ್ನ ಪತಿ ಮಾಡಿದರಾಯ್ತು. ಸ್ತ್ರೀ; ತಾನೇ ಯಜ್ಞ, ವ್ರತ, ಉಪವಾಸಗಳನ್ನು ಮಾಡಕೂಡದು. ತನ್ನ ಗಂಡನ ಆಜ್ಞೆ ಪಾಲಿಸಿದರಾಯ್ತು. ಅಷ್ಟರಿಂದ ಅವಳಿಗೆ ಸ್ವರ್ಗದಲ್ಲಿ ಶ್ರೇಷ್ಠ ಸ್ಥಾನ ಸಿಗುವುದು."

" ಅಂತ್ಯ ಕ್ರಿಯಾದಿ ವಿಧಿಗಳನ್ನು ಪರಧರ್ಮ ಸೇರಿದ, ಸ್ವಚ್ಛಂದದ ನಡತೆಯ, ಗರ್ಭಹತ್ಯೆ ಗೈದ ಮತ್ತು ಮದ್ಯ ಸೇವಿಸುವ ಸ್ತ್ರೀಯರು ಸತ್ತಾಗ ನೆರವೇರಿಸಕೂಡದು " ಆದರೆ "ಗುಣಹೀನನಿರಲಿ, ಇತರತ್ರ ಸುಖ ಅರಸುವವನಿರಲಿ, ಸುಗುಣ ವಿಹೀನನಿರಲಿ, ಶ್ರದ್ಧಾವಂತ ಹೆಂಡತಿ ಗಂಡನನ್ನು ದೇವರೆಂದೇ ಪೂಜಿಸಬೇಕು."

ಸ್ಮೃತಿಕಾರ ಮನು ಹೇರಿದ ಧರ್ಮ ಸೂತ್ರಗಳು ಮೇಲಿನಂತಿವೆ. ಪತಿ ಯಜ್ಞ ಮಾಡಿದರೆ ಸಾಕು. ಸತಿಗೆ ಫಲವುಂಟು. ಆದರೆ ಸತಿ ಕೇಡು ಮಾಡಿದರೆ, ದಂಡಿಸಬೇಕು. ಏಕೆಂದರೆ ಪತಿಗೆ ಅವಮಾನವಾಗುವುದು! ಅಂದ ಮೇಲೆ ಪತಿ ಕೇಡುಕಾರ್ಯಕ್ಕಿಳಿದರೆ, ಶೀಲಗೆಟ್ಟರೆ, ಸತಿಗೆ ಅದರ ಪರಿಣಾಮವಾಗದೇ? ಅವನನ್ನು ದೇವರೆಂದು ತಿಳಿಯುವ ಬಗೆ ಹೇಗೆ?)

ಹೆಂಡತಿ ಶೀಲಗೆಟ್ಟರೆ ಕೆಡುಕುಗೆಯ್ದರೆ, ಗಂಡನ ಮೇಲೆ ಪರಿಣಾಮವಾಗುವುದು. ಗಂಡನು ಒಳ್ಳೆಯದನ್ನು ಮಾಡಿದರೆ ಸತಿಗೂ ಕಲ್ಯಾಣವಾಗುವುದು; ಎಂಬುದೂ ಒಂದು ಗ್ರಹಿಕೆ ಇದು ಅನುಭವವೂ ಅಹುದು ಅಂದ ಮೇಲೆ, ಗಂಡನು ನೀಚ ಕಾರ್ಯಕ್ಕಿಳಿದರೆ, ಅದರ ಕೆಡುಕ ಪರಿಣಾಮ ಹೆಂಡತಿಯ ಮೇಲಾಗದೇ? ಕಾರಣ ಪತಿ ತನ್ನ ಹೊಣೆಯರಿತು ನಡೆಯುವುದು ಒಳ್ಳೆಯದು.

ಳಜಿಲ

ವಿತ್ತಹೀನಮ್ಮೆನ ವೇಳಲಂದುನದಲ್ಲಿ, ತನಯು ಲಾಲುನುಹೃದು ಲನೆಡುವಾರ,
ಲಿಲ್ಲಶತ್ರುಲಗುದು ರೆಂಡ್ಮೆನ ನಿಜಮಿದಿ ವಿಶ್ವದಾಭಿರಾಮು ವಿನುರ ವೇಮು.

ವಿತ್ತಹೀನನಾದ ಕಾಲದಲ್ಲಿ ತನಯು
ಹೆತ್ತಾಕೆ ಹೆಂಡತಿ ಹೃದಯ ಬಳಗ
ಶತ್ರುವೆನಿಸುತಿಹರು ಸತ್ಯವಿದು ನೋಡಾ.
ವಿಶ್ವದಾಭಿರಾಮು ಕೇಳು ವೇಮು.

ನಮ್ಮ ಸಮೀಪದ ಸಂಬಂಧಿಗಳನ್ನು ರಕ್ತ ಸಂಬಂಧಿಗಳೆಂದು ಕರೆಯುತ್ತೇವೆ. ಅವರಲ್ಲಿ ಪ್ರೀತಿಯುಳ್ಳವರಾಗಿದ್ದರೆ, 'ಅನುರಕ್ತ'ರಾಗಿದ್ದೇವೆ ಎನ್ನುತ್ತೇವೆ. ತಾಯಿ—ತಂದೆ ಮಡದಿ–ಮಕ್ಕಳು ರಕ್ತ ಸಂಬಂಧಿಗಳು. ಹೃದಯದ ಬಳಗ. ಇದು ನಮ್ಮ ಕಲ್ಪನೆ. ರಕ್ತ ಸಂಬಂಧದ ನಿಮಿತ್ತವೇ ಅವರು ನಮ್ಮನ್ನು ಪ್ರೀತಿಸುವರೆಂದು ನಮ್ಮ ದೃಢವಿಶ್ವಾಸ !

ಆದರೆ ಹಣವು ಇಲ್ಲದ ಕಾಲದಲ್ಲಿ ತಾಯಿ–ತಂದೆ, ಹೆಂಡಿರು—ಮಕ್ಕಳು, ಹೃದಯದ ಬಳಗವೆನ್ನುವವರೆಲ್ಲ ನಮ್ಮನ್ನು ತೊರೆಯುತ್ತಾರೆ. ಅಷ್ಟೇಕೆ? ನಮ್ಮ ಹಿತದ ವಿರುದ್ಧವಾಗಿ ಬೇರೊಬ್ಬ ಧನಿಕನಿಗೆ ನೆರವು ನೀಡಲು ಸಹ ಹಿಂದೆಗೆಯರು. ಅವರೇ ನಮ್ಮ ಶತ್ರುಗಳಾಗಿ ಪರಿಣಮಿಸುತ್ತಾರೆ. ಇದು ಸತ್ಯ. ಇದನ್ನು ಬೇಗ ಅರಿತರೆ ಕ್ಷೇಮ.

ಳಜಿಲ

ಪಾಪಜಾತಿನರುಡು ಪರಸತಿಗೋರುಟ, ಚೇಪ ಜಿಹ್ವರುಚಿಕಿ ಜಿಕ್ಕುನಟ್ಲ
ತೀಪಿನಂಟಿಯೀಗ ತೆಗುವ ತೋನೀಲ್ಲದಾ? ವಿಶ್ವದಾಭಿರಾಮು ವಿನುರ ವೇಮು.

ಹೀನಪಾಪಿ ನರನು ಅನ್ಯಸತಿ ಕೋರಲು,
ಮೀನು ಜಿಹ್ವೆರುಚಿಗೆ ಸಿಲುಕಿದಂತೆ.
ಜೀನು ರುಚಿಗೆ ಬಿದ್ದು ನೊಣವು ಸಾಯೆದೇನು ?
ವಿಶ್ವದಾಭಿರಾಮು ಕೇಳು ವೇಮು

ಮೀನುಗಾರ, ದಾಳಕ್ಕೆ ಮಳೆ ಹುಳು ಕಟ್ಟಿ ನೀರಲ್ಲಿ ಬಿಡುತ್ತಾನೆ. ಮೀನು ತನ್ನ ನಾಲಗೆ ರುಚಿ ತಣಿಸಲು, ಹುಳುವನ್ನು ನುಂಗಹೋಗುವುದು. ಮೀನುಗಾರ ದಾಳವನ್ನು ಮೇಲೆತ್ತಿ ಮಳಲ ಮೇಲೆ ಒಗೆಯುತ್ತಾನೆ. ಮೀನು ಮಳಲ ಮೇಲೆ ಬಿದ್ದು ಪ್ರಾಣ ಬಿಡುತ್ತದೆ.

ನೊಣ ಜೇನು ತುಪ್ಪ ಸವಿಯಲು ಆಶೆಬಡುತ್ತದೆ. ಜೇನಿನ ಸ್ನಿಗ್ಧತೆಯಿಂದ ನೊಣದ ಕಾಲು ಸಿಲುಕಿಕೊಂಡು ಮೇಲೇಳಲು ಆಗದು. ನೊಣ ಸತ್ತು ಹೋಗುತ್ತದೆ.

ಅದೇ ರೀತಿ ಕೇಳು, ವೃತ್ತಿಗಿಳಿದ ಮನುಷ್ಯನು ಭೋಗದಾಸೆಯಿಂದ ಪರಸತಿಯರ ಸಂಗ ಕೋರಿ, ಕಷ್ಟ–ನಷ್ಟಗಳನ್ನು ಸೋಸುತ್ತಾನೆ.

ಳಿ೦

ತಲ್ಲಿದಂಡ್ರಿ ಹಿತುಲು ದಗಿನಚುಟ್ಟಮುಲೆಲ್ಲ, ನೇರಿಕೋರಿಪೋರು ನೆಗುಪುಜೂಚಿ,
ಪಡುಚಿ ನಿತ್ತುರಿಂತೆ ಭಾಗ್ಯಮಿಃಯಗಲೇರು, ವಿಶ್ವದಾಭಿರಾಮ ವಿನುರ ವೇಮ-

ತಾಯಿ ತಂದೆ ಹಿತರು ಬಂಧುಬಳಗವೆಲ್ಲ
ಒಳಿತು ಕೋರಿ ವರನ ಇರವ ನೋಡಿ
ಕನ್ನೆ ಕೊಡುವರಷ್ಟೆ ? ಭಾಗ್ಯಕೊಡಲರಿಯರು !
ವಿಶ್ವದಾಭಿರಾಮ ಕೇಳು ವೇಮ

ಲಗ್ನ ಸಂಬಂಧವು ಧರ್ಮ ಮತ್ತು ಅರ್ಥ ಸಂಪಾದನೆಗೆ ಮೀಸಲಾಗಿದೆ. ವರನ ಗುಣ-ಸ್ವಭಾವ, ಅವನ ಮನೆತನದ ಪೂರ್ವಾಪರ, ಸಿರಿ-ಸಂಪತ್ತುಗಳನ್ನು ನೋಡಿ ಕನ್ನೆಯನ್ನು ನೀಡುತ್ತಾರೆ. ತಾಯಿ-ತಂದೆ, ಬಂಧುಬಳಗವೆಲ್ಲ ಇಷ್ಟು ಮಾತ್ರ ಮಾಡಬಲ್ಲರು. ಆದರೆ, ಒಂದಾದ ದಂಪತಿ ಚೆಂದಾಗಿ ಬಾಳಬೇಕಾದರೆ, ಇಷ್ಟೇ ಸಾಲದು. ಉತ್ತಮ ಭಾಗ್ಯ ಬೇಕು. ಪರಸ್ಪರರಲ್ಲಿ ಒಳ್ಳೆಯ ಪ್ರೀತಿ ಸಹಕಾರಗಳು ಬೆಳೆಯುವಂತೆ ಮಾಡುವ, ಸಿರಿ ಸಂಪದ ಹಿಂಗದಂತೆ ಇರಿಸುವ, ಆಯುಸ್ಸು ಅಕಾಲದಲ್ಲಿ ತೀರದಂತೆ ವಿಧಿಸುವ ಬೇರೊಂದು ಶಕ್ತಿಯುಂಟು. ಈ ಶಕ್ತಿ ಮಾತ್ರ ಭಾಗ್ಯ ನೀಡಬಹುದು. ತಂದೆ-ತಾಯಿ ಭಾಗ್ಯ ನೀಡರು. ಕಾರಣ ಭಾಗ್ಯವಿಧಾತ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ನಮ್ಮ ಇಚ್ಛಾಶಕ್ತಿ ವಿಚಾರಶಕ್ತಿಗಳನ್ನು ನಿಗ್ರಹಿಸಿದರೆ, ನಮ್ಮ ಭಾಗ್ಯ ನಿರ್ಧಾರಕ ಶಕ್ತಿ ಸಂಪಾದಿಸಬಹುದು.

ಳಿ೧

ಸತುಲ ಮಾಯದೆಲಿಸಿ ಸೈರಿಂಪಲೇಕನು, ಪೆದ್ದ ಕಡುಪುವಾಡು ಪೆಂಡ್ಲಿಮಾನೆ,
ಪುಟ್ಟುಕಾಸೆಗಟ್ಟಿ ಭುವಿ ನಾಂಜನೇಯುಂಡು, ವಿಶ್ವದಾಭಿರಾಮ ವಿನುರ ವೇಮ

ಸತಿಯ ಮಾಯೆ ತಿಳಿದು ಸೈರಿಸಲಾರದಾ,
ಅತಿ ಹೊಟ್ಟೆಯ ಗಣಪ ಮುದುವೆ ಮುರೆತ,
ಮತ್ತೆ, ಹುಟ್ಟದೊಡನೆ ಚಡ್ಡಿ ತೊಟ್ಟ ಹನುಮ.
ವಿಶ್ವದಾಭಿರಾಮ ಕೇಳು ವೇಮ.

ಗಣಪತಿಗೆ ಲಂಬೋದರನೆಂಬ ಹೆಸರೂ ಉಂಟು. ಅವನು ದೊಡ್ಡ ಹೊಟ್ಟೆಯವ. ಸೊಂಟದಲ್ಲಿ ಇರುವ ಹಾವು ಕುಂಡಲಿನೀ ಶಕ್ತಿಯ ದ್ಯೋತಕ. ಸೊಂಡಿಲು ಪ್ರಣವದ್ಯೋತಕ. ಇಲಿಯು ಬ್ರಹ್ಮಜ್ಞಾನವನ್ನು ಅಪಹರಿಸುವ ಅಜ್ಞಾನದ ಚಿಹ್ನೆ. ಇಲಿಯನ್ನು ಏರಿ ಕುಳಿತ ಲಂಬೋದರ ಜ್ಞಾನಿ. ಮಾಯೆಯನ್ನು ಗೆದ್ದವನು. ಸತಿಯ ಮಾಯೆ ತ್ರಾಸದಾಯಕವೆಂದು ಬಗೆದು ಅವನ್ನು ಜಯಿಸಿ ನಿಂತವನು.

ಇನ್ನು ಹನುಮಂತನಾದರೋ, ಹುಟ್ಟಿನಿಂದ ಸಾಧಕನಾದವನು. ನೀರ ಮೇಲೆ ನಡೆದಾಡುವ ಹಠಯೋಗಿ. ಸಮುದ್ರ ದಾಟಿದ ಲಂಕೆ ದಹಿಸಿದ. ಶ್ರೀರಾಮ ಪಟ್ಟಾಭಿಷೇಕಾನಂತರ ಬ್ರಹ್ಮ ವಿದ್ಯೆಯನ್ನು ಅರಿತುಕೊಂಡ. ಇಂದ್ರಿಯ ನಿಗ್ರಹವನ್ನು ಪೂರ್ವದಲ್ಲಿಯೇ ಸಾಧಿಸಿದ ಆಂಜನೇಯ ಆತ್ಮಾರಾಮನನ್ನು ಬೇಗ ಕಂಡುಕೊಂಡ.

ಸತಿಯ ಮಾಯೆ ಮೀರುವುದು ಕಷ್ಟಸಾಧ್ಯವಾದುದರಿಂದ ಯೋಗಿಗಳು ಅದರಿಂದ ರೂಪವಾಗಿ ಉಳಿಯರು.

ಳಿ೨

ಚದಿವಿನತನಿಕನ್ನ ಜಾಕಲಿಯೇ ಮೇಲು, ಗೃಹಮುಮೇಲುಕನ್ನ ಗೇದೆ ಮೇಲು
ನಕಲಸುರಲಕನ್ನ ಜಾರಭಾಮಿನಿ ಮೇಲು; ವಿಶ್ವದಾಭಿರಾಮ ವಿನುರ ವೇಮ.

ಓದಿದಾತಗಿಂತ ಒಗೆವ ಅಗಸ ಮೇಲು
ಮನೆಯ ದೇವಿಗಿಂತ ಮಹಿಷ ಮೇಲು.
ಸಕಲ ಸುರರಿಗಿಂತ ಜಾರಕಾಂತೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಓದಿನಿಂದ ತಿಳಿವು ಹೆಚ್ಚಾಗಬೇಕು. ಒಳಿತು ಕೆಡುಕುಗಳನ್ನು ವಿಂಗಡಿಸಿ ತಿಳಿಯುವುದೇ ವಿವೇಕ. ವಿವೇಕ ಬುದ್ಧಿ ಬೆಳೆಸದ ಓದು ಓದಿದವನಿಗಿಂತ, ಕೊಳೆಯನ್ನು ಕಳೆದು, ವಸ್ತ್ರವನ್ನು ಶುಭ್ರಗೊಳಿಸುವ ದೈಹಿಕ ಶ್ರಮದ ಅಗಸನು ಎಷ್ಟೋ ಪಾಲು ಮೇಲು ಎನ್ನುವಂತಾಗಿದೆ.

ಗೃಹ ದೇವತೆ ಆಯಾ ಪಂಗಡದವರು ಅನುಸರಿಸುವ ಪುರಾಣ ಕಥೆಗಳಲ್ಲಿ ವರ್ಣಿತವಾದ ಮುಖ್ಯ ಆರಾಧ್ಯ ದೈವ. ದುರ್ಗೆಯ ಭಕ್ತರು ಹತ್ತು ಜೋಡಿ ಕೈಗಳ ರುದ್ರ ನಾರಿಯನ್ನು ಗೃಹ ದೇವತೆಯಾಗಿ ಪೂಜಿಸುವರು; ನಾರಾಯಣನ ಭಕ್ತರು ಸಿಂಹ ಮುಖದ ಭೀಕರ ಚಿತ್ರವನ್ನು (ನರಸಿಂಹನನ್ನು) ಗೃಹ ದೇವತೆಯಾಗಿ ಪೂಜಿಸುವರು. ಕೆಲವರು ಮನುಷ್ಯ ರೂಪವನ್ನೂ, ಉಳಿದವರು ಎತ್ತು, ಕೋಣ, (ಬಸವ, ಮಹಿಷ) ರೂಪಗಳನ್ನೂ ತಮ್ಮ ಆರಾಧ್ಯ ವಸ್ತುವೆಂದು ನಂಬುತ್ತಾರೆ. ಪೂಜಿಸುತ್ತಾರೆ. ವರ ಕೇಳುತ್ತಾರೆ. ಅವರಿಂದೇನು? ಎಮ್ಮೆಗೆ ಮೇವು ಹಾಕಿ ಸೇವೆ ಮಾಡಿದರೆ, ಅದು ಹಾಲನ್ನಾದರೂ ಕೊಡುವುದು. ಗೃಹದೇವತೆಗಿಂತ ಎಮ್ಮೆಯೇ ಮೇಲೆನ್ನುವಂತಾಗಿದೆ.

ಬ್ರಾಹ್ಮಣರು ಬ್ರಹ್ಮವಿದ್ಯೆಯರಿತು ಇತರರಿಗೆ ಮೋಕ್ಷ ಸಾಧನ ತಿಳಿಸುವ ಬದಲು, ಯಜ್ಞ-ಯಾಗಗಳ ಹೆಸರಿನಲ್ಲಿ ಮಾಂಸ ತಿಂದು ಕಾಮಿನಿಯರೊಂದಿಗೆ ದೇವರ ಹೆಸರಿನಲ್ಲಿ ಸಂಭೋಗ ನಡೆಸುವ ಮೋಸದ ಜೀವನಕ್ಕಿಂತಲೂ, ಕಾಮ ತೃಪ್ತಿಗಾಗಿ ಶೀಲಗೆಡುವ ಹೆಣ್ಣು ಎಷ್ಟೋ ನೆಟ್ಟಗೇನೋ?

ಳಿ೩

ಜೌರಸುಂಡೆ ನೀಕು ವಾರಸುಡಗುಗಾನಿ, ವೇಶ್ಯೆಯಂದುಬುಟ್ಟು ವಿಧವ ಕೊಡುಕು,
ನೀವು ಪೋಯಿನಪುಡು ನೀಕ್ಕನವದಲುನಾ? ವಿಶ್ವದಾಭಿರಾಮ ವಿನುರ ವೇಮ.

ಔರಸಮಗ ತಾನು ವಾರಸುದಾರನವ;
ವೇಶ್ಯೆಯಲಿ ಪುಟ್ಟಲು, ವಿಧವೆಯ ಮಗ
ನೀರು ಕೂಡ ಹಾಕಲಾರ, ನೀ ಸಾಯಲು.
ವಿಶ್ವದಾಭಿರಾಮ ಕೇಳು ವೇಮ

ಹೆಂಡತಿ-ಗಂಡನ ಅರ್ಧಾಂಗಿ. ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದವನು ಗಂಡನ ಹೊಟ್ಟೆಯ ಮಗನೇ. ಅವನು ಔರ ಸಪುತ್ರ. ಅದರಿಂದ ಅವನು ತಂದೆಯ ಆಸ್ತಿಗೆ ವಾರ ಸುದಾರ. ಆದರೆ ಅದೇ ಪುರುಷನು ವೇಶ್ಯೆಯಲ್ಲಿ ಪಡೆದ ಮಗ ವಿಧವೆಯ ಪುತ್ರನಂತೆ. ಏಕೆಂದರೆ, ವಿಧವೆಗೆ ಗಂಡನಿಲ್ಲ; ವೇಶ್ಯೆಗೂ ಗಂಡನಿಲ್ಲ. ಧರ್ಮ ಸೂತ್ರಗಳನ್ವಯ ಮದುವೆ ಗಂಡನ ಸಂತತಿಯೇ ಆಸ್ತಿಯ ಹಕ್ಕಿಗೆ ಬಾಧ್ಯಸ್ಥ. ಅಷ್ಟೇಕೆ? ಸತ್ತಾಗ ಪಿತೃಶಾಂತಿಗೆಂದು ನೀರು ಬೀಡುವ ಅಧಿಕಾರವು ಸಹ ಹೊಟ್ಟೆಯ ಮಗನಿಗೆ ಮಾತ್ರ ಮೀಸಲು. ವೇಶ್ಯೆಯ ಮಗನು ನೀರು ಹಾಕುವಂತಿಲ್ಲ.

ಹೀಗೆ ವೇಶ್ಯೆ ಸಂಗದ ಫಲವು, ಇರುವಾಗ ಸುಖ ತರದು. ಸತ್ತ ನಂತರ ಸಹ ಅದರಿಂದ ಸುಖವಿಲ್ಲ.

೪೬೪

ಗುಣವತಿಗಲಯಿಲ್ಲು ಗೋಮುನೊಂದಿಂಚುನು, ಚೀಕಟಂಟದಿವ್ವೆ ಚೆಲಗುನಟ್ಲು,
ದೇಬೆಯುನ್ನಯಿಲ್ಲು ದಿವ್ವೆ ಮಲ್ಚಿನಯಟ್ಲಿ, ವಿಶ್ವದಾಭಿರಾಮ ವಿನುರ ವೇಮ.

ಗುಣವಂತೆ ತಾನಿರೆ ಗೃಹಕಿಪ್ಪುದು ಕಾಂತಿ;
ತಿಮಿರ-ತಾಣ ದೀಪ, ತೊಳಗಿದಂತೆ.
ದುರ್ಗುಣಿಯಿರಲಾಗ ದೀಪ ನಂದಿದಂತೆ
ವಿಶ್ವದಾಭಿರಾಮ ಕೇಳು ವೇಮ.

ಹೆಂಡತಿ ಗುಣವಂತೆಯಾಗಿದ್ದರೆ, ಅಂಥವನ ಮನೆಯ ಕೀರ್ತಿ ಬೆಳಗುವುದು. ಎಲ್ಲರೂ ಆ ಆದರ್ಶ ಸಂಸಾರದ ಮಹಿಮೆಯನ್ನು ಹಾಡಿ ಹರಸುವರು. ಇಂಥ ಸದ್ಗುಣಿಯು ಅಶಾಂತಿಯ ಕತ್ತಲು ತುಂಬಿದ ಸಂಸಾರದಲ್ಲಿ ಶಾಂತಿಯ ದೀಪ ಬೆಳಗುವಂತೆ ಇರುವಳು. ಆದರೆ ಹೆಂಡತಿ ದುರ್ಗುಣಿಯಾದರೆ, ಇರುವಂಥ ಶಾಂತಿಯ ದೀಪವೂ ನಂದಿ ಹೋದಂತೆ.

೪೬೫

ಕಾಕಿಗೂಟೆ ನಾಡುಕೋಕಿಲ ತನಗ್ರುಡ್ಲ, ಬೆಟ್ಟವೆನು ಪಜೇಯು ಗುಟ್ಟಿರುಗುಚು,
ನಾಡುವಾರಿಮೊಸ ಮಪುಡ್ಮಿನ ದೆಲಿಯುಡೀ ವಿಶ್ವದಾಭಿರಾಮ ವಿನುರ ವೇಮ .

ಕಾಗೆ ಗೂಡಿನೊಳು ಕೋಗಿಲೆ ಮೊಟ್ಟೆಯಿರಿಸಿ.
ಮಾಗಿಸಿ ಮರಿ ಮಾಳ್ಪ ಗುಟ್ಟನರಿಯೆ,
ಆಗ ತಿಳಿವುದಯ್ಯ ನಾರಿ ಮಾಳ್ಪ ಮೋಸ,
ವಿಶ್ವದಾಭಿರಾಮ ಕೇಳು ವೇಮ

ಹಣ್ಣಿನ ಸ್ವಭಾವವನ್ನು ಗುರುತಿಸುವುದು ಕಷ್ಟಸಾಧ್ಯ. ಮನಸ್ಸು ಮಾಡಿದರೆ ಅವಳು ಎಂಥ ಮೋಸವನ್ನಾದರೂ ಮಾಡಬಲ್ಲಳು. ಯಾವನೋ ಬಿಟ ಪುರುಷನಲ್ಲಿ ರತಿಕ್ರೀಡೆ ಅನುಭವಿಸಿ, ಸಂತತಿ ಪಡೆದು, ತನ್ನ ಪತಿಯ ಕೊರಳಿಗೆ ಸಂರಕ್ಷಣ ಭಾರವನೂ ಅವಳು ಹೇರಬಲ್ಲಳು. ಹೇಗೆಂದರೆ ಕೋಗಿಲೆ ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿ ರಿಸುತ್ತದೆ. ಕಾಗೆ ಅದನ್ನು ಕಾಯಿಸಿ, ಮರಿ ಮಾಡಿ ಪೋಷಿಸುತ್ತದೆ.

ಇದೇ ಭಾವಾರ್ಥವುಳ್ಳ ಸರ್ವಜ್ಞ ಮೂರ್ತಿಯ ಪದ್ಯವಿಂತಿದೆ:

"ಹೆಂಡಿರ ಕೌತುಕವ । ಗಂಡರು ಬಲ್ಲರೇ ? |
ಗುಂಡಿ ನೀರೊಳಗೆ ಕಿರಿಮೀನ ಹೆಜ್ಜೆಯನು।
ಕಂಡಾತನಾರು ಸರ್ವಜ್ಞ॥"

೪೬೬

ವಿಡಾಚುದಾನಿಪೊಂದು ವಿಡುವ ಜಾಲನಿವಾಡು ಚಚ್ಚುದನುಕ ಮೋಯು ಜಾವಗುಡಿನೆ
ಭಾಗವತುಲಪಟು ಬಡಯುಂಗ ನೋಪಡು, ವಿಶ್ವದಾಭಿರಾಮ ವಿನುರ ವೇಮ.

ತ್ಯಾಜ್ಯವೆನಿಪಳನ್ನು ತೊರೆದು ಬಿಡದ ನರನು
ಕೆಡುವ ತನಕ ಕೆಟ್ಟು ಗುಡಿಸೊಳಿರಲು
ಭಾಗವತ ಪದವಿಯ ಪಡೆಯನವನುನೋಡು
ವಿಶ್ವದಾಭಿರಾಮ ಕೇಳು ವೇಮ

(ಸಂನ್ಯಾಸ ಸ್ವೀಕರಿಸದೆ, ಮರಣಪರ್ಯಂತ ಗೃಹಸ್ಥನಾಗಿ, ಜ್ಞಾನ-ಭಕ್ತಿಗಳಿಂದ ಕೂಡಿ ನಿಷ್ಕಾಮ ಕರ್ಮದಲ್ಲಿ ನಿರತನಾಗಿರುವವನೇ ಭಾಗವತ. ಇಲ್ಲಿ ಆಸೆಯನ್ನು ಗೆಲ್ಲುವ ಮನಸ್ಸು ಮುಖ್ಯ. ಅದಿಲ್ಲದೆ ನಿಷ್ಕಾಮ ಸೇವೆ ನಾಟಕದಂತೆ.)

ಶೀಲಗೆಟ್ಟವಳನ್ನು, ಕೂಡಬಾರದವಳನ್ನು ಅರಿಯದೆ ಕೂಡಿ, ಅನಂತರ ಗೊತ್ತು ಮಾಡಿಕೊಂಡು., ಶಾಸ್ತ್ರ ಸಂಪ್ರದಾಯಗಳಿಗೆ ಹೆದರಿ, ಅವಳಿಂದ ದೂರವಾಗದೆ, ಉಳಿದು, ಅದುವೇ ಗೃಹಸ್ಥ ಜೀವನವೆಂದು ನಂಬಿ, ಕೊನೆಗೆ ಜೀವನದಲ್ಲಿ ದುಃಖ ಅನುಭವಿಸಿ ಹಾಳಾಗಿ,ಕೊನೆಗೆ ಅನಿವಾರ್ಯವಾಗಿ ಗುಡಿಸಲು ಸೇರಿ, ಭಜನೆ ಮಾಡಿದರೆ, ಭಕ್ತಿಯಿಲ್ಲಿ? ನಿಷ್ಕಾಮಕರ್ಮವೆಲ್ಲಿ? ಜ್ಞಾನವೆಲ್ಲಿ? ಅಂಥವನು ಭಾಗವತ ಪದವಿ ಹೊಂದುವನೆಂತು? ಕೇವಲ ಅಭಾವ- ವೈರಾಗ್ಯವೇ ಅವನ ಸೂತ್ರವಾಗುತ್ತದೆ.

ದಾಂಪತ್ಯವು ಸತಿ ಪತಿಯರೀರ್ವರೂ ಬೆರೆತು ಬಾಳುವುದೇ ಆಗಿದೆ. ಆದರೆ ಯಾವಳು ಪತಿಯೊಂದಿಗೆ ಸಮರಸವಾಗಿ, ಅವನ ಹಿತದಲ್ಲಿ ತನ್ನ ಹಿತ ಕಾಣದೆ, ಅವನ ವಿಚಾರಗಳೊಂದಿಗೆ ತನ್ನ ವಿಚಾರಗಳನ್ನು ಸಮನ್ವಯಗೊಳಿಸಲಾರಳೋ ಅಂಥವಳೊಂದಿಗೆ ಬಾಳುವೆ ಸಾಗಿಸುವದೆಂತು? ದುಃಖಕ್ಕೆ ಆಮಂತ್ರಣ ನೀಡುವುದು ಧರ್ಮವಲ್ಲ. ಮುರಿಯಲಾರದ ಒಪ್ಪಂದ ಎಂದು ಹೇಳುವಾಗ 'ಮದುವೆಯಂಥ ಸಂಬಂಧ ಆಗೀಗ ಕೆಡದಿರಲಿ' ಎಂಬ ಭಾವ ಮಾತ್ರ,

ಮೂಡಿರುವುದನ್ನು ತಿಳಿಯಬೇಕು. ಯಾವಾಗ ಸ್ತ್ರೀ, ಪತಿಭಕ್ತಿ ತೊರೆದು ಮನಬಂದಂತೆ, ಹೀನಕಾರ್ಯದಲ್ಲಿ ತೊಡಗುವಳೋ, ಆವಾಗ ಅವಳಿಂದ ದೂರವಾಗುವುದೇ ಲೇಸು. ಬಹಳ ವಾದರೆ, ಅವಳು ತನಗೆ ಬೇಡವಾದ ವಸ್ತುವೆನಿಸಿರಬಲ್ಲಳು. ಹೀಗೆ ಮಾಡದೆ ಕೆಡುವವರೆಗೆ ಕೆಟ್ಟು ಹೋಗಿ ಕಾದಾಡಿ, ಮನಸ್ತಾಪದಿಂದ ಮನೆ ತೊರೆದು, ಗುಡಿಸಲು ವಾಸಿಯಾಗಿ ಜೀವನ ಸಾಗಿಸಿದರೆ, ಅವನಿಗೆ ಭಾಗವತ ಎಂಬ ಹೆಸರು ಲಭಿಸದು.

೪೬೭

ವೆಲದಿಸೊಂಪುಜೂಚಿ ವಿರ್ರವೀಗಗರಾದು, ಕಲಿಕಿಕೆಪುಡು ಗುಣಮೆ ಕಾರಣಂಬು,
ಚಕ್ಕನ್ನೆನ ರೂಪು ಜಾರಿಣೆಕುಂಡದಾ? ವಿಶ್ವದಾಭಿರಾಮ ವಿನುರ ವೇಮ.

ನಾರಿಯಂದ ಕಂಡು ಮರುಳನಾಗಬೇಡ.
ನಾರಿಗೆಂದೆಂದೂ ಒಳಿತು, ಗುಣವು.
ಜಾರೆಗೇನು ರೂಪು ತಾನು ಇರದಿಹುದೇ?
ವಿಶ್ವದಾಭಿರಾಮ ಕೇಳು ವೇಮ.

ಪುರುಷರು ಹೆಚ್ಚಾಗಿ ಸ್ತ್ರೀಯರೆ ಬಗ್ಗೆ ಮೋಹ ತಾಳುವುದು, ಅವರ ಅಂಗದ ಅಂದ-ಚಂದಗಳನ್ನು ನೋಡಿ ಮಾತ್ರ. ಸದ್ಗೃಹಿಣಿಗೆ ರೂಪ ಮುಖ್ಯವೋ ಗುಣ ಮುಖ್ಯವೋ? ಸದ್ವರ್ತನೆ, ಸದ್ಗುಣಗಳುಳ್ಳವಳು, ಸದ್ಗೃಹಿಣಿಯೆನಿಸುವಳು.

ನಾರಿಯ ಘನತೆ ರೂಪದಲ್ಲಿರುವುದಾದರೆ, ಅವಳು ಘನತೆವಂತಳೇ? ಅಲ್ಲ. ನಾರಿಗೆ ಶೋಭೆ ತರುವುದು, ಅವಳ ಗುಣವೇ.

ನಾರಿಯ ಮೇಲ್ಮೈಯನ್ನು ಅಳೆಯುವುದು, ಅವಳ ಗುಣದ ಮೇಲಿಂದಲ್ಲದೆ, ರೂಪದ ಮೇಲಿಂದಲ್ಲ.

೪೬೮

ತನಕುನೊಪ್ಪಿಪುಟ್ಟ ತನುವೆಂತ ಬಡಲಿನ, ಗೂಳಿವಿಟುಡು ಯುವತಿಗೂಡ ಜೂಚು,
ಪಂಡ್ಲು ಪಡಿನಕುಕ್ಕ ಪಸರಂಬುಗರುವದಾ? ವಿಶ್ವದಾಭಿರಾಮ ವಿನುರ ವೇಮ.

ಎಲ್ಲ ಹುಣ್ಣು ಹುಟ್ಟಿ ಎಲ್ಲ ಚಿಂತೆ ಸೋಸಿ,
ಖುಲ್ಲ ವಿಟನು ಮತ್ತೆ ನಲ್ಲೆ ನೋಳ್ಪ.
ಹಲ್ಲು ಬಿದ್ದ ನಾಯಿ ಎಲುಬು ಕಚ್ಚುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಗನೋರಿಯಾ ಇತ್ಯಾದಿ ಹುಣ್ಣಿನಿಂದ, ವೇಶ್ಯಾ ಗೃಹಕ್ಕೆ ಹೋಗಿ ಬರುವ ಚಾಳಿಯವರು, ನರಳುತ್ತಾರೆ. ಜೀವನದಲ್ಲಿ ಅನೇಕ ರೋಗ—ರುಜಿನುಗಳಿಗೆ ಈಡಾಗುತ್ತಾರೆ. ಚಿಂತೆಯಿಂದ ಬಳಲುತ್ತಾರೆ. ಇಷ್ಟಾದರೂ ದುಷ್ಟರಾದ ವಿಟಪುರುಷರು ಪ್ರೇಯಸಿಯರತ್ತ ಕಣ್ಣು ಹಾಯಿಸುತ್ತಾರೆ.

ವಯಸ್ಸಾದ ನಾಯಿಯ ಹಲ್ಲು ಉದುರಿದ ಮೇಲೆ ಅದು ಎಲುಬು ಕಡಿದು ಆಗ ಬರುವ ತನ್ನ ದವಡೆಯ ರಕ್ತದ ರುಚಿಗೇ ಮೋಹಗೊಳ್ಳುತ್ತದೆ. ಅದೇ ರೀತಿ ಹೆಣ್ಣಿನ ಸಂಗದಲ್ಲಿ ಹಾಳಾಗಿದ್ದರೂ ಮನುಷ್ಯ ಅವಳನ್ನು ಆಸೆಗಣ್ಣಿನಿಂದ ನೋಡುವುದನ್ನು ನಿಲ್ಲಿಸುವುದಿಲ್ಲ.

೪೬೯

ಮುಂಡಮೊಪಿತೋಡ ಮನುಗುಚುಂದೇಲುಚು, ನುಂಡುನಪುಡೆ ಮೊಹಮುಂಡುಗಾನಿ
ಅಂಡಬಾಯುವೆನುಕ ನಾಯುಶಲೇಪೋವು ವಿಶ್ವದಾಭಿರಾಮ ವಿನುರ ವೇಮ.

ರಂಡೆಯು ಜೊತೆಗೂಡಿ ಮುಳುಗಿ, ತೇಲಿ, ಮುತ್ತೆ
ಉಂಡು ಅವಳೊಡನಿರೆ, ಮೋಹ ಬಿಡದು.
ರಂಡೆ ದೂರವಾಗೆ, ಆಶೆ ಹೊರಹೋಹುದು.
ವಿಶ್ವದಾಭಿರಾಮ ಕೇಳು ವೇಮ.

ಸಮೀಪವಾಸದಿಂದ ಕಾಮವಾಸನೆ ಬಲಿಯುತ್ತದೆ. ಕಾಮದಿಂದ ಮೋಹ, ಮೋಹದಿಂದ ಭ್ರಮೆ ಉಂಟಾಗುತ್ತದೆ.

ರಂಡೆಯಾದ ಹೆಣ್ಣಿನೊಂದಿಗೆ ಸದಾ ಕೂಡಿ, ಒಮ್ಮೆ ಅವಮಾನ ಹೊಂದಿ, ಇನ್ನೊಮ್ಮೆ ತಪ್ಪಿಸಿಕೊಂಡು, ಹಾಗೂ ಹೀಗೂ ಸಾರಾಗಿ, ಅವಳೊಂದಿಗೆ ಸಹ ಭೋಜನ. ಮೆಯ್ಯುತ್ತ ಜೀವಿಸಹತ್ತಿದರೆ, ಸಂಗ ಪ್ರಭಾವದಿಂದ ಅವಳ ಕುರಿತು ಮೋಹ ಕುದುರುತ್ತದೆ. ಅವಳನ್ನು ಕುರಿತು ಉಂಟಾದ ಕಾಮದಾಸೆಯು ನಶಿಸಬೇಕಾದರೆ, ಅವಳ ಸಂಗ ತೊರೆಯಬೇಕು. ಅವಳಿಂದ ದೂರ ಇರೆಬೇಕು.

೪೭೦

ಕಾವವಲಯು ಮಗಡು ಕಾಂತನೆಲ್ಲಪ್ಪುಡು, ಕಾವಲೇನಿವಾಡು ಚಾವವಲಯು,
ಕಾಪುಲೇನಿದಾನಿ ಕಾಪುರಮಡುಗನಾ ? ವಿಶ್ವದಾಭಿರಾಮ ವಿನುರ ವೇಮ.

ಕಾಯುವಂಥ ಗಂಡ ಕಾಂತನೆನಿಸುತಿಪ್ಪ,
ಕಾಯಲಾರದಾತ ಸಾವ ರೀತಿ.
ಕಾಯದೆ, ಬಿಟ್ಟವಳ ಕಷ್ಟಕೇಳಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕಾಂತೆಯ ಮಾನ—ಮರ್ಯಾದೆಯನ್ನು ರಕ್ಷಿಸುವ ಹೊಣೆ ಭರ್ತನದು. ಕಾಂತೆಯನ್ನು ದುರ್ಧರ ಪ್ರಸಂಗದಲ್ಲಿ ರಕ್ಷಿಸಬಲ್ಲವನೇ 'ಕಾಂತ.' ಸತಿಗೆ ಅವಶ್ಯವಾದ ರಕ್ಷಣೆಯನ್ನು ಸಕಾಲದಲ್ಲಿ ಒದಗಿಸದಿದ್ದರೆ, ಅವನು ಸಾವಿಗೀಡಾದಂತೆ. ಇದ್ದರೂ ಸತ್ತಂತೆ. ಇನ್ನು ಸತಿಯ ಮಾನ-ಮರ್ಯಾದೆ ಕಾಯುವ ಕರ್ತವ್ಯದ ಹೊಣೆಯನ್ನೇ ತೊರೆದವರ ಕಷ್ಟವನ್ನು ಕೇಳಲಾಸಲ್ಲ.

ಹೆಂಡತಿಗೆ ಗಂಡನಿಂದ ಆಪತ್ಕಾಲದಲ್ಲಿ ರಕ್ಷಣೆ ಬೇಕು.

೪೭೧

ಭಕ್ತಿವ ಒಕ್ತಿ ಕಲ್ಲು ಭಾಗ್ಯಮುನ್ನಲ್ಲನು, ಚಿತ್ತಮೆರುಗು ಪಡತಿ ಚೆಂತಬತಿಕಿ,
ಚಿತ್ತಮೆರುಗನಿಸತಿ ಜೇರಂಗನೀರಾದು, ವಿಶ್ವದಾಭಿರಾಮ ವಿನುರ ವೇಮ.

ಭಕ್ತಿ ಮುಕ್ತಿ ಉಂಟು, ಭಾಗ್ಯ ಮತ್ತೆ ಉಂಟು.
ಚಿತ್ತವರಿತು ಮಡದಿ ಜೊತೆಯೊಳಿರಲು,
ಚಿತ್ತವರಿಯದ ಸತಿ ಹತ್ತಿರಿರಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

(ಮದುವೆ ಒಂದು ಸಂಸ್ಕಾರ. "ಪತಿಯು ಸತಿಯೊಡನೆ ಒಂದಾಗಿ ಹೋದನೆಂದು ಸಾರುತ್ತಾರೆ. ಅಂದರೆ ಸ್ತ್ರೀ ಒಮ್ಮೆ ಮದುವೆಯಾದ ಬಳಿಕ ಬಿಡುಗಡೆಯ ಪ್ರಶ್ನೆಯೇ ಇಲ್ಲ'' ಎಂದು ಮನುಸ್ಮೃತಿ ಸಾರಿತ್ತದೆ. ಆದರೆ ಮನಸ್ಸು ಕೆಟ್ಟು ಹೋದಾಗ ಸತಿಪತಿಗಳು ಜೊತೆಯಾಗಿ ಇರುವುದೆಂತು ? ಇಂಥ ವಿರಸದ ಬಾಳಿನಲ್ಲಿ ನಿಷ್ಕಾಮ ಕರ್ಮ ಧ್ಯಾನಾದಿಗಳು ಸಾಧ್ಯವೆಂತು? ಮುಕ್ತಿಯ ಮಾತೆಲ್ಲಿ?)

ಪತಿಯ ಬೇಕು – ಬೇಡಗಳನ್ನೂ, ಮಾನಸಿಕ ನಿವೃತ್ತಿ ಪ್ರವೃತ್ತಿಗಳನ್ನೂ ತಿಳಿದ್ವರ್ತಿಸುವ ಸತಿಯು ಬಳಿಯಲ್ಲಿದ್ದರೆ, ಆಗ ಚಿತ್ತ ನಿಗ್ರಹ ಸಾಧ್ಯವಾಗಬಹುದು. ಚಿತ್ತ ನಿಗ್ರಹದಿಂದ ಸಮಚಿತ್ತ ಸ್ಥಿತಿ ಹೊಂದಬಹುದು. ನಿಷ್ಕಾಮ ಕರ್ಮ ಆಗ ಸಾಧ್ಯ; ಧ್ಯಾನಕ್ಕೆ ತಕ್ಕ ಕಾಲವದು. ಭವದ ತೊಂದೆ ಹರಿದು ಭವಹರನಾಗಿ ಮುಕ್ತನಾಗಬಹುದು. ಆಕೆ ಹಿಂಗಿದ ಬಳಿಕ ಆಗುವ ಅನುಭವವೆಲ್ಲ ಆನಂದಮಯ.

ಆದರೆ ಪತಿಯ ಮನಸ್ಸಿನ ನಿವೃತ್ತಿ-ಪ್ರವೃತ್ತಿಗಳನ್ನು ತಿಳಿಯದ ಸತಿಯು ಬಳಿಯಿದ್ದರೆ, ಇದಾವುದೂ ಸಾಧ್ಯವಿಲ್ಲ. ಅಂಥವಳು ಬಳಿ ಇರುವುದು ಒಳಿತೂ ಅಲ್ಲ.

೪೭೨

ಪ್ರೀತಿಲೇನಿಲಂಜೆ ಭೂತಂಬೆ ಯೌಜವುೀ ಪ್ರೀತಿಲೇನಿ ಪಾಟು ಚೇತನೇಟು.
ದಾತ ಲೇನಿಯೂರು ದಯ್ಯಾಲಪೇಟಯಾ,ವಿಶ್ವದಾಭಿರಾಮ ವಿನುರ ವೇಮ.

ಪ್ರೀತಿಯಿರದ ಸೂಳೆ ಭೂತದಂತೆ; ನೋಡು,
ಪ್ರೀತಿಯಿರದ ಬಾಳು ಪೂರ್ಣ ಹಾಳು.
ದಾನನಿರದ ಬೀಡು ದೆವ್ವಗಳಿಹ ಗೂಡು.
ವಿಶ್ವದಾಭಿರಾಮ ಕೇಳು ವೇಮ.

'ಸೂಳೆ ವಿಟ-ಪುರುಷನನ್ನು ವರಿಸುವುದು ಎರಡು ಕಾರಣಕ್ಕಾಗಿ. ಮೊದಲನೆಯದಾಗಿ ತನ್ನ ಉದರ-ನಿರ್ವಾಹದ ವೆಚ್ಚ ಭರಿಸಿಕೊಳ್ಳಲು. ಎರಡನೆಯದಾಗಿ ಸ್ತ್ರೀ ಸಹಜವಾದ ಕಾಮದಾಸೆಯ ತೃಪ್ತಿಗಾಗಿ. ಕಾಮತೃಪ್ತಿ ದೊರೆಯಲು ಮತ್ತು ಅವಶ್ಯವಿದ್ದಷ್ಟು ಮಾತ್ರ

ಹಣ ಬೇಡುವ ಬುದ್ಧಿ ಬರಲು ಸೂಳೆಯಲ್ಲಿ ವಿಟನ ಬಗ್ಗೆ ಪ್ರೀತಿ ಇದ್ದರೆ ಮಾತ್ರ ಸಾಧ್ಯ. ಪ್ರೀತಿಯೇ ಇಲ್ಲದಿದ್ದರೆ ಸೂಳೆಯ ಸಂಗ ದೆವ್ವನ ಸಂಗದಂತೆ. ಅಲ್ಲಿ ಹೋಗದಿದ್ದರೆ ಅವಳು ಎಲ್ಲ ಬಯಲಿಗಿಟ್ಟು ಅವಮಾನಿಸುವ ಹೆದರಿಕೆ. ಅವಳಲ್ಲಿ ಹಣ ಕೀಳುವ ಕಿರಿ ಕಿರಿ. ತೃಪ್ತಿಯಿಲ್ಲ.

ಅದೇ ರೀತಿ ದಾನ ನೀಡದ ಊರು ಸಹ, ಮಾನವ ಸಹಜ ಗುಣಗಳಾದ ದಯೆ, ಅನುಕಂಪಗಳಿರದ ದೆವ್ವಗಳ ತಾಣದಂತೆ.

೪೭೩

ಬತ್ತಿಲೇನಿಲಂಜೆ ಪಲುಮಾರು ಬಿಲಿಚಿನ, ಬತ್ತಿಕಾದು ಲಯಪುಮಿತ್ತಿಕಾನಿ
ಮಿತ್ತಿಚೋರಗ ನಿಲ್ಲು ಮ್ರಿಂಗಕಪೋವುನಾ ? ವಿಶ್ವದಾಭಿರಾಮ ವಿನುರ ವೇಮ.

ಭಕ್ತಿಯಿರದ ಸೂಳೆ ಹತ್ತು ಸಲ ಕರೆದರು,
ಭಕ್ತಿಯಲ್ಲ; ಆಕೆ ಲಯದ ಮೃತ್ಯು
ಮೃತ್ಯು, ಹೊಕ್ಕ ಮನೆಯ ಮುಗಿಸದೆ ಹೋಗುವುದೆ?
ವಿಶ್ವದಾಭಿರಾಮ ಕೇಳು ವೇಮ.

[ದ್ವೇಷರಹಿತ, ಮಿತ್ರಭಾವದಿಂದ ಕೂಡಿದ, ಕರುಣಾಪೂರಿತನಾದವನೇ ಭಕ್ತ. ನಿಷ್ಕಾಮಕರ್ಮದಲ್ಲಿ ಯುಕ್ತರಾಗುವುದು, ಧ್ಯಾನಾಸಕ್ತರಾಗುವುದೇ ಭಕ್ತಿ. ಯಾವುದೇ ಪ್ರತಿಫಲ ಬಯಸದೆ ತನ್ನ ಗಂಡನಿಗೆ ಕಲ್ಯಾಣವಾಗಲೆಂದು ಕಾರ್ಯತತ್ಪರಳಾಗುವ ಮಡದಿ ಗಂಡನ ಭಕ್ತಳು. ಅವಳು ಪತಿಯ ಬಗ್ಗೆ ತಾಳಿದ ಭಾವನೆಯೇ ಭಕ್ತಿ.]

ಸೂಳೆ ಹತ್ತಾರು ಸಲ ಕರೆಯುವಳೆಂದು, ಅವಳಲ್ಲಿ ಭಕ್ತಿಯುದಿಸಿದೆಯೆಂದು ತಿಳಿಯಕೂಡದು. ಆವಳು ಕರೆಯುವುದು ಪ್ರತಿಫಲದ ಆಸೆಯಿಲ್ಲದ ಭಕ್ತಿಯಿಂದ ಪ್ರೇರಿತಳಾಗಿ ಅಲ್ಲ. ಆದರೆ, ಭೋಗಕೂಪಕ್ಕೆಳೆದು, ಇರುವ ದೇಹ ಶಕ್ತಿಯನ್ನೂ, ಸಿರಿ-ಸಂಪದಗಳನೂ ಬರಿದಾಗಿಸಿ, ನಾಶ ಮಾಡುವ ಉದ್ದೇಶದಿಂದ ಮಾತ್ರ. ಅವಳು ಬೆನ್ನು ಹತ್ತಿದ ಮೇಲೆ ಬಿಡ್ಡುವುದಿಲ್ಲ. ಲಯಕಾಲದ ಮೃತ್ಯುವಿನಂತೆ.

ನಮ್ಮ ಅಂಕೆಗೆ ಮೀರಿದ ಮೃತ್ಯುವಿನಂತಿರುವ ಸೂಳೆ ಯಾರಿಗೆ ಆಂಟಿಕೊಳ್ಳುವಳೋ ಆ ಮನೆಯನ್ನೂ ಮೂರಾಬಟ್ಟೆ ಮಾಡದೆ ಬಿಡಳು.

೪೭೪

ಭವುಡು ಚಿತ್ರಮುಗನು ಬಾರ್ಯಲ ವೊಯನು, ಅಟ್ಟು ವೊಯಗಲುಗು ದಿಟ್ಟಯ್ಯೆನ,
ನತನಿವಲೆನೆ ಬೂದಿ ಯಲದಿನ ಮೆರಗಗು, ವಿಶ್ವದಾಭಿರಾಮ ವಿನುರ ವೇಮ.

ಶಿವಲೀಲೆ ವಿಚಿತ್ರ; ಸತಿಯು ಹೊತ್ತು ನಿಂತ;
ಅವನಂತೆ ಹೊತ್ತಿರಲರ್ಹನೆನಿಸು.
ಭವವ ಹೊತ್ತು ಅಂತೆ ಬೂದಿ ಬಳಿಯೆ, ಚೆಂದ.
ವಿಶ್ವದಾಭಿರಾಮ ಕೇಳು ವೇಮ.

(ಶಿವನು ತನ್ನ ತಲೆಯಲ್ಲಿ ಗಂಗೆಯನ್ನು ಹೊತ್ತುಕೊಂಡನೆಂದೂ, ಪಾರ್ವತಿಗೆ ಇದನ್ನು ನೋಡಿ ಸಹಿಸುವುದಾಗದೆ, ವಿನಾಯಕನನ್ನು ಕಳಿಸಿ, ಗೌತಮ ಋಷಿಯು ತಪಸ್ಸು ಮಾಡುವಂತೆ ಪ್ರೇರೇಪಿಸಿ, ಗಂಗೆಯನ್ನು ಭೂಮಿಗಿಳಿಸಿದನೆಂದೂ ಪೌರಾಣಿಕ ಕಥೆ. ಕೈಲಾಸವೆಂದರೆ ಊರ್ಧ್ವಲೋಕ. ಹಿಮಾಲಯದ ಉತ್ತುಂಗ ಶಿಖರಕ್ಕೆ ಕೈಲಾಸವೆಂದರು. ಪರ್ವತ ಪ್ರದೇಶದಲ್ಲಿ ಹುಟ್ಟುವ ಪ್ರಕೃತಿಯೇ ಪಾರ್ವತಿ. ಮೇಲಿಂದ ನೀರು ಹರಿದು ಬರುತ್ತದೆ. ಅಲ್ಲಿ ಋಷಿಗಳು ಆಶ್ರಮ ಸ್ಥಾಪಿಸುತ್ತಾರೆ. ಋಷಿಯ ತಪಸ್ಸಿನಿಂದ ಮೇಲಿನ ನೀರು ಕೆಳಗೆ ಬಂದಿತೆಂದೂ ಪಾರ್ವತಿಯು ಕೆಳಗೆ ಇರುವುದರಿಂದ ಗಂಗೆಯನ್ನೂ ಕೆಳಗಿಳಿಸುವಂತೆ, 'ಸವಕಳಿ ಮಣ್ಣಿನ ರೂಪವಾದ' ಪಾರ್ವತಿಯ ಮೈಮೇಲಿನ ಧೂಳಿ-ಹೊಲಸಿನಿಂದ ರೂಪುಗೊಂಡ, ವಿನಾಯಕನು ಗಂಗೆಯನ್ನು ಕರೆತರಲು ಹೋದನೆಂಬ ಸುಂದರ ಕಲ್ಪನೆಯ ಚಿತ್ರವಿದೆ.)

ಶಿವನ ಲೀಲೆ ವಿಚಿತ್ರವಾಗಿದೆ. ಗಂಗೆ ಶಿವನ ಶಿರದ ಮೇಲೆ ಕುಳಿತಳು. ತನ್ನ ತಲೆಯ ಮೇಲೆ ಹೊತ್ತು ನಿಂತರೂ ಶಿವ, ಗಂಗೆಯ ದಾಸನಾಗಲಿಲ್ಲ. ತನ್ನ ಭಕ್ತರು ತಪಸ್ಸುಮಾಡಿದೊಡನೆ ಗಂಗೆಯನ್ನು ಕೆಳಗಿಳಿಸಿ ಅವರನ್ನು ಸಂಪ್ರೀತಗೊಳಿಸುತ್ತಿದ್ದ. ಇಂತ ತನ್ನ ಧರ್ಮ ಪಾಲಿಸುತ್ತಿದ್ದ. ಶಿವನಂತೆ ಹೆಂಡತಿಯನ್ನು ಮೇಲುಮಟ್ಟದಲ್ಲಿಟ್ಟು, ಆದೇ ವೇಳೆಗೆ ನಿಸ್ಸ ಅಂಕಿತಳಾಗಿಯೂ ಉಳಿಯುವಂತೆ ಮಾಡಿಕೊಳ್ಳಲು ಅರ್ಹನಾಗು. ಶಿವನು ಧ್ಯಾನ ಮಗ್ನನಾದಾಗ ಕಾಮನು ಪೀಡಿಸಲಾಗಿ, ಅವನನ್ನು ಸುಟ್ಟ. ಭಸ್ಮ ಬಳಿದ. ಆದರೂ ಕಾಮನನ್ನು ಈ ಕಾರ್ಯಕ್ಕೆ ಕಳಿಸಿದ ಸತಿ ಪಾರ್ವತಿಯೊಂದಿಗೆ ಪ್ರಣಯಕ್ಕಿಳಿದ. ಕಾರಣ ಶಿವನಂತೆ ಭವವನ್ನು ಹೊಂದಿ, ಬೂದಿ ಬಳಿದುಕೊಂಡರೆ ಮಾತ್ರ ಅಡ್ಡಿಯಿಲ್ಲ.

೪೭೫

ವಿಟುಲ ಜೂಡಗಾನೆ ಮಟುಮಾಯ ಜೇಸಿಯು, ಕಿಟಕಿಯಂದ ಜೇರಿ ಕೇಕರಿಂಚು,
ಪಟಮುಖೀರ ಸ್ತ್ರೀಲ ಬರಿಕಿಂಪಲೇರಯಾ, ವಿಶ್ವದಾಭಿರಾಮ ವಿನುರ ವೇಮು.

ವಿಟನ ಕಂಡ ಕ್ಷಣವೆ ಮಾಟ ಮಾಯ ಮಾಡಿ,
ಕಿಟಕಿ ಸಾರಿ, ಕೇಕರಿಸುತಿಪ್ಪಳು.
ಪಟುತ್ವಕೆಟುಕದಾ ನಾರಿ–ನೆಲೆಯೆರಿಯನು
ವಿಶ್ವದಾಭಿರಾಮ ಕೇಳು ವೇಮು.

ಶೀಲಗೆಟ್ಟ ಹೆಣ್ಣು ವಿಟ ಪುರುಷನನ್ನು ನೋಡಿದೊಡನೆ, ಗಾಡಿ– ಮೋಡಿಗಳಿಂದ ಮನೆಯೊಳಗಿನವರನ್ನು ಮರುಳುಗೊಳಿಸಿ, ಕಿಡಕಿಯ ಬಳಿಗೆ ಹೋಗಿ ಇಣಿಕಿ ಕೇಕರಿಸುವಳು- ಈ ಮೂಲಕ ವಿಟನಿಗೆ ತನ್ನ ಒಪ್ಪಿಗೆಯ ಸಂಕೇತ ಮುಟ್ಟಿಸುವಳು.

ಗಂಡನು ಸ್ತ್ರೀಯನ್ನು ಅಂಕಿತದಲ್ಲಿಟ್ಟುಕೊಳ್ಳಲು ಸಾಕಷ್ಟು ಚತುರತೆಯನ್ನು ತೋರುತ್ತಾನೆ. ಆದರೆ, ಅವನ ಚತುರತೆಯು ಅಳವನ್ನು ಮೀರಿದ ಸ್ತ್ರೀಯ ನೆಲೆಯರಿಯುವುದು ಕಷ್ಟಕರವು.

೪೭೬

ಇಂದ್ರ ಪದವಿಗೋರಿ ಇಂಪುಗಾಯಜ್ಞಮುಲ್ ಕಲಿಮಿಚೇತ ಜೇಸಿ ಕಾಮುಲ್ಗೆರಿ,
ಪರಮಯೋ ಮೂನಿ ಪಟ್ಟಂಗಲೇವಿನಿ, ವಿಶ್ವದಾಭಿರಾಮ ವಿನುರ ವೇಮು.

ಇಂದ್ರ ಪದವಿ ಕೋರಿ, ಇಂಪು ಯಜ್ಞ ಗೈದು,
ಕನಕದ ಬಲದಿಂದ ಕಾಮಿಯಹನು.
ಪರಮಯೋಗದಿಂದ ಪಟ್ಟ ಇಲ್ಲವೇನು ?
ವಿಶ್ವದಾಭಿರಾಮ ಕೇಳು ವೇಮು

(ಇಂದ್ರನೆಂದರೆ ಗುಡುಗಿನ ದೇವತೆ. ಇಂದ್ರ ತನ್ನ ಗದೆಯಿಂದ ಮೇಘಗಳಿಗೆ ಹೊಡೆದನೆಂದರೆ ಮಳೆಯಾಗುವುದೆಂದು ವೈದಿಕ ದ್ರಷ್ಟಾರರ ಕಲ್ಪನೆ. ಅತಿ ಶ್ರೇಷ್ಠವೆನಿಸಿದ ಋಗ್ವೇದದಲ್ಲಿ ಇಂದ್ರನ ಸ್ತುತಿಪರ ಸೂಕ್ತಗಳೇ ಕಾಲು ಭಾಗದಷ್ಟು. ಯಜ್ಞ ಕಾಲದಲ್ಲಿ ಇನ್ನಿತರ ದೇವತೆಗಳಿಗಿಂತ ಇಂದ್ರನನ್ನು ಕುರಿತು ಗೆಯ್ಯುವ ಕೋರಿಕೆಗಳೇ ಹೆಚ್ಚು. ದೇವಲೋಕದಲ್ಲಿ ಇಂದ್ರನ ಭೋಗವೇ ಭೋಗ. ಶಚಿದೇವಿ ಇಂದ್ರಾಣಿ.)

ಇಂದ್ರನನ್ನು ಕುರಿತು ಹಣ ವೆಚ್ಚಮಾಡಿ, ಗೈದು, ಅವನ ಹೆಸರಿನಲ್ಲಿ ಆಡು-ಆಕಳುಗಳ ಹವಿಸ್ಸು ಅರ್ಪಿಸಿ, ಸೋಮ ರಸ ನೀಡಿ ತೃಪ್ತಿಬಡಿಸಿ, ಇಂದ್ರ ಪದವಿಗೆ ಸಮನಾದ ಸುಖಭೋಗ ಆಶಿಸಿ, ಯಜ್ಞ ಗೆಯ್ಯುವವರು ಕಾಮಿಗಳಷ್ಟೇ. (ಇಂದ್ರಿಯಗಳನ್ನು ಇಷ್ಟ ವಸ್ತುಗಳ ಮೇಲೆ ಹರಿಬಿಟ್ಟು ಭೋಗಿಸುವುದೇ ಕಾಮ.)

ದೇವಲೋಕದ ಸುಖ, ಇಂದ್ರ ಪದವಿಯ ಸುಖ. ದೇವಲೋಕವೆಂದರೆ ಉನ್ನತ ಮಾನಸಿಕ ಸ್ಥಿತಿ. ಮನೋಲೋಕ. ಮಾನಸಿಕ ಅನುಭವವೇದ್ಯವಾದುದು. ಇಂಥ ಸುಖವು ಪರಮಾತ್ಮನೊಡನೆ ಒಂದಾಗುವ ಮಾನಸಿಕ ಮಟ್ಟ ಮುಟ್ಟುವ ಪರಮಯೋಗದಿಂದ ಸಾಧ್ಯವಾಗದೇನು? ತುಂಬಾ ಸಾಧ್ಯ.
ಕಾರಣ ಯಜ್ಞ ಕರ್ಮ ಗೈದು ಕಾಮಿಯಾಗುವುದಕ್ಕಿಂತ ಯೋಗ ಮಾರ್ಗವೇಲು.

೪೭೭

ಪಾಲಪ್ರಿಯಮುಚೇತ ಬರಗ ನೇಡ್ಚೆಡಿ ಬಿಡ್ಡ, ಕ್ಕುತ್ತುದಪ್ಪುಲಕಿಲ ಶೋಕಪಡಗ
ದಲ್ಲಿ ಪನುಲಮಾನಿ ತನಯುನಿ ಮುದ್ದಾಡು, ವಿಶ್ವದಾಭಿರಾಮವಿನುರ ವೇಮು.

ಹಾಲು ಕುಡಿಯ ಬಯಸಿ ಚೀರಿ ಅಳುವ ಕಂದ;
ಜೊಲ್ಲು ಹಿಂಗಿ ಹಸಿದು ಶೋಕಪಡುವ;
ನಲ್ಮೆಯಿಂದ ಮುದ್ದಿಡುವಳು, ಕೆಲಸ ತೊರೆದು,
ವಿಶ್ವದಾಭಿರಾಮ ಕೇಳು ವೇಮು.

ಸ್ತ್ರೀಯ ಗರ್ಭಾಶಯದಲ್ಲಿ ಮೂರ್ತ ರೂಪಗೊಂಡು ಬಂದ ಮಕ್ಕಳು ಅವಳ ಕರುಳಿನ ಕಂದರು. ಮಕ್ಕಳು ಅತ್ತರೆ ತಾಯಿಗೆ ಕರಳು ಹರಿದು ಬಂದ ನೋವಾಗುವುದು.

ಬಾಯಿಯಲ್ಲಿ ಜೊಲ್ಲು ಬತ್ತಿದಾಗ ಮಕ್ಕಳು ದು:ಖ ಪಡುತ್ತವೆ. ಅದನ್ನು ತಿಳಿದೊಡನೆ ತಾಯಿ ಮಕ್ಕಳನ್ನು ಎತ್ತಿ ಮುದ್ದಿಡುತ್ತಾಳೆ. ಜೊಲ್ಲು ತರಿಸುತ್ತಾಳೆ. ಮಗು ಮತ್ತೆ ನಗುತ್ತದೆ. ಅದನ್ನು ಕಂಡು ತಾಯಿಗೆ ಇನ್ನೂ ಹೆಚ್ಚು ಹರ್ಷ. ಮಗುವಿಗೆ ಮುದ್ದಿಡುವುದಕ್ಕಾಗಿ ಎಂಥ ಕೆಲಸಬೊಗಸೆಗಳಿದ್ದರೂ ತೊರೆದು ಧಾವಿಸುತ್ತಾಳೆ, ತಾಯಿ.

೪೭೮

ಪಡುಚುನೂರಕೇಲ ಪಾರಜೂಚೆದರೊಕ್ಕೊ! ಎಂತವಾರಲ್ಮೆನ ಭ್ರಾಂತಿಜೆಂದಿ,
ಲೋನಖಿರು ಕಾಮು ಲೊಂಗದೀಯಗಲೆರು, ವಿಶ್ವದಾಭಿರಾಮು ವಿನುರ ವೇಮು.

ನಾರಿಯನ್ನು ಆರು ಪಾರು ನೋಡಲಾಗ
ಯಾರು ಆದರೇನು ? ಭ್ರಾಂತಿಗೊಂಡು
ಏರಿನಿಂತ ಕಾಮು ಮೀರಿ ಮೆಟ್ಟರಯ್ಯ.
ವಿಶ್ವದಾಭಿರಾಮು ಕೇಳು ವೇಮು.

ಹೆಣ್ಣಿನ ಮುಖವೇ ಅವಳು ಪುರುಷನಿಗೆ ನೀಡುವ ಭೋಗ ಸುಖದ ಬಿಂಬ ತೋರುವ ಕನ್ನಡಿಯಂತೆ. ಅವಳ ಅಂಗ ಸೌಷ್ಟವ, ಗಾಡಿ–ವೋಡಿಗಳನ್ನು ಹಾವ—ಭಾವಗಳನ್ನೂ ನೋಡಿದರೆ, ಎಂಥವರಾದರೂ ಭ್ರಾಂತರಾಗುತ್ತಾರೆ. ಕಾಮ ಪ್ರಚೋದನೆಗೆ ಒಳಗಾಗುತ್ತಾರೆ. ಕಾಮಬಲ ಜಯಿಸದೆ ಅದಕ್ಕೆ ಶರಣಾಗುತ್ತಾರೆ. ಕಾಮವನ್ನು ಮೆಟ್ಟಿ ನಿಲ್ಲಲಾರದೆ ಹೆಣ್ಣಿನ ಮೋಹಪಾಶದಲ್ಲಿ ಸಿಲುಕುತ್ತಾರೆ.

ಕಾಮದಾಶೆಯಿಂದ ದೂರವಿರುವುದು ಕಷ್ಟಸಾಧ್ಯ. ಒಳಿತು ಸಾಧಿಸುವ ಕಾರ್ಯಗಳೆಲ್ಲ ಕಷ್ಟಸಾಧ್ಯವೇ.

೪೭೯

ದಾತ ಲೇನಿಯೂರು ದಯ್ಯಾಲವೆನುವಾಡ, ನೀತಿ ಲೇನಿಮಾಟ ರಾತಿವ್ರೇಟು,
ಪ್ರೀತಿಲೇನಿಲಂಜೆ ಪ್ರೇತವಾಹನವಯಾ, ವಿಶ್ವದಾಭಿರಾಮು ವಿನುರ ವೇಮು.

ದಾತನಿರದಾ ಎಡೆ ದೆವ್ವದ ಹಿರಿವಾಡೆ.
ನೀತಿಯಿರದ ಮಾತು ಬಂಡೆಯೇಟು.
ಪ್ರೀತಿಯಿರದ ಸೂಳೆ ಪ್ರೇತ ಹೊತ್ತ ರೀತಿ.
ವಿಶ್ವದಾಭಿರಾಮು ಕೇಳು ವೇಮು.

ಇಲ್ಲದವರಿಗೆ ಉಳ್ಳವರು ನೀಡುವುದೇ ದಾನ. ಉಳ್ಳವರಿಗೆ ದಾನ ಗುಣ ಶೋಭಿಸುತ್ತದೆ. ದಾತನಾಗದೆ ಆಸ್ತಿ ಹೊಂದಿದವನು ಅಶುಭಕರನು; ಇಲ್ಲದವರಿಗೆ ಸಲ್ಲಬೇಕಾದುದನ್ನು ಯಾರೂ ಮುಟ್ಟದಂತೆ, ಹೆದರಿಸುವ ಭೂತ. ಅವನ ವಾಸಸ್ಥಾನ ದೆವ್ವದ ವಾಸಸ್ಥಾನ.

ನೀತಿಯುಳ್ಳ ಮಾತು ಉಪದೇಶವೆನ್ನಿಸುತ್ತದೆ. ಮಾರ್ಗದರ್ಶಿಯಾಗಿರುತ್ತದೆ. ನೀತಿ ಇಲ್ಲದಿದ್ದರೆ ಅಂಥ ಮಾತು ಪರಿಣಾಮ ಬೀರದು. ಅದು ಕಲ್ಲು ಬಂಡೆಗೆ ಗುದ್ದಿದಂತೆ. ಕೈನೋವು ಮಾತ್ರ. ಫಲವೇನಿಲ್ಲ.

ಸ್ತ್ರೀ–ಪುರುಷರ ರತಿ-ಕ್ರೀಡೆ ಸರಸಕರವಾಗಲು ಪರಸ್ಪರ ಪ್ರತಿಕ್ರಿಯೆ ಅವಶ್ಯಕ. ಕಾಮ ಚೇಷ್ಟೆಗಳಾದ ಮರ್ದನ, ಕಚ್ಚಾಟ ಕಚಕುಳಿಗಳು ಸ್ತ್ರೀ-ಪುರುಷರೀರ್ವರೂ ಪರಸ್ಪರ ಪ್ರತಿಕ್ರಿಯಾತ್ಮಕವಾಗಿ ಮಾಡಬೇಕಾದ ಚೇಷ್ಟೆಗಳೆಂದೂ ಒಮ್ಮುಖದ ಕ್ರಿಯೆಗಳಲ್ಲವೆಂದೂ ವ್ಯಾತ್ಸ್ಯಾಯನಾದಿ ಕಾಮ ಸೂತ್ರಕಾರರ ಅಭಿಪ್ರಾಯ. ತಕ್ಕ ಪ್ರತಿಕ್ರಿಯೆ ತೋರುವ ಸ್ತ್ರೀ ಪ್ರೀತಿ ಪುರಸ್ಸರೆಳಾಗಿರಬೇಕು. ಪ್ರೀತಿ ಇಲ್ಲದ ಸೂಳೆಯೊಂದಿಗೆ ಕಾಮ ಚೇಷ್ಟೆಗಿಳಿದರೆ, ಅವಳನ್ನು, ಹೆಣ ಹೊತ್ತಂತೆ ಎತ್ತಬೇಕಾಗುವದಷ್ಟೇ.

ವೇಶ್ಯೆಯೊಡನೆ ಸಹ ಪ್ರೀತಿ ಇಲ್ಲದೆ ಸುಖವಿಲ್ಲ. ಇನ್ನು ಇತರತ್ರ, ಪ್ರೀತಿಯು ಮಹತಿ ಅಷ್ಟಿಷ್ಟೆಂದು ಹೇಳಲಾಸಲ್ಲ

೪೮೦

ಫಾಲನೇತ್ರುಡೈನ ನಂಪಂಗಲೇಡಯಾ, ಆಲಿಮೀರಬಿಟ್ಟ ಯಾದಿಮರುವ
ಗೋಲಯನುಚು ನಮ್ಮಗೂಡದು ವೆರ್ರಿಯ್ಯೆ, ವಿಶ್ವದಾಭಿರಾಮು ವಿನುರ ವೇಮು.

ಅಗ್ನಿ ನೇತ್ರನಾಗಿ ಬಗ್ಗಿಸಲಾರನವ.
ಕೈಗೆ ಮೀರಿದವಳ; ನಾರಿಯಬಲೆ,
ಮುಗ್ಧೆಯೆಂದು ನಂಬಬೇಡ, ಮರುಳನಾಗಿ.
ವಿಶ್ವದಾಭಿರಾಮು ಕೇಳು ವೇಮು.

ಪರಮೇಶ್ವರನು ಉರಿಗಣ್ಣು ಹೊಂದಿದವನು. ಆದರೂ ಸಹ ಪಾರ್ವತಿಯನ್ನು ನಿಯಂತ್ರಿಸಲಾರದಾದ. ಪಾರ್ವತಿ ಯೋಗನಿರತನಾದ ಪತಿಯ ಯೋಗ ಭಂಗವಾದರೂ ಚಿಂತೆಯಿಲ್ಲ; ತನ್ನ ಕಾಮವಾಸನೆ ತೃಪ್ತಿಯಾದರಾಯ್ತು, ಎಂದು ಬಯಸಿದಳು. ಕಾಮನನ್ನು ಪ್ರೇರೇಪಿಸಿ ತನ್ನ ಬಯಕೆ ಈಡೇರಿಸಿಕೊಂಡಳು. ಶಿವನ ಕೈಯಲ್ಲಿ ಪಾರ್ವತಿ ಉಳಿಯಲಿಲ್ಲ. ಶಿವನನ್ನೇ ತನ್ನ ವಶ ಮಾಡಿಕೊಳ್ಳಲು ಹವಣಿಸಿ ಯಶ ಪಡೆದಳು.

ನಾರಿ ಅಬಲೆ, ಅವಳು ಏನೂ ಅರಿಯದ, ಯುಕ್ತಿ-ಸಂಚು-ಹೊಂಚು ಗೊತ್ತಿರದ, ಮುಗುದೆ ಎಂದು ತಿಳಿಯುವುದು ತಪ್ಪು. ಹಾಗೆ ನಂಬಿದವರು ಮರುಳರಾಗಿ ಹೋಗುವರಷ್ಟೇ.

೪೮೧

ಫಲಕ ಮೇಡಮುಚೇತ ಬಟ್ಟ ಖಡ್ಗಂಬೂನ, ಬಂಟುತನಮುರಾದು ಪ್ರತಿಭಲೇಮಿ
ವೀಧಿಲೋನದಿರುಗ ವೆಲದಿ ಪುರುಷುಡೌನೆ? ವಿಶ್ವದಾಭಿರಾಮು ವಿನುರ ವೇಮು.

ಎಡ ಹಸ್ತದಿ ಢಾಲು ಬಲದಿ ಖಡ್ಗ ಪಿಡಿದು,
ಕಡು ಬಂಟನೆಂತು, ಪ್ರತಿಭೆಯಿರದೆ?
ಬಿಡದೆ ಬೀದಿ ತಿರುಗೆ, ನಾರಿ ಪುರುಷನೆಂತು?
ವಿಶ್ವದಾಭಿರಾಮು ಕೇಳು ವೇಮು.

ಆಚಾರ ವಿಚಾರಗಳಲ್ಲಿ ತಾಳಮೇಳವಿರಬೇಕು. ಅದು ಸದ್ವರ್ತನೆ. ಹೊರಗೆ ತೋರುವುದೊಂದು ಒಳಗೆ ಇರುವುದು ಇನ್ನೊಂದಾದರೆ ಅಂಥ ವರ್ತನೆ ಡಂಭವೆನಿಸುವುದು; ನಾಟಕೀಯವಾಗುವುದು.

ಸೇನಾನಿಯಾದವನು ಪ್ರತಿಭೆಯುಳ್ಳವನಿರಬೇಕು. ತೇಜಸ್ವಿಯಾಗಿರಬೇಕು. ಇಲ್ಲದಿದ್ದಿರೆ ಅವನು ಬಂಟನೆನಿಸಿಕೊಳ್ಳನು. ತೋರಿಕೆಗೆ ಎಡಗೈಯಲ್ಲಿ ಢಾಲನ್ನೂ ಬಲಗೈಯಲ್ಲಿ ಖಡ್ಗವನ್ನೂ ಹಿಡಿದುಕೊಂಡ ಮಾತ್ರಕ್ಕೆ ಬಂಟನೆನಿಸನು.

ಅದೇ ರೀತಿ ಊರಿನ ಬೀದಿಗುಂಟ ಪುರುಷರಂತೆ ತಿರುಗಿದ ಮಾತ್ರಕ್ಕೆ ನಾರಿ **ಪುರುಷ** ನೆನಿಸಳು. ಪ್ರತಿಯಾಗಿ ಲಜ್ಜೆಗೇಡಿಯೆನಿಸುವಳು. ಪುರುಷನಿಗೆ ಉಚಿತವಾದುದೆಲ್ಲ ಸ್ತ್ರೀಗೆ ಉಚಿತವಲ್ಲ.

ಎಲ್ಲರೂ ತಮ್ಮ ಹೊಣೆಯರಿತು ಪ್ರಾಮಾಣಿಕರಾಗಿ ಕಾರ್ಯ ನಿರ್ವಹಿಸಬೇಕು,

ಪದ್ಯ ೨

ಪುರುಷು ಭಾಗ್ಯಮುನನೆ ಪುಣ್ಯವತಿದೊರ್ಕು. ಬುಣ್ಯವತಿಕಿ ನಟ್ಲಿ ಪುಟ್ಟು ಸುಖಮು
ನಿರುವುರನುಭವಿಂಪ ಹಿತುಲಗು ಪುತ್ರುಲು, ವಿಶ್ವದಾಭಿರಾಮ ವಿನುರ ವೇಮ.

ಪುರುಷ ಭಾಗ್ಯದಿಂದ ಪುಣ್ಯವತಿಯ ಪಡೆವ
ವರಪುಣ್ಯವತಿಯು ಸುಖ ಪಡೆವಳು.
ಈರ್ವರನುಭವಿಪರು ಹಿತವಹ ಪುತ್ರಫಲ.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನ ಇಚ್ಛಾಶಕ್ತಿ ಮತ್ತು ವಿಚಾರ ಶಕ್ತಿಗಳಿಗನುಗುಣವಾಗಿ ಅವನ ವಿಧಿ ನಿಶ್ಚಿತವಾಗುತ್ತದೆ. ವಿಧಿಯ ಫಲವೇ ಅವನ ಭಾಗ್ಯ.

ಪುರುಷ ತನ್ನ ಭಾಗ್ಯದಿಂದ ಸದಾಚಾರ, ಸತ್ಕರ್ಮನಿರತೆಯಾದ, ಪುಣವತಿಯಾದ ಹೆಂಡತಿಯನ್ನು ಪಡೆಯುವನು. ಪುಣ್ಯವತಿಯಾದ ಸ್ತ್ರೀ ತನ್ನ ಸತ್ಕರ್ಮಗಳಿಂದ ನಿರ್ಮಲ ಮನಸ್ಸಿನವಳಾಗಿ ಸುಖವನ್ನು ಹೊಂದುವಳು. ಇಂಥ ಒಲುಮೆಯ ದಂಪತಿ ತಮ್ಮ ಮೈಮನಗಳಿಗೆ ಹಿತ ಒದಗಿಸುವ ಪುತ್ರನನ್ನು ಸಂಸಾರದ ಫಲರೂಪದಲ್ಲಿ ಪಡೆಯುತ್ತಾರೆ.

ಒಳ್ಳೆಯ ನಡೆ, ನುಡಿ ಮತ್ತು ವಿಚಾರಗಳಿಂದ ಒಳ್ಳೆಯ ಭಾಗ್ಯ ಹೊಂದಲು ಪ್ರಯತ್ನಿಸಬೇಕು.

ಪದ್ಯ ೩

ಪುತ್ರ ಸಂತುಲೇಕ ಪುರುಷುಂಡು ಜಗತಿಲೋ, ಬುಣ್ಯಲೋಕಮೆಟ್ಲು ಪೊಂದಗಲುಂಡು?
ಪುತ್ರ ಹೀನುನಕುನು ಬುಣ್ಯಂಬು ಕಲದೆಟ್ಲು ? ವಿಶ್ವದಾಭಿರಾಮ ವಿನುರ ವೇಮ.

ಪುತ್ರ ಭಾಗ್ಯವಿರದ ಪುರುಷನವ ಜಗದೊಳು.
ಪುಣ್ಯಲೋಕವೆಂತು ಪಡೆಯಬಲ್ಲ ?
ಪುತ್ರ ಹೀನನಿರಲು ಪುಣ್ಯವೆಂತು ಬಹುದು ?
ವಿಶ್ವದಾಭಿರಾಮ ಕೇಳು ವೇಮ

(ಮನು-ಸಂಹಿತೆಯಲ್ಲಿ "ಅಪುತ್ರಸ್ಯ ಗತಿರ್ನಾಸ್ತಿ" ಎಂದು ಹೇಳಲಾಗಿದೆ. ಪುತ್ರನು ಮಾಡುವ ಪುಣ್ಯ ಕರ್ಮಗಳಿಂದ ಮಾತ್ರ ತಾಯಿ—ತಂದೆ ಸ್ವರ್ಗ ಸುಖ ಪಡೆಯಬಹುದು. ಸದ್ಗತಿ ಹೊಂದಬಹುದು ಎಂದು ಪುರಾಣಾದಿಗಳಲ್ಲಿ ಹೇಳಲಾಗಿದೆ. ತನ್ನ ಧರ್ಮ-ಕರ್ಮಗಳ ಫಲ ತನಗೆ ಬಂಧನಕಾರಿ ಎನ್ನುವ ಕರ್ಮ ಸಿದ್ಧಾಂತದಲ್ಲಿ ಈ ಅಭಿಪ್ರಾಯ ಸರಿಯೇ? ತಾಯಿ ತಂದೆ. ಪತ್ನಿ ಪುತ್ರರನ್ನು ನಂಬಿ, ಮನುಜ ಮಾಯೆಯಲ್ಲಿ ಸಿಕ್ಕು ತೊಳಲುವನು; ಎಂಬ ವೇದಾಂತ ವಿಚಾರಕ್ಕೆ ಇದು ಒಪ್ಪಿಗೆಯೇ? ಈ ಪ್ರಶ್ನೆಯನ್ನೆತ್ತಿ ವೇಮನ ಯೋಗಿ ಮರು ಪ್ರಶ್ನೆಯಿಂದ ಉತ್ತರಿಸಿದ್ದಾರೆ.)

ಕೆಲವರು ಹೀಗೆ ಹೇಳುತ್ತಾರೆ: "ಈ ಜಗತ್ತಿನಲ್ಲಿ ಪುತ್ರರನ್ನು ಪಡೆಯುವ ಭಾಗ್ಯ ಇಲ್ಲದವನು ಪುಣ್ಯ ಲೋಕವನ್ನು ಹೇಗೆ ಪಡೆಯಬಲ್ಲನು? ಪುತ್ರ ಹೀನನಿದ್ದವನಿಗೆ ಪುಣ್ಯವಿರುವದು ಹೇಗೆ? " (ಇದು ಸರಿಯೇ? ಮುಂದಿನ ಪದ್ಯ ನೋಡಿರಿ.)

ಪದ್ಯ ೪

ಪುಡವಿಲೋನ ನರುಲು ಪುತ್ರುಲಗನಗೋರಿ, ಯಡಲು ಚುಂದು ರನುಪವಾಶ ಚೇತ,
ಗೊಡಕುಗಲಿಗಿನಂತ ಗುಲಮುದ್ಧರಿಂಚುನಾ ? ವಿಶ್ವದಾಭಿರಾಮ ವಿನುರ ವೇಮ.

ಪೊಡವಿಯಲ್ಲಿ ನರನು ಪುತ್ರಪಾಪ್ತಿಕೋರಿ,
ಕಡು ಶ್ರಮ ಪಡುತಿಹ, ಆಶೆಯಿಂದ.
ಪಡೆದ ಕುವರರೇನು ಕುಲವನುದ್ಧರಿಪರೆ ?
ವಿಶ್ವದಾಭಿರಾಮ ಕೇಳು ವೇಮ.

(ಮಕ್ಕಳು ಜ್ಞಾನವಂತರಾಗಬೇಕು. ಅಂಥ ಸತ್ಪುತ್ರರು ತಮ್ಮ ಸಂಪತ್ತು. ಮಕ್ಕಳು ಗೆಯ್ಯುವ ಪುಣ್ಯಕಾರ್ಯ ಕಂಡ ಜನರು, ಇಂಥ ಮಕ್ಕಳನ್ನು ಹೆತ್ತ ತಾಯಿ—ತಂದೆ ಧನ್ಯರು, ಎನ್ನುವಂತಾಗಬೇಕು. ಆದರೆ ಗುಣವಂತರಾಗದ ಮಕ್ಕಳು ಹೆಸರು ಕೆಡಿಸುತ್ತಾರೆ. ಎಂಥ ಪಾಪಿಯ ಮಗನೋ ಏನೋ ಎಂದು ಜನ ಹಳಿಯುತ್ತಾರೆ. ಕೇವಲ ಮಕ್ಕಳ ಪ್ರಾಪ್ತಿ ಶ್ರೇಯ—ಪ್ರೇಯಗಳಿಗೆ ಕಾರಣವಲ್ಲ. ಆದರೆ ಒಳ್ಳೆಯ ಮಕ್ಕಳನ್ನು ಹೆರುವುದು ಹೆತ್ತ, ಮಕ್ಕಳು ಒಳ್ಳೆಯ ನಡೆ-ನುಡಿ ಹೊಂದುವಂತೆ ಪೋಷಿಸುವದು, ಸುಖ-ಸಂತೋಷಕ್ಕೆ. ಶ್ರೇಯ-ಪ್ರೇಯಗಳಿಗೆ ಕಾರಣವಾಗಿದೆ.)

ಮಕ್ಕಳಿದ್ದರೆ ಮುಂದಿನ ಜನ್ಮದಲ್ಲಿ ತನಗೆ ಸದ್ಗತಿ ಎಂಬ ದೂರಾಸೆಯಿಂದ ಮತ್ತು ಮುಪ್ಪಿನ ಕಾಲದಲ್ಲಿ ಮಕ್ಕಳು ತನಗೆ ಆಶ್ರಯ ನೀಡುವರೆಂಬ ಸಮೀಪದಾಸೆಯಿಂದ ಮಕ್ಕಳನ್ನು ಪಡೆಯಲು ಮನುಷ್ಯ ಭೂಮಿಯಲ್ಲಿ ತುಂಬಾ ಕಷ್ಟ ಪಡುತ್ತಾನೆ.

ಮಕ್ಕಳೆಲ್ಲ ಒಳ್ಳೆಯವರಾಗಿರುವುದಿಲ್ಲ. ಸದ್ಗುಣಿಗಳಾಗಿರುವುದಿಲ್ಲ. ಅಂಥ ಮಕ್ಕಳನ್ನು ಹೆತ್ತರೆ, ಅವರು ಕುಲವನ್ನು ಉದ್ಧರಿಸುವ ಬಗೆಯೆಂತು?

ಮಕ್ಕಳನ್ನು ಹೊಂದುವದಕ್ಕಿಂತ ತಾನು ಗುಣವಂತನಾಗಿ ಇತರರೂ ಹಾಗಾಗುವಂತೆ ಮಾಡುವುದೇ ಮೇಲು.

ಪಿನ್ನವಾಂಡ್ರ ಸ್ವೇಚ್ಛ ಮುನ್ನನ ಜೇರಚುನು, ಆಡುವಾರಿ ಸ್ವೇಚ್ಛ ಗೋಡೊನರ್ಚು
ಪುರುಷವರು ನಸ್ವೇಚ್ಛ ಭೂತಿನಿಗೂರ್ಚುನು, ವಿಶ್ವದಾಭಿರಾಮ ವಿನುರ ವೇಮ.

ಎಳೆ ಸುತರ ಸ್ವೇಚ್ಛೆ ಕಳೆವುದು ಮುನ್ನಣೆಯ,
ಜೊತೆಯುವಳ ಸ್ವೇಚ್ಛೆ ಜೊಂಜಾಟಕೆ ಈಡು;
ಪುರುಷರಹ ಸ್ವೇಚ್ಛೆ ಪಡೆವ ವಿಭೂತಿ ಪದ.
ವಿಶ್ವದಾಭಿರಾಮ ಕೇಳು ವೇಮ.

ಸಣ್ಣ ಮಕ್ಕಳು ತಮಗೆ ತಿಳಿದಂತೆ (ಸ್ವೇಚ್ಛೆಯಿಂದ) ವರ್ತಿಸಲು ಅನುಮತಿ ನೀಡಿದರೆ, ಅವರು ತಮ್ಮ ಶೀಲ ಕಾಪಾಡುವ ಬಗ್ಗೆ ಹಿರಿಯರು ವಿಧಿಸಿದ ನಿಯಂತ್ರಣ ಸಡಿಲಾಯಿತೆಂದೇ ಭಾವಿಸಿ, ಹದ್ದುಮೀರಿ ವರ್ತಿಸುತ್ತಾರೆ.

ಹೆಂಡತಿ ತನ್ನ ಮನಸ್ಸಿಗೆ ಬಂದ ಹಾಗೆ (ಸ್ವೇಚ್ಛೆಯಿಂದ) ಇರಹತ್ತಿದರೆ, ಅವಳು ಗಂಡನ ಅಂಕೆಯಿಂದ ದೂರವಾಗುತ್ತಾಳೆ. ದಂಪತಿಗಳ ಪರಸ್ಪರ ಪ್ರೇಮ ಹಿಂಗಹತ್ತುವುದು.

ಇದರಿಂದ ಇಬ್ಬರಿಗೂ ಸಂಕಟ; ಗೋಳು.

ಒಳ್ಳೆಯ ಪುರುಷರು ಸ್ವೇಚ್ಛೆಯಿಂದ, ತಮ್ಮ ಇಷ್ಟ ಬಂದಹಾಗೆ ಇದ್ದರೆ, ಅವರು ಮಹಮಾವಂತ (ವಿಭೂತಿ) ರಾಗುತ್ತಾರೆ.

೪೮೬

ದೊಡ್ಡಿವಾಡು ಪೆದ್ದತೋಡೇಲು ನೈನನು, ಮಟ್ಟು ಜೂಚಿ ದಾನಿಮರ್ಕ ಮೆರಿಗಿ
ಗೊಡ್ಡುಗೊರ್ರೆ ನೈನ ಗೊನಿಚನೀಯಂಡು, ವಿಶ್ವದಾಭಿರಾಮ ವಿನುರ ವೇಮ

ದೊಡ್ಡಿ ಕಾಯುವವಗೆ ದೊಡ್ಡ ತೋಳವೇನು ?
ಮೆಟ್ಟು ನೋಡಿ ಆವರ ಮರ್ಮವರಿತು,
ಗೊಡ್ಡು ಕುರಿಯನೊಂದ, ಕೊಂಡೊಯ್ಯಲು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

ಬಡವರ ಹೆಂಡಂದಿರನ್ನು ಧನಿಕರು ಧನದ ಬಲದಿಂದ ಶೀಲಗೆಡಿಸಲು ಮುಂದಾಗುತ್ತಾರೆ. ಜನಸಾಮಾನ್ಯರ ಹೆಂಡಂದಿರನ್ನು ರಾಜ ಭಟರೂ ರಾಜ ಮಂಡಲಾಧಿಕಾರಿಗಳೂ ಶೀಲಗೆಡಿಸಲು ತಮ್ಮ ಸ್ಥಾನಮಾನಗಳ ಬಲದಿಂದ ಮುಂದಾಗುತ್ತಾರೆ. ಇದರಿಂದ ಜಾರತನವನ್ನು ಕಡ್ಡಾಯವಾಗಿ ಬೆಳೆಸಿದಂತಾಗುತ್ತದೆ. ಬಡವರು, ಜನಸಾಮಾನ್ಯರು, ಧನ ಪದ ಬಲವುಳ್ಳವರನ್ನು ಎದುರಿಸಿ ತಮ್ಮ ಹೆಂಡಿರನ್ನು ಕಾಪಾಡಿಕೊಳ್ಳುವುದು ಹೇಗೆ?
ಕುರುಬನು ದೊಡ್ಡಿಯಲ್ಲಿ ತನ್ನ ಕುರಿಹಿಂಡು ಹೊಗಿಸಿ ಕಾಯಲು ದ್ಯುಕ್ತನಾಗುತ್ತಾನೆ. ಆಗ ಸಣ್ಣ ತೋಳ ಬಂದರೂ ಸರಿ; ದೊಡ್ಡ ತೋಳ ಬಂದರೂ ಸರಿ; ಕುರಿಬನು ಎದುರಿಸಲು ಮುಂದಾಗುತ್ತಾನೆ. ತೋಳ ಶಕ್ತಿಯಲ್ಲಿ ಮೇಲಾದರೂ ಕುರುಬ ಯುಕ್ತಿಗಿಳಿಯುತ್ತಾನೆ. ಅದು ಬರುವ ಸುಳಿವು ಹಿಡಿದು, ಅದನ್ನು ಬೆದರಿಸುವ ಹಂಚಿಕೆ ಹಾಕುತ್ತಾನೆ.

ಪ್ರಸಂಗ ಬಿದ್ದರೆ ಮೈಮೇಲೆ ಹೋಗಲು ಅಂಜುವುದಿಲ್ಲ. ಅದರೆ ಅಂತಿಮ ಗುರಿಯಾದ ತೋಳ ಕಾಯುವುದರಲ್ಲಿ ತಪ್ಪುವುದಿಲ್ಲ. ಒಂದು ಕುರಿಯನ್ನೂ ಸಹ ತೋಳವು ಒಯ್ಯದಂತೆ ಮಾಡಿ ಯಶಸ್ವಿಯಾಗುತ್ತಾನೆ.

ತನ್ನ ಕುರಿಗಾಗಿ ಕುರುಬನು ಇಷ್ಟೆಲ್ಲ ಮಾಡುವಾಗ ತನ್ನ ಹೆಂಡತಿಯನ್ನು ಪರ-ಪುರುಷರಿಂದ ರಕ್ಷಿಸಲು ಗಂಡನು ಎಂಥ ಪ್ರಸಂಗದಲ್ಲಿಯೂ ಹಿಂಜರಿಯಬಾರದು.

೪೮೭

ತಲ್ಲಿಯೇಡ್ವವಿನಕ ತನಯೂಲು ವಗಚಿನ, ಜಾಲಿಪಡೆಡುವಾಡು ಜಡುಡು ಸುಮ್ಮ
ತಾರತಮ್ಯ ಮೆರುಗ ನೇರನಿ ಪಶುವಗು .ವಿಶ್ವದಾಭಿರಾಮ ವಿನುರ ವೇಮ.

ನಾರಿ ಗೋಳನರಿತು ತಾಯಿ ಗೋಳ ಮರೆತು,
ಮರುಳುಗೊಳುವ ಮೂಢ ನೋಡು.
ತಾರ ತಮ್ಯವಿರದೆ ತಾನು ಪಶುವೆನಿಪನು.
ವಿಶ್ವದಾಭಿರಾಮ ಕೇಳು ವೇಮ.

ಹೆಂಡತಿಗೆ ಆಗುವ ಕಷ್ಟವನ್ನು ಪರಿಹರಿಸಲು ತವಕಬಟ್ಟು, ತಾಯಿಗೆ ಆಗುವ ಕಷ್ಟ ಪರಿಹಾರವನ್ನು ಉಪೇಕ್ಷಿಸುವವನು, ಹೆಂಡತಿಯ ಮೋಹದಿಂದ ಹುಚ್ಚನಾಗುವ ಮೂಢನು. ಮಡದಿ ಮಾತೆಯರಿಬ್ಬರ ರಕ್ಷಣೆಯು ತನ್ನ ಹೊಣೆಯಾಗಿದ್ದರೂ, ಮಡದಿಯರಕ್ಷಣೆ ಹೆಚ್ಚು ಮುಖ್ಯವೆನಿಸಿದರೆ, ಮಾತೆಯ ರಕ್ಷಣೆಯು ಇನ್ನೂ ಹೆಚ್ಚು ಮುಖ್ಯವೆನಿಸಬೇಕು. ತರ,ತಮ ಭಾವದಿಂದ ಮಡದಿ-ಮಾತೆಯರನ್ನು ನೋಡಬೇಕು. ತಾರತಮ್ಯವಿಲ್ಲದವನು ವಿವೇಕ-ವಿಹೀನನು; ಪಶುವು.

೪೮೮

ಎಂಗಿಲೆಂತವಟ್ಟು ಹಿತವುಗಾನೆಂಚಕ, ಯೊಗ್ಗಿಯುಂದು ರಂತ ನುರ್ವಿಜನುಲು,
ಕನ್ನನೆಂಗಿಲೆಂತ ? ಕನ್ನೆಂಗಿಲಧಿಕಮೌ, .ವಿಶ್ವದಾಭಿರಾಮ ವಿನುರ ವೇಮ.

ಎಂಜಲೆನಿತಾದರೂ ಹಿತಕರವೆನಿಸದದು.
ಒಗ್ಗಲಾರದೆನುವರು ಅವನಿ ಜನರು.
ಬಾಯಿಯೆಂಜಲೆಷ್ಟೋ ಕಣ್ಣಿನೆಂಜಲಧಿಕ.
ವಿಶ್ವದಾಭಿರಾಮ ಕೇಳು ವೇಮ.

ಎಂಜಲು ಸ್ವಲ್ಪ ಆಗಲಿ, ಹೆಚ್ಚಾಗಲಿ ಒಳ್ಳೆಯದೆನಿಸುವುದಿಲ್ಲ. ಜಗತ್ತಿನ ಜನರೆಲ್ಲ ಎಂಜಲು ತಮಗೆ ಹಿಡಿಸದು ಎನ್ನುತ್ತಾರೆ. ಆದರೆ ಈ ಭಾವನೆಯಲಿ ಕೇವಲ ಬಾಯಿ ಎಂಜಲಿಗೆ ಮಾತ್ರ ಅನ್ವಯಿಸುತ್ತಾರೆ, ಆದರೆ ಕಣ್ಣು ಆಸ್ವಾದಿಸಿದರೆ, ಆಗ ಕಣ್ಣಿನೆಂಜಿಲು ಆಗುವ ದಷ್ಟೇ. ಯಾವುದೋ ವಸ್ತುವನ್ನು ಕಣ್ಣಿನಿಂದ ನೋಡಿ, ನೋಟದಲ್ಲಿಯೇ ಸವಿಯುಂಡ ಮೇಲೆ ದೃಶ್ಯ ವಸ್ತು, ಎಂಜಲಾಯಿತು. ಕಣ್ಣಿನೆಂಜಲು ಜಗತ್ತಿನಲ್ಲಿ ಹೆಚ್ಚು. ಸ್ತ್ರೀ ಶೀಲಾದಿಗಳ ವಿಷಯದಲ್ಲಿಯಂತೂ ಕಣ್ಣಿನೆಂಜಿಲು ತುಂಬಾ ಗಣನೀಯವಾಗಿದೆ. ಈ ಸೂಕ್ಷ್ಮ ದೃಷ್ಟಿಯನ್ನು ವೃದ್ಧಿಸಿಕೊಂಡರೆ, ಶೀಲ ಕಾಯ್ದುಕೊಳ್ಳುವುದು, ತುಂಬಾ ಸರಳವೆನಿಸಬಹುದು.

ಚನಿ ಯಡವಿಕಿ ಋಷುಲ ಚವುಲ ಗೋರುಟರೋತ,ನರುಲು ಕಲಿಗಿ ತಿನಮಿ ನರಯರೋತ,
ಭಾರ್ಯಲನುಚುವಾರಿ ಭರಿಯಿಂಪಮಿಯು ವಿಶ್ವದಾಭಿರಾಮು ವಿನುರ ವೇಮ

ಅಡವಿಯೊಳಿಹ ಋಷಿಗೆ ಇಂದ್ರಿಯಾಶೆ ಹೊಲ್ಲ.
ಪಡೆದ ಸಿರಿಯ ಭೋಗವರಿಯದಿಹುದು.
ಮಡದಿಯರು ಪೋಷಿಸದಿಹ ಮನಸು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸುತ್ತು ಮುತ್ತಿನ ಪ್ರಪಂಚ ವ್ಯಾಪಾರಗಳ ಮಧ್ಯೆ ಇಂದ್ರಿಯ-ನಿಗ್ರಹ ಕಷ್ಟಕರವೆಂದು ನಿರ್ಜನವಾದ ಅರಣ್ಯದಲ್ಲಿ ಮನೋ ನಿಗ್ರಹದ ತಪಸ್ಸು ಮಾಡುವ ಋಷಿಗೆ ಇಂದ್ರಿಯಗಳ ಮೇಲೆ ಆಶೆ ಹುಟ್ಟುವುದು ಒಳಿತಲ್ಲ.

ತಾನು ಹೊಂದಿದ ಸಿರಿ-ಸಂಪತ್ತುಗಳನ್ನು ಉಪಭೋಗಿಸದೆ, ವಿನಿಯೋಗಿಸದೆ ಬಿಡುವುದೂ ಒಳಿತಲ್ಲ.

ಹೆಂಡತಿಯರನ್ನು ಪೋಷಿಸದಿರುವುದೂ ಒಳಿತಲ್ಲ.

ಮನುಷ್ಯ ತನ್ನ ಮೇಲೆ ತಾನೇ ಹೇರಿಕೊಂಡ ಹೊಣೆಯನ್ನು ನಿರ್ವಹಿಸಬೇಕು. ಇಲ್ಲವಾದರೆ ಅವನಿಗ ಕೇಡುಂಟು.

೪೯೦

ಇಂದ್ರುಡಯ್ಯು ಗಾಮಿಹೀನುಡೈಪೋಯೆನು, ಮಾರುಡಯ್ಯ ಗಾಮಿ ಮುಡಿಪೋಯೆ
ಬ್ರಹ್ಮಯಯ್ಯುಗಾಮಿ ಬೈಸಿಪೋನಾಡೆನು, ವಿಶ್ವದಾಭಿರಾಮ ವಿನುರ ವೇಮ

ಇಂದ್ರ ಕಾಮಿಯಾಗಿ ಹೀನನೆನಿಸಿಹೋದ.
ಮದನ ಕಾಮಿಯಾಗಿ ಭಸ್ಮವಾದ.
ಬೊಮ್ಮ ಕಾಮಿಯಾಗಿ ಮಾನ ತೊರೆದು ನಿಂದ.
ವಿಶ್ವದಾಭಿರಾಮ ಕೇಳು ವೇಮ.

ಭಾಗವತದಲ್ಲಿ ಬರುವ ಶೃಂಗಾರ ಕಥೆಗಳು ಹೀಗೆಃ-

ಗೌತಮ ಋಷಿಯ ಪತ್ನಿ ಅಹಲ್ಯೆ. ಅತಿ ಸುಂದರಿ. ಭೋಗರಾಜನಾದ ದೇವೇಂದ್ರ ಗೌತಮ ಋಷಿಯ ರೂಪ ತಾಳಿ ಆಶ್ರಮಕ್ಕೆ ಬಂದ. ಅಹಲ್ಯೆಯನ್ನು ಕಾಮ ಚೇಷ್ಟೆಗೆ ಎಳೆದ. ಅಹಲ್ಯೆಯೂ ತಪೋನಿಷ್ಠಳು. ಇಂದ್ರನ ನಿಜ ರೂಪ ಅರಿತಿದ್ದಳು. ಆದರೂ ಕಾಮ ಪ್ರೇರಿತಳಾಗಿ ಇಂದ್ರನ ವಶವಾದಳು. ನಂತರ ಋಷಿ ಗೌತಮರು ಆಶ್ರಮಕ್ಕೆ ಮರಳಿದರು. ನಡೆದುದನ್ನೆಲ್ಲ ಸೂಕ್ಷ್ಮ ದೃಷ್ಟಿಯಿಂದ ತಿಳಿದರು. ಕೋಪಾವಿಷ್ಟರಾದರು. ಇಂದ್ರನ ವೈಯೆಲ್ಲ ತೂತಾಗಲಿ ಎಂದರು. ಶೀಲಗೆಟ್ಟ ಅಹಲ್ಯೆ ಕಲ್ಲಾಗಲಿ, ಎಂದರು. ಭೋಗಿ ಇಂದ್ರ ಮೈತುಂಬ ಇಂದ್ರಿಯ ಹೊಂದಿದ್ದನೆಂದು ಭಾವ. ಶೀಲಗೆಟ್ಟ ಹೆಣ್ಣಿನ ಹೃದಯ ಕಲ್ಲಿನಂತೆ

ಎಂಬ ಭಾವ. ಭೋಗಿ ಇಂದ್ರ ದೇವರಾಜನಾದರೂ ಭೋಗಕ್ಕೆ ಬಲಿಯಾಗಿ ಮಾನ ಕಳೆದುಕೊಂಡ.ಹೀನನೆನಿಸಿದ.

ಇನ್ನೊಂದು ಕಥೆ ಹೀಗಿದೆಃ ಪರಮೇಶ್ವರ ಒಮ್ಮೆ ತಪಸ್ಸು ಮಾಡತೊಡಗಿದ. ವರುಷಗಳುರುಳಿದವು. ತಪಸ್ಸು ಮುಗಿಯಲಿಲ್ಲ. ಪರಮೇಶ್ವರನ ಅರ್ಧಾಂಗಿನಿ ಪಾರ್ವತಿ. ಪಾರ್ವತಿ ವಿರಹದಿಂದ ಬಳಲಿದಳು. ಪರಮೇಶ್ವರನನ್ನು ತಪೋವಿಮುಖನನ್ನಾಗಿ ಮಾಡಲು ಪ್ರೇರೇಪಿಸಿದಳು. ಮದನ ತನ್ನ ಬಾಣ ಬಿಟ್ಟ. ಪರಮೇಶ್ವರನ ಯೋಗದೃಷ್ಟಿ ಕಲಕಿತು. ಕಣ್ಣು ತೆರೆದ. ಕಿಡಿಕಿಡಿಯಾದ. ಮದನ ಸುಟ್ಟು ಹೋದ. ಭಸ್ಮವಾದ.

ಮೂರನೆಯ ಕಥೆ ಹೀಗೆಃ ಬ್ರಹ್ಮ ನಿತ್ಯ ಕಾಮು. ಇವನ ಕಾಮುದಾಹಕ್ಕೆ ತೃಪ್ತಿಯೇ ಇಲ್ಲ. ಸ್ವತಃ ತನ್ನ ಮಗಳನ್ನೇ ಮೋಹಿಸಿದ. ಅವಳೊಂದಿಗೆ ಲಗ್ನವಾದ. ಮಾನ-ಮರ್ಯಾದೆಯ ಕಟ್ಟು ಮೀರಿದ.

(ಭಾವ ಹೋಲಿಕೆಯ ದತ್ತಾತ್ರೇಯ ನುಡಿ 'ಅವಧೂತ ಗೀತೆ'ಯಲ್ಲಿ "ತತ್ರ ಮುಗ್ಧಾ ರಮಂತೇ ಚ ದೇವಾಸುರೆ ಮಾನವಾಃ| ತೇ ಯಾಂತಿ ನರಕಂ ಘೋರಂ ಸತ್ಯಮೇವ ನ ಸಂಶಯಃ ||

ಅನುವಾದ :- ಅಲ್ಲಿ ಸ್ತ್ರೀಯಲ್ಲಿ ಮುಗ್ಧರಾಗಿ ದೇವಾಸುರ ಮಾನವರು ರಮಿಸುವರು. ಅದರಿಂದ ಘೋರ ನರಕಕ್ಕೆ ಹೋಗುವರು. ಇದರಲ್ಲಿ ಸಂಶಯವೇ ಇಲ್ಲ.)

೪೯೧

ರಾಯಿಯ್ಯೆ ಯಹಲ್ಯ ರಾಮುಪಾದಮು ಸೋಕಿ, ಯಾಡುದಯ್ಯೆನೆಂದುರವನಿ ಜನುಲು,
ಚೇಯಃಸುಕೃತಮು ಲಿಲ ಶಿಲಲ್ಕಿನ ಬೊಂದುನು, ವಿಶ್ವದಾಭಿರಾಮ ವಿನುರ ವೇಮ.

ಶಿಲೆಯಾದ ಅಹಲ್ಯೆ ರಾಮುಪಾದ ಸೋಂಕಿ,
ಸ್ತ್ರೀಯೆ ಆದಳೆಂಬರವನಿ ಜನರು.
ಗೆಯ್ದ ಸುಕೃತ ಫಲವು ಕಲ್ಲಿಗೆ ಸಹ ಉಂಟು,
ವಿಶ್ವದಾಭಿರಾಮ ಕೇಳು ವೇಮ.

ಸಾರಾಂಶ ಹೀಗೆಃ-ಭಾಗವತದಲ್ಲಿ ಹೇಳಿದ ಅಹಲ್ಯೆಯ ಕಥೆ ಹೀಗೆ. ಅಹಲ್ಯೆ ತಪೋನಿಷ್ಠಳು. ಗೌತಮ ಮುನಿಯ ಧರ್ಮ ಪತ್ನಿ. ಒಮ್ಮೆ ಕಾಲು ಜಾರಿ ದೇವೇಂದ್ರನೊಂದಿಗೆ ರತಿ ಸುಖ ಪಡೆದಳು. ಮುನಿ ಶಾಪ ನೀಡಿದ. ಅಹಲ್ಯೆ ಕಲ್ಲಾದಳು. ಶಾಪ ವಿಮೋಚನೆಯ ಬಗ್ಗೆ ಪ್ರಾರ್ಥಿಸಲಾಗಿ, ಮುಂದೆ ಶ್ರೀ ರಾಮಚಂದ್ರನು ಇಲ್ಲಿಗೆ ಬಂದಾಗ ಶಾಪ ವಿಮೋಚನೆಯಾಗುವುದೆಂಬ ವರ ದೊರೆಯಿತು.

ಅರಣ್ಯ ತಿರುಗುತ್ತ ಶ್ರೀ ರಾಮಚಂದ್ರ ಋಷಿಯ ಆಶ್ರಮದ ಹಾದಿಯಲ್ಲಿದ್ದ. ಹಾದಿ ತುಳಿಯುವಾಗ ಕಲ್ಲಾದ ಅಹಲ್ಯೆಗೆ ಶ್ರೀ ರಾಮನ ಪಾದ ಸೋಂಕಿತು. ಅವಳು ಸ್ತ್ರೀಯಾದಳು. ಮುನಿಯೂ ಪಾಪದಗ್ಧ ಪರಿಶುದ್ಧೆಯೆಂದು ಅವಳನ್ನು ಸ್ವೀಕರಿಸಿದನು. ಕಲ್ಲಾದ ಅಹಲ್ಯೆಗೂ ಅವಳು ಮೊದಲು ಗೆಯ್ದ ತಪದ ಕರ್ಮಫಲವುಂಟೆಂದು ಲೋಕದ ಜನರ ತಿಳಿವಳಿಕೆ. ಅಂದರೆ ತಾವು-ಮನುಷ್ಯರಾಗಿರುವರು. ಗೆಯ್ದ ಒಳ್ಳೆಯ ಕೆಲಸದ ಫಲ ತಮಗಿರಲಾರದೇ?

(ಮಾನವನ ಮನಸ್ಸು ಜಡದಿಂದ ಸೂಕ್ಷ್ಮ, ಅತಿ ಸೂಕ್ಷ್ಮವಾಗಬಲ್ಲದು. ಇಂದ್ರಿಯಗಳಿಗೆ ದಾಸರಾಗಿ ಹಾದಿ ತಪ್ಪಿದವರ ಮನಸ್ಸು ತೀರ ಜಡವಾಗುವುದು. ಪ್ರಾಣಿಗಿಂತ ಕಡೆ. ಕಲ್ಲಿನಂತೆ. ಅಹಲ್ಯೆ ಸೀತಾರಾಮನನ್ನು ಕೇಳಿ ಆತ್ಮಾರಾಮನನ್ನು ಗುರುತಿಸಿ,ತನ್ನ ಮನಸ್ಸಿನ ಮಟ್ಟವನ್ನು ಸಾಧನೆಯಿಂದ ಸೂಕ್ಷ್ಮ ಮಟ್ಟಕ್ಕೆ ತಂದಳು. ಮಾನವಳಾದಳು. ಋಷಿ ಮತ್ತೆ ಅವಳನ್ನು ಅಂಗೀಕರಿಸಿದ ಎನ್ನುವುದರ ದ್ಯೋತಕವಾಗಿದೆ, ಮೇಲಿನ ಕಥೆ.)

೪೯೨

ಕೊಡುಕುನುವರಿಯಿಂಪಗೋರಿ ವಚ್ಚಿನದಾನಿ, ದಂಡ್ರಿವೆಂಡ್ಲಿಯಾಡ ಧರ್ಮಮಗುನೆ ?
ತಪ್ಪನಿ ತೆಲಿಸಿಯುನು ದಾಜೇಯು ಗರ್ಕಂಬು, ವಿಶ್ವದಾಭಿರಾಮ ವಿನುರ ವೇಮ.

ಒಪ್ಪಿ ಮಗನ ಕೋರಿ, ಬಂದ ಕನ್ನೆಯನ್ನು
ಅಪ್ಪ ಲಗ್ನವಾಗಲೆಂತು ಧರ್ಮ ?
ತಪ್ಪನರಿತರಿತೂ, ತಾನೆ ಮಾಳ್ಪ ಕರ್ಮ.
ವಿಶ್ವದಾಭಿರಾಮ ಕೇಳು ವೇಮ.

ಮಗನನ್ನು ವರಿಸಿದವಳು ಸೊಸೆಯಾಗಬೇಕಾದವಳು. ಸೊಸೆ ಪುತ್ರಿಯ ಸಮಾನ. ಹೀಗಿದ್ದರೂ ಮಗನ ಗುಣಗಳಿಗೆ ಮೋಹಿಸಿ, ಬಂದ ಕನ್ನೆಯನ್ನು ತಂದೆಯೇ ಲಗ್ನವಾಗಬಯಸಿ ಮುಂದಾದರೆ ಅದು ಧರ್ಮವಾಗುವುದೇ? ಅಲ್ಲ. ಆದರೂ ಇಂಥ ಲಗ್ನಗಳನ್ನೂ ಧಾರ್ಮಿಕ ವಿಧಿಯೊಂದಿಗೆ ನೆರವೇರಿಸಿ, ಮನ್ನಿಸುತ್ತಾರೆ. ಮನುಷ್ಯ ತಾನು ಅಧರ್ಮವೆಸಗುತ್ತೇನೆ. ತಪ್ಪು ಮಾಡುತ್ತೇನೆ, ಎಂದು ಸ್ಪಷ್ಟವಾಗಿ ತಿಳಿದಿದ್ದರೂ ಸಹ, ದುಷ್ಕರ್ಮದಲ್ಲಿ ನಿರತನಾಗುತ್ತಾನೆ.

೪೯೩

ಇಂಚುಕಂತಸುಖಮೆ ಯೀರೇಡು ಜಗಮುಲ, ಗಂಚಮುನಕು ಬಿಲ್ಲಿ ಕಾಚಿನಟ್ಲು,
ಪಂಚ ಬಾಣು ಬಾರಿ ಬಡಿಯು ನಾಸಿಂತುರು, ವಿಶ್ವದಾಭಿರಾಮ ವಿನುರ ವೇಮ.

ಗುಂಜಿಯಷ್ಟು ಸುಖಕೆ ಈರೇಳು ಲೋಕದಿ
ಎಂಜಿಲು ತಟ್ಟಿ ಬೆಕ್ಕು ನೆಕ್ಕುವಂತೆ,
ಹಿಂಜಿ ಕಾಮಬಾಧೆಯಿಂದ ಆಶಿಪರಲ !
ವಿಶ್ವದಾಭಿರಾಮ ಕೇಳು ವೇಮ.

ರವಿ ಚಂದ್ರ ಮಂಗಳಾದಿ, ಹದಿನಾಲ್ಕು ಲೋಕಗಳಲ್ಲಿ ಎಲ್ಲರೂ ಅಲ್ಪ ಸುಖ ಪಡೆಯಲು ಆಶೆ ಪಟ್ಟು, ಕೇಳು ಕೆಲಸಕ್ಕೆ ಕೈ ಹಾಕುವರು. ಕೇಳು ಚಟಕ್ಕಿಳಿಯುವರು. ಹೇಗೆಂದರೆ, ಯಾರೋ ಉಂಡು ಬಿಟ್ಟ ಎಂಜಿಲು ತಿನ್ನಲು ಬೆಕ್ಕು ಆಶೆಯಿಂದ ನೆಕ್ಕುವುದು. ಅದೇ ರೀತಿ ಕಾಮಭಾಧೆಗೆ ಆಶಿಸುವವರು, ಮನಸ್ಸಿನಲ್ಲಿ ಘಾಸಿಗೊಂಡು ಎಲ್ಲರೂ ಭೋಗಿಸಿ ಬಿಟ್ಟವಳ ಸಂಗದಲ್ಲಿಯೇ ಸುಖವರಸುತ್ತಾರೆ.

೪೯೪

ವೆರಟ ಜೆಟ್ಟುಜೆಟ್ಟ ಪರಿಕಿಂಪಕುಂಡಿನ, ವೆಲುಗುದಾಟ ತೀಗ ವೆಡಲಬಾರು,
ನಾಡುದಾನಿಗುಣಮು ನಟುವಲೆನುಂಡುರಾ, ವಿಶ್ವದಾಭಿರಾಮ ವಿನುರ ವೇಮ.

ಹಿತ್ತಲದೊಳು ಬಳ್ಳಿ ಹಚ್ಚಿ, ನೋಡದಿರಲು,
ಸುತ್ತಹಬ್ಬಿ, ಬೇಲಿ ದಾಟಿ ಬೀದಿ ಬಿತ್ತು.
ಮತ್ತೆ ನಾರಿ ಗುಣವು ಅಂತೆ ಎಂಬರಯ್ಯ
ವಿಶ್ವದಾಭಿರಾಮ ಕೇಳು ವೇಮ.

ಮನೆಯೆ ಹಿತ್ತಲದಲ್ಲಿ ಹಚ್ಚಿದ ಬಳ್ಳಿ ತನ್ನಷ್ಟಕ್ಕೆ ಬಿಟ್ಟರೆ, ಬೇಲಿಯನ್ನು ದಾಟಿ ಬೀದಿಯ ಮೇಲೆ ಹಬ್ಬಬಹುದು. ಅದನ್ನು ಬೇಲಿಯೊಳಗೆ ಮಾತ್ರ ಬೆಳೆಯುಂತೆ ಮಾಡಲು ಮೇಲ್ವಿಚಾರಣೆ ಅಗತ್ಯ.

ಅದೇ ರೀತಿ ನಾರಿಯೆನ್ನು ಸಕಾಲದಲ್ಲಿ ನಿಯಂತ್ರಿಸದಿದ್ದರೆ, ಅವಳು ಮನೆಯ ಹೊಸ್ತಿಲು ದಾಟಿ ನಿಲ್ಲಬಹುದು. ಬೀದಿಬಸವಿಯಾಗಬಹುದು. ಹಾಗೆ ಆಗುವುದು ಸಹಜ ಗುಣ. ಕಾರಣ ಸ್ತ್ರೀಯರ ವರ್ತನೆಯನ್ನು ಕಾಲಕಾಲಕ್ಕೆ ನಿಯಂತ್ರಿಸುವುದಗತ್ಯ.

೪೯೫

ಒಡಲು ಶಿಥಿಲಮ್ಮೆನ ನೋರುಪುಗಲಸತಿ, ಗುಣಮುಮೆಲ್ಲಿಬಟ್ಟ ಕೋಟಿವೇಯು
ಪಾತಯೆನುವಮುಪಾಲು ರೋತನವಚ್ಚುನಾ ? ವಿಶ್ವದಾಭಿ ರಾಮ ವಿನುರ ವೇಮ.

ಒಡಲು ಶಿಥಿಲವಪ್ಪ ಕಾಲ ಸಹಿಸಿ ಸತಿಯು
ಗುಣದ ಮೇಲ್ಮೆ ಹಿಡಿಯೆ ಕೋಟಿ ಲಾಭ.
ಎಮ್ಮೆ ಹಳೆಯದಾದರೇನು, ಹಾಲು ಇಷ್ಟ.
ವಿಶ್ವದಾಭಿರಾಮ ಕೇಳು ವೇಮ.

[ಸ್ತ್ರೀಯನ್ನು ಕೇವಲ ಭೋಗದಾಸೆಗಾಗಿ ಬಯಸುವವರು ಅವಳ ವಯಸ್ಸು ಹೆಚ್ಚಾಗಿ ಹರಯವು ಇಳಿಮುಖವಾದಾಗ ಅವಳಿಂದ ಪರಾಙ್ಮುಖರಾಗುತ್ತಾರೆ. ಅವರಿಗೆ ಸ್ತ್ರೀಯ ಗುಣಕ್ಕಿಂತ ಅವಳ ಅಂಗ ಸೌಷ್ಟವದ ಮೇಲೆ ಮಾತ್ರ ಅಭಿರುಚಿಯುಂಟು.

ಆದರೆ, ಗುಣಕ್ಕೆ ತಕ್ಕ ಬೆಲೆ ನೀಡಬೇಕು. ಗುಣಗ್ರಾಹಿಗಳಾದವರಿಗೆ ಅಗಣಿತ ಲಾಭವುಂಟು. ಸ್ತ್ರೀಯ ದೇಹವು ಮುಪ್ಪಿನಿಂದ ಸಡಿಲಾದರೂ, ಅವಳ ಸಂಗವು ಹಿತವಾದುದು. ಅವಳ ನಿರಪೇಕ್ಷ ಬುದ್ಧಿ, ಸರ್ವಾರ್ಪಣ ಭಾವಗಳು ಉದಾತ್ತ ಗುಣಗಳು. ಅವುಗಳಿಗೆ ಬೆಲೆ ಇದ್ದೇ ಇದೆ.

ಹೇಗೆಂದರೆ, ಎಮ್ಮೆ ವಯಸ್ಸು ಹೆಚ್ಚಾದುದಾಗಿರಬಹುದು. ಅದರಿಂದೇನು? ಅದರ ಹಾಲು ತುಂಬಾ ಪ್ರಿಯವಾದುದಲ್ಲವೇ?

ರೂಪ-ಲಾವಣ್ಯಕ್ಕಿಂತ ಗುಣ-ಶೀಲಗಳು ಮೇಲು.

೪೯೬

ಕಡುಪುನಿಂಡ ದವ್ವಡು ಗಂಪಲೋಬಿಟ್ಟಕ, ಜನ್ನುಮುಟ್ಟನೀಕ ತನ್ನುಗೇದೆ
ವಾರಕಾಂತಲೆಟ್ಲು ವಲತುರೋಯಾರಕ ವಿಶ್ವದಾಭಿರಾಮು ವಿನುರ ವೇಮು

ಬುಟ್ಟಿ ತುಂಬ ತವುಡು ಇಟ್ಟು ಕರೆಯುವುವನು
ಬಿಟ್ಟರದು ಕೆಚ್ಚಲು ಮುಟ್ಟಗೊಡದು.
ಕೆಟ್ಟ ಹೆಣ್ಣು ಪ್ರೀತಿಗೈವಳೆಂತು ಬರಿದೆ ?
ವಿಶ್ವದಾಭಿರಾಮು ಕೇಳು ವೇಮು.

ಎಮ್ಮೆ ಮಂದಮತಿಯುಳ್ಳ ಪಶು. ಆದರೂ ಅದು ತನ್ನ ಕೆಚ್ಚಲೊಳಿರುವ ಹಾಲನ್ನು ಬಿಟ್ಟುಕೊಡಬೇಕಾದರೆ, ಅದಕ್ಕೆ ಬುಟ್ಟಿ ತುಂಬ ತೌಡು ಇಡಬೇಕು. ತಿನ್ನಲು ತೌಡು ಇಟ್ಟರೆ ಮಾತ್ರ ಎಮ್ಮೆ ಹಾಲು ಕರೆಯುವುದು ಅಂದ ಮೇಲೆ, ಶೀಲಗೆಟ್ಟ ಹೆಣ್ಣು, ಕೇವಲ ಹಣದಾಶೆಗಾಗಿ ಜೀವಿಸುವವಳು. ಸುಮ್ಮನೆ ಪ್ರೀತಿ ಮಾಡುವುದುಂಟೆ?

೪೯೭

ಚಾಡಿಗಾನಿಮಾಟ ಚಾವಿಡಿಲೋ ನಿಕ್ಕು, ವೇಟಪೋ ಶುನಕಮು ವೀಟನಿಕ್ಕು,
ವೇಶ್ಯಜೂಚು ನಪುಡೆ ವಿಟಕಾಡು ನಿಕ್ಕುರಾ, ವಿಶ್ವದಾಭಿರಾಮು ವಿನುರ ವೇಮು.

ಚಾಡಿ ನುಡಿವಳ ನುಡಿ ಚಾವಡಿಯೊಳಷ್ಟೇ.
ಬೇಟೆ ನಾಯಿ ಜೋರು ಊರೊಳಷ್ಟೆ.
ವಿಟನ ಜೋರು ವೇಶ್ಯೆ ಕಂಡ ಕ್ಷಣವಷ್ಟೆ.
ವಿಶ್ವದಾಭಿರಾಮು ಕೇಳು ವೇಮು.

ಸುಳ್ಳಾಡದಿರುವುದರಿಂದ ಸತ್ಕೀರ್ತಿ ದೊರೆಯುವುದು. ಸತ್ಯವೇ ಪರಮಧರ್ಮ. ಸತ್ಯವೇ ಪರಮ ತಪ. ಆದರೆ ಸುಳ್ಳು ಹೇಳುವವರಿಗೂ ಕ್ಷಣಿಕ ಮಾನ ದೊರೆಯುವುದುಂಟು. ಗ್ರಾಮದ ನ್ಯಾಯ ಸಭೆಯೆದುರು ಸಾಕ್ಷಿ ಕರೆದಾಗ ಸುಳ್ಳು ಹೇಳಿ ಯಾರ ಮೊಲಾದರೂ ಆರೋಪ ಹೊರಿಸಬಹುದು. ಆದರೆ ಲೋಕ ಇಂಥ ಮಿಥ್ಯಾರೋಪದ ಇತಿಮಿತಿ ಅರಿತಿರುವುದು. ಬೇಟೆಯ ನಾಯಿ ಅಡವಿಯಲ್ಲಿ ತನ್ನ ಶೌರ್ಯ ತೋರಿಸುವ ಬದಲು ಊರಲ್ಲಿಯೇ ಜೋರಾಗಿ ಕಾಣುವಂತೆ, ಚಾವಡಿಯ ಲ್ಲಿ ಸುಳ್ಳು ಹೇಳುವವಳು. ಆದೇ ರೀತಿ, ವೇಶ್ಯೆಯನ್ನು ನೋಡಿದಾಗ ಮಾತ್ರ ವಿಟ ಪುರುಷನು ತನ್ನ ಪೌರುಷ ತೋರಿಸಲು ಮುಂದಾಗುವನು. ಏಕೆಂದರೆ, ಇತರ ಸಂದರ್ಭಗಳಲ್ಲಿ ಅವನ ಪೌರುಷಕ್ಕೆ ಬೆಲೆಯೇ ಇಲ್ಲ.

೪೯೮

ಕೈಕ ಪುಟ್ಟ ಚೆರಿಚೆಗಾರಾಮು ಪಟ್ಟಂಬು, ಸೀತ ಪುಟ್ಟ ಲಂಕ ಚೆರಿಚೆಗಾದೆ ?
ಕೌರವುಲನು ಚೆರಿಚೆಗದ ದ್ರೌಪದೀದೇವಿ, ವಿಶ್ವದಾಭಿರಾಮು ವಿನುರ ವೇಮು.

ಕೈಕೆ ಹುಟ್ಟ ಕೆಟ್ಟುಹೋಯ್ತು ರಾಮುಪಟ್ಟ,
ಸೀತೆ ಹುಟ್ಟ ಲಂಕೆ ಹಾಳಾಗದೆ ?
ಕೌರವ ಕೆಟ್ಟುಹೋದ, ಹುಟ್ಟ ದ್ರೌಪದಿ ದೇವಿ.
ವಿಶ್ವದಾಭಿರಾಮು ಕೇಳು ವೇಮು.

ಆಗುವ ಎಷ್ಟೋ ಘಟನೆಗಳಿಗೆ ಹೆಣ್ಣು ನಿಮಿತ್ತವಾಗಿ ಪರಿಣಮಿಸುವುದುಂಟು. ಕೈಕೆ ದಶರಥರಾಜನ ಮೂರನೆಯ ಹೆಂಡತಿ. ಭರತನ ತಾಯಿ. ರಾಯನ ರಥದ ಗಾಲಿಗೆ ಕೀಲು ಇಲ್ಲದಾಗ ತನ್ನ ಬೆರಳು ಇಟ್ಟುಪತಿಸೇವೆ ಗೆಯ್ದಳು. ರಾಯ ಸಂತುಷ್ಟಿಯಿಂದ ವರ ನೀಡಿದ. ಅವಳ ಮೂರು ಆಶೆಗಳನ್ನು ಎಂದೇ ಆಗಲಿ, ಪೂರೈಸುವುದೇ ಆ ವರ. ಶ್ರೀ ರಾಮಚಂದ್ರ ರಾಯನ ಹಿರಿಯ ಮಗ. ಪಟ್ಟಾಭಿಷೇಕದ ವಯಸ್ಸಿಗೆ ಬಂದ. ಇನ್ನೇನು ಪಟ್ಟಾಭಿಷೇಕ ಆಗಿ ಹೋಗುವುದರಲ್ಲಿತ್ತು. ಕೈಕೆಯು ದಾಸಿಯ ಕಿವಿಮಾತಿಗೆ ಮನಸೋತು, ರಾಯ ತನಗಿತ್ತ ಮಾತಿನ ದುರ್ಲಾಭ ಪಡೆದು ರಾಮನಿಗೆ ಹದಿನಾಲ್ಕು ವರುಷ ವನವಾಸವಾಗಲಿ; ಮತ್ತು ತನ್ನ ಮಗ ಪಟ್ಟವೇರಲಿ; ಎಂದು ಕೋರಿದಳು. ತಂದೆ ವಚನ ಭ್ರಷ್ಟನಾಗದಂತೆ, ರಾಮ ಲಕ್ಷ್ಮಣರು ಅಡವಿಗೆ ಹೊರಟರು. ಭರತ ರಾಜನಾದ.

ಸೀತೆ ರಾಮನ ಧರ್ಮಪತ್ನಿ. ಭೂದೇವಿಯ ಮಗಳು ಜನಕರಾಜನ ಸಾಕುಮಗಳು; ಜಾನಕಿ. ರಾಮ-ಲಕ್ಷ್ಮಣರು ಅಡವಿಯಲ್ಲಿರುವಾಗ, ಲಂಕೆಯ ರಾಜನಾದ ರಾವಣನ ಸೋದರಿ ಶೂರ್ಪನಖಿಯ ಕಾಮಚೇಷ್ಟೆಯಿಂದ ಬೇಸತ್ತು, ಅವಳ ಮೂಗು ಕೊಯ್ದರು. ರಾವಣನಿಗೆ ವಿಷಯ ತಿಳಿಯಿತು. ಸೇಡಿನ ಬುದ್ಧಿ ಹುಟ್ಟಿತು. ರಾಕ್ಷಸವೃತ್ತಿ ಬೆಳೆಸಿಕೊಂಡ. ಸೀತೆಯನ್ನು ಕಳ್ಳವೇಷ ಧರಿಸಿ ಹೋಗಿ ಅಪಹರಿಸಿದ ರಾವಣನಿಗೆ ವಿಷಯ ತಿಳಿದು, ವಾನರ ಬಲದೊಡನೆ ಲಂಕೆ ಮುತ್ತಿದ. ರಾವಣನ ವಧೆಯಾಯ್ತು. ಲಂಕೆ ಲೂಟಿಯಾಯ್ತು. ಸುಟ್ಟುಹೋಯ್ತು.

ದ್ರುಪದ ರಾಜನ ಮಗಳು ದ್ರೌಪದಿ. ಪಂಚಪಾಂಡವರ ಧರ್ಮಪತ್ನಿ. ಧರ್ಮರಾಜ ಜೂಜಿನಲ್ಲಿ ಎಲ್ಲವನ್ನೂ ಸೋತು, ದ್ರೌಪದಿಯನ್ನೂ ಪಣಕ್ಕೆ ಹಚ್ಚಿ ಸೋತನು. ಕೌರವ ದುಃಶಾಸನ ಸೀತೆಯ ವಸ್ತ್ರಾಪಹರಣಕ್ಕೆ ತೊಡಗಿದ. ಸೀತೆ ಭೀಮನಿಗೆ ಮೊರೆಯಿಟ್ಟಳು. ಕೃಷ್ಣನಿಗೆ ಮೊರೆಯಿಟ್ಟಳು. ಸೇಡಿನ ಪ್ರತಿಜ್ಞೆಗಳಾದವು. ಭಾರತ ಯುದ್ಧವಾಗಿ ಕೌರವ ಸೋತು ಹೋದ.

೪೯೯

ಪತಿಕಿ ಮಾರು ಬಲ್ಕು ಪಡತಿಯೇ ಪಂದಿರಾ, ಮೀರಿನ ಸತಿತೋಡ ಮೆಲಗುಪಂದಿ,
ಪಂದಿ ಪಂದಿ ಕೂಡಿ ಪಡಿದೊರ್ಲವಾ ರೊಂಪಿ, ವಿಶ್ವದಾಭಿರಾಮು ವಿನುರ ವೇಮು.

ಪತಿಗೆ ಎದುರು ನುಡಿವ ಸತಿಯು ತಾನೆ ಹಂದಿ ;
ಮೀರಿದ ಸತಿಯೊಡನೆ ಕೂಡೆ ಹಂದಿ ;
ಹಂದಿ ಹಂದಿ ಕೂಡೆ ತಿಪ್ಪೆ ಗುಂಡಿಯೆ ಗತಿ.
ವಿಶ್ವದಾಭಿರಾಮು ಕೇಳು ವೇಮು.

ಹೆಂಡತಿ ಗಂಡನ ಅರ್ಧಾಂಗಿ. ಇಬ್ಬರೂ ಒಂದೇ ವಿಚಾರ, ಒಂದೇ ಉದ್ದೇಶ ಇಟ್ಟುಕೊಂಡವರು. ಒಬ್ಬರು ಇನ್ನೊಬ್ಬರ ಒಳಿತನ್ನಷ್ಟೇ ಕೋರುವರು. ಅದನ್ನೇ ಸಾಧಿಸಲು ಪ್ರಯತ್ನಿಸುವರು. ಇದು ಆದರ್ಶ ಸಂಸಾರ ಚಿತ್ರ. ಸುಖದ ಹಾದಿ.

ಆದರೆ ಪತಿಯು ತಾಳಿದ ಅಭಿಪ್ರಾಯಕ್ಕೆ ವಿರೋಧಾಭಿಪ್ರಾಯ ತಾಳಿ, ಅವನು ಹೇಳುವ ಮಾತುಗಳಿಗೆಲ್ಲ ವಿರುದ್ಧ ವಿಚಾರ ಪ್ರಕಟಿಸುತ್ತ ವಾದಿಸುವವಳು, ತಕ್ಕ ಹೆಂಡತಿಯಲ್ಲ. ಒಳಿತು ಕೋರುವ ನಾರಿಯಲ್ಲ. ಕೇಳು ವೃತ್ತಿಯಲ್ಲಿ ಸಂತೋಷ ಪಡುವ ಮಾರಿ. ಅವಳು ಹೊಲಸು ವರ್ತನೆಗಿಳಿಯುವ ಹಂದಿ.

ಪತಿಯಾದವನು ತನ್ನ ಸತಿಯ ಮೇಲೆ ಅಂಕೆ ಇಟ್ಟುಕೊಂಡಿರಬೇಕು. ಅವಳನ್ನು ರಕ್ಷಿಸುವವನಿರಬೇಕು. ಅವಳ ಪ್ರಭುವಾಗಿರಬೇಕು. ಅದು ಸುಖದ ಹಾದಿ. ಒಳಿತಿನ ಹಾದಿ. ಅದನ್ನು ಬಿಟ್ಟು ಹೆಂಡತಿ ತನ್ನ ಅಂಕೆ ಮೀರಿ ಹೋಗಲು ಅವಕಾಶ ಕೊಟ್ಟು, ಆ ನಂತರ ಅವಳೊಂದಿಗೆ ಇರುವವನೂ ಹಂದಿಯೇ.

ಇಂಥ ಸತಿ-ಪತಿಯ ಜೊತೆ, ತೀರ ಕೇಳು ಪ್ರವೃತ್ತಿಯದು. ಎರಡು ಹಂದಿಗಳು ಕೂಡಿದರೆ, ಅವು ನೇರವಾಗಿ ತಿಪ್ಪೆ ಗುಂಡಿಯನ್ನೇ ಸೇರುವಂತೆ ಇಂಥವರು ದುರ್ಮಾರ್ಗದಲ್ಲಿ ಸಿಲುಕಿ ತೊಳಲುವರು.

೫೦೦

ಪ್ರಸ್ತುತಂಪುವೇಳ ಬಂದ್ಯಂಬು ಜದಿವಿನ, ದಪ್ಪುಗಲಿಗಿಯುನ್ನ ನೊವ್ವೆಯುಂಡು.
ವೆಲದಿಸುರತವೇಳ ಬಿತ್ತರ್ಕೆಯುಂಡದಾ ? ವಿಶ್ವದಾಭಿರಾಮ ಕೇಳು ವೇಮ.

ಉಚಿತ ವೇಳೆಯರಿತು ಪದ್ಯ ಪಠಿಸಲಾಗ
ತಪ್ಪು ಇದ್ದರೇನು ? ಒಪ್ಪು ಅಹುದು.
ಅಂತೆ ಭೋಗ ಕಾಲ, ಕಾಮು ಕೇಳಿ ಇರವೆ ?
ವಿಶ್ವದಾಭಿರಾಮ ಕೇಳು ವೇಮ.

ಪದ–ಪದ್ಯಗಳ ಅರ್ಥವು ಸಮಯ ಸಂದರ್ಭಗಳನ್ವಯ ಉಚಿತ ಇಲ್ಲವೆ ಅನುಚಿತ ಎನ್ನಿಸಬಹುದು. ಮನಸ್ಸಿಗೆ ಆಹ್ಲಾದವೀಯುವ ಪದ್ಯ ದುರ್ಘಟನೆಗೆ ಸಿಕ್ಕ ಪ್ರಸಂಗದಲ್ಲಿ ಅನುಚಿತವೆನಿಸುವುದು. ಉಲ್ಲಾಸದ ಸಮಯಕ್ಕೆ ಸಮುಚಿತ್ತತೆಯನ್ನು ಬೋಧಿಸುವ ಪದ್ಯ ಅನುಚಿತ ಎನ್ನಿಸಬಹುದು. ಸಂದರ್ಭೋಚಿತವಾಗಿ ಪದ್ಯಗಳನ್ನು ಪಠಿಸಿದರೆ, ಅಲ್ಪ ಸ್ವಲ್ಪ ತಪ್ಪು ಇದ್ದರೂ, ಅದು ಒಪ್ಪು ಎನಿಸುವುದು.

ಹೇಗೆಂದರೆ, ಕಾಮ ಕೇಳಿ ಪಶುವೃತ್ತಿ; ಮನುಷ್ಯನ ಮನೋವಿಕಾರವನ್ನು ಪ್ರಚೋದಿಸುವ ದುಷ್ಟಶಕ್ತಿ. ಆದರೂ ಭೋಗ ಕಾಲದಲ್ಲಿ ಕಾಮಕೇಳಿ ಇಲ್ಲದುಂಟೇ ? ಸಂದರ್ಭೋಚಿತವೆನಿಸುವ ಕೆಟ್ಟ ಚಾಳಿಗಳಲ್ಲಿ ಕಾಮಕೇಳಿಯೂ ಒಂದು.

